
॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀ ಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರ

## ಬೃಹತ್ತಾರತಮ್ಯಸಂಧಿ

(ಸಂಪುಟ-21)

ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಕಾಶಕರು :

ಹೆಚ್. ಎಸ್. ಶ್ರೀನಿವಾಸಮೂರ್ತಿ

ನಂ. 61, "ಶ್ರೀ ಉರಗಾದ್ರಿ"

5ನೇ ಅಡ್ಡರಸ್ತೆ, ನರಸಿಂಹರಾಜ ಕಾಲೋನಿ,

ಬೆಂಗಳೂರು-560 019

ದೂರವಾಣಿ : 602351

"ಶ್ರೀಮದ್ಧರಿಕಥಾಮೃತಸಾರ"
ಸರ್ವವ್ಯಾಖ್ಯಾನಸಾರಸಂಗ್ರಹ
**ಬೃಹತ್ತಾರತಮ್ಯಸಂಧಿ**
**ಸಂಪುಟ–21**
ಪುಟಗಳ ಸಂಖ್ಯೆ :
ಪ್ರಥಮ ಮುದ್ರಣ : 1995
ಪ್ರತಿಗಳ ಸಂಖ್ಯೆ : 1000

**ಬೆಲೆ : 60 ರೂ. ಗಳು**

**ಪ್ರತಿಗಳು ದೊರೆಯುವ ಸ್ಥಳ :**

1) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. 61. "ಶ್ರೀ ಉರಗಾದ್ರಿ"
5ನೇ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು 560 019
**ದೂರವಾಣಿ ಸಂಖ್ಯೆ : 602351**

2) **ವೇದಾಂತ ಬುಕ್‌ಹೌಸ್**
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು–560 018
**ದೂರವಾಣಿ ಸಂಖ್ಯೆ : 600480**

3) **ನ್ಯೂ ವೇದಾಂತ ಬುಕ್‌ಹೌಸ್**
8ನೆಯ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

**ಮುದ್ರಕರು :**
**ಶ್ರೀ ಎಸ್. ಎಲ್. ಗುರುಶಾಂತಮೂರ್ತಿ**
ನಂ. 27, ಶಿಲ್ಪ ಪ್ರಿಂಟರ್ಸ್,
ವಿದ್ಯಾಪೀಠ ರಸ್ತೆ, ಬೆಂಗಳೂರು–560 028.

॥ ಶ್ರೀಃ ಹರಿಃ ಓಂ ॥

# ಪ್ರಕಾಶಕರ ನುಡಿ

ಹರಿದಾಸ ಸಾಹಿತ್ಯಾಭಿಮಾನಿ ವಾಚಕರಲ್ಲಿ ಸವಿನಯಪೂರ್ವಕ ವಿನಂತಿ,

ಶ್ರೀಮದ್ಹರಿಕಥಾಮೃತಸಾರದ **ಕರ್ಮವಿಮೋಚನ ಸಂಧಿ (ಸಂಧಿ-19)** ಮತ್ತು **ಗುಣತಾರತಮ್ಯಸಂಧಿ (ಸಂಧಿ–20)** ಈ ಸಂಧಿದ್ವಯಗಳು, ದಿನಾಂಕ 18-7-1995ರಂದು ಪ್ರೊ|| ಎಲ್. ಎಸ್. ಶೇಷಗಿರಿರಾಯರಿಂದ ಬಿಡುಗಡೆಯಾದುವು.

ಸಂಪುಟದ್ವಯಗಳು ಬಿಡುಗಡೆಯಾದ ಎರಡು ತಿಂಗಳಿನ ಅಲ್ಪಾವಧಿಯಲ್ಲಿಯ ನಂತರ, **ಬೃಹತ್ತಾರತಮ್ಯಸಂಧಿ (ಸಂಧಿ–21)** ಮತ್ತು **ಸಕಲದುರಿತನಿವಾರಣ ಸಂಧಿ (ಸಂಧಿ–22)**. ಇವೆರಡು ಸಂಧಿಗಳನ್ನೂ ಸನ್ಮಾನ್ಯ ವಾಚಕರ ಕೈಯೊಳಗಿಡಲು ಪರಮ ಸಂತೋಷದ ಸಂಗತಿ.

ಮುಂದಿನ ಸಂಧಿಯ **(ಕಲ್ಪಸಾಧನಸಂಧಿ)** ಮುದ್ರಣಕಾರ್ಯವು ಶರವೇಗದಲ್ಲಿ ಮುಂದುವರಿಯುತ್ತಿದೆ.

**ಕೃತಜ್ಞತಾಪೂರ್ವಕ ವಂದನೆಗಳು :**

(1) ಈಗ ಬಿಡುಗಡೆಯಾಗಿರುವ ಸಂಧಿದ್ವಯಗಳ **ಶೀಘ್ರಪ್ರಕಟಣೆಗೆ** ಇಬ್ಬರು ಮಹನೀಯರ ಸಕಾಲಿಕ ದ್ರವ್ಯಸಹಾಯವೇ ಮುಖ್ಯಕಾರಣವಾಗಿದೆ.

(i) **ಕೀರ್ತಿಶೇಷರಾದ ಕೋಲಾರ** ರಾಮರಾಯರು ಮತ್ತು ಅವರ ಧರ್ಮಪತ್ನಿ –**ಕೋಲಾರ** ಪದ್ಮಾವತಿಬಾಯಿಯವರ ನಾಲ್ಕು ಮಂದಿ ಸುಪುತ್ರರು, ಸಾಮೂಹಿಕವಾಗಿ ಅವರ ಮಾತಾಪಿತೃಗಳ ಗೌರವದ ನೆನಪಿನಲ್ಲಿ **5,000/-** ರೂ.ಗಳನ್ನು ನೀಡಿ, ಉದಾರದ್ರವ್ಯಸಹಾಯ ಸಕಾಲದಲ್ಲಿ ಮಾಡಿರುತ್ತಾರೆ.

(ii) ಹನುಮಂತನಗರದ ಶ್ರೀ ಹೆಚ್. ಜಿ. ರಾಘವೇಂದ್ರಮೂರ್ತಿ ಮತ್ತು ಅವರ ಪತ್ನಿ ಶೀಲಾ ಇಬ್ಬರೂ ಸೇರಿ 2,500/-ರೂ.ಗಳ ಉದಾರ ಸಹಾಯಧನವನ್ನು ನೀಡಿ, ಪ್ರಸಕ್ತ ಸಂಪುಟಗಳ ಶೀಘ್ರಪ್ರಕಟಣೆಗೆ ನೆರವಾಗಿದ್ದಾರೆ.

ಮೇಲ್ಕಂಡ ಮಹನೀಯರಿಗೆ ಪ್ರಕಾಶಕರು ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರೆ.

ಮೇಲ್ಕಂಡ ಉದಾರಿಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ಜ್ಞಾನಪ್ರಚಾರ ಕಾರ್ಯದಲ್ಲಿ ಆಸಕ್ತಮನಸ್ಸುಳ್ಳ ಉದಾರಚಿತ್ತದ ದಾನಿಗಳು ಸ್ವಯಂಪ್ರೇರಿತರಾಗಿ ಮುಂದೆ ಬಂದು, ಶಕ್ತ್ಯನುಸಾರ ಧನಸಹಾಯ ನೀಡಿದಲ್ಲಿ, ಮುಂದಿನ ಸಂಧಿಗಳ ಪ್ರಕಟಣೆಯು ಶೀಘ್ರವಾಗಿ, ಅತ್ಯಲ್ಪ ಅವಧಿಯಲ್ಲಿ ನಡೆಯಲು ಅನುಕೂಲವಾಗುವುದು. ಅಂತಹವರ ಉದಾರ ನೆರವನ್ನು ವಿನಯಪೂರ್ವಕವಾಗಿ ಕೋರಲಾಗಿದೆ.

**ಉಳಿದ ಸಂಧಿಗಳ ಪ್ರಕಟಣಾಕಾರ್ಯ**

ಶ್ರೀಮದ್ಹರಿಕಥಾಮೃತಸಾರ ಕೃತಿರತ್ನದ ಸಂಧಿಗಳ ಒಟ್ಟು ಸಂಖ್ಯೆ=33. 32 ಮೂಲಸಂಧಿಗಳು+1 ಫಲಸ್ತುತಿ ಸಂಧಿ.

ಇಲ್ಲಿಯ ಪರ್ಯಂತ 22 ಸಂಧಿಗಳ ಪ್ರಕಟಣೆ ಪೂರ್ತಿಯಾಗಿದೆ. ಇನ್ನೂ 11 ಸಂಧಿಗಳ ಪ್ರಕಟಣೆ ಉಳಿದಿದೆ.

ಈ ಅವಶಿಷ್ಟಕಾರ್ಯವನ್ನು ಶೀಘ್ರವಾಗಿ ಪೂರ್ಣಮಾಡಲು, ಭಗವದ್ಭಕ್ತರಲ್ಲಿ ಈ ಕೆಳಗಿನ ರಚನಾತ್ಮಕ ಸಲಹೆಗಳು :

(1) 3000/- ರೂ. ಉದಾರ ಧನಸಹಾಯ ನೀಡುವವರಿಗೆ, ಅವರು ಸೂಚಿಸುವ ಅವರ ಅಥವಾ ಅವರ ಹಿರಿಯರ ಭಾವಚಿತ್ರಗಳನ್ನು ಪ್ರಕಟಿಸಲಾಗುವುದು.

(2) ಈಗ ನೂತನ ಯೋಜನೆಗೆ ಸದಸ್ಯರಾಗಿರುವ ಪ್ರತಿಯೊಬ್ಬರೂ ತಲಾ ಒಬ್ಬರಂತೆ, ನೂತನ ಯೋಜನೆಗೆ ಸದಸ್ಯರನ್ನಾಗಿ ನೋಂದಾಯಿಸಲು ಪ್ರಯತ್ನಿಸಬೇಕೆಂದು ಮನವಿ. ಅಂತಹ ನೂತನ ಸದಸ್ಯರಿಗೆ 1 ರಿಂದ 22 ಸಂಧಿಗಳನ್ನು ಒದಗಿಸಲಾಗುವುದು. ಉಳಿದ 11 ಸಂಧಿಗಳನ್ನು ಅವು ಬಿಡುಗಡೆಯಾದಾಗಲೆಲ್ಲಾ ಒದಗಿಸಲಾಗುವುದು.

**33 ಸಂಧಿಗಳಿಂದ ಒಟ್ಟು ನೀಡಬೇಕಾದ ಮೊಬಲಗು=33 ಸಂಧಿಗಳು x 25ರೂ. (ಪ್ರತಿಯ ಸರಾಸರಿ ಬೆಲೆ) = 825 ರೂ.ಗಳು.**

ಈ **825** ರೂಗಳನ್ನು ಒಟ್ಟಿಗೇ ಒಂದೇ ಕಂತಿನಲ್ಲಿ ನೀಡಿದರೆ, ಮುಂದಿನ ಪ್ರಕಟಣೆಗಳಿಗೆ ಬೇಕಾಗುವ ಕಾಗದವನ್ನು ಮುಂಚಿತವಾಗಿ ಕೊಳ್ಳಲು ಅನುಕೂಲವಾಗುವುದು.

ಇಲ್ಲದಿದ್ದರೆ, ಈಗ **525** ರೂ. ಪ್ರಥಮ ಕಂತನ್ನು ನೀಡಿ, ಉಳಿದ **300** ರೂಗಳನ್ನು ತಿಂಗಳಿಗೆ **100** ರೂ.ಗಳಂತೆ **3** ಮಾಸಿಕ ಕಂತುಗಳಲ್ಲಿ ಪಾವತಿ ಮಾಡಬಹುದು.

**ಗಮನಿಸಿ :**

(೧) ಬೆಂಗಳೂರಿನವರು ಮೊಬಲಗನ್ನು ಚೆಕ್/M.O./D. D.ದ್ವಾರಾ ಪಾವತಿ ಮಾಡಬಹುದು.

(೨) ಹೊರಗಿನವರಿಂದ M.O./D.D. ದ್ವಾರಾ · ಸ್ವೀಕರಿಸಲಾಗುವುದು. (Out Station Cheque ಸ್ವೀಕರಿಸಲಾಗುವುದಿಲ್ಲ.)

**(3) ಜಾಹೀರಾತು**

ಪ್ರತಿಸದಸ್ಯರೂ ಜಾಹೀರಾತುಗಳನ್ನು ಒದಗಿಸುವುದರಲ್ಲಿ ಸಹಕಾರ ನೀಡಬಹುದು. ತಮಗೆ ಪರಿಚಯವಿರುವ ಸಂಘ–ಸಂಸ್ಥೆ–ಉದ್ಯಮಗಳು–ವ್ಯಾಪಾರಿಗಳು–ವಾಣಿಜ್ಯ–ಬ್ಯಾಂಕು–ಸೊಸೈಟಿಗಳ ಅಧಿಕಾರಿಗಳನ್ನು ಸಂಪರ್ಕಿಸಿ, ತನ್ಮೂಲಕ ಜಾಹೀರಾತುಗಳನ್ನು ಒದಗಿಸಬಹುದು. ಜಾಹೀರಾತುಗಳ ದರ– 500 ರೂ.ಗಳು (ಅರ್ಧಪುಟ) ಮತ್ತು 1000 ರೂ.ಗಳು (ಪೂರ್ಣಪುಟ). ಜಾಹೀರಾತನ್ನು ಉತ್ತಮ ಪೇಪರ್ ಲಿಥೊ ಕಾಗದದ ಮೇಲೆ ಪ್ರಕಟಿಸಿ, ಪ್ರಚಾರಮಾಡಲಾಗುವುದು. ಜಾಹೀರಾತುಗಳ Tariffಗಳಿಗಾಗಿ ಬರೆದರೆ, ಪ್ರಕಾಶಕರು ಕಳುಹಿಸುವರು. ಜಾಹೀರಾತು ನೀಡುವವರ ಪೂರ್ಣವಿಳಾಸ–ಮೊಬಲಗು–ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆದು ತಿಳಿಸಬೇಕಾಗಿ ವಿನಂತಿ.

**ಹಿಂದಿನ ಸಂಧಿಗಳ ಪುನರ್ಮುದ್ರಣ ಕಾರ್ಯ**

(1) ಸಂಧಿ–1 (ಮಂಗಳಾಚರಣಸಂಧಿ)–ತೃತೀಯ ಮುದ್ರಣವನ್ನು ಕಂಡಿದೆ. ಈಗ ಅದು ದೊರೆಯುತ್ತಿಲ್ಲ. ಪುನರ್ಮುದ್ರಣವಾಗಬೇಕಾಗಿದೆ.

(೨) ಸಂಧಿ-೨ (ಕರುಣಾಸಂಧಿ)- ದ್ವಿತೀಯ ಮುದ್ರಣ. ಕೇವಲ ಕೆಲವು ಪ್ರತಿಗಳು ಮಾತ್ರ ಉಳಿದಿವೆ.

(೩) ಸಂಧಿ-೩ (ವ್ಯಾಪ್ತಿಸಂಧಿ)- ದ್ವಿತೀಯ ಮುದ್ರಣ.

(೪) ಸಂಧಿ-೪ (ಭೋಜನರಸವಿಭಾಗಸಂಧಿ) ಇದರ ದ್ವಿತೀಯ ಮುದ್ರಣ ಕಾರ್ಯವು ಬೆಂಗಳೂರಿನ **ಶ್ರೀಯುತ ಗೋಪೀನಾಥ ರಾಯರು (ಗಿರಿನಗರ)** ತಮ್ಮ ಪುತ್ರನ ಹೆಸರಿನಲ್ಲಿ ಆತನ ಸವಿನೆನಪಿಗಾಗಿ ನೀಡಿ **4000** ರೂ. ಧನಸಹಾಯದಿಂದ ಸಾಧ್ಯವಾಯಿತು. ಅವರಿಗೆ ಪ್ರಕಾಶಕರು ಆಭಾರಿಗಳಾಗಿದ್ದಾರೆ.

**ಪುನರ್ಮುದ್ರಿತವಾಗಬೇಕಾಗಿರುವ ಸಂಧಿಗಳು**

(1) ಸಂಧಿ-5 (ವಿಭೂತಿಸಂಧಿ) (2) ಸಂಧಿ-6 (ಪಂಚಮಹಾಯಜ್ಞ ಸಂಧಿ) (3) ಸಂಧಿ-7 (ಪಂಚತನ್ಮಾತ್ರ ಸಂಧಿ) ಮತ್ತು (4) ಸಂಧಿ-1 (ಮಂಗಳಾಚರಣಸಂಧಿ.)

ಶ್ರೀಗೋಪೀನಾಥರಾಯರಂತೆ, ಯಾರಾದರೂ ಉದಾರ ಮನಸ್ಸಿನ ದಾನಿಗಳು ಮುಂದೆ ಬಂದು, ಶಕ್ತ್ಯನುಸಾರ ಸಹಾಯ ನೀಡಿದಲ್ಲಿ, 5ನೆಯ ಸಂಧಿಯ (ವಿಭೂತಿಸಂಧಿ) ಪುನರ್ಮುದ್ರಣ ಕಾರ್ಯ ಆರಂಭಿಸಲಾಗುವುದು. ಪ್ರಕಾಶನದ ವತಿಯಿಂದಲೇ ಆಗಬೇಕಾದರೆ, ಹಣ ಒದಗಿದಾಗ, ಕಾರ್ಯಾರಂಭಿಸಲಾಗುವುದು. ಇದರಿಂದ ದೀರ್ಘಕಾಲ ಹಿಡಿಯುವುದು.

**ಮಾಸಿಕ ಸಂಚಿಕೆಗಳು :**

(1) ಜನವರಿ 1995ರಿಂದ **ಕರ್ನಾಟಕ ಹರಿದಾಸ ಕೀರ್ತನ ತರಂಗಿಣೀ-** ಎಂಬ ಮಾಲಿಕೆಯಲ್ಲಿ ಪ್ರತಿತಿಂಗಳೂ **ಮಾಸಪತ್ರಿಕೆಗಳ** ಪ್ರಕಟಣೆ ಆರಂಭವಾಗಿದೆ.

(2) ಪ್ರತಿ ಸಂಚಿಕೆಯ ಪುಟಗಳ ವ್ಯಾಪ್ತಿ=16 (ಡೆಮ್ಮಿ ಗಾತ್ರ).

(3) ಪ್ರತಿಸಂಚಿಕೆಯ ಸುಪ್ರಸಿದ್ಧ ಹರಿದಾಸರ ಒಂದು ಕೀರ್ತನ ಸಾಹಿತ್ಯವನ್ನು ದಪ್ಪ ಅಕ್ಷರಗಳಲ್ಲಿ ಸ್ಫುಟವಾಗಿ, ಯಾವ ತಪ್ಪೂ ಇಲ್ಲದಂತೆ ಪ್ರಕಟಿಸಲಾಗುತ್ತದೆ.

(4) ಆ ಕೀರ್ತನಸಾಹಿತ್ಯದ ಪ್ರತಿಪದಕ್ಕೂ ವಿವರಣಾತ್ಮಕವಾದ ಅರ್ಥವನ್ನು (ಅಲ್ಲಲ್ಲಿ ಪ್ರಮಾಣ ಪ್ರಮಿತವಾಗಿ) ಕೊಟ್ಟಿದೆ. ಇದರಿಂದ ಕೀರ್ತನಸಾಹಿತ್ಯದ ಪರಿಚಯದೊಂದಿಗೆ, ಅದರ ಅರ್ಥವೂ ಸಹ ಸಮಗ್ರವಾಗಿ ಆಗಲು ಸಹಕಾರಿಯಾಗಿದೆ.

(5) ಆತ್ಮಮೂಲ್ಯವಾದ ತಾತ್ವಿಕವಿಷಯಗಳನ್ನು ಒಳಗೊಂಡ ಪ್ರತಿಸಂಚಿಕೆಯೂ ಸಕಲಹರಿದಾಸ ಸಾಹಿತ್ಯಾಭಿಮಾನಿಗಳಿಗೆ ಒಂದು **ರಸದೌತಣ**.

(6) **ವಾರ್ಷಿಕ ಚಂದಾ = ಕೇವಲ 40 ರೂ.ಗಳು (ಅಂಚೆವೆಚ್ಚ ಸೇರಿ).**

(7) ಶ್ರೀಮದ್ಹರಿಕಥಾಮೃತಸಾರಕ್ಕೆ ಸದಸ್ಯರಾಗಿರುವ ಸಕಲಭಗವದ್ಭಕ್ತರೂ ಮತ್ತು ಇತರರೂ 40 ರೂ.ಗಳನ್ನು ಪ್ರಕಾಶಕರ ಹೆಸರಿಗೆ, D.D./M.O. ದ್ವಾರಾ ಕಳುಹಿಸಿ, ಈ **ಅಮೂಲ್ಯ ಮಾಸಸಂಚಿಕೆಗಳಿಗೆ ಚಂದಾದಾರರಾಗಬೇಕೆಂದು ವಿನಂತಿ.**

(8) ಪ್ರತಿತಿಂಗಳೂ ಈ ಸಂಚಿಕೆಯು ದಿನಾಂಕ 20ರ ಒಳಗೆ ಗ್ರಾಹಕರ ಕೈ ಸೇರುವುದು.

(9) ಮೇ ತಿಂಗಳಿಂದ **ಶ್ರೀ ಜಗನ್ನಾಥದಾಸರಾಯರ ಕೃತಿ "ತತ್ತ್ವಸುವ್ವಾಲಿ"ಯನ್ನು** ವಿಘ್ನೇಶ್ವರಸ್ತೋತ್ರ ಪ್ರಕರಣದಿಂದ ಆರಂಭಿಸಿ, ಕ್ರಮವಾಗಿ ಪ್ರಕಟಸಲಾಗುತ್ತಿದೆ.

**ಹಳೆಯ ಯೋಜನೆಯ ಸದಸ್ಯರಲ್ಲಿ ಪುನಃ ಪುನಃ ವಿನಂತಿ.**

(1) 7 ಸಂಪುಟಗಳ ಹಿಂದಿನ ಯೋಜನೆ ಜಾರಿಯಲ್ಲಿದ್ದಾಗ, ಹಲವಾರು ಮಂದಿ, 108 ರೂ. ನೀಡಿ, ಸದಸ್ಯರಾದರು. ಅವರಿಗೆ ಆ ಯೋಜನೆಯ ಪ್ರಕಾರ ಸಲ್ಲಬೇಕಾಗಿದ್ದ **7 ಸಂಪುಟಗಳು ಒದಗಿಸಲ್ಪಟ್ಟವೆ.**

(2) ಆದರೆ, ಅವರಲ್ಲಿ ಶೇ. 90ರಷ್ಟು ಮಂದಿ ಮುಂದಿನ ಕಂತುಗಳನ್ನು **ಕೊಡದೇ, ತಟಸ್ಥರಾಗಿ ಕೈ ದ್ದಾಡಿಸಿಕೊಂಡು ಕುಳಿತುಬಿಟ್ಟಿದ್ದಾರೆ.** ಪ್ರತಿಯೊಬ್ಬರಿಗೂ ಮೇಲಿಂದ ಮೇಲೆ ವಿನಂತಿಪತ್ರಗಳನ್ನು ಬರೆದು ನಿವೇದಿಸಿಕೊಂಡರೂ, ಸಾರ್ಥಕವಾಗಿಲ್ಲ. ರಿಜಿಸ್ಟರ್ಡ್ ಪತ್ರ (Acknowledgement Due) ಹಾಕಿ, ಅವರಿಂದ ಅಂಚೆ ಇಲಾಖೆಯವರಿಂದ Acknowledgement Card ಕೈಸೇರಿವೆ. ಆದರೆ, ವಿನಂತಿ ಅವರ **ಹೃದಯ ಮುಟ್ಟಿಲ್ಲ.** ಅಷ್ಟು ಮಂದಿಯೂ ನೂತನ ಯೋಜನೆಗೆ ನೋಂದಾಯಿತರಾಗಿ, ಉಳಿದ ಮೊಬಲಗನ್ನು ಕಂತಿನ ಪ್ರಕಾರ ನೀಡಿದರೆ, ಉಳಿದ 11 ಸಂಧಿಗಳ ಪ್ರಕಟಣೆ ಸಾಧ್ಯವಾಗುವುದು. ಶ್ರೀಹರಿಯ ಪ್ರೇರಣೆ ಅವರ ಅಂತರಂಗದಲ್ಲಿ ಏಕೆ ಆಗಿಲ್ಲವೋ ? ಪ್ರಕಾಶಕರು ಅರಿಯರು. ಬಹುಶಃ ಇಂತಹ ಜ್ಞಾನಪ್ರಸಾರರೂಪವಾದ ಪುಣ್ಯಕಾರ್ಯಕ್ಕೆ ಅವರ ಮನಸ್ಸು ಒಡಂಬಡುತ್ತಿಲ್ಲ– ಎಂದೇ ತೋರುವುದು. ಈ ವಿಷಯದ ಕಡೆಗೆ ಪೂರ್ಣ ವಿಮನಸ್ಕರಾಗಿದ್ದಾರೆ.

ಶ್ರೀಹರಿವಾಯುಗಳೇ ಅವರಿಗೆ ಪ್ರೇರಿಸಲಿ. ಈಗಲೂ ಕಾಲ ಮಿಂಚಿಲ್ಲ. ಉಳಿದ ಮೊಬಲಗನ್ನು ಅವರು **ಮಾಸಿಕ ಕಂತುಗಳಲ್ಲಿ** ಅವರ ಶಕ್ತ್ಯನುಸಾರ ನೀಡಿದರೂ, ನಾವು ಕೈಗೊಂಡಿರುವ ಕಾರ್ಯ ಪೂರ್ಣವಾಗುವುದು. ಪ್ರತಿಗಳ ಪುಟಗಳ ವ್ಯಾಪ್ತಿ ಎಷ್ಟೇ ಇರಲಿ, ನೂತನ ಯೋಜನೆಯ ಪ್ರಕಾರ ಅವರಿಗೆ ಪ್ರತಿಯ ಬೆಲೆ **ಕೇವಲ 25 ರೂ.** ಬೀಳುವುದು. ಇದು ಅವರಿಗೆ ಆರ್ಥಿಕ ದೃಷ್ಟಿಯಿಂದ ಅನುಕೂಲವಲ್ಲವೇ? ಅವರೇ ಆಲೋಚಿಸಿ, ಮನಸ್ಸು ಮಾಡಿ, ಇತ್ತ ತಮ್ಮ ಚಿತ್ತವನ್ನು ಹರಿಸಬೇಕು, ಅವರ ಅಂತರ್ಯಾಮಿಯನ್ನು ಪ್ರಾರ್ಥಿಸುತ್ತೇವೆ. ಇದಕ್ಕಿಂತ ಹೆಚ್ಚಾಗಿ ಬರೆಯಲಾರೆವು. ಇಲ್ಲದಿದ್ದರೆ, ಅವರೆಲ್ಲರೂ **ಮಾಸಿಕ ಪತ್ರಿಕೆಗೆ ಚಂದಾದಾರರಾಗಲಿ.** ಅಷ್ಟೂ ಮಾಡಲು ಅವರಿಗೆ ಸಾಧ್ಯವಿಲ್ಲವೇ ? ಈ ರೀತಿಯಿಂದಲಾದರೂ ಸಹಕರಿಸಲೆಂದು ಅವರಲ್ಲಿ ಪ್ರಕಾಶಕರ ಸವಿನಯಪೂರ್ವಕ ವಿನಂತಿ.

ಈ ಪ್ರಸಕ್ತಸಂಧಿಯ ಪ್ರಕಟಣಾ ಕಾರ್ಯಕ್ಕೆ ನಾನಾ ರೀತಿಗಳಲ್ಲಿ ಸಹಾಯ ನೀಡಿದ ಸಂಘ-ಸಂಸ್ಥೆಗಳು, ದಾನಿಗಳು ಮತ್ತು ಇತರ ಮಹನೀಯರಿಗೆಲ್ಲಾ ಪ್ರಕಾಶಕರ ಕೃತಜ್ಞಾಪೂರ್ವಕ ವಂದನೆಗಳು. ಅವರ ಸಹಾಯ-ನೆರವು ಮುಂದೆಯೂ ಸಹ ಮುಕುಂದನ ದಯದಿಂದ ನಿರ್ವಿಘ್ನವಾಗಿ ಮುಂದುವರಿಯಲೆಂದು ಹಾರೈಸುತ್ತಾ, ಈ ನುಡಿಗಳನ್ನು ಮುಕ್ತಾಯಗೊಳಿಸುತ್ತೇನೆ.

ಮುಂದಿನ ಪ್ರಕಟಣೆ

**ದುರಿತನಿವಾರಣಸಂಧಿ (ಭಕ್ತಾಪರಾಧಸಹಿಷ್ಣುಸಂಧಿ) (ಸಂಧಿ-22)**

ಇಂತೀ ಪ್ರಣಾಮಗಳು,

ದಿನಾಂಕ 1-9-1995 . **ಹೆಚ್. ಎಸ್. ಶ್ರೀನಿವಾಸಮೂರ್ತಿ**

ಬೆಂಗಳೂರು (ಹರಿದಾಸರ ಸೇವಾನುಸೇವಕ)

॥ ಶ್ರೀ ಹರಿ ಓಂ ॥



ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥
-ಗೀತಾವಾಕ್ಯ (ಅಧ್ಯಾಯ-7, ಶ್ಲೋಕ-19)

**With best compliments from :**

## Kirloskar Investments and Finance Ltd.

Regd Office :
Unity Buildings, II Floor, C-Block
J.C. Road, Bangalore-560 002

॥ ಶ್ರೀಃ ಹರಿಃ ಓಂ ॥

# ತಪ್ಪೋಲೆ (ಸಂಧಿ– 21)

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿ ಮುದ್ರಿತವಾಗಿರುವುದು | ಸರಿಯಾಗಿ ಇರಬೇಕಾದದ್ದು |
|---|---|---|---|---|
| 1 | 1 | ಸಂ. 9 ಸೂಚನೆ ಪದ್ಯ 3ನೆಯ ಸಾಲು | ಭಪ್ತಪೂರ್ವಕದಿ | ಭಕ್ತಿಪೂರ್ವಕದಿ |
| 2 | 3 | 2 | ಅವತಾಶ | ಅವತಾರ |
| 3 | 3 | 11 | ಇನ್ನು | ಇನ್ನೂ |
| 4 | 7 | 25 | (ಸಹಸ್ತಾಣಾಂ) | (ಸಹಸ್ರಾಣಾಂ) |
| 5 | 10 | 17 | ಸರ್ವೋತ್ತಮತ್ತ | ಸರ್ವೋತ್ತಮತ್ವ |
| 6 | 11 | 12 | ರಮಾಬ್ರಹ್ಮಾದಿವಂದ್ಯನೂ | ರಮಾಬ್ರಹ್ಮಾದಿ ವಂದ್ಯನೂ |
| 7 | 11 | 18 | ಪ್ರಥಮಾಂಗೆಭೂತರೂ | ಪ್ರಥಮಾಂ ಗಭೂತರೂ |
| 8 | 11 | 18 | ಅತಿರೋಹಿತಮುಲ | ಅತಿರೋಹಿತ ವಿಮಲ |
| 9 | 13 | 19 | ಪರಾಶರದ | ಪರಾಶರರ |
| 19 | 16 | 11 | ಶ್ರೀಕೃಷ್ಣನು | ಶ್ರೇಷ್ಠನು |
| 10 | 16 | 24 | ಬಂಬರೂಪಿಯಾದವ, | ಬಂಬರೂಪನಾದವ |
| 11 | 31 | 4 | ದುಗಾ | ದುರ್ಗಾ |
| 12 | 31 | ಕೊನೆಯಸಾಲು | ಸಂಕರ್ಪಣಸ್ಯ | ಸಂಕರ್ಷಣಸ್ಯ |
| 13 | 39 | 12 | ಕೋಟ ವಿಜಾತಿಗುಣ | ಕೋಟ ವಿಜಾತಿಗುಣ |

| | | | | |
|---|---|---|---|---|
| 14 | 39 | 48 | ಪರಮಾತ | ಪರಮಾತ್ಮ |
| 15 | 41 | 17 | ಪಾಟಮಾಡದೆ | ಪಾಟುಮಾಡದೆ |
| 16 | 42 | 16 | ಪ್ರಥಮಾಂಗಬೂತರೂ | ಪ್ರಥಮಾಂಗ ಭೂತರೂ |
| 17 | 69 | 3 | ನಿಶ್ಚೀಶವಾಗಿ | ನಿಶ್ಚಿಷ್ಟಿತವಾಗಿ |
| 18 | 69 | 7 | ಸುಜರು | ಸುಜನರು |
| 19 | 72 | 8 | ತ್ರೇತಾಯೀಗದಲ್ಲಿ | ತ್ರೇತಾಯುಗದಲ್ಲಿ |
| 20 | 72 | 13 | ರೂಪವಾರ | ರೂಪವಾದ |
| 21 | 73 | 1 | ಇರದಿದೆ | ಇರದಿತೆ |
| 22 | 99 | 13 | ಹೇಹದಲ್ಲಿ | ದೇಹದಲ್ಲಿ |
| 23 | 99 | 15 | ಭಾರತೀ ಹೇವಿಯರು | ಭಾರತೀದೇವಿಯರು |
| 24 | 99 | 24 | ಪ್ರರಾಣ | ಪುರಾಣ |
| 25 | 100 | 11 | ಜನಿಸುದುದು | ಜನಿಸಿದಳು |
| 26 | 101 | 2 | ಶಿವಕ್ಷನ್ಯೇತಿ | ಶಿವಕನ್ಯೇತಿ |
| 27 | 102 | 5 | ಷ್ರಥಮ | ಪ್ರಥಮ |
| 28 | 105 | Title | ಬೃಹತ್ತಾರತಮ್ಯಂಸಧಿ | ಬೃಹತ್ತಾರತಮ್ಯಸಂಧಿ |
| 29 | 110 | 5 | ಒಟ್ಟು | ಒಟ್ಟು |
| 30 | 111 | 8 | ಶುಕ್ಲರೇಶಾವೇಶ | ಶುಕ್ಲಕೇಶಾವೇಶ |
| 31 | 114 | 7 | ಶದುಕ್ತಂ | ತದುಕ್ತಂ |
| 32 | 114 | 15 | ವಿಷಯೂಲ್ಲಿ | ವಿಷಯದಲ್ಲಿ |
| 33 | 115 | 21 | ದ್ರೋಣಃ | ದ್ರೋಣಃ |
| 34 | 119 | 13 | ವಾಯುದೇದರು | ವಾಯುದೇವರು |
| 35 | 121 | 17 | ಪ್ರಾಣಪ್ರಿಯನೇ | ಎರಡಾವರ್ತಿ ಮುದ್ರಿತವಾಗಿದೆ |
| 36 | 124 | 17 | ಪ್ರತ್ಯಕ್ಷವಾದ | ಪ್ರತ್ಯಕ್ಷವಾದ |
| 37 | 126 | 12 | ಅಂತರ್ಯಾಮಿರೂಪದಿಂದ್ದು | ಅಂತರ್ಯಾಮಿ ರೂಪದಿಂದಿದ್ದು |

| | | | | |
|---|---|---|---|---|
| 63 | 201 | ಪದ್ಯ–18 5ನೆಯ ಸಾಲು | ಯಮಧರ್ಮ | ಯಮಧರ್ಮ |
| 64 | 205 | Heading | ಬೃಹತ್ತಾರಮ್ಯಂಸಧಿ | ಬೃಹತ್ತಾರತಮ್ಯಸಂಧಿ |
| 65 | 205 | 18 | ದಕ್ಷಗೆ | ದಕ್ಷನಿಗೆ |
| 66 | 228 | 7 | ಕುತ್ತಿಗಿಯಮ್ಮ | ಕುತ್ತಿಗೆಯಿಂದ |
| 67 | 228 | 11 | ಕಮಿ | ಕಮ್ಮಿ |
| 68 | 229 | 10 | ಮಹಾಭಿಷೇಕ್ | ಮಹಾಭಿಷಿಕ್ |
| 69 | 229 | 17 | ಬ್ರಹ | ಬ್ರಹ್ಮ |
| 70 | 232 | 3 | ಷದ್ಗುಣೇ | ಷಡ್ಗುಣೇ |
| 71 | 232 | 23 | ನಾರಾಯರೂಪೀ | ನಾರಾಯಣರೂಪೀ |
| 72 | 233 | 10 | ಬಹ್ಮದೇವರು | ಬ್ರಹ್ಮದೇವರು |
| 73 | 236 | 8 | ಮಹಾಭಿಷೇಕ್‌ನಿಗೆ | ಮಹಾಭಿಷಕ್‌ನಿಗೆ |
| 74 | 243 | 2 | ಘರ್ಜಸುತಾ | ಘರ್ಜಸುತ್ತಾ |
| 75 | 249 | 18 | ಕಾಲಿನಲಿ | ಕಾಲಿನಲ್ಲಿ |
| 76 | 256 | 9 | ಮುನಿನಿಂದ | ಮನದಿಂದ |
| 77 | 257 | 5 | ನಿಯಿಮಾದಿ | ನಿಯಮಾದಿ |
| 78 | 272 | 19 | ಅಸ್ತ್ಯಾಭಿಜ್ಞನಾಗಿ | ಅಸ್ತ್ರ್ಯಾಭಿಜ್ಞನಾಗಿ |
| 79 | 273 | 15 | ಭಗದತ್ತಾಬಿದಾನ | ಭಗದತ್ತಾಭಿಧಾನಃ |
| 80 | 275 | 1 | ಯುಕ್ತೀ | ಯುಕ್ತ |
| 81 | 277 | 8 | ವಿಟಾರ | ವಿಚಾರ |
| 82 | 277 | 16 | ರಾಚಧಾನಿ | ರಾಜಧಾನಿ |
| 83 | 280 | 1 | ಜಾರುದೇಷ್ಣೋಮ | ಚಾರುದೇಷ್ಣೋಮ |
| 84 | 282 | 4 | ಪರ್ಸ್ಪರ | ಪರಸ್ಪರ |
| 85 | 287 | 14 | ಠಮಾ | ರಮಾ |
| 86 | 291 | ಪದ್ಯ–26 ಮೂದಲನೆಯ ಸಾಲು | ಜಜಜೈಕಪ್ | ಓಜಕೈಕಪ |
| 87 | 300 | 1 | ಕೃಷ | ಕೃಷ್ಣ |
| 88 | 303 | 12 | ಅಪ್ಸರಾಸ್ತ್ರೀಯನ್ನು | ಅಪ್ಸರಸ್ತ್ರೀಯನ್ನು |
| 89 | 307 | 13 | (10) | (31) |

| | | | | |
|---|---|---|---|---|
| 90 | 308 | ಕೊನೆಯಸಾಲು | ತ್ವಷ್ಟ್ರಾ | ತ್ವಷ್ಟ್ರಾ |
| 91 | 311 | 4 | ಭಂಡೀ | ಬಂದೀ |
| 92 | 314 | 8 | ಅಂತಗಳು | ಅಂಶಗಳು |
| 93 | 320 | 7 | ಬರುವುದ್ಕು | ಬರುವುದು |
| 94 | 315 | ಕೊನೆಯ ಸಾಲು | ಮರುತ್ರವರನೇ | ಮರುತ್ತ ವರನೇ |
| 95 | 320 | 8 | ಅವಶ | ಅವಶ್ಯ |
| 96 | 321 | 9 | ಬಿಟ್ಟುಹೋಗಿದೆ | 113011 ಮುದ್ರಿತವಾಗಿಲ್ಲ |
| 97 | 322 | Heading | ಕನ್ನಡಾರ್ದ | ಕನ್ನಡಾರ್ಥ |
| 98 | 326 | 9 | ಮಾಡಿವನು | ಮಾಡಿದನು |
| 99 | 332 | 3 | ಮಂದಿಗಳ್ತ | ಮಂದಿಗಳು |
| 100 | 332 | 4 | ಪೂರ್ವೋಕು | ಪೂರ್ವೋಕ್ತ |
| 101 | 333 | 9 | ಕಕ್ಟಿಸ್ಥಾನರಾವಂಥಾ | ಕಕ್ಟಸ್ಥಾನರಾದಂಥಾ |
| 102 | 338 | 21 | ಶ್ರುತಕಿರ್ತಿ | ಶ್ರುತಕೀರ್ತಿ |
| 103 | 339 | 20 | ಜನರು | ಜನರೂ |
| 104 | 334 | 9 | ದಾವವೆಂವರೆ | ದಾವವೆಂದರೆ |
| 105 | 350 | 3 | ಇಂದ್ರಾದೇಶವ್ರ | ಇಂದ್ರಾವೇಶವು |
| 106 | 351 | 20 | ವಿಜಯ | ವಿಜಯೆ |
| 107 | 355 | 2 | ಚಿಕ್ರವರ್ತಿ | ಚಕ್ರವರ್ತಿ |
| 108 | 358 | 13 | ತಕ್ಷಣನು | ತಕ್ಷಣ |
| 109 | 360 | 14 | ವೃಷ್ಣವಂಶದ | ವೃಷ್ಣಿವಂಶದ |
| 110 | 372 | 14 | ಮುಗಿದರು | ಮುಗಿದುದು |
| 111 | 372 | 19 | ಬೋದಾರ್ಥ | ಭೋದಾರ್ಥ |
| 112 | 373 | 10 | ಪರ್ಜನಾಮತ್ತಮಾಃ ॥ | ಪರ್ಜನ್ಯಾ ಮತ್ತಮಾಃ ॥ |
| 113 | 374 | 11 | (ವೈಶ್ಯಾನರನಿಗ) | (ವೈಶ್ವಾವಾನರನಿಗೆ) |
| 114 | 378 | 2 | ವಿದ್ತಮಾನರಾದ | ವಿದ್ಯಮಾನರಾದ |
| 115 | 378 | 4 | ವಿರಾಟೀ | ವಿರಾಟ್ |
| 116 | 378 | 5 | ನಾಮ್ಕ | ನಾಮ |

| | | | |
|---|---|---|---|
| 129 | 2 | ಜಾಂಬುವತಿಗೆ | ಜಾಂಬವತಿಗೆ |
| 134 | 5 | ಹೆಂಡಂವರಾದ | ಹೆಂಡಂದಿರಾದ |
| 134 | 15 | ಚಂದ್ರಪುತ್ರ | ಚಂದ್ರಪುತ್ರಿ |
| 140 | 2 | ಸ್ಯಮಂತರ | ಸ್ಯಮಂತಕ |
| 143 | ಕೊನೆಯ ಸಾಲು | ಪಾದ್ಯ | ಪಾದ್ಯೇ |
| 144 | 10 | ಫಾರ್ವತ್ಯಾದಿಗಳು | ಪಾರ್ವತ್ಯಾದಿಗಳು |
| 147 | ಕೊನೆಯಸಾಲು | ಪಣ್ಮಾಹಿಷಿಯರ | ಷಣ್ಮಾಹಿಷಿಯರ |
| 145 | 17 | ಪಧುವನ್ನು | ಮಧುವನ್ನು |
| 146 | 2 | ಏಂದಕ್ಕೆ | ಎಂಬುವಕ್ಕೆ |
| 148 | 2 | ಇವರಲ್ಲಿ | ಇವರಲ್ಲಿ |
| 157 | 11 | ಸಕಲ ಶಾಸ್ತ್ರಗಳನ್ನು | ಸಕಲ ಶಾಸ್ತ್ರಗಳನ್ನು |
| 159 | 12 | ರಾಮತೋಸು | ರಾಮಸೂಪು |
| 162 | 20 | ಶ್ರೀಷನೆಂದು | ಶ್ರೇಷ್ಠನೆಂದು |
| 165 | ಕೊನೆಯ ಸಾಲು | ಪರಿಚ್ಛೇಫ | ಪರಿಚ್ಛೇದ |
| 166 | 15 | ಸತ್ಯವ್ರನೆಂಬ | ಸತ್ಯವ್ರತನೆಂಬ |
| 171 | 5 | ಅತಿಶಯಪ್ರದೇಶರೂಪ<br>ಕಾದ್ದರಿಂದ | ಅತಿಶಯ<br>ಪ್ರಕಾಶರೂಪ<br>ಕಾದ್ದರಿಂದ |
| 172 | ಪದ್ಯ-15<br>5ನೆಯ ಪಂಕ್ತಿ | ತ್ರಾದಿಜಾಯಾ | ತ್ರಾಜಿಜಾಯಾ |
| 175 | 6 | ಶಕ್ರಾಜ್ಞೆಯೋ | ಶಕ್ತ್ರಾಜ್ಞೇಯೋ |
| 177 | 12 | ಮುನಿಯು | ಮುನಿಯ |
| 183 | 5 | ತ್ವಷ್ಟಾ | ತ್ವಷ್ಟ್ರಾ |
| 186 | 1 | ಅನಿರುಧ್ಧ | ಅನಿರುದ್ಧ |
| 186 | 3 | ತಮ್ದ | ತಮ್ಮ |
| 189 | 19 | ತ್ವಷ್ಟ | ತ್ವಷ್ಟ್ರ |
| 192 | 14 | ಉದ್ಭವನು | ಉದ್ಧವನು |
| 199 | 9 | ಶಿಕ್ಷ್ಯ | ಶಿಷ್ಯ |

| | | | | |
|---|---|---|---|---|
| 117 | 378 | 6 | ಮತ್ತೂ | ಮತ್ತು |
| 118 | 381 | 6 | ಮೊದನಾದವರಿಗಿಂತಲೂ | ಮೊದಲಾದವರಿ ಗಿಂತಲೂ |
| 119 | 400 | 19 | ಆನಂದಭರಿತನ್ನಾಗಿ | ಆನಂದಭರಿತನಾಗಿ |
| 120 | 418 | 4 | ಯುಧಾಮನ್ನು | ಯುಧಾಮನ್ಯು |
| 121 | 418 | 7 | ಉತ್ತಮೌಜು | ಉತ್ತಮೌಜಸ |
| 122 | 420 | 6 | ಅಮೃತಾಂಧನೆ | ಅಮೃತಾಂಧಸ |
| 123 | 428 | 21 | ಯಾಗಿವ್ದಳು | ಯಾಗಿದ್ದಳು |
| 124 | 430 | 4 | ಪ್ರತಿದಿನೇ | ಪ್ರತಿದಿನ |
| 125 | 436 | 1 | ದ್ವಿಅಪ್ಪ | ದ್ವಿ + ಅಪ್ಪ |
| 126 | 440 | 1 | ಪಾನಕಿಂ | ಪಾನಕೀಂ |
| 127 | 442 | 4 | ಊವಣೀ | ಊರ್ವಶೀ |
| 128 | 444 | 18 | ತಲ್ಲಿ | ರಲ್ಲಿ |
| 129 | 448 | 4 | ಶಿಬರಾ | ಶಿಬಿಕಾ |
| 130 | 450 | 1 | ಗುರುಶಿಪ್ಯ | ಗುರುಶಿಷ್ಯ |
| 131 | 452 | ಪದ್ಯ-47 4ನೆಯ ಸಾಲು | ಋಷಿಗಳೊ | ಋಷಿಗಳೊಳ್ |
| 132 | 455 | 16 | ನಿಮಿತ್ತನಾದ | ನಿಮಿತ್ತವಾದ |
| 133 | 460 | 2 | ಕಡಿವೆ | ಕಡಿಮೆ |
| 134 | 469 | 14 | ಸಕಲೇಂದ್ರಿಯಗಳ | ಸಕಲೇಂದ್ರಿಯಗಳ |
| 135 | 469 | 16 | ಸನವರತ | ಅನವರತ |
| 136 | 469 | 16 | ತಮ್ಮಗಿಂತ | ತಮಗಿಂತ |
| 137 | 481 | 5 | ಕಲ್ಪಾವಪಾನದಲ್ಲಿ | ಕಲ್ಪಾವಸಾನದಲ್ಲಿ |
| 138 | 482 | 3 | ನಿಷ್ಕಾಮಕರ್ಮಸಕ್ತ ರಾಗಿರುತ್ತಾರೆ. | ನಿಷ್ಕಾಮಕರ್ಮಾಸಕ್ತ ರಾಗಿರುತ್ತಾರೆ. |
| 139 | 492 | 3 | ಮಾನಾಧಮರ | ಮಾನವಾಧಮರ |
| 140 | 492 | 14 | ದೃಷ್ಠಿಗೆ | ದೃಷ್ಟಿಗೆ |
| 141 | 492 | 15 | ತಪಸ್ಸಿಗಳಂತೆಯೂ | ತಪಸ್ವಿಗಳಂತೆಯೂ |

|| ಶ್ರೀಃ ಹರಿಃ ಓಂ ||

|| ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯನಮಃ ||

## ಬೃಹತ್ತಾರತಮ್ಯಸಂಧಿ

## ಪದ್ಯ-೨೧

**ಹರಿಕಥಾಮೃತಸಾರ ಗುರುಗಳ |**
**ಕರುಣದಿಂದಾಪನಿತು ಪೇಳುವೆ |**
**ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||ಪ||**

**ಸಂಧಿಸೂಚನೆ :-**

**ಹರಿ ಸಿರಿ ವಿರಿಂಚೀರಮುಖ ನಿ |**
**ರ್ಜರರ ಆವೇಶಾವತಾರಗಳ |**
**ಸ್ಮರಿಸು ಗುಣಗಣ ಸರ್ವಕಾಲದಿ ಭಕ್ತಿಪೂರ್ವಕದಿ ||**

**ಪ್ರತಿಪದಾರ್ಥ :-**

**ಹರಿ** = ಸರ್ವೋತ್ತಮನಾದ, ಅನಂತಗುಣಪೂರ್ಣನಾದ ಶ್ರೀಪರಮಾತ್ಮನ, **ಸಿರಿ** = ಶ್ರೀಲಕ್ಷ್ಮೀದೇವಿಯ, **ವಿರಿಂಚಿ** = ಜೀವೋತ್ತಮರೂ, ಶ್ರೀಹರಿಯ ಜ್ಯೇಷ್ಠಪುತ್ರರೂ ಆದ ಬ್ರಹ್ಮದೇವರ, **ಈರ** = ಭಾವೀ ಬ್ರಹ್ಮರೂ. ಅತಿರೋಹಿತವಿಮಲವಿಜ್ಞಾನಿಗಳೂ ಆದ ಶ್ರೀವಾಯುದೇವರು, **ಮುಖನಿರ್ಜರರ** = ಇವರೇ ಮೊದಲಾದ ದೇವತೆಗಳ, **ಆವೇಶ** = ಅವರಲ್ಲಿ ಸ್ವೋತ್ತಮರ ಆವೇಶ, **ಅವತಾರಗಳ** = ಅವತಾರ ವಿಶೇಷಗಳನ್ನು, **ಗುಣಗಣ** = ಆಯಾಯಾ ದೇವತೆಗಳ ಗುಣತಾರತಮ್ಯ, ಶ್ರೀಪರಮಾತ್ಮನ ಸಮೀಚೀನವಾದ ಗುಣಸಮುದಾಯಗಳನ್ನು, **ಸರ್ವಕಾಲದಿ** = ಸದಾ ಎಲ್ಲಾ

ಕಾಲಗಳಲ್ಲಿಯೂ, **ಭಕ್ತಿಪೂರ್ವಕದಿ** = ತಾರತಮ್ಯಜ್ಞಾನಾನುಸಂಧಾನದಿಂದ ಭಕ್ತಿಪುರಸ್ಸರವಾಗಿ, **ಸ್ಮರಿಸು** = ಚಿಂತನೆಮಾಡುವವನಾಗು.

## ಪದ್ಯ-೧

**ಮೂಲ :-**

**ಮೀನ ಕೂರ್ಮ ಕ್ರೋಡ ನರಹರಿ ।**
**ಮಾಣವಕ ಭೃಗುರಾಮ ದಶರಥ ।**
**ಸೂನು ಯಾದವ ಬುದ್ಧ ಕಲಿಕೀ ಕಪಿಲ ವೈಕುಂಠ ॥**
**ಶ್ರೀನಿವಾಸ ವ್ಯಾಸ ಋಷಭ ಹ ।**
**ಯಾನನ ನಾರಾಯಣೀ ಹಂ ।**
**ಸಾನಿರುದ್ಧ ತ್ರಿವಿಕ್ರಮ ಶ್ರೀಧರ ಹೃಷೀಕೇಶ ॥೧॥**

**ಅವತರಣಿಕೆ :-**

ಮೂಲರೂಪನಾದ ಶ್ರೀಮನ್ನಾರಾಯಣನ ಅಂಶತ್ವೇನ ಪ್ರಕಟವಾದ ಸ್ವಾಭಿನ್ನಅವತಾರಗಳನ್ನು ತಿಳಿಸುತ್ತಾರೆ. ॥1॥

**ಪ್ರತಿಪದಾರ್ಥ :-**

**ಮೀನ** = ಮತ್ಸ್ಯಾವತಾರ, **ಕೂರ್ಮ** = ಕೂರ್ಮಾವತಾರ, **ಕ್ರೋಡ** = ವರಹಾವತಾರ (ಕ್ರೋಡ = ಗಂಡು ಹಂದಿ), **ನರಹರಿ** = ನರಸಿಂಹಾವತಾರ, **ಮಾಣವಕ** = ಬ್ರಹ್ಮಚಾರಿಯಾದ ಶ್ರೀವಾಮನಾವತಾರ, **ಭೃಗುರಾಮ** = ಭೃಗುಂಶಸಂಭೂತನಾದ ಶ್ರೀಪರಶುರಾಮಾವತಾರ, **ದಶರಥ ಸೂನು** = ದಶರಥರಾಜನ ಪುತ್ರನಾದ ಶ್ರೀರಾಮಾವತಾರ (ಸೂನು-ಪುತ್ರ), **ಯಾದವ** = ಯದುವಂಶೋದ್ಭವನಾದ ಶ್ರೀಕೃಷ್ಣಾವತಾರ, **ಬುದ್ಧ** = ಬೌದ್ಧಾವತಾರ, **ಕಲಕೀ** = ಕಲ್ಕ್ಯಾವತಾರ, **ಕಪಿಲ** = ತಾಯಿಯಾದ ದೇವ

ದೇವಹೂತಿಗೆ ಸಾಂಖ್ಯಶಾಸ್ತ್ರ ಉಪದೇಶಿಸಿದ ಕಪಿಲಾವತಾರ, **ವೈಕುಂಠ =** ಋಷಿಪತ್ನಿಯಾದ ವಿಕುಂಠಾ ಎಂಬುವಳಲ್ಲಿ ಅವತಾರ, **ಶ್ರೀನಿವಾಸ** = ತಿರುಪತಿ ಕ್ಷೇತ್ರವಾಸಿ ಶ್ರೀವೇಂಕಟೇಶದೇವರು, **ವ್ಯಾಸ** - ಪರಾಶರ ಸತ್ಯವತೀ ಪುತ್ರನಾದ ಶ್ರೀವೇದವ್ಯಾಸರು, **ಋಷಭ** = ಋಷಭಾವತಾರಿ ಶ್ರೀಹರಿ, **ಹಯಾನನ** = ಬ್ರಹ್ಮದೇವರಿಗೆ ಜ್ಞಾನೋಪದೇಶಮಾಡಿದ ಶ್ರೀಹಯಗ್ರೀವರೂಪ, **ನಾರಾಯಣೀ** = ಅಮೃತ ವಿಭಾಗಮಾಡಿದ ಶ್ರೀನಾರಾಯಣೀ ನಾಮಕ ಮೋಹಿನೀರೂಪ, **ಹಂಸ** = ಹಂಸನಾಮಕ ಶ್ರೀಪರಮಾತ್ಮ, **ಅನಿರುದ್ಧ** = ಶಾಂತೀರಮಣ ಅನಿರುದ್ಧರೂಪ, **ತ್ರಿವಿಕ್ರಮ** = ವಾಮನನಾಗಿ ಬಂದು ಬ್ರಹ್ಮಾಂಡವನ್ನು ಅಳೆದ ತ್ರಿವಿಕ್ರಮರೂಪ, **ಶ್ರೀಧರ** = ಶ್ರೀಲಕ್ಷ್ಮೀದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿದ ಶ್ರೀಮನ್ನಾರಾಯಣ, **ಹೃಷೀಕೇಶ** = ಇಂದ್ರಿಯನಿಯಾಮಕನಾದ ಹೃಷೀಕೇಶನಾಮಕ ಶ್ರೀಪರಮಾತ್ಮನ, ಇನ್ನು ಅನಂತಾನಂತರೂಪಗಳು. ॥1॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

**ಸಂಧಿಸೂಚನೆ :-** ಗುಣಪೂರ್ಣನಾದ ನಾರಾಯಣದೇವರ ಅವತಾರಗಳನ್ನು ಹೇಳುತಾರೆ.

**ಪ್ರಮಾಣ :- ಅವತಾರಾನ್ ಹರೇಃ ಜ್ಞಾತ್ವಾ ನಾವತಾರಾನ್ ಹರೇಶ್ಚ ಯೋ । ತಥಾವೇಶಾನ್ ತಥಾ ಸಮ್ಯಕ್ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥**

ಎಂಬ ವಚನರೀತ್ಯಾ,ದೇವರ-ತಥಾ ದೇವತೆಗಳ ಅವತಾರ, ಆವೇಶ ತಿಳಿಯಬೇಕಂತ ಹೇಳಿ, ಪ್ರಥಮದಲ್ಲಿ ದೇವರ ಅವತಾರರೂಪಗಳ ಹೇಳತಾರೆ.

ಸರ್ವೋತ್ತಮನಾದ ಗುಣಪೂರ್ಣನಾದ ಶ್ರೀಪರಮಾತ್ಮನ ನಿತ್ಯಾವಿಯೋಗಿನಿಯರಾದ, ನಿತ್ಯಮುಕ್ತರಾದ ಪರಮಾತ್ಮನಸಪೇಕ್ಷಯಾ ಅಸ್ವತಂತ್ರರಾದ ಈ ಶ್ರೀಪರಮಾತ್ಮಗೆ ಪತ್ನಿಯರಾದ ಶ್ರೀಲಕ್ಷ್ಮೀದೇವೇರ, ಜೀವೋತ್ತಮರಾದ, ಅಸುರಾವೇಶದಿಂದಲೂ ಅಜ್ಞಾನಾದಿ ದೋಷದಿಂದಲೂ ದೂರರಾದ, ಋಜುಗಣದಲ್ಲಿ ಶ್ರೇಷ್ಠರಾದ ಬ್ರಹ್ಮದೇವರ, ಭಾವೀಬ್ರಹ್ಮರಾದ, ಬ್ರಹ್ಮದೇವರೋಪಾದಿಯಲ್ಲಿ ಲಕ್ಷಣಗಳುಳ್ಳ ಸರ್ವೇಂದ್ರಿಯನಿಯಾಮಕರಾದ ಶ್ರೀವಾಯುದೇವರು ಇವರೇ ಮೊದಲಾದ ದೇವತೆಗಳ ಅವತಾರಗಳ, ಈ ಪೂರ್ವೋಕ್ತ ದೇವತೆಗಳಲ್ಲಿ ಸ್ವೋತ್ತಮದೇವತೆಗಳ ಆವೇಶ, ಆಯಾದೇವತೆಗಳು, ಪರಮಾತ್ಮನ ಸಮೀಚೀನ ಗುಣಗಳ ಸಮೂಹ-ಇವು ಯಾವತ್ತೂ ತಾರತಮ್ಯ ಪಂಚಭೇದಪೂರ್ವಕವಾಗಿ, ಭಕ್ತಿಯಿಂದ ಸಹಿತನಾಗಿ, ಅವರವರ ತಾರತಮ್ಯಾನುಸಾರ,ಅವರವರಲ್ಲಿ ಭಕ್ತಿಮಾಡುತಾ, ಸದಾ ಸರ್ವಕಾಲದಲ್ಲಿ ಸ್ಮರಿಸೋವನಾಗಬೇಕು-ಎಂತ ತಾತ್ಪರ್ಯ.

ಪ್ರಥಮತಃ ಮೂಲರೂಪನಾದ ನಾರಾಯಣದೇವರಿಂದ ಅಂಶತ್ವೇನ ಹೊರಟ ಅವತಾರಗಳ ಹೇಳತಾರೆ.

ಮಚ್ಛಾವತಾರ, ಕೂರ್ಮಾವತಾರ, ವರಹಾವತಾರ, ನರಸಿಂಹಾವತಾರ, ಬ್ರಹ್ಮಚಾರಿಯಾದ ಶ್ರೀವಾಮನಾವತಾರ, ಪರಶುರಾಮಾವತಾರ, ದಶರಥರಾಯನ ಪುತ್ರನಾದ ಶ್ರೀರಾಮಾವತಾರ, ಯದುವಂಶೋದ್ಭವನಾದ ಶ್ರೀಕೃಷ್ಣಾವತಾರ, ಬೌದ್ಧಾವತಾರ, ಕಲ್ಕ್ಯವತಾರ, ಸಾಂಖ್ಯಶಾಸ್ತ್ರ ಬೋಧಮಾಡಿದ ಕಪಿಲಾವತಾರ, ಋಷಿಪತ್ನಿಯಾದ ವಿಕುಂಠಾಳಲ್ಲಿ ಅವತಾರ, ತಿರುಪತಿ ಕ್ಷೇತ್ರದಲ್ಲಿ ಅವತಾರಮಾಡಿದ ಶ್ರೀವೇಂಕಟೇಶದೇವರು, ಪರಾಶರಋಷಿಗಳ ಪುತ್ರರಾದ ಶ್ರೀವೇದವ್ಯಾಸದೇವರು, ಋಷಭಾವತಾರ, ಬ್ರಹ್ಮದೇವರಿಗೆ ಜ್ಞಾನೋಪದೇಶಮಾಡಿದ ಶ್ರೀಹಯವದನದೇವರು, ಅಮೃತವಿಭಾಗಮಾಡಿದ ಶ್ರೀನಾರಾಯಣೀರೂಪ, ಹಂಸನಾಮಕ ಪರಮಾತ್ಮ, ಅನಿರುದ್ಧರೂಪ, ವಾಮನರೂಪದಿಂದ ಅಭಿವೃದ್ಧನಾದ ತ್ರಿವಿಕ್ರಮ, ಲಕ್ಷ್ಮೀದೇವೇರನ್ನ ವಕ್ಷ

ಸ್ಥಳದಲ್ಲಿ ಉಳ್ಳವ. ಇಂದ್ರಿಯನಿಯಾಮಕನಾದ ಶ್ರೀಪರಮಾತ್ಮ ಇವು ಯಾವತ್ತೂನೂ, ಇನ್ನೂ ಅನಂತಾನಂತಾವತಾರಗಳು ಶ್ರೀಪರಮಾತ್ಮಗೆ ಎಂತ ತಾತ್ಪರ್ಯ. ॥1॥

## ೨. ಭಾವಪ್ರಕಾಶಿಕೆ :-

ಪೂರ್ವಸಂಧಿಯಲ್ಲಿ ಗುಣಗಳ ಹೆಚ್ಚು ಕಮ್ಮಿಗಳನ್ನನುಸರಿಸಿ, ತಾರತಮ್ಯ ವನ್ನು ಹೇಳಿದರು. ಈ ಸಂಧಿಯಲ್ಲಿ ಶ್ರೀಪರಮಾತ್ಮನು ಮತ್ತು ದೇವತೆಗಳು ಇವರುಗಳ ಅವತಾರಗಳನ್ನೂ, ಅಂಶಗಳನ್ನೂ ಸಹ ತಾರತಮ್ಯಕ್ರಮದಿಂದ ಹೇಳುತ್ತಾರೆ.

ಶ್ರೀಪರಮಾತ್ಮನ ಅವತಾರಗಳು ಅನಂತವಾದ ಪ್ರಯುಕ್ತ, ಸಂಪೂರ್ಣ ಅಂಶಗಳನ್ನೂ ಅವತಾರಗಳನ್ನೂ ಹೇಳಲು ಸಾಧ್ಯವಿಲ್ಲ. ಆದ್ದರಿಂದ, ಪ್ರಧಾನ ವಾದ ಅಂಶಾವತಾರಗಳನ್ನು ಹೇಳುವೆವು.ಉಳಿದ ಬ್ರಹ್ಮ ವಾಯು ಮೊದಲಾದ ದೇವತೆಗಳ ಅಂಶಗಳು ಅವತಾರಗಳನ್ನು ಸಂಪೂರ್ಣವಾಗಿ ಇವರಲ್ಲಿ ಹೇಳಿರು ತ್ತೇವೆ. ಇಂತಹಾ ಅಂಶಗಳನ್ನೂ, ಅವತಾರಗಳನ್ನೂ, ಅವರವರ ಗುಣ ಗಳನ್ನೂ, ನಿತ್ಯದಲ್ಲೂ ಭಗವದ್ಭಕ್ತರಾದ ಅಧಿಕಾರಿಗಳು ಸ್ಮರಿಸಬೇಕೆಂಬ ಭಾವ. ಹೀಗೆ ಈ ಸಂಧಿಯ ಅಭಿಪ್ರಾಯವನ್ನೇ ಸೂಚಿಸಿರುತ್ತಾರೆ. ॥1॥

## ೩. ಭಾವದರ್ಪಣ :-

ಶ್ರೀಗುರುಭ್ಯೋನಮಃ । ಶ್ರೀಹರಿಃ ಓಂ । ಈಗ "ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ। ಏತಸ್ಯಾಪಿ ವಿಮುಕ್ತಿಸ್ಯಾತ್ ಕಥಂಚನು- ಎಂಬ **ಭಾರತನಿರ್ಣಯಾನುಸಾರ** ಶ್ರೀಶನಲ್ಲಿ ಸರ್ವೋತ್ತಮತ್ವ ಘಟನಪೂರ್ವಕ ತಾರತಮ್ಯಜ್ಞಾನ ಆದವರಿಗೆ ಮುಕ್ತಿಪ್ರಾಪ್ತಿ- ಎಂದು ಅಧಿಕಾರಿಗಳಿಗೆ ತಿಳಿ ಸೋದಕ್ಕೋಸ್ಕರ ಅಂಶಾವೇಶಾವತಾರಯುಕ್ತ **ಬೃಹತ್ತಾರತಮ್ಯಸಂಧಿ** ಉಪ ಕ್ರಮಿಸುತ್ತಾರೆ. । ಹರೀತಿ । ಮೀನೇತಿ । ಮೀನ-ಮತ್ಸ್ಯ ।ಕ್ರೋಡ-ವರಾಹ । ಯಾದವ-ಕೃಷ್ಣ । ಕಪಿಲ-ಸಾಂಖ್ಯಶಾಸ್ತ್ರಬೋಧಕ । ವೈಕುಂಠ-ಋಷಿಪತ್ನಿ

ಯಾದ ವಿಕುಂಠೆಯಲ್ಲಿ ಅವತರಿಸಿದವ ಎಂಬರ್ಥ । ತದುಕ್ತಂ ಅಷ್ಟಮಭಾಗವತೇ । "ಪತ್ನೀ ವಿಕುಂಠಾ ಶುಭ್ರಸ್ಯೇತಿ" । ವ್ಯಾಸ-ಬ್ರಹ್ಮಸೂತ್ರಾದಿ ನಿರ್ಮಾತೃ ನಾರಾಯಣನ ರೂಪವೇ ಎಂಬರ್ಥ । ಋಷಭ-ನಾಭಿರಾಯನ ಪುತ್ರ । ಹಯಾನನ-ಹಯಗ್ರೀವ ಸುರಾಂತಕ ।ನಾರಾಯಣೀ-ಅಸುರಮೋಹಿನೀ ದೇವತಾಮೃತದಾಯಿನೀ । ಹಂಸ-ಸಮಸ್ತದೋಷಗಳಿಂದ ದೂರ ಎಂಬರ್ಥ । ಹೃಷೀಕೇಶ-ಇಂದ್ರಿಯಾಧಿಪ । ಸರ್ವಗ-ಸರ್ವತ್ರವ್ಯಾಪ್ತ । ಅಮಿತ-ಅನಂತ । "ಮತ್ಸ್ಯಃ ಕೂರ್ಮಃ ಕ್ರೋಡಸಿಂಹೌ ವಟುರಾಮೌಚ ಭಾರ್ಗವಃ । ಕೃಷ್ಣ ಬುದ್ಧೌ ದತ್ತ ಕಲ್ಕೀ ಹಯಗ್ರೀವೈತರೇಯಕಾಃ । ವೇದವ್ಯಾಸಶ್ಚ ವೈಕುಂಠೋ ಕಪಿಲೋ ಋಷಭಸ್ತಥಾ" । ಲಕ್ಷ್ಮ್ಯಂತರ್ಗತರೂಪವೇ ನಾರಾಯಣಿ ಎಂಬರ್ಥ । ಮತ್ತು ನಾಲ್ಕನೇ ಮನು ತಾಪಸನಾಮಕ ಭಗವದ್ರೂಪ ಎಂಬರ್ಥ । "ನಾರಾಯಣ ತಾಪಸಶ್ಚ ಯಜ್ಞೋ ಧನ್ವಂತರಿಸ್ತಥಾ। ನಾರಾಯಣಃ ಕೃಷ್ಣ ಹರಿ ಉಪೇಂದ್ರಃ ಸರ್ವ ಏವಚ । ಏವಮಾದ್ಯಾಹರಿಃ ಸಾಕ್ಷಾದನಂತ ಗುಣ ಉಚ್ಯತ"— ಇತಿ ಬೃಹತ್ತಾರತಮ್ಯೋಕ್ತೇಃ । ಶ್ರೀಶನ ಮೂಲರೂಪಕ್ಕೂ ಅವತಾರರೂಪಗಳಿಗೂ ಲೇಶ ಭೇದವಿಲ್ಲ-ಎಂಬ ವಿಷಯಕ್ಕೆ ಪ್ರಮಾಣ । ಉಕ್ತಂಚ ಗಾರುಡೇ । "ಅವತಾರಾಹ್ಯಸಂಖ್ಯೇಯಾ ವಿಷ್ಣೋರ್ನಾರಾಯಣಸ್ಯಚ । ಸ್ವಯಂ ನಾರಾಯಣಸ್ತ್ವೇತೇನಾಣು ಮಾತ್ರ ವಿಭೇದತಃ । ಬಲತೋ ರೂಪತಶ್ಚಾಪಿ ಗುಣತ್ವ ಕಥಂಚನ । ಅನಂತಾನಂತ ಗುಣತಃ ಪೂರ್ಣೋ ವಿಷ್ಣುರ್ನಚಾನ್ಯಥೇತಿ." ॥1॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಶ್ರೀರಸ್ತು ॥ ಬೃಹತ್ತಾರತಮ್ಯ ಸಂಧಿಃ ಆರಭ್ಯತೇ ॥

ಅನಂತಂ ಪದ್ಮನಾಭಂಚ ತತ್ರಾವಿಷ್ಟಂ ರಮಾಪತಿವನ್ ॥ ಕೌಂಡಿನ್ಯಮುಖದಾರಿದ್ರ್ಯಹರಂ ಶ್ರೀಹರಿಂ ಆಶ್ರಯೇ ॥1॥ ಶ್ರೀ ಶಾಲಿನೀ ಸಮಾಶ್ಲಿಷ್ಟೋऽವತೀರ್ಯ ನಿಜಮಂದಿರಾತ್ ॥ ಕಾಂಚಿದಾವಿಶ್ಯ ಚಾನಲ್ಪಧಿಷಣೋಯೋ ಬಭೂವಹ ॥2॥ ನಾರಾಯಣ ರಮಾ ಮುಖ್ಯ ಲೇಖಾನಾಂ ಚಾರಿಣಾಂ ಭುವಿ ॥ ಆವೇಶಾನವತಾರಾಂಶ್ಚ ಜ್ಞಾತ್ವಾ ಮುಕ್ತಿಃ ನ ಚಾನ್ಯಥಾ ॥3॥ ಅವ

ತಾರಾನ್ ಹರೇಃ ಜ್ಞಾತ್ವಾ" ಇತಿ॥-"ತದಾವೇಶಾನ್ ತಥಾ ಸಮ್ಯಕ್ ಜ್ಞಾತ್ವಾ" ಇತಿ ಚ ವಚನೇನ-"ತಾರತಮ್ಯಂ ತತೋಜ್ಞೇಯಂ ಸರ್ವೋಚ್ಚತ್ವಂ ಹರೇಃ ತಥಾ ॥ ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥"- ಇತಿ ಪುರಾಣನಾಚಾರ್ಯ ವಚಸಾ ಆವೇಶಾವತಾರೋಚ್ಚತ್ವ ಧಿಯಾಂ ಪರಮಧರ್ಮ್ಯಂಗತ(ತಾ) ಯಾ ಅವಗಮಾತ್ ತತ್ತ್ರಯಂ ತತ್ತ್ವತಃ ಅವಗತಂ ಚೇತ್ ಅಲಂ ಪ್ರಾಯಣಾಯ ನಾನ್ಯಥಾ ॥ ತಸ್ಯ ಚ ಅಬಾಧಿತ= ಮಾನಸಾಪೇಕ್ಷತ್ವಾತ್ ॥ ತತ್ರ **ಬೃಹದ್ಭಾಷ್ಯಂ,** ತದರ್ಣಕ ಪ್ರಮಾದಾದ್ಯರ್ಥಂ ಕೃತರತ್ನಮಾಲಾ ದೀಪಿಕಾ ಸಾಮಾನಾಧಿಕರಣ್ಯೇ ಕಥಾಮೃತ ಸುಧಾಪ್ಲುತಾನಾಂ ಪರೀಕ್ಷ್ಯ, ಕಂಠೇಽರ್ಪಯಿತುಂ ಕೃತಾವಸರಾ ಮಾಲಾ ಇತಿ ಗ್ರೈವೇಯ ನಿರ್ಮಾಣಾಯ, "ಶ್ರೀಹರೀತರ ದಿವಿಜನಾಮಾನಿ ಅರ್ಥವಂತಿ ಮತಾನ್ಯೇವ; "ಸ್ವಾತಂತ್ರ್ಯಂ ತತ್ರಮುಖ್ಯಂ ಸ್ಯಾತ್; "-ಇತಿ ನ್ಯಾಯೇನ ಹರೌ ಗುಣೋತ್ಕರ್ಷಮುಪಗಯ್ಯ ಪ್ರಸನ್ನತಾಂ ಭಜೇರನ್"-ಇತಿ ಮನಸಾ ವಿಚಾರ್ಯ,ಬಹುಗ್ರಂಥ ಸಂದರ್ಭಾಂ ದರ್ಭಶಾಯಿ ಮುಖಾವೇಶಾವತಾರ ಪ್ರಕ್ರಿಯಾಂ ಅತ್ರ ಗ್ರಂಥ ಸಂಬದ್ಧಾಂ ದರ್ಶಯಿಷ್ಯನ್ ತಾವತ್ ಚಿಕೀರ್ಷಿತಂ ಪ್ರತಿಜಾನೀತೇ-"ಹರಿ" ಇತಿ ॥

"ಗ್ರಂಥಬಾಹುಲ್ಯ ಭೀತ್ಯಾಹಂ ಪರಿತ್ಯಾಗೇಪ್ಯನೀಶ್ವರಃ ॥ ಮಾನ್ಯೈಕಾರ್ಥ್ಯೇ ಮಾನಮೇಕಂ ಉಕ್ತ್ವಾ ವೃತ್ತಿಃ ಪ್ರದರ್ಶ್ಯತೇ ॥ "ವೈಕುಂಠ"-ಓಂ ಮೃಳಯಾಸಿ ನಃ ಉಪನೋ, ಹರಿಭಿಃ ಸುತಂ ದ್ವಿತಾಯೋ ವೃತ್ರ ಹಂತಮಃ ॥ ಓಂ ॥ ವಿಗತಃ ಕುಂಠಃ ಸರ್ವಲೋಕ ಸಂಚಾರಪ್ರತಿಹತಿಃ ಯಸ್ಮಾತ್ ಸಃ ವೈಕುಂಠಃ ॥ ತನ್ನಿರ್ಮಾತಾ ವಿಕುಂಠಾಖ್ಯರ್ಷಿಪತ್ನ್ಯಾಂ ಅವತೀರ್ಣಃ ವಾ "ಮಾಣವಕಃ"-ವಾಮನಃ ॥ ಏವಂ ಶ್ರೋತೄನ್ ಅಭಿಮುಖೀ ಕೃತ್ಯ, ಶ್ರೀಭಗವದವತಾರಾನ್ ನಿರ್ದಿಶತಿ-"ಮೀನ" ಇತಿ ॥ "ಶ್ರೀನಿವಾಸ" ಇತಿ ॥ "ನಾರಾಯಣೀ"-"ಮೋಹಿನೀ" ॥ ತ್ರಿವಿಕ್ರಮಃ ವಾಮನ ಪ್ರಭಿನ್ನಃ ॥ ಅತ್ರ ಉಪಲಕ್ಷಣಯಾ ಪ್ರದ್ಯುಮ್ನಾದಿತ್ರಯಾಣಾಂ ಅನಿರುದ್ಧಪದೇನ, ಶ್ರೀಧರಪದೇನ ಚತುರ್ವಿಂಶತಿ ಮೂರ್ತೀನಾಂ, ವೈಕಾಲಾದಿ ಪದೇನ ವಿಶ್ವಾದಿ ಸಾಹಸ್ರಸ್ಯ (ಸಹಸ್ರಾಣಾಂ) ಪರಾದಿರೂಪಾಣಾಂ ಅಜಿತಾದೀನಾಂ ಅಧ್ಯಾತ್ಮಿಕಾನಾಂ ಅನಂತಾನಾಂ ಗ್ರಹಣಮ್ ॥1॥

## ಕನ್ನಡಾರ್ಥ

ಅನಂತ(ಶೇಷ)ನಲ್ಲಿ ಅಂತಃ ಸನ್ನಿಹಿತನಾದ ಕೌಂಡಿನ್ಯ ಮುಂತಾದವರ ದಾರಿದ್ರ್ಯಹರನಾದ ಅನಂತಪದ್ಮನಾಭರೂಪೀ ಶ್ರೀರಮಾಪತಿಯನ್ನು ಆಶ್ರಯಿಸುತ್ತೇನೆ. । ರಮಾಸಮಾಲಂಗಿತನಾದ ಶ್ರೀಹರಿಯು ವೈಕುಂಠದಿಂದ ಅವತರಿಸಿರುತ್ತಾನೆ. ಪೂರ್ಣಜ್ಞಾನಾನಂದಮಯವಾದ ಶ್ರೀಹರಿಯು ಕೆಲವರಲ್ಲಿ ತನ್ನ ಆವೇಶಗಳನ್ನೂ ಇಟ್ಟಿರುತ್ತಾನೆ. "ಅಂಥ ಶ್ರೀಮನ್ನಾರಾಯಣ, ಶ್ರೀ ಲಕ್ಷ್ಮೀದೇವಿ, ಇವರುಗಳ, ಇವರೇ ಮುಖ್ಯವಾಗಿ ಉಳ್ಳ-ಭೂಮಿಯಲ್ಲಿ ಅವತರಿಸಿರುವ ದೇವತೆಗಳ ಆವೇಶ ಹಾಗೂ ಅವತಾರಗಳನ್ನು ಸರಿಯಾಗಿ ತಿಳಿಯಬೇಕು. ಇಲ್ಲದಿದ್ದರೆ ಮುಕ್ತಿಯಾಗುವುದಿಲ್ಲ." ಹರಿಯ ಅವತಾರಗಳನ್ನು ತಿಳಿದು: ಆ ಹರಿಯ ಅವತಾರ ಆವೇಶಗಳನ್ನು ಸರಿಯಾಗಿ ತಿಳಿದು, ತಾರತಮ್ಯವನ್ನು ಆದರಿಂದ ತಿಳಿಯಬೇಕು. ಹಾಗೂ ಹರಿಯ ಸರ್ವೋತ್ತಮತ್ವವನ್ನು ತಿಳಿದುಕೊಳ್ಳಬೇಕು. ಇಲ್ಲದಿದ್ದರೆ, ಯಾರಿಗೂ ಹೇಗೂ ಎಂದಿಗೂ ಮುಕ್ತಿಯಾಗುವುದಿಲ್ಲ,"-ಎಂದು ಮುಂತಾಗಿ ಪುರಾತನಾಚಾರ್ಯರ ವಚನಗಳಿರುವುವು. ಅವುಗಳಿಂದ-"ಹರಿಯ ಅವತಾರ-ಆವೇಶ--ಸರ್ವೋತ್ತಮತ್ವಗಳ ಜ್ಞಾನದಿಂದ ಮೋಕ್ಷಾದಿಗಳಾಗುವವೆಂದು ತಿಳಿದುಬರುತ್ತದೆ. ಆದುದರಿಂದ, ಈ ಮೂರು ವಿಷಯಗಳನ್ನು ಯಥಾರ್ಥವಾಗಿ ತಿಳಿದರೆ,ಮೋಕ್ಷಕ್ಕೆ ಸಾಧನಗಳು ಪೂರ್ಣವಾಗುವುವು. ಇಲ್ಲದಿದ್ದರೆ ಮೋಕ್ಷವಿಲ್ಲ. ಆದುದರಿಂದ, ಅತಿ ಮಹತ್ತರವಾದ ಈ ಮೂರು ವಿಷಯಗಳು ಅಬಾಧಿತ ಪ್ರಮಾಣಗಳಿಂದಲೇ ಸಿದ್ಧವಾಗುವುವು. ಅದರಲ್ಲಿ "ಬೃಹದ್ಭಾಷ್ಯ," ಅದರ ಅರ್ಥವನ್ನು ವಿವರಿಸುವ "ರತ್ನಮಾಲಾ"-"ದೀಪಿಕಾ" ಮುಂತಾದುವುಗಳನ್ನು ಸಮಾನವಿಷಯಗಳಾಗುವಂತೆ ವಿಮರ್ಶಿಸಿ, ಹರಿಕಥಾಮೃತದಲ್ಲಿ ಓದುವರ ಕಂಠದಲ್ಲಿ ಕಂಠಾಭರಣವಾಗಲು ರತ್ನಮಾಲೆಯು ಅರ್ಹವಾಗಿರುತ್ತದೆ.

ಹರಿಯ ವ್ಯತಿರಿಕ್ತವಾದ ದೇವತೆಗಳಾದ ನಾಮಗಳಿಗೂ ಸಹ "ಸ್ವಾತಂತ್ರ್ಯವು ಶಬ್ದಪ್ರವೃತ್ತಿ ನಿಮಿತ್ತಗಳಲ್ಲಿ ಮುಖ್ಯವಾದುದು."— ಎಂದು ಹೇಳುವ ಅನುವ್ಯಾಖ್ಯಾನದ ವಚನದಂತೆ ಪ್ರಯೋಜನಗಳಿರುತ್ತದೆ.ಆದರಿಂದ

ಶ್ರೀಹರಿಯು ಸರ್ವಗುಣೋತ್ಕೃಷ್ಟನೆಂಬ ಜ್ಞಾನವು ಹುಟ್ಟುತ್ತದೆ. ಆದದ ರಿಂದ ಮನಸ್ಸಿಗೆ ಪ್ರಸನ್ನತೆಯಾಗುವುದು. ಹೀಗೆಂದು ವಿಚಾರಿಸಿ, ಬಹುಗ್ರಂಥ ಸಂದರ್ಭಗಳಿಗೆ ಅನ್ವಯಿಸುವ ನಾರಾಯಣ ಮುಂತಾದವರ ಅವತಾರ-ಆವೇಶ ಪ್ರಕ್ರಿಯೆಯು ತಮ್ಮ ಗ್ರಂಥದಲ್ಲಿ ನಿರೂಪಿತವಾಗುವುದೆಂದು ತೋರಿಸುತ್ತಾರೆ. ಅದರಲ್ಲೂ, ಮೊದಲು ತಮಗೆ ಮಾಡಲಿಷ್ಟವಾದುದನ್ನು ಮುಂಚೆಯೇ ತಿಳಿಸು ತ್ತಾರೆ-'ಹರಿ' ಎಂಬ ಸೂಚನಾ ಪದ್ಯದಿಂದ.

ಬಹಳ ವಿಷಯಗಳನ್ನು ನಿರೂಪಿಸಿದರೆ, ಗ್ರಂಥವು ಬೆಳೆಯುತ್ತದೆಂಬ ಭಯವು ಮೂಡುತ್ತದೆ. ಆದರೂ, ಆ ವಿಷಯಗಳನ್ನು ಬಿಡಲು ಶಕ್ತನಲ್ಲ. ಪ್ರಮಾಣ ಸಂವಾದಗಳುಳ್ಳ ಅರ್ಥಗಳಲ್ಲಿ ಒಂದೊಂದು ಪ್ರಮಾಣವನ್ನು ಹೇಳಿ ಪದಪದಾರ್ಥವನ್ನಷ್ಟೇ ಪ್ರದರ್ಶಿಸುತ್ತೇನೆ." 'ವೈಕುಂಠ' ಯಾವನಿಗೆ ಸರ್ವ ಲೋಕಸಂಚಾರದ ತಡೆಯೆಂದಿಗೂ ಇರುವುದಿಲ್ಲವೋ ಅವನು ವೈಕುಂಠನು. (1) ವೈಕುಂಠಲೋಕವನ್ನು ನಿರ್ಮಿಸಿದವನು. ನಿತ್ಯವಾದ ವೈಕುಂಠಲೋಕಕ್ಕೆ ಆಶ್ರಯನು. (2) ವಿಕುಂಠಾ ಎಂಬ ಋಷಿಪತ್ನಿಯಲ್ಲಿ ಅವತರಿಸಿದವನು.

(3) ಮಾಣವಕಃ = ವಟುವಾದ ವಾಮನ.

ನಾರಾಯಣನ ಅವತಾರಗಳನ್ನು ಹೇಳುತ್ತಾ,ಶ್ರೋತೃಗಳನ್ನು ಗ್ರಂಥದ ಕಡೆಗೆ ಮನವೊಲಿಸುತ್ತಾರೆ-'ಮೀನ' ಎಂಬ ಪದ್ಯದಿಂದ.

'ನಾರಾಯಣಃ' = ಮೋಹಿನೀರೂಪ. ತ್ರಿವಿಕ್ರಮರೂಪವು ವಾಮನಾವ ತಾರದಲ್ಲಿಯ ಪ್ರಭೇದ. ಅಂದರೆ, ವಾಮನನೇ ತ್ರಿವಿಕ್ರಮನಾಗಿರುತ್ತಾನೆ-ಎಂದು ಭಾವ.

ಇಲ್ಲಿ ಮಿಕ್ಕ ರೂಪಗಳನ್ನು ಸಂಗ್ರಹಿಸಬೇಕು. 'ಅನಿರುದ್ಧ' ಪದದಿಂದ ಪ್ರದ್ಯುಮ್ನ ಮುಂತಾದ ನಾಲ್ಕು ರೂಪಗಳನ್ನು ತಿಳಿಯಬೇಕು. 'ಶ್ರೀಧರ'— ಪದದಿಂದ- ಇಪ್ಪತ್ತುನಾಲ್ಕು ರೂಪಗಳನ್ನು ಸಂಗ್ರಹಿಸಬೇಕು. ಮೂಲದಲ್ಲಿ

ರುವ ಆದಿ ಪದದಿಂದ ವಿಶ್ವ ಮುಂತಾದ ಸಹಸ್ರರೂಪಗಳನ್ನೂ, ಪರಾದಿರೂಪ ಗಳನ್ನೂ, ಅಜಿತ ಮುಂತಾದ ಆಧ್ಯಾತ್ಮಿಕ ಅನಂತರೂಪಗಳನ್ನೂ ಸಂಗ್ರಹಿಸ ಬೇಕು. ‖1‖

**ಙ. ಶ್ರೀಗುರುಹೃದಯ ಪ್ರಕಾಶಿಕೆ :–**

ಮೇಲೆ ಹೇಳಿದ ತಾರತಮ್ಯವನ್ನೇ ವಿವರಿಸಿ,ಅವತಾರ-ಆವೇಶ ಸಹ ತಿಳಿ ಸುವ ಹರಿಕಥೆ ಎಂಬ ಭಾರತಾದ್ಯರ್ಥದ ಮೋಕ್ಷಸಾಧನಸಾರವನ್ನು ಗುರು ಕೃಪಾಬಲದಿಂದ ಶಕ್ತ್ಯನುಸಾರ ಹೇಳುವುದನ್ನು ಅತ್ಯಂತ ಪರಿಭಕ್ತರು ಕೇಳು ವುದು.

ಈ ಸಂಧಿಯ ಅಭಿಪ್ರಾಯ ಸಂಗ್ರಹಿಸಿ,ಅರ್ಥಪದ್ಯದಿಂದ ತಿಳಿಸಿ,ಸರ್ವೋ ತ್ತಮನಾದ ವಿಷ್ಣುವಿನ ಅವತಾರಗಳನ್ನು ತಿಳಿಸುತ್ತಾರೆ- ಹರಿ ಎಂದು.

ಶ್ರೀಹರಿ, ಸಿರಿ ಎಂಬ ರಮಾದೇವಿ, ವಿರಿಂಚ ಎಂಬ ಬ್ರಹ್ಮ, ಈರ ನೆಂಬ ರುದ್ರಾದಿ ಸರ್ವಜೀವರ ಪ್ರೇರಕನಾದ ಪ್ರಾಣದೇವರು— ಮೊದಲಾದ ನಿರ್ಜರರು, ಅಂದರೆ ನಿತ್ಯಯೌವ್ವನವುಳ್ಳ ದೇವತೆಗಳ ಆವೇಶ, ಅವತಾರ ಗಳನ್ನೂ, ಗುಣಗಳನ್ನೂ ಸಹ ಭಕ್ತಿಪೂರ್ವಕ ಸದಾ ಸ್ಮರಿಸಬೇಕು.

**ತಾರತಮ್ಯಂ ತತೋಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ ।**
**ಏತದ್ವಿನಾ ನ ಕಸ್ಯಾಪಿ ವಿಮುಕ್ತಿಸ್ಸ್ಯಾತ್ ಕಥಂಚನ ॥**

ಎಂಬುದಾಗಿ ಹೇಳಿರುವಂತೆ, ಶ್ರೀಶನಲ್ಲಿ ಸರ್ವೋತ್ತಮತ್ವ ಘಟನಪೂರ್ವಕ ತಾರತಮ್ಯಜ್ಞಾನ ಆದವರಿಗೇನೇ, ಮುಕ್ತಿಪ್ರಾಪ್ತಿಯೆಂದು ಅಧಿಕಾರಿಗಳಿಗೆ ಸೂಚಿ ಸುವುದಕ್ಕೋಸ್ಕರ,ಈ ಸಂಧಿ ಪ್ರಾರಂಭಿಸಲ್ಪಟ್ಟಿರುತ್ತೆ ॥ ಸಂ । ಸೂ॥

ಮೀನನೆಂಬ ಮತ್ಸ್ಯಾವತಾರ, ಕೂರ್ಮ, ಕ್ರೋಡನೆಂಬ ವರಹಾವ ತಾರ, ಮಾಣವಕನೆಂಬ ವಟುರೂಪ ವಾಮನಾವತಾರ, ಪರಶುರಾಮ, ದಶರಥಪುತ್ರ ಶ್ರೀರಾಮ, ಯಾದವಕೃಷ್ಣ, ಬುದ್ಧ, ಕಲ್ಕಿ, ಕಪಿಲರೂಪ,

ವೈಕುಂಠ-ಎಂದರೆ,ವಿಕುಂಠಾ ಎಂಬ, ಶುಭ್ರನೆಂಬುವನ ಪತ್ನಿಯಲ್ಲಿ ಅವತರಿಸಿದ ವೈಕುಂಠರೂಪ, ವೆಂಕಟಾದ್ರಿಸ್ಥಿತ ಶ್ರೀನಿವಾಸರೂಪ, ಕೃಷ್ಣದ್ವೈಪಾಯನ ನೆಂಬ ವ್ಯಾಸರೂಪ, ನಾಭಿರಾಜನ ಪುತ್ರ ಋಷಭರೂಪ, ಹಯವದನರೂಪ, ಅಮೃತವನ್ನು ದೇವತೆಗಳಿಗೆ ಹಂಚಿಕೊಟ್ಟ ನಾರಾಯಣೀರೂಪ, ಬ್ರಹ್ಮಾದಿ ಗಳಿಗೆ ಜ್ಞಾನೋಪದೇಶವನ್ನು ಮಾಡಿದ ಹಂಸರೂಪ, ಚತುರ್ವ್ಯೂಹ ವಿಶಿಷ್ಟ ಅನಿರುದ್ಧರೂಪ, ಲೋಕವನ್ನು ಅಳೆದ ತ್ರಿವಿಕ್ರಮರೂಪ, ಶ್ರೀಧರ ಹೃಷೀ ಕೇಶಾದಿ ಚತುರ್ವಿಂಶತಿರೂಪ. ॥1॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮೋಕ್ಷಪ್ರಾಪ್ತಿಗೆ ಶ್ರೀಹರಿಯ ಪರಮ ಪ್ರಸಾದವು ಅತ್ಯಗತ್ಯ. ಭಗವ ತ್ಪ್ರಸಾದ ಪ್ರಾಪ್ತಿಯು **ಪಂಚಬೇಧ ತಾರತಮ್ಯಜ್ಞಾನದಿಂದ ಮಾತ್ರ** ಸಾಧ್ಯ. ಈ ಕಾರಣದಿಂದ ಸಚ್ಛಾಸ್ತ್ರಕೋವಿದರಾದ ಶ್ರೀಮಜ್ಜಗನ್ನಾಥದಾಸವ ರ್ಯರು **ಬೃಹತ್ತಾರತಮ್ಯಸಂಧಿಯನ್ನು** ಉಪಕ್ರಮಿಸುತ್ತಾರೆ.

ಸರ್ವೋತ್ತಮನೂ, ಪರಾತ್ಪರನೂ, ರಮಾಬ್ರಹ್ಮಾದಿವಂದ್ಯನೂ, ಕ್ಷರಾಕ್ಷರ ಪುರುಷ ಪೂಜಿತಪಾದನೂ, ಸರ್ವಜೀವರ ಬಿಂಬರೂಪಿಯೂ ಆದ ಶ್ರೀಹರಿನಾಮಕ ಪರಮಾತ್ಮನನ್ನು ಪ್ರಪ್ರಥಮವಾಗಿ ಸ್ಮರಿಸುತ್ತಾರೆ. ನಂತರ, ಈಶಕೋಟಿಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿ. (ಸಿರಿ). ತದನಂತರ, ಜೀವ ಕೋಟಿಪ್ರವಿಷ್ಟರಾದ ಜೀವೋತ್ತಮರೂ, ಋಜುಗಣಾಧಿಪರೂ, ಶ್ರೀಹರಿಯ ವಾಸುದೇವರೂಪದಿಂದ ಮಾಯಾದೇವಿಯಲ್ಲಿ ಜನಿಸಿದ ಶ್ರೀಲಕ್ಷ್ಮೀನಾರಾ ಯಣರ ಜ್ಯೇಷ್ಠ ಪುತ್ರರಾದ ವಿರಿಂಚಿನಾಮಕ ಚತುರ್ಮುಖ ಬ್ರಹ್ಮದೇವರು, ಶ್ರೀಹರಿಯ ಪ್ರಥಮಾಂಗ ಭೂತರೂ, ಅತಿರೋಹಿತಮಲ ವಿಜ್ಞಾನಿಗಳೂ ಆದ ಈರನಾಮಕ ಶ್ರೀಮುಖ್ಯಪ್ರಾಣದೇವರು. ಇವರೇ ಆದಿಯಾಗಿ ಸಮಸ್ತ ದೇವತಾವರ್ಗ–ಇವರಲ್ಲಿರುವ ಪರಸ್ಪರ ತಾರತಮ್ಯಭಾವದ (ನೀಚೋಚ್ಚ ಭಾವ) ಜ್ಞಾನ ಜಿಜ್ಞಾಸುಗಳಿಗೆ ಅತ್ಯಗತ್ಯ. ಅವರರಾದ ಜೀವರು ಸ್ವೋತ್ತಮ

ರಾದ ಜೀವರಿಗೆ ಪ್ರತಿಬಿಂಬರು. ಪ್ರತಿಬಿಂಬಭೂತರಾದ ಅಪರರಲ್ಲಿ ಸ್ತೋತ್ತಮರಾದವರ **ಆವೇಶ.** ಮತ್ತು ಶ್ರೀಹರಿವಾಯುಗಳಿಂದ ಪ್ರಾರಂಭಿಸಿ, ದೇವತಾವರ್ಗದವರ ವಿವಿಧ **ಅವತಾರವಿಶೇಷಗಳು.** ಈ ತತ್ತ್ವ ವಿಷಯಗಳನ್ನು ಗುರೂಪದೇಶ ದ್ವಾರಾ ಅರಿತು, ಶಾಸ್ತ್ರಾಧ್ಯಯನದಿಂದ ಮನನ ಮಾಡಿಕೊಂಡು, ಸರ್ವಕಾಲಗಳಲ್ಲಿ ಧ್ಯಾನಕ್ಕೆ ವಿಷಯೀಕರಿಸಿ, ಸ್ಮರಿಸಬೇಕೆಂದು ದಾಸರಾಯರು **ಸಂಧಿಸೂಚನಾ ಪದ್ಯ**ದಲ್ಲಿ ತಿಳಿಸುತ್ತಾರೆ.

ಕೃತಯುಗದಲ್ಲಿ ಶ್ರೀಹರಿಯು ಮತ್ಸ್ಯಾವತಾರಮಾಡಿ, **(ಮೀನ)** ವೇದಗಳನ್ನು ಶಿಶುರೂಪದಲ್ಲಿ ಬ್ರಹ್ಮದೇವರಿಂದ ಅಪಹರಿಸಿದ ದುರುಳನಾದ ತಮ **(ಸೋಮಕ)**ನೆಂಬ ದೈತ್ಯನನ್ನು ಸಂಹರಿಸಿ, ವೇದೋದ್ಧಾರ ಮಾಡಿದನು.

ಸಮುದ್ರಮಥನಸಮಯದಲ್ಲಿ ಮಂದರಗಿರಿಯು ಸಮುದ್ರದಲ್ಲಿ ಕುಸಿಯಲು, ದೇವದಾನವರಿಂದ ಪ್ರಾರ್ಥ್ಯಮಾನನಾಗಿ, ಶ್ರೀಹರಿಯು ಕೂರ್ಮಾವತಾರ ತಾಳಿ **(ಕೂರ್ಮ)** ತನ್ನ ಬೆನ್ನಿನಮೇಲೆ ಗಿರಿಯನ್ನು ಧಾರಣ ಮಾಡಿದ ಕಾರುಣ್ಯವಿಶೇಷ.

ವರಹಾರೂಪದಿಂದ **(ಕ್ರೋಡ)** ಸಮುದ್ರಗರ್ಭವನ್ನು ಹೊಕ್ಕು, ರಸಾತಲವನ್ನು ಪ್ರವೇಶಿಸಿ, ಹಿರಣ್ಯಾಕ್ಷನನ್ನು ತನ್ನ ಕೋರೆದಾಡೆಗಳಿಂದ ಸಿಗಿದು, ಭೂದೇವಿಯನ್ನು ಉದ್ಧರಿಸಿದ ಪ್ರಸಂಗವಿಶೇಷ.

ಭಾಗವತೋತ್ತಮನಾದ ಬಾಲ ಪ್ರಹ್ಲಾದನ ಮಾತನ್ನು ಸತ್ಯವನ್ನಾಗಿಸಲು, ಸಭಾಸ್ತಂಭದನ್ನು ಸೀಳಿಕೊಂಡು, ಅವತರಿಸಿದ ನಾರಸಿಂಹರೂಪವು **(ನರಹರಿ).**

ಬಾಲವಟುವಾಗಿ **(ಮಾಣವಕ)** ವಾಮನರೂಪದಿಂದ ಬಂದು, ಬಲಿಯನ್ನು ಬೇಡಿ, ಬ್ರಹ್ಮಾಂಡವನ್ನೇ ಅಳೆದ ವಾಮನಾವತಾರಿ **ಶ್ರೀಹರಿ.**

ಭೃಗುಶ ಸಂಜಾತನಾಗಿ, ಜಮದಗ್ನಿ, ರೇಣುಕಾಪುತ್ರನಾಗಿ ಅವತರಿಸಿ, ದುಷ್ಟಕ್ಷತ್ರಿಯರನ್ನು ಸಂಹರಿಸಿದ ಪರಶುರಾಮಾವತಾರ **(ಭೃಗುರಾಮ).**

ದಶರಥ-ಕೌಸಲ್ಯಾ ಪುತ್ರನಾಗಿ ಅವತರಿಸಿ. ದುರುಳ ಕುಂಭಕರ್ಣಾದಿಗಳನ್ನು ಹನನಗೈದು, ಧರ್ಮಸಂಸ್ಥಾಪಕನಾದ ದಶರಥರಾಮನು. (**ದಶರಥ ಸೂನು**).

ಯದುಕುಲಲಲಾಮನಾಗಿ ಅವತರಿಸಿ, ದುಷ್ಟಕಂಸನ ವಧಾ ದ್ವಾರಾ, ಭೂಭಾರಹರಣ ಮಾಡಿದ ಪರಮಮಂಗಳಮೂರ್ತಿ ಗೀತಾಚಾರ್ಯನಾದ ಯಾದವಕೃಷ್ಣ (**ಯಾದವ**).

**ತ್ರಿಪುರರ ಸಂಹಾರಕನಾದ, ತ್ರಿಪುರದ ಪತ್ನಿಯರನ್ನು ಮೋಹಗೊಳಿದ ಬೌದ್ಧಾವತಾರ (ಬುದ್ಧ).**

ಯವನರ ಹಾವಳಿಯನ್ನು ಎದುರಿಸಿ, ದುಷ್ಟದಾನವರನ್ನು ದಮನ ಮಾಡಿದ ಕಲ್ಕ್ಯಾವತಾರ (**ಕಲಕೀ**).

ಕರ್ದಮಋಷಿಗಳಿಂದ ದೇವಹೂತಿಯಲ್ಲಿ ಅವತಾರತ್ವೇನ ಪ್ರಕಟನಾಗಿ, ತಾಯಿಗೆ ಸಾಂಖ್ಯಶಾಸ್ತ್ರವನ್ನು ಬೋಧಿಸಿದ **ಕಪಿಲಾವತಾರಿ ಶ್ರೀಹರಿ**..

ಶುಭ್ರನೆಂಬುವ ಪತ್ನಿ ವಿಕುಂಠಾ ಎಂಬುವಳಲ್ಲಿ ಅವತರಿಸಿದ **ವೈಕುಂಠ ನಾಮಕ** ಶ್ರೀಪರಮಾತ್ಮನು. ವೈಕುಂಠವೆಂಬ ಮುಕ್ತಧಾಮ ಅವನ ಅರಮನೆ.

ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸಿದ ಶ್ರೀಭೃಗುಋಷಿಯು ತನಗೆ ಮಾಡಿದ ವಕ್ಷತಾಡನೆಯ ನೆಪದಿಂದ,ತಿರುಪತೀ ಕ್ಷೇತ್ರಕ್ಕೆ ಬಂದು ನೆಲೆಸಿದ ಸಪ್ತಗಿರಿವಾಸನಾದ **ಶ್ರೀನಿವಾಸ**.

ಸತ್ಯವತೀ ಪರಾಶರರ ಪುತ್ರನಾಗಿ ಅವತರಿಸಿ, ವೇದಗಳನ್ನು ವಿಭಾಗಿಸಿ, ಬ್ರಹ್ಮಸೂತ್ರ ನಿರ್ಮಾತೃವೆಂದೆನಿಸಿದ, ಜ್ಞಾನಬೋಧಕರೂಪ **ಶ್ರೀವೇದ ವ್ಯಾಸರು**. (ವಾಸಿಷ್ಠಕೃಷ್ಣರೂಪ). ನಾಭೀರಾಜನ ಪುತ್ರನಾಗಿ ಅವತರಿಸಿದ **ಋಷಭನಾಮಕ** ಶ್ರೀಹರಿ.

ಚತುರ್ಮುಖಬ್ರಹ್ಮದೇವರಿಗೆ ಪ್ರಪ್ರಥಮವಾಗಿ ಜ್ಞಾನೋಪದೇಶ ಮಾಡಿದ **ಹಯಗ್ರೀವರೂಪ (ಹಯಾನನೆ).**

ಅಮೃತವನ್ನು ದೇವತೆಗಳಿಗೆ ಹಂಚಿದ ಜಗನ್ಮೋಹಕರೂಪಧಾರಿಯಾದ **ಮೋಹಿನೀರೂಪ.** ಇದೇ **ನಾರಾಯಣೀರೂಪವು.** ಧನ್ವಂತ್ರೀರೂಪಿ ಶ್ರೀಹರಿಯೇ ಮೋಹಿನೀರೂಪ ತಾಳಿದನು.

ಇದು ಲಕ್ಷ್ಮ್ಯಂತರ್ಗತ ಭಗವದ್ರೂಪವು. ಇದಕ್ಕೆ ನಾರಾಯಣೀ (ನಾರಾಯಣನ ಪತ್ನಿಯ ಬಿಂಬ), ಎನ್ನುವರು. ತಾಪಸನಾಮಕ ಮನುವೇ **ಈ** ರೂಪವಿಶಿಷ್ಟವು.

ನಿರ್ದೋಷನೂ, ಅನಂತಕಲ್ಯಾಣಗುಣಗಣಪೂರ್ಣನೂ ಆದ **ಹಂಸ ನಾಮಕ**ರೂಪವು.

ಸಂಸಾರವನ್ನು ಹನನಮಾಡುವುದರಿಂದ ಶ್ರೀಹರಿಗೆ–**ಹಂಸ**– ನೆಂದು ಹೆಸರು.

ಸೂಕ್ಷ್ಮ ಸೃಷ್ಟಿಕರ್ತನಾದ ಶಾಂತೀಪತಿ **ಅನಿರುದ್ಧ.** ಇದರಿಂದ ಪ್ರದ್ಯುಮ್ನ–ಸಂಕರ್ಷಣ–ವಾಸುದೇವ–ನಾರಾಯಣ, ಎಂಬ ರೂಪಚತುಷ್ಟಯ ಗಳೂ ಗ್ರಾಹ್ಯ.

ವಾಮನರೂಪದಿಂದ ಬಂದು, **ತ್ರಿವಿಕ್ರಮನಾಗಿ ಬೆಳೆದು,** ಸಮಗ್ರ ಬ್ರಹ್ಮಾಂಡವನ್ನೇ ಆಳೆದ ಬೃಹದ್ರೂಪ.

ಸಿರಿದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವ **ಶ್ರೀಧರ.**

ಇಂದ್ರಿಯ ನಿಯಾಮಕನಾದ **ಹೃಷೀಕೇಶರೂಪ.** ಹೃಷೀಕ–ಎಂದರೆ, ದೇಹಗತಇಂದ್ರಿಯಗಳು. ಈಶ–ಎಂದರೆ, ನಿಯಾಮಕ.

ತ್ರಿವಿಕ್ರಮ–ಶ್ರೀಧರ–ಹೃಷಿಕೇಶ ಎಂಬ ನಾಮಸಂಕೇತಗಳಿಂದ ಕೇಶವಾದಿ ಕೃಷ್ಣಾಂತ ಚತುರ್ವಿಂಶತಿ ರೂಪಗಳು ಗ್ರಾಹ್ಯ.

ಇದರಂತೆ, ಯಜ್ಞ–ಶಿಂಶುಮಾರ-ಇತ್ಯಾದಿ ಅನಂತಾನಂತರೂಪಗಳನ್ನು ಗ್ರಹಿಸಬೇಕು. ಅಜಾದಿ ಲಕ್ಷ್ಮೀನರಸಿಂಹ ಪರ್ಯಂತ 51 ವರ್ಣವಾಚ್ಯ ಭಗವದ್ರೂಪಗಳು.

ನಾರಾಯಣಾದಿ ಶತರೂಪಗಳು–ವಿಷ್ಣು ವಷಟ್ಕಾರಾದಿ ಸಹಸ್ರರೂಪಗಳು- ಅಚಿತ್ಯಾದ್ಯಂತರೂಪಗಳೂ ಪ್ರಸಕ್ತ ಪದ್ಯದಿಂದ ಗ್ರಾಹ್ಯ. ॥1॥

★★

## ಪದ್ಯ-೨

**ಮೂಲ :–**

**ಹರಿಯು ನಾರಾಯಣನು ಕೃಷ್ಣಾ ।**
**ಸುರಕುಲಾಂತಕ ಸೂರ್ಯಸಮಪ್ರಭ ।**
**ಕರೆಸುವನು ನಿರ್ದುಷ್ಟ ಸುಖ ಪರಿಪೂರ್ಣ ತಾನೆಂದು ॥**
**ಸರ್ವದೇವೋತ್ತಮನು ಸರ್ವಗ ।**
**ಪರಮಪುರುಷ ಪುರಾತನ ಜರಾ ।**
**ಮರಣವರ್ಜಿತ ವಾಸುದೇವಾದ್ಯಮಿತ ರೂಪಾತ್ಮ ॥೨॥**

**ಅವತರಣಿಕೆ :–**

ಸರ್ವೋತ್ತಮನಾದ ಶ್ರೀಪರಮಾತ್ಮನ ಗುಣವರ್ಣನ ಮಾಡುತ್ತಾರೆ.
॥2॥

**ಪ್ರತಿಪದಾರ್ಥ :-**

**ಹರಿಯು** = ಸರ್ವಪ್ರಾಣಿಗಳಿಗೆ ಬಿಂಬರೂಪಿಯೂ, ಸಜ್ಜನರ ಪಾಪ ಪರಿಹಾರಕನೂ ಆದ, **ನಾರಾಯಣನು** = ಮೂಲರೂಪಿಯಾದ ಶ್ರೀ ಮನ್ನಾರಾಯಣದೇವರು, **ಕೃಷ್ಣ** = ಕೃಷ್ಣರೂಪದಿಂದ ವರ್ತಮಾನ ಕಲಿ ಯುಗಕ್ಕೆ ಅಭಿಮಾನಿಯು. **ಅಸುರಕುಲಾಂತಕ** = ಅನೇಕ ಅವತಾರಗಳ ದ್ವಾರಾ, ಭಗವದ್ದ್ವೇಷಿಗಳಾದ ದೈತ್ಯರ ಕುಲವನ್ನು ಸಂಹಾರಮಾಡಿದವನು. **ಸೂರ್ಯಸಮಪ್ರಭ** = ಕೋಟಿಸೂರ್ಯಕಾಂತಿಗಿಂತ ಮಿಗಿಲಾದ ಪ್ರಕಾಶ ವುಳ್ಳವನು. **ನಿರ್ದುಷ್ಟ** = ಅನ್ಯಕಾಲದಲ್ಲಿಯೂ ಇಲ್ಲದ, ಅದ್ವಿತೀಯ ನಾದ, ಅಂದರೆ,ಸಮಾಭ್ಯಧಿಕಶೂನ್ಯನಾದ, **ಸುಖಪರಿಪೂರ್ಣಕಾನೆಂದು** = ಆನಂದದಿಂದ ಪರಿಪೂರ್ಣನಾದನೆಂತೆಂಬುದಾಗಿ, **ಕರೆಸುವನು** = ಖ್ಯಾತ ನಾಗಿದ್ದಾನೆ. **ಸರ್ವದೇವೋತ್ತಮನು** = ಸಕಲದೇವತೆಗಳಿಗಿಂತಲೂ ಅತ್ಯಂತ ಶ್ರೀಕೃಷ್ಣನು. (ಕ್ಷರಾಕ್ಷರಪುರುಷಪೂಜಿತ ಪಾದನು), **ಸರ್ವಗ** = ಸಕಲಚರಾಚರಾತ್ಮಕವಾದ ಜಗತ್ತಿನಲ್ಲಿ ಎಲ್ಲೆಲ್ಲೂ ಪರಿಪೂರ್ಣನಾಗಿ ವ್ಯಾಪ್ತ ನಾಗಿರುವನು. **ಪರಮಪುರುಷ** = ಉತ್ಕೃಷ್ಟದೇವತಾ. **ಪುರಾತನ** = ಅನಾದಿಯಾದವನು. **ಜರಾಮರಣವರ್ಜಿತ** = ಉತ್ಪತ್ತಿ ಮರಣಗಳಿಂದ ರಹಿತನು (ಜನನ ನಾಶ ವಿದೂರನು). **ವಾಸುದೇವಾದಿ ಅಮಿತ ರೂಪಾತ್ಮ** = ವಾಸುದೇವಾದಿ ಅನಂತಾನಂತರೂಪಗಳಿಂದ ಅಭಿವ್ಯಕ್ತನಾಗಿರುವವನು— ಹೀಗೆಂದು ಕರೆಯಿಸುತ್ತಾನೆ. ॥2॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನ ಗುಣವರ್ಣನ ಮಾಡುತಾರೆ.

ಸರ್ವಪ್ರಾಣಿಗಳಿಗೆ ಬಿಂಬರೂಪಿಯಾದವ, ಪಾಪಪರಿಹಾರ ಮಾಡತಕ್ಕವ, ಮೂಲರೂಪಿಯಾದ ಶ್ರೀನಾರಾಯಣದೇವರು, ಕೃಷ್ಣರೂಪದಿಂದ ವರ್ತ

ಮಾನ ಕಲಿಯುಗಕ್ಕೆ ಅಭಿಮಾನಿಯಾದವ. ಈ ಪೂರ್ವೋಕ್ತ ದಶಾವತಾರಗಳು ಭಗವದ್ದ್ವೇಷಿಗಳಾದ ದೈತ್ಯರ ಕುಲವನ್ನು ನಾಶಮಾಡಿ, ಭಕ್ತರಿಗೆ ಸುಖ ಕೊಟ್ಟ ರೂಪಗಳು. ಸೂರ್ಯನಕಾಂತಿಗೆ ಸಮಾನವಾದ ಕಾಂತಿಯುಳ್ಳವ. ತನಗೆ ಸಮಾನರೇನು, ಅಧಿಕರೇನು ಇಲ್ಲದವ. ಅನಂದದಿಂದ ಪೂರ್ಣನಾದವ. ಸರ್ವದೇವತೆಗಳಿಗಿಂತಲೂ ಶ್ರೇಷ್ಠನಾದವ. ಚರಾಚರ ಸರ್ವತ್ರವ್ಯಾಪ್ತನಾದ ವನು. ಕ್ಷರಾಕ್ಷರಪುರುಷರಿಂದ ಉತ್ತಮನಾದವನು. ಅನಾದಿಯಾದವನು. ಉತ್ಪತ್ತಿ ಮರಣದಿಂದ ರಹಿತನಾದವನು. ವಾಸುದೇವರೂಪದಿಂದ ಅನೇಕ ರೂಪಗಳು ಉತ್ಪತ್ತಿ ಆಗಿರುವದ್ದರಿಂದ, ಅನಂತರೂಪವುಳ್ಳ ಶ್ರೀಪರಮಾತ್ಮ ಇಂಥಾವನು-ಎಂತ ಹೇಳಿಸಿಕೊಳ್ಳಲ್ಪಟ್ಟವನಾಗಿದ್ದಾನೆ. ॥2॥

## ೨. ಭಾವಪ್ರಕಾಶಿಕೆ :-

ವ್ಯಾಖ್ಯಾನ ಇಲ್ಲ.

## ೩. ಭಾವದರ್ಪಣ :-

ಹರೀತಿ. ॥2॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಹರಿಃ ಇತಿ 'ಸಪ್ರಭಃ' ಸಮಾನಕಾಂತಿಃ ॥ 'ವಾಸುದೇವಾದಿ' ಇತ್ಯನೇನ ಇದಮತ್ರ ಅಭಿಪ್ರೇತಿ ॥ ಮೂಲ ನಾರಾಯಣಾಯೇತಿ ಪೂರ್ವಂ ಗ್ರಹಣೇನ 'ಶೂನ್ಯನಾವಕಾ ಸಃ ॥ ತಸ್ಮಾತ್ ಪುರುಷಃ ॥ ತಸ್ಮಾತ್ ವಾಸುದೇವಾದೇವಃ ಆವಿರ್ಭಾವಃ' ಇತಿ ॥ ಸ್ತ್ರೀ ಶೂದ್ರಾದೀನಾಂ ಪಾಠಯೋಗ್ಯತಾರ್ಥಂ ಇತಿ ತದ್ದೀಪಿಕೋಕ್ತಿಃ ಕೇವಲಿಮರ್ಥ ಗ್ರಹಣಮಕಾರಿ ॥ 'ನತ್ವಾ ನಾರಾಯಣಂ ವಿಷ್ಣೋರಾವೇಶಂ ಚ ದಿವೌಕಸಾಂ'- ಇತ್ಯಾದಿನಾ ತಾರತಮ್ಯಸದ್ರತ್ನಮಾಲಾ

ಋಷೀನ್ ವಿಕಲಾರ್ಯೈಃ ॥ ವ್ಯಾಖ್ಯಾಯಾಂ ಚ ಮೂಲಾನಿ ಉದಾಹರೀಚಕಾರ ಸಂವಾದಕತಯಾ ॥ ದಿವಾಕಃ ಸ ಶಬ್ದವೃತ್ತಿಃ ಗಾರುಡಾತ್ ಅವಸಿತಃ।ಅತಃ ಏತತ್ ಸರ್ವಮೂಲಕತ್ವಾತ್ ಭಾಗವತವತ್ ಸರ್ವಾಸೂಯಾದಿ ತ್ರಿಂಶತ್‌ದೋಷಾತಿ ದೂರ ಭಕ್ತಿರಸ ಪ್ರಸರ ಯುಕ್ತಾನಾಂ ವಿದುಷಾಂ ಕಂಠಭೂಷಾ ಇಯಂ ಏತ ತ್ಸಂಧ್ಯುಕ್ತಾವೇಶಾದಿ ಮಾಣಿಕ್ಯಮಾಲಾ ಇತಿ ಸ್ಥಿತೇಽಪಿ ಲಘೀಯಸ್ಯುಪಾಯೇ ಹಂತ ಆಗ್ರಹ ಗೃಹೀತಾತ್ಮಾನಃ ಶಂಕಾಪಂಕ ಸಂಪಾಲನಾಪಮಾಃ ಸಕದಾಪಿ ಸ್ವಾತ್ಮಾನಂ ಉದ್ಧರ್ತುಮಿಚ್ಛಂತಿ ಭಗವನ್ಮಾಯಾಮೋಹಿತಾಃ ಕಿಮನ್ಯೈಃ ಪರು ಸನ್ನಿಧೈಃ ॥ ಇತಿ ಟೀಕಾಚಾರ್ಯೈಃ ಉಪೇಕ್ಷಿತಾಃ "- ಇತಿ ಅಲಮನಪಹನೀಯ ಪ್ರಕ್ರಿಯಾ ನಿರಾಕ್ರಿಯಾ ವಿಸ್ತರೇಣ ॥

"ಮತ್ಸ್ಯ ಕೂರ್ಮ ಕ್ರೋಡ ಸಿಂಹ ವಟು ರಾಘವ ಭಾರ್ಗವಾಃ ॥ಕೃಷ್ಣ ಬುದ್ಧೌ ಕಲ್ಕಿ ದತ್ತ ಹಯಶೀರ್ಷೈತರೇಯಕಾಃ ॥ ಪಾರಾಶರ್ಯರ್ಷ ಕಪಿಲಃ ವೈಕುಂಠಃ ಋಷಭಃ ತಥಾ॥ ಯಜ್ಞಃ ಧನ್ವಂತರಿಶ್ಚೈನ ಸ್ತ್ರೀರೂಪಃ ತಾಪಸೋ ಮನುಃ ॥ ನಾರಾಯಣಃ ಹರಿಃ ಕೃಷ್ಣಃ ಉಪೇಂದ್ರಃ ಸರ್ವಏವ ಚ ॥ ಏವ ಮಾದ್ಯಾಃ ಹರೇಃ " ಸಾಕ್ಷಾತ್ ಪ್ರಾದುರ್ಭಾವಾಃ ಪ್ರಕೀರ್ತಿತಾಃ ॥ ಪೃಥ್ವಾ ದಿವದಾವೇಶಾವತಾರತ್ವಂ ನಿವಾರಯತಿ ॥ (ದೀಂ) ॥2॥

## ಕನ್ನಡಾರ್ಥ

'ಸೂರ್ಯಸನ್ನಿಭ' = ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯುಳ್ಳ ವನು. 'ವಾಸುದೇವಾದ್ಯವೀತ'-ಎಂದು ಹೇಳುವುದರಲ್ಲಿ ಇರುವ ರಹಸ್ಯವಿದು. 'ನಾರಾಯಣ'- ಎಂದು ಪದವನ್ನು ಮೊದಲು ಪ್ರರಿಗ್ರಹಿಸಿರುತ್ತಾರೆ. ಇದ ರಿಂದ 'ಶೂನ್ಯನಾಮಕನು ನಾರಾಯಣನು.' ಅವನೀವ ಪುರುಷರೂಪವು ಉದಯಿಸಿತು. ಆದರಿಂದ, ವಾಸುದೇವ ಮುಂತಾದ ರೂಪಗಳು ಆವಿರ್ಭವಿಸಿ ದುವು.

ಸ್ತ್ರೀ ಶೂದ್ರರಿಗೆ ಪಾಠಯೋಗ್ಯವಾಗಲು,ವೇದಪ್ರತೀಕಗಳನ್ನು ಉಲ್ಲೇಖಿ ಸದೆ,ಅವುಗಳ ಅರ್ಥಗಳನ್ನಷ್ಟೇ ಉಲ್ಲೇಖಿಸಲಾಗಿರುತ್ತದೆ.

"ನತ್ವಾ ನಾರಾಯಣಂ ವಿಷ್ಣೋರಾವೇಶಂ ಚ ದಿವೌಕಸಾಂ"-ಎಂಬುದಾಗಿ ತಾರತಮ್ಯ ರತ್ನಮಾಲೆಯ ವ್ಯಾಖ್ಯಾನದಲ್ಲಿ ಶ್ರೀವಿಠ್ಠಲಾಚಾರ್ಯರು 'ದಿವೌಕಸ'-ಶಬ್ದವನ್ನು ವಿವರಿಸಿರುತ್ತಾರೆ. ಅದನ್ನು ಅನುಸರಿಸಿಯೇ 'ನಿರ್ಜರರ ಆವೇಶ'-ಎಂಬಲ್ಲಿ, ನಿರ್ಜರ ಶಬ್ದವನ್ನು ಉಪಯೋಗಿಸಿರುತ್ತಾರೆ. ಅಲ್ಲಿ ದಿವೌಕಸ ಶಬ್ದದ ಉತ್ಪತ್ತಿಯನ್ನು ಗರುಡಪುರಾಣದಲ್ಲಿ ಹೇಳಿರುತ್ತಾರೆ.

ಆದುದರಿಂದ,ಈ ಸಂಧಿಯಲ್ಲಿ ಹೇಳಲಾಗಿರುವ ಆವೇಶ ಮುಂತಾದವುಗಳ ಬೃಹತ್ತಾರತಮ್ಯ ಮುಕ್ತಾಮಾಲೆಯು ನಿರ್ಮತ್ಸರ ವಿದ್ವಜ್ಜನರ ಕೊರಳಿಗೆ ಒಪ್ಪುವ ಭೂಷಣವಾಗಿರುತ್ತದೆ. ಹೀಗೆ ಈ ಲಘು ಉಪಾಯವಿದ್ದರೂ, ಕೆಲವರು ಆಗ್ರಹದ ಮನಸ್ಸಿನಿಂದ ಇದನ್ನು ಪರಿಗ್ರಹಿಸುವುದಿಲ್ಲ. ಸಂಶಯಗ್ರಸ್ತರಾಗಿ ಉದ್ಧಾರವನ್ನು ಹೊಂದುವುದಿಲ್ಲ. ಇದಕ್ಕೆ ಭಗವಂತನ ಮೋಹಕವಾದ ಇಚ್ಛಾಶಕ್ತಿಯೇ ಮೂಲ-ಇಂಥ ಪಶುಸಮಾನರಿಂದೇನು ?-ಎಂಬುದಾಗಿ ಟೀಕಾಕಾರರು ಹೇಳಿದಂತೆ, ಅವರನ್ನು ಉದಾಸೀನತೆಯಿಂದ ನೋಡುವುದೇ ಉಚಿತ. ಆದುದರಿಂದ,ಅಪಹಾಸ್ಯವಾದ ಅವರ ಪ್ರಕ್ರಿಯೆಯನ್ನು ನಿರಾಕರಿಸಿ,ಪ್ರಬಂಧದ ವಿಸ್ತಾರಮಾಡುವ ಕಾರಣವಿಲ್ಲ.

ಮತ್ಸ್ಯ (ಮೀನ), ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ದಶರಥರಾಮ, ಕೃಷ್ಣ, ಬುದ್ಧ, ಕಲ್ಕಿ, ದತ್ತ, ಹಯಗ್ರೀವ, ಮಹಿದಾಸ, ಬಾದರಾಯಣ, ಕಪಿಲ, ವೈಕುಂಠ, ಋಷಭ, ಯಜ್ಞ, ಧನ್ವಂತರಿ, ಮೋಹಿನೀ, ತಾಪಸಮನು, ನಾರಾಯಿಣೀ, (ಋಷಿರೂಪ), ಹರಿ, ಕೃಷ್ಣ, ಉಪೇಂದ್ರ- ಈ ಮುಂತಾದ ರೂಪಗಳು ಸಾಕ್ಷಾದವತಾರರೂಪಗಳು. ಪೃಥು ಮುಂತಾದವುಗಳಂತೆ ಆವಿಷ್ಟ ರೂಪಗಳಲ್ಲ. ॥2॥

## ೪. ಶ್ರೀಗುರುಹೃದಯ ಪ್ರಕಾಶಿಕೆ :-

ಹರಿ-ಎಂದು ಕರೆಸಿಕೊಂಡು,ಗಜೇಂದ್ರನನ್ನು ಉದ್ಧರಿಸಿದ ತಾಪಸಮನು ಅವತಾರ, ಅಥವಾ ಹರಿ ಕೃಷ್ಣ ನಾರಾಯಣ ಎಂದು ಧರ್ಮಪತ್ನಿ ಮೂರ್ತಿ

ದೇವಿಯಲ್ಲಿ ಅವತರಿಸಿದ ಮೂರು ರೂಪಗಳೇ ಮೊದಲಾದ ಅನೇಕಾವತಾರ ಉಳ್ಳ, ಅಸುರಕುಲಾಂತಕ, ಸೂರ್ಯಸದೃಶ ಸ್ವಪ್ರಕಾಶನಾದ ಶ್ರೀವಿಷ್ಣುವು, ವಾಸುದೇವಾದ್ಯನಂತತಾವತಾರನೆಂತಲೂ, ನಿರ್ದುಷ್ಟ ಸ್ವಾನಂದಪೂರ್ಣ ನೆಂತಲೂ (ಸರ್ವಾಂತರ್ಗತನೆಂತಲೂ), ಜರಾ ಮರಣಾದಿ ಸರ್ವದೋಷ ದೂರನೆಂತಲೂ, ಪರಮಪುರುಷನೆಂತಲೂ, ಅನಾದಿಸಿದ್ಧನೆಂತಲೂ, ಸರ್ವ ದೇವೋತ್ತಮನೆಂತಲೂ-ಸಹ ವೇದಾದಿಗಳಲ್ಲಿ ಹೇಳಿಸಿಕೊಳ್ಳುವನು. ॥2॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ಮೂಲರೂಪವೇ **ಶ್ರೀಮನ್ನಾರಾಯಣ**

ಅರಾ:- ದೋಷಗಳು ನ-ನಿಷೇಧಾರ್ಥದಲ್ಲಿ. ಅಯಣ--ಆಗರ (ನೆಲೆ) ಯಾವನಲ್ಲಿ ದೋಷಗಳೇ ಇಲ್ಲವೋ, ಯಾವನು ಅನಂತಕಲ್ಯಾಣಗುಣಗಣ ಗಳಿಗೆ ಆಶ್ರಯನೋ, ಅವನೇ **ಶ್ರೀಮನ್ನಾರಾಯಣನು.**

ಆ ನಾರಾಯಣನೇ **ಹರಿನಾಮಕನು.** ಸರ್ವಚೇತನರ ಬಿಂಬರೂಪಿ ಯಾಗಿರುವುದರಿಂದ "ಹರಿ"-ಎಂತ ನಾಮ. ಸಜ್ಜನರ ಸರ್ವಪಾಪಪ್ರಕ್ಷಾಳಕ ನಾದ್ದರಿಂದ ಹರಿನಾಮಕನು.

ಅಂತಹ ಹರಿನಾಮಕ ಶ್ರೀಮನ್ನಾರಾಯಣನೇ **ಕೃಷ್ಣರೂಪಿಯು.** ಕಲಿಯುಗಕ್ಕೆ ಮುಖ್ಯಾಭಿಮಾನಿ ರೂಪವು ಶ್ರೀಕೃಷ್ಣನಾಗಿರುವುದರಿಂದ, ಈ ಶಬ್ದ ಪ್ರಯೋಗ.

ಯುಗಪ್ರವರ್ತಕಸ್ವರೂಪಿಯಾದ ಶ್ರೀಕೃಷ್ಣನು **ಅಸುರಕುಲಾಂತಕನು.** ಅಂತರಂಗದಲ್ಲಿ ಭಗವದ್ದ್ವೇಷಿಗಳಾದ ತಮೋಯೋಗ್ಯಜೀವರು ದೈತ್ಯರು. ಧರ್ಮಕಂಟಕರಾದ ಅಂತಹ ದುರುಳ ದೈತ್ಯ ಸಂಹಾರಕನಾಗಿ, ಸಜ್ಜನರನ್ನು ರಕ್ಷಿಸುವುದರಿಂದ ಅಸುರಕುಲಾಂತಕನು.

**ಕೋಟಿಸೂರ್ಯಪ್ರಭಾನ್ವಿತನು.** ಒಂದು ಕೋಟಿ ಸೂರ್ಯರು ಏಕ ಕಾಲದಲ್ಲಿ ಉದಯಿಸಿದರೆ, ಎಷ್ಟು ಕಾಂತಿ ಉಂಟಾಗುವುದೋ ಅದಕ್ಕಿಂತ ಅನಂತ ಪಟ್ಟು ಪ್ರಕಾಶಮಾನವಾದ ದೇಹವುಳ್ಳವನೆಂದರ್ಥ "ಸೂರ್ಯ ಸಮ ಪ್ರಭ"–ಔಪಚಾರಿಕವಾದ ದೃಷ್ಟಾಂತವಿದು.

ಶ್ರೀಹರಿಯು ಆನಂದಪರಿಪೂರ್ಣನು. ಅವನ ಆನಂದಾದಿ ಗುಣ ಸಮೂಹಗಳು ಅಪರಿಚ್ಛಿನ್ನ ಹಾಗೂ ಅಪರಿಮಿತ. ಅವನಿಗೆ ಸಮರಾಗಲೀ, ಅಧಿಕರಾಗಲೀ ಯಾರೂ ಇಲ್ಲ. ಅಂದರೆ,ಸಮಾಭ್ಯಧಿಕಶೂನ್ಯನು. ಇದರಿಂದ **ನಿರ್ದುಷ್ಟ**–ನೆಂದಿದ್ದಾರೆ. ಅವನ ಗುಣರಾಶಿಗಳನ್ನು ಯಾರು ಸಾಕಲ್ಯೇನ ತಿಳಿ ಯಲಾರರು. ಏಕಾಮೇವಾದ್ವಿತೀಯನು.

ಸರ್ವದೇವತಾಗಣದಲ್ಲಿ ಅತ್ಯಂತ ಶ್ರೇಷ್ಠನು. ಅಂದರೆ, ದೇವ ದೇವೋತ್ತಮನು.ಚರಾಚರಾತ್ಮಕವಾದ ಬ್ರಹ್ಮಾಂಡದ ಒಳಗೂ ಮತ್ತು ಹೊರಗೂ ಸರ್ವತ್ರವ್ಯಾಪ್ತನು. ಇದರಿಂದ **ಸರ್ವಗನು** (ಸರ್ವ–ಸಕಲ ಸ್ಥಳಗಳಲ್ಲಿ, ಗ– ಅಂತಸ್ಥಿತನು).

ಅಕ್ಷರನಾಮಕಳಾದ ಶ್ರೀಲಕ್ಷ್ಮಿಗಿಂತ ಅನಂತಕೋಟಿಗುಣೋತ್ತಮನು. ಇನ್ನು ಕ್ಷರಜೀವರಿಗಿಂತ ಉತ್ತಮೋತ್ತಮನೆಂದು ಪ್ರತ್ಯೇಕ ಹೇಳಬೇಕಿಲ್ಲ. ಕ್ಷರಾಕ್ಷರಪುರುಷ ಪೂಜಿತಪಾದನಾದ್ದರಿಂದ, **ಪರಮಪುರುಷನು.** ಅಂದರೆ, ಅನಾದಿಪುರುಷನು.

ಜರಾ–ಎಂದರೆ ಮುಪ್ಪು. ಮರಣ-ಎಂದರೆ ದೇಹನಾಶ. ಚತುರ್ವಿಧ ನಾಶರಹಿತನು. ಜನನ ಮರಣ ವಿದೂರನು. ಉತ್ಪತ್ತಿನಾಶಶೂನ್ಯನು.

ಶ್ರೀಮನ್ನಾರಾಯಣನ ಮೂಲರೂಪದಿಂದ ಅಭಿವ್ಯಕ್ತಗಳಾದ, **ವಾಸು ದೇವಾದಿ** ಅನಂತಾನಂತರೂಪಯುಕ್ತನು. ಈ ಸಕಲರೂಪಗಳೂ ಸ್ವಾಭಿ ನ್ನವೇ. ॥2॥

★★

## ಪದ್ಯ-೩

**ಮೂಲ :-**

**ಈ ನಳಿನಭವಜನನಿ ಲಕುಮೀ ।**
**ಜ್ಞಾನ ಬಲ ಭಕ್ತ್ಯಾದಿ ಗುಣ ಸಂ ।**
**ಪೂರ್ಣಳೆನಿಪಳು ಸರ್ವಕಾಲದಿ ಹರಿಕೃಪಾಬಲದಿ ॥**
**ಹೀನಳೆನಿಪಳನಂತ ಗುಣದಿ ಪು ।**
**ರಾಣ ಪುರುಷಗೆ ಪ್ರಕೃತಿಗಿನ್ನು ಸ ।**
**ಮಾನರೆನಿಸುವರಿಲ್ಲ ಮುಕ್ತಾಮುಕ್ತಸುರರೊಳಗೆ ॥೩॥**

**ಅವತರಣಿಕೆ :-**

ಶ್ರೀಶನಿಗಿಂತ ಅನಂತಕೋಟಿಗುಣಗಳಿಂದ ಅವರಳಾದ ಶ್ರೀಲಕ್ಷ್ಮೀದೇವಿಯರ ವಿಚಾರ ತಿಳಿಸುತ್ತಾರೆ. ॥3॥

**ಪ್ರತಿಪದಾರ್ಥ :-**

**ಈ ನಳಿನಭವ** = ವರ್ತಮಾನಕಾಲದ ಕಮಲಸಂಭವರಾದ ಬ್ರಹ್ಮದೇವರ, **ಜನನಿ** = ತಾಯಿಯಾದ, **ಲಕುಮೀ** = ಶ್ರೀಲಕ್ಷ್ಮೀದೇವಿಯರು (ಜಗಜ್ಜನನಿಯಾದ್ದರಿಂದ "ಲಕುಮೀ" ಎಂದು ನಾಮ). **ಹರಿಕೃಪಾಬಲದಿ** = ಶ್ರೀಮನ್ನಾರಾಯಣನ ಕಾರುಣ್ಯವಿಶೇಷದಿಂದ, **ಜ್ಞಾನ ಬಲ ಭಕ್ತ್ಯಾದಿ** = ಜ್ಞಾನ, ಭಕ್ತಿ, ಪರಾಕ್ರಮ, ಇತ್ಯಾದಿ, **ಗುಣಪೂರ್ಣಳೆನಿಪಳು** = ಗುಣಗಳಿಂದ ಸಂಪೂರ್ಣಳೆಂದೆನಿಸಿದ್ದಾಳೆ. **ಸರ್ವಕಾಲದಲಿ** = ಸದಾ ಸರ್ವಕಾಲಗಳಲ್ಲಿ, **ಪುರಾಣಪುರುಷ** = ಆದಿಮೂರ್ತಿಯಾದ ಶ್ರೀಮನ್ನಾರಾಯಣನಿಗೆ, **ಅನಂತಗುಣದಿ** = ಅನಂತಾನಂತಗುಣಗಳಿಂದ, **ಹೀನಳೆನಿಪಳು** =

ಕಡಿಮೆ ಎನಿಸುವಳು. **ಪ್ರಕೃತಿಗಿನ್ನು** = ಚಿತ್ರಕೃತಿನಾಮಕಳಾದ ಶ್ರೀಲಕ್ಷ್ಮೀದೇವಿಗೆ, **ಮುಕ್ತಾಮುಕ್ತಸುರರೊಳಗೆ** = ಲಿಂಗಭಂಗ ಹೊಂದಿಮುಕ್ತರಾದ ದೇವತಾಸಮೂಹದಲ್ಲೂ, ಲಿಂಗಭಂಗ ಇನ್ನು ಹೊಂದದಿರುವ ಅಮುಕ್ತರಾದ ದೇವತಾವರ್ಗದಲ್ಲೂ, **ಸಮಾನರೆನಿಸುವರಿಲ್ಲ** = ಸಮಾನರು ಎಂದು ಕರೆಯಿಸಿಕೊಂಬರು ಯಾರ್ಯಾರೂ ಇಲ್ಲ. ಅಂದರೆ, ಮುಕ್ತಾಮುಕ್ತಸುರರೆಲ್ಲರೂ ಶ್ರೀಲಕ್ಷ್ಮೀದೇವಿಗಿಂತ ನ್ಯೂನರು. ॥3॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ಲಕ್ಷ್ಮೀದೇವೀರ ತಾರತಮ್ಯ ಹೇಳತಾರೆ.

ವರ್ತಮಾನ ಕಮಲಸಂಭರಾದ ಬ್ರಹ್ಮದೇವರ ತಾಯಿಯಾದ ಪರಮಾತ್ಮಗೆ ಪತ್ನಿಯಾದ ಲಕ್ಷ್ಮೀದೇವೇರು, ತಮ್ಮ ಪತಿಯಾದ ನಾರಾಯಣದೇವರ ಕೃಪಾಬಲದಿಂದ ಜ್ಞಾನದಿಂದ ಬಲದಿಂದ, ಅವಿಚ್ಛಿನ್ನವಾದ ಸ್ನೇಹವೆಂಬ ಭಕ್ತಿ-ಇವುಗಳೇ ಮೊದಲಾದ ಅನೇಕ ಸುಗುಣಗಳಿಂದ ಸದಾ ಸರ್ವಕಾಲಗಳಲ್ಲೂ ಸಂಪೂರ್ಣರು-ಎಂತ ಕರೆಸತಾರೆ. ಬ್ರಹ್ಮಾದ್ಯಪೇಕ್ಷಯಾ ಹೊರತು, ಈಶಾದ್ಯಪೇಕ್ಷಯಾ ಅಲ್ಲ. ತನ್ನ ಪತಿಯಾದ ಪುರಾಣಪುರುಷನಾದ ಆದಿಪುರುಷನಾದ ಶ್ರೀನಾರಾಯಣದೇವರಿಗೆ ಅನಂತಗುಣದಿಂದ ಕಡಿಮಿ- ಎಂತ ಎನಿಸತಾರೆ. ಲಕ್ಷ್ಮೀದೇವೇರಿಗೆ ಪ್ರಕೃತಿ ಎಂತ ನಾಮ. ಪುರುಷನಾಮಕ ಪರಮಾತ್ಮನ ಪತ್ನಿಯಾದ ಕಡಿಯಿಂದ, ಈ ರಮಾದೇವೇರಿಗೆ ಸಮಾನರು ಎನಿಸತಕ್ಕವರು, ಲಿಂಗಭಂಗರಾಗಿ ಮುಕ್ತರಾದವರ, ಲಿಂಗಭಂಗರಾಗದ, ಈ ಉಭಯವಿಧ ದೇವತೆಗಳೊಳಗೆ ವಾರೂನೂ ಇಲ್ಲ. ಎಲ್ಲಾರೂ ರಮಾದೇವೇರಗಿಂತಲೂ ಅವರರಾದವರೇವೇ. ಶ್ರೀಪರಮಾತ್ಮಗೆ ರಮಾದೇವೇರು ಅನಂತಗುಣದಿಂದ ನೀಚರೆಂದ ಮೇಲೆ, ಪರಮಾತ್ಮ ರಮಾದೇವೇರಿಗಿಂತ ಅನಂತಗುಣದಿಂದ ಉತ್ತಮ ಎಂತ ಹೇಳಿದಂತಾಗತದೆ. ಅನಂತಶಬ್ದಕ್ಕೆ ಅದ್ಯಂತರಹಿತ-ಎಂತ ಅರ್ಥಮಾಡಿದವೈ

ರಮಾದೇವೇರಿಗಿಂತಲೂ ಬ್ರಹ್ಮದೇವರು ಕೋಟಿಗುಣ ನೀಚರು-ಎಂತ ಹೇಳೋಣದರಿಂದ, ರಮಾದೇವೇರು ಅನಂತಗುಣ ನೀಚರು–ಎಂಬೋದು, ಅನಂತಕ್ಕೆ ಅವಧಿ ಹೇಳದೆ ಹೋದರೆ, ಬ್ರಹ್ಮದೇವರು ಕೋಟಿಗುಣಕ್ಕೆ ನೀಚರು-ಎಂತ ಹೇಳೋದಕ್ಕೆ ಆಗೋದಿಲ್ಲ. ಇದಕ್ಕೆ ಸಮಾಧಾನ- ರಮಾದೇವೇರು ಬ್ರಹ್ಮದೇವರಿಗಿಂತಲೂ ಕೋಟಿಗುಣದಿಂದ ಅಧಿಕರು; ರಮಾದೇವೇರಿಗಿಂತಲೂ ಪರಮಾತ್ಮ ಅನಂತಗುಣ ಅಧಿಕ. ಈ ಅನಂತ ಅವಧಿಯುಕ್ತವಾದದ್ದು. ಪರಮಾತ್ಮನ ಒಂದೊಂದು ಗುಣದಲ್ಲಿ ಅನಂತಗುಣಗಳಿವೆ. ಅದರಲ್ಲಿ ರಮಾದೇವೇರು ತಮ್ಮಲ್ಲಿ ಇರತಕ್ಕ ಕೋಟಿಗುಣಗಳಿಗಳಿಗೆ ಸರಿತೂಗತಕ್ಕ ಗುಣಗಳ ಅನಾಲೋಚನೆಯಿಂದ ಕಾಣತಾರೆ. ಕೋಟಿಗುಣ ಹೋಗತಾ ತದನ್ಯ ಅನಂತ ಗುಣಗಳ ಆಲೋಚನೆಯಿಂದ ಕಾಣತ, ಅನಂದಸಮುದ್ರದಲ್ಲಿ ಮುಣಗತಾರೆ. ತದನ್ಯ ಅಪರಿಚ್ಛಿನ್ನ ಅನಂತಾನಂತ ಗುಣಗಳ ನೋಡೋ ಇಚ್ಛ್ಯಾನೂ ಇಲ್ಲಾ, ಕಾಣೋಣವೂ ಇಲ್ಲ. ಈ ರೀತ್ಯಾ, ಅನಂತಗುಣಗಳಿಗೆ ನೀಚರೆಂದು ತಾತ್ಪರ್ಯ. ಆದ್ದರಿಂದ,ಪ್ರಕೃತ ಅನಂತಶಬ್ದಕ್ಕೆ ಪರಿಮಿತ ಸಾಂಕೇತವು ಎಂತ ತಾತ್ಪರ್ಯ. ॥3॥

**೩. ಭಾವಪ್ರಕಾಶಿಕೆ :–**

ವ್ಯಾಖ್ಯಾನ ಇಲ್ಲ.

**೪. ಭಾವದರ್ಪಣ :–**

ಬ್ರಹ್ಮಾದಿ ಜೀವರಿಗೆ ಜ್ಞಾನಾನಂದಾದಿ ಗುಣವೃದ್ಧಿ ಮಾಡಿಕೊಡತಕ್ಕಂಥ ಲಕ್ಷ್ಮೀದೇವಿ ಶ್ರೀಹರಿಗೆ ದೇಶತಃ ಕಾಲತಃ ಸಮಳು. ಗುಣತಃ ಹೀನಳೆಂದು ಹೇಳುತ್ತಾರೆ । ಈ ನಳಿನ । "ದೇಶತಃ ಕಾಲತೋ ವ್ಯಾಪ್ತಾ ಚಿದ್ರೂಪಾ ಶ್ರೀಹರೇಃ ಸದಾ । ಅನಂತ ಗುಣತೋ ನೀಚಾ ಇತಿ ಪ್ರಕಾಶಸಂಹಿತೋಕ್ತೇಃ । ಸರ್ವದಾ ಸುಖರೂಪಿಣೀತಿ । " ಭಾಗವತೋಕ್ತೇಃ । ಪ್ರಕೃತಿ-ಎಂದರೆ, ಪುರುಷ ನಾಮಕನ ಪತ್ನಿ । ತದುಕ್ತಂ ಗಾರುಡೇ । "ಪುರುಷಸ್ಯ ಭಾರ್ಯಾ ಪ್ರಕೃತಿಃ ಪ್ರಕೃತೇಶ್ಚಾಭಿಮಾನಿನೀತಿ." ॥3॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ರಮಾವತಾರಾನುವಾದಾಯ ತಾರತಮ್ಯಮಪಿ ಕೀರ್ತಯತಿ-"ಅನಂತ"-ಇತಿ "ಅನಂತಾನಂತ ಗುಣತಃ ಇಂದಿರಾಯಾಃ ಪರಃ ಹರಿಃ"— ಇತಿ ತತ್ವರತ್ನ ಮಾಲಾಯಾಮ್ ॥ ಪ್ರಕೃತಿಪದೇನ "ಪುರುಷಸ್ಯ ಭಾರ್ಯಾ ಪ್ರಕೃತಿಃ ॥ ಪ್ರಕೃತೇಶ್ಚಾಭಿಮಾನಿನೀ"—ಇತ್ಯುಕ್ತಾದ್ಯರೂಪಾ (ಇತ್ಯಾದ್ಯುಕ್ತಾ) ಭಾರ್ಯಾ ಉಚ್ಯತೇ. ॥3॥

## ಕನ್ನಡಾರ್ಥ

ರಮಾದೇವಿಯ ಅವತಾರಗಳನ್ನು ಅನುವಾದಿಸಲು, ಹರಿಯಿಂದ ತಾರ ತಮ್ಯವನ್ನೂ ತಿಳಿಸುತ್ತಾರೆ. "ಅನಂತ"-ಎಂಬ ಶ್ಲೋಕದಿಂದ. ಈ ಶ್ಲೋಕದ ಅರ್ಥವನ್ನೇ "ಈ ನಳಿನಭವಜನನಿ"-ಎಂಬ ಪದ್ಯದಿಂದ. ತತ್ವರತ್ನಮಾಲೆಯಲ್ಲಿ ಅನಂತಾನಂತ ಗುಣಗಳಿಂದ ಲಕ್ಷ್ಮೀದೇವಿಗಿಂತ ಹರಿಯು ಉತ್ತಮನು-ಎಂದು ಹೇಳಲಾಗಿರುತ್ತದೆ. ಈ ಪದ್ಯದಲ್ಲಿ ಇರುವ "ಪ್ರಕೃತಿ"-ಶಬ್ದಕ್ಕೆ ಪುರುಷರೂಪೀ ಹರಿಯ ಪತ್ನಿಯೂ, ಜಡಪ್ರಕೃತಿಗೆ ಅಭಿಮಾನಿಯೂ ಆದ "ರಮಾದೇವಿ"— ಎಂದು ಅರ್ಥ. ॥3॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ದೇವರಧೀನ ಲಕ್ಷ್ಮೀರೂಪಗಳನ್ನು ಹೃದಯದಲ್ಲಿ ಕಂಡು ವರ್ಣಿಸುತ್ತಾರೆ— ಈ ನಳಿನ ಎಂದು, ಎರಡು ಪದ್ಯದಿಂದ. ಈ ನಳಿನಭವನೆಂಬ ಬ್ರಹ್ಮನ ತಾಯಿಯಾದ ಲಕ್ಷ್ಮಿಯು ಜ್ಞಾನ,ಬಲ-ಶ್ರೀಹರಿ-ಭಕ್ತಿ ಮೊದಲಾದ ಅನೇಕ ಗುಣಸಂಪೂರ್ಣಳೆನಿಸುವಳು. ಅನಾದಿಯಿಂದ ದೇವರ ಕೃಪಾಪೂರ್ಣಳು. ಪುರಾಣಪುರುಷನೆಂಬ ಸರ್ವವ್ಯಾಪ್ತದೇವರಿಗೆ ಅನಂತಗುಣದಿಂದ ಕಡಿಮೆ ಆದವಳು. ಪ್ರಕೃತಿ-ಎಂಬ ಸರ್ವಚೇಷ್ಟಾಪ್ರವರ್ತಕ ಶ್ರೀದೇವಿಯೇ ಮುಕ್ತಾ ಮುಕ್ತದೇವಸಮೂಹದಲ್ಲಿ, ನಿನ್ನ ಸಮರು ಯಾರೂ ಇಲ್ಲವಾದ್ದರಿಂದ, ನೀನು ಈಶಕೋಟಿಪ್ರವಿಷ್ಟಳು. ॥3॥

## ಸರ್ವವ್ಯಾಖ್ಯಾನಸಾರಸಂಗ್ರಹ

**ನಳಿನ**–ಎಂದರೆ ಕಮಲಪುಷ್ಪ. ಶ್ರೀಪರಮಾತ್ಮನ ನಾಭೀಕಮಲವು ಸ್ವರ್ಣಾತ್ಮಕವಾದದ್ದು. ಲಕ್ಷ್ಮ್ಯಾತ್ಮಕವು. ಅದರಲ್ಲಿ ಜನಿಸಿದ ಚತುರ್ಮುಖ ಬ್ರಹ್ಮದೇವರು–**ನಳಿನಭವರು.**

ಶ್ರೀಹರಿಯ ಆದೇಶದಂತೆ, ಶ್ರೀಲಕ್ಷ್ಮೀದೇವಿ ಶ್ರೀಪರಮಾತ್ಮನ ಸ್ವೇಚ್ಛೆಯಿಂದ ನಾಭೀಪ್ರದೇಶದಿಂದ ಉತ್ಪತ್ತಿಯಾದ ಕಮಲದಲ್ಲಿ ಸ್ವರ್ಣವರ್ಣಯುಕ್ತರಾಗಿ ಪ್ರವೇಶಿಸಿದರು. ಇದನ್ನೇ **ಶ್ರೀ ಸೂಕ್ತದಲ್ಲಿ "ಹಿರಣ್ಯವರ್ಣಾಂ ಹರಿಣೀಂ"**–ಎಂದಿದೆ. ಇದರಿಂದ ಶ್ರೀಲಕ್ಷ್ಮೀದೇವಿ–ನಳಿನಭವರಾದ ಬ್ರಹ್ಮದೇವರ ಜನನಿಯಾದಳು. ಅಲ್ಲದೇ, ಸೂಕ್ಷ್ಮ ಸೃಷ್ಟಿಯಲ್ಲಿ (ಪದ್ಮ ಸೃಷ್ಟಿಗಿಂತ ಮುಂಚೆ) ಶ್ರೀವಾಸುದೇವನಿಂದ ಮಾಯಾನಾಮಕಳಾದ ಶ್ರೀಲಕ್ಷ್ಮಿಯಲ್ಲಿ ವಿರಂಚಿನಾಮಕ ಬ್ರಹ್ಮದೇವರು ಜನಿಸಿದ್ದರು.

ನಳಿನಭವರ ಜನನಿಯಾದ ಶ್ರೀರಮಾದೇವಿಯರಿಗೆ **ಲಕುಮೀ**––ಎಂತ ನಾಮ. ಅಂದರೆ, ಜಗಜ್ಜನನೀ-ಎಂದರ್ಥ.

ಶ್ರೀಲಕ್ಷ್ಮೀದೇವಿ ಜ್ಞಾನ, ಬಲ, ಭಕ್ತಿ— ಇತ್ಯಾದಿ ಸಕಲಗುಣಸಮುದಾಯಗಳಿಂದ ಸಂಪೂರ್ಣಳಾಗಿದ್ದಾಳೆ. ಸರ್ವಕಾಲದಿಂದಲೂ ಶ್ರೀಹರಿಯ **ಕೃಪಾವಿಶೇಷದಿಂದ ಶ್ರೀಲಕುಮೀ** ಜ್ಞಾನಾನಂದಾದಿಗುಣಪೂರ್ಣಳು. ಈಕೆ **ಕೋಟಿಪ್ರವಿಷ್ಟಳು.** ಶ್ರೀಹರಿಯ ನಿತ್ಯಾವಿಯೋಗಿನೀ. ಸದಾ ಶ್ರೀಹರಿಯ **ವಕ್ಷಸ್ಥಳನಿವಾಸಿನಿಯು.** ಶ್ರೀಹರಿಗೆ ಕಾಲತಃ ದೇಶತಃ ಸಮನೆನಿಸಿದವಳು. **ಗುಣತಃ** ಅನಂತಾನಂತಗುಣಗಳಿಂದ ನ್ಯೂನಳು. ಸದಾ ಭಗವದಧೀನಳು ಶ್ರೀಹರಿಗೆ ಸಮಾಸಮಳಾದ ಶ್ರೀರಮಾ ನಿತ್ಯಮುಕ್ತಳು ಮತ್ತು ನಿರ್ವಿಕಾರಳು. ಲಿಂಗದೇಹವಿಲ್ಲದ ಪ್ರಯುಕ್ತ, ತ್ರಿಗುಣಗಳ ಸಂಪರ್ಕವಿಲ್ಲ.

ಅನಂತಗುಣಗಳಿಂದ ಶ್ರೀಪರಮಾತ್ಮನಿಗೆ ನ್ಯೂನಳೆಂದು ಹೇಳಿದ್ದಾರೆ. **ಆನಂದ**– **ಶಬ್ದವು ಅಪರಿಚ್ಛಿನ್ನ,** ನಿರವಧಿಕ, ಅಪರಿಮಿತ–ಎಂಬ ಅರ್ಥ

**ಸೂಚಕ**ವಾಗಿದೆ. ಶ್ರೀಹರಿಯ ಒಂದೊಂದು ಗುಣದಲ್ಲಿ ಅನಂತಾನಂತಗುಣಗಳು ಅಡಗಿವೆ. ಶುಭಗುಣಗಣ ಸಾಗರನು ಆ ಶುಭಾಂಗನು. ಶ್ರೀಹರಿಯ ಅನಂತಗುಣಗಳಲ್ಲಿ ಶ್ರೀಲಕ್ಷ್ಮೀದೇವಿಯರು ತಮ್ಮಲ್ಲಿ ಇರತಕ್ಕ ಕೋಟಿಗುಣಗಳಿಗೆ ಸರಿತೂಗತಕ್ಕ ಗುಣಗಳನ್ನು ಆನಾಲೋಚನೆಯಿಂದ ಕಾಣುತ್ತಾರೆ. ಅದು ಪ್ರತ್ಯಕ್ಷಸಿದ್ಧವು. (ಕರತಲಾಮಲಕದಂತೆ), ತದನ್ಯ ಅನಂತಗುಣಗಳನ್ನು ಆಲೋಚನೆಯಾ ಕಾಣುತ್ತಾ, ಆನಂದಸಮುದ್ರದಲ್ಲಿ ಮುಳುಗುತ್ತಾರೆ. ಸಾಕಲ್ಯೇನ ಶ್ರೀಹರಿಯ ಗುಣಸಮುದಾಯಗಳನ್ನು ಪೂರ್ಣವಾಗಿ ನೋಡಲು ಶಕ್ತರಲ್ಲ. ಇದರಿಂದ ಅನಂತಗುಣಗಳಿಂದ ಶ್ರೀಹರಿಗೆ ನೀಚರು-ಎಂದರ್ಥ.

ಶ್ರೀಮನ್ನಾರಾಯಣನು ಆದಿಮೂಲನು. ಅವನಿಗಿಂತ ಮೊದಲಿದ್ದವರ್‍ಯಾರೂ ಇಲ್ಲವೇ ಇಲ್ಲ. ಏಕಮೇವ ಅದ್ವಿತೀಯನು. ಇದರಿಂದ **ಪುರಾಣ ಪುರುಷ**ನಾಮಕನು.

ಶ್ರೀಲಕ್ಷ್ಮೀದೇವಿಯರು ಮೂಲಪ್ರಕೃತಿಗೆ ಅಭಿಮಾನಿಗಳು ಇದರಿಂದ, ಅವರಿಗೆ "ಚಿತ್ಪ್ರಕೃತಿ" ಎನ್ನುವರು. ಶ್ರೀಲಕ್ಷ್ಮೀ, ಶ್ರೀಭೂದುರ್ಗಾನಾಮಕಳಾಗಿ ತ್ರಿಗುಣಗಳಿಗೆ ಅಭಿಮಾನಿಗಳಾಗಿದ್ದಾರೆ.

ಪುರುಷನಾಮಕನಾದ ಶ್ರೀಹರಿಯ ಭಾರ್ಯಾಯಾದ ಕಾರಣ, ಶ್ರೀಲಕ್ಷ್ಮೀದೇವಿಗೆ **ಪ್ರಕೃತಿ**-ಎಂದು ಹೆಸರು.

**"ಪುರುಷಸ್ಯ ಭಾರ್ಯಾ ಪ್ರಕೃತಿಃ ॥ ಪ್ರಕೃತೀಶ್ಯಾಭಿಮಾನಿನೀತಿ" ॥**
**—ಇತಿ ಗಾರುಡೇ.**

ಜೀವವರ್ಗದಲ್ಲಿ (1) ಅಸೃಷ್ಟರು. (2) ಮುಕ್ತರು ಮತ್ತು (3) ಅಮುಕ್ತರು— ಎಂದು ಮೂರು ಪ್ರಕಾರ. ಸೃಷ್ಟಿಗೇ ಬರದೇ ಅಸೃಜ್ಯರಾಶಿಯಲ್ಲಿರುವ ಜೀವರು ಅಸೃಜ್ಯರು.

ಸೃಷ್ಟಿಗೆ ಬಂದು ಲಿಂಗಭಂಗವನ್ನು ಹೊಂದಿ, ಕರ್ಮವಿಮೋಚನಾ ದ್ವಾರಾ ಮುಕ್ತಿಯನ್ನು ಪಡೆದಿರುವ ಜೀವರು ಮುಕ್ತರು. ಇನ್ನೂ ಲಿಂಗಭಂಗವಾಗದೇ ಇರುವ ಸಲಿಂಗಜೀವರು ಅಮುಕ್ತರು.

ಜೀವಕೋಟಿಯಲ್ಲಿ ಮುಕ್ತ ಹಾಗೂ ಅಮುಕ್ತ ಜೀವರೆಲ್ಲರಿಗಿಂತಲೂ ಅತ್ಯಂತ ಶ್ರೇಷ್ಠಳು ಶ್ರೀರಮಾ. ಮುಕ್ತಾಮುಕ್ತ ಗಣಸ್ಥ ಜೀವರಲ್ಲಿ ಶ್ರೀಲಕುಮಿಗೆ ಸರಿಸಮಾನರ್‍ಯಾರೂ ಇಲ್ಲವೇ ಇಲ್ಲ.

ಇದರಿಂದ (1) ಶ್ರೀಲಕ್ಷ್ಮೀ ಜೀವೋತ್ತಮರಾದ ಬ್ರಹ್ಮ ವಾಯುಗಳಿಗಿಂತಲೂ ಕೋಟಿಗುಣಾಧಿಕಳು. (2) ಶ್ರೀಹರಿಗೆ ಅನಂತಕೋಟಿಗುಣಗಳಿಂದ ನ್ಯೂನಳು. ॥3॥

★★

## ಪದ್ಯ-೪

ಮೂಲ :-

**ಗುಣಗಳತ್ರಯಮಾನಿ ಶ್ರೀ ಕಂ ।**
**ಭಿಣಿ ಮಹಾದುರ್ಗಾಂಭ್ರಣೀ ರು ।**
**ಗ್ಮಿಣಿಯು ಸತ್ಯ ಶಾಂತಿ ಕೃತಿ ಜಯ ಮಾಯ ಮಹಲಕುಮಿ॥**
**ಜನಕಜಾ ಕಮಲಾಲಯಾ ದ ।**
**ಕ್ಷಿಣೆಯು ಪದ್ಮಾ ತ್ರಿಲೋಕೇಶ್ವರಿ ।**
**ಅಣು ಮಹತ್ತಿನೊಳಿದ್ದು ಉಪಮಾರಹಿತಳೆನಿಸುವಳು ॥೪॥**

**ಅವತರಣಿಕೆ :-**

ಶ್ರೀಲಕ್ಷ್ಮೀದೇವಿಯರ ಅವತಾರ ವಿಶೇಷಗಳನ್ನು ತಿಳಿಸುತ್ತಾರೆ. ॥4॥

**ಪ್ರತಿಪದಾರ್ಥ :-**

**ಗುಣಗಳತ್ರಯವಮಾನಿ** – ಸತ್ತ್ವ, ರಜ, ತಮಗಳಿಂದ ಜಡಪ್ರಕೃತಿಯ ಪ್ರಾಕೃತಗುಣತ್ರಯಗಳ ಅಭಿಮಾನಿಯಾದ ಶ್ರೀಲಕ್ಷ್ಮೀದೇವಿಯು, **ಶ್ರೀ** = ಶ್ರೀರೂಪ (ಪ್ರಳಯಕಾಲದಲ್ಲಿ ಪ್ರಳಯೋದಕರೂಪ–ಸತ್ತ್ವ ಗುಣಾಭಿಮಾನಿ ರೂಪ) **ಕಂಭಿಣಿ** = ಭೂ ರೂಪ (ವಟಪತ್ರರೂಪ ರಜೋಗುಣಾಭಿಮಾನಿ ರೂಪ), **ಮಹಾದುರ್ಗ** – ದುರ್ಗಾರೂಪ (ಮಹಾಪ್ರಳಯಕಾಲದಲ್ಲಿ ಅಂಧಕಾರ ರೂಪ–ತಮೋಗುಣಾಭಿಮಾನಿರೂಪ). **ಆಂಭೃಣೀ** = ಸೃಷ್ಟಿ ಮಾಡಲು ಶ್ರೀಪರಮಾತ್ಮನನ್ನು ಸ್ತೋತ್ರ ಮಾಡಿದ ರೂಪ, **ರುಕ್ಮಿಣಿಯು** = ಭೀಷ್ಮಕರಾಯನ ಪುತ್ರಿ ಶ್ರೀರುಕ್ಮಿಣೀದೇವಿಯ ರೂಪ, **ಸತ್ಯ** = ಸತ್ರಾಜಿತರಾಯನ ಪುತ್ರಿ ಸತ್ಯಭಾಮಾದೇವಿ, **ಶಾಂತೀ** = ಅನಿರುದ್ಧನ ಪತ್ನಿ ಶಾಂತೀದೇವಿ, **ಕೃತಿ** = ಪ್ರದ್ಯುಮ್ನನ ಪತ್ನಿ ಕೃತೀದೇವಿ, **ಜಯು** = ಸಂಕರ್ಷಣನ ರಮಣೀ ಜಯಾದೇವಿ, **ಮಾಯು** = ವಾಸುದೇವನ ಪತ್ನಿ ಮಾಯಾದೇವಿ, **ಮಹಲಕುಮಿ** = ಶ್ರೀಮನ್ನಾರಾಯಣನ ಪತ್ನಿ ಮೂಲ ರೂಪ-ಶ್ರೀಲಕ್ಷ್ಮೀದೇವಿ, **ಜನಕಜಾ** = ಜನಕರಾಜನ ಮಗಳು ಶ್ರೀಸೀತಾದೇವಿ, **ಕಮಲಾಲಯಾ** = ಕಮಲಸಂಭವ ಶ್ರೀಪದ್ಮಾವತೀದೇವಿ, **ದಕ್ಷಿಣೆ** = ಯಜ್ಞನಾಮಕ ಪರಮಾತ್ಮನ ಪತ್ನೀ ಶ್ರೀದಕ್ಷಿಣಾದೇವಿ, **ಪದ್ಮಾ** – ಭೃಗುಪುತ್ರಿಯಾದ ಭಾರ್ಗವೀರೂಪ, **ತ್ರಿಲೋಕೇಶ್ವರಿ** = ಮೂರು ಲೋಕಕ್ಕೆ ಜನನಿಯಾದ ಶ್ರೀಲಕ್ಷ್ಮೀಯ ರೂಪಗಳು, **ಅಣು** = ಅತ್ಯಂತ ಸೂಕ್ಷ್ಮನಾದ ಜೀವನಲ್ಲಿದ್ದು, **ಮಹತ್ತಿನೊಳು** = ಸಪ್ತಾವರಣ ಸಹಿತವಾದ ಬ್ರಹ್ಮಾಂಡದ ಒಳ ಹೊರಗೆ ಅಪ್ರಾಕೃತಾಕಾಶಾಂತ ಪರ್ಯಂತ, **ಇದ್ದು** = ವ್ಯಾಪ್ತಳಾಗಿದ್ದು, **ಉಪಮಾನರಹಿತಳೆನಿಸುವಳು** = ಜೀವಕೋಟಿ ಪ್ರವಿಷ್ಟರಲ್ಲಿ ಈಕೆಗೆ ಸಮರ್ಯಾರೂ ಇಲ್ಲ– ಎಂದು ಅಸದೃಶಳೆಂದು ಎನಿಸಿದ್ದಾಳೆ· ॥4॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಲಕ್ಷ್ಮೀದೇವೇರ ಅವತಾರಗಳ ಹೇಳತಾರೆ.

ಮೂಲಜಡತ್ರಯಾತ್ಮಕ ಉಪಾದಾನಭೂತವಾದ ಗುಣತ್ರಯಗಳಿಗೇನೂ. ಅನಾದಿಲಿಂಗ ಗುಣತ್ರಯಗಳಿಗೇನೂ, ಅಭಿಮಾನಿಯಾದ ಲಕ್ಷ್ಮೀದೇವೇರ ಅವತಾರರೂಪಗಳು–ಶ್ರೀದೇವೇರು ಉದಕರೂಪರು, ಭೂದೇವೇರು ವಟ ಪತ್ರರೂಪರು, ಮಹಾಪ್ರಳಯಕಾಲದಲ್ಲಿ ದುರ್ಗಾದೇವೇರು ಅಂಧಕಾರ ರೂಪರು. ಸೃಷ್ಟಿ ಮಾಡೋ ಉದ್ದಿಶ್ಯ,ಪರಮಾತ್ಮನ್ನ ಸ್ತೋತ್ರಮಾಡಿದರೂಪ ಅಂಭೃಣೀರೂಪ, ಭೀಷ್ಮಕರಾಯನ ಪುತ್ರಿ ರುಗ್ಮಿಣೀದೇವೇರು, ಸತ್ರಾಜಿದ್ರಾಯನ ಮಗಳು ಸತ್ಯಭಾಮಾದೇವೇರು, ನೀಲವರ್ಣ ಅನಿರುದ್ಧನ ಪತ್ನಿ ಶಾಂತೀದೇವೇರು, ರಕ್ತವರ್ಣ ಪ್ರದ್ಯುಮ್ನದೇವರ ಪತ್ನಿ ಕೃತೀದೇವೇರು. ಪಿಂಗಳವರ್ಣ ಸಂಕರ್ಷಣದೇವರ ಪತ್ನಿ ಜಯಾದೇವೇರು, ಕೃಷ್ಣವರ್ಣ ವಾಸುದೇವನ ಪತ್ನಿ ಮಾಯಾದೇವೇರು, ಸ್ವರ್ಣವರ್ಣ ಶ್ರೀನಾರಾಯಣ ದೇವರ ಪತ್ನಿ ಮೂಲರೂಪ ಲಕ್ಷ್ಮೀದೇವೇರು, ಜನಕರಾಯನ ಪುತ್ರಿ ಸೀತಾ ದೇವೇರು, ಪದ್ಮಾವತೀದೇವೇರು, ಯಜ್ಞನಾಮಕ ಪರಮಾತ್ಮನ ಭಾರ್ಯರಾದ ದಕ್ಷಿಣಾದೇವೇರು, ಭೃಗುಪುತ್ರಿ ಪದ್ಮಾ–ಎಂಬ ಅವತಾರ, ಮೂರು ಲೋಕಕ್ಕೂ ತಾಯಿಯಾದ ಲಕ್ಷ್ಮೀದೇವೇರ ರೂಪಗಳು, ಇವು, ಇನ್ನೂ ಅನಂತರೂಪಗಳು ಉಂಟು. ಈ ರೂಪಗಳುಳ್ಳ ರಮಾದೇವಿ ಅಣುವಾದ ಜೀವನಲ್ಲಿ, ನವಾವರಣ ಸಹಿತವಾದ ಒಳ ಹೊರಗೆ ಈ ಅಣು, ಮಹತ್ತಿನೊಳಿದ್ದು, ಅಸ್ವತಂತ್ರಚೇತನರೊಳು ಉತ್ತಮರು, ಸಮಾನರಹಿತರು. ಬ್ರಹ್ಮಾದಿಗಳು ಈಕೆಗೆ ಅವರರು ಎಂತ ತಾತ್ಪರ್ಯ. ॥4॥

## ೨. ಭಾವಪ್ರಕಾಶಿಕೆ :-

ವ್ಯಾಖ್ಯಾನ ಇಲ್ಲ.

## ೩. ಭಾವದರ್ಪಣ :-

ಗುಣೇತಿ । ಗುಣಗಳತ್ರಯಮಾನಿ —- ಸತ್ವರಜಸ್ತಮೋಗುಣಾಭಿಮಾನಿ ಎಂಬರ್ಥ । ತದುಕ್ತಂ ಪ್ರಕಾಶಸಂಹಿತಾಯಾಂ । "ಸೃಷ್ಟ್ಯಾ ಲಯೇ ರಮಾ ಶೇಷಾಂ ಮಾನಿನೀಚ ನಿರಂತರ ಮಿತಿ ।" ಶ್ರೀಯೇ ವಿಷ್ಣುಭಾರ್ಯಾ, ಕುಂಭಿಣೀ ವಿಷ್ಣುಭಾರ್ಯಾ । ಅವಾಂತರ ದುರ್ಗಾ ಅಲ್ಲಿಂದು ಮಹಚ್ಛಬ್ದ ಪ್ರಯೋಗ ಮಾಡಿರುತ್ತಾರೆ. ರುದ್ರನಾಮಕಗ್ರೂಪ ಪತ್ನಿ । ರುಗ್ಮಿಣೀ ಸತ್ಯಾ ಶ್ರೀಕೃಷ್ಣನ ಪತ್ನಿಯರು । ಶಾಂತೀ ಅನಿರುದ್ಧ ಭಾರ್ಯಾ, ಕೃತೀ ಪ್ರದ್ಯುಮ್ನ ಭಾರ್ಯಾ। ಜಯಾ ಸಂಕರ್ಷಣ ಭಾರ್ಯಾ । ಮಾಯಾ ವಾಸುದೇವನ ಭಾರ್ಯಾ । ಲಕುಮಿ ಶ್ರೀನಾರಾಯಣ ಭಾರ್ಯಾ । ಜನಕಜಾ ಸೀತಾ ಶ್ರೀರಾಮಭಾರ್ಯಾ। ಕಮಲಾಲಯಾ ಶ್ರೀಹರಿ ಭಾರ್ಯಾ । ದಕ್ಷಿಣಾ ಯಜ್ಞನಾಮಕನ ಭಾರ್ಯಾ । ಅಣುಮಹತ್ತಿನೊಳಿದ್ದು -ಎಂದರೆ,ಸರ್ವತ್ರ ವ್ಯಾಪ್ತಳು ಎಂಬರ್ಥ । ಉಪಮಾ ಸಾದೃಶ್ಯ. ಈಕೆಯ ಮೂಲರೂಪಕ್ಕೂ ಅವತಾರರೂಪಕ್ಕೂ ಭೇದವಿಲ್ಲ-ಎಂಬು ದಕ್ಕೆ ಪ್ರಮಾಣ । "ಇತ್ಯಾದಿಕಾ ಹ್ಯನಂತಾಶ್ಚ ಹ್ಯವತಾರಾಃ ಪೃಥಗ್ವಿಧಾಃ । ರಮಾಯಾಃ ಸಂತಿ ಪಕ್ಷೀಂದ್ರ ಭೇದಹೀನಾಃ ಪರಸ್ಪರ ಮಿತಿ"-**ಗಾರುಡೇ.**

॥4॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

"ಗುಣ" ಇತಿ. "ಶ್ರೀಃ ಸತ್ವಂ ಭೂ ರಜೋ ದುರ್ಗಾತಮ ಇತ್ಯಾದಿಕಾ ಚ ಸಾ" ॥ ಶ್ರೀಃ ಸತ್ವವ್ ॥ ಸದ್ಗುಣ ಪ್ರಭಾ ॥ ರಜೋಭಿಮಾನಿ ಭೂದೇವೀ ಭಾರ್ಯಾ ವೈಸೂಕರಸ್ಯ"-ಇತ್ಯಾವೇಶಃ ॥ ಸರ್ವವೇದಾಭಿಮಾನೀ ಚ ಅಂಭ್ರಣೀ ಪರಿಕೀರ್ತಿತಾ ॥ ರುಕ್ಮಿಣೀ ಸತ್ಯಭಾಮೇ ಚ ಭಾರ್ಯೇ ಕೃಷ್ಣಸ್ಯ ಇತಿ ॥ ವಾಸು ದೇವಸ್ಯ ಭಾರ್ಯಾ ಮಾಯಾ ॥ ಸಂಕರ್ಷಣಸ್ಯ ಭಾರ್ಯಾ ಜಯಾ । ಅನಿ

ರುದ್ಧಸ್ಯ ಭಾರ್ಯಾ ಶಾಂತಿನಾಮ್ನೀ ॥ ಪ್ರದ್ಯುಮ್ನಸ್ಯ ಭಾರ್ಯಾ ಕೃತಿಃ ॥ ನಾರಾಯಣಸ್ಯ ಭಾರ್ಯಾಸು ಲಕ್ಷ್ಮೀಃ ವರುಣಜಾ ॥ ಕಮಲಾಲಯಾ ಪದ್ಮಾವತೀತ್ಯಾವೇಶಃ ॥ ಯಜ್ಞಾಖ್ಯಸ್ಯ ಹರೇ ಭಾರ್ಯಾ ದಕ್ಷಿಣಾ ॥ ಪದ್ಮೇತ್ಯತ್ರ ಕನ್ಯೇತಿ ಪಾಠ ॥ "ಕೃಷ್ಣಾವತಾರೇ ಕನ್ಯೈವ ನಂದಪುತ್ರ್ಯಸುಜಾ ಹರೇಃ " ॥ ಇತಿ ಮೂಲೇ ದುರ್ಗಾಯಾಃ ಪೃಥಗವತಾರತ್ವೋಕ್ತೇಃ ॥ ಲಜ್ಜಾಭಿಮಾನಿನೀ ಹ್ರೀರಪಿ ಗ್ರಾಹ್ಯಾ ॥ "ಶ್ರೀ ಭೂದುರ್ಗಾಂಭೃಣೀ-ಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ ॥ ಸೀತಾ ಜಯಂತೀ ಸತ್ಯಾ ಚ ರುಕ್ಮಿಣೀತ್ಯಾದಿ ಭೇದಿತಾ ॥ ಪ್ರಕೃತಿಃ ತೇನ ಚಾವಿಷ್ಟಾ ತದ್ವಶಾ ನ ಹರಿಃ ಸ್ವಯಮ್ ತತೋಽನಂತಾಂಶ ಹೀನಾ ಚ ಬಲಜ್ಞಪ್ತಿಸುಖಾದಿಭಿಃ ॥" ಇತಿ. ॥

ಆದಿಪದೇನ, ವೇದಾ ದೇವತಾ ಧಾತ್ರೀ ಮಹಾಲಕ್ಷ್ಮೀಃ ಸುಖಾಲಯಾ ಭಾರ್ಗವೀ ಸೀತಾ ರುಕ್ಮಿಣೀ ಸತ್ಯಾ ರೇವತೀ ಪ್ರಭಾಖ್ಯ ಮತ್ಸ್ಯಾದಿ ರಮಣೀನಾಮ್ ॥ "ಶ್ರೀಃ ಲಕ್ಷ್ಮೀಃ ಕಮಲಾ ಪದ್ಮಾ ಪದ್ಮಿನೀ ಕಮಲಾಲಯಾ ॥ರಮಾ ವೃಷಾಕಪೀ ಧನ್ಯಾ ಬುದ್ಧಿರ್ಯಜ್ಞಾ ಚ ಇಂದಿರಾ ॥ ಹಿರಣ್ಯಾ ಹರಿಣೀ ಸತ್ಯಾ ನಿತ್ಯಾ ಚಾನಂದನಾಮಿಕಾ ॥ ಆ ಪ್ರಜ್ಞಾ, ಚ ಸುಖಾಚೈವ ಸುಗಂಧಾ ಸುಂದರೀತಥಾ ॥ ವಿದ್ಯಾ ಸುಶೀಲಾ ಸುಲಕ್ಷಣಾ"-ಇತಿ ತತ್ತ್ವ ಸುಧಾಸಿಧ್ಯುಕ್ತ ಕೇಶವಾದಿ ಚತುರ್ವಿಂಶತಿ ಹರಿಲಲನಾನಾಂ ಗ್ರಹಣಮ್ ॥ ಏತದ್ರೀತ್ಯಾ ಪದ್ಮೇತ್ಯೇವ ಪಾಠಃ ॥ ಗೋವಿಂದ ಭಾರ್ಯಾ ॥ ಮಧುಸೂದನ ಭಾರ್ಯಾ ಕಮಲಾಲಯಾ ಗ್ರಹಣೇನ ಶಿಷ್ಟ ದ್ವಾವಿಂಶತಿಂ ಅಭಿಪ್ರೇತ್ಯಿತಿ ಮೂಲಕಾರಃ ॥ "ತಚ್ಚವಾಧೂಲ ಶಾಖಾಯಾಂ ಇತಿ ಮೂಲಸುಧಾಯಾಂ ಬಹುಶಾಖಾವಿದಾಮೇವ ಅತ್ರ ಅಧಿಕಾರಃ ಇತ್ಯುಕ್ತಮ್ ॥ ತದ್ವತ್ ಬಹುಗ್ರಂಥ ಸಂದರ್ಭ ವಿದಾಮೇವ ಅತ್ರ ಸಮ್ಯಕ್ ಪ್ರವೇಶಃ ಇತಿ ದ್ಯೋತನಾಸು ದ್ವಯಂ ಜ ಗ್ರಾಹ. ॥2॥ ॥4॥

ನನು ಪ್ರಥಮ ಸೃಷ್ಟೌ ರಾಮಸೀತಾದ್ಯಾವಿರ್ಭಾವೇ ತ್ರೇತಾದಿಕಾಲ ನಿಯಮ ಪ್ರವಾದಃ ಕಥಂ ? ಇತಿ ತನ್ನ ॥ ಏತಾನಿ ಮೂಲೇ ಕೃತ್ಯ ಆವಿರ್ಭೂತ ರಾಮ ಜಾನಕ್ಯಾದಿ ರೂಪಾಂತರ ವಿಷಯಃ ॥ ಇತಿ ಉಕ್ತಮಸ್ಮಾತ್ ಕೃತಲಂ... ಚಿಂತನೆ ಪ್ರಕರಣೇ. ॥2॥ ॥4॥

## ಕನ್ನಡಾರ್ಥ

"ಗುಣತ್ರಯಗಳಭಿಮಾನಿ"–ಎಂಬಲ್ಲಿ ಸತ್ವಗುಣಕ್ಕೆ ಶ್ರೀಲಕ್ಷ್ಮೀದೇವಿಯು ಅಭಿಮಾನಿ. ರಜೋಗುಣಕ್ಕೆ ಭೂದೇವಿಯು ಅಭಿಮಾನಿ. ತಮೋಗುಣಕ್ಕೆ ದುರ್ಗಾದೇವಿಯು ಅಭಿಮಾನಿ. ಸತ್ವಗುಣದ ಅಭಿಮಾನಿಯಾದ ಶ್ರೀದೇವಿಯು ಸದ್ಗುಣ ಪ್ರಭಾ-ಮುಂತಾದ ಗುಣವುಳ್ಳವಳು; ಹಾಗೂ ಅವುಗಳನ್ನು ಅಭಿವ್ಯಕ್ತಿಸುವಳು. ರಜೋಗುಣಾಭಿಮಾನಿ ಭೂದೇವಿಯು ವರಾಹಪತ್ನಿ ಎನಿಸಿದ್ದು-ಲಕ್ಷ್ಮೀದೇವಿಯ ಆವೇಶಯುಕ್ತವಾಗಿರುವಳು. ಸರ್ವವೇದಾಭಿಮಾನಿಯಾದ ರಮಾರೂಪವು "ಅಂಭೃಣೀ" ಎನಿಸುತ್ತದೆ. ರುಕ್ಮಿಣೀ ಸತ್ಯಭಾಮೆಯರು ಶ್ರೀಕೃಷ್ಣನ ಹೆಂಡತಿಯರು. ವಾಸುದೇವನ ಹೆಂಡತಿ ಮಾಯಾ. ಸಂಕರ್ಷಣನ ಪತ್ನಿ ಜಯಾ. ಅನಿರುದ್ಧನ ಹೆಡತಿ ಶಾಂತಾ. ಪ್ರದ್ಯುಮ್ನನ ಹೆಂಡತಿ ಕೃತಿ. ನಾರಾಯಣನ ಹೆಂಡತಿ ಲಕ್ಷ್ಮೀ–ವರುಣ ಕುವರಿ. ಕಮಲಾಲಯಾ–ಪದ್ಮಾವತಿ; ಅಲ್ಲಿ ಆವೇಶ. ಯಜ್ಞನಾಮಕ ಹರಿಯ ಪತ್ನಿ ದಕ್ಷಿಣಾ. ಪದ್ಮಾ–ಎಂಬುದರ ಬದಲು ಕನ್ಯಾ-ಎಂದೂ ಪಾಠಭೇದವುಂಟು. "ಕೃಷ್ಣಾವತಾರಕಾಲದಲ್ಲಿ ಕನ್ಯಾನಾಮಕ ಲಕ್ಷ್ಮಿಯೇ ನಂದನಪುತ್ರಿ. ಶ್ರೀಕೃಷ್ಣನ ತಂಗಿಯಾದವಳು,—ಎಂದು ದುರ್ಗಾದೇವಿಗೆ ಪ್ರತ್ಯೇಕವಾದ ಅವತಾರವಿದೆ– ಎಂದು ಹೇಳಲಾಗಿರುತ್ತದೆ. ಲಜ್ಜೆಗೆ ಅಭಿಮಾನಿರೂಪವು "ಹ್ರೀ" ಎಂಬುದು. ಶ್ರೀ–ಭೂ–ದುರ್ಗಾ–ಅಂಭೃಣೀ–ಹ್ರೀ—ಮಹಾಲಕ್ಷ್ಮೀ––ದಕ್ಷಿಣಾ. ಸೀತಾ—ಜಯಂತೀ–ಸತ್ಯಭಾಮಾ–ರುಕ್ಮಿಣೀ-ಎಂದು ಮುಂತಾಗಿ ರಮಾದೇವಿಯರ ರೂಪಗಳು. ಅವಳೇ ಪುರುಷಪತ್ನಿಯಾದ ಪ್ರಕೃತಿಯೆನಿಸುವಳು. ಅಲ್ಲಿ ಶ್ರೀಹರಿಯು ಆವಿಷ್ಟನಾಗಿದ್ದಾನೆ. ಪ್ರಕೃತಿಯು ಹರಿಯ ಅಧೀನಳು. ಹರಿಯು ಪರಾಧೀನನಲ್ಲ. ಸ್ವತಂತ್ರನು. ಬಲ, ಜ್ಞಾನ, ಸುಖ-ಮುಂತಾದುವುಗಳಲ್ಲಿ ಅನಂತಾಂಶಗಳಿಂದ ಹರಿಗಿಂತ ಲಕ್ಷ್ಮಿಯು ಕಡಿಮೆಯಾದವಳು. ॥4॥

"ಆದಿ" ಪದದಿಂದ–ವೇದಾ, ದೇವತಾ, ಧಾತ್ರೀ, ಮಹಾಲಕ್ಷ್ಮೀ, ಸುಖಾಲಯಾ, ಭಾರ್ಗವೀ, ಸೀತಾ, ರುಕ್ಮಿಣೀ–ಸತ್ಯಭಾಮಾ, ರೇವತೀ–

ಪ್ರಭಾ-ಮುಂತಾದ ಮತ್ಸ್ಯಾದಿ ಪತ್ನಿ ರೂಪಗಳನ್ನು ಪರಿಗ್ರಹಿಸಬೇಕು. "ಶ್ರೀ, ಲಕ್ಷ್ಮೀ, ಕಮಲಾ, ಪದ್ಮಾ-ಪದ್ಮಿನೀ-ಕಮಲಾಲಯಾ-ರಮಾ-ವೃಷಾಕಪಿ-ಧನ್ಯಾ-ಬುದ್ಧಿ, ಯಜ್ಞಾ, ಇಂದಿರಾ, ಹಿರಣ್ಯಾ, ಹರಿಣೀ, ಸತ್ಯಾ, ನಿತ್ಯಾ, ಆನಂದ, ಅಪ್ರಜ್ಞಾ, ಸುಖಾ, ಸುಗಂಧಾ, ಸುಂದರೀ, ವಿದ್ಯಾ, ಸುಶೀಲಾ, ಸುಲಕ್ಷಣಾ" ಎಂಬುದಾಗಿ ಕೇಶವಾದಿ ಇಪ್ಪತ್ತನಾಲ್ಕು ರೂಪಗಳ ಪತ್ನೀರೂಪಗಳನ್ನು "ತತ್ವಸುಧಾನಿಧಿ"ಎಂಬ ಗ್ರಂಥದಲ್ಲಿ ಹೇಳಿರುತ್ತಾರೆ. ಅವುಗಳನ್ನು ಇಲ್ಲಿ ಪರಿಗ್ರಹಿಸಬೇಕು. ಈ ರೀತಿಯಲ್ಲಿ "ಪದ್ಮಾ"— ಎಂಬುದಾಗಿಯೇ ಮೂಲಪಾಠವಿರಬೇಕು. ಗೋವಿಂದಪತ್ನಿ ಹಾಗೂ ಮಧುಸೂದನ ಪತ್ನಿ (ಪದ್ಮಾ, ಕಮಲಾಲಯಾ) ಇವರ ನಾಮಗ್ರಹಣವಿದ್ದುದರಿಂದ ಉಳಿದ ಇಪ್ಪತ್ತೆರಡು ರೂಪಗಳನ್ನು ಸೂಚಿಸಿರುತ್ತಾರೆ. ವಾಧೂಲ ಶಾಖೆಯಲ್ಲಿ ಎಂಟು ರೂಪಗಳು ಹೇಳಲಾಗಿದೆ. ಎಂದು ಮೂಲಸುಧಾಗ್ರಂಥದಲ್ಲಿ "ಬಹುಶಾಖಾಜ್ಞಾನಿಗಳೇ ಅನುವ್ಯಾಖ್ಯಾನ-ಬ್ರಹ್ಮಸೂತ್ರಾರ್ಥಗಳಲ್ಲಿ ನಿಜವಾದ ಅಧಿಕಾರಿಗಳು"-ಎಂದು ಜಯತೀರ್ಥರು ಹೇಳಿರುತ್ತಾರೆ. ಆದರಂತೆ, ಬಹುಗ್ರಂಥವೇತ್ತರೇ ಇಲ್ಲಿ ಅಧಿಕಾರಿಗಳು ಎಂದು ತಿಳಿಸಲು, ಎರಡೇ ರೂಪಗಳನ್ನು ಹೇಳಿರುತ್ತಾರೆ. ಪ್ರಕೃತಿನಾಮಕಲಕ್ಷ್ಮಿಗೆ ಪ್ರಥಮಸೃಷ್ಟಿಯಲ್ಲಿ ಈ ರೂಪ ಪ್ರಾದುರ್ಭಾವವಾದವೆಂದು ಹೇಳಿದ್ದಾರೆ. ತ್ರೇತಾ-ಮುಂತಾದ ಕಾಲನಿಯಮಗಳನ್ನು ಹೇಳುವುದು- ವಿರುದ್ಧವಾಗುತ್ತದೆ. ಆದುದರಿಂದ, ಮೂಲರೂಪಗಳಲ್ಲಿ ಏಕೀಕೃತವಾದುದರಿಂದ, ಹಾಗೆ ಹೇಳುವೆವು- ಎಂದು ನಾವು ಮಾಡಿರುವ ಲಯ ಚಿಂತನ ಪ್ರಕರಣದಲ್ಲಿ ಹೇಳಿರುತ್ತೇವೆ. ॥2॥ ॥4॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ಗುಣತ್ರಯಾಭಿಮಾನಿ-ಶ್ರೀ ಭೂ ದುರ್ಗಾ ನಿತ್ಯ ವಿಷ್ಣ್ವಾಶ್ರಿಯಳಾದ್ದರಿಂದ ಅಂಭೃಣೀ-ಎಂಬ ಮೂಲರೂಪಳು, ರುಗ್ಮಿಣೀ, ಸತ್ಯಭಾಮಾ, ಶಾಂತೀ ಕೃತೀ, ಜಯಾ, ಮಾಯಾ-ಎಂಬ ಚತುರ್ವ್ಯೂಹ ಪತ್ನೀರೂಪವುಳ್ಳವಳು, ಜನಕ ಪುತ್ರೀ ಸೀತಾ, ಕಮಲಾಲಯಾ ಎಂಬ ಶ್ರೀನಿವಾಸನ ಪತ್ನೀರೂಪ, ದಕ್ಷಿಣಾ-ಎಂಬ ಯಜ್ಞಮೂರ್ತಿಯ ಪತ್ನಿ, ಪದ್ಮಾ-ಎಂಬ ಭೃಗುಪುತ್ರಿಯ

ಅವತಾರ ಮೊದಲಾದ ಅನೇಕ ರೂಪಗಳಿಂದ ತ್ರಿಲೋಕೇಶ್ವರಿ-ಎಂದು ದೇವರಂತೆ, ಅಣು ಮಹತ್ತು ಸರ್ವತ್ರ ವ್ಯಾಪಿಸಿ, ಸಮಾನರಹಿತಳೆಂದು ವೇದಾದಿ ಪ್ರತಿಪಾದ್ಯಳು. ॥4॥

## ಸರ್ವವ್ಯಾಖ್ಯಾನಸಾರಸಂಗ್ರಹ

ಈಶಕೋಟಿಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿಯರ ರೂಪವಿಶೇಷಗಳನ್ನು ತಿಳಿಸುತ್ತಾರೆ.

ಮೂಲಪ್ರಕೃತಿಯು ತ್ರಿಗುಣಾತ್ಮಕವಾದದ್ದು. ಅದೇ ಪ್ರಾಕೃತ ಸತ್ತ್ವ–ರಜ–ಎಂಬ ತ್ರಿಗುಣಗಳು. ಈ ಗುಣಗಳ ವೈಷಮ್ಯದಿಂದ ಶ್ರೀಹರಿಯು ಸ್ವೇಚ್ಛೆಯಿಂದ ಜಗತ್ತನ್ನು ಸೃಷ್ಟಿಸುತ್ತಾನೆ. ಶ್ರೀಲಕ್ಷ್ಮೀದೇವಿ ಮೂಲ ಪ್ರಕೃತಿಯ ಸಹಜ ಧರ್ಮಗಳಾದ ತ್ರಿಗುಣಗಳಿಗೆ ಅಭಿಮಾನಿಯು. ಇದರಿಂದ ಶ್ರೀಲಕ್ಷ್ಮಿಗೆ "ಚಿತ್ಪ್ರಕೃತಿ"-ಎಂದು ಹೆಸರು. ಸತ್ತ್ವಗುಣಕ್ಕೆ ಶ್ರೀರೂಪದಿಂದಲೂ, ರಜೋಗುಣಕ್ಕೆ ಭೂರೂಪದಿಂದಲೂ ಮತ್ತು ತಮೋಗುಣಕ್ಕೆ ದುರ್ಗಾರೂಪದಿಂದಲೂ ಅಭಿಮಾನಿಯಾಗಿದ್ದಾಳೆ. ಮಹಾಪ್ರಳಯಕಾಲದಲ್ಲಿ ಶ್ರೀನಾಮಕಳಾಗಿ ಪ್ರಳಯೋದಕವಾಗಿಯೂ, ಭೂನಾಮಕಳಾಗಿ ವಟಪತ್ರ ರೂಪಗಳಾಗಿಯೂ ಮತ್ತು ದುರ್ಗಾನಾಮಕಳಾಗಿ ಅಂಧಕಾರರೂಪಳಾಗಿಯೂ, ಎಡಬಿಡದೆ, ಪ್ರಳಯೋದಕರಲ್ಲಿ ಶಯನಿಸಿರುವ ಆದಿಮೂಲರೂಪೀ ಶ್ರೀಮನ್ನಾರಾಯಣನನ್ನು ಸೇವಿಸುತ್ತಿರುವಳು.

ಶ್ರೀದೇವಿಯು ಸದ್ಗುಣ,ಪ್ರಭಾ-ಇತ್ಯಾದಿ ಗುಣಯುಕ್ತಳು. ಭೂದೇವಿಯು ವರಾಹಪತ್ನಿ ಎನಿಸಿದ್ದು, ಶ್ರೀಲಕ್ಷ್ಮ್ಯಾವೇಶಯುಕ್ತಳು.

ಸರ್ವವೇದಾಭಿಮಾನಿಯಾದ ಶ್ರೀರಮಾರೂಪವು **ಅಂಭೃಣೀರೂಪವು** ಜಗತ್ತನ್ನೇ ಸೃಷ್ಟಿ ಮಾಡುವ ಉದ್ದಿಶ್ಯ, ವಟಪತ್ರಶಯನನಾಗಿದ್ದ ಆ **ಚಟುಲ** ವಿಕ್ರಮನನ್ನು ಅಂಭೃಣೀಸೂಕ್ತದಿಂದ ಪ್ರಾರ್ಥಿಸುತ್ತಾಳೆ.

ಭೀಷ್ಮಕರಾಯನ ಪುತ್ರಿ **ರುಕ್ಮಿಣೀದೇವಿ.** ಶ್ರೀಕೃಷ್ಣನ ಪತ್ನೀ, ಸಾಕ್ಷಾತ್ ಲಕ್ಷ್ಮೀರೂಪಳು.

ಸತ್ರಾಜಿತರಾಜನ ಪುತ್ರಿ **ಸತ್ಯಭಾಮೆ.** ಶ್ರೀಕೃಷ್ಣರಮಣಿ. ಸಾಕ್ಷಾತ್ ಶ್ರೀರಮಾರೂಪಳು. ಶ್ರೀಕೃಷ್ಣನ ಅಷ್ಟಮಹಿಷಿಯರಲ್ಲಿ ಪ್ರಧಾನರು. (ಪ್ರಥಮ ಮತ್ತು ದ್ವಿತೀಯ ಸ್ಥಾನ).

ನೀಲವರ್ಣಯುಕ್ತನಾದ ಅನಿರುದ್ಧನ ಪತ್ನೀ **ಶಾಂತೀದೇವಿ.** ಅನಿರುದ್ಧನು ಸೂಕ್ಷ್ಮಸೃಷ್ಟಿಗೆ ಕಾರಣನು.

ರಕ್ತವರ್ಣವಿಶಿಷ್ಟನಾದ ಪ್ರದ್ಯುಮ್ನನ ಸತಿ **ಕೃತೀನಾಮಕಳಾದ** ಶ್ರೀರಮಾ. ಪ್ರದ್ಯುಮ್ನನು ಸೃಷ್ಟಿ-ಸ್ಥಿತಿಗಳಿಗೆ ಕಾರಣರೂಪನು.

**ಜಯಾದೇವಿಯರು** ಪಿಂಗಳವರ್ಣನಾದ ಸಂಕರ್ಷಣನ ಪತ್ನೀ. ಸಂಕರ್ಷಣನು ಲಯಕಾರಕನು.

ಕೃಷ್ಣವರ್ಣಾತ್ಮಕರಾದ ಶ್ರೀವಾಸುದೇವನ ಪತ್ನೀ **ಮಾಯಾದೇವಿ.** ಸಜ್ಜನರಿಗೆ ಮೋಕ್ಷಪ್ರದರೂಪವು.

ಸ್ವರ್ಣವರ್ಣವಿಶಿಷ್ಟನಾದ ಮೂಲರೂಪೀಶ್ರೀಮನ್ನಾರಾಯಣನ ರಮಣೀ-**ಶ್ರೀಲಕ್ಷ್ಮೀದೇವಿ.**

ಅಂತರ್ಬಹಿಶ್ಚ ವ್ಯಾಪ್ತರೂಪ. ಸರ್ವಜಗದಾಶ್ರಯರೂಪ.

ಜನಕರಾಜನ ಪುತ್ರಿ **ಸೀತಾದೇವಿ** (ಜನಕಜಾ), ಸಮುದ್ರಮಥನ ಕಾಲದಲ್ಲಿ ಸಾಗರದಲ್ಲಿ ಹುಟ್ಟಿದ **ಕಮಲಾಲಯಾ.** (ವರುಣ ಪುತ್ರೀ), (ಕ್ಷೀರಸಾಗರಕನ್ನಿಕೆ), ಯಜ್ಞನಾಮಕ ಶ್ರೀಹರಿಯ ಪತ್ನೀ **ದಕ್ಷಿಣಾದೇವಿ.** ಶ್ರೀನಿವಾಸನ ಪತ್ನಿ **ಪದ್ಮಾವತೀ.** (ಕಮಲದಲ್ಲಿ ಜನಿಸಿದ ಪದ್ಮಾವತಿಯನ್ನು ಕಮಲಾಲಯಾ ಎಂದೂ, ಭೃಗುಪುತ್ರಿ ಭಾರ್ಗವಿಯನ್ನು ಪದ್ಮಾ—ಎಂದೂ ಗ್ರಹಿಸಲಾಗಿದೆ).

ಬ್ರಹ್ಮಾಂಡಗತ ತ್ರಿಲೋಕಗಳಿಗೂ ಜನನಿಯಾದ್ದರಿಂದ, **ತ್ರಿಲೋಕೇಶ್ವರಿ**– ಎನಿಸುವಳು.

ತ್ರಿಲೋಕಾಧಿಪತಿ–ತ್ರಿವಿಕ್ರಮನಾಮಕನಾದ ಶ್ರೀಮನ್ನಾರಾಯಣ. ಅವನ ಪತ್ನಿಯೇ ತ್ರಿಲೋಕೇಶ್ವರೀನಾಮಕಳಾದ ಜಗಜ್ಜನನಿಯು.

ಶ್ರೀಹರಿಯಂತೆ ಕಾಲತಃ ದೇಶತಃ ಸಮವ್ಯಾಪ್ತಳು. ಸೂಕ್ಷ್ಮವಾದ ಅಣುವಸ್ತುಗಳಲ್ಲಿಯೂ (ಜೀವರ ಸ್ವರೂಪದೇಹ), ಬೃಹದಾಕಾರದ ಮಹತ್ತಿನಲ್ಲಿಯೂ (ಅವ್ಯಾಕೃತಾಕಾಶಾಂತ ವ್ಯಾಪ್ತಿ) ವಿದ್ಯಮಾನಳಾಗಿದ್ದಾಳೆ– ಶ್ರೀಹರಿಯ ಸಹಿತ.

ಜೀವಕೋಟಿಯಲ್ಲಿ ಯಾರೂ ಶ್ರೀಲಕ್ಷ್ಮೀದೇವಿಗೆ ಸರಿಸಮಾನರಿಲ್ಲ. ಬ್ರಹ್ಮಾದಿ ತೃಣಾಂತ ಸಮಸ್ತಜೀವವರ್ಗ ಶ್ರೀರಮಾಗಿಂತ ಅವರರು. ಇದರಿಂದ ಬ್ರಹ್ಮದೇವರ ವಿವಕ್ಷಯಾ **ಉಪಮಾನರಹಿತಳು.** ಶ್ರೀಹರಿಯ ವಿವಕ್ಷಯಾ, ಅನಂತಕೋಟಿಗುಣಗಳಿಂದ ನ್ಯೂನಳು.

ಹೀಗೆಯೇ, ಮತ್ಸ್ಯಾದಿ ಕಲ್ಕಿ ಪರ್ಯಂತ ದಶಾವತಾರೀ ಶ್ರೀಹರಿಯ ಪತ್ನೀ ರೂಪಗಳಿವೆ.

ಕೇಶವಾದಿ ಕೃಷ್ಣಾಂತ ಚತುರ್ವಿಂಶತಿಭಗವದ್ರೂಪಗಳ ಪತ್ನಿಯರ ರೂಪಗಳು. ಅಕಾರಾದಿ ಕ್ಷಕಾರಪರ್ಯಂತ ವರ್ಣವಾಚ್ಯ ಭಗವದ್ರೂಪಗಳ ಪತ್ನೀರೂಪಗಳು. ನಾರಾಯಣಾದಿ ಶತ ರೂಪಗಳು–ವಿಶ್ವಾದಿ ಸಹಸ್ರ ರೂಪಗಳು–ಅಚಿತ್ಯಾದ್ಯನಂತರೂಪಗಳ ಪತ್ನೀನಾಮಕಳಾಗಿ, ಅನಂತರೂಪಗಳಿಂದ ಶ್ರೀಲಕ್ಷ್ಮೀ ವಿದ್ಯಮಾನಳಾಗಿದ್ದು, ಲೋಕಜನನಿ ಎನಿಸಿದ್ದಾಳೆ. ॥4॥

★★

## ಪದ್ಯ-೫

**ಮೂಲ :–**

**ಘೋಟಕಾಸ್ಯನ ಮಡದಿಗಿಂತಲಿ ।**
**ಹಾಟಕೋದರ ಪವನರೀರ್ವರು ।**
**ಕೋಟಿಗುಣದಿಂಧಮರೆನಿಪರು ಆವ ಕಾಲದಲಿ ॥**
**ಖೇಟಪತಿ ಶೇಷಾಮರೇಂದ್ರರ ।**
**ಪಾಟುಮಾಡದೆ ಶ್ರೀಶನ ಕೃಪಾ ।**
**ಸೋಟದಿಂದಲ್ಲಿ ಸರ್ವರೊಳು ವ್ಯಾಪಾರ ಮಾಡುವರು ॥೫॥**

**ಅವತರಣಿಕೆ :–**

ಬ್ರಹ್ಮ, ವಾಯು, ಗರುಡ, ಶೇಷ, ರುದ್ರ, ಇಂದ್ರ–ಇವರ ತಾರತಮ್ಯಕ್ರಮವನ್ನು ತಿಳಿಸುತ್ತಾರೆ. ॥5॥

**ಪ್ರತಿಪದಾರ್ಥ :–**

**ಘೋಟಕಾಸ್ಯನ** = ಹಯವದನ ದೇವರ (ಘೋಟಕ-ಕುದುರೆ, ಆಸ್ಯ –ಮುಖ) **ಮಡದಿಗಿಂತಲಿ** = ಪತ್ನಿಯಾದ ಶ್ರೀಲಕ್ಷ್ಮೀದೇವಿಯರಿಗಿಂತ, **ಹಾಟಕೋದರ** = ಹಿರಣ್ಯಗರ್ಭನಾಮಕರಾದ ಶ್ರೀಬ್ರಹ್ಮದೇವರು (ಹಾಟಕ-ಚಿನ್ನ, ಉದರ–ಗರ್ಭ), **ಪವನರು** = ಶ್ರೀವಾಯುದೇವರು, **ಈರ್ವರು** =ಬ್ರಹ್ಮವಾಯುಗಳು. **ಕೋಟಿಗುಣದಿಂದ ಅಧಮರೆನಿಪರು** = ಕೋಟಿ ಗುಣಗಳಿಂದ ನ್ಯೂನರೆಂದು ಕರೆಯಿಸುವರು. **ಆವ ಕಾಲದಲಿ** = ಅನಾದ್ಯನಂತ ಕಾಲದಿಂದ. **ಖೇಟಪತಿ** ಪಕ್ಷಿರಾಜನಾದ ಶ್ರೀಗರುಡದೇವರು, (ಖೇ = ಆಕಾಶದಲ್ಲಿ ಅಟ = ಸಂಚರಿಸುವ ಪಕ್ಷಿವರ್ಗ) **ಶೇಷ** = ಶ್ರೀಶೇಷದೇವರು,

**ಅಮರೇಂದ್ರರ** = ದೇವತಾಶ್ರೇಷ್ಠರಾದ ಇಂದ್ರದೇವರು, **ಪಾಟುಮಾಡದೆ** = ಇತ್ಯಾದಿ ತತ್ತ್ವಾಭಿಮಾನಿದೇವತೆಗಳನ್ನು ಲಕ್ಷ್ಯಮಾಡದೇ, **ಶ್ರೀಶನ** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, **ಕೃಪಾನೋಟದಿಂದಲಿ** = ಕರುಣಾದೃಷ್ಟಿಯಿಂದ, **ಸರ್ವರೊಳು** = ಸಕಲತ್ರಿವಿಧಜೀವರುಗಳಲ್ಲಿ, **ವ್ಯಾಪಾರ ಮಾಡುವರು** = ಅವರವರ ಸ್ಥೂಲದೇಹಗತರಾಗಿದ್ದು, ತತ್ತ್ವ ವ್ಯಾಪಾರಗಳನ್ನು ಮಾಡುವರು. ॥5॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಬ್ರಹ್ಮ—ವಾಯುಗಳ ತಾರತಮ್ಯ ಹೇಳತಾರೆ.

ಹಯವದನದೇವರ ಪತ್ನಿಯಾದ ಲಕ್ಷ್ಮೀದೇವೇರಿಗಿಂತಲೂ, ಹಿರಣ್ಯ ಗರ್ಭನಾದ ಬ್ರಹ್ಮದೇವರು, ವಾಯುದೇವರು ಈ ಉಭಯರು ಸಮಾನರು ಎಂತ ತಾತ್ಪರ್ಯ. ಬಾಹ್ಯದಲ್ಲಿ ಪದಕೃತ, ಸಾಧನೀಕೃತ ತಾರತಮ್ಯ ಯಾವತ್ತೂ ಇರೋಣದರಿಂದ,ವರ್ತಮಾನದಲ್ಲಿ ಹೇಳತಕ್ಕ ತಾರತಮ್ಯ ಯಾವತ್ತೂ ಸ್ವರೂಪ ತಾರತಮ್ಯವೇ ಹೊರ್ತು ಬಾಹ್ಯವಲ್ಲ. ರಮಾದೇವೇರಿಗಿಂತಲೂ ಕೋಟಿಗುಣ ದಿಂದ ಅಧಮರು-ಎಂತ ಅನಸತಾರೆ. ರಮಾದೇವೇರು ಕೋಟಿವಿಜಾತಿಗುಣ ದಿಂದ ಅಧಿಕರು-ಎಂತ ತಾತ್ಪರ್ಯ. ಗುಣಗಳೊಳಗೆ ಸಜಾತಿಗುಣಗಳೆಂತಲೂ, ವಿಜಾತಿಗುಣಗಳೆಂತಲೂ ಎರಡು ವಿಧ. ಸಜಾತಿಗುಣಗಳೆಂದರೆ ಬ್ರಹ್ಮ-ವಾಯು ಗಳಲ್ಲಿ ಇರತಕ್ಕ ಗುಣಗಳು ರಮಾದೇವೇರಲ್ಲಿ ಇರೋಣ. ವಿಜಾತಿಗುಣ ಗಳೆಂದರೆ ಬ್ರಹ್ಮ-ವಾಯುಗಳಲ್ಲಿ ಇಲ್ಲದೇ ಇರುವ ಗುಣಗಳು ರಮಾದೇವೇರಲ್ಲಿ ಇರೋಣ; ಇದೇ ಸಜಾತಿ ಎಂಬುದು. ಬ್ರಹ್ಮ-ವಾಯುಗಳು ರಮಾದೇವೇರಿ ಗಿಂತಲೂ ವಿಜಾತಿಕೋಟಿಗುಣದಿಂದ ಅಧಮರು. ಇದೇ ಪ್ರಕಾರ, ಪರಮಾತ್ಮ ನಿಗಿಂತಲೂ ರಮಾದೇವೇರು ಅನಂತವಿಜಾತಿಗುಣದಿಂದ ಅಧಮರೆಂದು ತಾತ್ಪರ್ಯ. ಇದೇ ಪ್ರಕಾರ ಸರ್ವತಾರತಮ್ಯವು. ಅನಾದ್ಯನಂತಕಾಲಕ್ಕೂ

ಲಿಂಗಭಂಗಾನಂತರವೂ ಕೋಟಿಗುಣಕ್ಕೆ ಅವರರೆಂದು ತಾತ್ಪರ್ಯ. ಈ ಬ್ರಹ್ಮ-ವಾಯುಗಳು, ಆಕಾಶದಲ್ಲಿ ಸಂಚಾರಮಾಡುವ ಪಕ್ಷಿಗಳಿಗೆ ಸ್ವಾಮಿಯಾದ ಗರುಡದೇವರು, ಶೇಷದೇವರು, ದೇವತಾಶ್ರೇಷ್ಠನಾದ ಇಂದ್ರದೇವರು ಇವರೇ ಮೊದಲಾದ ತತ್ತ್ವದೇವತೆಗಳ ಲಕ್ಷ್ಯಮಾಡದೆ, ಲಕ್ಷ್ಮೀಪತಿಯಾದ ನಾರಾಯಣದೇವರ ಅಂತಃಕರಣಯುಕ್ತವಾದ ವೀಕ್ಷಣದಿಂದ ರುದ್ರಾದಿ ತೃಣಾಂತ ತ್ರಿವಿಧಜೀವರೊಳು ಇತರ ದೇವತಾಅಭಿಮನ್ಯಮಾನವಾದ ತತ್ತ್ವವ್ಯಾಪಾರಗಳ ಅವರವರ ಸ್ಥೂಲದೇಹದಲ್ಲಿ ಇವರೇ ಮಾಡುವರು, ಇಂಥಾ ಯೋಗ್ಯತೆಯುಳ್ಳವರು. ತದನ್ಯರಿಗೆ ಈ ಯೋಗ್ಯತಾ ಇಲ್ಲ ಎಂತ ತಾತ್ಪರ್ಯ. ॥5॥

೩. ಭಾವಪ್ರಕಾಶಿಕೆ :-

ಲಕ್ಷ್ಮೀದೇವಿಯರಕಿಂತಲೂ, ಬ್ರಹ್ಮವಾಯುಗಳಿಬ್ಬರೂ ಯಾವಕಾಲದಲ್ಲೂ ಅಂದರೆ ಮುಕ್ತರಾದ ಮೇಲೂ ಸಹ, ಕೋಟಿಗುಣಗಳಿಂದ ಕಮ್ಮಿಯೆನಿಸುವರು. ಗರುಡ ಶೇಷ ಇಂದ್ರಾದಿಗಳನ್ನು ಲಕ್ಷ್ಯಮಾಡದೆ, ಶ್ರೀಪರಮಾತ್ಮನ ಕೃಪಾಕಟಾಕ್ಷಬಲದಿಂದ ಸರ್ವಪ್ರಾಣಿಗಳಲ್ಲೂ ಇದ್ದು, ಸರ್ವೇಂದ್ರಿಯ ವ್ಯಾಪಾರಗಳನ್ನೂ ನಡೆಸುವರು. ಈ ಪದ್ಯದಲ್ಲಿ "ಗರುಡ ಶೇಷಾಮರೇಂದ್ರರ"-ಎಂದು ಗರುಡಶೇಷರನ್ನು ಮಾತ್ರ ಹೇಳಿರುವುದರಿಂದ, ರುದ್ರದೇವರನ್ನು ಸಾಟಿ ಮಾಡುವರೋ ಏನೋ-ಎಂದು ಶಂಕಿಸಬಾರದು. ರುದ್ರದೇವರೇ ಶೇಷಪದವಿಗೆ ಬರುವವರಾದುದರಿಂದ ಶೇಷದೇವರನ್ನು ಹೇಳಿದ ಮೇಲೆ ರುದ್ರದೇವರೂ ಇದರಲ್ಲಿ ಸೇರಿದವರೆಂಬ ತಾತ್ಪರ್ಯ.

೪. ಭಾವದರ್ಪಣ :-

ಏತೇಭ್ಯೋ ಶ್ರೀಸ್ತುಮುಕ್ತೇಭ್ಯೋ ಗುಣೈಃ ಕೋಟಿಗುಣೋತ್ತರಾಃ-ಎಂಬ ಬೃಹದ್ಭಾಷ್ಯಾನುಸಾರ ಲಕ್ಷ್ಮ್ಯಪೇಕ್ಷಯಾ ಕೋಟಿಗುಣನ್ಯೂನರಾದ ಬ್ರಹ್ಮವಾಯುಗಳ ಅವತಾರ ಹೇಳುತ್ತಾರೆ. । ಘೋಟಕಾಸ್ಯೇತಿ । ಘೋಟಕಾಸ್ಯನ ಮಡದಿ-ಹಯವದನನ ಪತ್ನಿ. ಹಾಟಕೋದರ-—ಹಿರಣ್ಯಗರ್ಭನಾದ

ಬ್ರಹ್ಮ, ಖೇಟಪತಿ–ಗಗನದಲ್ಲಿ ಸಂಚಾರಮಾಡತಕ್ಕ ಪಕ್ಷಿಶ್ರೇಷ್ಠ ಗರುಡ, ಸಾಟಿಮಾಡದೆ–ಲಕ್ಷ್ಯಮಾಡದೇ ಎಂಬರ್ಥ. ॥5॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ತದಧಃ ಕಕ್ಷಾಃ ಬ್ರೂತೇ–"ಘೋಟಕ" ಇತಿ॥ ಹಯನಾಮ॥ "ಹಾಟಕಂ" –ಸುವರ್ಣಂ. ಷಟ್‌ಪದೀರಕ್ಷಣಾಯ ಏವಮುಕ್ತಿಃ ॥ "ಖೇಟಃ" ಪಕ್ಷೀ ॥ ಪಾಟಿ–ಲಕ್ಷ್ಯ. ॥5॥

### ಕನ್ನಡಾರ್ಥ

ರಮಾದೇವಿಯರಕಿಂತಲೂ ಕಡಿಮೆಯ ಕಕ್ಷೆಯಲ್ಲಿ ಇರುವವರನ್ನು ತಿಳಿಸುತ್ತಾರೆ—"ಘೋಟಕ" ಎಂಬ ಪದ್ಯದಿಂದ. ಅಶ್ವಕ್ಕೆ ಘೋಟಕವೆಂದು ಹೆಸರು. ಅಂದರೆ, "ಹಯಗ್ರೀವ" ಎಂದು ಅಭಿಪ್ರಾಯ. ಸುವರ್ಣಕ್ಕೆ ಹಾಟಕವೆಂದು ಹೆಸರು. ಷಟ್‌ಪದೀವೃತ್ತವನ್ನು ಸಂರಕ್ಷಿಸಲು, ಹಾಟಕವೆಂಬುದಾಗಿ ಹೇಳಲಾಗಿದೆ. ಖೇಟ-ಆಕಾಶದಲ್ಲಿ ಸಂಚರಿಸುವದು-ಪಕ್ಷಿ. ಪಾಟಿಮಾಡದೆ-ಎಂದರೆ "ಲಕ್ಷ್ಯಕ್ಕೆ ತಾರದೇ"-ಎಂದು ಅರ್ಥ. ॥5॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಘೋಟಕಾಸ್ಯನೆಂಬ ಶ್ರೀಹಯವದನನ ಮಡದಿ ಎಂಬ ಪ್ರಾಣಕ್ಕಿಂತ ಪ್ರಿಯಪತ್ನಿಯಾದ ಶ್ರೀದೇವಿಗಿಂತಲೂ ಹಾಟಕೋದರನೆಂಬ ಹಿರಣ್ಯಗರ್ಭ ಬ್ರಹ್ಮನು,ಪವನನೆಂಬ ಪ್ರಾಣದೇವರು-ಇಬ್ಬರೂ ಸಹ, ಬಲ ಜ್ಞಾನಾದಿಗಳಲ್ಲಿ ಕೋಟಿಗುಣ ಕಡಿಮೆಯಾದವರು. ಮುಕ್ತಿಯಲ್ಲಿಯೂ, ಇಲ್ಲಿಯೂ ಸಹ ಖೇಟಪತಿ ಎಂಬ ಪಕ್ಷೀಂದ್ರ ಗರುಡ,ಶೇಷ,ಅಮರೇಂದ್ರ–ಮೊದಲಾದ ಸರ್ವದೇವತೆಗಳನ್ನು ಪಾಟಿಮಾಡದೆ-ಎಂದರೆ, ಸರಿ ಎಣಿಸದೆ, ಲಕ್ಷ್ಯಮಾಡದೆ, ಶ್ರೀಶನಾದ ದೇವರ ಕೃಪಾಬಲದಿಂದ ಸರ್ವತ್ರಕ್ರಿಯಾಪ್ರವರ್ತಕರು. ಮಡದಿ ಎಂಬ ಶಬ್ದದಲ್ಲಿ 'ಮಡ' ಎಂಬುದು ಶ್ವಾಸ ಪ್ರಾಣವಾಚಕ, ತತ್ಸಂಬಂಧರ್ಥದಲ್ಲಿ

'ದಿ'-ಎಂಬ ಪ್ರತ್ಯಯ ಪ್ರಾಣಕ್ಕಿಂತ ಪ್ರಿಯ ಎಂಬ ಅರ್ಥವು ಮಡದಿ ಎಂಬು ವಕ್ಕೆ ಅರ್ಥ ಆಗುತ್ತದೆ. 'ಮಾಗಿ ಮಡವಿಡ'—ಎಂಬ ಜೈಮಿನಿಭಾರತ ಪ್ರಯೋಗದಂತೆ. ||5||

## ಸರ್ವವ್ಯಾಖ್ಯಾನಸಾರಸಂಗ್ರಹ

**ಘೋಟಕ**–ಎಂದರೆ, ಅಶ್ವ ಎಂದರ್ಥ. **ಆಸ್ಯ**-ಎಂದರೆ, ಮುಖ ವೆಂದರ್ಥ. **ಘೋಟಕಾಸ್ಯ**–ಎಂಬ ಶಬ್ದದಿಂದ, ಶ್ರೀಹಯವದನದೇವ ರೆಂದರ್ಥ. ಚತುರ್ಮುಖಬ್ರಹ್ಮದೇವರಿಗೆ ಪ್ರಪ್ರಥಮವಾಗಿ ವೇದಾರ್ಥಗಳ ಉಪದೇಶವನ್ನು ನೀಡಿದ ಜ್ಞಾನಪ್ರದರೂಪವೇ ಶ್ರೀಹಯಗ್ರೀವರೂಪವು.

ಘೋಟಕಾಸ್ಯನ ಮಡದಿಯು ಶ್ರೀಲಕ್ಷ್ಮೀದೇವಿ. **ಹಾಟಕೋದರ**-- ಎಂದರೆ, ಹಿರಣ್ಯಗರ್ಭನಾಮಕರಾದ ಶ್ರೀಬ್ರಹ್ಮದೇವರು. ಶ್ರೀಮನ್ನಾರಾಯ ಣನು ಕ್ಷೀರಸಮುದ್ರದಲ್ಲಿ ಪದ್ಮನಾಭರೂಪದಿಂದ ಪವಡಿಸಿರಲು, ಅವನ ನಾಭೀಪ್ರದೇಶದಿಂದ ಲಕ್ಷ್ಮ್ಯಾತ್ಮಕವಾದ, ಸುವರ್ಣಕಾಂತಿಯುಕ್ತವಾದ ಕಮ ಲವು ಶ್ರೀಹರಿಯ ಇಚ್ಛೆಯಿಂದ ಉತ್ಪತ್ತಿಯಾಯಿತು. ಈ ಸುವರ್ಣಾತ್ಮಕವಾದ ಕಮಲದಲ್ಲಿ ಬ್ರಹ್ಮದೇವರು ಪ್ರಕಟರಾದ್ದರಿಂದ, ಅವರಿಗೆ "**ಹಿರಣ್ಯಗರ್ಭ**" ರೆಂದು ಹೆಸರು. ಹಾಟಕ–ಎಂದರೆ ಭಂಗಾರ. ಉದರ-ಎಂದರೆ ಗರ್ಭ. **ಹಾಟಕೋದರ**-ಎಂಬ ಶಬ್ದದಿಂದ ಹಿರಣ್ಯಗರ್ಭ-ಎಂಬ ಅರ್ಥವಾಗುವುದು.

ಶ್ರೀಹರಿಯ ಪ್ರಥಮಾಂಗಭೂತರೂ, ವಿಜ್ಞಾನ ತತ್ತ್ವಾಭಿಮಾನಿಗಳೂ, ಅಖಿಲಾತ್ಮಸಮರೂ ಆದ ಶ್ರೀಮುಖ್ಯಪ್ರಾಣದೇವರಿಗೆ--**ಪವನ**--ಎಂದು ಹೆಸರು.

ಶ್ರೀಬ್ರಹ್ಮದೇವರು (ಹಾಟಕೋದರ) ಮತ್ತು ಶ್ರೀವಾಯುದೇವರು (ಪವನ)–ಈರ್ವರು ಘೋಟಕಾಸ್ಯನ ಮಡದಿಯಾದ ಶ್ರೀಲಕ್ಷ್ಮೀದೇವಿಗಿಂತ ಕೋಟಿಗುಣದಿಂದ ಅಧಮರೆನಿಸುವರು.

ತಾರತಮ್ಯಕ್ರಮದಲ್ಲಿ, ಗುಣವೇ ಪ್ರಧಾನವಸ್ತು. ಗುಣದಲ್ಲಿ (1) ಸಜಾತೀಯ ಗುಣಗಳು ಮತ್ತು (2) ವಿಜಾತೀಯ ಗುಣಗಳು-ಎಂದು ಪ್ರಕಾರ. ಶ್ರೀರಮಾದೇವಿಯರಲ್ಲಿ ಬ್ರಹ್ಮವಾಯುಗಳಲ್ಲಿರುವ ಗುಣಗಳೆಲ್ಲವೂ ಇವೆ. ಇದಕ್ಕೆ ಸಜಾತೀಯಗುಣಗಳೆಂದರ್ಥ. ಆದರೆ,ಬ್ರಹ್ಮವಾಯುಗಳಲ್ಲಿ ಇಲ್ಲದಿರುವ ಗುಣ ಗಳು ಶ್ರೀಲಕ್ಷ್ಮೀದೇವಿಯರಲ್ಲಿ ವಿದ್ಯಮಾನವಾಗಿವೆ. ಇವು ವಿಜಾತೀಗುಣಗಳು. ವಿಜಾತಿಯಗುಣಗಳಿಂದ ಶ್ರೀಲಕ್ಷ್ಮೀದೇವಿಯು ಬ್ರಹ್ಮವಾಯುಗಳಿಗಿಂತಲೂ ಒಂದು ಕೋಟಿಗುಣಗಳಿಂದ ಉತ್ತಮಳು.

**ಅವಕಾಲದಲಿ**-ಎಂಬ ಶಬ್ದಪ್ರಯೋಗದಿಂದ, ಅನಾದ್ಯನಂತಕಾಲ ದಿಂದ-ಎಂದರ್ಥ. ಅಂದರೆ, ಲಿಂಗಭಂಗವಾದ ನಂತರವೂ, ಮೋಕ್ಷಸ್ಥಿತಿ ಯಲ್ಲೂ ಸಹ, ಬ್ರಹ್ಮವಾಯುಗಳು ಶ್ರೀಲಕ್ಷ್ಮೀದೇವಿಗಿಂತ ಕೋಟಿ ಗುಣಾ ಧಮರು.

**ಖೇ**-ಆಕಾಶದಲ್ಲಿ (ಸಪ್ತಮೀ ವಿಭಕ್ತಿ), **ಅಟಿ**-ಸಂಚರಿಸತಕ್ಕ ಪಕ್ಷಿವರ್ಗ ಎಂದರ್ಥ.

**ಖೇಟಪತಿ**-ಪಕ್ಷಿರಾಜನಾದ ಶ್ರೀಗರುಡದೇವರು. **ಶೇಷ**-ಸರ್ಪಶ್ರೇಷ್ಠ ರಾದ ಶ್ರೀಶೇಷದೇವರು.

**ಅಮರೇಂದ್ರ**-ಸುರಶ್ರೇಷ್ಠರಾದ ಇಂದ್ರದೇವರು. ಇಲ್ಲಿ ಭಾವೀಶೇಷ ರಾದ ಶ್ರೀರುದ್ರದೇವರೂ ಗ್ರಾಹ್ಯ.

ಅಂದರೆ, ಅಹಂಕಾರತತ್ತ್ವಾಭಿಮಾನಿಗಳಾದ, ಗರುಡ, ಶೇಷ, (ರುದ್ರ), ಇಂದ್ರ-ಇತ್ಯಾದಿ ದೇವತೆಗಳನ್ನು ಲಕ್ಷ್ಯಮಾಡದೆ (ಪಾಟುಮಾಡದೆ), ಅವರಿಗಿಂತ ಉತ್ತಮರಾದ ಬ್ರಹ್ಮ-ವಾಯುಗಳು ಶ್ರೀಲಕ್ಷ್ಮೀರಮಣನ ಕೃಪಾ ಬಲದಿಂದ, ಸಕಲ ತ್ರಿವಿಧಜೀವರುಗಳ ಸ್ಥೂಲದೇಹಗತ ಇಂದ್ರಿಯಗಳಲ್ಲಿದ್ದು, ಶ್ರೀಶನ ಆಣತಿಯಂತೆ, ತತ್ತ್ವವ್ಯಾಪಾರರೂಪವಾದ ವಿವಿಧಕ್ರಿಯೆಗಳನ್ನು

ಮಾಡುತ್ತಿರುವರು. ಬಿಂಬರೂಪೀ ಶ್ರೀಶನು ಸಕಲವ್ಯಾಪಾರಗಳನ್ನು **ತಾನೇ ಮಾಡಿ,** ಬ್ರಹ್ಮ-ವಾಯು-ತತ್ತ್ವಾಭಿಮಾನಿಸುರರ ದ್ವಾರಾ **ಮಾಡಿಸಿ,** ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನದ್ವಾರಾ **ಮಾಡಿ ಮಾಡಿಸುತ್ತಿರುವನು.** ॥5॥

**

## ಪದ್ಯ-೬

**ಮೂಲ :-**

**ಪುರುಷ ಬ್ರಹ್ಮ ವಿರಿಂಚಿ ಮಹಾ ।**
**ನ್ಮರುತ ಮುಖ್ಯಪ್ರಾಣ ಧೃತಿ ಸ್ಮೃತಿ ।**
**ಗುರುವರ ಮಹಾಧ್ಯಾತ ಬಲ ವಿಜ್ಞಾತ ವಿಖ್ಯಾತ ॥**
**ಗರಳ ಭುಗ್ಭವರೋಗ ಭೇಷಜ ।**
**ಸ್ವರ ವರಣ ವೇದಸ್ಥ ಜೀವೇ ।**
**ಶ್ವರ ವಿಭೀಷಣ ವಿಶ್ವಚೇಷ್ಟಕ ವೀತಭಯ ಭೀಮ ॥೬॥**

**ಅವತರಣಿಕೆ :-**

ಬ್ರಹ್ಮದೇವರು ಮತ್ತು ವಾಯುದೇವರ ಅವತಾರವಿಶೇಷಗಳನ್ನು ತಿಳಿಸುತ್ತಾರೆ. ॥6॥

**ಪ್ರತಿಪದಾರ್ಥ :-**

**ಪುರುಷಬ್ರಹ್ಮ=** ಪುರುಷನಾಮಕ ಬ್ರಹ್ಮ, **ವಿರಿಂಚಿ=** ಮಹತ್ತತ್ತ್ವತನುವಿಶಿಷ್ಟನಾದ ವಿರಿಂಚಿನಾಮಕ ಬ್ರಹ್ಮನು. **ಶಾಂತೀದೇವಿಯಲ್ಲಿ ಅನಿರುದ್ಧ**

ನಿಂದ ಜನಿತನು. ಕಾಲನಾಮಕನು ವಾಸುದೇವನಿಂದ ಮಾಯಾದೇವಿಯಲ್ಲಿ ಸೃಷ್ಟಿಯಾದವನು. ಅಂಡದ ಒಳಗೆ ಶ್ರೀಲಕ್ಷ್ಮೀನಾರಾಯಣರಿಂದ ಚತುರ್ಮುಖಬ್ರಹ್ಮನು ಸೃಷ್ಟನಾದನು. **ಮಹಾನ್ ಮರುತ**= ಜೀವೋತ್ತಮರಾದ ಮರುತನಾಮಕ ಶ್ರೀವಾಯುದೇವರು, **ಮುಖ್ಯಪ್ರಾಣ** = ಪ್ರಧಾನ ಪ್ರಾಣದೇವರು, **ಧೃತಿ**= ಧೈರ್ಯಶಾಲಿಗಳೂ, **ಸ್ಮೃತಿ**= ಭಗವದ್ವಿಷಯದಲ್ಲಿ ಅತಿರೋಹಿತವಿಮಲವಿಜ್ಞಾನಿಗಳೂ, **ಗುರುವರ**= ಗುರುಶ್ರೇಷ್ಠರೂ (ತ್ರೈಲೋಕ್ಯಾಚಾರ್ಯ), **ಮಹಾಧ್ಯಾತ**= ಶ್ರೇಷ್ಠರಾದ ರುದ್ರಾದಿ ಮುಕ್ತಿಯೋಗ್ಯಜೀವರಿಂದ ಧ್ಯಾನಕ್ಕೆವಿಷಯರೂ, **ಬಲ** = ದೇಹದಲ್ಲಿ ಬಲಿಷ್ಠರೂ, **ವಿಜ್ಞಾತ**= ಜಗದ್ವಿಷಯಕವಾದ ಜ್ಞಾನವನ್ನು ವಿಶೇಷವಾಗಿ ತಿಳಿದವರೂ, **ವಿಖ್ಯಾತ**= ಜಗತ್ಪ್ರಸಿದ್ಧರೂ, **ಗರಳಭುಕ್**= ಸಮುದ್ರಮಥನಕಾಲದಲ್ಲಿ ಉತ್ಪತ್ತಿಯಾದ ಹಾಲಾಹಲವೆಂಬ ಕಲಿಸ್ವರೂಪವಾದ ಮಹಾವಿಷವನ್ನು ಪಾನ ಮಾಡಿದವರೂ, **ಭವರೋಗ**= ಜನನಮರಣಾಖ್ಯವಾದ ಸಂಸಾರವೆಂಬ ರೋಗಕ್ಕೆ, **ಭೇಷಜ**= ವೈದ್ಯಸ್ವರೂಪರೂ, **ಸ್ವರ**= ಉದಾತ್ತ, ಅನುದಾತ್ತಾದಿ ಸ್ವರಗಳು, **ವರಣ**= ಅಕಾರಾದಿ 51 ಅಕ್ಷರಗಳು, **ವೇದ** = ಅಪೌರುಷೇಯವಾದ ವೇದಗಳು, **ಸ್ಥ** = ಇವುಗಳಲ್ಲಿ ತತ್ತದಾಕಾರದಿಂದ ಇರುವವರೂ, **ಜೀವೇಶ್ವರ**= ತ್ರಿವಿಧಜೀವರಿಗೆ ಪ್ರಭುವಾದ (ಲಕ್ಷ್ಮೀನಾರಾಯಣರ ವ್ಯತಿರಿಕ್ತ), **ವಿಭೀಷಣ**= ತಮೋಯೋಗ್ಯರಾದ ದೈತ್ಯರಿಗೆ ಭಯಂಕರ ಸ್ವರೂಪರೂ, **ವಿಶ್ವಚೇಷ್ಟಕ**= ವಿಶ್ವದಲ್ಲಿ ಇರುವ ಸಕಲ ಜೀವರಲ್ಲಿ ಚೇಷ್ಟಾಕರ್ತರೂ, **ವೀತಭಯ** = ಭಯವಿದೂರರೂ, **ಭೀಮ** = ಮಹಾಪರಾಕ್ರಮಶಾಲಿಗಳೂ (ಭೀಮಸೇನನ ಅವತಾರಭೂತರೂ) **ಮುಖ್ಯಪ್ರಾಣ**= ಆದ ಸೂತ್ರನಾಮಕ ಪ್ರಧಾನಪ್ರಾಣದೇವರು. ॥6॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಬ್ರಹ್ಮವಾಯುಗಳ ಅವತಾರಗಳ ಹೇಳಿತಾರೆ.

ಪುರುಷನಾಮಕಬ್ರಹ್ಮ. ಮಹತತ್ತ್ವತನುವಾದ ಈ ವಿರಿಂಚಿಬ್ರಹ್ಮನು ಶಾಂತೀದೇವೀರಲ್ಲಿ ಅನಿರುದ್ಧನಿಂದ ಜನಿತನು. ಕಾಲನಾಮಕನು ಮಾಯಾ ದೇವಿಯರಲ್ಲಿ ವಾಸುದೇವನಿಂದ ಜನಿತನು. ಅಂಡದ ಒಳಗೆ ಲಕ್ಷ್ಮೀನಾರಾಯಣರಿಂದ ಚತುರ್ಮುಖಬ್ರಹ್ಮನು ಜನಿತನು. ಅಂತು ನಾಲ್ಕು ಬ್ರಹ್ಮರೂಪಗಳು. ಮರುತಗಣದೊಳಗೆ ಶ್ರೇಷ್ಠರಾದ ಜೀವೋತ್ತಮರಾದ ರುದ್ರಾದಿ ದೇವತಾಪೇಕ್ಷಯಾ ಧೈರ್ಯಶಾಲಿಗಳಾದ, ಭಗವದ್ವಿಷಯದಲ್ಲಿ ತಿರೋಧಾನ ರಹಿತವಾದ ಸ್ಮೃತಿಯುಕ್ತರಾದ ಸ್ವೋತ್ತಮ ಸ್ವೋತ್ತಮಗುರುಗಳೊಳಗೆ ಉತ್ತಮರಾದ, ತ್ರಿವಿಧಜೀವರೊಳಗೆ ಶ್ರೇಷ್ಠರಾದ ರುದ್ರಾದಿ ಮುಕ್ತಿಯೋಗ್ಯ ಜೀವರಿಂದ ಧ್ಯಾನಮಾಡಿಸಿಕೊಂಬೋದಕ್ಕೆ ಯೋಗ್ಯರಾದ, ದೇಹದಲ್ಲಿ ಬಲಿಷ್ಠರಾದ, ರುದ್ರಾದ್ಯಪೇಕ್ಷಯಾ ಜಗದ್ವಿಷಯಕವಾದ ಜ್ಞಾನವನ್ನು ವಿಶೇಷಾಕಾರವಾಗಿ ತಿಳಿದವರಾದ, ಸಮುದ್ರಮಥನಕಾಲದಲ್ಲಿ ಉತ್ಪನ್ನವಾದ ಹಾಲಾಹಲವನ್ನು ಉಂಡವರು. ಸಂಸಾರವೆಂಬೋ ರೋಗಕ್ಕೆ ಔಷಧರೂಪವಾದ ಜ್ಞಾನಪ್ರದರಾದ, ಉದಾತ್ತಾನುದಾತ್ತಾದಿ ಸ್ವರಗಳಲ್ಲೇನು, ಅಕಾರಾದಿ ಅಕ್ಷರಗಳಲ್ಲೇನು,ಚತುರ್ವೇದಗಳಲ್ಲಿ ತದಾಕಾರದಿಂದ ಇರತಕ್ಕವರು. ರಮಾ-ಮಧುಸೂದನರ ವ್ಯತಿರಿಕ್ತ,ರುದ್ರಾದಿ ತೃಣಾಂತ ತ್ರಿವಿಧಜೀವರಿಗೆ ಸ್ವಾಮಿಯಾದವರಾದ, ಭಗವದ್ದ್ವೇಷಿಗಳಾದ ದೈತ್ಯರಿಗೆ ಭಯಂಕರವಾದ ಹನುದ್ರೂಪವೇನು, ಚರಾಚರಗಳಲ್ಲಿ ವ್ಯಾಪ್ತರಾಗಿ, ಜೀವರಲ್ಲಿ ಸರ್ವವ್ಯಾಪಾರಗಳ ಮಾಡಿಸತಕ್ಕವರು,ಸೂತ್ರನಾಮಕರಾದ ಈ ಪ್ರಾಣದೇವರು. ದೈತ್ಯರ ಭಯವಿಲ್ಲದವರು. ದ್ವಿತೀಯಾವತಾರರಾದ ಭೀಮಸೇನದೇವರು. ಸರ್ವವಿಷಯ

ದಲ್ಲೂ, ಈ ವಾಯುದೇವರು ಶ್ರೀಪರಮಾತ್ಮನಲ್ಲಿ ಅತಿಶಯವಾದ ವ್ಯಾಪ್ತಿ ಹೊಂದಿದವರು-ಎಂತ ತಾತ್ಪರ್ಯ. ॥6॥

**೨. ಭಾವಪ್ರಕಾಶಿಕೆ :-**

ಮಹಾಭಾರತ ತಾತ್ಪರ್ಯನಿರ್ಣಯ ಮೂರನೆಯ ಅಧ್ಯಾಯದಲ್ಲಿ "**ವ್ಯೂಢಶ್ಚತುರ್ಧಾ ಭಗವಾನ್ ಸ ಏಕೋ ಮಾಯಾಂ ಶ್ರಿಯಂ ಯಂ ಸೃಷ್ಟಿವಿಧಿತ್ಸಯಾರ ॥ ರೂಪೇಣ ಪೂರ್ವೇಣ ಸ ವಾಸುದೇವ ನಾಮ್ನಾ ವಿರಿಂಚಂ ಸುಷುವೇಚಸಾತಃ ॥9॥ ಸಂಕರ್ಷಣಾಶ್ಚಾ ಪಿ ಜಯಾ ತನೂಜೋ ಬಭೂವ ಸಾಕ್ಷಾದ್ಬಲಸಂವಿದಾತ್ಮಾ ॥ ವಾಯುರ್ಯ ಏವಾಥ ವಿರಿಂಚಿನಾ ಮಾಭವಿಷ್ಯ ಅಧ್ಯೋ ನ ಪರಸ್ತತೋಽಹಿ ॥10॥ ಸೂತ್ರಂ ಸ ವಾಯುಃ ಪುರುಷೋ ವಿರಿಂಚಿಃ** ." ಇದರರ್ಥ :- ಶ್ರೀಮನ್ನಾರಾಯಣನು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ-4 ರೂಪಗಳನ್ನು ಮೊಟ್ಟಮೊದಲು ಧರಿಸಿ, ಸೃಷ್ಟಿಮಾಡುವ ಉದ್ದೇಶದಿಂದ ಮೊದಲನೆಯದಾದ ವಾಸುದೇವರೂಪದಿಂದ ಲಕ್ಷ್ಮೀದೇವಿಯರ ಮೊದಲನೆಯ ರೂಪವಾದ ಮಾಯಾದೇವಿಯನ್ನು ಸ್ವೀಕರಿಸಿದನು. ಆ ಮಾಯಾದೇವಿಯರು ವಾಸುದೇವನಾಮಕ ಪರಮಾತ್ಮನ ದೆಸೆಯಿಂದ ವಿರಿಂಚನನ್ನು ಪಡೆದರು. ॥9॥ ಬಲಜ್ಞಾನಾತ್ಮಕರಾದ ವಾಯುದೇವರು ಸಂಕರ್ಷಣನ ದೆಸೆಯಿಂದ ಜಯಾದೇವಿಯರ ಕುಮಾರರಾಗಿ ಜನಿಸಿದರು. ಈ ವಾಯುದೇವರೇ ಮುಂದಿನ ಕಲ್ಪದಲ್ಲಿ ವಿರಿಂಚಿ ಎಂಬ ಹೆಸರಿನಿಂದ ವಾಸುದೇವನ ದೆಸೆಯಿಂದ ಮಾಯಾದೇವಿಯಲ್ಲಿ ಮೊದಲನೆಯ ಕುಮಾರರಾಗಿ ಜನಿಸುವರು. ಆದ್ದರಿಂದಲೇ ದೇವತೆಗಳ ಪೈಕಿ ಇವರಕಿಂತಲೂ ಉತ್ತಮರಾದವರು ಮತ್ತಾರೂ ಇಲ್ಲ. ಹೀಗೆ ಸಂಕರ್ಷಣನ ದೆಸೆಯಿಂದ ಜಯಾದೇವಿಯರಲ್ಲಿ ಜನಿಸಿದ ರೂಪಕ್ಕೆ **ಸೂತ್ರ** ಎಂದು ಹೆಸರು. ಮಾಯಾದೇವಿಯಲ್ಲಿ ಜನಿಸಿದ ವಿರಿಂಚನೇ ಪುರುಷ ಎಂದು ಹೇಳಿರುವರು. ಈ ಪುರುಷರೂಪವೇ ಬ್ರಹ್ಮಾಂಡಶರೀರಕ್ಕೆ ಅಭಿಮಾನರೂಪವು. ಅನಿರುದ್ಧನ ದೆಸೆಯಿಂದ ಶಾಂತೀದೇವಿಯರಲ್ಲಿ ಇದೇ ವಿರಂಚಿನಾಮಕಬ್ರಹ್ಮದೇವರೇ ಮಹತ್ತತ್ವಾಭಿಮಾನಿಯಾಗಿ ಸ್ಥೂಲದೇಹದಿಂದ ಜನಿಸಿರುವರು. ಆದ್ದರಿಂದ **ಮಹಾನ್** ಎಂದು ಹೆಸರು. ಪರಮಾತ್ಮನ ನಾಭೀ

ಕಮಲದ ದೆಸೆಯಿಂದ ನಾಲ್ಮೊಗ ಬ್ರಹ್ಮದೇವರು ಜನಿಸಿರುವರು. ಹೀಗೆ ಬ್ರಹ್ಮದೇವರಿಗೆ ನಾಲ್ಕು ಹೆಸರುಗಳು, 4 ರೂಪಗಳೆಂದು ತಿಳಿಯಬೇಕು. ಇವರಿಗೆ ಭೂಮಿಯಲ್ಲಿ ಅವತಾರವಿಲ್ಲ. ವಾಯುದೇವರು ಕೇವಲ ಬಲಜ್ಞಾನಾತ್ಮಕರೆಂದು ನಿರ್ಣಯವಾಕ್ಯ ಸ್ಪಷ್ಟವಾಗಿರುವುದು. ಅಲ್ಲದೆ, ನಿರ್ಣಯ ಎರಡನೆಯ ಅಧ್ಯಾಯದಲ್ಲಿ "ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಸ್ಥಿತಿಃ ॥ ಯೋಗಃ ಪ್ರಾಣೋ ಬಲಂಚೈವ ವೃಕೋದರ ಇತಿ ಸ್ಮೃತಃ ॥44॥ ಏತದ್ದಶಾತ್ಮಕೋ ವಾಯುಃ ತಸ್ಮಾದ್ಭೀಮದಾತ್ಮಕಃ ॥ ಭಕ್ತಿ, ಜ್ಞಾನ, ವೈರಾಗ್ಯ, ಬುದ್ಧಿ, ಜ್ಞಾಪಕಶಕ್ತಿ, ಧೈರ್ಯ, ಸ್ಥೈರ್ಯ, ಪ್ರಾಣ, ಬಲ ಇವು ಹತ್ತೂ ಭೀಮಸೇನಸ್ವರೂಪವು. ಏಕೆಂದರೆ, ವಾಯುದೇವರು ಈ ಹತ್ತರ ಸ್ವರೂಪರು. ಅವರೇ ಭೀಮಸೇನರೂಪರು. ಆದ್ದರಿಂದ, ಭೀಮಸೇನದೇವರೂ ತದಾತ್ಮಕರೆಂದು ಹೇಳಿರುವರು. ಮರುತ ಮುಖ್ಯಪ್ರಾಣಾದಿ ಪದಗಳಿಗೆ ಪದ್ಯಾರ್ಥದಲ್ಲೇ ಅರ್ಥಗಳು ಬರೆಯಲ್ಪಟ್ಟಿವೆ.

ಗರಳಭುಕ್ = ವಿಷವನ್ನುಂಡವರೆಂದು ಹೇಳಿದುದು ಯಾವ ಆಧಾರ ? ಯಾವ ಕಾಲದಲ್ಲೆಂದರೆ, ದೇವ ದೈತ್ಯರೆಲ್ಲರೂ ಸೇರಿ ಭಗವದಾಜ್ಞಾಪ್ರಕಾರ, ಸಮುದ್ರಮಥನ ಮಾಡುವ ಕಾಲದಲ್ಲಿ, ಘೋರವಾದ ಹಾಲಾಹಲವೆಂಬ ವಿಷವು ಹುಟ್ಟಿತು. ಆಗ ಭಗವದಾಜ್ಞಾಪ್ರಕಾರ, ಆ ವಿಷವನ್ನು ವಾಯುದೇವರು ಪಾನ ಮಾಡಿರುವರು. ಇದಕ್ಕೆ ಆಧಾರ-ನಿರ್ಣಯ 10ನೆಯ ಅಧ್ಯಾಯದಲ್ಲಿ—"ತದಾ ಜಗದ್ಗ್ರಾಸಿ ವಿಷಂ ಸಮುತ್ಥಿತಂ ತ್ವದಾಜ್ಞಯಾ ವಾಯುರಧಾತ್ಕರೇನಿಜೇ ॥13॥ ಕಲೇಃ ಸ್ವರೂಪಂ ತದತೀವ ದುಸ್ಸಹಂ ವರಾದ್ವಿಧಾತುಃ ಸಕಲೈಶ್ಚ ದುಸ್ಸ್ಪೃಶಂ ॥ ಕಲೇಃ ವಿಮಥ್ಯಾಸ್ತ ಬಲಂ ವಿಧಾಯ ದದೌಸ ಕಿಂಚಿದ್ಗಿರೀಶಾಯ ವಾಯುಃ ॥14॥ ಸತತ್ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಛಿತ ಆಶುರುದ್ರಃ ॥ ಹರೇಃ ಕರಸ್ಪರ್ಶ ಬಲಾತ್ಸಸಂಜ್ಞಾಮವಾಪ ನೀಲೋಸ್ಯಗಲಸ್ತದಾಸೀತ್ ॥15॥ ಅಥತ್ವದಾಜ್ಞಾಂ ಪುರತೋನಿಧಾಯ ಪಾತ್ರೇ ತಪನೀಯರೂಪೇ ॥ ಸ್ವಯಂತ್ವ ನಿರ್ಮಥ್ಯ ಬಲೋಪಪನ್ನಂ ಪಪೌಸ ವಾಯುಸ್ತದುತಾಸ್ಯ ಜೀರ್ಣಂ ॥16॥ ಅತ್ಯಲ್ಪ ಪಾನಾಚ್ಚ ಬಭೂವ ಶೂಲಾ ಶಿವಸ್ಯ

ಶೀಘ್ರೋರ್ಸ್ಯಕರಾವ ಶಿಷ್ಟಂ ॥ ಅಭೂತ್ಕಲಿಸ್ಸರ್ವ ಜಗತ್ಸು ಪೂರ್ಣಂ ಪೀತ್ವಾ ವಿಷಾರೋನ ಬಭೂವ ವಾಯೋಃ ॥17॥

(ವ್ಯಾಸಾವತಾರಕ್ಕಾಗಿ ಪರಮಾತ್ಮನನ್ನು ದೇವತೆಗಳು ಪ್ರಾರ್ಥನೆ ಮಾಡುವ ಸಂದರ್ಭ) ಎಲೈ ದೇವಾದಿದೇವ ! ದೇವತೆಗಳಿಗೂ, ದೈತ್ಯರೂ ಸಹ ಶ್ರಾಂತ ರಾಗಿ ಅಮೃತಮಥನ ಕಾರ್ಯವನ್ನು ಬಿಟ್ಟು ಬಿಡಲು ನೀನೊಬ್ಬನೇ ಮಂದರಾಚಲ ವನ್ನು ಮಥನಮಾಡುತ್ತಿರಲು, ಜಗತ್ತನ್ನೇ ಭಕ್ಷಿಸುವ ವಿಷವು ಹುಟ್ಟಿತು. ಆಗ,ನಿನ್ನ ಅಪ್ಪಣೆಯ ಮೇರೆಗೆ ವಾಯುದೇವರು ಆ ವಿಷವನ್ನು ಪಾನಮಾಡಲು ಕೈಯಲ್ಲಿ ತೆಗೆದುಕೊಂಡರು. ಆ ವಿಷವು ಕೇವಲ ಕಲಿಸ್ವರೂಪವಾದುದು. ಬ್ರಹ್ಮದೇವರ ವರದಿಂದ ಯಾರೂ ಮುಟ್ಟಲು ಸಹ ಸಾಧ್ಯವಲ್ಲದೆ, ಯಾರಿಂ ದಲೂ ಸಹಿಸಲು ಅಶಕ್ಯವಾದುದಾಗಿದ್ದಿತು. ಅಂತಹವನ್ನು ವಾಯುದೇವರು ಪಾನಮಾಡುವಷ್ಟರಲ್ಲಿ, ದೇವತೆಗಳಿಂದ ಪ್ರಾರ್ಥಿತರಾಗಿ, ರುದ್ರದೇವರು ಪಾನ ಮಾಡುವೆನೆಂದು ಅಲ್ಲಿಗೆ ಬರಲು, ವಾಯುದೇವರು ಆ ವಿಷಯದಲ್ಲಿ ಸ್ವಲ್ಪ ವನ್ನು ತಮ್ಮ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ತಿಕ್ಕಿ, ವಿಷದ ಬಲವನ್ನು ಉಡು ಗಿಸಿ, ರುದ್ರದೇವರಿಗೆ ಕೊಟ್ಟರು. ಅಷ್ಟು ಮಾತ್ರ ವಿಷವನ್ನು ರುದ್ರದೇವರು ಪಾನಮಾಡಿದ ಕೂಡಲೇ, ಆ ವಿಷವು ಗಂಟಲಲ್ಲಿ ತಗಲಿ, ತಕ್ಷಣ ಮೂರ್ಛಿತರಾಗಿ ಕೆಳಗೆ ಬಿದ್ದುಬಿಟ್ಟರು. ತದನಂತರ, ಶ್ರೀಪರಮಾತ್ಮನು ಕರದಿಂದ ಸ್ಪರ್ಶ ಮಾಡಲು,ಕರಸ್ಪರ್ಶದ ಬಲದಿಂದ ರುದ್ರದೇವರು ಎಚ್ಚೆತ್ತರು. ಆದರೂ, ಅವರ ಕತ್ತಿನಲ್ಲಿ ಕಪ್ಪು – ನೀಲಕಂಠನೆಂಬ ಹೆಸರು ಬಂತು. ಆದರ ಮೇಲೆ, ವಾಯುದೇವರು ನಿನ್ನ ಅಪ್ಪಣೆಯನ್ನು ಸ್ವೀಕರಿಸಿ, ಭಂಗಾರದ ಪಾತ್ರೆಯಲ್ಲಿ ಆ ವಿಷವನ್ನೆಲ್ಲಾ ಹಾಕಿಕೊಂಡು, ತಾನು ಆ ವಿಷವನ್ನು ತಿಕ್ಕದೆ.ಏನೂ ಮಾಡದೇ ಬಲಪೂರ್ಣವಾದುದನ್ನು ಹಾಗೇ ಪಾನಮಾಡಿದರು. ಅದು ವಾಯುದೇವರಿಗೆ ಜೀರ್ಣವಾಯಿತು. ರುದ್ರದೇವರು ಅತ್ಯಲ್ಪವಿಷವನ್ನು ಪಾನಮಾಡಿದುದ ರಿಂದ,ಅವರಿಗೆ ತಲೆಯಲ್ಲಿ ಶೂಲೆಯು ಸ್ಥಿರವಾಗಿ ನಿಂತು ಹೋಯಿತು. ರುದ್ರ ದೇವರ ಕೈಯಲ್ಲಿ ಉಳಿದ ವಿಷವು ಕಲಿಸ್ವರೂಪವಾಗಿ ಸರ್ವಜಗತ್ತಿನಲ್ಲೂ ಪೂರ್ಣ

ವಾಯಿತು. ಅಂತಹಾ ವಿಷವನ್ನು ಸಂಪೂರ್ಣವಾಗಿ ಪಾನಮಾಡಿದರೂ ವಾಯುದೇವರಿಗೆ ಯಾವ ವಿಕಾರವೂ ಆಗಲಿಲ್ಲ—ಎಂದು ಹೇಳಿರುವರು. ಆ ಅಭಿಪ್ರಾಯವನ್ನೇ ದಾಸರಾಯರು ಗರಳಭುಕ್-ಎಂಬ ಪದದಿಂದ ಹೇಳಿರುವರು. ಮಿಕ್ಕ ಪದಗಳ ಅರ್ಥವು ಪದ್ಯಾರ್ಥದಲ್ಲಿ ನೋಡತಕ್ಕದ್ದು. ॥6॥

## ೩. ಭಾವದರ್ಪಣ :-

ಬ್ರಹ್ಮನ ರೂಪದ ವಿವರ । ಪುರುಷೇತಿ । ಪುರುಷನಾಮಕ ವಿಧಿ ಕಾಲನಾಮಕವಿಧಿ ಈ ಉಭಯುತರೂ ಶ್ರೀವಾಸುದೇವ ಮಾಯಾದೇವಿಯರಿಂದ ಜನಿತರು । ಮಹತ್ತತ್ವತನುನಾದ ವಿರಿಂಚಿ ಅನಿರುದ್ಧ ಶಾಂತಿಯರಿಂದ ಉತ್ಪನ್ನ । ಶ್ರೀನಾರಾಯಣನ ನಾಭೀಕಮಲದಿಂದ ಚತುರ್ಮುಖಬ್ರಹ್ಮ ಸೃಷ್ಟನಾದವ । ಈ ವಿಷಯದಲ್ಲಿ ಸುಳಾದಿಮಾನ । "ಪುರುಷನಾಮಕವಿಧಿ ಕಾಲನಾಮಕವಿಧಿ ತುರೀಯರೂಪನಾದ ವಾಸುದೇವನಿಂದ ಜನಿತರಾಗಿಹರಯ್ಯಾ । ಸಿರಿಶಾಂತಿಯ ನಿರುದ್ಧ ದೇವನಾತ್ಮಜನೆನಿಸಿ ಪರಮ ಮಹತ್ತತ್ವತನುವಿಧಿ ಪುಟ್ಟಿಹನು । ಕರಿವರದನಾರಾಯಣನ ನಾಭೀಕಮಲದಿಂದ ಚತುರಾನನಾವಿಧಿ ಜನಿಸಿಹ । ಕೇಳೋ ಮನವೇ ವಿರಿಂಚಿಗೆ ಅವತಾರ ಭುವಿಯಲ್ಲಿ ಇಲ್ಲ ಕಾಣೋ। ನಿರ್ದುಷ್ಟರೂಪಗಳು ಸದಾಕಾಲಾ ಕರುಣಾಕಾರ ಶ್ರೀಪುರಂದರವಿಠ್ಠಲನ ಚರಣವ ಮನದಲ್ಲಿಟ್ಟು ಮೆರಿಯುವರೂಪ ಕಂಡೆಯಾ" । ಎಂದು ದಾಸರಾಜರು ಹೇಳಿರೋದಲ್ಲದೇ, ಇದೇ ವಿಷಯದಲ್ಲಿ ಮತ್ತೊಂದು ಪ್ರಮಾಣ । ಉಕ್ತಂಚ ಗಾರುಡೇ । ರೂಪೈಶ್ಚತುಷ್ಟಯೈಶ್ಚೈವ ಬ್ರಹ್ಮಣಃ ಪರಮೇಷ್ಠಿನಃ । ಪ್ರಜ್ಞಯಾ ಸಹಸಾಯುಸ್ಯ ನಾಸ್ತಿ ಲೋಕೇ ಚತುರ್ದಶೇ । ಶುಕ್ಲಶೋಣಿತ ಸಂಬಂಧಹ್ಯವತಾರ ಚತುಷ್ಟಯೇ ನಾಸ್ತ್ಯೇವ ಪಕ್ಷೀಂದ್ರೇತಿ"-ಎಂಬ ಮಾನದಿಂದ ರೂಪಚತುಷ್ಟಯ ಸಿದ್ಧ । ಇನ್ನು ಶ್ರೀವಾಯುದೇವರ ರೂಪಗಳು ಹೇಳುತ್ತದೆ । ಮಹಾತ್ಮರು ತೇತಿ । ಪಂಚಾಶನ್ಮರುತಗಳಿಗೆ ಪ್ರೇರಕ । ಸರ್ವರಿಗೂ ಪ್ರಾಣಭೂತನಾದ್ದರಿಂದ ಮುಖ್ಯಪ್ರಾಣನಾಮ । ಶ್ರೀವ್ಯಾಸಮೂರ್ತಿಯ ಚರಣ ಪರಮ ಧೈರ್ಯದಿಂದ ಸ್ಮರಣೆ ಮಾಡಿದ ಪ್ರಯುಕ್ತ ಧೃತಿಯೆಂದು ನಾಮ । ಸಜ್ಜನರಿಗೆ ಭಗವಸ್ಮೃತಿ

ಕೊಡೋಣದರಿಂದ ಸ್ಮೃತಿಯೆಂದು ನಾಮ । ಸರ್ವಚೇತನಕ್ಕೂ ಮುಖ್ಯಗುರು ವಾದ ಪ್ರಯುಕ್ತ ಗುರುವರಯೆಂದು ನಾಮ । ಶ್ರೀಪರಮಾತ್ಮನನ್ನು ಮನ ಸ್ಸಿನಲ್ಲಿಟ್ಟು ಧ್ಯಾನಮಾಡಿದ ಪ್ರಯುಕ್ತ ಮಹಾಧ್ಯಾತ್ಮಾ ಎಂದು ನಾಮ । ಬಲ ದಾಯಕನಾದ್ದರಿಂದ ಬಲ ಎಂದು ನಾಮ । ವಿಶೇಷ ತಿಳಿದವನಾದ ಪ್ರಯುಕ್ತ ವಿಜ್ಞಾತಾ ಎಂದು ನಾಮ । ಏವಂ ರೀತ್ಯಾ, ಜ್ಞಾನಿಗಳಿಂದ ತಿಳಿದು ಪ್ರತಿ ಶಬ್ದಕ್ಕೂ ಅರ್ಥಮಾಡಿಕೊಳ್ಳಬೇಕು । ಗ್ರಂಥಗೌರವ ಭೀತಿಯಿಂದ ಸಂಕೋಚ ಮಾಡಿರುತ್ತದೆ । ಅನಿಲೇತಿ । ರೂಪಗಳ ವಿಷಯದಲ್ಲಿ ಪ್ರಮಾಣ । "ವಿರಿಂಚಿಶ್ಚ ಮಹಾ‌ಬ್ರಹ್ಮಾ ಪ್ರಾಣಃ ಸೂತ್ರಂ ಧೃತಿಃ ಸ್ಮೃತಿಃ । ಮೇಧಾ ಮುಕ್ತಿರ್ವಿಷ್ಣು ಭಕ್ತಿಶ್ಚಿತ್ತಂ ವಾಯುರ್ಮಹಾ ಪ್ರಭುಃ । ಬಲಂ ಸ್ಥಿತಿ ಋಜುರ್ಯೋಗಃ ಪ್ರಜ್ಞಾ ಜ್ಞಾನಂ ಮಹಾಗುರುಃ । ಮಹಾಧ್ಯಾತಾಚ ವಿಜ್ಞಾತಾ ವೈರಾಗ್ಯಂ ಚೋಚನಃ ಸುಖಂ । ಹನುಮಾನ್ ಭೀಮ ಆನಂದ— ಇತ್ಯಾದಿ ಬಹುರೂಪಿಣ ಇತಿ ತಾರತಮ್ಯೋಕ್ತೇಃ ॥6॥ ॥7॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :—

ಬ್ರಹ್ಮಾವತಾರಾಃ ಚತ್ವಾರಃ ॥ ವಾಸುದೇವ ನಾಮ್ನಾ ॥ ವಿರಿಂಚಿಂ ಸುಷುವೇ ॥ ಬ್ರಹ್ಮಾಪುರುಷಃ ವಿರಿಂಚಿಃ ಮಹಾನ್ ವಿರಿಂಚಿಃ ಇತ್ಯನ್ವಯಃ ॥ ಮುಖ್ಯಪ್ರಾಣಃ ಮಹಾನ್ ಮರುತ್(ತ್ರಃ) ಪ್ರಧಾನವಾಯುಃ ಧೃತ್ಯಾದಿಃ ಇತ್ಯನ್ವಯಃ ॥ ಮಹತ್ತತ್ವತನುಃ ವಿರಿಂಚಿಃ ಇತ್ಯುಕ್ತೇಃ ॥ 'ಗರಲಂ' ವಿಷಂ ಪಪೌ ॥ ಸ ವಾಯುಃ ತದುತಾಸ್ಯ ಜೀರ್ಣಮ್ ಇತ್ಯುಕ್ತೇಃ ॥ 'ವೇದಸ್ಥಃ'— ತತ್ತ್ವತಿಪಾದ್ಯಃ ॥ ವಿಶೇಷಾತ್ ಭೀಷಕಃ ॥ 'ವಿಶ್ವಚೇಷ್ಟಕ' ಇತಿ ಸೂತ್ರಪದಾ ರ್ಥಾನುವಾದಃ ॥6॥

### ಕನ್ನಡಾರ್ಥ

ಬ್ರಹ್ಮನಿಗೆ ನಾಲ್ಕು ರೂಪಗಳು (ಜನ್ಮಗಳು) (ಈ ಅವತಾರಗಳು ಭೂಮಿ ಯಲ್ಲಿ ಆಗಿಲ್ಲ) ವಾಸುದೇವರೂಪದಿಂದ ವಿರಿಂಚಿಯು ಹುಟ್ಟಿದನು. ಅವನೇ

ಬ್ರಹ್ಮಾಂಡಕ್ಕೆ ಅಭಿಮಾನಿಯಾದ ಪುರುಷನು. ಅವನ ನಾಭೀಕಮಲದಿಂದ ಮತ್ತೆ ಅನಿರುದ್ಧನ ದಶೆಯಿಂದ ಶಾಂತಿಯಲ್ಲಿ ಹುಟ್ಟಿದನು. ಈ ಬ್ರಹ್ಮದೇವರೇ ಮಹತ್ತತ್ತ್ವಾಭಿಮಾನಿಗಳಾದುದರಿಂದ '**ಮಹಾನ್**'-ಎನಿಸಿಕೊಂಡರು-"ಬ್ರಹ್ಮ-ಪುರುಷ-ವಿರಿಂಚಿ-ಮಹಾನ್"-ಎಂಬುದಾಗಿ ಕ್ರಮಾನ್ವಯ. ಮುಖ್ಯಪ್ರಾಣ, ಮಹಾನ್, ಮರುತ, ಪ್ರಧಾನವಾಯು, ಧೃತಿ-ಮುಂತಾದುವುಗಳು ಎಂಬುದಾಗಿ ಕ್ರಮಾನ್ವಯ. ಮಹತ್ತತ್ತ್ವತನುಃ ವಿರಿಂಚಿ-ಎಂದು ಮುಂತಾದ ವಚನಗಳು ಇಲ್ಲಿ ಆಧಾರಗಳು-'ಗರಲಭುಕ್'-ವಿಷವನ್ನುಂಡವನು. "ವಾಯುದೇವನೇ ವಿಷವನ್ನು ಮೊದಲು ಸಂಪೂರ್ಣವಾಗಿ ಕುಡಿದನು. ಅದು ಅವನಿಗೆ ಜೀರ್ಣವಾಯಿತು"-ಎಂದು ಮುಂತಾದ ವಚನಗಳು ನಿರ್ಣಯದ ಪ್ರಮಾಣಗಳು. 'ವೇದಸ್ಥ'-ಎಂದರೆ ವೇದಪ್ರತಿಪಾದ್ಯ. ವಿಶೇಷವಾಗಿ ಭಯಗೊಳಿಸುವುದರಿಂದ, 'ವಿಭೀಷಕ', ಎಂದು ವಾಯುದೇವರನ್ನು ಕರೆಯುವರು. ವಿಶ್ವಚೇಷ್ಟಕವೆಂಬ ಪದವು ಸೂತ್ರ ಪದಾರ್ಥವನ್ನು ಹೇಳುತ್ತದೆ. ॥6॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಈ ಬ್ರಹ್ಮವಾಯುಗಳ ರೂಪಗುಣಾದಿಗಳನ್ನು ತಿಳಿಸುತ್ತಾರೆ ಮೂರು ಪದ್ಯದಿಂದ, ಪುರುಷ ಎಂದು ಪ್ರಾರಂಭಿಸಿ. ಬ್ರಹ್ಮ ,ವಿರಂಚಿ ಮೊದಲಾದ ರೂಪ ಮಹತ್ತತ್ತ್ವಗತ, ವಿರಾಟ್‌ದೇಹಗತ, ದೇವರ ನಾಭೀಪದ್ಮಗತ ರೂಪಗಳೆಂದು ತಿಳಿಯಬೇಕು. ಮಹಾಮರುತ ಮುಖ್ಯಪ್ರಾಣ, ಧೃತಿ, ಸ್ಮೃತಿ, ಗುರುವರ, ಮಹಾಧ್ಯಾತಾ, ಬಲ ವಿಜ್ಞಾತಾ ವಿಖ್ಯಾತ-ಎಂದರೆ, ಈ ನಾಮರೂಪಗಳಿಂದ ಪ್ರಸಿದ್ಧನು. ಗರಳಭುಕ್- ಎಂಬ **'ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣ ಪಿಬತ್ಸಹ'**-ಎಂಬ ಶ್ರುತ್ಯುಕ್ತ ಪ್ರಥಮ ವಿಷಪಾನಕರ್ತಾ ಭವರೋಗವೆಂಬ ಜನನಾದಿ ದೋಷರೂಪರೋಗಕ್ಕೆ ಭೇಷಜ ಅಂದರೆ, ಔಷಧದಂತೆ ಜ್ಞಾನ ಕೊಡುವವನು. ಸ್ವರವರ್ಣವೇಸ್ಥ—ಅಂದರೆ, ಉದಾತ್ತಾದಿ ಸ್ವರ, ಅಕಾರಾದಿ ವರ್ಣಾತ್ಮಕ, ವೇದದಲ್ಲಿ ಅಭಿಮಾನಿಯಾಗಿರುವವನು. ಜೀವೇಶ್ವರ ಅಂದರೆ, ಜೀವರಾಶಿಗೆ ಸ್ವಾಮಿಯಾದವನು.

ವಿಭೀಷಣ-ಎಂದರೆ, ಶತ್ರು ಭಯಂಕರನಾದವನು. ವಿಶ್ವಚೇಷ್ಟಕ—ಅಂದರೆ, ಸಮಸ್ತರಲ್ಲಿಯೂ ಇದ್ದು, ವ್ಯಾಪಾರ ಮಾಡತಕ್ಕವನು. ವೀತಭಯ–ಅಂದರೆ, ಸ್ವಯಂ ಭಯರಹಿತನು. ಭೀಮ-ಎಂದರೆ, **ಭೃಶೌಮಾ ಸಕಲಾನಿಯೇನ**-ಎಂಬ **ವ್ಯುತ್ಪತ್ತಿ**ಯಿಂದ ಸರ್ವಪ್ರಮಾಣಾಧಾರನು. ॥6॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವಕೋಟಿಯಲ್ಲಿ ಉತ್ತಮರಾದ ಶ್ರೀಬ್ರಹ್ಮ ವಾಯುಗಳ ರೂಪ ಮತ್ತು ನಾಮವಿಶೇಷಗಳನ್ನು ತಿಳಿಸುತ್ತಾರೆ.

ಶ್ರೀಬ್ರಹ್ಮದೇವರಿಗೆ ನಾಲ್ಕು ರೂಪಗಳು :—

(1) ಪದ್ಮಸೃಷ್ಟಿಗೆ ಮುಂಚೆ, ಶ್ರೀವಾಸುದೇವನಿಂದ ಮಾಯಾದೇವಿಯಲ್ಲಿ **ಪುರುಷನಾಮಕ** ಬ್ರಹ್ಮದೇವರ ಉತ್ಪತ್ತಿ. ಈ ರೂಪವೇ ಬ್ರಹ್ಮಾಂಡಕ್ಕೆ ಅಭಿಮಾನರೂಪವು.

(2) **ವಿರಿಂಚಿ**—ಎಂಬ ಹೆಸರಿನಿಂದ ಶಾಂತೀಪತಿ ಅನಿರುದ್ಧನಿಂದ ಸ್ಥೂಲದೇಹದಲ್ಲಿ ಉತ್ಪತ್ತಿ.

(3) ಪದ್ಮನಾಭನಾಮಕ ಶ್ರೀಹರಿಯಿಂದ ಸುವರ್ಣಾತ್ಮಕ ನಾಭೀಕಮಲದಲ್ಲಿ ಹಿರಣ್ಯಗರ್ಭನಾಮಕರಾಗಿ ಬ್ರಹ್ಮ–ನೆಂಬ ಹೆಸರಿನಿಂದ ಉತ್ಪತ್ತಿ.

(4) ಮಹತತ್ತ್ವಕ್ಕೆ ಅಭಿಮಾನಿಗಳಾದ್ದರಿಂದ **ಮಹಾನ್**-–ಎಂದು ಹೆಸರು.

ಹೀಗೆ ಶ್ರೀಹರಿಯ ವಿರಾಟ್‌ದೇಹಗತ, ಮಹತತ್ತ್ವಗತ, ನಾಭೀಕಮಲಗತ ರೂಪಗಳು ಬ್ರಹ್ಮದೇವರಿಗೆ, ಇನ್ನು, ಮುಖ್ಯಪ್ರಾಣರಾದ ಶ್ರೀವಾಯುದೇವರ ನಾಮವಿಶೇಷಗಳನ್ನು ತಿಳಿಸುತ್ತಾರೆ.

(1) 49 ಮರುದ್ಗಣಗಳಿಗೆ ಅಧಿಪತಿಗಳಾಗಿ, ಕ್ರಿಯಾಪ್ರವರ್ತಕರಾಗಿರುವ ಮುಖ್ಯಪ್ರಾಣರಿಗೆ **ಮರುತ**-ನೆಂದು ಹೆಸರು.

(2) ಪ್ರಧಾನವಾಯುವಾಗಿದ್ದು, ಶ್ರೀಹರಿಯ ಪ್ರಥಮಾಂಗಭೂತರಾದ್ದರಿಂದ, **ಮುಖ್ಯಪ್ರಾಣ**–ಎಂತ ಅಭಿದಾನ. ಶ್ರೀಹರಿಯ ಮುಖ್ಯಪ್ರತೀಕರು (ಶ್ರೀರಮಾನಂತರ).

(3) ಮಹಾಧೈರ್ಯಶಾಲಿಗಳಾದುದರಿಂದ **ಧೃತಿನಾಮಕರು.**

(4) ಮಹಾಪ್ರಳಯಕಾಲದಲ್ಲಿಯೂ ಭಗವದ್ವಿಷಯದಲ್ಲಿ ಜಾಗ್ರತರಾಗಿದ್ದು, ಅತಿರೋಹಿತ ಜ್ಞಾನಯುಕ್ತರಾದ್ದರಿಂದ **ಸ್ಮೃತಿನಾಮಕರು.** ಅವರಿಗೆ ಭಗವದ್ವಿಷಯದಲ್ಲಿ ತಿರೋಧಾನವೆಂಬ ಮರವೆಯೇ ಇಲ್ಲ.

(5) ಗರುಡ ಶೇಷಾದಿಗಳಿಗೆ ಗುರುಸ್ಥಾನಾಪನ್ನರಾದ್ದರಿಂದ, **ಗುರುವರರು.** ತ್ರೈಲೋಕ್ಯಾಚಾರ್ಯರು ಮುಖ್ಯಪ್ರಾಣರು.

(6) ರುದ್ರಾದಿ ದೇವತಾವರ್ಗಕ್ಕೆ ಧ್ಯಾನಕ್ಕೆ ವಿಷಯರಾದ್ದರಿಂದ, **ಮಹಾಧ್ಯಾತರು.**

(7) ನಿಸ್ಸೀಮಬಲಶಾಲಿಗಳಾದ್ದರಿಂದ, **ಬಲನಾಮಕರು.**

(8) ಜಗದ್ವಿಷಯಕವಾದ ಜ್ಞಾನವನ್ನು ಸಕಲಜೀವರ ಸ್ವರೂಪಯೋಗ್ಯತೆಯನ್ನು ಸಾಕಲ್ಯೇನ ಬಲ್ಲವರಾದ್ದರಿಂದ, **ವಿಜ್ಞಾತರು.** (ವಿಜ್ಞಾನತತ್ತ್ವಕ್ಕೆ ಅಭಿಮಾನಿಗಳು).

(9) ಜಗತ್ಪ್ರಸಿದ್ಧರೂ, ಜಗತ್ಪ್ರಾಣರೂ ಆದ್ದರಿಂದ, **ವಿಖ್ಯಾತರು.**

(10) ಸಮುದ್ರಮಥನಕಾಲದಲ್ಲಿ ಪ್ರಪ್ರಥಮವಾಗಿ ಹುಟ್ಟಿದ ಹಾಲಾಹಲ ವಿಷವನ್ನು ಶ್ರೀಹರಿಯ ಆಜ್ಞೆಯಂತೆ, ಸುವರ್ಣಪಾತ್ರೆಯಲ್ಲಿ ಸಂಗ್ರಹಿಸಿ,

ಪಾನಮಾಡಿದರು. ಆ ಭಯಂಕರವಿಷವು ಕಲಿಸ್ವರೂಪಭೂತವಾದದ್ದು. ಅಖಿಳಾಶ್ಮಸಮರಾದ ಶ್ರೀವಾಯುದೇವ ಹೊರತ್ತೇ ಅದನ್ನು ನಿಗ್ರಹಿಸಲು ಸಮರ್ಥರು. ಇದರಿಂದ **ಗರಳಭುಕ್**–ಎಂಬ ಖ್ಯಾತನಾಮರಾದರು. ಗರಳ –ವಿಷ–ಭುಕ್–ಪಾನಮಾಡಿದವರು.

(11) ಜನನ ಮರಣಾಖ್ಯರಾದ ಸಂಸಾರವೆಂಬ ಮಹಾವ್ಯಾಧಿಗೆ ವೈದ್ಯರಂತಿರುವವರು. ಶ್ರೀಹರಿಯ ಕೃಪೆಯಿಂದ ಸಂಸಾರಸಾಗರವನ್ನು ದಾಟಿಸಿ, ಮೋಕ್ಷಪ್ರಾಪ್ತಿಗೆ ಶ್ರೀಹರಿಯಲ್ಲಿ ಪ್ರಾರ್ಥಿಸುವರು. ಇದರಿಂದ **ಭವರೋಗಭೇಷಜರು.** (ಭವ––ಸಂಸಾರ, ರೋಗ––ಮಹಾವ್ಯಾಧಿ, ಭೇಷಜ–ವೈದ್ಯ).

(12) ಶ್ರೀಲಕ್ಷ್ಮೀನಾರಾಯಣರ ತರುವಾಯ, ಸರ್ವ ಶಬ್ದ, ಸ್ವರ ವರ್ಣ, ವೇದಪ್ರತಿಪಾದ್ಯರು. ಋಕ್ಸೂತ್ರಾದಿಸೂಕ್ತಗಳಿಂದ ಸ್ತುತ್ಯರು. ಇದರಿಂದ **ಸ್ವರ, ವರಣ, ವೇದಸ್ಥ**ರೆನಿಸುತ್ತಾರೆ.

(13) ಜೀವೋತ್ತಮರಾದ್ದರಿಂದ, **ಜೀವೇಶ್ವರರು.** ಶ್ರೀಲಕ್ಷ್ಮೀನಾರಾಯಣ ವ್ಯತಿರಿಕ್ತ, ಸಕಲತ್ರಿವಿಧಜೀವವರ್ಗಕ್ಕೂ ಪ್ರಭುಗಳು.

(14) ದೈತ್ಯರ ಭಾಗಕ್ಕೆ ಅತಿಭಯಂಕರಸ್ವರೂಪರು. ದನುಜ ಕುಲ ವಿದಾರಣರಾದ್ದರಿಂದ, **ವಿಭೀಷಣನಾಮಕರು.** (ಭೀಷಣ–ಭಯಂಕರ ಸ್ವರೂಪ. ವಿ–ವಿಶೇಷವಾಗಿ).

(15) ಸರ್ವಜಗತ್ಪ್ರಾಣರಾಗಿ, ಸರ್ವಚೇತನರ ಸ್ಥೂಲದೇಹಗತ ಇಂದ್ರಿಯಗಳಲ್ಲಿ ತತ್ತ್ವವ್ಯಾಪಾರಗಳನ್ನು ತತ್ತ್ವದೇವತೆಗಳ ದ್ವಾರಾ ಮಾಡಿ ಮಾಡಿಸುತ್ತಿರುವರು. ಶ್ವಾಸಪತಿಗಳು. ಇದರಿಂದ **ವಿಶ್ವಚೇಷ್ಟಕರು.**

(16) ಯಾವ ದೈತ್ಯರಿಂದಲೂ ಅವರಿಗೆ ಭಯವೆಂಬುದೇ ಇಲ್ಲ. ಇದರಿಂದ ಭಯವಿದೂರರು. **ವೀತಭಯ**ನಾಮಕರು.

(17) **"ಭೃತೌವಾ ಸಕಲಾನಿಯೋನ"**-ಎಂಬ ಪ್ರತ್ಯಕ್ಷಶ್ರುತಿಪ್ರಮಾಣದಿಂದ, ಸರ್ವಪ್ರಮಾಣಕ್ಕೆ ಆಧಾರರು. ಇದರಿಂದ **ಭೀಮನಾಮಕರು.**

ಅಲ್ಲದೇ ಭಕ್ತಿ, ಜ್ಞಾನ, ವೈರಾಗ್ಯ, ಬುದ್ಧಿ, ಸ್ಮೃತಿ, ಧೈರ್ಯ, ಸ್ಥೈರ್ಯ, ಯೋಗ, ಪ್ರಾಣ, ಮತ್ತು ಬಲ–ಎಂಬ ದಶಗುಣ ಸ್ವರೂಪರು-**ಭೀಮಸೇನದೇವರು.** ಇವು ಹತ್ತೂ ಭೀಮಸೇನದೇವರ ಸ್ವರೂಪಭೂತ ಗುಣಗಳು. ಇದಕ್ಕೆ **ಶ್ರೀಮನ್ಮಹಾಭಾರತ ನಿರ್ಣಯದ ಎರಡನೆಯ ಅಧ್ಯಾಯದ ಶ್ಲೋಕವು ಪ್ರಮಾಣವು.**

**"ಭಕ್ತಿರ್ಜ್ಞಾನಂ ಸ ವೈರಾಗ್ಯಂ ಪ್ರಜ್ಞಾ ಮೇಧಾ ಧೃತಿ ಸ್ಥಿತಿಃ ॥**
**ಯೋಗಃ ಪ್ರಾಣೋ ಬಲಂಚೈವ ವೃಕೋದರ ಇತಿ ಸ್ಮೃತಃ ॥"**

ಇವೇ ವೃಕೋದರನಾಮಕರಾದ ಭೀಮಸೇನದೇವರ ಭಾಗವತಧರ್ಮಗಳು. ॥6॥

★★

## ಪದ್ಯ-೭

**ಮೂಲ :-**

**ಅನಿಲ ಸ್ಥಿತಿ ವೈರಾಗ್ಯನಿಧಿ ರೋ ।**
**ಚನ ವಿಮುಕ್ತಿಗ ನಂದ ದಶಮತಿ ।**
**ಅನಿಮಿಷೇಶಾನಿದ್ರ ಶುಚಿ ಸತ್ತ್ವಾತ್ಮಕ ಶರೀರ ॥**
**ಅಣುಮಹದ್ರೂಪಾತ್ಮಕಾಮೃತ ।**
**ಹನುಮದಾದ್ಯವತಾರ ಪದ್ಮಾ ।**
**ಸನ ಪದವಿ ಸಂಪ್ರಾಪ್ತ ಪರಿಸರ ಅಖಿಳಾತ್ಮಸಮ ॥೭॥**

**ಅವತರಣಿಕೆ :-**

ಶ್ರೀವಾಯುದೇವರ ನಾನಾ ರೂಪಗಳನ್ನು ತಿಳಿಸುತ್ತಾರೆ. ॥7॥

**ಪ್ರತಿಪದಾರ್ಥ :-**

**ಅನಿಲ** = ವಾಯುದೇವರು, **ಸ್ಥಿತಿ** = ಸರ್ವಪ್ರಾಣಿಗಳ ಸ್ಥೂಲದೇಹದ ಅಸ್ತಿತ್ವಕ್ಕೆ ಕಾರಣರು. **ವೈರಾಗ್ಯನಿಧಿ** = ವೈರಾಗ್ಯಭಾಗ್ಯಸಂಪನ್ನರು, **ರೋಚನ** = ರೋಚನನಾಮಕರಾಗಿ ಇಂದ್ರಪದವಿ ಆಳಿದವರು. **ವಿಮುಕ್ತಿಗ** = ವಿಶೇಷಾಕಾರವಾಗಿ ಹೊಗಳಲ್ಪಟ್ಟ ಜ್ಞಾನಾದಿಯುಕ್ತರು, **ನಂದ** = ಆನಂದ ದಾಯಕರು ಮತ್ತು ನಿತ್ಯಸುಖಾತ್ಮರು, **ದಶಮತಿ** = ಪೂರ್ಣಪ್ರಜ್ಞನಾಮಕರಾದ ಶ್ರೀಮನ್ಮಧ್ವಮುನಿಗಳು, **ಅನಿಮಿಷೇಶ** = ದೇವತಾಶ್ರೇಷ್ಠರು, **ಅನಿದ್ರ** = ಪ್ರಳಯಕಾಲದಲ್ಲಿಯೂ ಜಾಗ್ರತರಾಗಿರುವವರು, **ಶುಚಿ** = ಅಸುರಾವೇಶ. ಅಜ್ಞಾನಾದಿ ದೋಷವಿದೂರರು, **ಸತ್ತ್ವಾತ್ಮಕಶರೀರ** = ಸತ್ತ್ವಗುಣಪ್ರಾಚುರ್ಯವುಳ್ಳ ದೇಹವುಳ್ಳವರು, **ಅಣು** = ಅಣುರೂಪ ಧರಿಸಬಲ್ಲವರೂ, **ಮಹದ್ರೂಪಾತ್ಮಕ** = ಬೃಹದ್ರೂಪ ಧರಿಸಬಲ್ಲವರೂ (ರುದ್ರಾದಿ ದೇವತೆಗಳ ಅಪೇಕ್ಷಯಾ) **ಅಮೃತ** = ಅವತಾರರೂಪಗಳಲ್ಲಿ ದೇಹತ್ಯಾಗರೂಪವಾದ ಮೃತಿ ಇಲ್ಲದವರು. **ಹನುಮದಾದಿ ಅವತಾರ** = ಸೂತ್ರ, ಹನುಮ, ಭೀಮ, ಮಧ್ವ ಎಂಬ ರೂಪಗಳುಳ್ಳವರು. **ಪದ್ಮಾಸನ ಪದವಿ ಸಂಪ್ರಾಪ್ತ** = ಬ್ರಹ್ಮಪದವಿಗೆ ಬರುವ (ಭಾವೀ ಬ್ರಹ್ಮರು), **ಪರಿಸರ** = ಸ್ಥೂಲದೇಹಗತ 72,000 ನಾಡಿಗಳಲ್ಲಿ ಓತಪ್ರೋತವಾಗಿ ಸಂಚರಿಸುವ, **ಅಖಿಳಾಶ್ಮಸಮ** = ಕಲ್ಲಿನಂತೆ ಧೃಡಶರೀರಯುಕ್ತರು. (ಕಲ್ಯಾದಿದೈತ್ಯರಿಂದ ಅಬಾಧಿತರು). ॥7॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಶ್ರೀವಾಯುದೇವರ ವಿಚಾರವೇ ಹೇಳತಾರೆ.

ವಾಯುದೇವರು ಸರ್ವಪ್ರಾಣಿಗಳ ಸ್ಥೂಲದೇಹಗಳಲ್ಲಿ ಸ್ಥಿತರಾಗಿ ಇದ್ದರೆ, ದೇಹಗಳು ಸ್ಥಿತವಾಗಿ ಇರುತ್ತವೆ. ವಾಯುದೇವರು ಹೊರಟುಹೋದರೆ, ದೇಹಗಳು ಸ್ಥಿತಿ ತಪ್ಪಿ ನಾಶನಾಗುತ್ತವೆ- ಎಂತ ಅರ್ಥ. ವಿಶೇಷಾಕಾರವಾಗಿ ಹೊಗಳಲ್ಪಟ್ಟ ಜ್ಞಾನಾದಿಗಳಿಂದ ಆನಂದಯುಕ್ತರಾದವರು. ಅಮುಕ್ತರಾದ ವರು. ಅಮುಕ್ತರ ಶರೀರಗಳಲ್ಲಿ ಇದ್ದು, ಭಗವದುಪಾಸನಾದಿಗಳಿಂದ ಆನಂದ ಪಡತಕ್ಕವರು. ಮುಕ್ತರ ಶರೀರದಲ್ಲಿ ಪ್ರವೇಶ ಇಲ್ಲದವರು. ರೆಪ್ಪೆ ಮುಚ್ಚದೇ ಇರತಕ್ಕ ದೇವತೆಗಳಿಗೆ ಸ್ವಾಮಿಯಾದವರು. ಎಂದರೆ, ದೇವತಾಶ್ರೇಷ್ಠರು. ಪ್ರಳಯಕಾಲದಲ್ಲಿ ದೇವತೆಗಳು ನಿದ್ರಾಯುಕ್ತರಾಗತಾರೆ. ಈ ವಾಯುದೇವರು ನಿದ್ರಾ ಇಲ್ಲದೆ ಇರತಾರೆ. ಇನ್ನೂ, ಸ್ಥೂಲಶರೀರದಲ್ಲಿ ಜೀವರ ನಿದ್ರಾಕಾಲ ದಲ್ಲಿ ತಾವು ನಿದ್ರಾ ಇಲ್ಲದೆ ಶ್ವಾಸಕಾರ್ಯ ಮಾಡತಾರೆ. ಆದಕಡಿಯಿಂದ, ಈ ವಾಯುದೇವರು ನಿದ್ರಾದಿಂದಲೂ, ಅಜ್ಞಾನದಿಂದಲೂ ಹೀನರು. ಅಸುರಾ ವೇಶ, ಅಜ್ಞಾನಾದಿ ದೋಷಗಳಿಂದ ರಹಿತರಾಗಿ, ಕೇವಲ ಶುಚಿರ್ಭೂತರಾಗಿ ಇರತಕ್ಕ, ಅತ್ಯಲ್ಪ ರಜಸ್ತಮವು, ಸತ್ತ್ವಗುಣವೇ ಪ್ರಾಚುರ್ಯವಾದ ಸ್ಥೂಲ ಶರೀರವುಳ್ಳವರು. ರುದ್ರಾದ್ಯಪೇಕ್ಷಯಾ ತಮ್ಮ ಸ್ಥೂಲಶರೀರವನ್ನು ಅಣು ವಾಗಿ ಮಾಡತಕ್ಕವರು. ಎಂದರೆ,ರುದ್ರಾದಿಗಳು ತಮ್ಮ ತಮ್ಮ ಸ್ಥೂಲಶರೀರ ಗಳ ಎಷ್ಟು ಅಣುವಾಗಿ ಮಾಡಿಕೋತಾರೋ ತದಪೇಕ್ಷಯಾ, ನೂರಂಶದಿಂದ ಅಧಿಕವಾಗಿ, ವಾಯುದೇವರು ತಮ್ಮ ಸ್ಥೂಲಶರೀರವನ್ನ ಅಣುವಾಗಿ ಮಾಡಿ ಕೊಳ್ಳಲಿಕ್ಕೆ ಸಾಮರ್ಥ್ಯದಿಂದ ಯುಕ್ತರಾದವರು. ಪೂರ್ವೋಕ್ತ ಪ್ರಕಾರವೇ ದೊಡ್ಡರೂಪ ಧರಿಸತಕ್ಕವರು. ಏತಾದೃಶ ಅಣುಮಹತ್ತುರೂಪಗಳಿಂದ ಪ್ರಚುರರಾದವರು. ಎಂದರೆ, ಅಣು ಲಿಂಗದಲ್ಲಿ ರುದ್ರಾದಿಗಳ ಪ್ರವೇಶ ಇಲ್ಲ.

ಅಷ್ಟು ಅಣುತ್ವ ರುದ್ರಾದಿಗಳಿಗೆ ಇಲ್ಲ. ವಾಯುದೇವರಿಗೆ ಉಂಟು. ಅಂಡಾವರಣದ ಗುಣತ್ರಯದವರೆಗೂ ರುದ್ರಾದಿಗಳಿಗೆ ಪ್ರವೇಶ ಇಲ್ಲ. ಇಷ್ಟು ದೊಡ್ಡರೂಪ ಇವರಿಗೆ ಇಲ್ಲ. ವಾಯುದೇವರಿಗೆ ಉಂಟು- ಎಂತ ತಾತ್ಪರ್ಯ. ರುದ್ರಾದಿ ದೇವತೆಗಳ ಅವತಾರಗಳಿಗೆ ದೇಹತ್ಯಾಗ ರೂಪವಾದ ಮೃತಿ ಉಂಟು. ವಾಯುದೇವರ ಅವತಾರರೂಪಗಳಿಗೆ ಅಂಥಾ ಮೃತಿ ಇಲ್ಲವಾದ ಕಡಿಯಿಂದ,ಈ ವಾಯುದೇವರು ಮುಂದಕ್ಕೆ ಬ್ರಹ್ಮದೇವರ ಸತ್ಯಲೋಕ ಪದವಿಯನ್ನು ಹೊಂದ ತಕ್ಕವರು. ಪರ್ವತಗಳನ್ನು ಭೇದನಮಾಡತಕ್ಕ ಉಕ್ಕಿನ ಮುಖಮೋಪಾದಿಯಲ್ಲಿ ದಾರ್ಢ್ಯವಾಗಿ ಇರುವ ಶರೀರವುಳ್ಳವರು. ಅಸುರರೆಂಬೋ ಪರ್ವತಗಳ ನಾಶಮಾಡತಕ್ಕವರು. ಇಂಥಾ ವಾಯುದೇವರ ರೂಪಗಳು ಮ್ಯಾಲೆ ಹೇಳಿದ 1. ಸೂತ್ರನಾಮಕರೂಪ, 2. ಹನುಮದ್ರೂಪ, 3. ಭೀಮರೂಪ. ಈ ರೂಪಗಳು ಅಲ್ಲದೇ ರೋಚನನಾಮಕ, ಎರಡನೆಯದಾದ ಇಂದ್ರರೂಪ. ಪೂರ್ಣವಾದ ಜ್ಞಾನವುಳ್ಳ ಶ್ರೀಮಧ್ವಾಚಾರ್ಯರ ಅವತಾರ ರೂಪ. ಈ ರೂಪ ಸಮೀಚೀನವಾದ ಜ್ಞಾನ-ಭಕ್ತಿ-ವೈರಾಗ್ಯವೆಂಬ, ಸಮುದ್ರಕ್ಕಿಂತ ಗಂಭೀರವಾದ ನಿಧಿ ಉಳ್ಳವರು. ಈ ಪ್ರಕಾರ, ವಾಯುದೇವರ ಅವತಾರಗಳು-ಎಂತ ತಾತ್ಪರ್ಯ.

**ಪ್ರಮಾಣಗಳು :-** ಏಳನೇ ಶ್ಲೋಕದಲ್ಲಿ 'ಅಮೃತ'-ಎಂಬ ಪದಕ್ಕೆ **ವಾಯುರಪ್ಯ ಮೃತಃಸ್ಮೃತಃ**-ಎಂತ ತಾತ್ಪರ್ಯ.

ಪದ್ಮಾಸನಪದವಿ ಸಂಪ್ರಾಪ್ತ ಎಂದರೆ, ಬ್ರಹ್ಮಪದವಿ ಹೊಂದುವವರು.-ಎಂದರೆ, ಮುಂದೆ ಬ್ರಹ್ಮಪದವಿ ನಿಶ್ಚಯವಾಗಿರುವದ್ದರಿಂದ, ಬರುವುದಕ್ಕಿಂತ ಮುಂಚೆ 'ಬಂದ'-ಎಂತ ಹೇಳುವಂತೆ **ಏಷ್ಯತ್ವ ನಿಶ್ಚಯೋ ಯತ್ರ ತದೀಶತ್ವೇನ ಭಣ್ಯತೇ**-ಎಂಬ ವಚನಾನುಸಾರ, ಆದಂತ ಪ್ರಯೋಗಿಸಬಹುದು-ಎಂತ ಅರ್ಥ.

**ಹೆರಿಸರ**-ಎಂದರೆ,ಸರ್ವತ್ರ ಅತಿವೇಗದಿಂದ ಗಮನಶಕ್ತಿ ಇರುವದ್ದರಿಂದ. **ಆಖಣಾಶ್ಮ**ಎಂದರೆ,ಪ್ರಕಾರಾಂತರ ಅರ್ಥ-**ಯ ಏವಾಯಂ ಮುಖ್ಯಪ್ರಾಣ ಸ್ತಮುದ್ಗೀಥಮು ಪಾಸಾಂ ಚಕ್ರಿರೇ ತಂ ಹಾಸುರಾ ಋತ್ವಾ ವಿದಧ್ವ**

**ಕುರ್ಯುರ್ಘಾಶ್ಮಾನಮಾಖಣಮಾಶ್ಮಾ ವಿಧ್ವಂಸತೇ ಯದಾ ವಿದ ಧ್ವಸುಃ ಪ್ರಾಣಂ ವಿಧ್ವಸ್ತಾಸ್ತೇ ತದಾಸುರಾಃ । ಆಖಸ್ಯಾಶ್ಮಾನಮೇ ವಾಪ್ಯ ಲೋಷ್ಟೋ ವಿಧ್ವಂಸತೇ ಯಥಾ ॥**-ಎಂತ ಛಾಂದೋಗ್ಯೋ **ಪನಿಷದ್ಭಾಷ್ಯ**ದಲ್ಲಿ ಇರುವದ್ದರಿಂದ, 'ವರೆ'–ಎಂದರೆ, ಕಲ್ಲಿನಂತೆ ದೃಢಶರೀರ ವುಳ್ಳವರು-ಎಂತ ತಾತ್ಪರ್ಯ. ॥7॥

**೨. ಭಾವಪ್ರಕಾಶಿಕೆ :–**

ಸಾಮಾನ್ಯವಾಗಿ ಗಾಳಿಗೆ ಅನಿಲ-ಎಂದು ಹೆಸರು. ವಾಯುದೇವರು ಇ ರೂಪವಾಗಿರುವುದರಿಂದ, **ಅನಿಲನೆಂದು** ವಾಯುದೇವರಿಗೂ ಹೆಸರು. **ರೋಚನ** ನೆಂಬ ಹೆಸರಿನಿಂದ ವಾಯುದೇವರು ಇಂದ್ರಪಟ್ಟವನ್ನು ಆಳಿರುವರು. ಇದಕ್ಕೆ ಆಧಾರ– ವಿಷ್ಣುರಹಸ್ಯ 27ನೆಯ ಅಧ್ಯಾಯದಲ್ಲಿ– **"ಸ್ವಾರೋಚಿಷೋ ಮನು ರ್ನಾಮ ದ್ವಿತೀಯೋಗ್ನೇಃ ಸುತೋ ಮಹಾ ॥ ಋಷಿರ್ವೇದ ಶಿರಾನಾಮತು ಷಿತಾ ತಸ್ಯ ಪತ್ನ್ಯಭೂತ್ ॥1॥ ತಸ್ಯಾಂ ರೋಚನನಾಮಸೀ ಜ್ಯೇಷ್ಠ ಇಂದ್ರಸ್ತ್ವ ಸೋಭವತ್ ॥ ಯಃ ಪುರಾ ಸೂತ್ರ ನಾಮಾಸೀತ್ಸ ವಿವಾಯ ಮಿಹಾಭವತ್ ॥2॥** ಎರಡನೆಯ ಮನು ಸ್ವಾರೋಚಿಷನೆಂದು ಅಗ್ನಿಯ ಮಗನು. ಆ ಮನ್ವಂತ ರದಲ್ಲಿ ವೇದಶಿರಸ್ಸೆಂದು ಒಬ್ಬ ಋಷಿಯು ಇದ್ದನು. ಆತನ **ಹೆಂಡತಿಯು ತುಷಿತೆ** ಎಂದು. ಆಕೆಯ **ಜೇಷ್ಠ ಕುಮಾರನು ರೋಚನನು**. ಆತನೇ ಆ ಮನ್ವಂತರದಲ್ಲಿ ಇಂದ್ರನಾಗಿದ್ದನು. **ಪೂರ್ವದಲ್ಲಿ** ಸಂಕರ್ಷಣನದೆಸೆಯಿಂದ ಜಯಾದೇವಿಯಲ್ಲಿ ಜನಿಸಿದ್ದ **ಸೂತ್ರ**ನಾಮಕ ವಾಯುದೇವರೇ ಈಗ **ರೋಚನ** ನೆಂಬ ಹೆಸರಿನಿಂದ ಜನಿಸಿರುವರು– ಎಂದು **ಹೇಳಿರುವರು**. ಇದಲ್ಲದೆ, ಭಾರತ ದಲ್ಲೂ ಪಾಂಡವರು 5 ಮಂದಿಗಳೂ 5 ಮನ್ವಂತರಗಳಲ್ಲಿ ಇಂದ್ರಿಯರಾಗಿದ್ದ ಪ ರೆಂದು ಹೇಳಿರುವರು. **ಮಹಾಭಾರತ ತಾತ್ಪರ್ಯನಿರ್ಣಯ-ಅಧ್ಯಾಯ** 18 ರಲ್ಲಿ **"ಉದ್ವಬರ್ಹ ಗಿರಿಂತಂತುದದರ್ಶಾತ್ರಚ ತಾಃ ಸುರಾಃ ಪೂರ್ವೇಂದ್ರಾ ಮಾರುತವೃಷನಾಸತ್ಯಾಂಶ್ಚ ತುರಶ್ಚಿ ತಾನ್ ॥ ॥142॥ ಮಾನುಷೇಶ್ವ ವತಾ ರಾಯ ಮಂತ್ರಂ ರಹಸಿಕುರ್ವತಃ "**॥ ದೇವೇಂದ್ರನು ರುದ್ರದೇವರ ಶಾಪದಿಂದ ಅವರು ಹೇಳಿದ ಪರ್ವತದ ದ್ವಾರಕ್ಕೆ ಮುಚ್ಚಲ್ಪಟ್ಟಿದ್ದ ಕಲ್ಲನ್ನು ಕಿತ್ತಿದನು. ಆ

ಗುಹೆಯಲ್ಲಿ ಪೂರ್ವದ ಮನ್ವಂತರಗಳಲ್ಲಿ ಇಂದ್ರರಾಗಿದ್ದ ವಾಯುದೇವರು, ಯಮಧರ್ಮ, ನಾಸತ್ಯದಸ್ರರೆಂಬ ಅಶ್ವಿನೀದೇವತೆಗಳೀರ್ವರು, ಇವರು 4 ಮಂದಿ ದೇವತೆಗಳೂ ಭೂಮಿಯಲ್ಲಿ ಮನುಷ್ಯರಾಗಿ ಅವತಾರಮಾಡುವ ವಿಷಯ ವನ್ನು ಆಲೋಚಿಸುತ್ತಿದ್ದುದನ್ನು ಕಂಡನು- ಎಂದು ಹೇಳಿರುವರು. ಈ ವಾಕ್ಯದಿಂದ,ವಾಯುದೇವರು ಇಂದ್ರರಾಗಿದ್ದರೆಂದು ಸ್ಪಷ್ಟವಾಗುವುದು. ಆದರೆ, ಭಾಗವತ ಅಷ್ಟಮಸ್ಕಂಧ ಮೊದಲನೆಯ ಅಧ್ಯಾಯದಲ್ಲಿ "ಸ್ವಾರೋಚಿಷೋ ದ್ವಿತೀಯಸ್ತುಮನುರಗ್ನೇಃಸ್ಸುತೋಭವತ್ ॥ ತತ್ರೇಂದ್ರೋ ರೋಚನಸ್ತ್ವಾಸೀ ದ್ದೇವಾಶ್ಚ ತುಷಿತಾದಯಃ ॥20॥ ಋಷೇಸ್ತುವೇದಶಿರಸಸ್ತುಷಿತಾನಾಮ ಪತ್ನ್ಯಭೂತ್ ॥ ತಸ್ಯಾಂಜಜ್ಞೇ ತತೋದೇವೋವಿಭುರಿತ್ಯಭಿವಿಶ್ರುತಃ" ॥21॥ ಸ್ವಾರೋಚಿಷನೆಂಬ ಅಗ್ನಿ ಕುಮಾರನು ಎರಡನೆಯ ಮನು. ಆಗ ರೋಚನನು ಇಂದ್ರನಾಗಿದ್ದನು. ದೇವತೆಗಳು ಅಂದರೆ, ತುಷಿತಾ ಮೊದಲಾದವರು, ವೇದ ಶಿರಸ್ಸೆಂಬ ಋಷಿಗಳಿಗೆ ತುಷಿತೆಯೆಂಬ ಹೆಂಡತಿಯಿದ್ದಳು. ಆಕೆಯಲ್ಲಿ ಶ್ರೀಪರ ಮಾತ್ಮನು **ವಿಭು** ಎಂಬ ಹೆಸರಿನಿಂದ ಅವತರಿಸಿದನು— ಎಂದು ಹೇಳಿರುವರು. ವಿಷ್ಣುರಹಸ್ಯದಲ್ಲಿ ರೋಚನನು, ವೇದಶಿರಸ್ಸೆಂಬ ಋಷಿಗಳ ದೆಸೆಯಿಂದ ತುಷಿತೆಯಲ್ಲಿ ಜನಿಸಿದವನೆಂದು ಹೇಳಿರುವರು.

ಭಾಗವತದಲ್ಲಿ ರೋಚನನ ತಂದೆ ತಾಯಿಗಳ ಹೆಸರನ್ನು ಹೇಳದೆ, ವೇದ ಶಿರಸ್ಸೇ ವಿಭುನಾಮಕ ಪರಮಾತ್ಮನ ತಂದೆ, ತುಷಿತೆಯು ತಾಯಿಯೆಂದು ಹೇಳಿರುವರು. ಹೀಗೆ ವಿಷ್ಣುರಹಸ್ಯಕ್ಕೂ ಭಾಗವತಕ್ಕೂ ವಿರೋಧ ಬರುತ್ತದೆ ಯೆಂದರೆ- ವಿಷ್ಣುರಹಸ್ಯದ ವಾಕ್ಯದಿಂದ ಈ ವಿರೋಧವು ಪರಿಹಾರವಾಗು ವುದು. ಹೇಗೆಂದರೆ :- ಈ ಮೇಲೆ ಉದಾಹರಿಸಿದ ವಿಷ್ಣುರಹಸ್ಯದ 27 ನೆಯ ಅಧ್ಯಾಯದ 3ನೆಯ ಶ್ಲೋಕ "ತಸ್ಮಾದನಂತರಂ ಜಾಹಮವತೀರ್ಣೋ ವಿಭುಃ ಸ್ವಯಂ ॥ ಉಪೇಂದ್ರ ಇತಿ ತೇನಾಹಂ ವಿಶ್ರುತೋ ವಿದುಷಾಂ ಮುಖೇ ॥3॥ ವೇದಶಿರಸ್ಸೆಂಬ ಋಷಿಯ ಪತ್ನಿಯಾದ ತುಷಿತೆಯಲ್ಲಿ ಜ್ಯೇಷ್ಠ ಕುಮಾರನು ರೋಚನನು. ಅವನು ಜನಿಸಿದ ಮೇಲೆ, ನಾನು ವಿಭು- ಎಂಬ ಹೆಸರಿನಿಂದ

ಆಕೆಯಲ್ಲಿ ಅವತರಿಸಿದನು. ಆದ್ದರಿಂದ, ನನ್ನನ್ನು ಉಪೇಂದ್ರನೆಂದು ವಿದ್ವಾಂಸರು ಕರೆಯುವರು– ಎಂದು ಶ್ರೀಪರಮಾತ್ಮನು ಬ್ರಹ್ಮದೇವರಿಗೆ ಹೇಳಿರುವನು.

ಈ ವಾಕ್ಯದಿಂದ,ವೇದಶಿರಸ್ಸೆಂಬ ಋಷಿಗಳ ಜ್ಯೇಷ್ಠ ಕುಮಾರನು ರೋಚನನು. ಎರಡನೆಯ ಕುಮಾರನು ವಿಭುನಾಮಕ ಪರಮಾತ್ಮನೆಂದು ಸಿದ್ಧವಾಗುವುದರಿಂದ, ಭಾಗವತ ವಿಷ್ಣುರಹಸ್ಯಗಳ ವಿರೋಧವು ಪರಿಹಾರವಾಯಿತೆಂದು ತಿಳಿಯಬೇಕು. ವಿಮುಕ್ತಿಗ, ಅಂದರೆ, ಮುಕ್ತಿಯನ್ನು ಕೊಡುವವನೆಂದರ್ಥ. "ವಿಷ್ಣುರ್ಹಿದಾತಾ ಮೋಕ್ಷಸ್ಯ ವಾಯುಸ್ತುತದನುಜ್ಞಯಾ" ॥'ಎಂಬ ನಿರ್ಣಯ ವಾಕ್ಯಾನುಸಾರ ಮೋಕ್ಷವನ್ನು ಕೊಡುವವನು ಪರಮಾತ್ಮನೇ ಆದರೂ, ಭಗವದಾಜ್ಞಾನುಸಾರ ವಾಯುದೇವರು ಮುಕ್ತಿಯನ್ನು ಕೊಡುವರು, ಆದ್ದರಿಂದ ದಾಸರಾಯರು, ವಿಮುಕ್ತಿಗ–ಎಂದು ಹೇಳಿದರು. ಶುಚಿಸತ್ವಾತ್ಮಕ ಶರೀರ ಎಂಬುವುದಕ್ಕೆ"ವಿಶುದ್ಧ ಸತ್ವಂ ಬ್ರಹ್ಮಾಖ್ಯಂ"-ವಿಶುದ್ಧವಾದ ಸತ್ತ್ವಸ್ವರೂಪವು ಬ್ರಹ್ಮದೇವರದೆಂದು ಭಾಗವತ ದಶಮ ತಾತ್ಪರ್ಯದಲ್ಲಿ ಹೇಳಿರುವುದೇ ಆಧಾರವು. ಅಮೃತಭೋಜನಕ್ಕೆ ಕೂಡುವ ಕಾಲದಲ್ಲಿ "ಅಮೃತ ಉಪಸ್ತರಣಮಸಿ ಸ್ವಾಹಾ– ಎಂತಲೂ, ಏಳುವಾಗ ಅಮೃತಾಪಿಧಾನಮಸಿ– ಎಂದು ಹೇಳುವ ಮಂತ್ರವೇ ಇದಕ್ಕೆ . ಆಧಾರವು. ಎಲೈ ಅಮೃತ! ಅಮೃತರೂಪಿಯಾದ ವಾಯುದೇವ ! ನಾನು ಭೋಜನಮಾಡುವ ಅನ್ನಕ್ಕೆ ಹಾಸಿಗೆಯಂತೆ ಇರು. ಎಂದು ಮೊದಲನೆಯ ಮಂತ್ರಾರ್ಥ. ಕೊನೆಯ ಮಂತ್ರಾರ್ಥವು ಎಲೈ ಅಮೃತ ! ನಾನು ಭುಂಜಿಸಿದ ಅನ್ನಕ್ಕೆ ಹೊದ್ದಿಕೆಯಂತೆ ಇರು– ಎಂದು, ಇದರಿಂದ,ಅಮೃತ ಎಂದು ವಾಯುದೇವರ ಹೆಸರೆಂದು ಸಿದ್ಧವಾಯಿತು. ಅಖಿಳಾಶ್ಮಸಮ=ಇದಕ್ಕೆ ಆಧಾರವು ಭಾಗವತ ಏಕಾದಶಸ್ಕಂಧ ತಾತ್ಪರ್ಯ"–ಪ್ರಾಣಸ್ಯ ನಾಸುರಾವೇಶೋಃ ಅಖಿಳಾಶ್ಮಸಮೋಹಿಸಃ "॥ ಪ್ರಾಣದೇವರಿಗೆ ಮಾತ್ರ ಅಸುರಾವೇಶವಿಲ್ಲವು. ಅವರು ಭಗವತ್ಸ್ವರೂಪವನ್ನು ಚೆನ್ನಾಗಿ ವ್ಯಕ್ತಿಮಾಡಿಕೊಡುವ ವಿಷಯದಲ್ಲಿ, ಅಂಗಾರದ ಸ್ವರೂಪವನ್ನು ವ್ಯಕ್ತಿಮಾಡಿಕೊಡುವ ವಿಷಯದಲ್ಲಿ, ಒರೆಗಲ್ಲು ಹೇಗೋ, ಹಾಗೆಯೇ, ವಾಯುದೇವರು ಒರೆಗಲ್ಲಿಗೆ ಸಮರಾಗಿರುವ

ರೆಂದು ಹೇಳಿರುವರು. ಅದೇ ಅರ್ಥವನ್ನೇ ದಾಸರಾಯರು ಇಲ್ಲಿ ಹೇಳಿರುವರೆಂದು ತಿಳಿಯಬೇಕು. ॥7॥

**೩. ಭಾವದರ್ಪಣ :-**

ಈ ಪದ್ಯದ ವ್ಯಾಖ್ಯಾನವನ್ನು ಪದ್ಯದಲ್ಲೇ ಸೇರಿಸಿಕೊಟ್ಟಿದೆ. ॥7॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-**

**"ಅನಿಲ"**-ಇತಿ ॥ ವಾಯುಃ ಇತಿ ಕರ್ತ್ರಾರ್ಥಾತ್ಮನಾ ಅನ್ವಯಃ ॥ ಗಮಯತಿ ಇತಿಗಃ ॥ ಏತದಪಿ ಅರ್ಥಾನುವಾದಪರಮ್ ॥ 'ಆನಂದಃ'-ಸುಖಂ ॥ 'ದಶಮತಿಃ'-ಮಧ್ವಾಚಾರ್ಯಃ ॥ 'ಅನಿದ್ರಃ' ಸರ್ವದಾ ಜಾಗ್ರತಃ ॥ 'ಪರಸರ'- ಸರ್ವತ್ರ ಗಂತೃತ್ವಾತ್ ॥ 'ಅಖಿಳ'-ಅವಿದಾರಣೀಯಃ ॥ ಅಸುರ್ಯೈಃ ಅಭೇದ್ಯಃ ಇತಿ ಯಾವತ್ ॥ ವಿಧಿ-ಚತುರ್ಮುಖಾಖ್ಯಾ ಅಗರಾ ಬ್ರಹ್ಮಣಃ ಅವತಾರೌ ॥ ಬ್ರಹ್ಮಣಃ ನಾವತಾರಃ-ಇತ್ಯೇತತ್ ಭಗವದನ್ಯಸ್ಮಾತ್ ಇತಿ ಪರಮ್ ॥ ವಾಯೋಸ್ತು ಪ್ರಧಾನಃ (1) ಸೂತ್ರಂ (2) ಧೃತಿಃ (3) ಸ್ಮೃತಿಃ (4) ಮೇಧಾ (5) ಮುಕ್ತಿಃ (6) ವಿಷ್ಣುಭಕ್ತಿಃ (7) ಚಿತ್ರಂ (8) ಮಹಾನ್ ಪ್ರಭುಃ (9) ಬಲಂ (10) ಸ್ಥಿತಿ (11) ಋಜುಃ ಯೋಗಃ (12) ಪ್ರಾಜ್ಞಃ (13) ಜ್ಞಾನ. (14) ಮಹಾಗುರುಃ (15) ಮಹಾಧ್ಯಾತಾ (16) ವಿಜ್ಞಾನಂ (17) ವೈರಾಗ್ಯಂ (18) ರೋಚನಂ (19) ಸುಖಂ (20) ಹನುಮಾನ್ (21) ಭೀಮಸೇನಃ (22) ಆನಂದತೀರ್ಥಃ (23) ಮೂಲೇ ಕೇಷಾಂಚಿದಸುಕ್ತಾನಾಮಪಿ ಗ್ರಹಣಂ ಉಪಲಕ್ಷಣಯಾ ॥ ವಾಸುದೇವಾತ್ ಸಮುತ್ಪನ್ನಃ ಮಾಯಾಯಾಂ ಪುರುಷಾಖ್ಯಃ ವಿರಿಂಚಿಃ ॥ ಅನಿರುದ್ಧಾತ್ ಶಾಂತ್ಯಾಂತು ಮಹತ್ತತ್ತ್ವತನುಃ ॥ ಮಹಾವಿರಿಂಚಿಃ ಇತಿ ಸಂಜ್ಞಾ ॥2॥ ರಜಸ್ತಮೋಃ ವಾಸುದೇವಾತ್ ಮಾಯಾಯಾಂ ಜಾತಃ ವಿಧಿ ಸಂಜ್ಞಃ ॥3॥ ಬ್ರಹ್ಮಾಂಡಾಂತಃ ಪದ್ಮನಾಭಾತ್ ಜಾತಃ ಚತುರ್ಮುಖಃ ॥4॥ ಸಂಕರ್ಷಣಾಚ್ಚ ಜಯಾತ್ಮಜಃ ಸ ವಾಯುಃ ಪ್ರಥಮೋಽಜ್ಞೇಯಃ ॥ 'ಪ್ರಧಾನ'-ಇತಿ ಲೋಕಚೇಷ್ಟಾಪ್ರವರ್ತಕತ್ವಾತ್ ಸೂತ್ರನಾಮಾ ॥ ಬದರ್ಯಾಂ ಸ್ಥಿತಂ ವಿಷ್ಣುಂ ಧೈರ್ಯೇಣ ಸ

ಸ್ತೋತ್ರುವೇವ ಸಃ ॥ ಧೃತಿರೂಪಂ ಯಯೌ ವಾಯುಃ ತಸ್ಮಾತ್ ಧೃತಿಃ ಸರ್ವೇಷಾಂ ಚ ಹೃದಿ ಸ್ಥಿತ್ವಾ ಸ್ಮರತೇ ಸರ್ವದಾ ಹರಿಂ ॥ ಅತಃ ವಾಯುಃ ಸ್ಮೃತಿಃ ॥ "ಪಯೋಬ್ಧಿ ಮಧ್ಯಗಂ ಚ ಮೇ ಸುಸದ್ಮ ಯಥೇಷ್ಟತಃ ಗಮಿಷ್ಯಸಿ" ಇತ್ಯುಕ್ತ್ಯಾನ್ಯಾಯೇನ ॥ ಅಥವಾ ವಾಯುರೇವೈಕಃ ಶ್ವೇತದ್ವೀಪಗತಂ ಹರಿಂ ಸ್ಮರತೇ ತತಃ ಸ್ಮೃತಿಃ ॥ ಸರ್ವೇಷಾಂಚ ಹೃದಿ ಸ್ಥಿತ್ವಾ ಜ್ಞಾನಂ ವಿಷ್ಣೋಃ ಉದೀರಯನ್ ಮೇಧಾ ॥ ಜ್ಞಾನದ್ವಾರೇಣ ಭಕ್ತಾನಾಂ ಆಜ್ಞಯಾ ಮುಕ್ತಿದಃ ಹರೇಃ ॥ ಮುಕ್ತಿಃ ॥ ವಿಷ್ಣೋಃ ಭಕ್ತಿಂ ವರ್ಧಯತಿ ಭಕ್ತಾನಾಂ ಹೃದಿ ಸಂಸ್ಥಿತಃ ವಿಷ್ಣುಭಕ್ತಿಃ ॥ ಅಸೌ ಸರ್ವಜೀವಾನಾಂ ಚಿತ್ತಸ್ಥಂ ಜ್ಞಾತುಂ ಚಿತ್ತರೂಪಂ ಯಯೌ ವಾಯುಃ ಚಿತ್ತಮ್ ॥ ಸದಾರಾಣಾಂ ಪ್ರಭೂಣಾಂ ದೇವಾನಾಂ ಪ್ರಭುತ್ವಾತ್ ಮಹಾಪ್ರಭುಃ ॥ ಸರ್ವೇಷಾಂ ಹೃದಿಸ್ಥಿತ್ವಾ ದದಾತಿ ಬಲಮುತ್ತಮಮ್-ಅತಃ ಬಲಃ ॥ ಸರ್ವ ಹೃದಿ ಸ್ಥಿತ್ವಾ ಪುತ್ರಪೌತ್ರಾದಿಕಾನ್ ಜನಾನ್ ಪಾಲಯತಿ-ತಸ್ಮಾತ್ ಸ್ಥಿತಿಃ ॥ ಅನಾದ್ಯನಂತಕಾಲೇ ಕಾಮ್ಯ ಪ್ರಜಾರಾಹಿತ್ಯಾತ್-ಋಜುರ್ಯೋಗೀ ॥ ಹರಿಂ ವಾಯುಃ ದರ್ಶಯತಿ ಹ್ಯಪರೋಕ್ಷೇಣ ಚಾಂಡಜ ॥ ಮೋಕ್ಷಾಧಿಕಾರಿಣಾಂ ಕಾಲೇ ತತಃ-ಪ್ರಾಜ್ಞಃ ॥ ಪರೋಕ್ಷೇಣಾಪಿ ಸರ್ವೇಷಾಂ ಹರಿಂ ದರ್ಶಯತೇ ಸದಾ ॥ ಜ್ಞಾನಂ ॥ ಹಿತಾಹಿತೋಪದೇಷ್ಟೃತಾತ್ ಭಕ್ತಾನಾಂ ಹೃದಿ ಸಂಸ್ಥಿತಃ ॥ ಅತಃ ಗುರುಃ ॥ ಯೋಗಿನಾಂ ಹೃದಯೇ ಸ್ಥಿತ್ವಾ ಸದಾ ಧ್ಯಾತಿ ಹರಿಂ ಪರಂ ॥ ಪಾರ್ಥಕ್ಯೇನಾಪಿತಂ ಧ್ಯಾತಿ ಅತಃ ಮಹಾಧ್ಯಾತಾ ॥ ಯಾವದ್ಯೋಗ್ಯಾನುಸಾರೇಣ ವಿಜಾನಾತಿ ಹರಿಂ ॥ ರುದ್ರಾದ್ಯಜ್ಞಾಯಮಾನಾಂಶ್ಚ ಗುಣಾನ್ ವಿಜಾನಾತಿ ॥ ಅತಃ ವಿಜ್ಞಾನಃ ॥ ಕಾಮ್ಯಕರ್ಮತ್ಯಾಗಾತ್-ವೈರಾಗ್ಯಃ ॥ ಯದ್ವಾ ಯೋಗಿನಾಂ ಹೃದಯೇ ಸ್ಥಿತ್ವಾ ವೈರಾಗ್ಯಂ ಸಜನಯತಿ ॥ ತಸ್ಮಾತ್ ವೈರಾಗ್ಯಂ ॥ ದೇವರ್ಷಿ ನರಾಂತ ಸುಖಾಂಶಂ ಭಜತೇ ವಾಯುಃ ॥ ತತಃ ಸುಖಂ ॥ ಚತುರ್ದಶಸು ಇಂದ್ರೇಷು ದ್ವಿತೀಯಃ ॥ ಸವಾಯುಃ ಹರಿತತ್ವೇಷು ರುಚಿಂ ಹ್ಯಾಪಾದ್ಯತೇ ಸದಾ– ಅತಃ ರೋಚನಃ ॥7॥

## ಕನ್ನಡಾರ್ಥ

ವಾಯುವು ಇಂಥವನೆಂಬುದಾಗಿ ವಿಶೇಷ್ಯ ಅಥವಾ ಶಕ್ಯಭಾವದಿಂದ ಅನ್ವಯವನ್ನು ತಿಳಿಯಬೇಕು. ವಿಮುಕ್ತಿಯನ್ನು 'ಗಮಯತಿ'-ಹೊಂದಿಸುವನು, ಆದುದರಿಂದ 'ವಿಮುಕ್ತಿಗ'—ಎಂದು 'ಸ ಏನಾನ್ ಬ್ರಹ್ಮಗಮಯತಿ'—ಎಂಬ ವೇದಾರ್ಥ ಅನುವಾದ ರೂಪವಾಗಿರುತ್ತದೆ. 'ಆನಂದ'-ಸುಖ, 'ದಶಮತಿ'-ಮಧ್ವಾಚಾರ್ಯರು, ಅನಿದ್ರ: ಸರ್ವದಾ ಜಾಗ್ರತರಾದುದರಿಂದ ಅನಿದ್ರರೆನಿಸುವರು. ಸರ್ವತ್ರ ಚರಿಸುವುದರಿಂದ 'ಪರಿಸರ'-ಎನಿಸುವರು. ಕೀಳಲು ಅಸಾಧ್ಯವಾದ ಕಲ್ಲಿನಂತಿರುವವನಾದುದರಿಂದ 'ಅಖಣಾಶ್ಮ'-ಎಂದು ಹೆಸರು. ಅಂದರೆ, ಅಸುರರಿಂದ ಅಭೇದ್ಯನೆಂದು ತಾತ್ಪರ್ಯ. 'ವಿಧಿ'-'ಚತುರ್ಮುಖ' ಇವೆರಡು ಚತುರ್ಮುಖನ ಹೆಸರುಗಳು. ಬ್ರಹ್ಮನ ಅವತಾರಗಳು. ಬ್ರಹ್ಮನಿಗೆ ಅವತಾರವಿಲ್ಲವೆಂದು ಹೇಳುವ ವಚನಗಳಿಗೆ ಪರಮಾತ್ಮನ ಹೊರತಾಗಿ ಬೇರೆ ಯವರಿಂದ ಉತ್ಪತ್ತಿ ಎಂಬ ಅವತಾರವಿಲ್ಲವೆಂದು ತಾತ್ಪರ್ಯ. ಪ್ರಧಾನ, ಸೂತ್ರ, ಧೃತಿ, ಸ್ಮೃತಿ, ಮೇಧಾ, ಮುಕ್ತಿ, ವಿಷ್ಣುಭಕ್ತಿ, ಚಿತ್ತ, ಮಹಾಪ್ರಭು, ಬಲಂ, ಸ್ಥಿತಿ, ಖಬಯೋಗ, ಪ್ರಾಜ್ಞಜ್ಞಾನ, ಮಹಾಗುರು, ಮಹಾಧ್ಯಾತಾ, ವಿಜ್ಞಾನ, ವೈರಾಗ್ಯ, ರೋಚನ, ಸುಖ, ಹನುಮಾನ್, ಭೀಮಸೇನ, ಆನಂದತೀರ್ಥ-ಎಂಬುದಾಗಿ, ವಾಯುದೇವರಿಗೆ ರೂಪಗಳಿರುವುದಾಗಿ ತಿಳಿಯಬೇಕು. ಮೂಲಪದ್ಯದಲ್ಲಿ ಕೆಲವೇ ರೂಪಗಳನ್ನು ಹೇಳಿದ್ದರೂ, ಈ ಎಲ್ಲ ರೂಪಗಳನ್ನೂ ಉಪಲಕ್ಷಣಾವೃತ್ತಿಯಿಂದ ಸಂಗ್ರಹಿಸಿ ತಿಳಿದುಕೊಳ್ಳಬೇಕು.

ವಾಸುದೇವನಿಂದ ಮಾಯಾನಾಮಕ ಲಕ್ಷ್ಮೀಯಲ್ಲಿ ಹುಟ್ಟಿದವನು ಪುರುಷನೆಂಬ ವಿರಿಂಚಿಯು. ಅನಿರುದ್ಧನಿಂದ ಶಾಂತಾನಾಮಕ ಜನಿಸಿದವನು ಮಹತ್ತತ್ವಾಭಿಮಾನಿಯಾದ ವಿರಿಂಚಿಯು. ಅವನಿಗೆ ಮಹಾವಿರಿಂಚಿಯೆಂದು ಹೆಸರು. ರಜೋನಿಯಾಮಕನಾದ ವಾಸುದೇವನಿಂದ ಮಾಯಾನಲ್ಲಿ ಹುಟ್ಟಿದವನಿಗೆ ವಿಧಿ

ಎಂದು ಹೆಸರು. ಬ್ರಹ್ಮಾಂಡದಲ್ಲಿ ಪದ್ಮನಾಭನಿಂದ ಹುಟ್ಟಿದವನಿಗೆ ಚತುರ್ಮುಖನೆಂದು ಹೆಸರು.

ಸಂಕರ್ಷಣನಿಂದ ಜಯಾನಲ್ಲಿ ಉತ್ಪನ್ನನಾದ ವಾಯುವಿಗೆ ಪ್ರಧಾನನೆಂದು ಹೆಸರು. ಲೋಕಚೇಷ್ಟಾಪ್ರದರಾದುದರಿಂದ ಸೂತ್ರನಾಮಕನು.

ಬದರಿಕಾಶ್ರಮದಲ್ಲಿರುವ ನಾರಾಯಣನನ್ನು ಧೈರ್ಯದಿಂದ ಸ್ತುತಿಸಲು ಆ ರೂಪವನ್ನು ಹೊಂದಿದರಾದುದರಿಂದ ಅವರಿಗೆ ಧೈರ್ಯ (ಧೃತಿ) ಎಂದು ಹೆಸರು ಬಂದಿರುತ್ತದೆ. ಸರ್ವರ ಹೃದಯದಲ್ಲಿದ್ದು, ಸರ್ವದಾ ಹರಿಯನ್ನು ಸ್ಮರಿಸುವುದರಿಂದ,ಸ್ಮೃತಿಯೆಂದು ವಾಯುದೇವರಿಗೆ ಹೆಸರು ಬಂದಿದೆ ಅಥವಾ ತಾತ್ಪರ್ಯನಿರ್ಣಯದಲ್ಲಿ ಹೇಳಿದಂತೆ, ಶ್ವೇತದ್ವೀಪದಲ್ಲಿರುವ ಹರಿಯ ರೂಪವನ್ನು ಶ್ರೀವಾಯುದೇವರೊಬ್ಬರೇ ಸದಾ ಸ್ಮರಿಸುತ್ತಿರುವುದರಿಂದ 'ಸ್ಮೃತಿ' ಎಂದು ಅವರಿಗೆ ಹೆಸರು. ಸರ್ವರ ಹೃದಯದಲ್ಲಿದ್ದು,ಜ್ಞಾನವನ್ನು ಜನಯಿಸುವುದರಿಂದ 'ಮೇಧಾ'–ಎನ್ನುತ್ತಾರೆ. ಜ್ಞಾನಹ ಮುಖಾಂತರವಾಗಿ ಭಕ್ತರಿಗೆ ಮುಕ್ತಿಯನ್ನು ಹರಿಯ ಆಜ್ಞೆಯಿಂದ ಕೊಡುವುದರಿಂದ "ಮುಕ್ತಿ"–ಎಂದು ಹೆಸರು.

ಭಕ್ತರ ಹೃದಯದಲ್ಲಿದ್ದು,ಅವರಿಗೆ ವಿಷ್ಣುವಿನಲ್ಲಿ ಭಕ್ತಿಯನ್ನು ಹೆಚ್ಚಿಸುವುದರಿಂದ 'ವಿಷ್ಣುಭಕ್ತಿ'–ಎಂದು ಹೆಸರು.

ಸರ್ವಜೀವರ ಚಿತ್ತಸ್ಥ ಹರಿಯನ್ನು ತಿಳಿಸುಲು ಚಿತ್ತರೂಪರಾದುದರಿಂದ ಚಿತ್ತವೆನ್ನುತ್ತಾರೆ.

ಸತೀಸಮೇತರಾದ ಪ್ರಭುಗಳಾದ ಸಮಸ್ತದೇವತೆಗಳಿಗೂ ಸಹ ಪ್ರಭುವಾದುದರಿಂದ ಮಹಾಪ್ರಭು ಎಂದು ಹೆಸರು.

ಸರ್ವರ ಹೃದಯದಲ್ಲಿದ್ದು,ಪುತ್ರ, ಪೌತ್ರ ಮುಂತಾದ ಜನರನ್ನು ಪಾಲಿಸುವುದರಿಂದ-ಸ್ಥಿತಿ ಎಂದು ಹೆಸರು.

ಅನಾದ್ಯನಂತಕಾಲದಲ್ಲಿ ಕಾಮ್ಯಪೂಜಾರಹಿತರಾದುದರಿಂದ 'ಋಜುಯೋಗ'-ವೆನಿಸುವರು. ಅಪರೋಕ್ಷಜ್ಞಾನದಿಂದ ಹರಿಯನ್ನು ವಾಯುದೇವರು ತೋರಿಸಿ,ತಿಳಿಸಿಕೊಡುವುದರಿಂದ, ಪ್ರಾಜ್ಞರೆಂದು ಅವರಿಗೆ ಹೆಸರು. ಪರೋಕ್ಷಜ್ಞಾನವನ್ನು ಎಲ್ಲರಿಗೂ ಕೊಟ್ಟು, ಅದರಿಂದ ಹರಿಯನ್ನು ತೋರಿಸುವುದರಿಂದ ಅವರಿಗೆ 'ಜ್ಞಾನ'-ವೆನ್ನುತ್ತಾರೆ. ಭಕ್ತರ ಹೃದಯದಲ್ಲಿದ್ದು,ಸದಾ ಹರಿಯನ್ನು ಧ್ಯಾನಿಸುವುದರಿಂದಲೂ, ಪೃಥಕ್ಕಾಗಿಯೂ ಶ್ರೀಹರಿಯನ್ನು ಸದಾ ಧ್ಯಾನಿಸುವುದರಿಂದಲೂ, ವಾಯುದೇವರಿಗೆ ಮಹಾಧ್ಯಾತವೆಂದೆನ್ನುತ್ತಾರೆ. ರುದ್ರಮುಂತಾದವರಿಂದ ತಿಳಿಯಲಾಗದ ಗುಣಗಳನ್ನು ತಿಳಿಯುವುದರಿಂದಲೂ, ಯೋಗ್ಯತಾನುಸಾರವಾಗಿ ಹರಿಯನ್ನು ತಿಳಿಯುವುದರಿಂದಲೂ 'ವಿಜ್ಞಾನ'-ವೆನ್ನುತ್ತಾರೆ. ಕಾಮ್ಯಕರ್ಮಗಳನ್ನು ಬಿಟ್ಟಿರುವುದರಿಂದ,ವೈರಾಗ್ಯವೆನ್ನುತ್ತಾರೆ. ಅಥವಾ ಯೋಗಿಗಳ ಹೃದಯದಲ್ಲಿದ್ದು, ಸತ್ಯದಲ್ಲಿಯೂ ವೈರಾಗ್ಯವನ್ನು ಹುಟ್ಟಿಸುವುದರಿಂದ ವೈರಾಗ್ಯವೆನ್ನುತ್ತಾರೆ.

ದೇವ, ಋಷಿ, ನರ-ಮುಂತಾದವರೆಲ್ಲರ ಸುಖಾಂಶಗಳಲ್ಲಿಯ ತಮ್ಮ ಸಾರಾಂಶವನ್ನು ಸ್ವೀಕರಿಸುವುದರಿಂದ 'ಸುಖಿ'-ವೆನಿಸಿಕೊಳ್ಳುತ್ತಾರೆ.

ಹದಿನಾಲ್ಕು ಇಂದ್ರರಲ್ಲಿ ಎರಡನೆಯ ಇಂದ್ರನು ರೋಚನನಾಮಕನು—ವಾಯುದೇವರೇ ! ಅವನು ಹರಿತತ್ತ್ವವಿಷಯದಲ್ಲಿ ಸದಾ ರುಚಿಯುಕ್ತನೂ, ರುಚಿಯನ್ನು ಹುಟ್ಟಿಸುವವನೂ,ಆದುದರಿಂದ ರೋಚನನೆನಿಸುತ್ತಾನೆ. ॥7॥

**ಆ. ಶ್ರೀಗುರುಹೃದಯ ಪ್ರಕಾಶಿಕೆ :-**

ಸರ್ವತ್ರ ಪ್ರಾಣರೂಪದಿಂದ ಸಂಚರಿಸುವುದರಿಂದ ಅನಿಲಸ್ಥಿತಿನಾಮಕನು.

**ರೋಚಿಶ್ಶೋಚಿರುಭ್ಯೇ ಕ್ಲೀಬೇ ಪ್ರಕಾಶೋದ್ಯೋತ ಆತಪಃ—** ಎಂಬ ನಿಘಂಟಿನಿಂದ ಅತಿಪ್ರಕಾಶರೂಪನಾದ್ದರಿಂದ, ರೋಚನನಾಮಕನು. ವಿಶಿಷ್ಟಮುಕ್ತಿ ಹೊಂದಿಸುವುದರಿಂದ,ವಿಮುಕ್ತಿಗನೆಂದು ಹೆಸರುಳ್ಳವನು. ನಂದ-ಎಂದರೆ, ಆನಂದಕರವಾದ ತೀರ್ಥವೆಂಬ ಶಾಸ್ತ್ರಕರ್ತರಾದ್ದರಿಂದ, ಆನಂದತೀರ್ಥ

ನಾಮಕರು. ದಶಮತಿ-ಎಂದರೆ, ದಶ ಶತಾದಿ ಶಬ್ದವು ಪೂರ್ಣವಾಚಕವಾದ್ದರಿಂದಲೂ, ಮತಿಶಬ್ದವು ಜ್ಞಾನವಾಚಕವಾದ್ದರಿಂದಲೂ ಸಹ ಪೂರ್ಣಪ್ರಜ್ಞರೆಂದು ಅರ್ಥ. **ದಶಪ್ರಮತಿಂ ಜನಯಂತ ಯೋಷಣಃ**– ಎಂಬ ಶ್ರುತಿ ಸಿದ್ಧವು. ಅನಿಮಿಷೇಶನೆಂದರೆ ಸರ್ವದೇವಾಧಿಪತಿ. ಅನಿದ್ರನೆಂದರೆ-ಅಜ್ಞಾನ ದೂರನು. ಶುಚಿ- ಎಂದರೆ ನಿತ್ಯಪರಿಶುದ್ಧಮೂರ್ತಿ. ಸತ್ತ್ವಪ್ರಚುರ ಶರೀರನು. ಅಣುಮಹದ್ರೂಪ ಸ್ವರೂಪನು. ಅಮೃತ-ಎಂದರೆ, ದೇಹಾಭಿಮಾನರಹಿತನಾದ್ದರಿಂದ ಅಮೃತನಾಮಕನು. **ವಾಯುರಹ್ಯತ ಸ್ಮೃತಃ**- ಹನುಮ ಭೀಮ ಮಧ್ವಾದ್ಯವತಾರರೂಪನು. ಪದ್ಮಾಸನಪದವಿಯನ್ನು ಹೊಂದುವವನು. ಮುಂದೆ ಬ್ರಹ್ಮಪದ ನಿಶ್ಚಿತವಾದ್ದರಿಂದ, ಬರುವುದಕ್ಕಿಂತ ಮುಂಚೆ ಬಂದೆನೆಂದು ಹೇಳುವಂತೆ. **ಏಷ್ಯಂತು ನಿಶ್ಚಿತಂ ಯತ್ತದತೀತತ್ವೇನ ಭಣ್ಯತೇ** ||–ಎಂಬ ವಚನಾನುಸಾರ. ಸರ್ವತ್ರವೇಗ ಉಳ್ಳವನಾದ್ದರಿಂದ, ಪರಿಸರನಾಮಕನು. ಅಖಿಣಾಶ್ಮಸಮನೆಂದರೆ-ಪರೆ ಇಲ್ಲದ ಕಗ್ಗಲ್ಲಿನಂತೆ ದೃಢಶರೀರನಾದ್ದರಿಂದ, ಅಸುರಪ್ರವೇಶಾವಕಾಶವಿಲ್ಲದವನು–ಎಂಬರ್ಥ.

**ಅಖಿಣಾಶ್ಮಾನ ಮೇವಾಪ್ಯ ಲೋಷ್ಟೋ ವಿಧ್ವಂಸತೇ ಯಥಾ |**
**ಯದಾ ವಿವದ್ಯಸುಃ ಪ್ರಾಣಂ ವಿಧ್ವದಾಸ್ತೇ ತದಾಸುರಾಃ ||**
—ಎಂಬ ಛಾಂದೋಗ್ಯಭಾಷ್ಯ. ||7||

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀವಾಯುದೇವರ ನಾನಾ ನಾಮಗಳ ವೈಶಿಷ್ಟ್ಯವನ್ನು ತಿಳಿಸುತ್ತಾರೆ.

(1) ಸರ್ವತ್ರ ಪ್ರಾಣರೂಪದಿಂದ ಸಂಚರಿಸುವುದರಿಂದ, ಶ್ರೀವಾಯುದೇವರಿಗೆ **ಅನಿಲ**–ಎಂದು ಹೆಸರು. ಅನಿಲ-ಎಂದರೆ, ವಾಯುರೂಪಸ್ಥಿತನೆಂದರ್ಥ.

(2) ಸರ್ವಜೀವರ ಸ್ಥೂಲದೇಹಗಳಲ್ಲಿ ಇದ್ದು, ತತ್ತ್ವದೇವತೆಗಳಿಗೆ ನಿಯಾಮಕರಾಗಿ, ಅವರ ದ್ವಾರಾ ದೇಹಗತಸರ್ವತತ್ತ್ವವ್ಯಾಪಾರಗಳನ್ನು

ಮಾಡಿ ಮಾಡಿಸುವರು. ಶ್ರೀವಾಯುದೇವರು ಸ್ಥೂಲದೇಹದಲ್ಲಿ ವಿದ್ಯಮಾನ ರಾಗಿರುವ ಪರ್ಯಂತ, ಪ್ರಾಣವಿರುವುದು. ಅವರು ದೇಹವನ್ನು ಬಿಟ್ಟು ತೊಲಗಿದಾಗ, ದೇಹವು ನಿಶ್ಚೇತವಾಗಿ, ಪೆಣವೆಂದೆನಿಸುವುದು. ಇದರಿಂದ ಶ್ರೀಮುಖ್ಯಪ್ರಾಣದೇವರಿಗೆ ಸ್ಥಿತಿ-ಎಂದು ಹೆಸರು. ಅವರ ಸಾನ್ನಿಧ್ಯದಿಂದ ಸ್ಥೂಲದೇಹದ ಅಸ್ತಿತ್ವ. ಈ ವಿಷಯವನ್ನೇ **ಶ್ರೀಪಾದರಾಜರು, ಶ್ರೀ ಮನ್ಮಧ್ವನಾಮದಲ್ಲಿ**-"ಪರಮ ಮುಖ್ಯಪ್ರಾಣ ತೊಲಗಲಾದೇಹವನು ಪೆಣ ನೆಂದು ಪೇಳ್ವರು ಸುಜರು"-ಎಂದಿದ್ದಾರೆ.

(3) ಯಾವ ಫಲಾಪೇಕ್ಷೆಯು ಇಲ್ಲದೇ, ಕೇವಲ ನಿಷ್ಕಾಮನಾಭಾವನೆ ಯಿಂದ ಭಗವತ್ಪರವಾದ ಸಕಲಸೇವಾಕಾರ್ಯಗಳನ್ನೂ ಮಾಡುತ್ತಿರುವರು-ಭಗವತ್ಕಾರ್ಯಧುರಂಧರರು. ಹನುಮದವತಾರದಲ್ಲಿ ಶ್ರೀರಾಮಚಂದ್ರನು ಸಕಲಭೋಗಭಾಗ್ಯಗಳನ್ನು ಕೊಡುತ್ತೇನೆಂದರೂ, ಯಾವುದನ್ನೂ ಸ್ವೀಕರಿಸ ಲಿಲ್ಲ. ಇದರಿಂದ **ವೈರಾಗ್ಯನಿಧಿಗಳು.** ಪರಮ ವೈರಾಗ್ಯಶಾಲಿಗಳು.

(4) ದ್ವಿತೀಯ ಮನ್ವಂತರದಲ್ಲಿ **ರೋಚನನಾಮಕರಾಗಿ,** ಇಂದ್ರ ಪದವಿಯನ್ನು ಶ್ರೀಪ್ರಾಣದೇವರು ಆಳಿದರು.

**"ರೋಚಿಶ್ಯೋಚಿರುಭ್ಯೇ ಕ್ಲೀಬೇ ಪ್ರಕಾಶೇಽದ್ಯೋತ ಆತಪಃ"**
—ಎಂಬ ಪ್ರಮಾಣಾನುಸಾರ. ಅತಿಪ್ರಕಾಶರೂಪವುಳ್ಳವರಾದ್ದರಿಂದ **"ರೋಚನ"**-ನಾಮಕರು.

ಎರಡನೆಯ ಮನುವು ಸ್ವಾರೋಚಿಷನೆಂಬ ಅಗ್ನಿಪುತ್ರನು. ಆ ಮನ್ವಂತ ರದಲ್ಲಿ "ವೇದಶಿರಸ್ಸೆಂಬ"-ಮಹಾತಪಸ್ವಿ ಇದ್ದನು. ಆತನ ಪತ್ನಿ "ತುಷಿತೆ" -ಎಂದು. ಅವರ ಜ್ಯೇಷ್ಠ ಪುತ್ರನೇ ರೋಚನನು. ಪೂರ್ವದಲ್ಲಿ ಸಂಕರ್ಷಣ ನಾಮಕ ಶ್ರೀಹರಿಯಿಂದ ಜಯಾದೇವಿಯಲ್ಲಿ ಜನಿಸಿದ್ದ ಸೂತ್ರನಾಮಕ ಶ್ರೀ ವಾಯುದೇವರೇ, ಈಗ ರೋಚನನಾಮಕನಾಗಿ ಜನಿಸಿ, ಸ್ವಾರೋಚಿಷಮನ್ವಂತ ರದಲ್ಲಿ ಇಂದ್ರಪದವಿಯನ್ನು ಆಳಿದರು. (ವೇದಶಿರಸ್ಸಿನ ದ್ವಿತೀಯ ಕುಮಾ

ರನೀ ವಿಭುನಾಮಕ ಶ್ರೀಪರಮಾತ್ಮನು)–ಈ ಪ್ರಮಾಣವಾಕ್ಯಗಳು ಭಾಗವತ ಮತ್ತು ವಿಷ್ಣು ರಹಸ್ಯದಲ್ಲಿವೆ.

(5) ಶ್ರೀಹರಿಯ ಆಜ್ಞೆಯಂತೆ ಮೋಕ್ಷವನ್ನು ಕೊಡಿಸುವವನಾದ್ದರಿಂದ, **ವಿಮುಕ್ತಿಗನು.** ಸರ್ವಜೀವರ ಸ್ಥೂಲದೇಹಗತನಾಗಿದ್ದು, ಪ್ರತಿದಿವಸದಲ್ಲಿ 21,600 ಸಂಖ್ಯಾಕವಾದ ಹಂಸಜಪವನ್ನು ಮಾಡಿ, ಬಿಂಬನಾದ ಶ್ರೀಹರಿಗೆ ಆ ಶ್ವಾಸಮಂತ್ರ ಜಪವನ್ನು ಅರ್ಪಿಸುವರು. ತ್ರಿವಿಧಜೀವರಿಗೆ, ಮುಕ್ತಿಯೋಗ್ಯರಿಗೆ, ನಿತ್ಯಸುಖರೂಪವಾದ ಮೋಕ್ಷವನ್ನೂ, ನಿತ್ಯಸಂಸಾರಿಗಳಿಗೆ ಸುಖದುಃಖಮಿಶ್ರವಾದ ಮಿಶ್ರಗತಿಯನ್ನೂ, ಮತ್ತು ತಮೋಯೋಗ್ಯರಿಗೆ ನಿತ್ಯ ದುಃಖರೂಪವಾದ ಅಂಧತಮಸ್ಸನ್ನು ಹೊಂದಿಸುವರು. "**ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ**"–

-ಎಂಬ ನಿರ್ಣಯ ಪ್ರಮಾಣಾನುಸಾರ–ವಿಷ್ಣುವೇ ಮುಖ್ಯಮುಕ್ತಿಪ್ರದನು. ಅವನ ಅನುಜ್ಞೆಯಿಂದ ಶ್ರೀವಾಯುದೇವರು ಮುಕ್ತಿದಾತರು.

(6) **ನಂದನಾಮಕರು.** ಮುಕ್ತಿಗೆ ಕಾರಣವಾದ ಸಚ್ಛಾಸ್ತ್ರಗಳ (ತೀರ್ಥ) ಕರ್ತರಾದ್ದರಿಂದ **ಆನಂದತೀರ್ಥರು** (ಆನಂದ–ಸುಖ–ಮುಕ್ತ್ಯಾನಂದ, ತೀರ್ಥ–ಶಾಸ್ತ್ರಗಳು). ಸಾತ್ವಿಕಜೀವರಿಗೆ ನಿತ್ಯಸುಖರೂಪವಾದ ವೈಕುಂಠಾದಿಲೋಕಗಳನ್ನು ಹೊಂದಿಸುವುದಕ್ಕೆ ಕಾರಣರಾದ್ದರಿಂದ, ನಂದನಾಮಕರು. ಸ್ವರೂಪತಃ ನಿತ್ಯಾನಂದಪೂರ್ಣರು.

(7) **ದಶ**–ಶಬ್ದವು ಅನಂತಸಂಖ್ಯಾಸೂಚಕವು. ದಶ–ಶತಾದಿ ಶಬ್ದಗಳು ಪೂರ್ಣವಾಚಕವಾದ್ದರಿಂದ, **ದಶಮತಿ**–ಎಂದರೆ, "ಪೂರ್ಣಪ್ರಜ್ಞ"–ರೆಂದರ್ಥ. (ದಶ–ಪೂರ್ಣ. ಮತಿ–ಪ್ರಜ್ಞರು).

**ದಶಪ್ರಮತಿಂ ಜನಯಂತ ಯೋಷಣಃ**"–ಎಂದು ಬಳಿತ್ಥಾ ಸೂಕ್ತ ಪ್ರಮಾಣವು.

(8) ನಿಮಿಷ–ಎಂದರೆ ರೆಪ್ಪೆ. ಅನಿಮಿಷರು–ಎಂದರೆ ರೆಪ್ಪೆ ಇಲ್ಲದವರು. ಅಂದರೆ, ನಿದ್ರಾಹೀನರಾದ ದೇವತಾವರ್ಗ. ಅವರಿಗೆ ನಿಯಾಮಕರಾದ್ದರಿಂದ, **ಅನಿಮಿಶೇಷರು.** ಅಂದರೆ, ಸರ್ವದೇವತಾಧಿಪತಿ- ಎಂದರ್ಥ.

(9) ನಿದ್ರ–ಎಂದರೆ ಅಜ್ಞಾನ. ಅನಿದ್ರಾ–ಎಂದರೆ, ಅಜ್ಞಾನರಹಿತರು. ಮಹಾಪ್ರಳಯಕಾಲದಲ್ಲಿಯೂ ಜಾಗ್ರತಾವಸ್ಥೆಯಲ್ಲಿರುವವರು. ಅತಿರೋಹಿತವಿಮಲವಿಜ್ಞಾನಿಗಳು. ಭಗವತ್ಸಂಬಂಧವಾದ ವಿಷಯದಲ್ಲಿ ಶ್ರೀವಾಯುದೇವರಿಗೆ ತಿರೋಹಿತಜ್ಞಾನವೆಂದೆಂದಿಗೂ ಇಲ್ಲ.

ಇದಲ್ಲದೆ, ಸಕಲಚೇತನರೂ ನಿದ್ರಾವಸ್ಥೆಯಲ್ಲಿರುವಾಗಲೂ, ತಾವು ಜಾಗ್ರತರಾಗಿದ್ದು, ಶ್ವಾಸಕ್ರಿಯಾರೂಪವಾದ ವ್ಯಾಪಾರವನ್ನು ಮಾಡುತ್ತಿರುವರು.

(10) ಕೇವಲ ಶುಚಿರ್ಭೂತವಾದ ದೇಹಉಳ್ಳವರು. ಸತ್ತ್ವಪ್ರಾಚುರ್ಯದಿಂದೊಡಗೂಡಿದ, ದ್ವಾತ್ರಿಂಶತಿಲಕ್ಷಣೋಪೇತವಾದ ದೇಹವು ವಾಯುದೇವರದು. ಅತ್ಯಲ್ಪ ರಜೋಗುಣ, ಸತ್ತ್ವಗುಣ ಪ್ರಾಚುರ್ಯವುಳ್ಳ ಲಿಂಗದೇಹವುಳ್ಳವರು. ಇವರಿಂದ ಇವರ ಲಿಂಗದೇಹವು ದಗ್ಧಪಟದಂತೆ ಇದ್ದು, ಕೇವಲ ಔಪಚಾರಿಕವಾಗಿದೆ. **(ಸತ್ತ್ವಾತ್ಮಕಶರೀರ).**

(11) ಅಣು ಮಹದ್ರೂಪಗಳನ್ನು ತಾಳುವ ಶಕ್ತಿ ಶ್ರೀಶನ ಪರಮಾನುಗ್ರಹದಿಂದ ಶ್ರೀವಾಯುದೇವರಿಗಿದೆ. ಶತಯೋಜನ ಪ್ರವಿಸ್ತಾರವಾದ ದಕ್ಷಿಣ ಸಮುದ್ರವನ್ನು ಹಾರುವ ಪ್ರಸಂಗದಲ್ಲಿ,ತಮ್ಮ ದೇಹವನ್ನು ಬೃಹದಾಕಾರವಾಗಿ ಬೆಳೆಸಿದರು. ಲಂಕಾಪಟ್ಟಣದಲ್ಲಿ ಸೀತೆಯನ್ನು ಹುಡುಕಲು,ಸಣ್ಣದಾದ ಅಣುರೂಪವನ್ನು ಧರಿಸಿದರು. ಅಣುಲಿಂಗದಲ್ಲಿ ಪ್ರವೇಶಉಳ್ಳಷ್ಟು ಸೂಕ್ಷ್ಮ ಶರೀರಯುಕ್ತರು.

(12) ದೇಹಾಭಿಮಾನರಹಿತರು. ಇತರ ದೇವತೆಗಳಿಗಿರುವಂತೆ ದೇಹತ್ಯಾಗರೂಪವಾದ ಮೃತಿ ಇಲ್ಲ. ಇದರಿಂದ **ಅಮೃತನಾಮಕರು,**

"**ವಾಯುಃಕಸ್ಯಮ್ಯತಃ ಸ್ಮೃತ :-** ಎಂಬ **ಪ್ರಮಾಣ.** ಭೋಜನ ಸಮಯದಲ್ಲಿ–"**ಅಮೃತ ಉಪಸ್ತರಣಮಸಿ ಸ್ವಾಹಾ**"-ಎಂಬ ಮಂತ್ರದಿಂದ ಭೋಜನಕ್ಕೆ ಕೊಡುತ್ತೇವೆ. ಏಳುವಾಗ- "**ಅಮೃತಾಪಿ ಧಾನಮಸಿ ಸ್ವಾಹಾ**"-ಎಂಬ ಮಂತ್ರ ಹೇಳುತ್ತೇವೆ. ಇದಕ್ಕೆ– "ಎಲೈ ಅಮೃತರೂಪಿ ಯಾದ ವಾಯುದೇವನೇ ! ನಾನು ಭೋಜನಮಾಡುವ ಅನ್ನಕ್ಕೆ ಹಾಸಿಗೆ ಯಾಗಿರು."– ಏಳುವಾಗ–"ಅನ್ನಕ್ಕೆ ಹೊದ್ದಿಕೆಯಾಗಿರು"–ಎಂದರ್ಥ. ಇದ ರಿಂದ ಶ್ರೀವಾಯುದೇವರು **ಅಮೃತನಾಮಕರು.**

(13) ತ್ರೇತಾಯುಗದಲ್ಲಿ ಶ್ರೀರಾಮನ ಸೇವೆಗಾಗಿ, **ಹನುಮಂತನೆಂಬ** ನಾಮದಿಂದ ಅಂಜನಾದೇವಿಯಲ್ಲಿ ಅವತರಿಸಿ, ಶ್ರೀರಾಮ ಕಾರ್ಯ ಧುರಂಧರ ರಾದರು. ದ್ವಾಪರಯುಗದಲ್ಲಿ ಶ್ರೀಕೃಷ್ಣನ ಸೇವೆಗಾಗಿ, **ಭೀಮಸೇನರೆಂದೆ** ನಿಸಿದರು. ಭಾಗವತಧರ್ಮಕ್ಕೆ ಆದರ್ಶಸ್ವರೂಪರಾದರು. ಕಲಿಯುಗದಲ್ಲಿ ಶ್ರೀವೇದವ್ಯಾಸರ ಸೇವೆಯನ್ನು ಅಪ್ರತಿಹತವಾಗಿ ಮಾಡಿ, ಸತ್ಸಿದ್ಧಾಂತರೂಪ ವಾರ ಸಚ್ಛಾಸ್ತ್ರಕರ್ತರಾಗಿ, ಸಜ್ಜನರ ಆತ್ಮೋದ್ಧಾರಕರಾಗಿ ಅವತರಿಸಿದರು— **ಆನಂದತೀರ್ಥರೆಂಬ** ಅಭಿಧಾನದಿಂದ. ಹೀಗೆ **ಹನುಮದಾದ್ಯವತಾರರಾಗಿ** ಮೆರೆದರು ಲೋಕತ್ರಯಗಳಲ್ಲಿ.

(14) ಪದ್ಮ–ಎಂದರೆ ಕಮಲ. ಆಸನ–ಪೀಠ. ಶ್ರೀಪದ್ಮನಾಭ ರೂಪೀ ಹರಿಯ ನಾಭೀಕಮಲದಲ್ಲಿ ಉತ್ಪನ್ನರಾದ ಹಿರಣ್ಯಗರ್ಭನಾಮಕರಾದ ಬ್ರಹ್ಮದೇವರು '**ಪದ್ಮಾಸನ**'ರು. ಮುಂದಿನ ಕಲ್ಪದಲ್ಲಿ ಶ್ರೀವಾಯುದೇವರು ಆ ಪದ್ಮಾಸನಪದವಿಯನ್ನು ಪರಾತ್ಪರನ ದಯದಿಂದ ಹೊಂದುವರು. ಭಾವೀಬ್ರಹ್ಮರಾದ ಶ್ರೀವಾಯುದೇವರು **ಪದ್ಮಾಸನಪದವಿ ಸಂಪ್ರಾಪ್ತರು.**

(15) ನಮ್ಮ ಸ್ಥೂಲದೇಹಗತ 72,000 ಸಂಖ್ಯಾಕವಾದ ನಾಡೀ **ವ್ಯೂಹಗಳಲ್ಲಿ** ಅತಿ ತೀವ್ರವಾಗಿ ಸಂಚರಿಸುತ್ತಾ, ನಾಡೀಗತವ್ಯಾಪಾರ, ರಕ್ತ ಪರಿಚಲನಾ ಕಾರ್ಯಗಳನ್ನು ನಿರ್ವಹಿಸುತ್ತಿರುವರು. ಸರ್ವತ್ರ ತೀವ್ರವೇಗ **ವುಳ್ಳವರಾದ್ದರಿಂದ, ಪರಿಸರನಾಮಕರು.**

"ಪರಿಸರ ನೀಸಿರೆ ಹರಿ ತಾನಿರುವನು । ಇರದಿದೆ, ತಾನಿರನು"–ಎಂಬ ಶ್ರೀಜಗನ್ನಾಥದಾಸರ ಪದವೇ ಇದಕ್ಕೆ ಪ್ರಮಾಣ.

(16) ಅಶ್ಮ–ಎಂದರೆ ಕಲ್ಲು. ಅಖಣಾಶ್ಮ–ಎಂದರೆ ವಜ್ರದ ಕಲ್ಲಿನಂತೆ ಧೃಡವಾಗಿ ಸೀಳಲು ಅಸಾಧ್ಯವಾದ–ಎಂದರ್ಥ. ಕಲ್ಯಾದಿ ಅಸುರರು ಶ್ರೀವಾಯುದೇವರಿಗೆ ಎದುರು ಬಿದ್ದಾಗ, ಮಣ್ಣಿನ ಹೆಂಟೆಯನ್ನು ದೃಢವಾದ ಕಲ್ಲಿಗೆ ಹೊಡೆದಾಗ, ಮಣ್ಣಿನ ಹೆಂಟೆಯು ಒಡೆದು ಚೂರುಚೂರಾಗುವುದು. ಆದರೆ ಕಲ್ಲು ನಿಶ್ಚಲವಾಗಿರುವುದು. ಇದರಂತೆ, ಅಸುರಭಾದಾರಹಿತರಾದ್ದರಿಂದ, **ಅಖಣಾಶ್ಮಸಮ**–ರೆಂದು ಖ್ಯಾತನಾದರು.

**(1) "ಪ್ರಾಣಸ್ಯ ನಾ ಸುರಾವೇಶೋ ಅಖಣಾಶ್ಮ ಸಮೋ ಸಃ"–**
**—ಭಾಗವತ ಏಕಾದಶಸ್ಕಂಧ ತಾತ್ಪರ್ಯ ಪ್ರಮಾಣ.**

**(2) "ಯ ಏವಾಯಂ ಮುಖ್ಯಪ್ರಾಣಾಸ್ತಮುದ್ಗೀಥ ಮುಪಾಸಾಂ ಚಕ್ರಿರೇ ।**
**ತಂ ಹೌಸುರಾ ಋತ್ವಾ ವಿದದ್ವ ಸೂರ್ಯಥಾಶ್ಮಾನಮಾಖಣಮೃತ್ವಾ ।**
**ವಿಧ್ವಂಸತೇ ಯದಾ ವಿದಧ್ವಸುಃ ಪ್ರಾಣಾಂ ವಿಧ್ಯಸ್ತಾಸ್ತೇ ತದಾಸುರಾಃ ।**
**ಅಖಣ್ಯಾಶ್ಮಾ ಸಮೇತಾಸ್ಯ ಚೋಷ್ಟ್ರೋ ವಿಧ್ವಂಸತೇ ಯಥಾ ॥ "**

**—ಛಾಂದೋಗ್ಯೋಪನಿಷದ್ಭಾಷ್ಯ ಪ್ರಮಾಣ. ॥7॥**

★★

## ಪದ್ಯ-೮

**ಮೂಲ :-**

**ಮಾತರಿಶ್ವ ಬ್ರಹ್ಮರು ಜಗ ।
ನ್ಮಾತೆಗಧಮಾಧೀನರೆನಿಪರು ।
ಶ್ರೀತರುಣಿವಲ್ಲಭನು ಈರ್ವರೊಳಾವಕಾಲದಲಿ ॥
ನೀತಭಕ್ತಿ ಜ್ಞಾನ ಬಲ ರೂ ।
ಪಾತಿಶಯದಿಂದಿದ್ದು ಚೇತನಾ ।
ಚೇತನಗಳೊಳು ವ್ಯಾಪ್ತರೆನಿಸುವ ತತ್ತದಾಹ್ವಯದಿ ॥೮॥**

**ಅವತರಣಿಕೆ :-**

ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಗೆ ಅಧಮರೂ ಆದ ಶ್ರೀಬ್ರಹ್ಮ ವಾಯುಗಳು ಶ್ರೀರಮಾವರನ ಕೃಪಾಬಲದಿಂದ ಬ್ರಹ್ಮಾಂಡಗತಸಮಸ್ತ ಚೇತನಾಚೇತನರಲ್ಲಿ ತತ್ತನ್ನಾಮಕರಾಗಿ, ವ್ಯಾಪ್ತರಾಗಿದ್ದಾರೆಂದು ತಿಳಿಸುತ್ತಾರೆ. ॥8॥

**ಪ್ರತಿಪದಾರ್ಥ :-**

**ಮಾತರಿಶ್ವ** = ಸಮಸ್ತವೇದಗಳಲ್ಲಿ ಸಂಚಾರಮಾಡತಕ್ಕ ಶ್ರೀವಾಯು ದೇವರು, **ಬ್ರಹ್ಮರು** = ಚತುರ್ಮುಖ ಬ್ರಹ್ಮದೇವರು, ಈರ್ವರೂ, ಜಗ **ನ್ಮಾತೆಗೆ** = ಜಗತ್ತಿಗೆ ಜನನಿಯಾದ ಶ್ರೀಲಕ್ಷ್ಮೀದೇವಿಗೆ, **ಅಧಮ** = ಜ್ಞಾನ ಭಕ್ತ್ಯಾದಿ ಕೋಟಿಗುಣದಿಂದ ನ್ಯೂನರು, **ಅಧೀನರು** = ಅಧೀನರಾದವರು, **ಎನಿಪರು** = ಎಂದೆನಿಸುತ್ತಾರೆ. **ಶ್ರೀತರುಣಿವಲ್ಲಭನು** = ಮಂಗಳಸ್ವರೂಪರೂ, ನಿತ್ಯಯೌವ್ವನೆಯರಾದ ಶ್ರೀಲಕ್ಷ್ಮೀದೇವಿಗೆ ಪತಿಯಾದ ಶ್ರೀಮನ್ನಾರಾಯಣನು,

**ಈರ್ವರೊಳು** = ಶ್ರೀಬ್ರಹ್ಮ ಮತ್ತು ವಾಯು ಇವರಿಬ್ಬರಲ್ಲಿಯೂ, **ಅವ ಕಾಲದಲಿ** = ಅನಾದ್ಯನಂತಕಾಲಕ್ಕೂ, **ನೀತ** = ಅವರ ಅಂತಸ್ಥಿಗೆ ಸರಿಯಾದ **ಭಕ್ತಿ** = ಭಗವದ್ವಿಷಯಕವಾದ ಪ್ರೇಮಪ್ರವಾಹರೂಪವಾದ ಭಕ್ತಿ, **ಜ್ಞಾನ** = ಸುಸಮೀಚೀನವಾದ ಜ್ಞಾನ, **ಬಲ** = ಶಾರೀರಕ ಸಾಮರ್ಥ್ಯ, ಮತ್ತು ಧೈರ್ಯಾದಿಗಳು, **ರೂಪ** = ದ್ವಾದಿತ್ರಿಂಶತಿಲಕ್ಷಣೋಪೇತವಾದ ದೇಹಗತ ರೂಪ, **ಅತಿಶಯದಿಂದ ಇದ್ದು** = ರುದ್ರಾದಿ ಇತರ ದೇವತೆಗಳಿಗಿಂತಲೂ ಅಧಿಕವಾಗಿ ವಿದ್ಯಮಾನವಾಗಿದ್ದು, **ಚೇತನ** = ಜೀವವರ್ಗ, **ಅಚೇತನ ರೊಳು** = ಜಡವರ್ಗಗಳಲ್ಲಿ, **ತತ್ತದಾಕೃಯದಿ** = ತದಾಕಾರ. ತನ್ನಾಮ ಗಳಿಂದ, **ವ್ಯಾಪ್ತರೆನಿಸುವ** = ವ್ಯಾಪ್ತರಾಗಿದ್ದಾರೆ-ಎಂದು ಎನಿಸುವವು. (ಬ್ರಹ್ಮವಾಯುಗಳು ಸ್ವತಂತ್ರರಲ್ಲ. ಅವರಲ್ಲಿ ಅಂತರ್ಯಾಮಿರೂಪದಿಂದ ಬಿಂಬ ನಾಗಿದ್ದು ಕೊಂಡು, ಬ್ರಹ್ಮಾಂಡಗತ ಚೇತನಾ ಚೇತನರಲ್ಲಿ ವ್ಯಾಪ್ತನೆಂದೆನಿಸಿ, ಅವರ ದ್ವಾರಾ ಸಕಲ ಜಗದ್ವ್ಯಾಪಾರರೂಪವಾದ ಕ್ರಿಯಾದಿಗಳನ್ನು **ಮಾಡಿ** ಮಾಡಿಸುತ್ತಿರುವನೆಂದು ತಾತ್ಪರ್ಯ). ॥8॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ವಾಯುದೇವರ, ಬ್ರಹ್ಮದೇವರ ವಿಚಾರ ಹೇಳುತಾರೆ.

ಸಮಸ್ತವೇದಗಳಲ್ಲಿ ಸಂಚಾರಮಾಡತಕ್ಕವರಾದ ಲಡಿಯಿಂದ ಈ ವಾಯು ದೇವರು, ಬ್ರಹ್ಮದೇವರೂ ಇವರಿಬ್ಬರೂ, ಚರಾಚರ ಜಗತ್ತನ್ನ ಪರ ಮಾತ್ಮನ ದ್ವಾರಾ ಸೃಷ್ಟಿಮಾಡಿದ, ಜಗತ್ತಿಗೆ ತಾಯಿಯಾದ ಶ್ರೀಲಕ್ಷ್ಮೀ ದೇವೇರಿಗೆ ಜ್ಞಾನಭಕ್ತ್ಯಾದಿ ಸರ್ವಗುಣದಿಂದ ಅಧಮರು. ಲಕ್ಷ್ಮೀದೇವೇರಿಗೆ ಅಧೀನರಾದವರು-ಎಂತ ಎನಿಸೋವರಾಗತಾರೆ. ನಿತ್ಯಯೌವ್ವನೆಯರಾದ ಶ್ರೀ ದೇವೇರಿಗೆ ಪತಿಯಾದ ಶ್ರೀನಾರಾಯಣದೇವರು, ಈ ಬ್ರಹ್ಮ—ವಾಯು

ಗಳೊಳು ಅನಾದ್ಯನಂತಕಾಲಕ್ಕೂ ನಿರಂತರ ನೀತನಾಗಿ ಬಿಂಬರೂಪಿಯಾಗಿ, ರುದ್ರಾದ್ಯಪೇಕ್ಷಯಾ ಬ್ರಹ್ಮ-ವಾಯುಗಳ ಸ್ವರೂಪಸ್ವಭಾವದಲ್ಲಿ ಅತಿಶಯದಿಂದ ಇರತಕ್ಕ ಪರಮಾತ್ಮನ ವಿಷಯಕವಾದ ಭಕ್ತಿ, ಭಗವದ್ವಿಷಯಕವಾದ ಜ್ಞಾನ, ಶರೀರದಲ್ಲಿ ಸಮೀಚೀನವಾದ ದಾರ್ಢ್ಯ ಧೈರ್ಯಾದಿಗಳು, ದುರ್ಲಕ್ಷಣರಹಿತ ವಾದ ಸಂಪೂರ್ಣಲಕ್ಷಣೋಪೇತವಾದ ರೂಪದಿಂದ ಇದ್ದು, ಸ್ಥೂಲದೇಹ ದಿಂದ ಸಹಿತರಾದ ಬ್ರಹ್ಮ-ವಾಯುಗಳ, ಚೇತನಜೀವರು, ಜಡದೇವರು ಈ ಉಭಯವಿಧರಾದ ಜೀವರ ಸ್ಥೂಲದೇಹದಲ್ಲಿ, ಅಚೇತನಶಬ್ದದಿಂದ ಶುದ್ಧ ವಾದ ಜಡಗಳಲ್ಲಿ ಈ ಯಾವತ್ತರೊಳು, ಅವರರಲ್ಲಿ ತದಾಕಾರ ತನ್ನಾಮ ದಿಂದ ವ್ಯಾಪ್ತರಾಗಿ ಇರತಕ್ಕವರೆಂದು ಎನಿಸಿದವರಾಗಿ, ಜಗತ್ಕಾರ್ಯ ಮಾಡತಾರೆ. ಎಂದರೆ, ರುದ್ರಾದಿಗಳು ವ್ಯಾಪ್ತರಾದಕಾಲಕ್ಕೂ ಜಗತ್ಕಾರ್ಯ ನಡಸೋದರಲ್ಲಿ ಸಮರ್ಥರಲ್ಲ. ಈ ಬ್ರಹ್ಮವಾಯುಗಳು ಸಮರ್ಥರಾಗಿ ಸರ್ವಕಾರ್ಯಗಳ ಪರ ಮಾತ್ಮನ ಆಜ್ಞಾದಿಂದ ಮಾಡತಾರೆ-ಎಂತ ತಾತ್ಪರ್ಯ. ॥8॥

೨. ಭಾವಪ್ರಕಾಶಿಕೆ :-

ಮೇಲಿನ ಪದ್ಯದಲ್ಲಿ ಹೇಳಿದ ಬ್ರಹ್ಮವಾಯುಗಳಿಬ್ಬರೂ ಲಕ್ಷ್ಮೀದೇವಿಯು ಕ್ಕಿಂತಲೂ ಕೋಟಿ ಗುಣಾಧಮರು ಮತ್ತು ಅವರ ಅಧೀನದಲ್ಲೇ ಇರುವವರು. ಲಕ್ಷ್ಮೀಪತಿಯಾದ ಪರಮಾತ್ಮನು ಸರ್ವಕಾಲದಲ್ಲೂ ಏಕಪ್ರಕಾರವಾದ, ಭಕ್ತಿ ಜ್ಞಾನ ಬಲಗಳಲ್ಲಿ ಮಿಕ್ಕ ರುದ್ರಾದಿ ಎಲ್ಲಾ ದೇವತೆಗಳಿಗಿಂತಲೂ ಭಕ್ತಿ ಜ್ಞಾನ ಬಲ ರೂಪದಿಂದ ಇವರಿಬ್ಬರಲ್ಲೂ ಇದ್ದು, ಚೇತನಾಚೇತನಾತ್ಮಕವಾದ ಈ ಪ್ರಪಂಚದಲ್ಲಿ ಸರ್ವತ್ರ ಆಯಾ ಹೆಸರುಗಳಿಂದ ವ್ಯಾಪ್ತರನ್ನಾಗಿ ಮಾಡಿಸಿ, ಇವ ರಿಬ್ಬರೂ ಪರಮಾತ್ಮನಂತೆ ಸರ್ವತ್ರ ವ್ಯಾಪ್ತರೆಂದು ಕೀರ್ತಿಯನ್ನು ಕೊಡಿಸು ವನು. "ಸಂಪೂರ್ಣಾನುಗ್ರಹಾದ್ವಿಷ್ಣೋಃ ವಾಯುಃ ಪೂರ್ಣಗುಣಾತ್ಮಕಃ"- ಎಂಬೀ ಏಕಾದಶ ತಾತ್ಪರ್ಯಾನುಸಾರ,ಪರಮಾತ್ಮನ ಸಂಪೂರ್ಣಾನುಗ್ರಹ ಬಲ ದಿಂದಲೇ, ಇವರಿಬ್ಬರೂ ವ್ಯಾಪ್ತತ್ವಾದಿ ಸಂಪೂರ್ಣಗುಣಸ್ವರೂಪರೆಂದು ತಾತ್ಪರ್ಯ. ॥8॥

## ೩. ಭಾವದರ್ಪಣ :–

ಮಾತರಿಶ್ವೇತಿ । ಮಾತರಿ ಪ್ರಾಣಭೂತಯೋಗಾದೌ ಶ್ವಯತಿ ಗಚ್ಛತೀತಿ ಮಾತರಿಶ್ವಾ ವಾಯುಃ । ಸಮಸ್ತ ವೇದಗಳಲ್ಲಿ ಸಂಚರಿಸತಕ್ಕವ ಎಂಬರ್ಥ । ಈ ವಾಯುದೇವರಿಗೂ ಅವತಾರಗಳಲ್ಲಿ ಕೂಡ ಶುಕ್ಲಶೋಣಿತಸಂಬಂಧ ಇಲ್ಲ ವೆಂಬೋದಕ್ಕೆ ಮಾನ । ತದುಕ್ತಂ ಗಾರುಡೇ । "ತ್ರಿಕೋಟಿರೂಪಯುಕ್ತಸ್ಯ ವಾಯೋಃಶ್ಚೈ ವ ಖಗೇಶ್ವರ । ಶುಕ್ಲಶೋಣಿತಸಂಬಂಧಹ್ಯಾವತಾರ ಚತುಷ್ಟಯೇ । ನಾಸ್ತಿನಾಸ್ತ್ಯೇವ ಪಕ್ಷೀಂದ್ರೇತಿ" । –ಬ್ರಹ್ಮವಾಯುಗಳು ವಿಷ್ಣ್ವಾವಿಶಿಷ್ಟರು-ಎಂತಲೂ, ಶ್ರೀಯಪೇಕ್ಷಯಾ ಕೋಟಿಗುಣಾಧಿಮರು—ಎಂತಲೂ, ಪ್ರಮಾಣ । "ವಿಷ್ಣ್ವಾವಿಷ್ಟೌ ಬ್ರಹ್ಮವಾಯೂ ಶ್ರೀಯಃ ಕೋಟಿ ಗುಣಾಧಮಾವಿತಿ"– ॥8॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

'ಮಾತರಿಶ್ವ'–ಇತಿ ॥ ವಾಯುಃ ॥ 'ಈರ್ವ'–ಇವರು ॥ 'ನೀತಃ'–ನಿತ್ಯದಿಂ ॥ ತತ್ಪ್ರದತ್ವೇನ ತತ್ರತ್ತದಿತ್ಯಸ್ಯ ವ್ಯಾಪ್ತಪದೇನ ಅನ್ವಯಃ ॥ 'ಪ್ರಾಣ'–ಸೂತ್ರಂ ಮಹಾನ್ ಬ್ರಹ್ಮಾ ಚಿತ್ತಂ ವಾಯುಃ ಬಲಂ ಧೃತಿಃ ಯೋಗಶ್ಚ ವೈರಾಗ್ಯಂ ಜ್ಞಾನಂ ಪ್ರಜ್ಞಾ ಸ್ಮೃತಿಃ ಸುಖಂ ॥ ಮೇಧಾ ಮುಕ್ತಿಃ ವಿಷ್ಣು ಭಕ್ತಿಃ ಆದಿಗೋಪ್ತೋಃ ಮಹಾಪ್ರಭುಃ ॥ ಋಜುಃ ಸಮಾನಃ ವಿಜ್ಞಾತಾ ಮಹಾ ಧ್ಯಾತಾ ಮಹಾಗುರುಃ ॥ ಹನೂಮಾನ್ ಭೀಮ ಆನಂದ"—ಇತಿ ಬಹು ರೂಪಿಣಃ ॥ ಆವಿಷ್ಟಃ ವಿಷ್ಣುರೇತೇಷು ನ ವಿಷ್ಣುಃ ತತ್ಸ್ವರೂಪಕಃ ವಿಷ್ಣೋಃ ಪ್ರಯತ್ನೇತದ್ವ್ಯಕ್ತ್ಯಾತದ್ ಜ್ಞಾನೇಚ ಶ್ರೀಯಶ್ಚತೇ ॥ ಮುಕ್ತಾಃ ಅಪ್ಯವರಾ ನಿತ್ಯಂ ಸರ್ವೇಕೋಟಿಗುಣೇನ ಚ. ॥8॥

## ಕನ್ನಡಾರ್ಥ

'ಮಾತರಿಶ್ವ'–ವಾಯು. 'ಈರ್ವರೊಳು'-ಎಂಬುದಕ್ಕೆ "ಇವರಿಬ್ಬರೊಳು"–ಎಂದು ಅರ್ಥ. 'ನೀತ'–ನಿತ್ಯದಲ್ಲಿಯೂ ಮುಂತಾದುವು ಬಲ, ಜ್ಞಾನ

ರೂಪಾತಿಶಯದಿಂದ ಚೇತನರೊಳು 'ತತ್ಪ್ರದತ್ವೇನ– ನಿತ್ಯಂ ಇದ್ದು'–ಅವರಲ್ಲಿ ಬಲ, ಜ್ಞಾನ, ರೂಪಾತಿಶಯಗಳನ್ನು ಕೊಡುತ್ತ, ನಿತ್ಯದಲ್ಲಿಯೂ ಇರುತ್ತ ದೆಂದು ಅನ್ವಯಿಸಿ ಅರ್ಥವನ್ನು ತಿಳಿಯಬೇಕು. ಅದರಂತೆ,'ತತ್ತದಾಹ್ವಯದಿ'- ಎಂಬುದುಕ್ಕೂ ಸಹ 'ಚೇತನರೊಳು ವ್ಯಾಪ್ತ'–ಎಂಬುವರಿಂದ ಅನ್ವಯವನ್ನು ಹೇಳಬೇಕು. ಪ್ರಾಣ, ಸೂತ್ರ, ಮಹಾನ್, ಬ್ರಹ್ಮ, ಚಿತ್ತ, ವಾಯು, ಬಲ, ಧೃತಿ, ಸ್ಥಿತಿ, ಯೋಗ, ವೈರಾಗ್ಯ, ಜ್ಞಾನ, ಪ್ರಜ್ಞಾ, ಸ್ಮೃತಿ, ಸುಖ, ಮೇಧಾ, ಮುಕ್ತಿ, ವಿಷ್ಣುಭಕ್ತಿ, ಆದಿಗೋಪ, ಮಹಾಪ್ರಭು, ಋಜು, ಸುಖ, ಸಮಾನ, ವಿಜ್ಞಾತಾ, ಮಹಾಧ್ಯಾತಾ, ಮಹಾಗುರು, ಹನೂಮಾನ್, ಭೀಮಸೇನ, ಆನಂದತೀರ್ಥ"–ಈ ಮುಂತಾದ ಬಹಳರೂಪ ಗಳು ಇರುವವು. ಶ್ರೀವಿಷ್ಣುವು ಈ ರೂಪಗಳಲ್ಲಿ ಆವೇಶಿಸಿರುತ್ತಾನೆ, ಆದರೆ ವಿಷ್ಣುವಿಗೂ, ವಾಯುವಿಗೂ ಅಭೇದವಿರುವುದಿಲ್ಲ. ಭೇದವೇ ಉಂಟು. ವಿಷ್ಣುವಿಗೆ ಪ್ರಿಯತಮರಾದ ಭಕ್ತರೆಂದರೆ, ವಾಯುದೇವರೊಬ್ಬರೇ ! ಅವರಿಗೆ ಸಮಾನರಾದ ವಿಷ್ಣುಪ್ರಿಯರೂ, ವಿಷ್ಣುವಿನಲ್ಲಿ ಭಕ್ತಿಯನ್ನು ಮಾಡತಕ್ಕವರೂ ಯಾರೂ ಇರುವುದಿಲ್ಲ. ಪರಮಾತ್ಮನ ಜ್ಞಾನದಲ್ಲಿಯೂ ಅವರಿಗೆ ಸದೃಶರೂ ಯಾರೂ ಇಲ್ಲ. ಆದರೆ, ರಮಾದೇವಿಯರಿಗೆ ವಾಯುದೇವರಿಂದಾಗಲೀ, ಅವರ ಈ ಮುಂತಾದ ರೂಪಗಳಿಂದಾಗಲೀ ಇವೆಲ್ಲ ಗುಣಗಳ ವಿಷಯದಲ್ಲಿ ಕೋಟಿಗುಣಗಳಿಂದ ಕಡಿಮೆಯಾದವುಗಳು. ॥8॥

## ಅ. ಶ್ರೀಗುರುಹೃದಯ ಪ್ರಕಾಶಿಕೆ :–

**ಮಾತರಿಶ್ವ**–ಎಂಬ ವಾಯುದೇವರೂ, ಬ್ರಹ್ಮದೇವರೂ ಸಹ ಜಗನ್ಮಾತೆ ಯಾದ ಲಕ್ಷ್ಮೀಗೆ ಅಧೀನರು. ಶ್ರೀತರುಣಿವಲ್ಲಭನೆಂಬ ಲಕ್ಷ್ಮೀಪತಿಯಾದ ವಿಷ್ಣುವು, ಇವರಿಬ್ಬರಲ್ಲೂ ನಿತ್ಯವಾದ ಭಕ್ತಿ, ಜ್ಞಾನ, ಬಲ, ರೂಪ ಮೊದ ಲಾದ ಗುಣಗಳಲ್ಲಿ ತನ್ನಾಮಕನಾಗಿ ತಾನೇ ಇದ್ದು, ಚೇತನಾಚೇತನಗಳಲ್ಲಿ ಸಹ ವ್ಯಾಪ್ತನೆನಿಸುವನು. ॥8॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಸಕಲದೇವತೆಗಳಲ್ಲಿ ಸಂಚಾರ ಮಾಡುವುವರಿಂದ ಶ್ರೀವಾಯುದೇವರಿಗೆ **ಮಾತರಿಶ್ವ**–ಎಂದು ಹೆಸರು. "**ಮಾತರಿಶ್ವಾ ಮಥಾಯತಿ**"–**ಭಳಿತ್ಥಾ ಸೂಕ್ತ.**

ಭಳಿತ್ಥಾ ಸೂಕ್ತದಿಂದ ಪ್ರತಿಪಾದ್ಯರು. ನಿಗಮಸಂಚಾರಿಗಳಾದ ಶ್ರೀ ವಾಯುದೇವರು ವೇದಪ್ರತಿಪಾದ್ಯರು.

2. ಜೀವಕೋಟಿಯಲ್ಲಿ ಸರ್ವಲಕ್ಷಣ ಮತ್ತು ಗುಣಗಳಿಂದ ಪೂರ್ಣರಾಗಿರುವುದರಿಂದ, ಬ್ರಹ್ಮ-ಎಂದು ಹೆಸರು. ಶ್ರೀಪರಮಾತ್ಮನು **ಪರಬ್ರಹ್ಮನು.** ಜೀವೋತ್ತಮರೂ, ಋಜುಗುಣಾಧಿಪರೂ ಆದ ವಿರಿಂಚಿನಾಮಕರು ಚತುರ್ಮುಖ ಬ್ರಹ್ಮದೇವರು.

3. ಶ್ರೀಹರಿಯು ಚಿತ್ಪ್ರಕೃತಿಯಾದ ಶ್ರೀಲಕ್ಷ್ಮೀದೇವಿಯರಲ್ಲಿ ಪ್ರವೇಶಿಸಿ, ಮೂಲಪ್ರಕೃತಿಯನ್ನು ಉಪಾದಾನಕಾರಣ ಮಾಡಿಕೊಂಡು, ತದ್ವಾರಾ ಜಗತ್ತನ್ನೇ ಸೃಷ್ಟಿಸುವನು. ಇದರಿಂದ,ಶ್ರೀಲಕ್ಷ್ಮೀದೇವಿಯು ಜಗನ್ಮಾತೆ-ಎನಿಸಿದ್ದಾಳೆ. ಅಂದರೆ,ಜಗಜ್ಜನನಿಯು.

4. ಮಾತರಿಶ್ವನಾಮಕರಾದ ಶ್ರೀವಾಯುದೇವರು ಮತ್ತು ಬ್ರಹ್ಮದೇವರು–ಈರ್ವರೂ ಜಗನ್ಮಾತೆಯಾದ ಶ್ರೀಲಕ್ಷ್ಮೀದೇವಿಗಿಂತ ಕೋಟಿಗುಣಗಳಿಂದ ಅಧಮರು ಮತ್ತು ಶ್ರೀಲಕ್ಷ್ಮೀಯ ಅಧೀನರು. ಬ್ರಹ್ಮವಾಯುಗಳ ಮೇಲೆ ನಿಯಾಮಕತ್ವ ಮತ್ತು ಪ್ರಭುತ್ವ ಶ್ರೀಲಕ್ಷ್ಮೀದೇವಿಯರಿಗಿದೆ.

5. ಶ್ರೀ–ಎಂದರೆ ಮಂಗಳಸ್ವರೂಪರು. ಕಾಂತಿಸಂಪನ್ನರು. ಸತ್ತ್ವಗುಣಾಭಿಮಾನಿಗಳಾದ ಶ್ರೀಲಕ್ಷ್ಮೀದೇವಿಯರು. ತರುಣಿ-ಎಂಬ ಶಬ್ದವು ನಿತ್ಯಮುಕ್ತಳೂ ನಿರ್ವಿಕಾರಳೂ ಮತ್ತು ನಿತ್ಯಯೌವ್ವನ ಸಂಪನ್ನರೂ ಆದ ಶ್ರೀರಮಾ

ದೇವಿಯರನ್ನು ಸೂಚಿಸುವುದು. ಅಂತಹ ಶ್ರೀತರುಣಿಯರಾದ ಇಂದಿರಾ ದೇವಿಗೆ ವಲ್ಲಭನು-ಎಂದರೆ ಪತಿ (ನಿಯಾಮಕ)ನಾದ ಶ್ರೀಲಕ್ಷ್ಮೀಪತಿ ಶ್ರೀ ಮನ್ನಾರಾಯಣನು.

6. ಶ್ರೀತರುಣಿವಲ್ಲಭನು ಬ್ರಹ್ಮ-ವಾಯು ಶರೀರರಲ್ಲಿ ಸದಾ ಅನಾದ್ಯನಂತಕಾಲದಿಂದಲೂ ವಿಶೇಷಸನ್ನಿಧಾನಯುಕ್ತನಾಗಿ ಇದ್ದಾನೆ. ರುದ್ರಾದಿ ಇತರ ದೇವತೆಗಳಿಗಿಂತಲೂ ಬ್ರಹ್ಮವಾಯುಗಳಲ್ಲಿ ನಿರತಿಶಯವಾದ (ಅತ್ಯಧಿಕವಾದ) ಭಗವದ್ವಿಷಯಕವಾದ ಸಮೀಚೀನ ಜ್ಞಾನ, ಭಗವದ್ವಿಷಯದಲ್ಲಿ ಅಚಲವಾದ ನಿಷ್ಕಾಮರೂಪವಾದ ಭಕ್ತಿಯ ಆಧಿಕ್ಯ, ದೇಹಬಲ ಧಾರ್ಢ್ಯ ಇತ್ಯಾದಿ ರೂಪಾತಿಶಯಗಳಿಂದ ಇದ್ದಾನೆ.

7. ಬ್ರಹ್ಮಾಂಡವು ಚೇತನಾಚೇತನಾತ್ಮಕವಾದ್ದು. ಶ್ರೀಶನ ವಿಶೇಷ ಸನ್ನಿಧಾನಯುಕ್ತರೂ, ಅವನ ಮುಖ್ಯ ಪ್ರತೀಕರೂ ಆದ ಬ್ರಹ್ಮವಾಯುಗಳು ಸಕಲಚರಾಚರಗಳಲ್ಲಿ ವ್ಯಾಪ್ತರಾಗಿ, ಅವುಗಳ ಹೆಸರು, ರೂಪ, ಆಕಾರಗಳಿಂದಲೇ ಕರೆಯಿಸುತ್ತಾ, ಸಕಲ ತತ್ತ್ವವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವರು. ಈ ಅಧಿಕಾರ ರುದ್ರಾದಿ ದೇವತೆಗಳಿಗಿಲ್ಲ. ||8||

★★

## ಪದ್ಯ-೯

**ಮೂಲ :-**

**ಸರಸವತಿ ವೇದಾತ್ಮಿಕಾ ಭುಜಿ |**
**ನರಹರಿ ಗುರುಭಕ್ತಿ ಬ್ರಾಹ್ಮೀ |**
**ಪರಮ ಸುಖ ಬಲಪೂರ್ಣೆ ಶ್ರದ್ಧಾ ಪ್ರೀತಿ ಗಾಯತ್ರಿ ||**
**ಗರುಡಶೇಷರ ಜನನಿ ಶ್ರೀ ಸಂ |**
**ಕರುಷಣ ಜಾಯಾ ತನುಜೆ ವಾಣೀ |**
**ಕರಣನಿಯಾಮಕೆ ಚತುರ್ದಶಭುವನ ಸನ್ಮಾನ್ಯೆ ||೯||**

**ಅವತರಣಿಕೆ :-**

ಬ್ರಹ್ಮವಾಯುಗಳಿಗೆ ಅವರರಾದ ಶ್ರೀಸರಸ್ವತೀದೇವಿಯ ವಿಚಾರವನ್ನು ತಿಳಿಸುತ್ತಾರೆ. ॥9॥

**ಪ್ರತಿಪದಾರ್ಥ :-**

**ಸರಸವತಿ** = ಸರಸ್ವತೀ ಎಂದು ನಾಮ ಪಡೆದಿರುವ, **ವೇದಾತ್ಮಿಕಾ** = ವೇದಾಭಿಮಾನಿಯಾದ, **ಭುಜ** = ಸರ್ವಭೋಗಗಳನ್ನೂ ಶ್ರೀವಿಷ್ಣುವಿನ ಪ್ರೀತ್ಯರ್ಥವಾಗಿಯೇ ಭುಂಜಿಸುವುದರಿಂದ "ಭುಜ"-ನಾಮಕರೂ, **ನರಹರಿ** = ಶ್ರೀನರಸಿಂಹರೂಪನಾದ ಪರಮಾತ್ಮನಲ್ಲಿ, **ಗುರು** = ತನಗೆ ಪತಿಯು ಮತ್ತು ಗುರುವೂ ಆದ ಬ್ರಹ್ಮದೇವರಲ್ಲಿ. **ಭಕ್ತ** = ನಿರತಿಶಯವಾದ ಭಕ್ತಿಯುಳ್ಳವರೂ, **ಬ್ರಾಹ್ಮೀ** = ಬ್ರಹ್ಮದೇವರ ಪತ್ನಿಯಾದುದರಿಂದ "ಬ್ರಾಹ್ಮೀ" ನಾಮಕರೂ, **ಪರಮಸುಖ ಬಲಪೂರ್ಣೆ** = ಶ್ರೇಷ್ಠವಾದ ಆನಂದ, ಮತ್ತು ಸಾಮರ್ಥ್ಯಪೂರ್ಣರೂ, **ಶ್ರದ್ಧಾ** = ಶ್ರದ್ಧಾನಾಮಕರಾಗಿ ಆಸ್ತಿಕ್ಯಬುದ್ಧಿಗೆ ಅಭಿಮಾನಿಗಳೂ,(ಭಾರತೀದೇವಿಯರಿಗೂ "ಶ್ರದ್ಧಾ"-ಎಂಬ ಹೆಸರಿನ.) **ಪ್ರೀತಿ** = ಭಕ್ತಿಗೆ ಅಭಿಮಾನಿಗಳೂ (ಭಕ್ತ್ಯಾಭಿಮಾನಿ-ಪ್ರೀತಿ ಎಂದರೆ ಭಕ್ತಿ). **ಗಾಯತ್ರಿ** = ಗಾಯತ್ರಿ, ಸರಸ್ವತಿ, ಸಾವಿತ್ರಿ-ಎಂಬ ಮೂರು ಹೆಸರುಗಳಿಂದ ಯುಕ್ತರೂ, **ಗರುಡ ಶೇಷರ ಜನನಿ** = ಗರುಡ ಮತ್ತು ಶೇಷದೇವರ ತಾಯಿಯೂ, **ಶ್ರೀಸಂಕರುಷಣಜಾಯಾ ತನುಜ** = ಶ್ರೀಸಂಕರ್ಷಣನಾಮಕ ಪರಮಾತ್ಮನ ಪತ್ನಿಯಾದ ಜಯಾದೇವಿಯ ಪುತ್ರಿಯೂ, **ವಾಣೀ** ವಾಗಭಿಮಾನಿಯೂ, **ಕರಣನಿಯಾಮಕ** = ಇಂದ್ರಿಯಾಭಿಮಾನಿದೇವತೆಗಳಿಗೆ ನಿಯಾಮಕರೂ, **ಚತುರ್ದಶಭುವನ ಸನ್ಮಾನ್ಯೆ** = ಬ್ರಹ್ಮಾಂಡದಲ್ಲಿ ವಿದ್ಯಮಾನರಾಗಿರುವ ಸಕಲಸಜ್ಜನರಿಂದಲೂ ಪೂಜಿತರಾದ ಶ್ರೀಸರಸ್ವತೀದೇವಿಯರು. ॥9॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಈ ಬ್ರಹ್ಮ-ವಾಯುಗಳಿಗೆ ಅವರರಾದ ಸರಸ್ವತೀದೇವೇರ ವಿಚಾರ ಹೇ ತಾರೆ.

**ಚತುರ್ಮುಖಸ್ಯ ಭಾರ್ಯಾ ತು ಸರಸ್ವತೀ**-ಎಂತ ಇರುವದ್ದರಿಂದ, ಸರಸ್ವತೀ-ಎಂತ ನಾಮ ಪಡೆದವರು. ವರ್ತಮಾನ ವೇದಾಭಿಮಾನಿಯಾದವರು. ಶ್ರೀನರಸಿಂಹರೂಪಿ ಪರಮಾತ್ಮನನ್ನು, ತನಗೆ ಪತಿಯೂ ಗುರುವೂ ಆದಂಥ ಬ್ರಹ್ಮದೇವರನ್ನು-ಈ ಉಭಯರಲ್ಲಿ ಭಕ್ತಿಮಾಡಿ, ಅವರಲ್ಲಿ ಇರತಕ್ಕ ಮಹಾತ್ಮ್ಯಗಳ ತಿಳಿದು, ಅದರಿಂದ ಜನಿತವಾದ ಆನಂದಾಖ್ಯ ಫಲವನ್ನ ಅತ್ಯಂತ ಪ್ರೀತಿಯಿಂದ ಭೋಜನಮಾಡತಕ್ಕವರು. ಬ್ರಾಹ್ಮೀ-ಎಂತ ನಾಮ ಪಡೆದವರು. (ಬ್ರಹ್ಮನ ಪತ್ನಿಯರಾದ ಕಡಿಯಿಂದ). **ಸದಾ ಸುಖಸ್ವರೂಪಸ್ಯಾದ್ಭಾರತೀ ತು ಸುಖಾತ್ಮಿಕಾ**-ಎಂತ ಇರುವದ್ದರಿಂದ, ರುದ್ರಾದ್ಯಪೇಕ್ಷಯಾ ಅತ್ಯಂತ ಉತ್ತಮವಾದ, ಅಜ್ಞಾನಾದಿದೋಷದಿಂದ ರಹಿತವಾದ ಸಮೀಚೀನವಾದ ಸುಖವನ್ನು, ಬಲ ಇವುಗಳಿಂದ ಪೂರ್ಣರಾದವರು. **ರೋಚನೇಂದ್ರಸ್ಯ ಭಾರ್ಯಾ ಸಾ ಶ್ರದ್ಧೇತಿ ಪರಿಕೀರ್ತಿತಾ**-ಎಂತ **ಗಾರುಡೇ**. ರೋಚನನಾಮಕದೇವರ ಪತ್ನಿಯಾದವರು ಎಂತ ಅರ್ಥ. ಆಸ್ತಿಕ್ಯಬುದ್ಧಿಗೆ ಅಭಿಮಾನಿ. **ಮಹಾವಿರಿಂಚಿಭಾರ್ಯಾ ತು ಗಾಯತ್ರೀ ಪರಿಕೀರ್ತಿತಾ**-ಎಂತ **ಗರುಡಪುರಾಣೋಕ್ತಿ**-ಇರುವದ್ದರಿಂದ, ಗಾಯತ್ರೀ-ಎಂತ ನಾಮ. **ಪುರುಷಾಖ್ಯ ವಿರಿಂಚಿಸ್ಯ ಸರಸ್ವತ್ಯಾಂ ಖಗೇಶ್ವರಃ । ಪ್ರಧಾನ ಸಂಜ್ಞಕೋ ವೋ ವೈ ಜಾತಃ ಶೇಷೋ ಮಹಾಬಲಃ ॥**-ಎಂತ ಇರುವದ್ದರಿಂದ. ಗರುಡ-ಶೇಷರಿಗೆ ತಾಯಿಯಾದಂಥಾವರು. ಕಾಂತಿಸಂಪನ್ನನಾದ ಸಂಕರ್ಷಣದೇವರ ಪತ್ನಿಯಾದ ಜಯಾನಾಮಕ ಲಕ್ಷ್ಮೀದೇವೇರಿಗೆ ಪುತ್ರಿಯಾದಂಥಾವರು.

**ವಾಣೀತಿ ಸಂಜ್ಞಕಾ ವೀಂದ್ರ ಬ್ರಹ್ಮಾಣೀತಿ ಚ ಕೀರ್ತಿತಾ**–ಎಂತ ಇರುವ ದ್ದರಿಂದ, ವಾಣೀ ಎಂತ ನಾಮ ಪಡೆದವರು. ಸ್ತ್ರೀಯರ ಏಕಾದಶೇಂದ್ರಿಯ ಗಳಿಗೂ ನಿಯಾಮಕರು. ಬ್ರಹ್ಮಾಂಡಾಂತ ಚತುರ್ದಶ ಲೋಕಗಳಲ್ಲಿ ಇರತಕ್ಕ ಸಮಸ್ತರಾದ ಸಜ್ಜನರಿಂದ ಪೂಜಿತರಾದವರು. ಅಂತು ಸರಸ್ವತೀ ರೂಪಗಳು– 1. ಸರಸ್ವತೀ, 2. ಶ್ರದ್ಧಾ, 3. ಗಾಯತ್ರೀ, 4. ಸಾವಿತ್ರೀ ಎಂತ ನಾಲ್ಕು ರೂಪಗಳು ಎಂತ ತಾತ್ಪರ್ಯ. ॥9॥

**ವಿಶೇಷಾರ್ಥ :–** ಶ್ರದ್ಧೆ ಆಸ್ತಿಕ್ಯ ಬುದ್ಧಿಗೆ ಅಭಿಮಾನಿ. ॥9॥

**೨. ಭಾವಪ್ರಕಾಶಿಕೆ :–**

ಸರಸ್ವತಿದೇವಿಯರು ಸರ್ವವೇದಗಳಿಗೂ ಅಭಿಮಾನಿಯಾದುದರಿಂದ, **ವೇದಾತ್ಮಿಕಾ**–ಎಂದು ಹೆಸರು. ಗರುಡಪುರಾಣ ಬ್ರಹ್ಮಕಾಂಡದ "ಸರ್ವವೇದಾಭಿಮಾನಿತ್ವಾತ್ಸರ್ವ ವೇದಾತ್ಮಿಕಾ ಸ್ಮೃತಾ"–ಎಂಬ ವಾಕ್ಯವು. ಇದಕ್ಕೆ ಆಧಾರವು. ಅದೇ ಗರುಡಪುರಾಣದಲ್ಲಿ "ಭುಂಜ್ಯತೇ ಸರ್ವ ಭೋಗಾಂಸ್ತು ವಿಷ್ಣು ಪ್ರೀತ್ಯರ್ಥಮೇವ ಚ ॥ ಅತಸ್ತು ಭಾರತೀಪ್ಯೇಷಾ ಭುಜಿ ಸಂಜ್ಞಾ ಖಗೋತ್ತಮಾ".– ಎಲೈ ಪಕ್ಷಿ ಶ್ರೇಷ್ಠನಾದ ಗರುಡನೆ, ಸರ್ವಭೋಗಗಳನ್ನು ಶ್ರೀ ವಿಷ್ಣು ಪ್ರೀತ್ಯರ್ಥವಾಗಿಯೇ ಭುಂಜಿಸುವುದರಿಂದ, ಶ್ರೀಭಾರತೀದೇವಿಗೆ **ಭುಜಿ** ಎಂದು ಹೆಸರು-—ಎಂದು ಹೇಳಿರುವರು. ಪತ್ಯಂತರ್ಗತಪರಮಾತ್ಮನನ್ನು ಹೊರತು, ಮತ್ತೊಬ್ಬರನ್ನು ಚಿಂತಿಸದೇ ಪತ್ಯಂತರ್ಗತ ಪರಮಾತ್ಮನಲ್ಲೇ ದೃಢವಾದ ಭಕ್ತಿಯಿಂದ ಉಪಾಸನೆಮಾಡುವುದರಿಂದ ಸರಪತಿ ಗುರುಭಕ್ತಿ–ಎಂದು ಹೆಸರು. ಬ್ರಹ್ಮಪತಿಯಾದುದರಿಂದ ಬ್ರಾಹ್ಮೀ ಎಂದು ಹೆಸರು. ಪೂರ್ಣಾನಂದ ಸ್ವರೂಪರು. ಪೂರ್ಣಬಲವುಳ್ಳವರು. ಶ್ರದ್ಧಾ-ಎಂಬ ಹೆಸರು ಭಾರತೀ ದೇವಿಯರದಾದರೂ, ಸರಸ್ವತಿದೇವಿಯರಿಗೂ ಅದೇ ಹೆಸರಿರುವುದರಿಂದ ಎಂಬ ಹೆಸರು. ಮ ॥ ಭಾ॥ತಾ॥ನಿರ್ಣಯ ಮೂರನೆಯ ಅಧ್ಯಾಯದಲ್ಲಿ "ಪ್ರದ್ಯುಮ್ನಶ್ಚಾಥಕೃತೌ ಸ್ತ್ರೀಯೌ ದ್ವೇ ॥ ಪ್ರಜಪ್ನ ತುರ್ಯವಪುಷೀ ತತ್ರಪೂರ್ವಾ ಪ್ರಧಾನ ಸಂಜ್ಞಾ ಪ್ರಕೃತಿರ್ಜನಿತ್ರಿ ॥11॥ ಶ್ರದ್ಧಾ ದ್ವಿತೀಯಾಥ ತಯೋಶ್ಚ

**ದ್ಯೋಗೋ ಬಭೂವ ಪುಂಸ್ತ್ವೇವ ಚ ಸೂತ್ರನಾಮ್ನಾ** ॥ ಹರೇರ್ನಿಯೋಗಾತ್
ಸಂಪ್ರಸೂತೌ ಶೇಷಃ ಸುಪರ್ಣಶ್ಚ ತಯೋಃ ಸತ್ಯೈವ ॥12॥ ಪ್ರದ್ಯುಮ್ನನ ಪ
ಯಿಂದ ಕೃತೀದೇವಿಯರಲ್ಲಿ ಅವಳ ಜಪಳಿಗಾಗಿ ಇಬ್ಬರು ಹೆಣ್ಣುಮಕ್ಕಳು ಹುಟ್ಟಿ
ದರು. ಅವರಲ್ಲಿ ಮೊದಲನೆಯ ಆಕೆಯು **ಪ್ರಧಾನಾ** ಎಂಬ ಹೆಸರುಳ್ಳ
ಸೃಷ್ಟಿಗೆ ಕಾರಣರಾದ ಪ್ರಕೃತಿಯು. ಎರಡನೆಯ ಆಕೆಯು **ಶ್ರದ್ಧಾದೇವಿಯು**.
ಇವರಿಬ್ಬರಿಗೂ ಪುರುಷನಾಮಕ ಬ್ರಹ್ಮದೇವರಿಂದಲೂ, ಸೂತ್ರನಾಮಕ ವಾಯು
ದೇವರಿಂದಲೂ ಸಂಬಂಧವಾದವು. ಅಂದರೆ, ಪ್ರಧಾನನಾಮಕರಾದ ಪ್ರಕೃತಿ
ಬ್ರಹ್ಮದೇವರೂ, ಶ್ರದ್ಧಾದೇವಿಯರಿಗೆ ವಾಯುದೇವರೂ ಪತಿಗಳಾದರೆಂದರ್ಥ.
ಇವರಿಬ್ಬರ ಗೆಳೆಯಿಂದ ಆ ಇಬ್ಬರು ಸ್ತ್ರೀಯರಲ್ಲಿ ಶೇಷನೂ, ಗರುಡನೂ
ಹುಟ್ಟಿದರು ಎಂದು ಹೇಳಿರುವರು. ಹೀಗೆ ಶ್ರದ್ಧಾದೇವಿಯರು, ವಾಯು
ದೇವರ ಪತ್ನಿಯಾದ ಭಾರತೀದೇವಿಯರ ಹೆಸರಾದರೂ, ಸರಸ್ವತೀದೇವಿಯರಿಗೂ
ಅದೇ ಹೆಸರುಂಟೆಂದು ತೋರಿಸುವುದಕ್ಕಾಗಿ, ದಾಸರಾಯರು ಸರಸ್ವತೀದೇವಿಯರ
ಹೆಸರಿನಲ್ಲಿ ಶ್ರದ್ಧೆಯನ್ನು ಸೇರಿಸಿದರು. ಇದೇ ಪ್ರಮಾಣದಿಂದ, ಗರುಡಶೇಷ
ಜನನಿ-ಎಂಬುದಕ್ಕೂ ಅರ್ಥವು ಹೇಳಿದಂತಾಯಿತು. ಪತಿಗೂ ಲೋಕದಲ್ಲಿ
ಸರ್ವರಿಗೂ ವಾಗ್ರೂಪರಾಗಿ, ಪ್ರೀತ್ಯಾಸ್ಪದರಾದುದರಿಂದ **ಪ್ರೀತಿ** ಎಂದು ಹೆಸರು.
ಸರಸ್ವತೀದೇವಿಯರಿಗೆ, ಮೂರು ರೂಪಗಳೆಂದು ವಿಷ್ಣುರಹಸ್ಯದಲ್ಲಿ ಹೇಳಿರು
ವರು. ವಿಷ್ಣುರಹಸ್ಯ 16ನೆಯ ಅಧ್ಯಾಯದಲ್ಲಿ "ಅಥಾಪಚಯ ಪಾಪಸ್ನ
ಪ್ರಕೃತಿ ಸ್ತ್ರೀವಿಧಾ ಭವತ್. ॥15॥ ಸತ್ವಾದಿ ಗುಣಯೋಗೇನ ಗಾಯತ್ರೀ
ಸರಸ್ವತೀ ॥ ಸಾವಿತ್ರೀತಿ ಚತಾಸ್ವೇಕೋ ಬ್ರಹ್ಮಾವೀರ್ಯಮವಾ ಸೃಜತ್ ॥16॥
ಅದರ ಮೇಲೆ ಪ್ರಕೃತಿಯೆಂಬ ಬ್ರಹ್ಮದೇವರ ಪತ್ನಿಯು ವೃದ್ಧಿಯನ್ನು ಹೊಂದಿ
ಸತ್ವರಜಸ್ತಮೋಗುಣಗಳ ಭೇದದಿಂದ ಮೂರು ರೂಪಗಳನ್ನು ಧರಿಸಿದಳು.
ಆ ರೂಪಗಳ ಹೆಸರು ಗಾಯತ್ರಿ, ಸರಸ್ವತೀ, ಸಾವಿತ್ರಿಯೆಂದು. ಇವರು
ಮೂವರಲ್ಲಿ ಬ್ರಹ್ಮದೇವರು ವೀರ್ಯದಾನ ಮಾಡಿದರೆಂದು ಹೇಳಿರುವರು. ಈ
ಆಧಾರದ ಮೇಲೆ **ಗಾಯತ್ರೀ** ಎಂದು ಸರಸ್ವತೀದೇವಿಯರ ರೂಪಾಂತರವೆಂದು
ಸಿದ್ಧವಾಯಿತು. ಶ್ರೀಸಂಕರ್ಷಣಜಯಾತನುಜೆ **ವಾಣೀ**-ಎಂದು ಒಂದೇ ಪದ
ಮಾಡಬೇಕು. ಏಕೆಂದರೆ, ಸರಸ್ವತಿ ಭಾರತಿಯರಿಬ್ಬರೂ ಪ್ರದ್ಯುಮ್ನನ ದೇ

ಯಿಂದ ಕೃತೀದೇವಿಯಲ್ಲಿ ಜನಿಸಿದರೆಂದು ಮೇಲೆ ಉದಾಹರಿಸಿದ ನಿರ್ಣಯ ಮೂರನೆಯ ಅಧ್ಯಾಯ 11-1-ನೆಯ ಶ್ಲೋಕಗಳಿಂದ ಸ್ಪಷ್ಟವಾಗುವುದು. ಭಾರತೀದೇವಿಯರನ್ನು ಸ್ತೋತ್ರ ಮಾಡುವ ಪ್ರಕರಣ ಇದೇ ಹರಿಕಥಾಮೃತ ಸಾರ ಮೊದಲನೆಯ ಸಂಧಿಯಲ್ಲಿ "ಕೃತಿರಮಣ ಪ್ರದ್ಯುಮ್ನನಂದನೆ"-ಎಂದು ಹೇಳಿರುವರು. ಸರಸ್ವತೀ ಭಾರತೀಯರಿಬ್ಬರೂ "ಪ್ರದ್ಯುಮ್ನ ತಶ್ಚಾಥ ಕೃತೌ ಸ್ತ್ರೀಯೌ ದ್ವೇ"-ಎಂಬ ಶ್ಲೋಕದಿಂದ, ಅವಳಿಜವಳಿಯಾಗಿ ಹುಟ್ಟಿದವರೆಂದು ಹೇಳಿರುವರು. ಹೀಗೆ ದಾಸರಾಯರ ಉಕ್ತಿಯೂ, ಶ್ರೀಮದಾಚಾರ್ಯರ ಉಕ್ತಿಯೂ ಇರುವುದರಿಂದಲೂ, ಸಂಕರ್ಷಣನ ದೆಶೆಯಿಂದ ಜಯಾದೇವಿಯಲ್ಲಿ ಜನಿಸಿದರೆಂಬುದಕ್ಕೆ ಆಧಾರವಿಲ್ಲದುದರಿಂದಲೂ, ಸರಸ್ವತೀದೇವಿಯರು ಸಂಕ ರ್ಷಣ ಜಯಾತನುಜೆಯೆಂದು ಹೇಳಲು ಸಾಧ್ಯವಿಲ್ಲ. ವಾಸುದೇವನ ದೆಶೆ ಯಿಂದ ಮಾಯಾದೇವಿಯಲ್ಲಿ ಪುರುಷನಾಮಕ ಬ್ರಹ್ಮದೇವರೂ, ಸಂಕರ್ಷಣನ ದೆಸೆಯಿಂದ ಜಯಾದೇವಿಯಲ್ಲಿ ಸೂತ್ರನಾಮಕ ವಾಯುದೇವರು ಜನಿಸಿದರೆಂದು ನಿರ್ಣಯದಿಂದ ಸಿದ್ಧವಾಗುವುದು. ಆದ್ದರಿಂದ "ಶ್ರೀಸಂಕರುಷಣ ಜಯಾ ತನುಜವಾಣೀ"-ಎಂದು ಒಂದೇ ಪದ ಮಾಡಿ, ಸಂಕರ್ಷಣನ ದೆಶೆಯಿಂದ ಜಯಾದೇವಿಯಲ್ಲಿ ಜನಿಸಿದ ವಾಯುದೇವರಿಗೆ, ವಾಣೀ ಎಂದರೆ ವಾಗ್ರೂಪ ಳಾಗಿರುವಳೆಂದು ಅರ್ಥಮಾಡಲು ಕಾರಣವಾಯಿತು. ವಾಯುದೇವರ ಮುಖ ದಿಂದ ವೇದಗಳು ಯಾವಾಗಲೂ ಪರಮಾತ್ಮನ ಸ್ತೋತ್ರರೂಪವಾಗಿ ಹೊರಡು ತ್ತಿರುವುವು. ಸರಸ್ವತಿಯು ವೇದಾತ್ಮಿಕಳಾದುದರಿಂದ, ವೇದಸ್ವರೂಪಳಾಗಿ ವಾಯುದೇವರ ಮುಖದ ದೆಶೆಯಿಂದ ಹೊರಡುತ್ತಿರುವಳೆಂಬ ತಾತ್ಪರ್ಯ. "ಗೀರ್ವಾಗ್ವಾಣೀ ಸರಸ್ವತೀ"-ಎಂಬ ಅಮರಕೋಶದ ರೀತ್ಯಾ, ವಾಕ್ಕಿಗೂ **ವಾಣೀ**-ಎಂಬ ಹೆಸರು ಸಿದ್ಧವಾಗುವುದು. ವಾಯುದೇವರ ಮುಖದಿಂದ ವೇದ ಗಳು ಹೊರಡುತ್ತಿರುವವು-ಎಂಬ ವಿಷಯದಲ್ಲಿ ಭಾಗವತ ದಶಮಸ್ಕಂಧ ವೇಣು ಗೀತೆಯಲ್ಲಿ "ವನಚರೋಗಿರಿತಟೇಷು ಚರಂತೀರ್ವೇಣುನಾಹ್ವ ಯತಿಗಾಃ ಸಯ ದಾಹಿ" ॥-ಎಂಬ ಶ್ಲೋಕಕ್ಕೂ,ವಿಜಯಧ್ವಜೀಯ ವ್ಯಾಖ್ಯಾನದಲ್ಲಿ ಗೋಪಾಲ ಕೃಷ್ಣನ ಪರವಾಗಿ ಒಂದರ್ಥವನ್ನೂ, ಮೂಲರೂಪಿಯಾದ ಶ್ರೀನಾರಾಯಣನ ಪರವಾಗಿ ಒಂದರ್ಥವನ್ನೂ ಮಾಡಿರುವರು. ನಾರಾಯಣನ ಪರವಾಗಿ

ವ್ಯಾಖ್ಯಾನ ಮಾಡಿರುವ ವಿವರ ಹೇಗೆಂದರೆ-"ವನಚರ-ವನೇ-ಜಲೇ-ಚರಣ ಶಯನಂ ಜಲ ಶಯನ ಇತ್ಯರ್ಥಃ । ಗಿರಿತಟೇಷು ಚರಂತೀಃ = ವಾಯೋಃ ಗಿರಿ ತಟವದ್ವಿಸ್ತೃತೇ ಮುಖೇ ವರ್ತಮಾನಾಃ ಗಾಃ ವೇದವಾಣೀಃ ಆಪ್ತೃಯಃ ಸನಕಾದಿಭಿಃ ಸ್ತೂಯಮಾನಃ ಜಲಶಯನಃ ಆದಿಪುರುಷಃ ವಾಯುಮುಖೇ ವರ್ತಮಾನ ಶ್ರುತೀಃ ತದರ್ಥ ಕಥನಪೂರ್ವಕ ಮುಪದಿಶತಿ"- ॥8॥ ವನ ಭಾಸ್ಕಪ್ರಕಾಶನೇ-ಎಂಬ ಕೋಶಬಲದಿಂದ ವನವೆಂದರೆ, ಅಗ್ನಿಗೂ, ಜಲ ಕಕ್ಕೂ, ಅಡವಿಗೂ ಸಹ ಹೆಸರು. ಪ್ರಕೃತ ವನಚರನೇಂದರೆ- ಕ್ಷೀರಸಮುದ್ರದ ಮಧ್ಯದಲ್ಲಿ ಮಲಗಿದವನೆಂದರ್ಥ. ಇಂತಹಾ ಆದಿಪುರುಷನು ತನ್ನ ಅನುಗ ರಾದ ಸನಕಾದಿಗಳಿಂದ ಸ್ತುತ್ಯಮಾನನಾಗಿ ಬೆಟ್ಟದ ತಳದಂತೆ, ವಿಸ್ತಾರವಾದ ವಾಯುದೇವರ ಮುಖದೀಂದ ಹೊರಡುವ ಶ್ರುತಿವಾಕ್ಯಗಳನ್ನು ತನ್ನ ಸಮೀಪಕ್ಕೆ ಕರೆದುಕ್ಕೊಂಡು, ಅದರರ್ಥವನ್ನು ಸನಕ ಮೊದಲಾದ ಋಷಿಗಳಿಗೆ ಉಪದೇಶ ಮಾಡುತ್ತಿರುವನು- ಎಂದು ಅರ್ಥಮಾಡಿರುವರು. ಈ ಆಧಾರದಮೇಲೆ ವಾಯುದೇವರ ಮುಖದೀದ ಶ್ರುತಿರೂಪಳಾಗಿ ಸರಸ್ವತಿಯು ಹೊರಡುತ್ತಿರುವ ಳೆಂದು ಅರ್ಥಮಾಡುವುದು ಸರ್ವಸಮ್ಮತವು. ಅಂದರೆ,ಆಚಾರ್ಯರ ವಾಕ್ಯಕ್ಕೂ, ದಾಸರಾಯರವಾಕ್ಯಕ್ಕೂ ಪರಸ್ಪರ ವಿರೋಧವಿಲ್ಲವೆಂದು ಹೀಗೆ ಅರ್ಥವು ಏರ ಯಲ್ಪಟ್ಟದೆ. ತತ್ವನಿಯಾಮಕರು, ಮತ್ತು 14 ಲೋಕದಲ್ಲೂ ಪೂಜ್ಯ ರೆಂದರ್ಥ. ॥9॥

**4. ಭಾವದರ್ಪಣ :-**

ಸರಸ್ವತೀದೇವಿಯ ನಾಮ ಹೇಳುತ್ತಾರೆ । ಸರಸ್ವತೀತಿ । ಸರ್ವವೇದಾಭಿ ಮಾನಿಯಾದ್ದರಿಂದ, ವೇದಾತ್ಮಿಕಾ ಎಂದು ನಾಮ । ತದುಕ್ತಂ ಗಾರುಡೇ । "ಸರ್ವವೇದಾಭಿಮಾನಿತ್ವಾತ್ ಸರ್ವವೇದಾತ್ಮಿಕಾ ಸ್ಮೃತಾ"-ಇತಿ । ಸಮಸ್ತ ಭೋಗಗಳು ಶ್ರೀಹರಿ ಪ್ರೀತ್ಯರ್ಥವಾಗೇವೇ ಮಾಡೋಣದಂದ,ಭುಜಿಯೆಂದು ನಾಮ । ತದುಕ್ತಂ ಗಾರುಡೇ । "ಭುಜ್ಯತೇ ಸರ್ವಭೋಗಾಂಸ್ತು ವಿಷ್ಣು ಪ್ರೀತ್ಯರ್ಥಮೇವಚ । ಅತಸ್ತು ಭಾರತೀ ಜ್ಞೇಯಾ ಭುಜ ಸಂಜ್ಞೇತಿ

ಕೀರ್ತಿತಾ" । –ಏವಂ ರೀತ್ಯಾ, ವಿವರವಾಗಿ ಅರ್ಥ ಮಾಡಿಕೊಳ್ಳಬೇಕು । ಗ್ರಂಥ ಗೌರವ ಭಯಕ್ಕೆ ಬಿಟ್ಟದೆ । ಒಟ್ಟು ಪ್ರಮಾಣ । ಸರಸ್ವತೀ ಹರಿಪ್ರೀತಿ ಸರ್ವ ವೇದಾತ್ಮಿಕಾ ಭುಜಃ । ಗಾಯತ್ರೀ ಗುರು ಭಕ್ತಿಶ್ಚ ಶ್ರದ್ಧಾ ಪ್ರೀತಿಃ ಸುಖಾತ್ಮಿಕಾ"–ಇತಿ ತಾರತಮ್ಯೋಕ್ತೇಃ ॥೨॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ಸರಸ್ವತ್ಯವತಾರಾನಾಹ 'ಸರಸ್ವತಿ' ॥– ಚತುರ್ಮುಖಸ್ಯ ಭಾರ್ಯಾ ವಾಣೀ ಪ್ರದ್ಯುಮ್ನಾತ್ ಕೃತಿಜಾ ॥ ಪುರುಷ ವಿರಿಂಚಿ ಭಾರ್ಯಾ ॥ ಮಹಾ ವಿರಿಂಚಿ ಭಾರ್ಯಾ ಗಾಯಿತ್ರೀ । ವಿಧಿನಾಮ ವಿರಿಂಚಿ ಭಾರ್ಯಾ ಸಾವಿತ್ರೀ ॥ ಭಾರತ್ಯವತಾರಾನ್ ಆಹ 'ವೇದ'–ಇತಿ । ಸರ್ವವೇದಾಭಿಮಾನಿತ್ವಾತ್ ವೇದಾತ್ಮಿಕಾ ಮಹಾಧ್ಯಾತ್ಮ ವಾಯುಭಾರ್ಯಾ ॥ ಯಥಾನುಭೂತಂ ಹರಿಂ ಸಮ್ಯಕ್ ದರ್ಶಯತಿ ಇತಿ ಅನುಭೂತಿಃ ॥ ಜ್ಞಾನವಾಯು ಪತ್ನೀ ॥ ಸದಾ ಸುಖಾತ್ಮಕತ್ವಾತ್ ಸುಖಾತ್ಮಿಕಾ ಸುಖರೂಪ ವಾಯುಭಾರ್ಯಾ ॥ ಗುರುಸ್ತು ವಾಯುದೇವೋಕ್ತಃ ತಸ್ಮಿನ್ ಭಕ್ತ್ಯಯುತಾ ಸದಾ ॥ ಅತಃ ಗುರುಭಕ್ತಿಃ ಮಹಾಗುರುಃ ವಾಯು ಪತ್ನೀ ॥ 'ನರಹರಿ'–ಇತಿ ಭಕ್ತಿ ಪದಾನ್ವಯಿ ॥ ಹರಿ ಗುರು ಭಕ್ತಿಃ ಇತ್ಯುಕ್ತಂ ಭವತಿ ॥ ವಿಷ್ಣು ಪ್ರೀತ್ಯರ್ಥಂ ಸರ್ವಭೋಗಾಃ ಭುಜ್ಯಂತೇ ಅತಃ ಭುಜಃ ಚಿತ್ತವಾಯೋಃ ಭಾರ್ಯಾ ॥ ರೋಚನೇಂದ್ರ ಭಾರ್ಯಾ ಶ್ರದ್ಧಾ.
॥೨॥

## ಕನ್ನಡಾರ್ಥ

ಸರಸ್ವತಿಯ ಅವತಾರಗಳನ್ನು ಹೇಳುತ್ತಾರೆ. **'ಸರಸ್ವತೀ'**-ಎಂಬ ಪದ್ಯದಿಂದ, ಚತುರ್ಮುಖನ ಪತ್ನಿ ವಾಣೀ ॥ ಅವಳು ಪ್ರದ್ಯುಮ್ನನಿಂದ ಕೃತಿಯಲ್ಲಿ ಹುಟ್ಟಿದವಳು. ಪುರುಷ ವಿರಿಂಚಿಯ ಹೆಂಡತಿಯು ॥ ಪ್ರಧಾನ ನಾಮಕಳು. ಮಹಾವಿರಿಂಚಿಯ ಪತ್ನಿ ಗಾಯತ್ರೀ ॥ ವಿಧಿನಾಮಕ ವಿರಿಂಚಿಯ ಹೆಂಡತಿ ಸಾವಿತ್ರೀ ॥ ಭಾರತೀದೇವಿಯ ಅವತಾರಗಳನ್ನು ಹೇಳುತ್ತಾರೆ 'ವೇದಾತ್ಮಿಕಾ'— ಎಂಬುದಾಗಿ.

ಸರ್ವವೇದಗಳಿಗೆ ಅಭಿಮಾನಿಯಾದುದರಿಂದ **'ವೇದಾತ್ಮಿಕಾ'**-ಎಂದು ಭಾರತೀಯ ಹೆಸರು. ವೇದಾತ್ಮಿಕೆಯು ಮಹಾಧ್ಯಾತ್ಮ ವಾಯುಪತ್ನೀ. ಶಾಸ್ತ್ರಗಳಲ್ಲಿ ತಿಳಿದು ಬರುವಂತೆ,ಶ್ರೀಹರಿಯನ್ನು ತೋರಿಸುವವಳು ಅನುಭೂತಿಯು-ಜ್ಞಾನವಾಯುವಿನ ಹೆಂಡತಿ. ಸದಾ ಸುಖಸ್ವರೂಪಳಾದುದರಿಂದ ಸುಖಾತ್ಮಕಳು-ಸುಖನಾಮಕ ವಾಯುವಿನ ಪತ್ನಿ. ವಾಯುವೇ ಗುರುವು. ಅವನಲ್ಲಿ ಸದಾ ಭಕ್ತಿವಂತಳಾದುದರಿಂದ ಗುರುಭಕ್ತಿಯು ಗುರುಭಕ್ತಿನಾಮಕ ವಾಯು ಪತ್ನೀ. 'ನರಹರಿ'-ಎಂಬ ಪದವು 'ಭಕ್ತಿ'-ಎಂಬುದಕ್ಕೆ ಅನ್ವಿತವಾಗುತ್ತದೆ. ವಿಷ್ಣುಪ್ರೀತಿಗಾಗಿ ಸರ್ವಭೋಗಗಳನ್ನು ಭುಂಜಿಸುವುದರಿಂದ "ಭುಜ"-ಎಂದು ಹೆಸರು. ಇವರು ಚಿತ್ತನಾಮಕ ವಾಯುವಿನ ಪತ್ನಿಯು. 'ರೋಚನ'ನೆಂಬ ಇಂದ್ರರಾದ ವಾಯುದೇವರ ಪತ್ನಿಯು ಶ್ರದ್ಧಾ. ॥9॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ಸರಸ್ವತೀ-ಭಾರತೀಯರ ನಾಮ ರೂಪಗಳನ್ನು ಎರಡು ಪದ್ಯಗಳಿಂದ ತಿಳಿಸುತ್ತಾರೆ- ಸರಸ್ವತೀ ಎಂದು. ಸರಸ್ವತೀ ವೇದಾತ್ಮಿಕಾ-ಎಂದರೆ, ವೇದಾಭಿಮಾನಿ ಎಂದು ಅರ್ಥ. ಭುಜ-ಎಂದರೆ ಮಹಾಭೋಗ ಸಂಪನ್ನಳು. ನರಹರಿಯಲ್ಲಿಯೂ, ಗುರುಗಳಲ್ಲಿಯೂ ಮಾಡುವ ಜನರ ಭಕ್ತಿಗೆ ಅಭಿಮಾನಿ. ಬ್ರಾಹ್ಮೀ-ಎಂದರೆ ಬ್ರಹ್ಮಪತ್ನೀ. ಪರಮಸುಖಬಲಪೂರ್ಣಳು. ಶ್ರದ್ಧೆ ಎಂಬ--ಆಸ್ತಿಕ್ಯಬುದ್ಧಿಗೆ ಅಭಿಮಾನಿ. ಪ್ರೀತ್ಯಭಿಮಾನಿ. ಗಾನದಿಂದ ತನ್ನನ್ನು ಸ್ತುತಿ ಮಾಡುವವರನ್ನು ರಕ್ಷಿಸುವುದರಿಂದ ಗಾಯತ್ರಿನಾಮಕಳು. ಗರುಡ-ಶೇಷರಿಗೆ ತಾಯಿ. ಶ್ರೀಸಂಕರ್ಷಣರೂಪಕ್ಕೂ, ಜಯಾದೇವಿ ಎಂಬ ಲಕ್ಷ್ಮೀರೂಪಕ್ಕೂ ಮಗಳಾದವಳು. ಹದಿನಾಲ್ಕುಲೋಕದ ಜನರಿಂದ ಪೂಜಿತಳು. ॥9॥

## ಸರ್ವವ್ಯಾಖ್ಯಾನಸಾರಸಂಗ್ರಹ

ಚತುರ್ಮುಖ ಬ್ರಹ್ಮದೇವರ ಪತ್ನಿಯಾದ **ಶ್ರೀಸರಸ್ವತೀದೇವಿಯರ** ವಿಚಾರವನ್ನು ತಿಳಿಸುತ್ತಾರೆ.

### (1) ಸರಸವತೀ :-

ಬ್ರಹ್ಮದೇವರ ಪತ್ನಿಯ ಹೆಸರು **ಸರಸ್ವತೀ** ಎಂದು. **"ಚತುರ್ಮುಖಸ್ಯ ಭಾರ್ಯಾತು ಸರಸ್ವತೀ"**.—ಎಂಬ ಪ್ರಮಾಣ ವಾಕ್ಯದಿಂದ ಈ ನಾಮವು ಸಿದ್ಧಿಸುವುದು.

"ಸರಸ್"–ಎಂದರೆ, ಎಲ್ಲಾ ಕಡೆಗಳಲ್ಲಿಯೂ ಗಮನ ಮಾಡುವುದೆಂದರ್ಥ ಮತ್ತು ಸಕಲವಿಷಯಗಳನ್ನು ತಿಳಿದುಕೊಳ್ಳುವುದು. ಅಂದರೆ, "ಸರಸ್"–ಶಬ್ದದಿಂದ ಸರ್ವಗಮನತ್ವ ಮತ್ತು ಸರ್ವಜ್ಞತ್ವ–ಎಂಬ ಗುಣಗಳು ಸೂಚಿತವಾಗುವುವು. ಇದರಿಂದ ಶ್ರೀಹರಿಯು **ಸರಸ್**—ನಾಮಕನು. ಶ್ರೀಬ್ರಹ್ಮದೇವರು ಶ್ರೀಹರಿಗೆ ಅತ್ಯಂತ ಪ್ರೀತಿಯ ವಿಷಯರಾಗಿರುವುದರಿಂದ ಅವರಿಗೆ—**ಸರಸ್ವಾನ್**–ಎಂದು ಹೆಸರು. ಅಂತಹವರ ಪತ್ನಿಯಾದುದರಿಂದ **ಸರಸ್ವತೀ**-ಎಂಬ ಅಭಿಧಾನ.

### (2) ವೇದಾತ್ಮಿಕಾ :-

ಸರಸ್ವತೀದೇವಿಯರು ಸರ್ವವೇದಗಳಿಗೂ ವೇದಾಭಿಮಾನಿಗಳು. ಇದರಿಂದ, ಅವರಿಗೆ **ವೇದಾತ್ಮಿಕಾ**–ಎಂದು ಹೆಸರು.

**"ಸರ್ವವೇದಾಭಿಮಾನಿತ್ವಾತ್ಸರ್ವ ವೇದಾತ್ಮಿಕಾ ಸ್ಮೃತಾ"**
**—ಗರುಡ ಪುರಾಣ ವಾಕ್ಯ.**

**(3) ಭುಜೀ :-**

ಸರ್ವಭೋಗಗಳನ್ನು ಶ್ರೀವಿಷ್ಣುವಿನ ಪ್ರೀತ್ಯರ್ಥವಾಗಿಯೇ ಭುಂಜಿಸು ವರು. ಮಹಾಭೋಗ ಸಂಪನ್ನರು. ಇದರಿಂದ **ಭುಜೀ**–ನಾಮಕರು.

**"ಭುಂಜ್ಯತೇ ಸರ್ವಭೋಗಾಂಸ್ತು ವಿಷ್ಣುಪ್ರೀತ್ಯರ್ಥವೇವ ಚ"**
**—ಗರುಡಪುರಾಣ ಪ್ರಮಾಣ.**

**(4) ನರಹರಿ :-**

ಪತ್ಯಂತರ್ಗತ ನರಹರಿ ರೂಪೀ ಶ್ರೀಪರಮಾತ್ಮನಲ್ಲಿ ವಿಶೇಷವಾಗಿ ಭಕ್ತಿ ಯುಳ್ಳವರು. ಇಲ್ಲ "ನರಹರಿ"–ಎಂಬ ಪದ ಪ್ರಯೋಗವು. "ಭಕ್ತಿ"ಗೆ ಅನ್ವಯಿಸುವುದು.

**(5) ಗುರುಭಕ್ತಿ :–**

ಪತ್ಯಂತರ್ಗತ ನರಹರಿನಾಮಕ ಶ್ರೀಪರಮಾತ್ಮನಲ್ಲಿಯೂ, ಹಾಗೂ ಜಗದ್ಗುರುಗಳಾದ ಶ್ರೀಬ್ರಹ್ಮದೇವರಲ್ಲಿಯೂ ಭಕ್ತಿಯುಕ್ತಳಾದ್ದರಿಂದ, **ನರಹರಿ ಗುರುಭಕ್ತಿ**–ಎಂದು ನಾಮಧೇಯ.

**(6) ಬ್ರಾಹ್ಮೀ :–**

ಬ್ರಹ್ಮದೇವರ ಪತ್ನಿಯಾದ ಕಾರಣದಿಂದ **ಬ್ರಾಹ್ಮೀ**–ನಾಮಕಳು.

**(7) ಪರಮಸುಖ :–**

ರುದ್ರಾದಿ ದೇವತೆಗಳಿಗಿಂತ ಅತ್ಯಂತ ಶ್ರೇಷ್ಠವಾದ ಸುಖಪೂರ್ಣಳು. ಸರಸ್ವತೀದೇವಿಯರ ಸುಖವು ಅಜ್ಞಾನಾದಿ ದೋಷಗಳಿಂದ ರಹಿತವಾದುದು, ಸಮೀಚೀನವಾದದ್ದು.

(8) **ಬಲಪೂರ್ಣೀ :–**

ಸಮೀಚೀನವಾದ ಆನಂದ ಮತ್ತು ಬಲಸ್ವರೂಪಳು. ರುದ್ರಾದಿಗಳಿಗಿಂತ ಸರಸ್ವತಿಯಲ್ಲಿ ಆನಂದ ಮತ್ತು ಬಲಪೂರ್ಣತ್ವ ಅತ್ಯಂತ ಶ್ರೇಷ್ಠವಾಗಿದ್ದು.

**"ಸದಾ ಸುಖ ಸ್ವರೂಪ ಪಶ್ಚಾದ್ಭಾರತೀ ತು ಸುಖಾತ್ಮಿಕಾ"— ಎಂಬ ಪ್ರಮಾಣ.** ಭಾರತೀದೇವಿಗೂ ಈ ಹೆಸರಿದೆ. ಭಾವೀ ಭಾರತೀಯರೇ ಸರಸ್ವತಿಯರಾದ್ದರಿಂದ, ಅವರಿಗೂ ಈ ನಾಮಸಾಮ್ಯವಾಗುವುದು.

(9) **ಶ್ರದ್ಧಾ :–**

ರೋಚನನಾಮಕ ವಾಯುದೇವರ ಪತ್ನಿಗೆ ಶ್ರದ್ಧಾ ಎಂತ ನಾಮ. ಆಸ್ತಿಕ್ಯ ಬುದ್ಧಿಗೆ ಅಭಿಮಾನಿ.

**ರೋಚನೇಂದ್ರಸ್ಯ ಭಾರ್ಯಾ ಸಾ ಶ್ರದ್ಧೇತಿ ಪರಿಕೀರ್ತಿತಾ— —ಇತಿ ಗಾರುಡೇ ||**

(10) **ಪ್ರೀತಿ :–**

ಭಕ್ತಿಗೆ ಅಭಿಮಾನಿಯಾದ್ದರಿಂದ ಪ್ರೀತಿನಾಮಕಳು. ಪ್ರೀತಿ-ಎಂದರೆ, ಶ್ರೀಹರಿಯಲ್ಲಿ ಮಾಡುವ ನಿರತಿಶಯವಾದ ಪ್ರೇಮ ಪ್ರವಾಹರೂಪವಾದ ಸ್ನೇಹ ಭಾವ. ಶ್ರೀಹರಿಯ ಪ್ರೀತ್ಯಾಸ್ಪದಳೂ ಮತ್ತು ಶ್ರೀಹರಿಯಲ್ಲಿ ಭಕ್ತಿಪ್ರೇರಕಳೂ ಆದ್ದರಿಂದ ಈ ಹೆಸರು.

(11) **ಗಾಯತ್ರೀ :–**

ವಿರಿಂಚಿನಾಮಕರಾದ ಬ್ರಹ್ಮದೇವರ ಪತ್ನಿಗೆ **ಗಾಯತ್ರೀ**-ಎಂದು ಹೆಸರು.

**ಮಹಾವಿರಿಂಚಿ ಭಾರ್ಯಾ ತು ಗಾಯತ್ರೀ ಪರಿಕೀರ್ತಿತಾ —ಗರುಡಪುರಾಣೋಕ್ತಿ.**

ಪ್ರಧಾನನಾಮಕಳು ಗಾನದಿಂದ ತನ್ನನ್ನು ಸ್ತುತಿಸುವವರನ್ನು ರಕ್ಷಿಸು ವುದರಿಂದ ಗಾಯತ್ರೀನಾಮಕಳು. ಪ್ರಕೃತಿನಾಮಕಳಾದ ಬ್ರಹ್ಮದೇವರ ಪತ್ನಿಯು ಸತ್ವ ರಜಸ್ತಮೋಗುಣಗಳ ಭೇದದಿಂದ ಮೂರು ರೂಪಗಳನ್ನು ಧರಿಸಿದಳು. ಆ ರೂಪತ್ರಯಗಳೇ–ಗಾಯತ್ರೀ–ಸರಸ್ವತೀ–ಸಾವಿತ್ರೀ– ಎಂದು. ಈ ಮೂರು ಸರಸ್ವತಿಯ ಹೆಸರುಗಳೇ ಆಗಿವೆ.

## (12) ಗರುಡ ಶೇಷರ ಜನನೀ :–

ಸೂಕ್ಷ್ಮಸೃಷ್ಟಿಯಲ್ಲಿ ಪುರುಷನಾಮಕ ಬ್ರಹ್ಮದೇವರಿಂದ ಪ್ರಕೃತಿನಾಮಕ ಸರಸ್ವತಿಯಲ್ಲಿ ಶೇಷದೇವರು ಜನಿಸಿದರು. ಸೂತ್ರನಾಮಕ ವಾಯುದೇವರಿಂದ ಶ್ರದ್ಧಾನಾಮಕ ಭಾರತಿಯಲ್ಲಿ ಗರುಡದೇವರ ಉತ್ಪತ್ತಿ. ವಾಯುದೇವರು ಭಾವೀ ಬ್ರಹ್ಮರು. ಭಾರತೀ ಭಾವೀ ಸರಸ್ವತಿ. ಇದರಿಂದ ಗರುಡ ಶೇಷರ ಜನನೀ–ಎಂದಿದ್ದಾರೆ.

**ಪುರುಷಾಖ್ಯ ವಿರಿಂಚಿಸ್ಯ ಸರಸ್ವತ್ಯಾಂ ಖಗೇಶ್ವರಃ ।**
**ಪ್ರಧಾನ ಸಂಜ್ಞಕೋ ವೋ ವೈಜಾತಃ ಶೇಷೋ ಮಹಾಬಲಃ॥**
**—ಗರುಡಪುರಾಣೋಕ್ತಿ.**

## (13) ಶ್ರೀಸಂಕರುಷಣ ಜಾಯಾ ತನುಜೆ ವಾಣೀ :–

ಸೂಕ್ಷ್ಮಸೃಷ್ಟಿಯಲ್ಲಿ ಶ್ರೀಸಂಕರ್ಷಣನಾಮಕ ಶ್ರೀಹರಿಯ ದೆಸೆಯಿಂದ ಜಯಾನಾಮಕ ಶ್ರೀಲಕ್ಷ್ಮೀದೇವಿಯಲ್ಲಿ ಸೂತ್ರನಾಮಕ ವಾಯುದೇವರು ಜನಿಸಿ ದರು. ಅವರ ಪತ್ನೀ ಭಾರತೀ. ಭಾರತೀದೇವಿಯರೂ ವಾಗಭಿಮಾನಿಗಳು, (ವೇದಾಭಿಮಾನಿಗಳು). ಅವರೇ ಭಾವೀ ಸರಸ್ವತೀ. ವಾಗಭಿಮಾನಿ ದೇವತೆ ಆದ್ದರಿಂದ **ವಾಣೀ**–ನಾಮಕಳು.

**(14) ಕರಣನಿಯಾಮಕೆ :-**

ಇಂದ್ರಿಯಾಭಿಮಾನಿ ದೇವತೆಗಳಿಗೆ ನಿಯಾಮಕಳು. ಮಹತತ್ತ್ವಾಭಿಮಾನಿಯಾದ್ದರಿಂದ, ಮಹತ್ತತ್ತ್ವದಿಂದ ಜನ್ಯರಾದ ಅಹಂಕಾರಾದಿ ತತ್ತ್ವದೇವತೆಗಳಿಗೆ ನಿಯಾಮಕಳಾಗಿದ್ದಾಳೆ.

**(15) ಚತುರ್ದಶಭುವನ ಸಮ್ರಾಜ್ಞೆ :-**

ಬ್ರಹ್ಮಾಂಡಕ್ಕೆ ಒಡೆಯರು ಬ್ರಹ್ಮದೇವರು.(ಮುಖ್ಯ ಪ್ರಭು ಶ್ರೀಹರಿಯೇ). ಬ್ರಹ್ಮಾಂಡವು ಹದಿನಾಲ್ಕು ಲೋಕಾತ್ಮಕವಾದದ್ದು. ಇದರಿಂದ ಬ್ರಹ್ಮಾಂಡಗತ ಹದಿನಾಲ್ಕು ಲೋಕಗಳಲ್ಲಿರುವ ಸಜ್ಜನರಿಂದ ಪೂಜಿತಳು. (ಸಮ್ರಾಜ್ಞೆ).

ಈ ರೀತಿ ಸರಸ್ವತಿಯ ವಿವಿಧ ನಾಮಗಳಿಂದ, ಅವಳ ಮಹಾಮಹಿಮಾತಿಶಯವನ್ನು ಸ್ತುತಿಸುತ್ತಾರೆ. ॥9॥

★★

## ಪದ್ಯ-೧೦

**ಮೂಲ :-**

**ಕಾಳಿ ದ್ರೌಪದಿ ಕಾಶಿಜಾ ಪಾಂ।**
**ಚಾಲಿ ಶಿವಕನ್ಯೇಂದ್ರಸೇನಾ।**
**ಕಾಲವಾನಿ ಚಂದ್ರ ದ್ಯುಸಭಾನಾಮ ಭಾರತಿಗೆ॥**
**ಘಾಳಿ ಬ್ರಹ್ಮರ ಯುವತಿಯರು ಏ।**
**ಳೇಳು ಜನಕ್ಕೊಂದು ಗುಣದಿಂ।**
**ಕೀಳು ಎನಿಪರು ತಮ್ಮ ಪತಿಗಳಿಂದಲಾವಾಗ ॥೧೦॥**

**ಅವತರಣಿಕೆ :-**

ಭಾರತೀದೇವಿಯರ ವಿಚಾರವನ್ನು ಅವರ ವಿವಿಧ ನಾಮಗಳಿಂದ ತಿಳಿಸು ತ್ತಾರೆ. ॥10॥

**ಪ್ರತಿಪದಾರ್ಥ :-**

**ಕಾಳಿ** = ದ್ರೌಪದೀ ದೇವಿಯರೇ ರೂಪಾಂತರದಿಂದ ಕಾಳೀರಾಜನ ಮಗಳಾಗಿ ಅವತರಿಸಿ, **ಕಾಳೀ** ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಳು. **ದ್ರೌಪದಿ** = ದ್ರುಪದ ರಾಜನ ಪುತ್ರಿ. **ಕಾಶಿಜಾ** = ಕಾಶೀರಾಜನ ಮಗಳು. **ಪಾಂಚಾಲಿ** = ಪಾಂಚಾಲಿ ದೇಶದ ರಾಜನ ಪುತ್ರಿ. **ಶಿವಕನ್ಯಾ** = ಕಾಲಡಿ ಎಂಬ ಗ್ರಾಮದಲ್ಲಿ ಶಂಕರ (ಶಿವ)ನೆಂಬ ಬ್ರಾಹ್ಮಣನ ಪುತ್ರಿಯಾಗಿ ಅವತಾರ. **ಇಂದ್ರಸೇನಾ** = ನಳಚಕ್ರವರ್ತಿಯ ಪುತ್ರಿಯಾಗಿ ದಮಯಂತಿಯಲ್ಲಿ ಅವತಾರ. **ಕಾಲನಾಮಿನಿ** = ಕಾಲನಾಮಕಳಾಗಿ ಅವತಾರ. **ಚಂದ್ರ** = ಶ್ರೀವಾಯು ದೇವರು ಶ್ರೀಮದಾಚಾರ್ಯರಾಗಿ ತೃತೀಯರೂಪದಲ್ಲಿ ಅವತರಿಸಿದಾಗ, **ಚಂದ್ರ**—ಎಂಬ ಹೆಸರಿನಿಂದ ಭೂಲೋಕದಲ್ಲಿ ಬ್ರಾಹ್ಮಣಪುತ್ರಿಯಾಗಿ ಅವ ತರಿಸಿ, ಬಾಲ್ಯದಲ್ಲಿಯೇ ಮೃತಳಾದಳು. **ದ್ಯುಸಭಾನಾಮ** = ಕೃತಿಪತಿ ಪ್ರದ್ಯುಮ್ನನಿಂದ ಶ್ರದ್ಧಾನಾಮಕಳಾಗಿ ಜನಿಸಿದ, **ದ್ಯುಸಭಾ** = ಎಂಬ ಸ್ವರ್ಗ ಲೋಕ ಸಭೆಯ ಅಭಿಮಾನಿ. (ದ್ಯು–ನಾಮಕ ಭಾರತೀದೇವಿಯರ ರೂಪ) **ಭಾರತಿಗೆ** = ಶ್ರೀವಾಯುದೇವರ ಪತ್ನಿ. (ಭಾರತ–ಎಂದು ವಾಯುದೇವರ ನಾಮ. ಭಾರತೀ–ತತ್ಪತ್ನೀನಾಮ). **ಘಾಳಿ** = ವಾಯುದೇವರು, **ಬ್ರಹ್ಮರ** = ಬ್ರಹ್ಮದೇವರ, **ಯುವತಿಯರು** = ಪತ್ನಿಯರಾದ ಭಾರತೀ ಮತ್ತು ಸರಸ್ವತೀದೇವಿಯರು, **ತಮ್ಮ ಪತಿಗಳಿಂದ** = ತಮ್ಮ ತಮ್ಮ ಪತಿಗಳಿ ಗಿಂತ, **ಏಳೇಳು** = 7 × 7 = 49, **ಐವತ್ತೊಂದು** = 51. ಅಲ್ಲಿಗೆ. 49 + 51 = 100 (ಈ ಸಂಖ್ಯಾಪ್ರಯೋಗದ ಚಮತ್ಕಾರ ನೋಡಿ) **ಗುಣದಿಂ** = ವಿಚಾರೀಯಗುಣಗಳಿಂದ. **ಅವಾಗ** = ಸದಾ ಸರ್ವಕಾಲಕ್ಕೂ, **ಕೀಳು ಎನಿಪರು** = ಅಧಮರೆಂದೆನಿಸುವರು. ॥10॥

(ಸರಸ್ವತೀ ಮತ್ತು ಭಾರತೀದೇವಿಯರು ತಮ್ಮ ತಮ್ಮ ಪತಿಗಳಿಗಿಂತ 100 ವಿಜಾತೀಯ ಗುಣಾಧಮರು). ॥10॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಭಾರತೀದೇವೀರ ಅವತಾರ ವಿಚಾರ ಹೇಳುತಾರೆ.

ಕೃತೀನಾಮ ಲಕ್ಷ್ಮೀದೇವೇರ ಪತಿಯಾದ ಪ್ರದ್ಯುಮ್ನನಿಂದ ಜನಿತರಾದ, ವಾಯುದೇವರ ಪತ್ನಿಯಾದ ನ್ಯುಸಭಾ ನಾಮ ಭಾರತೀದೇವೇರ ಅವತಾರಗಳು– **ಕಾಳೀ ನಾಮ್ನೀತು ಸಾ ಜ್ಞೇಯಾ ಭೀಮಸೇನ ಪ್ರಿಯಾ ಸದಾ–** ಎಂತ **ಗರುಡಪುರಾಣ ವಚನದಿಂದ** ಭಾರತೀದೇವೇರಿಗೆ ಕಾಳೀ-ಎಂತ ನಾಮ. ದ್ರುಪದರಾಯನ ಪುತ್ರಿಯಾಗಿ ಅವತಾರ ಮಾಡಿದ ದ್ರೌಪದೀದೇವೇರು. **ವೇದಿ ಮಧ್ಯಾತ್ಸಮುದ್ಭೂತಾ ಭೀಮಸೇನಾರ್ಥಮೇವ ಚ**– ಎಂತ ಅವತಾರ. **ಕೇವಲಾ ಭಾರತೀ ಜ್ಞೇಯಾ ಕಾಶೀರಾಜಸ್ಯ ಕನ್ಯಕಾ**– ಎಂಬ ಪ್ರಮಾಣಾನುಸಾ,ರಕಾಶೀರಾಯನಮಗಳು ಎಂತ-ನಾಮ. **ದೇಹಂ ತ್ಯಕ್ತ್ವಾ ವಿಶಿಷ್ಟ ಇವ ಕಾಲಡೀ ಗ್ರಾಮ ಸಂಜ್ಞಕೇ ।ಶಂಕರಸ್ಯ ಗೃಹೇ ಚಂದ್ರಾ ಭವಿಷ್ಯತಿ ಕಲೌಯುಗೇ,**ಎಂಬ ಪ್ರಮಾಣಾನುಸಾರ,ಶಿವನಾಮಕ ಬ್ರಾಹ್ಮಣನ ಮಗಳಾಗಿ ಕಾಲಡೀ ಗ್ರಾಮದಲ್ಲಿ ಅವತಾರ. **ದಮಯಂತ್ಯಾ ನಳಾಚ್ಚಾತಾ ಇಂದ್ರಸೇನೇತಿ ಸಂಜ್ಞಿಕಾ,**ಎಂತ ಪ್ರಮಾಣಾನುಸಾರ, ನಳಚಕ್ರವರ್ತಿ ಮಗಳಾಗಿ ಅವತಾರ ಕಾಲಮಾನಿ-ಎಂತ ಅವತಾರ. ಚಂದ್ರ-ಎಂತ ನಾಮ ಪಡೆದ ಅವತಾರ. ಏತಾದೃಶನಾಮಗಳಿಂದ ಭಾರತೀದೇವೇರ ಅವತಾರರೂಪಗಳು. ವಾಯುದೇವರು,ಬ್ರಹ್ಮದೇವರುಈ ಉಭಯರ ಪತ್ನೇರಾದ ಭಾರತೀ–ಸರಸ್ವತೀ ದೇವೇರುಗಳು,ತಮ್ಮ ತಮ್ಮ ಪತಿಗಳಿಗಿಂತಲೂ ನಾಲ್ವತ್ತೊಂಭತ್ತು ಮತ್ತು ಐವತ್ತೊಂದು-ಅಂತು ನೂರು. ನೂರು ಗುಣದಿಂದ ಸದಾ ಸರ್ವಕಾಲವೂ

ಅಧಮರು-ಎಂತ. ಕರಸೋವರಾಗತಾರೆ. ವಾಯುದೇವರಿಗಿಂತ ಭಾರತೀ ದೇವೇರು ನೂರು ಗುಣ ಅವರರು. ಬ್ರಹ್ಮದೇವರಿಗಿಂತ ಸರಸ್ವತೀದೇವೇರು ನೂರು ಗುಣ ಅವರರು. ಅಂದರೆ, ತಮ್ಮ ಪತಿಗಳಿಗಿಂತಲೂ ವಿಜಾತೀಗುಣ ದಿಂದ ಕಡಿಮೆ. ॥10॥

**೨. ಭಾವಪ್ರಕಾಶಿಕೆ :-**

ಭಾರತೀದೇವಿಯರು ಭೀಮಸೇನದೇವರ ಪತ್ನಿಯಾಗುವುದಕ್ಕಾಗಿ ಕಾಶೀ ರಾಜನ ಮಗಳಾಗಿ **ಕಾಳೀ** ಎಂಬ ಹೆಸರಿನಿಂದ ಜನಿಸಿದರು. ಮ ॥ಭಾ॥ ತಾ ॥ ನಿರ್ಣಯ 20ನೆಯ ಅಧ್ಯಾಯದಲ್ಲಿ "ಕೃಷ್ಣಾ ಸ್ವೈವಾಪ್ಯಸ್ವರೂಪೇಣ ಜಾತಾ ಕಾಶೀಶ ಪುತ್ರೀಂ ಯಾಂ ಪ್ರವದಂತಿ ಕಾಳೀಂ ॥ ಸಾ ಕೇವಲಾ ಭಾರತೀನಾಸ್ಯ ದೇವಸ್ತತ್ರಾ ವಿಷ್ಟಾಸ್ತತ್ಕೃತೇ ಕಾಶಿರಾಜಃ ॥ ॥13॥ ಸ್ವಯಂವರಾರ್ಥಂ ನೃಪತೀ ನಾಜುಹಾವ ಸರ್ವಾಂ ಸ್ತೇಪಿಹ್ಯತ್ರ ಹರ್ಷಾತ್ಸಮೇತಾಃ ॥ ತೇಷಾಂ ಮಧ್ಯೇ ಭೀಮಸೇನಾಂ ಸ ಏಷಾ ಮಾಲಾಮಾಘಾತ್ತತ್ರ ಜರಾಸುತಾದ್ಯಾ-"— ॥14॥ ಇತ್ಯಾದಿ. ಇವೇ ದ್ರೌಪದೀದೇವಿಯರೇ ರೂಪಾಂತರದಿಂದ ಕಾಶೀಶ್ವ ರನ ಮಗಳಾಗಿ ಜನಿಸಿದ್ದರು. ಆಕೆಯನ್ನು ಕಾಳೀ-ಎಂದು ಕರೆಯುತ್ತಿದ್ದರು. ಆದರೆ,ಈಕೆಯು ದ್ರೌಪದೀದೇವಿಯರಂತೆ ಶಚ್ಯಾದಿಗಳಿಂದ ಆವಿಷ್ಟವಾದ ರೂಪ ವಲ್ಲ. ಕೇವಲ ಭಾರತೀ ಅವತಾರವು. ಕಾಶಿರಾಜನು ಈಕೆಯ ಸ್ವಯಂವರ ಕ್ಕಾಗಿ ರಾಜರುಗಳನ್ನು ಕರೆಕಳುಹಿಸಿದನು. ಎಲ್ಲರೂ ಸಂತೋಷದಿಂದ- ಕಾಶಿ ರಾಜನ ಪಟ್ಟಣದಲ್ಲಿ ಸೇರಿದರು. ಆ ರಾಜರ ಮಧ್ಯದಲ್ಲಿದ್ದ ಭೀಮಸೇನದೇವರ ಕಂಠದಲ್ಲಿ ಕಾಳಿದೇವಿಯರು ಹಾರವನ್ನು ಹಾಕಿದರು. ಆಗ ಜರಾಸಂಧಾದಿ ರಾಜರು ಭೀಮಸೇನನ ಸಂಗಡ ಯುದ್ಧಕ್ಕೆ ಒರಲು, ಎಲ್ಲರನ್ನೂ ಭೀಮಸೇನ ದೇವರು ಯುದ್ಧದಲ್ಲಿ ಜಯಿಸಿ, ಕಾಶಿರಾಜನಿಂದ ಪೂಜಿತರಾಗಿ ಕಾಳಿಯನ್ನು ವಿವಾಹ ಮಾಡಿಕೊಂಡು ಇಂದ್ರಪ್ರಸ್ಥಪಟ್ಟಣವನ್ನು ಸೇರಿದರೆಂದು ಹೇಳಿರು ವರು. ಇದೇ ಈ ಪದ್ಯದಲ್ಲಿ ಹೇಳಿರುವ ಕಾಳೀ ಅವತಾರವು. ದ್ರೌಪದೀ, ಶಿವಕನ್ಯಾ, ಇಂದ್ರಸೇನ, ಚಂದ್ರಾ,-ಈ ಅವತಾರಗಳು ಇಂದ್ರನ ಹೆಂಡತಿಯಾದ ಶಚೀ, ಯಮದೇವರ ಹೆಂಡತಿ ಶಾಮಲಾ, ಅಶ್ವಿನೀದೇವತೆಗಳ ಹೆಂಡತಿ ಉಷಾ, ರುದ್ರದೇವರ ಹೆಂಡತಿ ಪಾರ್ವತಿ-ಇವರು ನಾಲ್ವರಿಂದ ಕೂಡಿದ ಭಾರತೀದೇವಿ

ಯರ ಅವತಾರವು. ಹೀಗೆ ನಾಲ್ವರಿಂದ ಕೂಡಿ ಅವತರಿಸಲು ಕಾರಣವೇನೆಂದರೆ-ಮ ॥ ಭಾ ॥ ತಾ ॥ ನಿರ್ಣಯ 18ನೆಯ ಅಧ್ಯಾಯದಲ್ಲಿ "ಅನ್ವೇನಂ ಭಾರತೀ ಸಾಕ್ಷಾದ್ವೇದಿ ಮಧ್ಯಾತ್ಸ ಮುತ್ಥಿತಾ ॥ ಪ್ರಾಣೋಹಿಭರತೋನಾಮ ಸರ್ವಸ್ಯ ಭರಣಾಚ್ಛ್ರುತಃ ॥103॥ ತದ್ಭಾರ್ಯಾ ಭಾರತೀನಾಮ ವೇದರೂಪಾಸರಸ್ವತೀ ॥ ಆವೇಶಯುಕ್ತಾ ಶಚ್ಯಾಶ್ಚ ಶಾಮಲಾಯಾಸ್ತಥೋಷಸಃ ॥ ತಾಶ್ಚೇಂದ್ರ ಧರ್ಮನಾಸತ್ಯ ಸಂಶ್ರಯಾಚ್ಛ್ರಿಯ ಈರಿತಾಃ ॥105॥ ಸಾ ಕೃಷ್ಣಾ ನಾಮ ತಸ್ಯಾಸೀದುತ್ಕೃಷ್ಟತ್ವಾದ್ಧಯೋಷಿತಾಂ ॥..........ಉಮಾಂಶ ಯುಕ್ತಾತಿತರಾಂ ಸರ್ವಲಕ್ಷಣ ಸಂಯುತಾ । ಪೂರ್ವಂ ಹ್ಯುಮಾಚದೇವ್ಯಸ್ತಾಃ ಕದಾಚಿದ್ಭರ್ತೃಭಿರ್ಯುತಾಃ ॥108॥ ವಿಲಾಸಂದರ್ಶಯಾಮಾಸುರ್ಬ್ರಹ್ಮಣಃ ಪಶ್ಯತೋಽಧಿಕಂ ॥ ಶಶಾಪತಾಸ್ತದಾ ಬ್ರಹ್ಮಾಮಾನುಷೀಂ ಯೋನಿಮಾಪ್ಸ್ಯಥ ॥ ॥109॥ ತತ್ರಾನ್ಯಗಾಶ್ಚ ಭವತೇಂತ್ಯೇವಂ ಶಪ್ತಾಃ ಸುರಾಂಗನಾಃ ॥ ವಿಚಾರ್ಯ ಭಾರತೀಮೇತ್ಯ ಸರ್ವಮಸ್ಯೈ ನ್ಯವೇದ್ಯಚ ॥110॥ ಸಹಸ್ರವತ್ಸರಂ ಚೈನಾಂ ಶುಶ್ರೂಷಿತ್ವಾ ಬಭಾಷಿರೆ ॥ ದೇವಿನೋ ಮಾನುಷಂ ಪ್ರಾಪ್ಯ ಮನ್ಯಗಾತ್ವಂ ಚ ಸರ್ವಥಾ ॥111॥ ತತ್ರಾಪಿ ಮಾರುತಾದನ್ಯಂ ನಸ್ಸ್ಪೃಶೇಮ ಕದಾಚನ ॥ ಪ್ರಹೃಶ್ಯೈವಚ ಶಪ್ತಾಸ್ಮಃ ಪೂರ್ವಂಚಾನ್ಯತ್ರ ಲೀಲಯಾ ॥112॥ ಏಕದೇಹತ್ವಮಾಪೇಸ್ಯಂ ಯದಾವಂಚಿಯಿತುಂ ಗತಾಃ ॥ ಏಕದೇಹಾ ಮಾನುಷತ್ವಮಾಪ್ಸ್ಯಥ ತ್ರಿಶ ಉದ್ಧತಾಃ ॥ ತ್ರಿಶೋ ಮದ್ವಂಚನಾಯೈತಾ ಇತಿ ತೇನೋದಿತಾವಯಂ ॥ ಅತಸ್ತ್ವಯ್ಯೇಕ ದೇಹತ್ವಮಿಚ್ಛಾಮೋ ದೇವಿಜನ್ಮಸು ॥114॥ ಚತುಷ್ಟಯಯುತೋಽಸ್ಮಾಕಂ ಶಾಪದ್ವಯ ನಿಮಿತ್ತತಃ ॥ ಚತುರ್ಜನ್ಮ ಭವೇದ್ಭೂಮೌತ್ವಾಂ ನಾನ್ಯೋ ಮಾರುತಾದ್ಭಜೇತ್ ॥115॥"—ಇತ್ಯಾದಿ. ದ್ರುಪದರಾಜನು ಯಾಗಮಾಡುವಾಗ ಅಗ್ನಿಕುಂಡದಿಂದ ಧೃಷ್ಟದ್ಯುಮ್ನನು ಹುಟ್ಟಿದಮೇಲೆ, ಅಗ್ನಿಕುಂಡದ ಮಧ್ಯದಿಂದ ಸಾಕ್ಷಾದ್ಭಾರತೀದೇವಿಯರು ಹೊರಟು ಬಂದರು. ಸರ್ವರನ್ನೂ ಭರಣಮಾಡುವುದರಿಂದ, ಪ್ರಾಣದೇವರಿಗೆ ಭರತಯೆಂದು ಹೆಸರು. ಅವರ ಹೆಂಡತಿಯಾದುದರಿಂದ **ಭಾರತೀ**-ಎಂದು ಹೆಸರು ಬರಲು ಕಾರಣವಾಯಿತು. ಈಕೆಯು ವೇದರೂಪವಾದುದರಿಂದ **ಸರಸ್ವತೀ**-ಎಂತಲೂ ಈಕೆಯನ್ನು ಹೇಳುವುದುಂಟು.

ದ್ರುಪದರಾಜನ ಮಗಳೆಂದು ಅನಿಸಿಕೊಂಡದ್ದರಿಂದ **ದ್ರೌಪದಿ**-ಎಂದು ಹೆಸರಾಯಿತು. ಈಕೆಯಲ್ಲಿ ಶಚೀ, ಶಾಮಲಾ, ಉಷಾ ಎಂಬುವರ ಆವೇಶವುಂಟು. ಇವರು ಮೂವರೂ ಇಂದ್ರ, ಯಮ, ಅಶ್ವಿನೀದೇವತೆಗಳ ಪತ್ನಿಯರಾದುದರಿಂದ, ಅವರ ಆಶ್ರಯದಿಂದ ಶ್ರೀ ಎಂಬ ಹೆಸರೂ ಇವರಿಗಿದ್ದಿತು. ಈಕೆಗೆ ಸ್ತ್ರೀಯರಲ್ಲಿ ಎಲ್ಲರಕಿಂತಲೂ ಅಧಿಕವಾದ ರೂಪಗಳು ಇದ್ದುದರಿಂದಲೂ, ಕೃಷ್ಣವರ್ಣವಾದುದರಿಂದಲೂ, ಕೃಷ್ಣೆಯೆಂಬ ಹೆಸರು ಇದ್ದಿತು. ಹುಟ್ಟುವ ಕಾಲದಲ್ಲೇ ಸರ್ವಜ್ಞರಾಗಿಯೂ, ಸರ್ವಾಭರಣಭೂಷಿತರಾಗಿಯೂ, ಯೌವ್ವನ ಉಳ್ಳವರಾಗಿ ಯಾವಾಗಲೂ ಮುದುಕತನವನ್ನು ಹೊಂದದೇ,ಲೋಕ ಸುಂದರಿಯರಾಗಿದ್ದರು. ಪಾರ್ವತೀ ಅಂಶವು ಶಚ್ಯಾದಿಗಳಕಿಂತಲೂ ಹೆಚ್ಚಿಗಿತ್ತು. ಸರ್ವಲಕ್ಷಣಗಳಿಂದ ಕೂಡಿದವರಾಗಿದ್ದರು. ಪಾರ್ವತೀ ಮೊದಲಾದವರಿಂದ ಕೂಡಿ,ಭಾರತೀದೇವಿಯರು ಜನಿಸಲು ಕಾರಣವೇನೆಂದರೆ- ಹಿಂದೆ ಒಂದು ದಿವಸ ಪಾರ್ವತೀ, ಶಚೀ, ಶಾಮಲಾ, ಉಷಾ-ಇವರು ನಾಲ್ವರೂ ತಮ್ಮ ಪತಿಗಳೊಡನೆ ಬ್ರಹ್ಮದೇವರು ಸಮೀಪದಲ್ಲಿದ್ದಾಗ, ಹಾವಭಾವವಿಲಾಸವನ್ನು ಅಧಿಕವಾಗಿ ತೋರಿಸಿದರು. ಅದನ್ನು ನೋಡಿ, ಬ್ರಹ್ಮದೇವರು ಇವರು ನಾಲ್ವರಿಗೂ, ನೀವು ಮನುಷ್ಯರಾಗಿ ಹುಟ್ಟಿ, ಪರಪುರುಷನ ಸಂಬಂಧವನ್ನು ಹೊಂದಿರಿ-ಎಂದು ಶಾಪವನ್ನು ಕೊಟ್ಟರು. ಆಗ, ಇವರು ನಾಲ್ಕು ದೇವತಾ ಸ್ತ್ರೀಯರೂ ಯೋಚಿಸಿ, ಭಾರತೀದೇವಿಯರನ್ನು ಒಂದು ಸಹಸ್ರವರ್ಷಗಳ ಪರ್ಯಂತ ಸೇವೆಮಾಡಿ,ಅವರು ಪ್ರಸನ್ನರಾದ ಮೇಲೆ,ತಮ್ಮ ಶಾಪದ ವೃತ್ತಾಂತವನ್ನು ತಿಳಿಸಿ ಹೀಗೆ ಬೇಡಿಕೊಂಡರು. ದೇವಿ ! ನಾವು ನಾಲ್ವರು ಮನುಷ್ಯಜನ್ಮವನ್ನು ಹೊಂದಿ, ಆ ಜನ್ಮದಲ್ಲಿ ಅನ್ಯಪುರುಷರ ಸಂಬಂಧವನ್ನು ಹೊಂದಬೇಕಾದ ಶಾಪವು ಬ್ರಹ್ಮದೇವರಿಂದ ಪ್ರಾಪ್ತವಾಗಿದೆ. ಇದು ಒಂದೇ ಶಾಪವಲ್ಲ. ಇದಕ್ಕೆ ಹಿಂದೆ ಒಂದು ದಿವಸ ನಾವು ನಾಲ್ವರೂ ಕೂಡಿ ಒಂದೇ ದೇಹದಲ್ಲಿ ಸೇರಿ,ಹುಡುಗಾಟದಿಂದ ಬ್ರಹ್ಮದೇವರನ್ನು ವಂಚಿಸಲು ಹೋದೆವು. ಆಗಲೂ ಬ್ರಹ್ಮದೇವರು "ಎಲೌ ಧೂರ್ತೆಗಳಿರಾ ! ನೀವು ನಾಲ್ವರೂ, ಮೂರು ಸಲ ಒಂದೇ ದೇಹದಿಂದ ಕೂಡಿ ನನ್ನನ್ನು ವಂಚಿಸಲು ಬಂದುದರಿಂದ, ಮೂರು ಜನ್ಮಗಳಲ್ಲಿ ಒಂದೇ ದೇಹದಿಂದ ಹುಟ್ಟಿ, ಅನ್ಯಪುರುಷನ ಸಂಬಂಧವನ್ನು

ಹೊಂದಿರಿ,"—ಎಂದು ಶಾಪವನ್ನು ಕೊಟ್ಟಿದ್ದರು. ನಾವು ಅನ್ಯಪುರುಷರನ್ನು ಹೊಂದಬೇಕಾದರೆ, ನಮ್ಮ ಪತಿಗಳಕಿಂತಲೂ ಉತ್ತಮರ ಸಂಗವು ಬಾಧಕವಲ್ಲ. ಆದ್ದರಿಂದ, ವಾಯುದೇವರನ್ನು ಹೊರತು ಮತ್ತೊಬ್ಬರನ್ನು ನಾವು ಮುಟ್ಟಲಾರೆವು. ನೀನು ನಮ್ಮೊಡನೆ ಸೇರದಿದ್ದರೆ,ವಾಯುದೇವರ ಸಂಬಂಧವು ದೊರಕದು. ನಿನ್ನನ್ನು ಮುಟ್ಟಬೇಕಾದರೆ,ವಾಯುದೇವರು ಹೊರತು ಮತ್ತೊಬ್ಬರು ಸ್ಪರ್ಶಮಾಡುವುದಿಲ್ಲ. ನಾವು ಎರಡು ಶಾಪಗಳ ನಿಮಿತ್ತದಿಂದ ನಾಲ್ಕು ಜನ್ಮಗಳಲ್ಲಿ ಮನುಷ್ಯರಾಗಿ ಹುಟ್ಟಬೇಕಾಗಿದೆ. ಆದ್ದರಿಂದ, ನಮ್ಮಗಳಿಂದ ಕೂಡಿ ನೀನು ದೇಹವನ್ನೆತ್ತಿದರೆ,ನಮಗೆ ವಾಯುದೇವರ ಸಂಬಂಧ ಹೊರತು ಮತ್ತೊಬ್ಬರ ಸ್ಪರ್ಶವಾಗುವುದಿಲ್ಲ. ನೀನು ನಮ್ಮಲ್ಲಿ ದಯವಿಟ್ಟು ನಮ್ಮಗಳಿಂದ ಕೂಡಿ ನಾಲ್ಕು ಜನ್ಮಗಳಲ್ಲಿ ಮನುಷ್ಯಳಾಗಿ ಜನಿಸಬೇಕೆಂದು ಬೇಡಿಕೊಂಡರು. ಭಾರತೀದೇವಿಯರು ಹಾಗೆ ಆಗಲೆಂದು ಅವರಿಗೆ ವರವನ್ನಿತ್ತು, ಮೊದಲು **ಶಿವನೆಂಬ** ಒಬ್ಬ ಬ್ರಾಹ್ಮಣನ ಮಗಳಾಗಿ **ಶಿವಕನ್ಯೆ** ಎಂದು ಹುಟ್ಟಿ, ಪಾರ್ವತ್ಯಾದಿ ನಾಲ್ವರು ರುದ್ರದೇವರನ್ನು ಕುರಿತು ತಪಸ್ಸು ಮಾಡಲು, ಒಂದು ಹೇಹದಲ್ಲಿ ಇವರು ಇದ್ದ ಮೇಲೆ, ಇವರ ಕರ್ಮವೂ ಒಂದೇ ರೀತಿಯಾಗಿ ಇರಬೇಕಾದುದರಿಂದ, ಭಾರತೀದೇವಿಯರು ಕಾಮ್ಯವನ್ನು ಅಪೇಕ್ಷಿಸದವರಾದರೂ, ಕರ್ಮೈಕಾರ್ಥವಾಗಿ ರುದ್ರದೇವರ ಅಂತರ್ಗತನಾದ ಹರಿಯನ್ನು ಕುರಿತು ತಪಸ್ಸು ಮಾಡಿದರು. ಇವರುಗಳ ತಪಸ್ಸಿನ ಉದ್ದೇಶವು ತಮ್ಮ ತಮ್ಮ ಪತಿಗಳನ್ನು ತಾವು ಹೊಂದಬೇಕೆಂಬುದೇ ಆಗಿದ್ದಿತು. ಆಗ ಪಾರ್ವತ್ಯಾದಿ ನಾಲ್ವರಿಗೆ ರುದ್ರದೇವರೂ, ಭಾರತೀದೇವಿಯರಿಗೆ ರುದ್ರಾಂತರ್ಗತ ಹರಿಯೂ, ಜನ್ಮಾಂತರದಲ್ಲಿ ಪತಿಸಂಬಂಧವಾಗುವ ವರವನ್ನು ಕೊಟ್ಟರು. ಶಿವಕನ್ಯೆಯು ಕನ್ಯಾವಸ್ಥೆಯಲ್ಲೇ ಮರಣ ಹೊಂದಿದಳು. ಮತ್ತೂ ಎರಡನೆಯ ನಳರಾಜನ ಮಗಳಾಗಿ **ಇಂದ್ರಸೇನೆಯೆಂದು** ಪಾರ್ವತ್ಯಾದಿಗಳಿಂದ ಕೂಡಿ,ಭಾರತೀದೇವಿಯರೇ ಜನಿಸಿದರು. ಆ ಸಮಯದಲ್ಲಿ **ಮುದ್ಗಲನೆಂಬ** ಒಬ್ಬ ಋಷಿಯು ತಪಸ್ಸು ಮಾಡುತ್ತಿದ್ದನು. ಆ ಋಷಿಯು ಒಂದು ದಿವಸ ಪುರಾಣ ಕೇಳುತ್ತಿರುವಾಗ, ಬ್ರಹ್ಮದೇವರು ತಮ್ಮ ಮಗಳನ್ನೇ ತಾನು ಪರಿಗ್ರಹಿಸಲು ಯತ್ನಮಾಡಿದರೆಂಬ ಕಥೆಯನ್ನು ಕೇಳಿ, ಬ್ರಹ್ಮದೇವರನ್ನು ಹಾಸ್ಯಮಾಡಿದನು. ಆಗ ಬ್ರಹ್ಮದೇವರು,

"ನೀನು ಅಧೋಗತಿಯನ್ನು ಹೋದುವುದಕ್ಕಾಗಿ, ಭಾರತ್ಯಾದಿ ಐದು ದೇವಿಯ ಸಂಗವನ್ನು ಹೋದು"-ಎಂದು ಶಾಪವನ್ನಿತ್ತರು. ಆಗ ಮುದ್ಗಲನು ಭಯ ದಿಂದ ಬ್ರಹ್ಮದೇವರನ್ನು ತಪಸ್ಸುಮಾಡಿ ಬೇಡಿಕೊಂಡನು. ಆಗ ಬ್ರಹ್ಮದೇವರು "ಎಲೈ ಮುದ್ಗಲನೇ, ನೀನು ಸಾಕ್ಷಾತ್ತಾಗಿ ಆ ದೇವಿಯರ ಸಂಬಂಧ ಪಡಾ ವುದಿಲ್ಲ. ನಿನ್ನ ಶರೀರದಲ್ಲಿ ವಾಯುದೇವರು ಇದ್ದು, ಆ ದೇವಿಯರನ್ನು ಹೋದುವರು. ಆಗ ನಿನಗೆ ಮೂರ್ಛಾವಸ್ಥೆಯಾಗಿರುವುದು. ಆದ್ದರಿಂದ ನಿನಗೆ ಆ ದೋಷವು ಬರುವುದಿಲ್ಲ."- ಎಂದು ಶಾಪಾನುಗ್ರಹವನ್ನು ಮಾಡಿ ದರು. ಅದರಂತೆ,ವಾಯುದೇವರು ಮುದ್ಗಲನಲ್ಲಿದ್ದು, **ಇಂದ್ರಸೇನೆಯನ್ನು** **ವಿವಾಹಮಾಡಿಕೊಂಡು** ಬಹುಕಾಲ ಕ್ರೀಡಿಸುತ್ತಿದ್ದು, ಮುದ್ಗಲನಿಗೆ ಎಚ್ಚರ ವನ್ನಿತ್ತು ಹೊರಟುಹೋದರು. ಆ ಇಂದ್ರಸೇನೆಯೇ ಆ ದೇಹವನ್ನು ಬಿಟ್ಟು ದ್ರುಪದರಾಜನ ಮಗಳಾಗಿ ಜನಿಸುದುವು. ವಾಯುದೇವರು ಮಧ್ವಾಚಾರ್ಯ ರಾಗಿ ಅವತರಿಸಿದ ಕಾಲದಲ್ಲಿ ಶಂಕರನೆಂಬ ಒಬ್ಬ ಬ್ರಾಹ್ಮಣನ ಮನೆಯಲ್ಲಿ ದ್ರೌಪ ದಿಯು **ಚಂದ್ರಾ**- ಎಂಬ ಹೆಸರಿನಿಂದ ಹುಟ್ಟಿ, ಕನ್ಯಾವಸ್ಥೆಯಲ್ಲೇ ಮುಕ್ತಿ ಹೊಂದಿದಳು. ಅಂತು, ಶಚ್ಯಾದಿಗಳಿಂದ ಕೂಡಿ ಭಾರತೀದೇವಿಯರು ಅವ ತರಿಸಿದ ರೂಪಗಳು ನಾಲ್ಕು ಎಂದು ತಿಳಿಯಬೇಕು. ಹನುಮಂದವತಾರ ಕಾಲ **ದಲ್ಲಿ ಶಿವಕನ್ಯೆಯಾಗಿ** ಜನಿಸಿದರು. ತ್ರೇತಾಯುಗಾಂತ್ಯದಲ್ಲಿ ಇಂದ್ರಸೇನೆಯ ಜನನ, ಭೀಮಾವತಾರದಲ್ಲಿ **ದ್ರೌಪದೀ**, ಮಧ್ವಾವತಾರದಲ್ಲಿ **ಚಂದ್ರಾ**, -ಹೀಗೆ 4 ಅವತಾರಗಳ ಕಾಲವನ್ನು ಗರುಡಪುರಾಣದಲ್ಲಿ ಹೇಳಿರುವರು. ಈ ಭಾರತೀದೇವಿಯರೇ ಕಾಲಾಭಿಮಾನಿಯು. **ವಿದ್ಯುತ್**-ಎಂತ ಭಾರತೀದೇವಿ ಯರ ನಾಮಾಂತರವು. ಈ ಸರಸ್ವತೀ ಭಾರತೀಯರು ತಮ್ಮ ಪತಿಗಳಿಗಿಂತಲೂ 100 ಗುಣಗಳಿಂದ ಅಧಮರೆಂದು ತಾರತಮ್ಯ ತಿಳಿಯಬೇಕು. ॥10॥

**ಕ. ಭಾವದರ್ಪಣ :-**

ಈಗ ಭಾರತೀದೇವಿಯ ಅವತಾರ ಹೇಳುತ್ತಾರೆ । ಕಾಳೀತಿ । ಕಾಶಿರಾಜನ ಮಗಳಾದ **ಕಾಳಿಯೇ** ಸಾಕ್ಷಾದ್ಭಾರತೀ ಎಂದು ತಿಳಿಯಬೇಕು । ತದುಕ್ತಂ ಗಾರುಡೇ । "ಸೇವಲಾ ಭಾರತೀತ್ಯೇಯ ಕಾಶಿರಾಜಸ್ಯ ಕನ್ಯಕೇತಿ । ಇಲ್ಲಿ ಕಾ

ಜಳಾದಂಥಾ **ಶಾಳೀ** ಎಂತಲೂ. ಪಾಂಚಾಲಿಯಾದಂಥಾ **ದ್ರೌಪದೀ** ಎಂತಲೂ ಅನ್ವಯಿಸಬೇಕು । ಶಿವೇಕನ್ಯೇತಿ । ಶಿವನಾಮಕ ವಿಪ್ರಪುತ್ರೀ ಎಂಬರ್ಥ । ಇಂದ್ರಸೇನಾ ನಳಚಕ್ರವರ್ತಿ ಪುತ್ರೀ । ದ್ರೌಪದಿ ದ್ರುಪದಪುತ್ರೀ । ಈ ಮೂರು ಮಂದಿ ಶಚೀ, ಶಾಮಲಾ, ಪಾರ್ವತೀ, ಉಷಾ-ಈ ನಾಲ್ವರಿಂದ ಕೂಡಿದವರು ಎಂತಿದೆ । ಇದಕ್ಕೆ ಪ್ರಮಾಣ । "ಹನೂಮಾಂಶ್ಚ ಯದಾ ಜಜ್ಞೆ ತ್ರೇತಾಯಾಂ ಪಕ್ಷಿಸತ್ತಮ । ತದಾ ಶಿವಾಖ್ಯ ವಿಪ್ರಾಚ್ಚ ಜಜ್ಞೇ ಸಾ ಭಾರತೀಸ್ಮೃತಾ । ನ ಕೇವಲಾ ಭಾರತೀ ಸಾ ಶಚ್ಯಾದ್ಯಭಿಶ್ಚ ಸಂಯುತಾ । ತಸ್ಮಿನ್ ಜನ್ಮನಿ ತಾಃ ಸರ್ವಾ ನಾಪುರ್ಯೋಗಂ ಸ್ವಭರ್ತೃಭಿಃ । ಅಸ್ಯಗಾತ್ರಂಚ ನೈವಾಪ ಕನ್ಯಾ ಜನ್ಮನಿ ಸಾ ಮೃತಾ।ತ್ರೇತಾಂತೇ ಸೈವ ಪಕ್ಷೀಂದ್ರ ಶಚ್ಯಾದ್ಯಾಭಿಶ್ಚ ಸಂಯುತಾ। ದಮಯಂತ್ಯಾಂ ನಲಾಜ್ಜಾತಾ ಇಂದ್ರಸೇನೇತಿ ಸಂಜ್ಞಿಕಾ । ನಲಂ ನಂದಯತೀ ಯಸ್ಮಾತ್ತಸ್ಮಾಚ್ಚ ನಲನಂದಿನೀ । ತತ್ರ ಸ್ವಭರ್ತೃಸಂಯೋಗಂ ನೈವಚಾಪ ಖಗೇಶ್ವರ । ತತ್ರಾಸ್ಯಾಗಾತ್ರಂ ವಿಕ್ಷೇಯಂ ಮುದ್ಗಲಸ್ಥೇನ ವಾಯುನಾ । ಕಿಂಚಿತ್ಕಾಲಂ ತತ್ರ ಸ್ಥಿತ್ವಾ ಕನ್ಯೈವ ಮೃತಿಮಾಪ ಸಾ । ಶಚ್ಯಾದಿಸಂಯುತಾ ಸಾಭೃದ್ದ್ರುಪದಸ್ಯ ಮಹಾತ್ಮನಃ । ವೇದಿ ಮಧ್ಯೇ ಸಮುದ್ಭೂತಾ ಭೀಮಸೇನಾರ್ಥಮೇವ ಚ । ಸಂಕರಸ್ಯ ಗೃಹೇ ಚಂದ್ರಾ ಭವಿಷ್ಯತಿ ಕಲೌ ಯುಗೇ ವಾಯೋಸ್ತುತೀಯರೂಪಾರ್ಥಂ ಕನ್ಯಾಸ್ಯೈವ ಮೃತಿಂಗತಾ । ಇತಿ ಗರುಡಪುರಾಣೋಕ್ತೇಃ । ವಿದ್ಯುನ್ನಾಮೇತಿ । "ಪೃಥಿವೀ ನಾಮಿಕಾ ಶ್ರೀಸ್ತು ದ್ಯೌರಿತಿ ವಿದ್ಯುದೇವಚೇತಿ"–ಛಾಂದೋಗ್ಯ ಭಾಷ್ಯಮಾನಾತ್ । ಭಾರತೀರೂಪಗಳ ವಿಷಯದಲ್ಲಿ ಬೃಹತ್ತಾರತಮ್ಯ ಪ್ರಮಾಣ । "ಶಿವಕನ್ಯೇಂದ್ರ ಸೇನಾಚ ದ್ರೌಪದಿ ಕಾಶಿಜಾ ತಥಾ । ಚಂದ್ರೇತಿ ಬ್ರಹ್ಮವಾಯೋಸ್ತು ಭಾರ್ಯೇ ಪೃಥ್ವ್ಯ ಶತಾಧಮಾ"–ಇತಿ । ಗಾಳಿ ಬ್ರಹ್ಮರಯುವತಿ ವಾಯು ಬ್ರಹ್ಮರ ಪತ್ನಿಯರ್ರು ಎಂಬರ್ಥ । ಏಳೇಳು 49-ಐವತ್ತೊಂದು-ಅಂತು ನೂರು ಗುಣಗಳಿಂದ ಕಡಿಮೆ ಎಂಬರ್ಥ. ॥10॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಹನೂಮಜ್ಜನ್ಮನಿ ಶಿವಾತ್ ಜಾತಾ ಭರ್ತೃಯೋಗಂ ನಾಪ ॥ ತ್ರೇತಾಂತೇ ಶಚ್ಯಾದಿಯುತಾ ದಮಯಂತ್ಯಾಂ ನಲಾತ್ ಜಾತಾ ಇಂದ್ರಸೇನಾ ಮುದ್ಗಲಗ ವಾಯುನಾ ವಿಕ್ರೀಡ್ಯ ಮೃತಿಮಾಪ್ಯ ಪೂರ್ವಸ್ತ್ರೀಯುತಾ ಪಂಚಾಲವೇದಿ ಮಧ್ಯಾದ್ ಉದ್ಭೂತಾ ದ್ರೌಪದೀ ॥ ಏವಂ ಚ ಪಾಂಚಾಲಿ ಪದಂ ದ್ರೌಪದೀತ್ಯ ನ್ವೇತಿ ॥ 'ಕಾಶಿ'-ಇತಿ ಪ್ರಥಮ ಪದೇ ಅನ್ವೇತಿ ॥ ತಮುಕ್ತಂ ಕೇವಲಾ ಭಾರತೀ ಜ್ಞೇಯಾ ಕಾಶಿರಾಜಸ್ಯ ಕನ್ಯಕಾ ॥ ಕಾಳೀನಾಮ್ನೀ ಭೀಮಪ್ರಿಯಾ ॥ ವಿಶಿಷ್ಟೈವ ಕಾಲಡೀಗ್ರಾಮೇ ಸಂಕರಗೃಹೇ ಅವತೀರ್ಣಾ ವಾಯೋಃ ತೃತೀಯ ರೂಪಾರ್ಥಂ ಇತಿ ॥ ಕಾಲಮಾನಿನೀ ಚಂದ್ರಾ ॥ ದ್ಯುಸಭಾ ಮಾನಿನೀ ದ್ಯೌಃ ॥ 'ಏಳೇಳು' = 49 ॥ ಐವತ್ತೊಂದು ಒಟ್ಟಿಗೆ-100 ॥ ಸರಸ್ವತೀ ಚ ಗಾಯತ್ರೀ ಶ್ರದ್ಧಾಯಾ ಪ್ರೀತಿರೇವ ಚ ॥ ಸರ್ವವೇದಾತ್ಮಿಕಾ ಬುದ್ಧಿಃ ಅನುಭೂತಿಃ ಸುಖಾತ್ಮಿಕಾ ॥ ಗುರುಭಕ್ತಿಃ ಸರ್ವಮಂತ್ರಾತ್ಮಿಕಾ ಭುಜಃ ॥ ಶಿವಕನ್ಯೇಂದ್ರಸೇನಾ ಚ ದ್ರೌಪದೀ ಕಾಶಿಜಾ ತಥಾ ॥ ಚಂದ್ರೇತ್ಯಾದಿ ಸುರೂಪಾಯಾಃ ತೇಭ್ಯಃ ಶತಗುಣಾವರಾಃ ॥10॥

### ಕನ್ನಡಾರ್ಥ

ಹನುಮಂತದೇವರ ಅವತಾರದಲ್ಲಿ **ಶಿವನೆಂಬ** ಬ್ರಾಹ್ಮಣನಿಂದ ಜನಿಸಿದ ಭಾರತೀಯು ಪತಿಯ ಸಂಬಂಧವನ್ನು ಹೊಂದಲಿಲ್ಲ. ತ್ರೇತಾಯುಗದ ಕೊನೆಯಲ್ಲಿ ದಮಯಂತೀಯಲ್ಲಿ ನಳನಿಂದ **ಇಂದ್ರಸೇನಾ** ಎಂಬ ಹೆಸರಿನಿಂದ ಭಾರತೀದೇವಿಯು ಪಾರ್ವತೀ. ಶಚಿ, ಶಾಮಳಾ, ಉಷಾ-ಈ ನಾಲ್ಕು ದೇವಸ್ತ್ರೀಯರಿಂದ ಯುಕ್ತಳಾಗಿ ಒಂದೇ ದೇಹದಲ್ಲಿ ಅವತರಿಸಿದರು. ಆ ಇಂದ್ರಸೇನೆಯು "ಮುದ್ಗಲ"ನೆಂಬ ಬ್ರಾಹ್ಮಣನಲ್ಲಿರುವ ವಾಯುದೇವರಿಂದ ಸಂಬಂಧವನ್ನು ಪಡೆದು, ವಿಹರಿಸಿ ದೇಹ ವಿಯೋಗಿಸಿದಳು. ಮತ್ತು ಹಿಂದಿನಂತೆ ಶಚಿ ಮುಂತಾದವರೊಡನೆ ಕೂಡಿಕೊಂಡು, ಭಾರತೀದೇವಿಯೇ (ಇಂದ್ರಸೇನೆಯೇ) ದ್ರುಪದರಾಜನ ಕುಮಾರಿ ಎನಿಸಿ, ಅವತರಿಸಿ, **ದ್ರೌಪದಿ** ಎನಿಸಿದಳು. ಮೂಲ

ಪದ್ಯದಲ್ಲಿರುವ ಪಾಂಚಾಲಿ ಪದವು 'ದ್ರೌಪದಿ'–ಎಂಬ ಪದದೊಡನೆ ಅನ್ವಿತವಾಗಿರುತ್ತದೆ. ಅದರಂತೆ, **'ಕಾಶಿಜಾ'**-ಎಂಬ ಪದವು 'ಕಾಳಿ'–ಎಂಬ ಪದಕ್ಕೆ ವಿಶೇಷಣವಾಚಕವಾಗಿರುತ್ತದೆ.

ಕಾಶಿರಾಜನಲ್ಲಿ ಭಾರತೀದೇವಿಯು **'ಕಾಳಿ'**–ಎಂಬ ನಾಮದಿಂದ ಅವತರಿಸಿ ಭೀಮಸೇನದೇವರನ್ನು ಸ್ವಯಂವರದಲ್ಲಿ ಮದುವೆಯಾದ ಇತಿಹಾಸವು ಪುರಾಣ ಪ್ರಸಿದ್ಧವಾದದ್ದು. ಅದರಂತೆ,ದ್ರೌಪದಿಯಲ್ಲಿ ಭಾರತೀದೇವಿ ಹಾಗೂ ಪಾರ್ವತಿ, ಶಚಿ, ಶಾಮಲಾ, ಉಷಾ, ಇವರುಗಳಿರುವುದು ಭಾರತ ಹಾಗೂ ತಾತ್ಪರ್ಯ ನಿರ್ಣಯಗಳಲ್ಲಿ ಸ್ಪಷ್ಟವಾಗಿರುತ್ತದೆ. ಪಾರ್ವತೀ- ಮುಂತಾದವರು ಬ್ರಹ್ಮದೇವರೆದುರು ವಿಲಾಸಾತಿಶಯವನ್ನು ತೋರಿಸಿದ್ದರಿಂದ,ಮನುಷ್ಯರಾಗಿ ಹುಟ್ಟಿದರೆಂದೂ, ಒಂದೇ ದೇಹದಲ್ಲಿದ್ದು, ಇವರೆಲ್ಲರೂ ಬ್ರಹ್ಮದೇವರನ್ನು ಮೋಹಗೊಳಿಸಲು ಪ್ರಯತ್ನಿಸಿದ್ದರಿಂದ, ಒಂದೇ ದೇಹದಲ್ಲಿ ಜನಿಸಿದರೆಂದು ಬ್ರಹ್ಮದೇವರು ಶಾಪಕೊಟ್ಟರು. ಪಾರ್ವತೀ ಮುಂತಾದವರು ಭಾರತೀದೇವಿಯನ್ನು, ಅವರು ಭೂಮಿಯಲ್ಲಿ ಅವತರಿಸಿದಲ್ಲಿ ಅವರ ಶರೀರದಲ್ಲಿ ತಾವಿದ್ದು, ಉತ್ತಮರಾದ ವಾಯುದೇವ ಸ್ಪರ್ಶವನ್ನು ಪಡೆದು, ಶಾಪವನ್ನು ಅನುಭೋಗಿಸಿ, ತಮ್ಮನ್ನು ಉದ್ಧರಿಸಬೇಕೆಂದು ಬೇಡಿಕೊಂಡರು. ಆಗ ಭಾರತೀದೇವಿಯರು ಇವರನ್ನು ಅನುಗ್ರಹಿಸಲು, ಇವರೊಡನೆ ತಾವು ಅವತರಿಸಿದರು. ಅವುಗಳಲ್ಲಿ ಮೊದಲನೆಯದು **ಶಿವಕನ್ಯಾ** ಎಂಬುದು. ಎರಡನೆಯದು ನಳನಲ್ಲಿ ಹುಟ್ಟಿದುದು–**ಇಂದ್ರಸೇನಾ**ಎಂಬುದು. ಮೂರನೆಯದು **'ದ್ರೌಪದಿ'**–ಎಂಬುದು. ನಾಲ್ಕನೆಯದು ಶ್ರೀಮದಾನಂದತೀರ್ಥರ ಅವತಾರಕಾಲದಲ್ಲಿ ಆದ **'ಚಂದ್ರಾ'**–ಎಂಬುದು. ಹನುಮದವತಾರಕಾಲದಲ್ಲಿ ಅವತರಿಸಿದ ಶಿವಕನ್ಯೆಯು ಬಾಲ್ಯದಲ್ಲಿಯೇ ಮೃತಳಾದುದರಿಂದ, ಹನುಮಂತನನ್ನು-ಪತಿಯನ್ನು ಹೊಂದಲಿಲ್ಲ. ಅದರಂತೆ, ಶ್ರೀಮದಾಚಾರ್ಯರ ಕಾಲದಲ್ಲಿಯೂ ಭಾರತೀದೇವಿಯು ಶಂಕರನೆಂಬ ಬ್ರಾಹ್ಮಣನಲ್ಲಿ **'ಚಂದ್ರಾ'**–ಎಂಬ ಹೆಸರಿನಿಂದ ಹುಟ್ಟಿ, ಬಾಲ್ಯದಲ್ಲಿಯೇ ಮೃತಳಾದಳು- ಹೀಗೆ ಇವುಗಳು ನಾಲ್ವರು ದೇವಿಯರೊಡನೆ ಆದ ಅವತಾರಗಳು. ಕಾಶಿರಾಜನಲ್ಲಿ ಅವತರಿಸಿದ ಕಾಳೀದೇವಿಯಲ್ಲಿ ಮಾತ್ರ ಹಿಂದಿನಂತೆ, ಯಾವ

ದೇವಸ್ತ್ರೀಯರೂ ಇರುವುದಿಲ್ಲ. ಆದುದರಿಂದ, ಕೇವಲ ಭಾರತೀ ಅವತಾರ ವೆನಿಸುವುದು.

ಕಾಲಡೀಗ್ರಾಮದಲ್ಲಿ ಶಂಕರನೆಂಬ ಬ್ರಾಹ್ಮಣನ ಮನೆಯಲ್ಲಿ ಚಂದ್ರಾ ದೇವಿಯು ವಾಯುದೇವರ ಮೂರನೆಯ ರೂಪದ ಸಲುವಾಗಿ ಅವತರಿಸಿದಳು. ಈ ಚಂದ್ರಾರೂಪವೂ ಸಹ ವಿಶಿಷ್ಟವೇ. ಪಾರ್ವತೀ ಮುಂತಾದ ದೇವಸ್ತ್ರೀಯ ರಿಂದ ಕೂಡಿದುದೇ.

ಕಾಲಾಭಿಮಾನಿಯಾದ ಚಂದ್ರಾದೇವಿಯೊಂದು ರೂಪ, ದ್ಯು-ಸಭಾಭಿ ಮಾನಿಯಾದ 'ದ್ಯು'-ನಾಮಕ ಭಾರತೀದೇವಿಯದೊಂದು ರೂಪ. ಹೀಗೆ ಭಾರತೀದೇವಿಯರ ಎರಡು ರೂಪಗಳು. 'ಏಳೇಳು ಐವತ್ತೊಂದು- ಎಂದರೆ, 49 + 51 = 100 ನೂರು ಗುಣಗಳು. ಸರಸ್ವತಿ, ಗಾಯತ್ರೀ, ಶ್ರದ್ಧಾ, ಪ್ರೀತಿ, ಗುರುಭಕ್ತಿ, ಸರ್ವವೇದಾತ್ಮಿಕಾ, ಬುದ್ಧಿ, ಅನುಭೂತಿ, ಸುಖಾ ತ್ಮಿಕಾ, ಗುರುಭಕ್ತಿ, ಹರಿಪ್ರೀತಿ, ಸರ್ವಮಂತ್ರಾತ್ಮಿಕಾ, ಭುಜಿ, ಶಿವಕನ್ಯಾ, ಇಂದ್ರಸೇನಾ, ದ್ರೌಪದೀ, ಕಾಳೀ, ಚಂದ್ರಾ,—ಈ ಮುಂತಾದ ಭಾರತಿ ಹಾಗೂ ತದ್ರೂಪಗಳು, ವಾಯುದೇವರು ಹಾಗೂ ಬ್ರಹ್ಮದೇವರಿಂದ ನೂರು ಗುಣ ಕಡಿಮೆಯವೆನಿಸುತ್ತವೆ. ॥10॥

**ಜಿ. ಶ್ರೀಗುರುಹೃದಯ ಪ್ರಕಾಶಿಕೆ :–**

ಕಾಶೀರಾಜನ ಮಗಳಾದ **ಕಾಳೀದೇವಿ** ಎಂದು ಭೀಮನಪತ್ನಿ. ಪಾಂಚಾಲಿ ಪುತ್ರಿ **ದ್ರೌಪದಿ.** ಶಿವನೆಂಬ ಬ್ರಾಹ್ಮಣನ ಮಗಳಾಗಿ ಅವತರಿಸಿದ **ಶಿವಕನ್ಯೆ.** ನಳರಾಜನ ಮಗಳಾದ **ಇಂದ್ರಸೇನಾದೇವಿ.** ಕಾಲಾಭಿಮಾನಿ **ಚಂದ್ರಾ** ಎಂದು ಭೂಲೋಕದಲ್ಲಿ ಅವತರಿಸಿದ ರೂಪ. **ದ್ಯುಸಭಾ** ಎಂಬ ಸ್ವರ್ಗಲೋಕಸಭಾಭಿ ಮಾನಿ. ಇವುಗಳು ಭಾರತೀದೇವಿಯರ ನಾಮರೂಪಗಳು. ಈ ಸರಸ್ವತೀ-ಭಾರತೀಯರಿಬ್ಬರೂ ತಮ್ಮ ಪತಿಗಳಾದ ಬ್ರಹ್ಮ-ವಾಯುಗಳಿಗಿಂತಲೂ ನೂರು ಗುಣ ಕಡಿಮೆ. ॥10॥

## ಸರ್ವವ್ಯಾಖ್ಯಾನಸಾರಸಂಗ್ರಹ

**(1) ಕಾಳಿ :–**

ಭಾರತೀದೇವಿಯರು ರೂಪಾಂತರದಿಂದ ಕಾಶೀರಾಜನ ಮಗಳಾಗಿ **ಕಾಳಿ** -ಎಂಬ ನಾಮದಿಂದ ಅವತಾರಮಾಡಿದರು.

**“ಕೇವಲಾ ಭಾರತೀ ಜ್ಞೇಯಾ ಕಾಶೀರಾಜಸ್ಯ ಕನ್ಯಕಾ”**-ಎಂಬ ಪ್ರಮಾಣ.

**“ಕೃಷ್ಣಾನ್ಯೈವಾಪ್ಯನ್ಯರೂಪೇಣ ಜಾತಾ ಕಾಶೀಶ ಪುತ್ರೀಂ ಯಾಂ ಪ್ರವದಂತೀ ಕಾಳೀಂ ||”–**

**(2) ದ್ರೌಪದಿ :–**

ದ್ರುಪದರಾಜನ ಪುತ್ರಿಯಾಗಿ ಅಗ್ನಿಕುಂಡದಿಂದ ಉದ್ಭವಳಾದ ಶ್ರೀಭಾರತೀ ದೇವಿಯ ಅವತಾರವು. ದ್ರುಪದನ ಮಗಳಾದ್ದರಿಂದ, **ದ್ರೌಪದಿ**- ಎಂತ ನಾಮ.

**(3) ಕಾಶಿಜಾ :-**

ಕಾಶೀರಾಜನ ಪುತ್ರಿಯಾಗಿ ಅವತಾರ ಮಾಡಿದ್ದರಿಂದ, **ಕಾಶಿಜೆ**–ಎಂದು ಹೆಸರು. ಕಾಶೀರಾಜನ ಮಗಳೇ ಕಾಳೀ ನಾಮಕಳಾದ ಶ್ರೀಭಾರತೀದೇವಿಯು.

**ಸ್ವಯಂವರಾರ್ಥಂ ನೃಪತೀ ನಾಜುವಾಹ ಸರ್ವಾಂ ಸ್ತ್ರೀರುಹೃತ್ಯ**
**ಹರ್ಷಾತ್ಸ್ವಮೇತಾಃ || ತೇಷಾಂ ಮಧ್ಯೇ ಭೀಮಸೇನಾಂಶ ಏಷಾ**
**ಮಾಲಾಮಧಾತ್ತತ್ರ ಜರಾಸುತಾದ್ಯಾಃ ||”**

**—ನಿರ್ಣಯ ಪ್ರಮಾಣ.**

ಕಾಶೀರಾಜನು ಕಾಶೀನಾಮಕಳಾದ ಶ್ರೀಭಾರತೀದೇವಿಯರ ಸ್ವಯಂವರಕ್ಕಾಗಿ ಅನೇಕ ದೇಶದ ರಾಜರುಗಳನ್ನು ಆಮಂತ್ರಿಸಿದನು. ಆ ರಾಜರ ಮಧ್ಯದಲ್ಲಿ ವಿರಾಜಮಾನರಾಗಿದ್ದ ಶ್ರೀಭೀಮಸೇನದೇವರ ಕಂಠಕ್ಕೆ ಕಾಶೀದೇವಿಯು ಹಾರವನ್ನು ಅರ್ಪಿಸಿದಳು. ಆಗ ಜರಾಸಂಧಾದಿ ದೈತ್ಯರು ಭೀಮಸೇನನ ಸಂಗಡ ಯುದ್ಧಕ್ಕೆ ನಿಂತರು. ಪ್ರಬಲ ಪರಾಕ್ರಮಶಾಲಿಗಳಾಗಿದ್ದ ಭೀಮಸೇನ ದೇವರು ಅವರೆಲ್ಲರನ್ನು ನಿರಾಯಾಸವಾಗಿ ಜಯಿಸಿ, ಕಾಶೀರಾಜನಿಂದ ಮಾನ್ಯರಾಗಿ, ಕಾಳಿಯನ್ನು ವಿವಾಹವಾಗಿ ಇಂದ್ರಪ್ರಸ್ಥಪಟ್ಟಣವನ್ನು ಸೇರಿದರು.

(4) **ಪಾಂಚಾಲಿ :—**

ಪಾಂಚಾಲಿ ದೇಶದ ರಾಜನೇ ದ್ರುಪದಚಕ್ರವರ್ತಿ. ಅವನಲ್ಲಿ ಪುತ್ರಿಯಾಗಿ ಅವತರಿಸಿದ ದ್ರೌಪದಿಯೇ **ಪಾಂಚಾಲಿ**ನಾಮಕಳು.

ದ್ರೌಪದಿಯಲ್ಲಿ- ಇಂದ್ರಪತ್ನಿ ಶಚೀ, ಯಮಪತ್ನಿ ಶಾಮಲಾ, ಅಶ್ವಿನೀ ದೇವತೆಗಳ ಪತ್ನಿ ಉಷಾ ಮತ್ತು ರುದ್ರಪತ್ನಿ ಪಾರ್ವತೀ—ಈ ನಾಲ್ವರೂ ಆಶ್ರಯಪಡೆದಿದ್ದರು. ಇದರಿಂದಲೂ ಪಾಂಚಾಲಿಯಾಗಿ, ಪಂಚಪಾಂಡವರ ಪತ್ನಿಯಾದಳು.

**ಕಥಾಪ್ರಸಂಗ :-**

ಹಿಂದೊಮ್ಮೆ, ರುದ್ರಪತ್ನಿ ಪಾರ್ವತೀ, ಇಂದ್ರಪತ್ನಿ ಶಚೀ, ಯಮಪತ್ನಿ ಶ್ಯಾಮಲಾ, ಅಶ್ವಿನೀದೇವತೆಗಳ ಪತ್ನಿ ಉಷಾ—ಈ ನಾಲ್ವರೂ ತಮ್ಮ ತಮ್ಮ ಪತಿಗಳೊಡನೆ ಬ್ರಹ್ಮದೇವರ ಸಮೀಪದಲ್ಲಿದ್ದರು. ಆ ಸಮಯದಲ್ಲಿ ವಿಪರೀತವಾಗಿ ಹಾವಭಾವ ವಿಲಾಸಗಳನ್ನು ತೋರಿಸಿದರು. ಅದರಿಂದ ಬ್ರಹ್ಮದೇವರಿಗೆ ಮನಸ್ಸಿಗೆ ಜಿಗುಪ್ಸೆಯುಂಟಾಗಿ, ಆ ನಾಲ್ವರೂ ಮನುಷ್ಯರಾಗಿ ಜನಿಸಿ, ಪರಪುರುಷರ ಸಂಬಂಧವನ್ನು ಹೊಂದಿರೆಂದು ಶಾಪವಿತ್ತರು. ಆಗ ಆ ನಾಲ್ವರೂ ಭಾರತೀದೇವಿಯನ್ನು ಒಂದು ಸಹಸ್ರ ವರ್ಷಗಳ ಕಾಲ ಸೇವಿಸಿದರು. ಅವರ ಸೇವೆಯಿಂದ ಪ್ರಸನ್ನರಾದ ಭಾರತೀದೇವಿಯರು ಅವರಿಗೆ

ತಮ್ಮಲ್ಲಿ ಆಶ್ರಯಕೊಟ್ಟರು. ಶ್ರೀವಾಯುದೇವರ ಸಂಪರ್ಕವು ಇತರ ದೇವತೆಗಳ ಸಂಪರ್ಕಕ್ಕಿಂತಲೂ ಉತ್ತಮ ಮತ್ತು ಅದರಿಂದ ಅವರ ಪಾತಿವ್ರತ್ಯಕ್ಕೆ ಬಾಧಕವಲ್ಲ. ಆಗ ಭಾರತೀದೇವಿಯರು **ಶಿವನೆಂಬ** ಒಬ್ಬ ಬ್ರಾಹ್ಮಣ ಪುತ್ರಿಯಾಗಿ **ಶಿವಕನ್ಯೆ**-ಎಂಬ ನಾಮದಿಂದ ಭೂಮಿಯಲ್ಲಿ ಅವತರಿಸಿದರು. ಆಗ ಪಾರ್ವತ್ಯಾದಿ ನಾಲ್ವರು ದೇವತಾಸ್ತ್ರೀಯರು ರುದ್ರದೇವರನ್ನು ಕುರಿತು ತಪಸ್ಸು ಮಾಡಿದರು. ಅವರಿಗೆ ತಮ್ಮ ತಮ್ಮ ಪತಿಗಳನ್ನು ಹೊಂದಬೇಕೆಂಬ ಉದ್ದೇಶವಿತ್ತು. ಶಿವಕನ್ಯೆಯು ಕನ್ಯಾವಸ್ಥೆಯಲ್ಲಿಯೇ ಮೃತಳಾದಳು. ಮುಂದೆ, ನಳರಾಜನ ಮಗಳಾಗಿ **ಇಂದ್ರಸೇನೆ,** ಎಂಬ ಹೆಸರಿನಿಂದ-ಪಾರ್ವತ್ಯಾದಿ ನಾಲ್ವರಿಂದ ಕೂಡಿಕೊಂಡು, ಭಾರತಿಯೇ ಅವತರಿಸಿದಳು. ಆ ಸಮಯದಲ್ಲಿ **ಮುದ್ಗಲನೆಂಬ** ಋಷಿಯು ಪುರಾಣ ಕೇಳುತ್ತಿರುವಾಗ, ಬ್ರಹ್ಮದೇವರು ತಮ್ಮ ಮಗಳನ್ನೇ ಪರಿಗ್ರಹಿಸಲು ಯತ್ನಿಸಿದರೆಂಬ ಕಥೆಯನ್ನು ಆಲಿಸಿ, ಬ್ರಹ್ಮನನ್ನು ಹಾಸ್ಯಮಾಡಿದನು. ಆಗ ಬ್ರಹ್ಮದೇವರು—ನೀನು ಅಧೋಗತಿಯನ್ನು ಹೊಂದಿ, ಭಾರತ್ಯಾದಿ 5 ದೇವಿಯರ ಸಂಗವನ್ನು ಹೊಂದು"–ಎಂದು ಶಾಪವಿತ್ತನು. ಆಗ ಮುದ್ಗಲನು ಪಶ್ಚಾತ್ತಾಪಹೃದಯನಾಗಿ, ಬ್ರಹ್ಮನನ್ನು ಪ್ರಾರ್ಥಿಸಿದನು. ಆಗ ಬ್ರಹ್ಮನು- "ಎಲೈ ಋಷಿಯೇ, ನೀನು ಸಾಕ್ಷಾತ್ತಾಗಿ ಆ ದೇವಿಯರ ಸಂಬಂಧ ಮಾಡುವುದಿಲ್ಲ. ನಿನ್ನ ಶರೀರದಲ್ಲಿ ವಾಯುದೇವರೇ ಇದ್ದು, ಆ ದೇವಿಯರನ್ನು ಹೊಂದುವರು. ಆಗ ನಿನಗೆ ಮೂರ್ಛಾವಸ್ಥೆ ಉಂಟಾಗುವುದು. ಅದರಿಂದ ನಿನಗೆ ಆ ದೋಷವು ತಟ್ಟುವುದಿಲ್ಲ"–ಎಂದು ಶಾಪಾನುಗ್ರಹ ಮಾಡಿದರು, ಆಗ ಮುದ್ಗಲನು ಇಂದ್ರಸೇನೆಯನ್ನು ವಿವಾಹವಾದನು. ಇಂದ್ರಸೇನೆಯೇ ತನ್ನ ದೇಹತ್ಯಾಗಮಾಡಿ, ದ್ರುಪದರಾಜನ ಪುತ್ರಿಯಾಗಿ, ಅಗ್ನಿಕುಂಡದಿಂದ ಉದ್ಭವಿಸಿದಳು. ಅವಳೇ **ದ್ರೌಪದಿಯು.** ವಾಯುದೇವರು ಶ್ರೀಮನ್ಮಧ್ವಾಚಾರ್ಯರಾಗಿ ಅವತರಿಸಿದ ಕಾಲದಲ್ಲಿ ದ್ರೌಪದಿಯೇ **ಶಂಕರನೆಂಬ** ಬ್ರಾಹ್ಮಣನ ಪುತ್ರಿಯಾಗಿ, **ಕಾಲಡಿ** ಎಂಬ ಗ್ರಾಮದಲ್ಲಿ **ಚಂದ್ರಾ**–ಎಂಬ ಹೆಸರಿನಿಂದ ಅವತರಿಸಿ, ಕನ್ಯಾವಸ್ಥೆಯಲ್ಲಿಯೇ ಮೃತಿ ಹೊಂದಿದಳು.

ದ್ರೌಪದಿಯನ್ನು ಪಂಚಪಾಂಡವರು ಸ್ವೀಕರಿಸಿದ ನಂತರ, ಶ್ರೀವಾಯ್ವಾವ

ತಾರಭೂತರಾದ ಶ್ರೀಭೀಮಸೇನರೊಡನೆ ಶ್ರೀಭಾರತೀದೇವಿಯ ಸಂಪರ್ಕ. ಆಗ ಉಳಿದ ನಾಲ್ವರಿಗೆ ಮೂರ್ಛಾವಸ್ಥೆ.

ಶ್ಯಾಮಲೆಯು ಯಮಾಂಶಸಂಭೂತರಾದ ಧರ್ಮರಾಯನನ್ನೂ ಶಚೀದೇವಿಯು ಇಂದ್ರಾಂಶನಾದ ಅರ್ಜುನನನ್ನೂ, ಉಷಾದೇವಿಯು ನಕುಲಸಹದೇವರನ್ನೂ (ಯಮಳರು) ಪ್ರತ್ಯೇಕವಾಗಿ ಸಂಪರ್ಕಿಸುತ್ತಿದ್ದರು. ಭಾರತೀ ಮಾತ್ರ ಜಾಗ್ರತಾವಸ್ಥೆಯಲ್ಲಿದ್ದು, ಉಳಿದ ಮೂವರು ಮೂರ್ಛಾವಸ್ಥೆಯಲ್ಲಿರುತ್ತಿದ್ದರು.

**(5) ಶಿವಕನ್ಯಾ :-**

ಹನುಮದವತಾರ ಸಮಯದಲ್ಲಿ,ಭಾರತೀದೇವಿಯು **ಶಿವನೆಂಬ** ಬ್ರಾಹ್ಮಣನ ಮನೆಯಲ್ಲಿ **ಶಿವಕನ್ಯಾ**ನಾಮಕಳಾಗಿ ಪುತ್ರಿಯಾಗಿ ಅವತರಿಸಿದಳು. ಶಿವಕನ್ಯೆಯು ಬಾಲ್ಯದಲ್ಲಿಯೇ ಮೃತಳಾದಳು. ಶ್ರೀಹನುಮಂತನು ಅಸ್ಖಲಿತ ಬ್ರಹ್ಮಚಾರಿಯಾದ್ದರಿಂದ, ಭಾರತಿಯ ಸಂಪರ್ಕವಿಲ್ಲ.

**(6) ಇಂದ್ರಸೇನಾ :-**

ನಳಮಹಾರಾಜನ ಮಗಳಾಗಿ ದಮಯಂತಿಯಲ್ಲಿ **ಇಂದ್ರಸೇನಾ**- ಎಂಬ ಹೆಸರಿನಿಂದ ಅವತರಿಸಿದ ಭಾರತೀದೇವಿಯರ ರೂಪವು.

**(7) ಕಾಳಿಮಾನಿ :-**

ಶ್ರೀವಾಯುದೇವರು ತ್ರಿವಿಧಜೀವರ ಸ್ಥೂಲದೇಹಗತರಾಗಿದ್ದು ದಿನಕ್ಕೆ 21,600 ಶ್ವಾಸ ಜಪಗಳನ್ನು ಮಾಡಿ, ಹಂಸನಾಮಕ ಪರಮಾತ್ಮನಿಗೆ ಅರ್ಪಿಸುತ್ತಾ, ಜೀವರ ಆಯುಸ್ಸನ್ನು ಅಳೆಯುತ್ತಿರುವರು. ಇದರಿಂದ ವಾಯುದೇವರಿಗೆ ಕಾಲ-ಎಂದು ಹೆಸರು. ಅಂತೆಯೇ, ಮಾನವ ಸ್ಥೂಲಶರೀರಗತ 36,000 ಸ್ತ್ರೀನಾಡಿಗಳಲ್ಲಿ (ಸಿರಾನಾಡಿ) ಭಾರತೀದೇವಿಯು ರಯೀನಾಮಕ

ಳಾಗಿದ್ದು, ಶ್ರೀವಾಯುದೇವರ ಪ್ರೇರಣೆಯಿಂದ ನಾಡೀಗತಕ್ರಿಯಾದಿಗಳನ್ನು ನಡೆಯಿಸುವರು. ಇದರಿಂದ **ಕಾಲಮಾನಿಯು.**

**(8) ಚಂದ್ರ :-**

ಶ್ರೀವಾಯುದೇವರ ತೃತೀಯಾವತಾರವು ಪಾಜಕ ಕ್ಷೇತ್ರದಲ್ಲಿ ಮಧ್ಯಗೇಹ ಭಟ್ಟರ ಪತ್ನಿಯಾದ ವೇದವತಿಯಲ್ಲಿ ವಾಸುದೇವನಾಮಕನಾಗಿ ಆಯಿತು. ಅವರೇ ಸತ್ಸಿದ್ಧಾಂತ ಪ್ರವರ್ತಕರಾದ ಗುರುಮಧ್ವರು. ಆ ಸಮಯದಲ್ಲಿ, ಭಾರತೀ **ಕಾಲಡಿ**ಎಂಬ ಗ್ರಾಮದಲ್ಲಿ **ಶಂಕರನೆಂಬ**ಬ್ರಾಹ್ಮಣ ಪುತ್ರಿಯಾಗಿ ಅವತರಿಸಿದಳು. **ಅವಳ ಹೆಸರು ಚಂದ್ರಾ,** ಚಂದ್ರಾನಾಮಕಳಾದ ಭಾರತೀ ಕನ್ಯಾವಸ್ಥೆಯಲ್ಲಿಯೇ ಮೃತಿಯನ್ನೈದಿದಳು.

**(9) ದ್ಯುಸಭಾನಾಮ :-**

"ದ್ಯು"–ಎಂದರೆ, ಸ್ವರ್ಗಲೋಕ. ದ್ಯುಸಭಾ–ಎಂದರೆ, ಸ್ವರ್ಗಲೋಕದಲ್ಲಿರುವ ಇಂದ್ರದೇವರಸಭಾ. ಆ ಸಭಾಕ್ಕೆ ಅಭಿಮಾನಿಯಾದ್ದರಿಂದ, **ಭಾರತಿಗೆ ಈ ಹೆಸರು.**

**(10) ಭಾರತೀ :-**

ಶ್ರೀವಾಯುದೇವರಿಗೆ "ಭರತ"–ಎಂದು ಹೆಸರು. ವಾಯುಕೂರ್ಮರೂಪದಿಂದ ಬ್ರಹ್ಮಾಂಡವನ್ನು ಹೊತ್ತಿರುವುದರಿಂದ, ಭರತನಾಮಕರು (ಭರಣ-ಧರಿಸುವುದು—ಹೊರುವುದು) ಭ-ಎಂದರೆ ಪ್ರಕಾಶಮಾನನಾದ ಶ್ರೀಹರಿ. ರತ —ಅವನಲ್ಲಿ ಆಸಕ್ತರಾದ್ದರಿಂದ ಭರತನಾಮಕರು. ಭರತನ ಪತ್ನೀ **ಭಾರತೀ.**

**ಘಾಳಿ**–ಎಂದರೆ, ಅನಿಲರೂಪದಲ್ಲಿರುವ ಶ್ರೀವಾಯುದೇವರು. ಸರಸ್ವತೀ ಮತ್ತು ಭಾರತೀದೇವಿಯರು ತಮ್ಮ ತಮ್ಮ ಪತಿಗಳಾದ ಬ್ರಹ್ಮ ಮತ್ತು ವಾಯು ವಿಗಿಂತ 100 ವಿಜಾತೀಯಗುಣಗಳಿಂದ ಅಧಮರು. ಈ ಸಂಖ್ಯೆಯನ್ನು

ದಾಸರಾಯರು ಏಳೇಳು ಐವತ್ತೊಂದು——ಎಂದು ಚಮತ್ಕಾರವಾಗಿ ಹೇಳಿದ್ದಾರೆ.

| | |
|---|---|
| ಅಂದರೆ,ಏಳೇಳು | $= 7 \times 7 = 49$ |
| ಐವತ್ತೊಂದು | $= 51$ |
| ಒಟ್ಟು | $= 100$ ವಿಜಾತೀಯಗುಣಗಳು. |

॥10॥

**

## ಪದ್ಯ-೧೧

ಮೂಲ :-

ಹರಿ ಸಮೀರಾವೇಶ ನರ ಸಂ ।
ಕರುಷಣಾವೇಶಯುತ ಲಕ್ಷ್ಮಣ ।
ಪರಮಪುರುಷನ ಶುಕ್ಲ ಕೇಶಾವೇಶ ಬಲರಾಮ ॥
ಹರ ಸದಾಶಿವ ತಪ ಅಹಂಕೃತು ।
ಮರುತಯುಕ್ತ ಶುಕೋರ್ಧ್ವಪಟ ತ ।
ತ್ಪುರುಷ ಜಯಗೀಷ್ವೌರ್ವ ದ್ರೌಣಿ ವ್ಯಾಧ ದೂರ್ವಾಸ ॥೧೧॥

ಅವತರಣಿಕೆ :-

ಪ್ರಸಕ್ತಪದ್ಯದಿಂದ, ಶ್ರೀಶೇಷದೇವರು ಮತ್ತು ಶ್ರೀರುದ್ರದೇವರ ಅವತಾರ ವಿಶೇಷಗಳನ್ನು ತಿಳಿಸುತ್ತಾರೆ. ॥11॥

**ಪ್ರತಿಪದಾರ್ಥ :–**

**ಹರಿ** = ಶ್ರೀನರಸಿಂಹದೇವರು, **ಸಮೀರ** = ಜೀವೋತ್ತಮರಾದ ಶ್ರೀ ವಾಯುದೇವರು, **ಆವೇಶ** – ಹರಿ ವಾಯುಗಳು–ಈ ಉಭಯರ ಆವೇಶ ಯುಕ್ತರು ಶ್ರೀಶೇಷದೇವರು. ಇವರ ಅವತಾರವಿಶೇಷಗಳು—**ನರ** = ನಾರಾಯಣನ ಭಕ್ತರಾದ **ನರ** ಎಂಬ ಅವತಾರ. **ಸಂಕರುಷಣ ಆವೇಶಯುತ** = ಶ್ರೀಸಂಕರ್ಷಣರೂಪೀ ಶ್ರೀಪರಮಾತ್ಮನ ಆವೇಶಯುಕ್ತರಾದ, **ಲಕ್ಷ್ಮಣ** = ಸುಮಿತ್ರಾ ಪುತ್ರ, ದಶರಥನ ಸೂನು. ಶ್ರೀರಾಮನ ತಮ್ಮ ಲಕ್ಷ್ಮಣ ದೇವರು. **ಪರಮಪುರುಷನ** = ಸರ್ವೋತ್ತಮನೂ ಪುರುಷಶಬ್ದವಾಚ್ಯನೂ ಆದ ಶ್ರೀಕೃಷ್ಣರೂಪೀ ಪರಮಾತ್ಮನ ಅಣ್ಣ. **ಶುಕ್ಲಕೇಶಾವೇಶ** = ಶ್ರೀಪರಮಾತ್ಮನ ದೇಹಗತ ಶುಕ್ಲರೋಮದ ಆವೇಶಯುತರಾದ, **ಬಲರಾಮ** = ರೋಹಿಣೀಪುತ್ರ ಬಲರಾಮದೇವರು.

ಇನ್ನು ಶ್ರೀರುದ್ರದೇವರ ಅವತಾರ ವಿಶೇಷಗಳು :—

**ಹರ** = ಮನೋಭಿಮಾನಿ ರುದ್ರದೇವರು, **ಸದಾಶಿವ** = ಪರಮಮಂಗಳ ಸ್ವರೂಪನಾದ ಶಂಕರ, **ತಪ** = ದಶಕಲ್ಪಗಳು ಲವಣ ಸಮುದ್ರದಲ್ಲಿ ತಪಸ್ಸನ್ನು ಆಚರಿಸಿದ ರೂಪ ಮತ್ತು ನಾಮವಿಶೇಷ. **ಅಹಂಕೃತು** = ಅಹಂಕಾರ ತತ್ತ್ವಾಭಿಮಾನಿ ದೇವತಾ. **ಮರುತಯುಕ್ತ** = ವಾಯ್ವಾವೇಶಯುತನಾದ **ಶುಕ** = ವ್ಯಾಸಪುತ್ರರಾದ ಶ್ರೀಶುಕಾಚಾರ್ಯರು. **ಊರ್ಧ್ವಪಟ** = ಊರ್ಧ್ವಪಟ-ಎಂಬ ಅವತಾರ. **ತತ್ಪುರುಷ** – ತತ್ಪುರುಷ–ಎಂಬ ಅವತಾರ. **ಜಯುಗೀಷವ್ಯ** – ಜಯಗೀಷವ್ಯನೆಂಬ ಮುನಿಯ ಅವತಾರ. **ಔರ್ವ** = ಔರ್ವ-ಎಂಬ ಹೆಸರಿನ ಅವತಾರ. **ದ್ರೌಣಿ** = ದ್ರೋಣಾಚಾರ್ಯರ ಪುತ್ರರಾದ ಅಶ್ವತ್ಥಾಮಾಚಾರ್ಯರ ಅವತಾರ. **ವ್ಯಾಧ** = ಕಿರಾತನೆಂಬ ವ್ಯಾಧ. **ದೂರ್ವಾಸ** = ಅತ್ರಿ ಅನುಸೂಯಾ ಪುತ್ರನಾಗಿ ದೂರ್ವಾಸಾವತಾರ. ॥11॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ರುದ್ರದೇವರ, ಶೇಷದೇವರ ವಿಚಾರ ಹೇಳುತ್ತಾರೆ.

**ಶಾಮಲಾಯಾಂ ಚ ಧರ್ಮಾಚ್ಚ ಸರೋಜಾತಸ್ತು ಭೂತಲೇ ।**
**ಶೇಷಃ ಸ ಏವ ವಿಜ್ಞೇಯಃ ಭಕ್ತೋ ನಾರಾಯಣಸ್ಯ ಚ ॥**

ಎಂಬ ಗರುಡಪುರಾಣೋಕ್ತ ರೀತ್ಯಾ ಶೇಷದೇವರ ಅವತಾರಗಳು—**ಸುಮಿತ್ರಾಯಾಂ ದಶರಥಾಜ್ಞಾತೋ ಯೋ ಲಕ್ಷ್ಮಣಾಭಿಧಃ**– ಎಂತ ರಾಮದೇವರ ತಮ್ಮನಾದ ಲಕ್ಷ್ಮಣದೇವರ ಅವತಾರ ಒಂದು. ಸರ್ವೋತ್ತಮನಾದ ಪುರುಷಶಬ್ದವಾಚ್ಯನಾದ ಶ್ರೀಕೃಷ್ಣದೇವರ ಅಣ್ಣನಾದ, **ಬಲಭದ್ರಸ್ತು ರೋಹಿಣ್ಯಾಂ ವಸು ದೇವಾದಭೂತ್ ಖಗಃ । ಸೋಽಪಿ ಶೇಷಸ್ತು ವಿಜ್ಞೇಯಃ ದ್ವ್ಯಂಶಾಭ್ಯಾಂ ಚ ಸಂಯುತಃ॥**ಅಂದರೆ, ಬಲರಾಮ-ಎಂಬ ಅವತಾರ ಒಂದು. ಅಂತು ಎರಡು ಅವತಾರಗಳು. ಶ್ರೀನರಸಿಂಹದೇವರು, ಜೀವೋತ್ತಮರಾದ ವಾಯುದೇವರು ಈ ಉಭಯರ ಆವೇಶ ಶೇಷದೇವರಲ್ಲಿ, ಶ್ರೀಸಂಕರ್ಷಣರೂಪೀ ಪರಮಾತ್ಮನ ಆವೇಶದಿಂದ ಯುಕ್ತರಾದವರು ಲಕ್ಷ್ಮಣದೇವರು. ಶ್ರೀಪರಮಾತ್ಮನ ದೇಹಗತ ಶುಕ್ಲ ರೋಮದ ಆವೇಶಯುತರಾದವರು ಬಲರಾಮದೇವರು. ಇಲ್ಲಿಗೆ ಶೇಷದೇವರ ವಿಚಾರ ಮುಗಿಯಿತು.

ರುದ್ರದೇವರು, ಇವರ ಅವತಾರಗಳು —**ತವೋಽಭಿಮಾನೀ ಸ ಜ್ಞೇಯೋ ಹ್ಯಶಿವಶ್ಚಾತ್ಸದಾಶಿವಃ, ದಶಕಲ್ಪ ತಪಃ ಕರ್ತುಂ ವಿವೇಶ ಲವಣಾಂಭಸಿ । ಅತೋ ರುದ್ರಃ ತಪಃ ಸಂಜ್ಞಾ ಹ್ಯವಾಪ ಖಗ ಸತ್ತಮಃ ॥**-ಎಂತ ಇರುವುದ್ದರಿಂದ ಸದಾಶಿವ, ತಪ- ಎಂತ ರುದ್ರದೇವರ

ಅವತಾರ. ಅಹಂಕೃತು-ಎಂತ ಅವತಾರ. **ಯೋऽಹಂಕಾರಾತ್ಮಕೋ ರುದ್ರಃ ಸ ಏವಾಭೂತ್ ಖಗೇಶ್ವರಃ**-ಎಂತ ಇರುವದ್ದರಿಂದ. **ವ್ಯಾಸ ಪುತ್ರ ಶುಕಃ ಪ್ರೋಕ್ತಃ ವಾಯುರಾವೇಶ ಸಂಯುತಃ**-ಎಂತ ಇರುವದ್ದರಿಂದಲೂ, **ರುದ್ರಾವತಾರೋ ವಿಜ್ಞೇಯೋ ಜ್ಞಾನಾರ್ಥಂ ಹ್ಯಭವದ್ಭುವಿಃ**-ಎಂತ ಶುಕಾಚಾರ್ಯರ ಅವತಾರ. ಊರ್ಧ್ವಪಟ-ಎಂತ ಅವತಾರ. ತತ್ಪುರುಷ- ಎಂತ ಅವತಾರ. **ಉರೋಃ ಪುತ್ರಸ್ತು ಚೌರ್ವಸ್ತು ರುದ್ರ ಏವ ಪ್ರಕೀರ್ತಿತಃ । ಉರುಃ ಉತ್ಕೃಷ್ಟವಾಚಿತ್ವಾದುರೋ ರೋದನ ವಾಚಕಃ ॥ ಉರೋ ರುದ್ರೋ ಹ್ಯತಃ ಪ್ರೋಕ್ತಸ್ತತ್ಪುತ್ರಶ್ಚೌರ್ವ ಸಂಜ್ಞಕಃ । ಉರ್ವರಿತಂ ರೋದನಂ ಕರ್ತುಂ ಔರ್ವೋ ಭೂದ್ರುದ್ರ ಏವ ಸಃ ॥**-ಎಂತ ಗರುಡಪುರಾಣವಚನ ರೀತ್ಯಾ ಔರ್ವ ಅವತಾರ. ಜೈಗೀಶ-ಎಂತ ಅವತಾರ. **ದ್ರೋಣಾಚಾರ್ಯೋ ದ್ರೌಣಿ ಸಂಜ್ಞಃ ರುದ್ರ ಏವ ಪ್ರಕೀರ್ತಿತಃ**-ಎಂತ ಇರುವದ್ದರಿಂದ, ದ್ರೋಣಾಚಾರ್ಯರ ಪುತ್ರ ಅಶ್ವತ್ಥಾಮಾಚಾರ್ಯರ ಅವತಾರ. ವ್ಯಾಧ-ಎಂತ ಅವತಾರ. **ಅತ್ರಿಪತ್ನ್ಯನುಸೂಯಾಯಾಂ ಜಜ್ಞೇ ರುದ್ರೋ ಮಹಾತಪಾಃ । ದೂರ್ವಾಸಾ ಸ ತು ವಿಜ್ಞೇಯಃ ಮಾನಭಂಗಾಯ ಭೂಭೃತಾಂ**-ಎಂತ ದೂರ್ವಾಸನಾಮ ಪಡೆದ ಅವತಾರ. ಈ ಪ್ರಕಾರ-ರುದ್ರದೇವರ ಅವತಾರಗಳು.

**ವೀಂದ್ರ ಸ್ಯಾವತಾರೋऽಸ್ತಿ ಭೂಮ್ಯಾಂಚಾನ್ಯಾಂ ತಥಾ ಹರೇಃ** ಎಂತ ಇರುವದ್ದರಿಂದ,ಗರುಡದೇವರಿಗೆ ಅವತಾರವಿಲ್ಲ.

**ವಿಶೇಷಾರ್ಥ**= ತತ್ಪುರುಷ-ಎಂದರೆ, **ತತ್ಪುರುಷಾಯ ವಿದ್ಮಹೇ । ಮಹಾದೇವಾಯ ಧೀಮಹೀ । ತನ್ನೋ ರುದ್ರಃ ಪ್ರಚೋದಯಾತ್**

ಎಂಬ ರುದ್ರ ಗಾಯತ್ರೀ ರೂಪ, ಜೈಗೀಷವ್ಯರೂಪ ದಾವದೆಂದರೆ, ಜಾಬ ವತೀದೇವೇರಿಗೆ ಜ್ಞಾನೋಪದೇಶ ಅವತಾರ ರುದ್ರರೂಪ. ಶುಕ ಗತಾವಿ ಧಾತೋ ಃ ಪರಬ್ರಹ್ಮಣ್ಯವ್ಯಾಹತ ಬುದ್ಧಿಗತಿತ್ವಾತ್ ಶುಕಃ ॥11॥

೨. ಭಾವಪ್ರಕಾಶಿಕೆ :-

ವ್ಯಾಖ್ಯಾನ ಇಲ್ಲ.

೩. ಭಾವದರ್ಪಣ :-

ಈಗ ಶೇಷದೇವರ ವಿಚಾರ ಹೇಳುತ್ತಾರೆ । ಹರಿಸಮಿರೇತಿ । "ಹರಿ ಯುಜಃನರ ಇತ್ಯುಕ್ತೇಃ"– ಲಕ್ಷ್ಮಣ ಬಲರಾಮರ ವಿವರ । ಸಂಕರ್ಷಣೇತಿ । ತದುಕ್ತಂ । "ಶುಕ್ಲಕೇಶಯುಕ್ತೋ ಬಲಸ್ತಥಾ । ಸಂಕರ್ಷಣಾವೇಶಯುತೋ ಲಕ್ಷ್ಮಣಃ ಪರಿಕೀರ್ತಿತ"-ಇತಿ । ಇನ್ನು ರುದ್ರದೇವರ ವಿವರ । ಹರೇತಿ । ಲವಣಸಮುದ್ರದಲ್ಲಿ ತಪಸ್ಸು ಮಾಡಿದ ಪ್ರಯುಕ್ತ ತಪಃ- ಎಂದು ನಾಮ । ತದುಕ್ತಂ । "ದಶಕಲ್ಪತಪಃ ಕರ್ತುಂ ವಿವೇಶ ಲವಣಾಂಭಸಂ । ಅತೋ ರುದ್ರಸ್ತಪಃ ಸಂಜ್ಞೇತಿ"—ಗಾರುಡೇ । ಅಹಂಕಾರತತ್ವಾಧಿಪನಾದ್ದರಿಂದ, ಅಹಂಕೃತು-ಎಂತ ನಾಮ । ಊರ್ಧ್ವರೇತಸ್ಸು ಉಳ್ಳವನಾದ್ದರಿಂದ, ಊರ್ಧ್ವ ಪಟ- ಎಂತ ನಾಮ । ದೂರ್ವಾಸಾ ಇತಿ । ಅತ್ರಿಪತ್ನ್ಯನಸೂಯಾಯಾಃ ಜಜ್ಞೇ ರುದ್ರೋ ಮಹಾತಪಾಃ– ದೂರ್ವಾಸಾ ಸತು ವಿಜ್ಞೇಯೋ"– ಇತಿ ಗಾರುಡೇ ರುದ್ರನ ಅವತಾರ ವಿಷಯೂಲ್ಲಿ ಪ್ರಮಾಣ । "ಸದಾಶಿವಸ್ತಪೋ ಹಂಕೃದ್ವಾಯ್ವಾವಿಷ್ಟಃ ಶುಕಸ್ತಥಾ । ಊರ್ಧ್ವಪಟೋ ವಾಮದೇವಃ ಸದ್ಯೋ ಜಾತೋಽಘೋರಕಃ । ತತ್ಪುಮಾನ್ ದ್ರೌಣಿರೌರ್ವಶ್ಚ ದೂರ್ವಾಸಾ ಮುನಿ ರೇವಚ । ಜೈಗೀಷವ್ಯಾಧರೂಪೇಣ ಶೇಷರುದ್ರೌ ಪ್ರಕೀರ್ತಿತಾವಿತ್ಯುಕ್ತೇಃ" ॥11॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

ಶೇಷಾವತಾರಾನ್ ಆಹ 'ಹರಿ' ಇತಿ ॥ ನರ, ಬಲ, ಸೌಮಿತ್ರಯಃ ಶೇಷಸ್ಯ ಅವತಾರಾಃ ॥ ಶಾಮಲಾಯಾಂ ಮೂರ್ತ್ಯಾಂ ಧರ್ಮೋತ್ಪನ್ನಃ ನರಃ ॥ 'ವಿಷ್ಣೋಃ ವಾಯೋಃ ಅನಂತಸ್ಯ ತ್ರಿಭಿಃ ಅಂಶೈಃ ನರಃ ಸ್ಮೃತಃ ॥ ಸೌಮಿತ್ರಿರಪಿತ್ರ್ಯಂಶಃ ॥ ವಾಯ್ವನಂತಾಂಶ ಸಂಯುತಃ ತಾಭ್ಯಾಂ ಬಲ ಲಕ್ಷಣೌ ॥ ಆವಿಷ್ಟಾ ಶ್ವೇತಕೇಶಾತ್ಮಾ ಶೇಷಾಂಶಂ ರೋಹಿಣೀಸುತಂ ॥ ವಸು ದೇವಾತ್ ರೋಹಿಣ್ಯಾಂ ಜಾತಃ ಅಪಿ ವಾಯ್ವನಂತಾಂಶವಾನ್ ॥ ನ ಮೀಂದ್ರ ಸ್ಯಾವತಾರೋಽಸ್ತಿ ಭೂಮ್ಯಾಂ ಜಾಜ್ಞಾ ತಥಾ ಹರೇಃ ॥ ಶಂಭ್ವವತಾರಾನ್ ಆಹ-'ಹರ'-ಇತಿ ॥ ಮಾನಿ ತಮೋಗುಣಸ್ಯಾಯಂ ॥ ಸವಾಶಿವಃ ಕಪಾಲ ಮಾಲಾಮಶಿವಾಂ ಸದಾ ಧಾರಯತೇ ಹರಃ ॥ ಅತಃ ಸದಾಶಿವಃ ಜ್ಞೇಯಃ ನತ್ವಭಾಗವತಃ ಶಿವಃ ॥ ಅಂಭಸಿ ದಶಕಲ್ಪಂ ತಪಃ ಕರಣಾತ್ ತಪಃ ॥ ಅಹಂಕಾರಾತ್ಮಕಃ ರುದ್ರಃ ಇತ್ಯುಕ್ತಂ ಅನುಸರತಿ-"ಅಹಂಕ್ರತುರಿತಿ ॥ 'ಮರುತ ಯುಕ್ತ'-ಇತಿ ॥ ಶುಕಂ ತಮಾಶು ಪ್ರವಿಶೇವ ವಾಯುಃ ಜ್ಞಾನಾರ್ಥಂ ಹ್ಯಭ ವದ್ ಭುವಿ ದಕ್ಷಾದ್ಧರೇ ಸತೀ ದಗ್ಧಾ ಮೇನಕಾತನಯಾ ಸತೀ ॥ (ಶರ್ವಂ ಲೇಭೇ ಪತಿಂ) ॥ ಅದ್ಯ ಪ್ರಭೃತಿ ಹ್ಯೂರ್ಧ್ವರೇತಾ ಭವಾನಿ ಇತ್ಯುಕ್ತತ್ವಾತ್ ಊರ್ಧ್ವಗಃ ॥ ಅಪಟಃ ಅಲಂಪಟಃ ॥ (ತಸ್ಯಾಂ ಬಭೂವಾತಸ್ತಥಾ ॥) ತತ್ರ ಯಜ್ಞೇ ಬ್ರಾಹ್ಮೇ ಪುರುಷಃ ಪಶುಃ ಆಸೀತ್ ॥ ತಥಾ ಜೈಗೀಷವ್ಯಾತ್ ರುದ್ರರೂಪಾತ್ ಶಕ್ರೋ ದ್ರೌಣಶ್ಚ ತತ್ತನೂ ॥ ಗಿರಿಶೋಽಜನಿಷ್ಟ ಅಶ್ವ ತ್ಥಾಮಾ ॥ ತನುಸ್ತ್ವಪರಾ ಹರಸ್ಯ ದುರ್ವಾಸಾ ನಾಮೇತಿ ಅತ್ರೇಃ ಅನ ಸೂಯೋತ್ಥಃ ॥ ವ್ಯಾಧಃ ಕಿರಾತರೂಪಃ ॥ ತಮನು ಸಭಾರ್ಯಶ್ಚತ್ರ್ಯಂ ಬಕಃ ॥ ಭೂಭೃತಾಂ ಮಾನಭಂಗಾಯ ದೂರ್ವಾಸೋದಯ. ಇಷ್ಯತೇ ॥ ಪ್ರಾರಬ್ಧಂ ಭೋಕ್ತೃಕಾಮೋಽಸೌ ಪರಪಕ್ಷ ಪ್ರಕಾಶಕಃ ದ್ರೌಣಃ ॥ ಐಶಾನ್ಯಾಂ ಸ್ವವಾಮಸ್ಥಹರ್ಯರ್ಚನಾತ್ ವಾಮದೇವಃ ॥ ನ ಸೌಂದರ್ಯಾತ್ ॥ ವಿಷ್ಣು ದ್ರೋಗಧೃತ್ರಿ ಪುರದಾಹೇಽ ಘೋರರೂಪ ಸ್ವೀಕಾರಾತ್ ತಥೋಕ್ತಃ ॥ ಸೇವೇ ಚ್ಛಯಾ ತಪಸಾ ಕ್ಲಿಷ್ಟಮಾನಂ ಕೃಪಯಾ ಸದ್ಯ ಏವ ವರದಾನಾಯ ಆವಿರಾ

ಸೀತ್ ಅತಃ ಸದ್ಯೋದೇವಃ ॥ ಔರ್ವಃ ಉರೋಃ ಪುತ್ರಃ ಔರ್ವಃ ರುದ್ರಃ ।
ಉ ಇತ್ಯುತ್ಪತ್ತಿವಾಚೀ ಸ್ಯಾತ್ ರುಶ್ಚ ರೋದನವಾಚಕಃ ॥ ಉರೋ ರುದ್ರ
ತತಃ ಪ್ರೋಕ್ತಃ ತತ್ಪುತ್ರತ್ವಾದೌರ್ವ ಸಂಜ್ಞಿತಃ ॥ ಪಿತಾ ಸದಾ ರುರೋದ ॥
ಉರ್ವರಿತಾ ರೋದನಂ ಕರ್ತುಂ ಔರ್ವೋಽಭೂತ್ ರುದ್ರ ಏವ ಸಃ ॥ ಶ್ರೀ
ರುದ್ರ ತತ್ಸುತ ರೋದನಕ್ರಮಃ ಅನ್ಯತ್ರ ವಿಸ್ತೃತಃ ಬಹು ಪದ್ಯೈಃ ॥ ಸ್ವಪ
ದಾಸ್ವದಾನಂದಮಪಿ ಕಾತ್ಕೃತ್ಯ ಅತೀವ ಆಹ್ಲಾದಂ ಜನಯತಿ ಹೃದೋತಃ ।
ವಿಸ್ತೃತಿ ಪತ್ರುಶ್ಚ ನಿರೂಪಣಾತ್ ॥ ಹಿತಸ್ಮಾತ್ ತತ್ಕ್ರಮಂ 'ಶುಶ್ರೂಷುಭಿಃ
ತತ್ಕ್ಷಣಾತ್'–ಇತ್ಯುಕ್ತರೀತ್ಯಾ ಅತಿಪಕ್ವ ಮನಸಾಂ ಪರಮವೈರಾಗ್ಯ ಶ್ರೀಬೀಜಃ
ಷಣ ತತ್ಸಾಧಕೋಪಾಸ್ತೌ ಚ ನಿರವಧಿಕತ್ವರಾಂ ಜನಯೇತ್ ಇತ್ಯಾಲೋಚ್ಯ
ಪದ್ಯಾರ್ಥಮೇವ ಸಂಗೃಹ್ಯ ಬ್ರವೀಮಿ ಶತ್ರುಮಾಪಶ್ಯದೂರತಃ ॥ ತಥಾ ಹಿ ಕಥಾ
ಪ್ರಸಕ್ತಿಃ ಪುರಾ ಕಿಲ ಪೋಥಾರಂವಾಹಃ ಪಪ್ರಚ್ಛ ॥ ಭೋ ನಾಥ ! ಯದು
ಕುಲ ಲಲಾಮ ಪರಮಧೀರಃ ರುದ್ರಃ ವಿಷಾಶನೇಽಪಿ ಅವಿಷಣ್ಣಃ ಕಿಮರ್ಥಂ
ರುರೋದ ? ಏಸ ಔರ್ವ ಶರ್ಮಾ ಹ್ಯಭವತ್ ತತ್ಸುತಃ ತಸ್ಯೋರು ಸಮಾ
ಟಾರಾಗತಾಶ್ರು ಮುಂಚನಂ ತಸ್ಯಾನಃ ಇತಿ ॥ ಆಕಲಯ್ಯ ತುಷ್ಟಃ ಕರುಣಾ
ಕರಃ ಕೃಷ್ಣಃ ಊಚೇ 'ಹೇ ವೈನತೇಯ ! ಉರುಃ ಮಹಾನ್ ಪ್ರಾಕ್ ಏಕದಾ
ಸುಗುಣಮಣಿ ಸುಪೂರ್ಣಮಾಲಾಲಿಂಗಿತ ಪರಮಸುಂದರದೇಹಂ ಅರ
ವಿದೂರಸ್ಯ ರಾಮಾಶೇಷಸುರಲಾಲಿತಾಂಘ್ರಿ ಆತ್ಮಬಿಂಬಂ ಶ್ರೀಸಂಕರ್ಷಣಂ
ನಿರೀಕ್ಷ್ಯ ಅಪರೋಕ್ಷಕಾಲೇ ಹೃಷ್ಯತ್ ತನೂರುಹನಿಕರಃ ನೃತ್ಯನ್ ಪ್ರನೃತ್ಯನ್
ಬಾಷ್ಪಪೂರಿತಾಕ್ಷಃ ಅಶ್ರುಪರಿರರಕ್ತಾಂಗಃ ಕಂಠಸುರುದ್ಧಃ ಅಮೃತಕಲಯಾ
ವಾಣ್ಯಾ ಆತ್ಮನಾ ಸಾಧನಾರ್ಥಂ ಭಾರತಾಜಿರಾ ॥ ಉದಯಕಾಲೀನಾಖಿಲಾ
ವಸ್ಥಾಃ ಸಂಕ್ಷಿಪ್ಯ ವಿಜ್ಞಾಪಯಾಂಚಕಾರ ॥ "ಬಹು ಕಲ್ಪೇಷು ಅನವಲೋ
ಕಿತಂ ಇದಾನೀಂ ಸುರಕ್ತನಖಮಣಿಚಂದ್ರಿಕಾಂ ಅದ್ರಾಕ್ಷವಮ್ ॥ ತತ್ ಕೇನ
ಭಾಗದೇಯ್ಯೇನ ನರಹರೇ ನೈವಂವಿಧಸ್ಯ ಭಾವ್ಯಮೇತದ್ ವಾರಿಜದಲ
ನಯನ ! "—ಇತಿ ಉಚ್ಚೈಃ ಅರುದತ್ ॥ ಹೇ ಮುರಹರ ! ಪ್ರಾಣಸಖೇ!
ಕದಾಪಿ ಸದಾಪಹಿತ ಮಾನಸೇನ ತ್ವಚ್ಛ್ರವಣಂ ನಾಕರವಮ್ ॥ ಪಾದಪದ್ಮ
ಮೀಕ್ಷ್ಯ ಪುನಃ ಪುನಃ ಕಂಠಸಂರುದ್ಧಃ ರುರಾವೋರುಃ ಭಯಕಂಪಿತಾಂಗಃ ॥

ಹೇ ಮುಕುಂದ ! ನಾರಾಯಣ ! ಪಾದ ದರ್ಶನೇ ಸತಿ ಗುರ್ವರ್ಥಗಹ್ವರಾ ಸ್ತುತಿಃ ಪುನಃ ಕಥಮಭೂನ್ ಮಮ ॥ ಮದಕ್ಷಿಣೀ ಪಾಪಶಮೇ ಮಹಾತ್ಮನ್ ವಾಗೀಂದ್ರಿಯಂ ಪಾಪಯುಕ್ ಸರ್ವದೈವ ॥ ಮದ್ದರ್ಶನಂ ಸರ್ವದಾ ಸ್ತ್ರೀಮುಸಕ್ತಂ ವಾಗೀಂದ್ರಿಯಂ ದುಷ್ಟವಾರ್ತಾಭಿವಾದೀ ॥ ಶ್ರೋತ್ರೇಶ ಭವಾನ್ ಸಾಕ್ಷೀ ನ ಶ್ರುತಾ ಹರಿಕಥಾ । ಕಮಲೇಶ ಸದಾ ಶ್ರುತಾ ಬಹುಧಾ ಲೋಕವಾರ್ತಾ ॥ ಶ್ರುತ್ವಾ ಸ್ಮೃತ್ವಾ ಪಾದಪೀಠಂ ಪರೇಶ್ಚ ಪುನಃ ಪುನಃ ಕಂಠಸಂರುದ್ಧ ಏವ ॥ ಭೋಃ ಭೋಗಿಪ ಭೋಗಶಾಯಿನ್ ! "ಮದ್ಬಾಹು ದಂಡೇ ಶೇರ್ಪಿತಂ ದಿವ್ಯಗಂಧಂ ಅಧೃತ್ವಾಹಂ ಫಣೀನಃ ಧಾರಯಿತ್ವಾ ॥ ಪ್ರದೂಷಿತೌ ಮಮಬಾಹೂ ಸದೈವ ಭುಜಂಗವಿಷ್ಟಾ ಮೂತ್ರೈಶ್ಚ ಶಕ್ಲೈರ್ವದ್ಯೈಃ ॥ ಸ್ತ್ರೀಣಾಂ ಕುಚೋದರ ಕಚೋದಕಕ್ಷೋದ್ಯೈಃ ಅಂಗಾಃ ಹಿ ಅನರ್ಪಿತ ವಸ್ತ್ರಗಂಧೈಶ್ಚ ಲಿಪ್ತಂ ಗಾತ್ರಂ ಶ್ರೀಕಮಲಾಸುಕಲತ್ರಾ ಸ್ಪೃಷ್ಟಂ ಸ್ಪೃಷ್ಟ್ವಾ ಹರಿ ನಿರ್ಮಾಲ್ಯಗಂಧಂ ॥ ಹೇ ನೃಹರೇ ! ಅನರ್ಪಿತಾಗ್ರಾಹಕ ನಾಸಸ್ತಿಲಕುಸುಮನಾಸಿಕಾ ಅವಲೋಕ್ಯ ಘ್ರಾತ್ವಾ ಅಘ್ರಾತ್ವಾ ಹರಿನಿರ್ಮಾಲ್ಯ ಗಂಧಂ ॥ ಹೇ ಮುರಹರೇ ! ತುಲಸೀರಸಃ ಸಂಸೃಷ್ಟಮನ್ನಂ ಕಥಮಿತ ಊರ್ಧ್ವಂ ಜಿಹ್ವಾ ಅಂಗೀಕುರ್ಯಾತ್ ॥ ಅನರ್ಪಿತಮೇವ ಬಹುಶೋ ಭುಕ್ತಂ ಭುಕ್ತ್ವಾ ಭುಕ್ತ್ವಾ ಹರಿನೈವೇದ್ಯಜಾತಮ್ ॥ ಅನೇಕ ಜನ್ಮಾರ್ಜಿತ ಪಾಪಸಂಚಯೈಃ ಅದೃಷ್ಟ ತತ್ಕುಂಡಲ ಕುಂಡಲಾಢ್ಯಮ್ ॥ ಅನೇಕ ಜನ್ಮಾರ್ಜಿತ ಪುಣ್ಯಸಂಚಯೈಃ ಅದ್ರಾಕ್ಷಮಂಬಾತಿವಿಚುಂಬಿತಂ ಮುಖಮ್ ॥ ಇತ್ಯೇವ ಚ ರುರಾವ ರುದ್ರಃ ದೃಷ್ಟ್ವಾ ದೃಷ್ಟ್ವಾ ॥ ಹರಿವಕ್ತ್ರಂ ಸುಪೂರ್ಣಮ್ ॥ ಪಿತೃರೋದನಂ ಚ ಅತ್ರ ಪೂರ್ಣಮ್ ॥ ಪುತ್ರರೋದನಂ ದಯಯಾ "ಭೋ ! ರಮಯಾsಲಂಗಿತ ಮಂಗಲಾಂಗ ! ವಿಷಯ ವ್ಯಾಪೃತಧಿಯಃ ಯೋಗ್ಯಾಃ ದುರ್ವಿಷಯಲಾಭೇ ಯತಂತಃ ಏತೇ ಹಿ ಮೂಢಾಃ ಪರಮಾದರೇಣ ಕದಿಂದ್ರಿಯಾರ್ಥೇ ಧನದಾನ್ಯಕನಿಷ್ಠಾಃ ॥ ಕಥಂ ಹಿ ಏನಾನ್ ಮೋಕ್ಷ್ಯಸೇ ವಿಶ್ವಮೂರ್ತೇ ಸ್ಮೃತ್ವಾ ವಾಸುದೇವಸ್ಯ ಮಾಯಾಂ ರುರಾವೌರ್ಪೋ ಭಯಕಂಪಿತಾಂಗಃ ॥ ಶೃಣು ಮುರುಹರ ಹೀನ, ದೀನ, ಹೈನ್ಯ (ದೈನ್ಯಂ) ಅತೀವ ಕಷ್ಟೇನ ಸುಲೋಭ ಬುದ್ಧ್ಯಾ ॥ ಪಾಥೇಯಮೌರ್ಧ್ವಂ

ತ್ವವಧೀರ್ಯ ದೈವ್ಯಘುಶೋ ವಿಶತ್ಯಾಲ್ಪಜನೇಮು ದತ್ವಾ ॥ ತದೀಯ ಲೋಕೇಷು ಕಿಮಪಿ ಅದತ್ವಾ ವಿಶೇಷು ಕೃಷ್ಣಾ ನ ಜರಾ ಸುತೃಷ್ಣಾ ॥ ಸ್ವೇಷ್ಟಮೃತ್ಯುಃ ಹಸತೇ ತಾನ್ ನಿರೀಕ್ಷ್ಯ ಕೋ ಮತ್ಸಮೋsಹಂ ಶತವರ್ಷ ಜೀವೀ ॥ ಮದೀಯ ವತ್ಸಾಶ್ಚ ತ್ವದೀಯವತ್ಸಾಃ ॥ ಸುಲಕ್ಷಣಾ ಚಾರು ಮುಖೀ ಮಮೇಷ್ಟಾ ಹರ್ಮ್ಯೇ ಕೃತೇsತಿ ವಿರುವಂತಿ ತತ್ರ ॥ ಪುತ್ರಿ ವಿವಾಹ್ಯಾ ಹಿ ಧನಂ ತದರ್ಥಂ ಪುತ್ರೋ ವಿವಾಹ್ಯೋsತ ಇದಂ ಧನಂ ಭೋ ॥ ಹೇ ಕೃಷ್ಣ ! ವಿಷ್ಣೋ ! ಶ್ವಪಚಾಃ ಬಭೂವುಃ ಭೃತಾಃ ತತಃ ಯಾಮ್ಯ ಪಾಶೈಃ ಸುಬದ್ಧಾಃ ॥ ಹರೇ ತವಾಂಘ್ರಿಂ ನ ಕದಾಪಿ ಸ್ಮೃತ್ವಾ ಗತೇಷು ವತ್ಸಾದಿಷು ತನ್ಮೃತೇಷು ॥ ಧನಂ ಕ್ವ ವಸ್ತ್ರಂ ಕ್ವ ತದೀಯವೃತ್ತಿಃ ಆಯು ರ್ವ್ಯರ್ಥಂ ಸತಾಂ ಹಿ ॥ ಕಷ್ಟಂ ನಷ್ಟಾಃ (ಇತಿ) ಸಮ್ಯಕ್ ರುರಾವ ॥ ಏವಾ ದೃಶಾನ್ ಮೂರ್ಖಜನಾಂಶ್ಚ ದೃಷ್ಟ್ವಾ ರುರಾವ ಪೌರ್ವೋ ವಾಸುದೇವೈಕ ನಿಷ್ಠಃ ॥ ಇತಿ ವೃತ್ತಿ ನಿಮಿತ್ತಂ ವತ್ಸರೋದನಂ ಅವಸಿತವತ್ ॥

ಶೇಷಃ ಸದಾಶಿವಶ್ಚೋರ್ಧ್ವಃ ತಪೋಽಹಂಕಾರ ಏವ ಚ ॥ ನರೋ ಽಽ ಪಟೋ ಲಕ್ಷ್ಮಣಶ್ಚ ರೌಹಿಣೇಯಃ ಶುಕಃ ತಥಾ ॥ ಸದ್ಯೋಜಾತಃ ವಾಮದೇವ ಶ್ಚಾಘೋರಃ ದೇವಃ ತತ್ಪುಮಾನಪಿ ॥ ದುರ್ವಾಸಾ ದ್ರೌಣಿರೌರ್ವಶ್ಚ ಜೈಗೀಷ ವ್ಯಾದಿ ರೂಪಕಾಃ ॥ ಪೂರ್ವೋಕ್ತೈಶ್ಚ ಗುಣೈಃ ಸರ್ವೈಃ ಪಾಭ್ಯಃ ಶತಗುಣಾ ವರಾಃ ॥ ಏವಂ ಸುಪರ್ಣಃ ಸರ್ವೇಪಿ ಸಮಾಃ ಶೇಷ್ಯೈಃ ಸದೈವ ಹಿ ॥ ॥11॥

## ಕನ್ನಡಾರ್ಥ

ಶೇಷದೇವರ ಅವತಾರಗಳನ್ನು ಹೇಳುತ್ತಾರೆ–'ಹರಿ'–ಎಂಬ ಪದ್ಯದಿಂದ. ನರ, ಬಲರಾಮ, ಲಕ್ಷ್ಮಣ-ಇವರು ಶೇಷನ ಅವತಾರರು. ಶಾಮಲಾ ಸ್ವರೂಪಳಾದ ಮೂರ್ತಿದೇವಿಯಲ್ಲಿ ಧರ್ಮ (ಯಮ)ನಿಂದ ಉತ್ಪನ್ನನಾದ ವಸು ನರನು. ನರನಲ್ಲಿ ವಿಷ್ಣು, ವಾಯು, ಶೇಷ ಇವರುಗಳ ಮೂರು ಅಂಶ ಗಳಿರುವುವೆಂದು ಪ್ರಸಿದ್ಧವಿದೆ. ಲಕ್ಷ್ಮಣನಲ್ಲಿಯೂ ಸಹ ಮೂರು ಅಂಶಗಳು.

ವಾಯು ಶೇಷಾಂಶಗಳಿಂದ ಬಲರಾಮ, ಲಕ್ಷ್ಮಣರೀರ್ವರೂ ಸಂಯುಕ್ತರಾದ ವರು. ವಸುದೇವನಿಂದ ರೋಹಿಣಿಯಲ್ಲಿ ಹುಟ್ಟಿದ್ದರೂ, ಸಹ ಬಲರಾಮನಲ್ಲಿ ಶೇಷ ವಾಯುಗಳ ಅಂಶವಿದ್ದು, ನಾರಾಯಣನ ಶುಕ್ಲಕೇಶದ ಆವೇಶವಿರುತ್ತದೆ.

ಗರುಡನಿಗೆ ಭೂಮಿಯಲ್ಲಿ ಅವತಾರವಿಲ್ಲ. ಪರಮಾತ್ಮನ ಅಪ್ಪಣೆಯೂ ಇರುವುದಿಲ್ಲ. ರುದ್ರದೇವರ ಅವತಾರಗಳನ್ನು ಹೇಳುತ್ತಾರೆ—'ಹರ'-ಎಂಬುದಾಗಿ,ರುದ್ರದೇವರು ತಾಮಸಗುಣದ ಅಭಿಮಾನಿಗಳು. 'ಸದಾಶಿವ'-ಕಪಾಲ ಮಾಲೆಯನ್ನು ಯಾವಾಗಲೂ ಧರಿಸಿರುವುದರಿಂದ ಸದಾಶಿವನೆಂದು ಹೆಸರು. ಹೊರತು ಭಗವದ್ಭಕ್ತರಲ್ಲವೆಂದಲ್ಲ. ಅಪವಿತ್ರಕರವಾದ ಗಜಚರ್ಮವನ್ನು ಧರಿಸಿದುದರಿಂದ,ಸದಾಶಿವನೆನ್ನುತ್ತಾರೆಯೇ ವಿನಹ,ಭಗವದ್ಭಕ್ತನಲ್ಲವೆಂದಲ್ಲ. ನೀರಿನಲ್ಲಿ ಹತ್ತು ಕಲ್ಪಗಳನ್ನು ತಪಸ್ಸಿನಿಂದ ಕಳೆದಿದ್ದರಿಂದ, 'ತಪ'-ಎಂದು ಹೆಸರು. ರುದ್ರದೇವರು ಅಹಂಕಾರಾತ್ಮಕರಾದುದರಿಂದ 'ಅಹಂಕಾರ'-ಎಂದು ಹೆಸರು. ಮರುತಯುಕ್ತ ಶುಕಾಚಾರ್ಯರು ರುದ್ರದೇವರು. ವಾಯುದೇವರು, ರುದ್ರಾಂಶರಾದ ಶುಕಾಚಾರ್ಯರನ್ನು ಆವೇಶಿಸಿದರು. ಆದುದರಿಂದ,ಅವರು ಭೂಮಿಯಲ್ಲಿ ಜ್ಞಾನ ಪ್ರಸಾರಕ್ಕಾಗಿ ಅವತರಿಸಿದರು. ದಕ್ಷಯಜ್ಞದಲ್ಲಿ ತಮ್ಮ ಹೆಂಡತಿಯಾದ ಸತಿಯು ದಹಿಸಲ್ಪಟ್ಟು, ಮೃತಳಾದುದರಿಂದ, ಅಂದಿನಿಂದ ಊರ್ಧ್ವರೇತಸ್ವಿಯಾಗಿ ಉಳಿಯುವೆನೆಂದು ಪ್ರತಿಜ್ಞೆ ಮಾಡಿದ್ದರಿಂದ, ರುದ್ರದೇವರಿಗೆ 'ಊರ್ಧ್ವ,'-'ಊರ್ಧ್ವರೇತ'-ಎಂಬ ಹೆಸರು ಬಂದಿತು. ಅಲಂಪಟರಾದುದರಿಂದ, ಅಪಟ-ಎಂದು ಕರೆಯುತ್ತಾರೆ. ಬ್ರಹ್ಮದೇವರು ಮಾಡಿದ ಆದಿಯಜ್ಞದಲ್ಲಿ ರುದ್ರದೇವರು ಪಶುವಾದುದರಿಂದ 'ಪುರುಷ'-ಎಂದು ಹೆಸರು. ಅದರಂತೆ,ಜೈಗೀಷವ್ಯರು ರುದ್ರರೂಪರು. ಅಶ್ವತ್ಥಾಮ ಹಾಗೂ ಇಂದ್ರರು(ಶಕ್ರ) ರುದ್ರಾಂಶರು. ರುದ್ರದೇವರದೇ ಇನ್ನೊಂದು ರೂಪ-'ದೂರ್ವಾಸ'-ಎಂಬುದು. ಅವರು ಅತ್ರಿಋಷಿಗಳಿಂದ ಅನುಸೂಯಾನಲ್ಲಿ ಉದಿಸಿದರು. ರಾಜರ ಮಾನ ಭಂಗಮಾಡಲು, ದುರ್ವಾಸರಾಗಿ ಅವತರಿಸಿದರು. ಕಿರಾತರೂಪಿಯಾದ ವ್ಯಾಧನೂ ರುದ್ರಾವತಾರ. ಆದೇಕಾಲದಲ್ಲಿ ತ್ರ್ಯಂಬಕನಾಗಿ ತೋರಿದುದು,

ಪ್ರಾರಬ್ಧವನ್ನು ಅನುಭೋಗಿಸಲು ಶಸ್ತ್ರವಕ್ಷವನ್ನು ಪ್ರಕಾಶಗೊಳಿಸುವ ಅಶ್ವತ್ಥಾಮರಾಗಿ,ರುದ್ರದೇವರು ದ್ರೋಣನಲ್ಲಿ ಅವತರಿಸಿದರು. ಈಶಾನ್ಯದಿಕ್ಕಿನಲ್ಲಿ ತಮ್ಮ ಎಡಗಡೆಯಲ್ಲಿ ಇರುವ ಶ್ರೀಹರಿಯನ್ನು ಅರ್ಚಿಸಿದುದರಿಂದ,ವಾಮದೇವರೆಂದೆನ್ನಬೇಕು. ಹೊರತಾಗಿ ಕೇವಲ ಸುಂದರರಾದುದರಿಂದ ಅಲ್ಲ. ವಿಷ್ಣುದ್ರೋಹಿಗಳಾದ ತ್ರಿಪುರರನ್ನು ದಹಿಸುವ ಸಮಯದಲ್ಲಿ, ಅಘೋರರೂಪವನ್ನು ಸ್ವೀಕರಿಸಿದ್ದರಿಂದ 'ಅಘೋರ'–ಎಂದು ಹೆಸರು. ಸ್ವೇಚ್ಛೆಯಿಂದ ತಪಸ್ಸಿನಲ್ಲಿ ಕೃಶನಾದವನನ್ನು ದಯೆಯಿಂದ ಸದ್ಯದಲ್ಲಿಯೇ ಆವೇಶಿಸಿದುದರಿಂದ ಸದ್ಯೋದೇವನೆಂದು ಹೆಸರು. ಉರುಪುತ್ರನಾದುದರಿಂದ. "ಔರ್ವ"–ಎಂದು ಹೆಸರು. ಉ ಎಂದರೆ ಉತ್ತಮವಾದವರು ಎಂದರೆ, ರೋದನವುಳ್ಳವನು. ಆದುದರಿಂದ ಉತ್ಕೃಷ್ಟವಾದ ರೋದನವುಳ್ಳವನು, ಎಂದು ಉರು ಪದಾರ್ಥ. ರುದ್ರದೇವರಿಗೆ ಉರು-ಎಂದು ಹೆಸರು. ಯಾಕೆಂದರೆ,ಅವರು ಉತ್ತಮವಾಗಿ ರೋದಿಸಿರುತ್ತಾರೆ. ಅವರ ಪುತ್ರರೇ ಔರ್ವನಾಮಕರು.

ತಂದೆಯಾದ ರುದ್ರದೇವರು ಉರುನಾಮಕರು. ಸದಾ ರೋದಿಸುತ್ತಿದ್ದರು. ಇನ್ನೂ ಅವರ ರೋದನವನ್ನು ಮಾಡಲು ಔರ್ವರಾಗಿ ಅವತರಿಸಿದರು. ರುದ್ರದೇವರೂ, ಅವರ ಪುತ್ರರೂ ಇಬ್ಬರೂ ಮಾಡುವ ರೋದನವು ಬೇರೆ ಕಡೆಯಲ್ಲಿ ಬಹಳ ಪದ್ಯಗಳಿಂದ ವಿಸ್ತೃತವಾಗಿ ವರ್ಣಿತವಾಗಿರುತ್ತದೆ. ಅದರ ರೀತಿಯನ್ನೇ 'ಶುಶ್ರೂಷಿಷೋಃ ತತ್ ಕ್ಷಣಾತ್'–ಹೇಳಿದಂತೆ, ಅತಿಪಕ್ವಮನಸ್ಸಿನವರಾದ ಭಗವದ್ಭಕ್ತರಿಗೆ ವಿರಕ್ತಿಪೂರ್ವಕವಾಗಿ ಬಿಂಬೋಪಾಸನವನ್ನು ಮಾಡಲು ಅತಿಶಯವಾದ ತ್ವರಾವನ್ನು ಹುಟ್ಟಿಸುವುದರಿಂದ, ಅದನ್ನೇ ವಿಸ್ತರಿಸದೇ ಕೇವಲ ಪದ್ಯಾರ್ಥವನ್ನಷ್ಟೇ ಸಂಗ್ರಹಿಸಿ, ವಿಸ್ತಾರಭೀತಿಯಿಂದ ಸಂಕ್ಷೇಪದಿಂದಲೇ ತೋರಿಸುತ್ತೇವೆ. ಕಥಾಪ್ರಸಂಗವು ಹೀಗೆ ಇರುತ್ತದೆ—

"ಪೂರ್ವದಲ್ಲಿ ಗರುಡದೇವರು ಶ್ರೀಕೃಷ್ಣದನ್ನು ಪ್ರಶ್ನಿಸಿದರು :-

"ಹೇ ನಾಥ ! ಯದುಕುಲಲಲಾಮನೇ ! ಪರಮಧೈರ್ಯಶಾಲಿಗಳಾದ ರುದ್ರದೇವರು ವಿಷವನ್ನುಂಡರೂ,ವಿಷಾದವನ್ನು ಹೊಂದದೇ ಇದ್ದರು. ಅಂಥ

ವರು ಯಾಕೆ ರೋದಿಸಿದರು. ಹೀಗೆ ರೋದಿಸಿರುವುದೇ ಅವರಿಗೆ ಉರು, ಊರ್ವ-ಎಂದು ಹೆಸರು ಬರಲು ಕಾರಣವಾಯಿತು. ಆದುದರಿಂದ, ಈ ವೃತ್ತಾಂತ ವನ್ನು ವಿಶದೀಕರಿಸಿ ತಿಳಿಸಬೇಕು"—ಎಂದು ಅದಕ್ಕೆ ಶ್ರೀಕೃಷ್ಣನು ಕರುಣೆಯಿಂದ ಹೀಗೆ ನುಡಿದನು—

"ಹೇ ಗರುಡ ! ಮಹಾತ್ಮನಾದ ಉರುವು ಒಂದು ದಿವಸ ಸಕಲ ಗುಣ ಗಣಪರಿಪೂರ್ಣನಾದ ಜ್ಞಾನಾನಂದವಿಗ್ರಹನೂ, ದೋಷವಿದೂರನೂ, ಅಶೇಷಸುರಲಾಲಿತ ಪಾದಪಲ್ಲವನೂ ಆದ ತನ್ನ ಬಿಂಬಮೂರುತಿ ಸಂಕರ್ಷಣ ರೂಪಿಯಾದ ಹರಿಯನ್ನು ಸಂದರ್ಶಿಸಿದರು. ಪರಮಾತ್ಮನ ಸಾಕ್ಷಾತ್ಕಾರದಿಂದ ಪುಲಕಾಂಕಿತರಾಗಿ ಕುಣಿಕುಣಿದು, ಆನಂದಭಾಷ್ಪಗಳಿಂದ ಅವರ ಕಣ್ಣುಗಳು ಪೂರ್ಣವಾದವು. ಬಿಗಿದ ಕಂಠದ ಗದ್ಗದ ಅಮೃತಮಯವಾಣಿಯಿಂದ ತನ್ನ ಸಾಧನವನ್ನು ಮಾಡಿಕೊಳ್ಳಲು, ಆ ಕಾಲದಲ್ಲಿ ಆದ ತಮ್ಮ ಅವಸ್ಥೆಯನ್ನು ಸಂಕ್ಷಿಪ್ತವಾಗಿ ಬೇಡಿಕೊಳ್ಳುತ್ತಾರೆ.

"ಬಹು ಕಲ್ಪಗಳಲ್ಲಿ ಕಾಣದ ತಮ್ಮ ಪಾದಪದ್ಮದಲ್ಲಿ ಸೂರ್ಯನಂತೆ ಹೊಳೆಯುವ ನಖಮಣಿಕಿರಣವನ್ನು ಇಂದು ನಾನು ನೋಡಿದೆನು. ಸ್ವಾಮಿಯೇ! ಇದು ಯಾವ ಪುಣ್ಯ ಮಹಿಮೆಯಿಂದಲೋ ನಾನರಿಯೆ ? ಹೇ ವಾರಿಜನ ಯನ ! ಇಂಥ ದರ್ಶನವೇ ನನಗಾಗಿರಲಿಲ್ಲ."—ಎಂಬುದಾಗಿ ಉಚ್ಚವಾಗಿ ರೋದನ ಮಾಡಿದರು. "ಹೇ ಮುರಹರನೇ ! ಪ್ರಾಣಪ್ರಿಯನೇ ! ಪ್ರಾಣ ಪ್ರಿಯನೇ ! ಒಮ್ಮೆಯಾವರೂ ದೃಢ-ಏಕಚಿತ್ತದಿಂದ ನಿನ್ನ ಮಹಿಮೆಯನ್ನು ಶ್ರವಣ ಮಾಡಲಿಲ್ಲ."—ಹೀಗೆ ಪರಮಾತ್ಮನ ಪಾದಪದ್ಮ ಮತ್ತೂ ನೋಡಿ ಭಯದಿಂದ ನಡುಗುತ್ತಾ, ಬಿಗಿದ ಕಂಠದಿಂದ ಮತ್ತಷ್ಟು ರೋದಿಸಹತ್ತಿದನು. "ಮುಕುಂದ ! ನಾರಾಯಣ ! ನಿನ್ನ ಪಾದದರ್ಶನವಾದರೂ, ಈ ನಿನ್ನ ಅಗಾಧ ಗುಣಭರಿತವಾದ ಸ್ತುತಿಯನ್ನು ನಾನು ಹೇಗೆ ಮಾಡೇನು ? ನನ್ನ ಕಣ್ಣು ನಾಲಿಗೆಗಳು ಪಾಪಮಯವಾದವುಗಳು. ನನ್ನ ಕಣ್ಣು ಸದಾ ಸ್ತ್ರೀಯ ರಲ್ಲಿ ನಟ್ಟಿರುತ್ತದೆ. ನಾಲಿಗೆಯೂ ಸಹ ದುಷ್ಟವಾರ್ತೆಯನ್ನು ನುಡಿಯುವುದ ರಲ್ಲೇ ತೊಡಗಿರುತ್ತದೆ.

ಶ್ರೋತ್ರಾದಿಯಾಮಕನೇ ! ನನ್ನ ಕಿವಿಗಳು ಒಮ್ಮೆಯಾದರೂ ನಿನ್ನ (ಹರಿಯ) ಕಥೆಗಳನ್ನು ಕೇಳಲುತ್ಸುಕಗಳಾಗಲಿಲ್ಲ. ಆದರೆ, ಲೋಕವೃತ್ತಾಂತಗಳನ್ನು ಸದಾ ಪುನಃ ಪುನಃ ಕೇಳುತ್ತಲೇ ಇರುತ್ತವೆ."—ಹೀಗೆ, ಹರಿಯ ಪಾದಪೀಠವನ್ನು ಪದೇ ಪದೇ ಸ್ಮರಿಸಿ, ರುದ್ರದೇವರ ಕಂಠವು ಮತ್ತಷ್ಟು ಬಿಗಿದುಬ್ಬಿತು. "ಭೋ-ಭೋಗಶಾಯಿಯೇ ! ಭುಜದಂಡದಲ್ಲಿ-ನಿನ್ನ ಚರಣಾರ್ಪಿತವಾದ ಗಂಧವನ್ನು ಧರಿಸದೆ, ಶೇಷ(ಸರ್ಪ)ನನ್ನು ಧರಿಸಿ, ಅದರ ವಿಷ್ಠಾಮೂತ್ರಗಳಿಂದ ಬಾಹುಗಳು ದೂಷಿತವಾಗಿವೆ. ಸ್ತ್ರೀಯರ ಕುಚೋದಕ ಕುಚೋದಕಗಳಿಂದ ಅಂಗಗಳು ಮಲಿನವಾಗಿರುತ್ತದೆ. ಹರಿಯಲ್ಲಿ ಅನರ್ಪಿತವಾದ ಗಂಧಕವಸ್ತುಗಳಿಂದ ಲಿಪ್ತವಾದ ಈ ಶರೀರವು ಹರಿಯ ನಿರ್ಮಾಲ್ಯ ಗಂಧಶೇಷವನ್ನು ಮುಟ್ಟಲ್ಲ.

ಅನರ್ಪಿತವಾದುದನ್ನೇ ನಾಸಿಕೆಯು ಸ್ವೀಕರಿಸುತ್ತದೆಯೇ ಹೊರತು, ಹರಿಸಮರ್ಪಿತ ಪುಷ್ಪದ ಸುವಾಸನೆಯನ್ನು ಸೇವಿಸುವುದಿಲ್ಲ. ಹೇ ನರಹರನೇ ! ತುಲಸೀದಳ ಪವಿತ್ರಿತವಾದ ಅನ್ನವನ್ನು ನನ್ನ ನಾಲಿಗೆಯು ಹೇಗೆ ಇನ್ನು ಮುಂದೆ ಅಂಗೀಕರಿಸೀತು ? ಯಾಕೆಂದರೆ, ಅನರ್ಪಿತಾನ್ನವನ್ನೇ ಬಹುಕಾಲ ಉಂಡು,ಅವನ್ನೇ ಸ್ವಾಗತಿಸುವ ದುಷ್ಟಸಂಸ್ಕಾರದಿಂದ ಜಿಹ್ವೆಯು ಜಿಗುಪ್ಸಿತವಾಗಿದೆ. ಹರಿನೈವೇದ್ಯವನ್ನು ಸೇವಿಸಿದರೂ, ಅದರಲ್ಲಿ ದೃಢಾಸಕ್ತಿಯು ಹುಟ್ಟುವುದಿಲ್ಲ. ಅನೇಕ ಜನ್ಮಗಳಲ್ಲಿ ಆರ್ಜಿತವಾದ ಪಾಪಸಮೂಹಗಳಿಂದ ಹೀಗೆ ಆಗಿ ನಿನ್ನ ರೂಪವು ಮರೆಯಾಗಿದೆ. ಈಗ ಅನೇಕ ಜನ್ಮಾರ್ಜಿತ ಪುಣ್ಯಪುಂಜಗಳಿಂದ ಈ ನಿನ್ನ ವಿಗ್ರವನ್ನು ನೋಡಿರುತ್ತೇನೆ."—ಹೀಗೆ ಭಕ್ತಿಯಿಂದ ರುದ್ರದೇವರು (ಉರುವು) ಹರಿ ಮುಖವನ್ನು ನೋಡಿ,ಅತ್ಯಂತವಾಗಿ ರೋದನ ಮಾಡಿದರು. ಇದು ತಂದೆಯಾದ ಉರುವಿನ ರೋದನವು. ಇನ್ನು ಮಗನಾದ ಔರ್ವನ ರೋದನವು——ದಯಾಯುಕ್ತವಾದುದು. "ರಮಾಸಮಾಲಿಂಗಿತ ಮಂಗಳಾಂಗನೇ ! ಸಜ್ಜನರೂ ಮುಕ್ತಿಯೋಗ್ಯರೂ ಸಹ ವಿಷಯವ್ಯಾಸಕ್ತರಾಗಿದ್ದಾರೆ. ವಿಷಯ ಸುಖಸಂಪಾದನದಲ್ಲಿಯೇ ಪ್ರಯತ್ನಿಸುತ್ತಿದ್ದಾರೆ. ಇವರು ಮೂರ್ಖರು. ದುಷ್ಟೇಂದ್ರಿಯಗಳ ತೃಪ್ತಿಗಾಗಿ ಧನದಾನ ಆರ್ಜನಗ

ಳಲ್ಲಿ ಪರಮಾದರದಿಂದ ತತ್ಪರರಾಗಿರುತ್ತಾರೆ. ಇವರನ್ನು ಈ ಸಂಸಾರಪಾಶ ದಿಂದ ಹೇಗೆ ಬಿಡಿಸುವಿಯೋ ? " ಹೀಗೆ, ಶ್ರೀಹರಿಯ ಅದ್ಭುತ ಬಂಧಕಶಕ್ತಿ ಯನ್ನು ಸ್ಮರಿಸಿ, ಮತ್ತಷ್ಟೂ ಊರ್ವಸು ರೋದಿಸಹತ್ತಿದನು. "ಹೇ ಮುರ ಹರನೇ ! ದೀನಜನರ ಹೀನತೆ–ದೀನತೆಗಳನ್ನು ಕೇಳು. ಅತಿ ಕಷ್ಟಪಟ್ಟು, ಮಹಾಕಾರ್ಪಣ್ಯದಿಂದ ಗಳಿಸಿದ ದ್ರವ್ಯವನ್ನು ಪರಲೋಕಮಾರ್ಗದ ಬುತ್ತಿ ಯನ್ನು ದಿಕ್ಕರಿಸಿ, ಅಲ್ಪನಜರಲ್ಲಿ–ಅಪಾತ್ರರಲ್ಲಿ ವಿನಿಯೋಗಿಸುತ್ತಾರೆ.

ನಿನ್ನ ಪ್ರಿಯರಾದ ಭಕ್ತರಲ್ಲಿ ಸ್ವಲ್ಪವನ್ನೂ ವಿನಿಯೋಗಿಸುವುದಿಲ್ಲ. ಹೀಗಾಗಿಯೇ, ಇವರ ಆಯುಷ್ಯವು ಅಳಿದು ಮುಪ್ಪು ಆವರಿಸಹತ್ತಿದೆ. ಆದರೆ ತೃಷ್ಣೆಗೆ ಮಾತ್ರ ಮುಪ್ಪೇ ಇಲ್ಲ. ಇವರನ್ನು ನೋಡಿ ಬೆನ್ನುಹತ್ತಿ, ಮೃತ್ಯುವು ನಗುತ್ತಲಿದೆ. ಆದರೆ,ಇದನ್ನು ನೋಡದೆ, "ನನ್ನ ಸಮರಾರು ? ನಾನು ನೂರುವರ್ಷ ಜೀವಿಸುವೆ ! ಇವರು ನನ್ನ ಮಕ್ಕಳು ; ಇವರು ನಿನ್ನ ಮಕ್ಕಳು! ನನ್ನ ಸಲ್ಲೆಯು ಸುಲಕ್ಷಣಳು. ಮನೋಹರಮುಖಿಯ ಮಗಳಿಗೆ ಮದುವೆ ಯಾಗಬೇಕು. ಇದು ಮಗಳ ಮದುವೆಯ ಧನ. ಇದು ಮಗನ ಮದುವೆಯ ಧನ."—ಎಂದು ಮುಂತಾಗಿ ಕೂಗುತ್ತಲಿರುವರು. ಶ್ರೀಕೃಷ್ಣನೇ ! ವಿಷ್ಣುವೇ ! ಹೀಗೆ ನಿನ್ನವರು ಶ್ವಪಚರಾಗಿರುತ್ತಾರೆ. ಯಮಪಾಶದಲ್ಲಿ ಸಿಲುಕಿ, ಬದ್ಧರಾಗಿ ದ್ದಾರೆ. ಮೃತರಾದನಂತರ ಧನ, ಪುತ್ರ, ಮಿತ್ರ, ಕಳತ್ರರಾರೂ ನಮ್ಮೊ ಡನೆ ಬರುವುದಿಲ್ಲ. ಧನವೆಲ್ಲಿ ? ವಸ್ತ್ರವೆಲ್ಲಿ ? ಹೀಗಾಗಿ,ಇವರ ಆಯುಷ್ಯವು ವ್ಯರ್ಥವಾಗಿ ಹೋಗುತ್ತಲಿವೆ. ಅಯ್ಯೋ ಇವರು ನಷ್ಟರಾದರಲ್ಲ. ಇದು ಕೆಟ್ಟದು"–ಎಂದು ಊರ್ವರು ವಿಷಯಮೂಢರನ್ನು ನೋಡಿ,ವಾಸುದೇವೈಕ ನಿಷ್ಠೆ ಯಿಂದ ದಯೆಯಿಂದ ರೋಧಿಸಿದರು. ಆದುದರಿಂದ, ಅವರು ತಂದೆಯಾದ ಉರುವಿನ ಶೇಷರೋದನವನ್ನು ಪೂರೈಸಿವರು. ಇಲ್ಲಿಗೆ ಮಗನ ರೋದನವು ಮುಗಿದುದು.

ಶೇಷ, ಸದಾಶಿವ, ಊರ್ಧ್ವ, ತಪ, ಅಹಂಕಾರ, ನರ, ಅಪಟ, ಲಕ್ಷ್ಮಣ, ಬಲರಾಮ, ಶುಕ, ಸದ್ಯೋಜಾತ, ವಾಮದೇವ, ಅಘೋರ,

ಪುರುಷ, ದುರ್ವಾಸ, ಅಶ್ವತ್ಥಾಮಾ, ಔರ್ವ, ಜೈಗೀಶವ್ಯ,- ಈ ಮುಂತಾದ ರುದ್ರರೂಪಗಳು, ಒಂದೆ ಹೇಳಿದ ಭಾರತೀ. ಸರಸ್ವತೀ, ತದ್ರೂಪಗಳಿಗಿಂತ ನೂರುಗಳಿಂದ ಕಡಿಮೆಯವೆಂದು ತಿಳಿಯಬೇಕು. ಅದರಂತೆ, ಗರುಡ ಹಾಗೂ ಶೇಷ—ತದ್ರೂಪಗಳೆಲ್ಲವೂ ಇವುಗಳಿಗೆ ಸಮಾನವೆಂದು ತಿಳಿಯಬೇಕು. ॥11॥

## ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :–

ಶೇಷ–ರುದ್ರರ ನಾಮರೂಪಗಳನ್ನು ತಿಳಿಸುತ್ತಾರೆ- ಹರಿ ಎಂದು. **ವಿಷ್ಣೋರ್ವಾಯೋಶ್ಚ ಶೇಷಸ್ಯ ತ್ರಿಭಿರಂಶೈರ್ನರಸ್ಮೃತಃ–** ಎಂಬ ತಾತ್ಪರ್ಯಾನುಸಾರ,ಹರಿ ಎಂಬ ದೇವರೂ, ಈರನೆಂಬ ವಾಯುದೇವರೂ ಇವರಿಬ್ಬರ ಆವೇಶಯುಕ್ತ ನರರೂಪನು. ಸಂಕರ್ಷಣರೂಪ ಆವೇಶಯುಕ್ತ ಲಕ್ಷ್ಮಣನು. ಪರಮಪುರುಷನಾದ ದೇವರ ಶುಕ್ಲಕೇಶಾವೇಶಯುಕ್ತ ಬಲರಾಮ. ಈ ಮೂರೂನೂ ಶೇಷದೇವರರೂಪಗಳು. ಹರನೆಂಬ ಪ್ರಳಯರುದ್ರರೂಪ, ಸದಾಶಿವನೆಂಬ ಇಷ್ಟಪ್ರದರೂಪ, ತಮೋಭಿಮಾನಿರೂಪ, ಅಹಂಕಾರ ತತ್ತ್ವಾಭಿಮಾನಿ, ವಾಯುದೇವರ ಆವೇಶವುಳ್ಳ ಶುಕಮುನಿ, ಊರ್ಧ್ವಪಟನೆಂಬ ಅವತಾರರೂಪ, ತತ್ಪುರುಷ, **ತತ್ಪುರುಷಾಯ ವಿದ್ಮಹೇ। ಮಹಾದೇವಾಯ ಧೀಮಹಿ। ತನ್ನೋರುದ್ರಃ ಪ್ರಚೋದಯಾತ್** ॥—ಎಂಬ ರುದ್ರಗಾಯತ್ರೀ ಪತಿಪಾದ್ಯರೂಪ. ಜೈಗೀಷವ್ಯ- ಎಂಬ ಜಾಂಬವತಿಗೆ ಜ್ಞಾನೋಪದೇಶ ಮಾಡಿದ ರೂಪ. ಔರ್ವಋಷಿರೂಪ. ದ್ರೋಣಪುತ್ರ ಅಶ್ವತ್ಥಾಮರೂಪ. ಅರ್ಜುನನಿಗೆ ಪ್ರತ್ಯಕ್ಷವಾದ ವ್ಯಾದನೆಂಬ ಬೇಟೆಗಾರನ ರೂಪ. ದೂರ್ವಾಸರೂಪ-ಅಂದರೆ, ಅತ್ರಿಪುತ್ರ ದೂರ್ವಾಸಾವತಾರ ಸಹ ರುದ್ರದೇವರ ಅವತಾರನಾಮರೂಪಗಳು. ॥11॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಶ್ರೀಶೇಷದೇವರು ಮತ್ತು ಶ್ರೀರುದ್ರದೇವರ ಅವ ತಾರವಿಶೇಷಗಳನ್ನು ತಿಳಿಸುತ್ತಾರೆ.

**(1) ಹರಿ ಸಮೀರಾವೇಶ ನರ :–**

ಶ್ರೀಶೇಷದೇವರು "ನರ"ನಾಮಕರಾಗಿ ಅವತರಿಸಿದರು. ಯಮಧರ್ಮ ನಿಂದ ಶ್ಯಾಮಲಾವತಾರಿಯಾದ ಮೂರ್ತಿದೇವಿಯಲ್ಲಿ ಶೇಷದೇವರು ಅವತರಿಸಿ ದರು. ಇವರಲ್ಲಿ ಶ್ರೀನರಸಿಂಹದೇವರು (**ಹರಿ**) ಮತ್ತು ಜೀವೋತ್ತಮರಾದ ಶ್ರೀವಾಯುದೇವರು (**ಸಮೀರ**) ಈರ್ವರ ಆವೇಶವಿದೆ. ಇದರಿಂದ,ಶ್ರೀಶೇಷ ದೇವರು "**ನರ**"–ಎಂಬ ಹೆಸರಿನಿಂದ ಹರಿವಾಯುಗಳ ಆವೇಶಯುಕ್ತರಾಗಿ ಅವ ತರಿಸಿದರು.

**ಶಾಮಲಾಯಾಂ ಚ ಧರ್ಮಾಚ್ಚ ಸರೋಜಾತಸ್ತು ಭೂತಲೇ ।**
**ಶೇಷಃ ಸ ಏವ ವಿಜ್ಞೇಯಃ ಭಕ್ತೋ ನಾರಾಯಣಸ್ಯ ಚ ॥**
**—ಗರುಡಪುರಾಣೋಕ್ತಿ.**

**(2) ಸಂಕರುಷಣಾವೇಶಯುತ ಲಕ್ಷ್ಮಣ :–**

ದಶರಥಮಹಾರಾಜನ ತೃತೀಯಪುತ್ರನಾಗಿ ಸುಮಿತ್ರಾದೇವಿಯಲ್ಲಿ **ಲಕ್ಷ್ಮಣನೆಂಬ** ಹೆಸರಿನಿಂದ ಶೇಷದೇವರು ಅವತರಿಸಿದರು. ಶ್ರೀರಾಮಚಂದ್ರನ ತಮ್ಮನೇ ಲಕ್ಷ್ಮಣನು. ಲಕ್ಷ್ಮಣನಿಗೆ ಸೌಮಿತ್ರಿ-ಎಂದು ಹೆಸರು. (ಸುಮಿತ್ರಾ ಪುತ್ರನಾದ್ದರಿಂದ), ಶೇಷದೇವರ ಬಿಂಬಮೂರ್ತಿ ಶ್ರೀಸಂಕರ್ಷಣನಾಮಕ ಪರಮಾತ್ಮ. ಶೇಷದೇವರು ಶ್ರೀಸಂಕರ್ಷಣನ ಆವೇಶಯುಕ್ತರಾಗಿ,ಲಕ್ಷ್ಮಣಾ ಭಿಧಾನದಿಂದ ತ್ರೇತಾಯುಗದಲ್ಲಿ ಅವತರಿಸಿದರು.

ಸುಮಿತ್ರಾಯಾಂ ದಶರಥಾಜ್ಜಾತೋ ಯೋ ಲಕ್ಷ್ಮಣಾಭಿಧಃ"
—ಎಂತ ಪ್ರಮಾಣವಾಕ್ಯ.

**(3) ಪರಮಪುರುಷನ ಶುಕ್ಲಕೇಶಾವೇಶ ಬಲರಾಮ :-**

ಸರ್ವೋತ್ತಮನೂ ಮತ್ತು ಪುರುಷಶಬ್ದವಾಚ್ಯನೂ ಆದ ಶ್ರೀಕೃಷ್ಣರೂಪೀ ಪರಮಾತ್ಮನೇ **ಪರಮಪುರುಷನು.** ಅವನ ದೇಹಗತ ಶುಕ್ಲರೋಮದ ಆವೇಶಯುತರಾಗಿ ಶೇಷದೇವರು ವಸುದೇವನಿಂದ ರೋಹಿಣಿಯಲ್ಲಿ **"ಬಲರಾಮ"**ನೆಂಬ ಹೆಸರಿನಿಂದ ಅವತರಿಸಿದರು. ಬಲರಾಮನಲ್ಲಿ ಶೇಷಾಂಶ ಮತ್ತು ವಾಯುದೇವರ ಆವೇಶ. ನಾರಾಯಣನ ಶುಕ್ಲಕೇಶದ ಆವೇಶವಿದೆ.

**"ಆವಿಷ್ಟೌ ಶ್ವೇತಕೇಶಾತ್ಮ ಶೇಷಾಂಶಂ ರೋಹಿಣೀಸುತಂ ।**
**ವಸುದೇವಾತ್ ರೋಹಿಣ್ಯಾಂ ಜಾತಃ ಅಪಿ ವಾಯ್ವಾವೇಶಾಂಶ**
**ವಾನ್" ॥-**

**(4) ಹರ :-**

ಮಹಾಪ್ರಳಯಕಾಲದಲ್ಲಿ ಬಿಂಬಮೂರ್ತಿಯಾದ ಸಂಕರ್ಷಣಾಭಿನ್ನ ಶ್ರೀಲಕ್ಷ್ಮೀನರಸಿಂಹದೇವರು ರುದ್ರದೇವರ ಅಂತರ್ಯಾಮಿರೂಪದಿಂದ್ದು, ಪ್ರಳಯಕಾರ್ಯ, ರುದ್ರರ ದ್ವಾರಾ ನಡೆಯಿಸುವರು. ಮಹಾಪ್ರಳಯರೂಪದಿಂದ ವಿದ್ಯಮಾನರಾದ ರುದ್ರದೇವರಿಗೆ "ಹರ"–(ನಾಶಕರ್ತ)ನೆಂದು ಹೆಸರು.

**(5) ಸದಾಶಿವ :-**

ಅಹಂಕಾರತತ್ತ್ವವು ತ್ರಿವಿಧವಾದದ್ದು. (1) ವೈಕಾರಿಕಾಹಂಕಾರ. (2) ತೈಜಸಾಹಂಕಾರ. (3) ತಾಮಸಾಹಂಕಾರ.

ತಾಮಸಾಂಹಕಾರಾಭಿಮಾನಿ ರುದ್ರನಿಗೆ **ಸದಾಶಿವ**—ಎಂತ ನಾಮ. ಗಜಚರ್ಮಾಂಬರಧರನು. ತಾಮಸಾಂಹಕಾರಕ್ಕೆ ಅಭಿಮಾನಿಯಾಗಿದ್ದರೂ, ಅಪವಿತ್ರರಾದ ಗಜಚರ್ಮವನ್ನು ಹೊಂದಿದ್ದರೂ, ಯಾವಾಗಲೂ ಮಂಗಳ ಪ್ರದಮೂರ್ತಿಯಾದ್ದರಿಂದ **ಸದಾಶಿವನು.** (ಸದಾ–ಯಾವಾಗಲೂ, ಶಿವ –ಮಂಗಳಪ್ರದನು).

(6) **ತಪ :–**

ಲವಣಸಮುದ್ರದಲ್ಲಿ 10 ಬ್ರಹ್ಮ ದಿನಕಲ್ಪಗಳಷ್ಟು ಕಾಲ ಇದ್ದು, ಘೋರತಪಸ್ಸನ್ನು ಆಚರಿಸಿ ಆದಿತ್ಯರಲ್ಲಿ ಉತ್ತಮರೆನಿಸಿ, ಮುಂದಿನ ಬ್ರಹ್ಮ ಕಲ್ಪದಲ್ಲಿ ಶೇಷಪದವಿಯನ್ನು ಹೊಂದುವ ಅರ್ಹತೆ ಪಡೆದ ಕಾರಣ, ರುದ್ರ ದೇವರಿಗೆ **ಉಗ್ರತಪ**–ಎಂದು ಹೆಸರು ಬಂದಿತು.

**ತಪೋಭಿಮಾನೀ ಸ ಜ್ಞೇಯೋ ಹ್ಯಶಿವಶ್ಚಾಪ್ಯಸದಾಶಿವಃ ।**
**ದಶಕಲ್ಪ ತಪಃ ಕರ್ತುಂ ವಿವೇಶ ಲವಣಾಂಭಸಿ ॥**
**ಅತೋ ರುದ್ರಃ ತಪಃ ಸಂಜ್ಞಾಹ್ಯವಾಪ ಖಗಸತ್ತಮಃ ॥**
**—ಎಂಬ ಪ್ರಮಾಣಾನುಸಾರ. (ಗರುಡಪುರಾಣ).**

(7) **ಅಹಂಕೃತು :–**

ಅಹಂಕಾರತತ್ತ್ವಕ್ಕೆ ಅಭಿಮಾನಿಗಳಾಗಿರುವುದರಿಂದ, ರುದ್ರದೇವರಿಗೆ– **ಅಹಂಕೃತು**–ಎಂತ ನಾಮ.

**"ಯೋ ಅಹಂಕಾರಾತ್ಮಕೋ ರುದ್ರಃ ಸ ಏವಾಭೂತ್ ಖಗೇ ಶ್ವರಃ ॥.**

**—ಗರುಡಪುರಾಣೋಕ್ತಿ.**

(8) **ಮರುತಯುಕ್ತ ಶುಕ :-**

ವಾಯ್ವಾವೇಶಯುತರಾದ ಶ್ರೀವ್ಯಾಸಪುತ್ರರಾದ ಶುಕಾಚಾರ್ಯರು ರುದ್ರದೇವರ ಅವತಾರ ಭೂತರು. ಶ್ರೀಮದ್ಭಾಗವತವನ್ನು ಒಂದು ವಾರ ಸಪ್ತಾಹರೂಪದಲ್ಲಿ ಮರಣೋನ್ಮುಖನಾಗಿದ್ದ ಪರೀಕ್ಷಿದ್ರಾಜನಿಗೆ ಶ್ರವಣಮಾಡಿಸಿದ ಪುಣ್ಯಪುರುಷರು. ಅವಧೂತರು. ಶ್ರೀಹರಿಯ ಏಕಾಂತಭಕ್ತರು.

**ವ್ಯಾಸಪುತ್ರ ಶುಕಃ ಪ್ರೋಕ್ತಃ ವಾಯುರಾವೇಶ ಸಂಯುತಃ ।**
**ರುದ್ರಾವತಾರೋ ವಿಜ್ಞೇಯೋ ಜ್ಞಾನಾರ್ಥಂ ಹ್ಯಭಾವದ್ಭುವಿ॥**

ಭೂಮಿಯಲ್ಲಿ ಜ್ಞಾನಪ್ರಸಾರಕ್ಕಾಗಿ ಅವತರಿಸಿದ ರುದ್ರದೇವರ ಅವತಾರ ವಿಶೇಷವು.

(9) **ಊರ್ಧ್ವಪಟ :-**

ದಕ್ಷಯಜ್ಞದಲ್ಲಿ ಶಂಕರನ ಪತ್ನಿಯಾದ ಸತೀದೇವಿಯು ತನ್ನ ದೇಹವ ಯೋಗಾಗ್ನಿಯಿಂದ ದಹಿಸಲ್ಪಟ್ಟಳು. ಅಂದಿನಿಂದ, ರುದ್ರದೇವರು ಊರ್ಧ್ವರೇತಸ್ವಿಯಾಗಿ ಉಳಿಯುವರೆಂದು ಪ್ರತಿಜ್ಞೆ ಮಾಡಿದರು. ಈ ಕಾರಣದಿಂದ ಅವರಿಗೆ "ಊರ್ಧ್ವ"-ಅಥವಾ "ಊರ್ಧ್ವರೇತ"-ಎಂಬ ಹೆಸರಾಯಿತು. ಅಲಂಪಚರಾದುದರಿಂದ (ವೈರಾಗ್ಯಶಾಲಿಗಳು) "ಅಪಟ"-ನಾಮಕರು. ಇದರಿಂದ, **ಊರ್ಧ್ವಪಟ**-ಎಂತ ನಾಮವಿಶೇಷವು.

(10) **ತತ್ಪುರುಷ :-**

ತತ್ಪುರುಷ-ಎಂಬುದು ರುದ್ರ ಗಾಯತ್ರೀರೂಪ. ರುದ್ರದೇವರ ಪಂಚವದನಗಳಲ್ಲಿ ಒಂದು.

**ತತ್ಪುರುಷಾಯ ವಿದ್ಮಹೇ-ಮಹಾದೇವಾಯ ಧೀಮಹಿ ।**
**ತನ್ನೋ ರುದ್ರಃ ಪ್ರಚೋದಯಾತ್ ॥**
**—ಎಂದು ಮಂತ್ರ.**

(11) ಜಯಗೀಷವ್ಯ :.

ಜಯಗೀಷವ್ಯ–ಎಂಬ ರುದ್ರದೇವರ ಋಷಿರೂಪ. ಈ ಅವತಾರದಿಂದ ಶ್ರೀಕೃಷ್ಣನ ಷಣ್ಮಹಿಷಿಯರಲ್ಲಿ ಶ್ರೇಷ್ಠಳಾದ ಜಾಂಬುವತಿಗೆ (ತುಳಸೀ) ಜ್ಞಾನೋಪದೇಶ.

(12) ಔರ್ವ :–

ಉ—ಎಂದರೆ ಉತ್ಕೃಷ್ಟವಾದ, ರು—ಎಂದರೆ, ರೋದನವುಳ್ಳವನು. ಅಂದರೆ, ವಿಶೇಷವಾಗಿ ರೋದನಮಾಡಿದ್ದರಿಂದ,ರುದ್ರದೇವರಿಗೆ ಉರು ಎಂದು ಹೆಸರು. ಅವರ ಪುತ್ರರೇ ಔರ್ವ–ನಾಮಕರಾದ ರುದ್ರದೇವರು. ರುದ್ರ ದೇವರೇ ಇನ್ನೊಂದು ರೂಪದಿಂದ ಅವಶಿಷ್ಟರಾಗಿದ್ದ ರೋದನವನ್ನು ಪೂರೈಸಿದರು.

ಇದರ ಕಥಾಪ್ರಸಂಗವು ಇಂತಿದೆ—

ಒಮ್ಮೆ, ಉರುನಾಮಕರಾದ ರುದ್ರದೇವರು ಸಕಲಗುಣಪರಿಪೂರ್ಣನಾದ ತಮ್ಮ ಬಿಂಬಮೂರ್ತಿ ಸಂಕರ್ಷಣರೂಪೀ ಶ್ರೀಹರಿಯನ್ನು ಸಂದರ್ಶಿಸಿದರು· ಆಗ ತಮ್ಮ ತಪ್ಪನ್ನೆಲ್ಲಾ ನೆನೆಸಿಕೊಂಡು. "ಹೇ ಕ್ಷಮಸಾಗರನೇ. ಕಲಿಯಬಾಧೆಯಿಂದ ಮಾಡಿದ ಅನೇಕ ಅಪರಾಧಗಳನ್ನು ಕ್ಷಮಿಸಿ, ನನ್ನನ್ನು ಉದ್ಧರಿಸು"– ಎಂದು ಮೊರೆ ಹೋಗಿ, ಗಟ್ಟಿಯಾಗಿ ರೋದಿಸಿದರು. ಉರುಪುತ್ರನಾದ ಔರ್ವನು ತಂದೆಯ ಅವಶಿಷ್ಟರೋದನವನ್ನು ಪೂರೈಸಿ, ಸಂಕರ್ಷಣನ ಪೂರ್ಣಾನುಗ್ರಹಕ್ಕೆ ಪಾತ್ರನಾದನು.

**ಉರೋಃ ಪುತ್ರಸ್ತು ಚೌರ್ವಸ್ತು ರುದ್ರ ಏವ ಪ್ರಕೀರ್ತಿತಃ |**
**ಉರುಃ ಉತ್ಕೃಷ್ಟ ವಾಚಿತ್ವಾತ್ ಉರೋ ರೋದನವಾಚಕಃ ||–**
ಎಂದು ಗರುಡಪುರಾಣವಾಕ್ಯ.

### (13) ದ್ರೌಣೀ :.

ದ್ರೋಣಾಚಾರ್ಯರ ಪುತ್ರನಾಗಿ ದ್ವಾಪರಯುಗದಲ್ಲಿ **ಅಶ್ವತ್ಥಾಮಾ ಚಾರ್ಯರೆಂಬ**ಹೆಸರಿನಿಂದ ರುದ್ರದೇವರು ಅವತರಿಸಿದರು. ದ್ರೋಣಪುತ್ರರಾದ್ದರಿಂದ **ದ್ರೌಣೀ**—ಎಂಬ ಹೆಸರಾಯಿತು. ಪ್ರಾರಬ್ಧಕರ್ಮವಶರಾಗಿ ದುರ್ಯೋಧನನ ಸೇವೆ ಮಾಡಿ, ಪಾಂಡವರಿಗೆ ವಿರೋಧಿಗಳಾದರು.

**ದ್ರೋಣಾಜ್ಜಾತೋ ದ್ರೌಣೀ ಸಂಜ್ಞಃ ರುದ್ರ ಏವ ಪ್ರಕೀರ್ತಿತಃ॥**

### (14) ವ್ಯಾಧ :–

ಕಿರಾತರೂಪದಲ್ಲಿ ಅರ್ಜುನನ್ನು ಯುದ್ಧದಲ್ಲಿ ಎದುರಿಸಿ, ಅವನನ್ನು ಸೋಲಿಸಿ, ನಂತರ ತಮ್ಮ ನಿಜರೂಪವನ್ನು ತೋರಿ, ಪಾಶುಪತಾಸ್ತ್ರವನ್ನಿತ್ತು, ಅನುಗ್ರಹಿಸಿದ ಕಿರಾತಾರ್ಜುನೀಯ ಕಥಾಪ್ರಸಂಗವಿಶೇಷ. ಕಿರಾತನಾದ್ದರಿಂದ **ವ್ಯಾಧನಾಮಕರು.**

### (15) ದೂರ್ವಾಸ :–

ಅತ್ರಿಪುತ್ರ, ಅತ್ರಿ ಮಹರ್ಷಿಯಾದ ಅನಸೂಯಾದೇವಿಯಲ್ಲಿ ಶಂಕರನ ಅಂಶದಿಂದ ಅವತರಿಸಿದನು. ವೈವಸ್ವತ ಮನ್ವಂತರದಲ್ಲಿ, ಅನಸೂಯೆಯಲ್ಲಿ ಜನಿಸಿದ ನಾಲ್ವರು ಪುತ್ರರಲ್ಲಿ ಎರಡನೆಯವನು. ಚಂದ್ರ. ದತ್ತಾತ್ರೇಯ–ಆರ್ಯರು-ಎಂಬುವರು ಈತನ ಒಡಹುಟ್ಟಿದವರು. ಬ್ರಹ್ಮದೇವರಿಗೆ ಅವತಾರವಿಲ್ಲವಾದ ಕಾರಣ, ಚಂದ್ರನು ಬ್ರಹ್ಮನ ಪ್ರತಿನಿಧಿಯಾಗಿಯೂ, ಶಂಕರನು ದೂರ್ವಾಸರೂಪದಿಂದಲೂ, ಮತ್ತು ವಿಷ್ಣುವು ದತ್ತನಾಮದಿಂದಲೂ, ಅವತರಿಸಿ, **ದತ್ತಾತ್ರೇಯ** ಎಂಬ ಅವತಾರವು ಪ್ರಸಿದ್ಧವಾಯಿತು. ಸ್ವಯಃ ಶ್ರೀವಿಷ್ಣುವೇ ಚಂದ್ರಾಂತರ್ಗತನಾಗಿ, ದೂರ್ವಾಸನ ಅಂತರ್ಯಾಮಿಯಾಗಿ ದತ್ತಾವತಾರವನ್ನು ಧರಿಸಿದನು. ಅತ್ರಿಮುನಿಗಳಿಗೆ ದತ್ತನಾದ್ದರಿಂದ, ದತ್ತಾ

ತ್ರೇಯನೆಂದು ವಿಷ್ಣುವಿಗೆ ಹೆಸರು. ದೂರ್ವಾಸನು ಕಾಲಾಗ್ನಿ ರುದ್ರನ ಅಂಶದಿಂದ ಜನಿಸಿದವನು.

**ಅತ್ರಿಪುತ್ನ್ಯನುಸೂಯಾಂ ಜಜ್ಞೇ ರುದ್ರೋಮಹಾತಪಾಃ ।**
**ದೂರ್ವಾಸಾಸತು ವಿಜ್ಞೇಯಃ ಮಾನಭಂಗಾಯ ಭೂಭೃತಾಂ॥**

ಇಂತು, ಹರ–ಸದಾಶಿವ–ತಪ–ಅಹಂಕೃತು–ಶುಕ–ಊರ್ಧ್ವ–ಅಪಟ-ತತ್ಪುರುಷ–ಜಯಗೀಷವ್ಯ–ಶರ್ವ-ದ್ರೌಣೀ-ವ್ಯಾಧ-ದೂರ್ವಾಸ-ಎಂದು ರುದ್ರದೇವರ ಅವತಾರವಿಶೇಷಗಳು. ಇವಲ್ಲದೆ, ವ್ಯೋಮಕೇಶ-ಸದ್ಯೋಜಾತ-ಅಘೋರ-ಧೂರ್ಜಟಿ ಗಂಗಾಧರ-ಇತ್ಯಾದಿ ಅನೇಕ ನಾಮಗಳಿವೆ. ॥11॥

★★

## ಪದ್ಯ-೧೨

**ಮೂಲ :–**

**ಗರುಡ ಶೇಷ ಶಶಾಂಕದಳ ಶೇ ।**
**ಖರರು ತಮ್ಮೊಳು ಸಮರು ಭಾರತೀ ।**
**ಸರಸಿಜಾಸನ ಪತ್ನಿಗಧಮರು ನೂರು ಗುಣದಿಂದ ॥**
**ಹರಿಮಹಿಷಿ ಜಾಂಬವತಿಯೊಳು ಶ್ರೀ ।**
**ತರುಣಿಯಾವೇಶವಿಹುದೆಂದಿಗು ।**
**ಕೊರತೆ ಎನಿಪರು ಗರುಡಶೇಷಗೈವರೈದು ಗುಣ ॥೧೨॥**

**ಅವತರಣಿಕೆ:-**

ಗರುಡ, ಶೇಷ, ರುದ್ರರು, ಹಾಗೂ ಶ್ರೀಕೃಷ್ಣನ ಷಣ್ಮಹಿಷಿಯರಲ್ಲಿ ಜಾಂಬವತಿ ದೇವಿಯ ವಿಚಾರ ತಿಳಿಸುತ್ತಾರೆ. ॥12॥

**ಪ್ರತಿಪದಾರ್ಥ :-**

**ಗರುಡ** = ಗರುಡದೇವರು, **ಶೇಷ** = ಶೇಷದೇವರು, **ಶಂಶಾಂಕದಳ ಶೇಖರರು** = ಚಂದ್ರಕಳಾಧರರಾದ ಶ್ರೀರುದ್ರದೇವರು. **ತಮ್ಮೊಳು ಸಮರು** = ತಮ್ಮ ತಮ್ಮಲ್ಲಿ ಸ್ವರೂಪತಃ ಸಮಾನರು. ಸಮಾನಕಕ್ಷಾಪನ್ನರು. **ಭಾರತೀ** = ವಾಯುದೇವರ ಪತ್ನಿ ಶ್ರೀಭಾರತೀದೇವಿ, **ಸರಸಿಜಾಸನಪತ್ನಿಗೆ** = ಬ್ರಹ್ಮದೇವರ ಪತ್ನಿಯಾದ ಶ್ರೀಸರಸ್ವತೀದೇವಿ, ಈ ಉಭಯರಿಗೂ. **ನೂರುಗುಣದಿಂದ** = ನೂರುವಿಜಾತೀಯ ಗುಣಗಳಿಂದ, **ಅಧಮರು** = ಗರುಡ ಶೇಷ ರುದ್ರ—ಈ ಮೂವರೂ ಅವರರು. **ಹರಿಮಡದಿ** = ಶ್ರೀ ಕೃಷ್ಣರೂಪೀ ಪರಮಾತ್ಮನ ಪತ್ನಿ, **ಜಾಂಬವತಿಯೊಳು** = ಷಣ್ಮಹಿಷಿಯರಲ್ಲಿ ಶ್ರೇಷ್ಠಳಾದ ಜಾಂಬವತೀದೇವಿಯಲ್ಲಿ, **ಇತರಣಿಯು ಆವೇಶವಿಹುದು ಎಂದೆಂದಿಗು** = ಇತರರಾದ ನೀಲಾದಿ ಐದು ಮಂದಿ ಪತ್ನಿಯರಿಗಿಂತ ಅಧಿಕ ವಾಗಿ ನಿತ್ಯಯೌವ್ವನೆಯರೂ, ಕಾಂತಿಸಂಪನ್ನರೂ ಆದ ಶ್ರೀಲಕ್ಷ್ಮೀದೇವಿಯ ಆವೇಶವಿದೆ. **ಗರುಡ ಶೇಷರಿಗೆ** = ಗರುಡ ಶೇಷರಿಗಿಂತ (ರುದ್ರದೇವರೂ ಗ್ರಾಹ್ಯ), **ಐದುಗುಣ** = ಜಾಂಬವತ್ಯಾದಿ ಷಣ್ಮಹಿಷಿಯರೂ ಐದು ವಿಜಾತೀಯ ಗುಣಗಳಿಂದ, **ಕೊರತೆ ಎನಿಪರು** = ಬಲ ಜ್ಞಾನಾದಿ ಸರ್ವ ವಿಷಯಗಳಲ್ಲಿಯೂ ಕಡಿಮೆ ಎನಿಸುತ್ತಾರೆ. ॥12॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಗರುಡ-ಶೇಷಾದಿಗಳ ವಿಚಾರವೂ, ಷಣ್ಮಹಿಷಿಯರ ವಿಚಾರವೂ ಹೇಳ ತಾರೆ.

ಗರುಡದೇವರು, ಶೇಷದೇವರು, ಚಂದ್ರದೇವರ ಏಕದೇಶಕಳಾವಿಶೇಷ ವನ್ನು ಶಿರದಲ್ಲಿ ಉಳ್ಳ ರುದ್ರದೇವರು,— ಈ ಮೂರು ಮಂದಿ ತಮ್ಮೊಳಗೆ ಸ್ವರೂಪತಃ ಸಮಾನರು. ಶೇಷರುದ್ರರು ಭಿನ್ನಜೀವರು, ಪದ ಒಂದೇನೇ. ಇವರು ಮೂರು ಮಂದಿಗಳು ವಾಯುದೇವರ ಪತ್ನಿ ಭಾರತೀದೇವೇರ ಪತ್ನಿ ಯಾದ ಸರಸ್ವತೀ ದೇವೇರು ಇವರಿಬ್ಬರಿಗೆ ಒಂದು ನೂರು ವಿಜಾತಿಗುಣದಿಂದ ಕಡಿಮಿ ಆದವರು. ಇಲ್ಲಿಗೆ ಗರುಡ-ಶೇಷಾದಿಗಳ ವಿಚಾರ ಮುಗಿಯಿತು. ಇನ್ನು ಮೇಲೆ, ಇವರಿಗೆ ಅವರರಾದ ಷಣ್ಮಹಿಷಿಯರು.

ಗುಣಪೂರ್ಣನಾದ ಶ್ರೀಕೃಷ್ಣನ ಹೆಂಡಿರು ನೀಲಾದೇವಿ ಮೊದಲಾದ ಐದು ಮಂದಿ, ಜಾಂಬವಂತನ ಪುತ್ರಿ ಜಾಂಬವತೀದೇವೇರು, ಅಂತು-ಈ ಆರು ಮಂದಿ ಯೊಳಗೆ ಲಕ್ಷ್ಮೀದೇವೇರ ಆವೇಶ ಉಂಟು. ಅವರೊಳು ಜಾಂಬವತಿಯಲ್ಲಿ ನಿತ್ಯಯೌವ್ವನೆಯರಾದ ಲಕ್ಷ್ಮೀದೇವೇರ ಎಂಬುದು ಇತರರಾದ ನೀಲಾದಿ ಐದು ಮಂದಿ ಅಪೇಕ್ಷಯಾ ಅಧಿಕವಾಗಿ ಇರೋದಾಗಿದೆ. **ತಯ್ಯೋರ್ಮಾನ್ಯಾಃ ಸರ್ವದಾನುಪ್ರವಿಷ್ಟಾಸ್ತಾ ಸಾಂ ಮಧ್ಯೇ ಜಾಂಬವತೀ ಪ್ರಧಾನಾ—** ಎಂತ ನಿರ್ಣಯೋಕ್ತಿ ಇರುವದ್ದರಿಂದ, ಜಾಂಬವತೀದೇವೇರು ಕಿಂಚಿತ್ ಅಧಿಕ ರೆಂದು ಕರಸತಾರೆ. ಸ್ವರೂಪತಃ ಆರು ಮಂದಿ ಸಮಾನರು. ಈ ಆರು ಮಂದಿಗಳ ಹೆಸರು ಮುಂದ ಹೇಳತಾರೆ. ಈ ನೀಲಾದಿ ಆರು ಮಂದಿ ಷಣ್ಮ ಹಿಷಿಯರು ಗರುಡ-ಶೇಷಾದಿಗಳಿಗೆ ಐದು ವಿಜಾತಿಗುಣದಿಂದ ಅನಾದ್ಯನಂತ ಕಾಲಕ್ಕೂ ಬಲ-ಜ್ಞಾನಾದಿ ಸರ್ವವಿಷಯದಲ್ಲೂ ಕಡಿಮಿ. ಎಂತ ಕರಸತಾರೆ ಎಂತ ತಾತ್ಪರ್ಯ. ॥12॥

**೨. ಭಾವಪ್ರಕಾಶಿಕೆ :-**

ಗರುಡದೇವರಿಗೆ ಅವತಾರವಿಲ್ಲದುದರಿಂದ, ಅವರ ವಿಷಯವನ್ನು ಹೇಳ ಲಿಲ್ಲ. ಗರುಡಶೇಷರುದ್ರರು ಸಮರು. ಪದವಿಯ ದೆಶೆಯಿಂದ ಶೇಷದೇವರು ರುದ್ರದೇವರಕ್ಕಿಂತಲೂ ಕಿಂಚಿದುತ್ತಮರೆಂದು ಪೂರ್ವದಲ್ಲಿ ಹೇಳಿರುವರು. ಇವರು ಮೂವರೂ ಸರಸ್ವತೀ ಭಾರತಿಯರಕಿಂತಲೂ 100 ಗುಣಗಳಿಂದ ಅಧ ಮರೆನಿಸುವರು. ಶ್ರೀಕೃಷ್ಣನ ಹೆ-ಡಂದರಾದ ಜಾಂಬವತೀ ಮೊದಲಾದ 6 ಮಂದಿಗಳೂ ಸಮರಾದರೂ ಲಕ್ಷ್ಮೀದೇವಿಯರ ಆವೇಶಬಲದಿಂದ ಜಾಂಬ ವತಿಯು ಮಿಕ್ಕ 5 ಮಂದಿಯರಿಕಿಂತಲೂ ಕಿಂಚಿದುತ್ತಮಳು. ಸ್ವಲ್ಪ ಕಷ್ಟ ಗರುಡಾದಿಗಳಿಗೆ ಸಮಳೆನಿಸುವಳು. ಮಿಕ್ಕ ನೀಲಾದಿ 5 ಮಂದಿ ಸ್ತ್ರೀಯರು ಗರುಡಾದಿಗಳಿಕಿಂತಲೂ 5 ಗುಣಗಳಿಂದ ಅಧಮರೆಂಬ ತಾತ್ಪರ್ಯ. ॥12॥

**೩. ಭಾವದರ್ಪಣ :-**

ಗರುಡಶೇಷರುದ್ರರು ಸರಸ್ವತೀಕಿಂತ ನೂರು ಗುಣ ಕಡಿಮೆ ಎಂತ ಹೇಳು ತ್ತಾರೆ. ಗರುಡೇತಿ । "ಗರುಡಾದಿತ್ರಯಶ್ಚೈತೇ ಸರಸ್ವತ್ಯಾಃ ಶತಾವರಾಃ"— ಇತ್ಯುಕ್ತೇಃ । ಇನ್ನು ಜಾಂಬುವತ್ಯಾದಿ ವಿವರ । ಲಕ್ಷ್ಮ್ಯಾವೇಶ ಇದ್ದ ಕಾಲದಲ್ಲಿ ಶೇಷಗೆ ಸಮಳು. ಲಕ್ಷ್ಮ್ಯಾವೇಶ ಹ್ರಾಸಕಾಲದಲ್ಲಿ ಜಾಂಬವತಿಯು ಪ್ರದ್ಯು ಮ್ನನಕಿಂತ ವಿಂಶದ್ಗುಣಾಧಿಕಳು. ಈಕೆಗೆ ಅನ್ಯರಾದ ನೀಲಾದಿಪಂಚಕರು ಕಿಂಚದೂನರು. ಜಾಂಬವತಿಯು ಚಂದ್ರ ಪುತ್ರಿ ಜೈಗೀಷವ್ಯ ಸಮೇತ ಶ್ರೀನಿ ವಾಸನ ಯಾತ್ರಾ ಮತ್ತು ತಪಸ್ಸು ಸಹ ಮಾಡಿ.ಶ್ರೀಕೃಷ್ಣನ ಪತ್ನಿ ಆಗಿದ್ದಾಳೆ। ಅಗ್ನಿಪುತ್ರಿ ನೀಲಾದೇವಿ ಶ್ರೀಕುಮಾರ ಕ್ಷೇತ್ರದಲ್ಲಿ ಬಹು ತಪಸ್ಸುಮಾಡಿ, ಶ್ರೀನಿ ವಾಸನ ಯಾತ್ರಾ ಅನುಸಂಧಾನಪೂರ್ವಕ ಮಾಡಿದ್ದರಿಂದ,ಶ್ರೀಕೃಷ್ಣನ ಸ್ತ್ರೀ ಆಗಿ ದ್ದಾಳೆ। ನಳಪುತ್ರಿ ಭದ್ರಾದೇವಿ ಪ್ರದಕ್ಷಿಣ ನಮಸ್ಕಾರಸೇವಾರೂಪವಾದ ತಪ ಸ್ಸಿನಿಂದ,ಶ್ರೀಕೃಷ್ಣನ ಸ್ತ್ರೀ ಆದಳು। ವಿವಸ್ವಾನ್ ಸೂರ್ಯಪುತ್ರಿ ಕಾಲಿಂದೀದೇವಿ ಶ್ರೀಹರಿನಾಮ ಮತ್ತು ಧ್ಯಾನಾಖ್ಯತಪಃಪ್ರಭಾವದಿಂದ ಶ್ರೀಕೃಷ್ಣನ ಸ್ತ್ರೀ ಆಗಿ

ದ್ದಾಳೆ । ಬರ್ಹಿಷದಪುತ್ರಿ ಲಕ್ಷಣಾದೇವಿ ಶ್ರೀಹರಿಲಕ್ಷಣಗಳಲ್ಲೇ ಲಕ್ಷಿಟ್ಟು,ಧ್ಯಾನ ಮಾಡಿದ ಪ್ರಯುಕ್ತ, ಶ್ರೀಕೃಷ್ಣನ ಸ್ತ್ರೀ ಆಗಿದ್ದಾಳೆ । ಮಿತ್ರವಿಂದಾದೇವಿ ಶ್ರೀ ಹರಿಕಥಾಶ್ರವಣರೂಪವಾದ ತಪಸ್ಸಿನಿಂದಲೂ, ಅತ್ಯಂತ ಸುದೃಢಜ್ಞಾನ ಭಕ್ತಿ ವೈರಾಗ್ಯಪೂರ್ವಕ ಭಜಿಸಿದ್ದರಿಂದಲೂ,ಶ್ರೀಕೃಷ್ಣನ ಸ್ತ್ರೀ ಆದಳು.

ತತ್ಪ್ರಯುಕ್ತ, ಷಣ್ಮಹಿಷಿಯರಲ್ಲಿ ಲಕ್ಷ್ಮ್ಯಾವೇಶ ಉಂಟು. ಅವರೊಳಗೆ ಜಾಂಬವತೀದೇವಿಯಲ್ಲಿ ವಿಶೇಷ ಆವೇಶ ಉಂಟು-ಎಂತ ತಿಳಿಯಬೇಕು । ಜಾಂಬವತಿಯಲ್ಲಿ ಅಧಿಕಾವೇಶವಿಷಯದಲ್ಲಿ ಪ್ರಮಾಣ । ಉಕ್ತಂಚ ತಾರತಮ್ಯೇ । "ನೀಲಾ ಭದ್ರಾ ಮಿತ್ರವಿಂದಾ ಕಾಲಂದೀ ಲಕ್ಷಣಾ ತಥಾ । ಜಾಂಬವತ್ಯಾಃ ಕಿಂಚಿದೂನಾ ದೇವ್ಯಾವೇಶಯುತಾ ಅಪಿ । ದೇವ್ಯಾವೇಶಪ್ರಾಸಕಾಲೇ ಪ್ರದ್ಯುಮ್ನಾದಶಾಧಿಕೇತಿ"—ಲಕ್ಷ್ಮ್ಯಾವೇಶಪ್ರಾಸಸಮಯದಲ್ಲಿ,ಶೇಷನಕಿಂತಲೂ ಪಂಚ ಗುಣ ಕಡಿಮೆ ಎಂದು ತಿಳಿಯಬೇಕು. ತದುಕ್ತಂ ತಾರತಮ್ಯಕೌಸ್ತುಭೇ । "ವಿಷ್ಣುಸ್ತ್ರೀಯೋಃ ಜಾಂಬವತೀ, ನೀಲಾ, ಭದ್ರಾಚ, ಲಕ್ಷಣಾ । ಕಾಳಿಂದೀ, ಮಿತ್ರವಿಂದಾಚ ಶೇಷಾತ್ಪಂಚ ಗುಣಾಧಮಾ"—ಇತಿ. ॥12॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

"ಗರುಡ"—ಇತಿ ॥ "ಹರಿ"—ಇತಿ ॥ "ದೇವ್ಯಾದೇಶಾತ್ ಪರಾ ತಾಭ್ಯ ಇತಿ ಟೀಕಾಯಾಮ್ ॥ "ದೇವಿ"—ಇತಿ ಶ್ರೀಗುರುದಾಹೃತಾ ॥ ಅಯಂ ಭಾವಃ ಜಾಂಬವತ್ಯಾದಿ ಷಟ್ಕೇ(ಟ್ಕಂ) ಜಾಂಬವತೀ ಸ್ವರೂಪೇಣಾಪ್ಯಧಿಕಾ ॥ ಅನ್ಯಾಃ ಜಾಂಬವತ್ಯಾಃ ಕಿಂಚಿತ್ ಊನಾಃ ॥ ದೇವ್ಯಾವೇಶಯುತಾಃ ಅಪಿ ತಾಃ ಪರಸ್ಪರಂ ಸಮಾಃ ॥ ಸರ್ವಾಃ ಅಪಿ ಗುರುತ್ಮತ್ಪ್ರಮುಖೇಭ್ಯಃ ಪಂಚ ಗುಣಾವರಾಃ ॥ ರಮಾವೇಶಾಧಿಕ್ಯಕಾಲೇ ಜಾಂಬವತೀ ಶೇಷಸಮಾ ॥ ಅನ್ಯಾಃ ಕಿಂಚಿದೂನಾಃ ॥ ರಮಾವೇಶಪ್ರಾಸಕಾಲೇ ಪ್ರದ್ಯುಮ್ನಾತ್ ವಿಂಶದ್ಗುಣಾಧಿಕಾಃ ॥ ಜಾಂಬವತೀ ತಾಭ್ಯಃ ಶೇಷಸಮಾ ॥ ಇತಿ ಮೂಲರೂಪಾಪೇಕ್ಷಯಾ ಮುಕ್ತ್ಯಪೇಕ್ಷಯಾ ಚ ಪ್ರದ್ಯುಮ್ನಾದಿತ್ಯವತಾರಪೇಕ್ಷಯಾ ಕಿಂಚಿದಧಿಕಾ ॥ ತಥೈ

ವಾನ್ಯಾಃ ಸರ್ವದಾನುಪ್ರವಿಷ್ಟಾಃ ತಾಸಾಂ ಮಧ್ಯೇ ಜಾಂಬವತೀ ಪ್ರಧಾನಾ। ರಾಮೇಣ ತುಲ್ಯಾ ಜಾಂಬವತೀ ಪ್ರಿಯತ್ವೇ ಕೃಷ್ಣಸ್ಯಾನ್ಯಾಃ ಕಿಂಚಿದೂನಾಸ್ತು ತಸ್ಯಾಃ ॥ ಯದ್ಯಾವೇಶಃ ಹ್ರಾಸಮುಪೈತಿ ತತ್ರ ಪ್ರದ್ಯುಮ್ನತಃ ವಿಂಶಗುಣಾಧಿಕಾಸ್ತು ॥ ॥12॥

## ಕನ್ನಡಾರ್ಥ

"ಹರಿಮಡದಿ"—ಎಂಬ ಉತ್ತರಾರ್ಧದಲ್ಲಿ ತಿಳಿಯಬೇಕಾದ ವಿಶೇಷ- "ದೇವಿಯ ಆವೇಶದಿಂದ ಜಾಂಬವತಿಯು ಮಿಕ್ಕವರಿಗಿಂತ ಉತ್ತಮಳು."— ಎಂದು ಟೀಕಾವಾಕ್ಯದ ಅರ್ಥ. ದೇವಿಯೆಂದರೆ, ಶ್ರೀಲಕ್ಷ್ಮೀ-ಎಂದೇ ಪ್ರಸಿದ್ಧವಿದೆ. ಜಾಂಬವತೀ ಮುಂತಾದ ಆರು ಮಹಿಷಿಯರಲ್ಲಿ ಜಾಂಬವತಿಯು ಸ್ವರೂಪದಿಂದಲೂ ಅಧಿಕಳು. ಮಿಕ್ಕವರು ಜಾಂಬವತಿಗಿಂತಲೂ ಸ್ವಲ್ಪ ಕಡಿಮೆಯವರು. ಲಕ್ಷ್ಮೀದೇವಿಯ ಆವೇಶಯುಕ್ತರಾದರೂ ಅವರು ಪರಸ್ಪರ ಸಮರು. ಇವರೆಲ್ಲರೂ ಗರುಡ ಮುಂತಾದವರಿಂದ ಐದು ಗುಣಗಳಿಗೆ ಕಡಿಮೆಯಾದವರು. ರಮಾದೇವಿಯ ಆವೇಶವಿರುವ ಸಮಯದಲ್ಲಿ, ಜಾಂಬವತಿಯು ಮಾತ್ರ ಶೇಷನಿಗೆ ಸಮಳಾಗುತ್ತಾಳೆ; ಉಳಿದವರು ಸ್ವಲ್ಪ ಕಡಿಮೆಯಾಗುತ್ತಾರೆ. ರಮಾವೇಶಹ್ರಾಸಕಾಲದಲ್ಲಿ, ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣಗಳಿಂದ ಅಧಿಕರು. "ತಾಭ್ಯಃ ಶೇಷಸಮಾಮತಾ"—ಎಂಬುದಕ್ಕೆ ಮೂಲರೂಪದಲ್ಲಿಯೂ ಮುಕ್ತಿಯಲ್ಲಿಯೂ, ಪ್ರದ್ಯುಮ್ನಾದಿತ್ಯಾವತಾರದಿಂದಲೂ ಸ್ವಲ್ಪ ಅಧಿಕಳು"— ಎಂದು ತಾತ್ಪರ್ಯ. "ಆದರಂತೆ, ಉಳಿದ ಐದು ಸ್ತ್ರೀಯರಲ್ಲೂ ಸಹ ಲಕ್ಷ್ಮೀದೇವಿಯು ಅನುಪ್ರವೇಶಿಸುವಳು. ಅವರಲ್ಲಿ ಜಾಂಬವತಿಯು ಶ್ರೇಷ್ಠಳು. ಜಾಂಬವತಿಯು ಬಲರಾಮನಿಗೆ ಸಮಳು. ಕೃಷ್ಣಪ್ರಿಯತ್ವದಲ್ಲಿ ಉಳಿದವರು ಸ್ವಲ್ಪ ಕಡಿಮೆಯಾದವರು, ರಮಾವೇಶವು ಅಧಿಕವಾಗಿರಲು, ಅವರಲ್ಲಿ ಕೇಶವನು ಹೆಚ್ಚಿಗೆ ಪ್ರೀತನಾಗುವನು. ರಮಾವೇಶವು ಹ್ರಾಸವಾದಾಗ, ಅವರು ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣಗಳಿಂದ ಅಧಿಕವಾಗಿರುತ್ತಾರೆ."—ಎಂಬ ವಚನಗಳು ಆಧಾರವಾಗಿರುತ್ತವೆ. ॥12॥

**ಶ. ಶ್ರೀಗುರುಹೃದಯ ಪ್ರಕಾಶಿಕೆ :–**

ಗರುಡ ಶೇಷ ಶಶಾಂಕದಳಶೇಖರನೆಂಬ ಚಂದ್ರಶೇಖರ, ಎಂವರೆ-ರುದ್ರ-ಇವರು ಮೂರು ಜನರೂ ಜ್ಞಾನಾದಿ ಗುಣದಿಂದ ಸಮರು. ಸರಸ್ವತೀ-ಭಾರತಿಯರಿಗಿಂತ ನೂರು ಗುಣ ಕಡಿಮೆ. ಕೃಷ್ಣಪತ್ನಿ ಜಾಂಬವತೀದೇವಿಯಲ್ಲಿ ರಮಾವೇಶ ಇರುವುದರಿಂದ, ಷಣ್ಮಹಿಷಿಯರಲ್ಲಿ ಆಕೆಯು ಶ್ರೇಷ್ಠಳು. ಮಿಕ್ಕ ಐವರು ಗರುಡಶೇಷರಿಗಿಂತ ಐದು ಗುಣ ಕಡಿಮೆ ಎನಿಸುವರು. ॥12॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ, ಅಹಂಕಾರತತ್ತ್ವಾಭಿಮಾನಿಗಳಾದ ಗರುಡ-ಶೇಷ-ರುದ್ರರ ವಿಚಾರ ತಿಳಿಸುತ್ತಾರೆ- ದಾಸರಾಯರು. ತದನಂತರ, ಶ್ರೀಹರಿಯ ಷಣ್ಮಹಿಷಿಯರ ವಿಚಾರ, ಅವರಲ್ಲಿ ಜಾಂಬವತೀದೇವಿಯ ವಿಷಯ ತಿಳಿಸುತ್ತಾರೆ.

1. **ಗರುಡ :–**

ಕಾಲನಾಮಕನಾದ ಗರುಡನು ಚಿತ್ತಾಭಿಮಾನಿಯು. ಮನಸ್ಸಿನ ಸಂಕಲ್ಪ ವೃತ್ತಿಗೆ ಚಿತ್ತವೆನ್ನುವರು. ಅಂತಹ ಚಿತ್ತಕ್ಕೆ ಅಭಿಮಾನಿ ಗರುಡ. ಕಶ್ಯಪ ಮಹಾಮುನಿಯ ಪುತ್ರ. ವಿನುತಾ ಈತನ ತಾಯಿ. ಅರುಣ (ಸೂರ್ಯ ಸಾರಥಿ) ಈತನ ಅಣ್ಣ. ಶ್ರೀಹರಿಯ ವಾಹನನಾಗಿ ಸೇವಿಸುವನು. ವೈಕಾರಿಕಾಂಹಕಾರಕ್ಕೆ ಅಭಿಮಾನಿ.

2. **ಶೇಷ :–**

ಜೀವನಾಮಕನಾದ ಶೇಷದೇವನು ಬುದ್ಧ್ಯಭಿಮಾನಿಯು. ನಿರ್ಣಯಾತ್ಮಕವಾದ ವಿವೇಚನಾ ವೃತ್ತಿಯೇ ಬುದ್ಧಿಯು. ಕಶ್ಯಪಋಷಿಯಿಂದ ಕದ್ರುವಿ

ನಲ್ಲಿ ಜನಿಸಿದವನು. ತೈಜಸಾಹಂಕಾರಕ್ಕೆ ಅಭಿಮಾನಿ. ಪ್ರಾಕ್ ರುದ್ರನು. ಶ್ರೀಹರಿಯ ಶಯನನಾಗಿ ಸೇವಿಸುತ್ತಿರುವನು.

### 3. ಶಶಾಂಕದಳ ಶೇಖರರು :-

ಶಶಿ-ಎಂದರೆ ಮೊಲ. ಶಶ-ಎಂದರೆ, ತತ್ಸಂಬಂಧವಾದ ಸಾಂಕೇತ. ಮೊಲದ ಚಿಹ್ನೆಯನ್ನು ಹೊಂದಿರುವ ಚಂದ್ರನಿಗೆ ಶಶಾಂಕನೆಂದು ಹೆಸರು. (ಗಂಡು ಜಿಂಕೆಯ ಸಾಂಕೇತವೂ ಚಂದ್ರನಲ್ಲಿದೆ. ಇದರಿಂದ "ಏಣಾಂಕ"ನೆಂದೂ ಕರೆಯುವರು) ಚಂದ್ರನಿಗೆ 16 ಕಳೆಗಳು. ಇವುಗಳಲ್ಲಿ ಸ್ವರೂಪಕಳೆ ಒಂದು. ಉಳಿದ 15 ಕಳೆಗಳು ಶುಕ್ಲಪಕ್ಷದಲ್ಲಿ ಕ್ರಮೇಣ ವೃದ್ಧಿಯಾಗಿ, ಕೃಷ್ಣಪಕ್ಷದಲ್ಲಿ ಕ್ರಮವಾಗಿ ಹ್ರಾಸವಾಗುವುವು. ಅಂತಹ 15 ಕಳೆಗಳಲ್ಲಿ ಒಂದಂಶಕ್ಕೆ ದಳ ವೆನ್ನುವರು. ಅಂತಹ ದಳರೂಪದಲ್ಲಿರುವ ಚಂದ್ರನನ್ನು ತಮ್ಮ ಶಿರದಲ್ಲಿ ಧರಿಸಿದ್ದಾರೆ- ಮಹಾರುದ್ರದೇವರು. ಇದರಿಂದ, ರುದ್ರದೇವರಿಗೆ "ಶಶಾಂಕದಳ ಶೇಖರ"—ಎಂದಿದ್ದಾರೆ ದಾಸರಾಯರು. ಅಂದರೆ, ಚಂದ್ರ ಅಥವಾ ಚಂದ್ರ ಶೇಖರನೆಂದರ್ಥ. **ಚಂದ್ರಾಮಾ ಮನಸೋಜಾತಃ**-ಎಂಬ ಪುರುಷ ಸೂಕ್ತ ವಾಕ್ಯದಂತೆ, ಪುರುಷರೂಪೀ ಶ್ರೀಹರಿಯ ಮನಸ್ಸಿನಿಂದ ಚಂದ್ರನು ಉತ್ಪನ್ನ ನಾದನು. ಅಂದರೆ, ಮನೋಜಾತನಾದ ಚಂದ್ರನನ್ನು ತಮ್ಮ ಮುಡಿಯಲ್ಲಿ ಧರಿಸಿರುವುದು- ರುದ್ರದೇವರು ಮನೋಭಿಮಾನಿಗಳೆಂದು ವಿದಿತವಾಗುವುದು. ತಾಮಸಾಹಂಕಾರಕ್ಕೆ ಅಭಿಮಾನಿಗಳು.

ಅಂದರೆ ಗರುಡ-ಶೇಷ-ರುದ್ರ-ಈ ಮೂವರು ಸ್ವರೂಪತಃ ಸಮರು. ಅಹಂಕಾರಕ್ಕೆತತ್ತ್ವಕ್ಕೆ ಅಭಿಮಾನಿಗಳಾದ ಈಮೂವರೂ ಸಮಾನಕಕ್ಷಾಪನ್ನರು. ಇವರಲ್ಲಿ (1) ಗರುಡದೇವರಿಗೆ ಅವತಾರವಿಲ್ಲ. (2) ಪ್ರಸಕ್ತರುದ್ರ ದೇವರು ಶೇಷಪದವಿಯನ್ನು ಮುಂದಿನ ಬ್ರಹ್ಮಕಲ್ಪದಲ್ಲಿ ಹೊಂದಿ, ಮುಕ್ತ ರಾಗುವರು. (3) ರುದ್ರದೇವರು-ಭಾವೀಶೇಷರು. ಇದರಿಂದ, ಪದವಿ ಪ್ರಯುಕ್ತ,ಶೇಷದೇವರು ರುದ್ರದೇವರಿಗಿಂತ ಕಿಂಚಿದುತ್ತಮರು.

4. **ಭಾರತೀ :–**

ಶ್ರೀವಾಯುದೇವರ ಪತ್ನಿ ಭಾರತೀದೇವಿ. ಭಕ್ತಿಗೆ ಅಭಿಮಾನಿ. ಬುದ್ಧ್ಯಭಿಮಾನಿ ದೇವತಾ. ಅತಿರೋಹಿತವಿಮಲವಿಜ್ಞಾನಿಗಳು. ಪರ ಶುಕ್ಲತ್ರಯವರ್ಗಕ್ಕೆ ಸೇರಿದವರು.

5. **ಸರಸಿಜಾಸನ ಪತ್ನೀ :–**

ಸರಸಿಜ—ಎಂದರೆ ನೀರಿನಲ್ಲಿ ಉತ್ಪನ್ನವಾಗುವ ಕಮಲ ಎಂದರ್ಥ. ಶ್ರೀಮನ್ನಾರಾಯಣನು ಪದ್ಮನಾಭರೂಪನಾಗಿ ಕ್ಷೀರಸಮುದ್ರದಲ್ಲಿ ಪವಡಿಸಿದಾಗ, ಅವನ ನಾಭೀ ಎಂಬ ಸರಸ್ಸಿನಿಂದ ಅಪ್ರಾಕೃತವಾದ ಕಮಲವು ಉತ್ಪನ್ನವಾಯಿತು. ಶ್ರೀಹರಿಯ ಸಂಕಲ್ಪದ ಫಲವಾಗಿ ಉತ್ಪನ್ನವಾದ ನಾಭೀಕಮಲದಲ್ಲಿ ಲಕ್ಷ್ಮೀ ಪ್ರವೇಶಿಸಿದ್ದರಿಂದ, ಅದು ಸುವರ್ಣಾತ್ಮಕವಾಯಿತು. ಲಕ್ಷ್ಮ್ಯಾತ್ಮಕವಾದ ಶ್ರೀಹರಿಯ ನಾಭೀಕಮಲದಲ್ಲಿ ಉತ್ಪನ್ನವಾದವರೇ ಚತುರ್ಮುಖ ಬ್ರಹ್ಮದೇವರು. ಅವರಿಗೆ "ಸರಸಿಜಾಸನ"—ಎಂತ ನಾಮ, ಕಮಲಾಸನರಾದ ಬ್ರಹ್ಮದೇವರ ಪತ್ನಿ ಶ್ರೀಸರಸ್ವತೀ. ವೇದಾಭಿಮಾನಿ. ಕೈಯ್ಯಲ್ಲಿ ಕಚ್ಛಪೀ ಎಂಬ ವೀಣೆಯನ್ನು ಧರಿಸಿ, ವೇದಮಂತ್ರಗಳನ್ನು ನಾದತರಂಗಳಿಂದ ಹೊರ ಹೊಮ್ಮಿಸುತ್ತಾರೆ. ಭಾರತೀದೇವಿಯು ಭಾವೀಸರಸ್ವತಿ ಆಗಿರುವುದರಿಂದ, ಪದವಿನಿಮಿತ್ತ ಸರಸ್ವತಿ- ಭಾರತಿಗಿಂತ ಕಿಂಚಿದಧಿಕರು.

6. **ಹರಿಮಡದಿ :–**

ಶ್ರೀಹರಿಯು ಕೃಷ್ಣಾವತಾರ ಮಾಡಿದ ಸಮಯದಲ್ಲಿ, ಅವನಿಗೆ ನೀಲ, ಭದ್ರಾ, ಮಿತ್ರವಿಂದಾ, ಕಾಳಿಂದಿ, ಲಕ್ಷಣಾದೇವಿ ಮತ್ತು ಜಾಂಬವತೀ– ಎಂಬ ಆರು ಮಂದಿ ಷಣ್ಮಹಿಷಿಯರು. ಶ್ರೀಲಕ್ಷ್ಮ್ಯವತಾರರಾದ ರುಕ್ಮಿಣೀ ಮತ್ತು ಸತ್ಯಭಾಮಾದೇವಿ ಸೇರಿದರೆ, ಕೃಷ್ಣನ ಅಷ್ಟಮಹಿಷಿಯರಾಗುವರು.

## 7. ಜಾಂಬವತಿಯೊಳು :-

ಶ್ರೀಕೃಷ್ಣನ ಷಣ್ಮಹಿಷಿಯರ ಪೈಕಿ ಜಾಂಬವತೀದೇವಿಯು ಒಬ್ಬಳು. ಭಲ್ಲೂಕರಾಜನಾದ ಜಾಂಬವಂತನ ಸಾಕುಪುತ್ರಿ ಜಾಂಬವತೀ. ಸ್ಯಮಂತಕ ಮಣಿಯ ಪ್ರಸಂಗದಲ್ಲಿ, ಶ್ರೀಕೃಷ್ಣನು ಜಾಂಬವಂತನ ಗುಹೆಯನ್ನು ಪ್ರವೇಶಿಸಿ, ಅವನೊಡನೆ ಯುದ್ಧಕ್ಕೆ ನಿಂತನು. ಕೊನೆಯಲ್ಲಿ ರಾಮರೂಪವನ್ನು ತೋರಿಸಲಾಗಿ, ಜಾಂಬವಂತನು ಸಾಷ್ಟಾಂಗಪ್ರಣಾಮಗೈದು, ಜಾಂಬವತಿಯನ್ನು ಶ್ರೀಕೃಷ್ಣನಿಗೆ ಕನ್ಯಾದಾನಪೂರ್ವಕ ಲಗ್ನ ಮಾಡಿಕೊಟ್ಟನು. ಜಾಂಬವತಿಯಲ್ಲಿ ನಿತ್ಯಯೌವ್ವನೆಯೂ, ಮಹಾಕಾಂತಿಸಂಪನ್ನಳೂ ಆದ ಶ್ರೀಲಕ್ಷ್ಮೀಯ ಆವೇಶ ನೀಲಾದಿ ಇತರ ಐದು ಮಂದಿಗಳಿಗಿಂತ ಅಧಿಕವಾಗಿದೆ ಶ್ರೀಹರಿಯು ಅಮೃತಮಥನಕಾಲದಲ್ಲಿ, ಧನ್ವಂತ್ರೀರೂಪಧರಿಸಿ, ತನ್ನ ಹಸ್ತದ್ವಯಗಳಲ್ಲಿ ಅಮೃತದಿಂದ ತುಂಬಿದ ಸುವರ್ಣಕಲಶವನ್ನು ಹಿಡಿದುಕೊಂಡು, ಸಮುದ್ರಗರ್ಭದಿಂದ ಮೇಲೆದ್ದನು. ಆಗ ಶ್ರೀಹರಿಯ ಮಾಯೆಯಿಂದ ಅವನ ಆನಂದಭಾಷ್ಪರೂಪವಾದ ಕಣ್ಣೀರಿನ ಹನಿಗಳು ಅಮೃತದ ಮೇಲೆ ಬಿತ್ತು. ಆಗ ಜಾಂಬವತಿಯೇ ತುಳಸೀ ನಾಮದಿಂದ ಉದ್ಭವವಾದಳು. ಹೀಗೆ, ಶ್ರೀಹರಿಯನೇತ್ರೋದ್ಭವೆ- ತುಳಸೀ. ಅವಳೇ ಜಾಂಬವತೀ. ಶ್ರೀರುದ್ರದೇವರ ಜೈಗೀಷವ್ಯರೂಪದಿಂದ ಜಾಂಬವತಿಗೆ ಜ್ಞಾನೋಪದೇಶ. ಈ ಕಾರಣದಿಂದ ತಾರತಮ್ಯಕ್ರಮದಲ್ಲಿ ತುಳಸೀ ಪಾರ್ವತೀ ನಂತರ, ರುದ್ರದೇವರ ಕೆಳಗೆ ಬರುತ್ತಾಳೆ. ಪಾರ್ವತೀಸ್ತೋತ್ರಾನಂತರ, ತುಳಸೀ ಸ್ತುತಿಮಾಡಬೇಕು.

## ಮುಖ್ಯವಿಚಾರ :-

(1) ಜಾಂಬವತಿಯಲ್ಲಿ ಪೂರ್ಣಲಕ್ಷ್ಮ್ಯಾವೇಶವಿರುವ ಸಮಯದಲ್ಲಿ, ಅವಳು ಶೇಷನಿಗೆ ಸಮಾನಳೆನಿಸುತ್ತಾಳೆ.

(2) ಆವೇಶಹ್ರಾಸವಾದ ಸಮಯದಲ್ಲಿ, ಪ್ರದ್ಯುಮ್ನನಿಗಿಂತ 20 ಗುಣಗಳಿಂದ ಅಧಿಕಳು.

ಶೇಷನಿಗಿಂತ (ಬಲರಾಮ) 5 ಗುಣ ಕಡಿಮೆ ಎನಿಸುತ್ತಾಳೆ. ಇದೇ ಉಳಿದ 5 ಮಹಿಷಿಯರಿಗಿಂತ ಜಾಂಬವತಿಯಲ್ಲಿರುವ ವೈಶಿಷ್ಟ್ಯ.

**ಪ್ರಮಾಣ :–**

(1) "ತಯೈವಾನ್ಯಾಃ ಸರ್ವದಾನುಪ್ರವಿಷ್ಟಾಸ್ತಾಸಾಂ
ಜಾಂಬವತೀ ಪ್ರಧಾನಾ"–
— ನಿರ್ಣಯೋಕ್ತಿ.

(2) ರಮಾವೇಶಾಧಿಕ್ಯಕಾಲೇ ಜಾಂಬವತೀ ಶೇಷಸಮಾ |
ಅನ್ಯಾಃ ಕಿಂಚಿದೂನಾಃ ||
ರಮಾವೇಶ ಹ್ರಾಸಕಾಲೇ ಪ್ರದ್ಯುಮ್ನಾತ್ ವಿಂಶದ್ಗುಣಾ
ಧಿಕಾಃ ||
— ತಾರತಮ್ಯ ಕೌಸ್ತುಭೇ ||

8. ನೀಲಾದಿ ಷಣ್ಮಹಿಷಿಯರು ಗರುಡಶೇಷ ರುದ್ರರಿಗಿಂತ ಐದು ವಿಜಾತೀಯ ಗುಣಗಳಿಂದ ಬಲಜ್ಞಾನಾದಿ ಸರ್ವವಿಷಯಗಳಲ್ಲಿ ನ್ಯೂನರಾಗಿದ್ದಾರೆ. (ಜಾಂಬವತಿಗೆ ರಮಾವೇಶ ಹ್ರಾಸನು.) ||12||

★★

## ಪದ್ಯ-೧೩

**ಮೂಲ :-**

ನೀಲ ಭದ್ರಾ ಮಿತ್ರವಿಂದಾ ।
ಮೇಲೆನಿಪ ಕಾಳಿಂದಿ ಲಕ್ಷಣೆ ।
ಬಾಲೆಯರಿಗಿಂತಧಮ ವಾರುಣಿ ಸೌಪರಣಿ ಗಿರಿಜಾ ॥
ಶ್ರೀಲಕುಮಿಯಯುತ ರೇವತೀ ಸಿರಿ ।
ಮೂಲರೂಪದಿ ಪೇಯಳೆನಿಪಳು ।
ಶೈಲಜಾದ್ಯರು ದಶಗುಣಾಧಮ ತಮ್ಮ ಶತಿಗಳಿಗೆ ॥೧೩॥

**ಅವತರಣಿಕೆ :-**

ಶ್ರೀಕೃಷ್ಣನ ಷಣ್ಮಹಿಷಿಯರ ಹಾಗೂ ವಾರುಣೀ ಸೌಪರ್ಣೀ, ಪಾರ್ವತೀ –ಇವರ ವಿಚಾರವನ್ನು ತಿಳಿಸುತ್ತಾರೆ. ॥13॥

**ಪ್ರತಿಪದಾರ್ಥ :-**

**ನೀಲಾ** = ನೀಲಾದೇವಿ, **ಭದ್ರಾ** = ಭದ್ರಾದೇವಿ, **ಮಿತ್ರವಿಂದಾ** = ಮಿತ್ರವಿಂದಾದೇವಿ, **ಮೇಲೆನಿಪ** = ರಮಾವೇಶಾಧಿಕ್ಯದಿಂದ ನೀಲಾದಿಗಳಿಗಿಂತಲೂ ಅಧಿಕಳೆನಿಸುವ ಜಾಂಬವತೀದೇವಿ, **ಕಾಳಿಂದಿ** = ಕಾಳಿಂದೀದೇವಿ, **ಲಕ್ಷಣೆ** = ಲಕ್ಷಣಾದೇವಿ–ಈ ಆರು ಮಂದಿಯೂ ಶ್ರೀಕೃಷ್ಣನ ಷಣ್ಮಹಿಷಿಯರು. **ಬಾಲೆಯರಿಗಿಂತಧಮ** = ಪೂರ್ವೋಕ್ತ ನೀಲಾದಿ ಷಣ್ಮಹಿಷಿಯರಿಗಿಂತ ಐದು ವಿಜಾತೀಯ ಗುಣಗಳಿಂದ ಅಧಮರಾದ, **ವಾರುಣೀ** = ಶೇಷದೇವರ ಪತ್ನಿ ಶ್ರೀವಾರುಣೀದೇವಿ, **ಸೌಪರಣಿ** = ಗರುಡದೇವರ ಪತ್ನಿ ಶ್ರೀಸೌಪರ್ಣೀದೇವಿ.

**ಗಿರಿಜಾ** = ರುದ್ರದೇವರ ಪತ್ನಿ ಗಿರಿಜಾನಾಮಕಳಾದ ಪಾರ್ವತೀದೇವಿ, ಇವರಲ್ಲಿ **ಶ್ರೀಲಕುಮಿಯುತ** = ಕಾಂತಿಸಂಪನ್ನರಾದ ಶ್ರೀಲಕ್ಷ್ಮೀದೇವಿಯ ಆವೇಶಯುಕ್ತರಾದ **ರೇವತಿ** = ಬಲರಾಮನ ಪತ್ನಿ ರೇವತೀದೇವಿ, **ಮೂಲರೂಪದಿ** = ತನ್ನ ಮೂಲರೂಪವಾದ ವಾರುಣಿಯು, **ಪೇಯಳೆನಿಪಳು** = ಪೇಯ ಎಂಬ ಹೆಸರಿನಿಂದ ವಿಖ್ಯಾತಳು. **ಶೈಲಜಾದ್ಯರು** = ಹಿಮಾಚಲನ ಪುತ್ರಿಯಾದ ಪಾರ್ವತೀ ಆದಿಯಾಗಿ ಮೂರು ಮಂದಿ. **ತಮ್ಮ ಪತಿಗಳಿಗೆ** = ತಮ್ಮ ತಮ್ಮ ಪತಿಗಳಿಗಿಂತ, **ದಶಗುಣಾಧಮರು** = ಹತ್ತು ವಿಜಾತೀಯ ಗುಣಗಳಿಂದ ನ್ಯೂನರಾಗಿದ್ದಾರೆ. ॥13॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಷಣ್ಮಹಿಷಿಯಾದ ವಿಚಾರವೂ, ವಾರುಣೀ-ಮೊದಲಾದವರ ವಿಚಾರವೂ ಹೇಳತಾರೆ.

ಕೃಷ್ಣದೇವರ ಪತ್ನೀರಾದ ಆರು ಮಂದಿಯರ ಹೆಸರುಗಳು—1. ನೀಲಾದೇವಿ, 2. ಭದ್ರಾದೇವಿ, 3. ಮಿತ್ರವಿಂದಾದೇವಿ, 4. ರಮಾವೇಶ ಆಧಿಕ್ಯದಿಂದ ನೀಲಾದಿಗಳಿಗಿಂತಲೂ ಅಧಿಕರೆನಿಸುವ ಜಾಂಬವತೀದೇವೇರು, 5. ಕಾಳಿಂದೀದೇವೇರು, 6. ಲಕ್ಷಣಾದೇವೇರು- ಅಂತೂ ಆರು ಮಂದಿ ಒಳಗೆ, ಜಾಂಬವತೀದೇವೇರು ತುಲಸ್ಯತ್ವೇನ ಅವತಾರ ಮಾಡೋವರಾಗಿದ್ದಾರೆ.

**ಪ್ರಮಾಣ :– ತುಲಸೀ ಜಾಂಬವತೀತ್ಯುಕ್ತಾ ಲಕ್ಷ್ಮ್ಯಾವೇಶೇನ ಸಂಯುತಾ ।**

**ತಯಾ ಸಂಪೂಜಯೇದ್ಭಕ್ತ್ಯಾ ವಿಷ್ಣುಲೋಕಮವಾಪ್ನುಯಾತ್॥**

**ಇತೀ ಪಾದ್ಮೆ– ಉತ್ತರಖಂಡೇ-ಉಮಾ ಮಹೇಶ್ವರಸಂವಾದೇ.**

ಪೂರ್ವೋಕ್ತ ನೀಲಾದಿ ಆರು ಮಂದಿಯರಿಗಿಂತಲೂ ಐದು ವಿಜಾತಿಗುಣ ದಿಂದ ಅಧಮರು ದಾರೆಂದರೆ, ಶೇಷದೇವರ ಪತ್ನಿ ವಾರುಣೀದೇವೇರು, ಗರುಡದೇವರ ಪತ್ನಿ ಸೌಪರ್ಣೀದೇವೇರು, ರುದ್ರದೇವರ ಪತ್ನಿ ಪಾರ್ವತೀ ದೇವೇರು. ಹಿಮಾಚಲನ ಪುತ್ರಿಯಾದ ಪಾರ್ವತೀ-ಮೊದಲಾದ ಈ ಮೂರು ಮಂದಿ ಅವರವರ ಪತಿಗಳಿಗಿಂತ, ರುದ್ರದೇವರಿಗಿಂತಲೂ ಪಾರ್ವತೀದೇವಿ ಹತ್ತು ಗುಣ, ಶೇಷದೇವರಿಗಿಂತಲೂ ವಾರುಣೀದೇವಿ ಹತ್ತುಗುಣ, ಗರುಡ ದೇವರಿಗಿಂತಲೂ ಸೌಪರ್ಣೀದೇವಿ ಹತ್ತುಗುಣ-ಈ ಪ್ರಕಾರ ಹತ್ತುಗುಣ ಅಧ ಮರು. ಗರುಡಾದಿಗಳಿಗಿಂತಲೂ ನೀಲಾದಿಗಳು ಐದು ಗುಣ ಕಡಿಮೆ, ನೀಲಾದಿ ಗಳಿಗಿಂತಲೂ ಪಾರ್ವತ್ಯಾದಿಗಳು ಐದುಗುಣ ಕಡಿಮೆ, ಎರಡೂ ಸೇರಿದರೆ ಹತ್ತುಗುಣ ಆಯಿತು. ಗರುಡಾದಿಗಳಿಗೆ ಪಾರ್ವತ್ಯಾದಿಗಳು ಹತ್ತುಗುಣ ಕಡಿಮೆ-ಎಂಬುದು ವಿವಕ್ಷಾ ಎಂತ ತಿಳಿಯಬೇಕು. ಶೇಷದೇವರ ಪತ್ನಿಗೆ ಮೂಲ ರೂಪ ವಾರುಣಿ ಎಂತ ಹೆಸರು. ಈ ಮೂಲರೂಪದಲ್ಲಿ ಶ್ರೀದೇವೇರ ಆವೇ ಶವೂ ಅವತಾರಗಳು. ಬಲರಾಮದೇವರ ಪತ್ನಿ ರೇವತೀದೇವಿ ಹೇಯ ಎಂತ ಸಾಂಕೇತರೂಪ. ಈ ವಾರುಣೀದೇವಿಯರು ಎರಡು ಅವತಾರರೂಪ ಉಳ್ಳವ ರೆಂದು ಎನಿಸೋವರಾಗುತಾರೆ. ಈ ಎರಡು ರೂಪಗಳಲ್ಲಿ ಕಾಂತಿಸಂಪನ್ನರಾದ ಲಕ್ಷ್ಮೀದೇವೇರ ಆವೇಶದಿಂದ ಯುಕ್ತರಾಗಿ ಇದ್ದಾರೆ. ಇಲ್ಲಿಗೆ ಸೌಪರ್ಣ್ಯಾದಿ ಗಳ ವಿಚಾರ ಮುಗಿಯಿತು. ಸೌಪರ್ಣೀ, ಪಾರ್ವತೀಗೆ ಅವತಾರಗಳು ಹೇಳ ಲಿಲ್ಲ. ॥13॥

## ೨. ಭಾವಪ್ರಕಾಶಿಕೆ :-

ಜಾಂಬವತೀ ಮೊದಲಾದವರಕಿಂತಲೂ ವಾರುಣೀ, ಸೌಪರ್ಣೀ, ಪಾರ್ವತೀ, ಮೂವರೂ 5 ಗುಣಗಳಿಂದ ಅಧಮರೆನಿಸುವರು. ರೇವತೀ ಎಂಬ ರೇವತರಾಜನ ಮಗಳಾದ ಬಲರಾಮನ ಹೆಂಡತಿಯು, ಬಲರಾಮನಲ್ಲಿ ಹೇಗೆ ಪರಮಾತ್ಮನ ಶುಕ್ಲಕೇಶಾವೇಶವಿರುವುದೋ, ಹಾಗೆ ಲಕ್ಷ್ಮೀದೇವಿಯರ ಅಂಶದಿಂದ ಕೂಡಿದ ವಾರುಣೀರೂಪವು. ಈಕೆಗೆ ಶ್ರೀ ಎಂದು ಹೆಸರುಂಟು.

ಇದೇ ವಾರುಣಿಯು ಮೂಲರೂಪದಿಂದ ಮದ್ಯದರೂಪಳಾಗಿ ಬಲರಾಮನನ್ನು ತೃಪ್ತಿಪಡಿಸಿರುವಳು. ಭಾಗವತ ದಶಮಸ್ಕಂಧ 88ನೆಯ ಅಧ್ಯಾಯದಲ್ಲಿ "ರಾಮ ; ಕ್ಷಪಾಸು ಭಗವಾನ್ ಗೋಪೀನಾಂ ರತಿಮಾವಹನ್ ॥17॥ ಪೂರ್ಣಚಂದ್ರಕರಾಮೃಷ್ಟೇ ಕೌಮುದೀ ಗಂಧವಾಯುನಾ ॥ ಯಮುನೋಪವನೇ ರೇಮೇ ಸೇವಿತೇ ಸ್ತ್ರೀಗಣೈರ್ವೃತಃ ॥18॥ ವರುಣಪ್ರೇಷಿತಾ ದೇವೀ ವಾರುಣೀ ವೃಕ್ಷಕೋಟರಾತ್ ॥ ಪತಂತೀ ತದ್ವನಂ ಸರ್ವಂ ಸೌರಭೇಣಾಂಧ್ಯವಾಸಯುತ ॥ ॥19॥ ತಂ ಗಂಧಂ ಮಧುಧಾರಾಯಾಃ ವಾಯುನೋಪಹೃತಂ ಬಲಃ ॥ ಆಘ್ರಾಯೋಪಗತಸ್ತತ್ರ ಲಲನಾಭಿಃ ಪಪೌಸಮಂ. ॥20॥

ಬಲರಾಮನು ರಾತ್ರಿಕಾಲಗಳಲ್ಲಿ ಗೋಪಿಕಾಸ್ತ್ರೀಯರಿಗೆ ಆನಂದ, ವನ್ನುಂಟುಮಾಡುತ್ತಾ, ಪೂರ್ಣಚಂದ್ರನ ಕಿರಣಗಳಿಂದ ಕೂಡಿ, ಕುಮುದ ಪುಷ್ಪಾದಿಗಳ ವಾಸನೆಯಿಂದ ಕೂಡಿದ ಗಾಳಿಯಿಂದ ಸೇವಿತವಾದ ಯಮುನಾ ನದೀತೀರದಲ್ಲಿ ಸ್ತ್ರೀಗಣಗಳಿಂದ ಕೂಡಿ ರಮಿಸುತ್ತಿದ್ದನು. ಆ ಸಮಯದಲ್ಲಿ, ವರುಣನಿಂದ ಕಳುಹಿಸಲ್ಪಟ್ಟ ವಾರುಣೀ- ಎಂಬ ಶೇಷದೇವರ ಹೆಂಡತಿಯು, ಬಲರಾಮನ ಸೇವಾರ್ಥವಾಗಿ.ವೃಕ್ಷದ ಮಧ್ಯದಲ್ಲಿರುವ ಟೊಂಗೆಯಿಂದ ಮದ್ಯದ ರೂಪಳಾಗಿ ಹೊರಟು, ತನ್ನ ಸುವಾಸನೆಯಿಂದ ಆ ವನವನ್ನೆಲ್ಲಾ ವ್ಯಾಪಿಸಿದಳು. ಬಲರಾಮನು ಗಾಳಿಯಿಂದ ಬಂದ ಆ ವಾಸನೆಯನ್ನು ಆಘ್ರಾಣಿಸಿ, ಸ್ತ್ರೀಗಳಿಂದ ಸಮೇತನಾಗಿ ಅಲ್ಲಿಗೆ ಬಂದು, ಆ ಮಧುವನ್ನು ಪಾನಮಾಡಿದರು-ಎಂದು ಹೇಳಿರುವರು. ಅದೇ ಅಭಿಪ್ರಾಯದಿಂದ, ದಾಸರಾಯರು ಮೂಲರೂಪದಿ ಪೇಯಳೆನಿಪಳು-ಎಂದು ಹೇಳಿರುವರು. ಈ ಪಾರ್ವತೀ-ಮೊದಲಾದವರು ತಮ್ಮ ಪತಿಗಳಿಕಿಂತಲೂ 10 ಗುಣಗಳಿಂದ ಅಧಮರೆನಿಸುವರು. ॥13॥

## ೩. ಭಾವದರ್ಪಣ :–

ಸೌಪರ್ಣೀ, ವಾರುಣೀ, ಅಪರ್ಣಾ-ಈ ಮೂರೂ ಮಂದಿ ತಮ್ಮ ಪತಿಗಳಿಗಿಂತ ಹತ್ತುಗುಣಕ್ಕೆ ನೀಚರೆಂದು ಹೇಳುತ್ತಾರೆ । ನೀಲೇತಿ । ವಾರುಣೇತಿ ।

**ಈಕೆಗೆ ರೇವತಿ–** ಎಂತಲೂ **ಶೇಯರೂಪಾ** ಎಂತಲೂ-ನಾಮದ್ವಯ. ಶ್ರೀ ಆವೇಶಯುಕ್ತಳು-ಎಂದಕ್ಕೆ ಪ್ರಮಾಣ । "ರೇವತಿ ಶ್ರೀಯುತಾ ಶ್ರೀಶ್ಚ ಪೇಯ ರೂಪಾಚ ವಾರುಣೀ । ಸೌಪರ್ಣೀ, ಪಾರ್ವತೀ ಚೈವತಿಸ್ರಃ ಶೇಷಾದ್ವರಾ ಧಮಾ"—ಇತಿ ವಚನಾತ್ । ಸೌಪಾಪರಂ ರೂಪಮಾಸ್ಥಾಯ ಜಾಗಾತ್ಸ್ರೀ ರಿತ್ಯಾಖ್ಯಾಸೇಂದಿರಾವೇಶಮಗ್ರ್ಯಮಿತ್ರಿ"-ನಿರ್ಣಯೋಕ್ತೇಃ। ಗರುಡ ಸೌಪರ್ಣೀ-ಈ ಇಬ್ಬರಿಗೂ ಅವತಾರವಿಲ್ಲೆಂದು ತಿಳೀತಕ್ಕದ್ದು । ಶೈಲಜಾ ಹಿಮವತ್ಪರ್ವತ ಪುತ್ರೀ-ಪಾರ್ವತಿಗೆ ವಾರುಣೀ ಪದದಿಂದ ಮುಕ್ತಿ ಸಿದ್ಧವೆಂದು ತಿಳಿಬೇಕು.

॥13॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

"ನೀಲ"–ಇತಿ ॥ "ಅಧಮ"–ದ್ವಿಗುಣೇನ ॥ "ಶ್ರೀ"–ಇತಿ ॥ ಅತ್ರ ವಿಶೇಷ :—"ವಾರುಣ್ಯಾಃ ಶ್ರೀಃ ಇತಿ ಆಖ್ಯಾ ಅಸ್ತಿ ॥ ತದ್ರೂಪೇಣ ರಮಾ ರೂಪೇಣ ಚಾವಿಷ್ಟಾ ಯಾ ರೇವತೀ ತಯಾ ಭೋಗಸ್ತು ಯದಾವೇಶ ಬಹುಲಃ ಸ್ಯಾತ್ ಹರೇಃ ತದೈವ ॥ ಸದಾ ತು ವಾರುಣ್ಯವತಾರ ರೇವತಿ ಭೋಗಃ ಇತಿ ॥ "ತಪಃ ಕರ್ತುಂ ಪರಃ ವಿಷ್ಣುಃ ಜಗಾಮ ಫಣಿನಃ ಪ್ರಿಯಾ ॥ ರಮಾ ಪ್ರೀತ್ಯೈ ತಪಶ್ಚಕ್ರೇ ಪ್ರೀತಾ ಸಾಪಿ ವರಂ ದದೌ ॥ ರೌಹಿಣೇಯಃ ಯದಾನಾಥಃ ತದಾ ಸ್ಯಾತ್ ಅಂಶವಾನ್ ಹರೇಃ ॥ ಬಲಭದ್ರಸ್ಯ ರಂತುಃ ತ್ವಂ ಮದಾವಿಷ್ಟಾ ಭವಿಷ್ಯಸಿ"—ಇತ್ಯಂತಸೇನ ಇಂದಿರಾವೇಶ ಬೀಜಮುಕ್ತಂ ಅನ್ಯತ್ರ ॥ "ಮೂಲರೂಪದಿ"—ಸಪ್ತಮೀ ॥ ಶ್ರೀ ತದಾಖ್ಯಾ ತದಾವಿಷ್ಟಾ ಸದಾ ರೇವತೀತ್ಯರ್ಥಃ ॥ "ಪೇಯ"—ಮದ್ಯ. ತನ್ನಾಮತ್ವಂ ತನ್ಮಾನಾತ್"-ಸ ವಾರುಣೀ ಸಮಾಹ್ವಯಾಂ ಅವಾಪ ರೇವತೀವಪ್ ॥ ಛಾಯರ್ಾಪ್ಯಾಯಾತ್ ವಾರುಣೀನಾಮ ಪೂರ್ವಾ ಸೈವಾಪರಂ ರೂಪಮಾಸ್ಥಾಯಾ ಜಾಗಾತ್ ॥ ಶ್ರೀರಿತ್ಯಾಖ್ಯಂ ಸೇಂದಿರಾವೇಶಮಗ್ರ್ಯಂ ತಸ್ಯಾಃ ವಾರುಣ್ಯಾಃ ಪ್ರತಿಮಾ ಪೇಯ ರೂಪಾ ॥ ನೀಲವರ್ಣ ಕೃಷ್ಣಮಾಪ್ತಾ ನೀಲಾ ॥ ಗುಣ್ಯೈಃ ಭದ್ರಾ ಮಿತ್ರಂ ಹರಿಂ ಪ್ರಾಪ್ತುಕಾಮಾ ಮಿತ್ರವಿಂದಾ ॥ ಶ್ರವಣೇನ ಹರಿಂ ಮಿತ್ರಂ ಪ್ರಾಪ್ತಾಃ ॥ ಕಾಲಿಂದೀ ಯಮುನಾನುಜಾ॥ಲಕ್ಷಣಾನುರೀರ್ಯ ಕ್ರಮಾತ್ ಸಪ್ತಪಿಂಡಲ್ಲಿಗೋಪೇತಾ ಲಕ್ಷಣಾ. ॥13॥

## ಕನ್ನಡಾರ್ಥ

ನೀಲಾ, ಭದ್ರಾ, ಮಿತ್ರವಿಂದಾ, ಕಾಳಿಂದೀ, ಲಕ್ಷಣಾ- ಇವರುಗಳಿಂದ ವಾರುಣೀ, ಸೌಪರ್ಣೀ ಪಾರ್ವತೀದೇವಿಯರು ಎರಡು ಗುಣಗಳಿಂದ ಕಡಿಮೆ ಯಾದವರು. "ಶ್ರೀ"-ಎಂಬಲ್ಲಿ ತಿಳಿಯಬೇಕಾದ ವಿಶೇಷ. ವಾರುಣೀದೇವಿಗೆ "ಶ್ರೀ"—ಎಂದು ಹೆಸರು ಇದೆ. ಶ್ರೀದೇವಿಯು ಈ ರೂಪದಿಂದ ವಾರುಣಿ ಯಲ್ಲಿ ಆವಿಷ್ಟರಿರುತ್ತಾರೆ. ರೇವತಿಯು ವಾರುಣಿಯ ಅವತಾರಳೂ, ರಮಾ ವೇಶಯುಕ್ತಳೂ ಆಗಿರುತ್ತಾಳೆ. ರಮಾವೇಶವು ಅಧಿಕವಾದಾಗ, ಶ್ರೀಹರಿಯು (ಬಲರಾಮನಲ್ಲಿರುವ ಶುಕ್ಲಕೇಶಾತ್ಮಕ ಹರಿರೂಪ) ವಾರುಣ್ಯಾವತಾರಳಾದ ರೇವತಿಯಲ್ಲಿ ರಮಾ ಸಂಭೋಗ ಮಾಡುತ್ತಾನೆ. ಇಲ್ಲಿ ಹೀಗೆ ಕಥಾಪ್ರಸಂಗ ವಿದೆ.

"ನೆರೆಸು ತಪಸ್ಸನ್ನು ಆಚರಿಸಲು ಹೊರಟನು. ಶೇಷಪತ್ನಿಯಾದ ವಾರುಣಿಯೂ ಸಹ, ರಮಾದೇವಿಯ ಪ್ರೀತಿಗಾಗಿ ತಪಸ್ಸನ್ನು ಆಚರಿಸಿದಳು. ಆಗ ಪ್ರೀತಳಾಗಿ, ರಮಾದೇವಿಯು "ನಿನ್ನ ಪತಿ ಹರಿಯ ಆವೇಶಯುಕ್ತನಾಗಿ ಬಲಭದ್ರನಾಗಿ ಅವತರಿಸಲು, ಆವಾಗ ನನ್ನ ಆವೇಶದಿಂದ ಯುಕ್ತಳಾಗುವಿ"- ಎಂದು ವರವನ್ನಿತ್ತಳು. ಹೀಗೆ, ಬೇರೆ ಕಡೆಯಲ್ಲಿ ಇಂದಿರಾವೇಶಕಾರಣ ವನ್ನು ಹೇಳಿರುತ್ತಾರೆ. ಮೂಲರೂಪದಲ್ಲಿ ಅವಳು ಪೇಯರೂಪಳಾಗಿದ್ದವಳು. ಎಂದರೆ, ಪೇಯಾಭಿಮಾನಿನಿಯಾದುದರಿಂದ ಪೇಯಳೆನಿಸುವಳು. "ಬಲ ರಾಮನು ವಾರುಣೀ ಅವತಾರಳಾದ ರೇವತಿಯನ್ನು ಮದುವೆಯಾದನು. ಅವಳು "ಶ್ರೀ"-ಎಂಬ ಲಕ್ಷ್ಮೀದೇವಿಯ ಆವೇಶಯುಕ್ತಳು. ಹಾಗೂ ಮೂಲ ರೂಪದಲ್ಲಿ ಪೇಯಾಭಿಮಾನಿಯಾದವಳು ನೀಲವರ್ಣದ ಕೃಷ್ಣನನ್ನು ಹೊಂದಿ ದ್ದರಿಂದ ನೀಲಾ, ಗುಣಗಳಿಂದ ಭದ್ರಳಾದವಳು ಭದ್ರಾ ; ಪವಿತ್ರನಾದ ಹರಿ ಯನ್ನು ಹೊಂದಿರುವಳು. ಅಥವಾ ಶ್ರಣದಿಂದ ಹರಿಯನ್ನು ಮಿತ್ರನನ್ನಾಗಿ ಹೊಂದಿದವಳು ಮಿತ್ರವಿಂದಾ ; ಯಮುನೆಯ ತಂಗಿಯೇ ಕಾಳಿಂದೀ; ಲಕ್ಷಣ ಗಳನ್ನು ಹೇಳಿಸಿಕೊಂಡು ಕ್ರಮದಿಂದ ಇಪ್ಪತ್ತೇಳು ಲಕ್ಷಣವುಳ್ಳವಳು ಲಕ್ಷಣಾ; ಹೀಗೆ ಷಣ್ಮಹಿಷಿಯರ ನಾಮಾರ್ಥಗಳನ್ನು ತಿಳಿಯಬೇಕು. ॥13॥

**ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :-**

ಈ ಷಣ್ಮಹಿಷಿಯರಿಗೀತ ಸೌಪರ್ಣೀ– ಎಂಬ ಗರುಡಪತ್ನಿ, ವಾರುಣೀ ಎಂಬ ಶೇಷಪತ್ನೀ, ಪಾರ್ವತಿಯು ಸಹ ಕಡಿಮೆ. ಇದರಲ್ಲಿ ಬಲರಾಮ ಪತ್ನಿಯಾದ ರೇವತಿಯ ವಾರುಣೀರೂಪದಲ್ಲಿ ಲಕ್ಷ್ಮಿಯ ಆವೇಶವುಂಟು. ಆ ರೂಪ ಮೂಲರೂಪದಲ್ಲಿ ಪಾನರೂಪಳಾಗಿ, ದೇವರನ್ನು ಸೇವಿಸುವುದರಿಂದ, ಪ್ರೇಯಳೆನಿಸುವಳು. **ರೇವತಿ ಶ್ರೀಯಯಾ ಶ್ರೀಶ್ಚ ಪೇಯ ರೂಪಾ ಚ ವಾರುಣೀ** ।–ಎಂಬ ಪ್ರಮಾಣ ರೀತಿ. ಸೌಪರ್ಣಿ, ವಾರುಣಿ, ಪಾರ್ವತೀ-ಈ ಮೂರು ಜನಗಳೂ ಸಹ, ತಮ್ಮ ಪತಿಗಳಿಗೀತ ಹತ್ತುಗುಣ ಕಡಿಮೆಯಾದವರು.

**ಟಿಪ್ಪಣಿ :-** ಪ್ರೇಯಳೆನಿಪಳು-ಎಂಬ ಪಾಠಕ್ಕೆ ಮೂಲರೂಪದಿಂದಲೇ ಆವೇಶರೂಪಕ್ಕೆ ಭೋಗಪ್ರದರ್ಥ. ॥13॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ (1) ಶ್ರೀಕೃಷ್ಣನ ಷಣ್ಮಹಿಷಿಯರು. ತದನಂತರ, ಅವರಿಗೀತ ಅವರರಾದ (2) ವಾರುಣೀ–ಸೌಪರ್ಣೀ–ಪಾರ್ವತೀ-ಈ ಮೂವರ ವಿಚಾರಗಳನ್ನು ತಿಳಿಸುತ್ತಾರೆ.

1. ಶ್ರೀಕೃಷ್ಣನ ಷಣ್ಮಹಿಷಿಯರು ಕ್ರಮವಾಗಿ :–

1. ನೀಲಾದೇವಿ. 2. ಭದ್ರಾದೇವಿ. 3. ಮಿತ್ರವಿಂದಾದೇವಿ. 4. ಕಾಳಿಂದೀದೇವಿ. 5. ಲಕ್ಷಣಾದೇವಿ ಮತ್ತು 6. ಜಾಂಬವತೀದೇವಿ.

**(1) ನೀಲಾದೇವಿ :-**

ಈಕೆಯು ಕಾವ್ಯಬಾಲನ ಪುತ್ರಿಯು. ಕೌಮಾರಾವಸ್ಥೆಯಲ್ಲಿರುವಾಗಲೇ

ಶ್ರೀಕೃಷ್ಣನೇ ತನ್ನ ಪತಿಯಾಗಬೇಕೆಂದು ಶೇಷಪರ್ವತದಲ್ಲಿ ತಪಸ್ಸನ್ನಾಚರಿಸಿದಳು. ಶ್ರೀಹರಿಯು ಆಕೆಯ ತಪಸ್ಸಿಗೆ ಮೆಚ್ಚಿ, ಅವಳ ಮನೋಭಿಲಾಷೆಗೆ ತಥಾಸ್ತು–ಎಂದು ವರಪ್ರದಾನ ಮಾಡಿದನು. ಶ್ರೀಕೃಷ್ಣಾವತಾರಕಾಲದಲ್ಲಿ ಹರಿಯಿಂದ ಪರಿಗ್ರಹೀತಳಾಗುತ್ತೇನೆಂದು ವರ ಪಡೆದು, ತಪಸ್ಸಿನಲ್ಲಿಯೇ ದೇಹತ್ಯಾಗ ಮಾಡಿದಳು. ದ್ವಾಪರಯುಗದಲ್ಲಿ ನಂದಗೋಪನ ಭಾವಮೈದುನನಾದ ಕುಂಭಕನಲ್ಲಿ ನೀಲಾ–ಎಂಬ ನಾಮದಿಂದ ಅವತರಿಸಿದಳು. ಕೋಸಲ ರಾಜನಾದ ನಗ್ನಜಿತರಾಯನು ನೀಲೆಯ ಸ್ವಯಂವರವನ್ನು ಏರ್ಪಡಿಸಿದನು. ಪರಶಿವನಿಂದ ವರ ಪಡೆದ ಏಳುಮಂದಿ ದೈತ್ಯರು ಉನ್ಮತ್ತವಾದ ಗೂಳಿಗಳ ರೂಪದಲ್ಲಿ, ಸಜ್ಜನರನ್ನು ಹಿಂಸಿಸತೊಡಗಿದರು. ನಗ್ನಜಿತರಾಯನು ಆ ಏಳು ಗೂಳಿಗಳನ್ನು ಯಾರು ಬಂಧಿಸುವರೋ, ಅವನಿಗೆ ನೀಲಾದೇವಿಯನ್ನು ಕೊಡುವುದಾಗಿ, ಸ್ವಯಂವರದ ಪಣ ಇಟ್ಟನು. ಸಮಸ್ತವೀರಾಧಿವೀರರಾದ ರಾಜರು, ನೀಲಾದೇವಿಯ ರೂಪಲಾವಣ್ಯಗಳಿಂದ ಮೋಹಿತರಾಗಿ, ಮುಂದೆ ಬಂದು, ಆ ಗೂಳಿಗಳನ್ನು ಎದುರಿಸಲಾರದೆ, ಸೋತು ಹಿಂದಿರುಗಿದರು. ಆಗ ಯದುಕುಲಲಲಾಮನಾದ ಶ್ರೀಕೃಷ್ಣನು ಆ ಏಳು ಗೂಳಿಗಳನ್ನು ಏಕಕಾಲದಲ್ಲಿ ಲೀಲಾಜಾಲವಾಗಿ ಹಿಡಿದು, ಮೂಗುದಾರ ಹಾಕಿ, ಬಂಧಿಸಿದನು. ಆಗ ನೀಲಾದೇವಿಯು ಕೃಷ್ಣನ ಸುಂದರ ಕೊರಳಿಗೆ ಹಾರ ಅರ್ಪಿಸಿ, ಅವನ ಮಹಿಷಿಯಾದಳು.

## (2) ಭದ್ರಾದೇವಿ :-

ಸದ್ಗುಣಗಳಿಂದ ಭದ್ರಳಾದ್ದರಿಂದ ಭದ್ರಾ–ಎಂಬ ನಾಮ. ಕೇಕೇಯ ದೇಶಾಧಿಪತಿಯಾದ ಧೃಷ್ಟಕೇತುವಿನಿಂದ ಕೃಷ್ಣನ ಸೋದರತ್ತೆಯಾದ ಶ್ರುತಕೀರ್ತಿ ಎಂಬುವಳಲ್ಲಿ ಜನಿಸಿದಳು. ಬಾಲ್ಯದಿಂದಲೂ ಶ್ರೀಕೃಷ್ಣನೇ ತನ್ನ ಪತಿಯಾಗಬೇಕೆಂದು, ಮಾತಾಪಿತೃಗಳನ್ನು ಕೇಳಿ ಕೊಳ್ಳುತ್ತಿದ್ದರು. ಶ್ರುತಕೀರ್ತಿಯ ಮಾತನ್ನು ಲಾಲಿಸಿ, ಶ್ರೀಕೃಷ್ಣನು ಭದ್ರಾದೇವಿಯನ್ನು ಪರಿಗ್ರಹಿಸಿ, ಪಟ್ಟಮಹಿಷಿಯರಲ್ಲಿ ಒಬ್ಬಳನ್ನಾಗಿ ಮಾಡಿಕೊಂಡನು. ಶ್ರೀಕೃಷ್ಣನಿಂದ ಈಕೆಯಲ್ಲಿ

ಆದ ಸಂತಾನ—ಸಂಗ್ರಾಮಜಿತ್– ಬೃಹತ್ಸೇನ–ಶೂರ–ಪ್ರಹರಣ– ಅಂಜಿತ–ಜಯ–ಸುಭದ್ರ–ವಾಪಿ–ಆಯು, ಮುಕ್ತಿ ಸತ್ಯಕ-ಎಂಬ–10 ಪುತ್ರರು ಏಕ ಮಾತ್ರ ಪುತ್ರಿ.

## (3) ಮಿತ್ರವಿಂದಾದೇವಿ :-

ಪೂರ್ವದಲ್ಲಿ ಅಗ್ನಿಷ್ವಾತ್–ಎಂಬ ರಾಜಪುತ್ರಿ. ಕೇವಲ ಮಿತ್ರಭಾವ ರೂಪವಾದ ಭಕ್ತಿಯಿಂದ ಶ್ರೀಹರಿಯ ಪ್ರಾಪ್ತಿಗಾಗಿ, ಸದಾ ಪುರಾಣ ಶ್ರವಣ, ಧ್ಯಾನ, ತಪಸ್ಸು ಇತ್ಯಾದಿ ಸತ್ಕರ್ಮಗಳಲ್ಲಿ ಸದಾ ನಿರತಳಾಗಿದ್ದು, ಶ್ರೀ ವಿಷ್ಣುಸರ್ವೋತ್ತಮತ್ವ ಪ್ರತಿಪಾದಕವಾದ ವಿಷಯಗಳನ್ನು ಸಜ್ಜನರಿಂದ ಶ್ರವಣ ಮಾಡುತ್ತಾ, ದೇಹತ್ಯಾಗ ಮಾಡಿದಳು. ಇದರಿಂದ, ಈಕೆಗೆ **ಮಿತ್ರವಿಂದಾ** –ಎಂದು ಹೆಸರಾಯಿತು. ದ್ವಾಪರದಲ್ಲಿ ಅವಂತೀದೇಶದ ಜಯತ್ಸೇನನ ಪತ್ನಿಯಾದ ರಾಜಾಧಿದೇವಿಯಲ್ಲಿ ಪುತ್ರಿಯಾಗಿ ಜನಿಸಿದಳು. ಕೃಷ್ಣನ ತಂದೆ ವಸುದೇವನ ಭಗಿನಿಯರಲ್ಲಿ ರಾಜಾಧಿದೇವಿ ಒಬ್ಬಳು. ಪುರಾಣಶ್ರವಣ ಹಾಗೂ ಸತ್ಕರ್ಮಗಳ ಫಲದಿಂದ ಶ್ರೀಕೃಷ್ಣನು ತನ್ನ ಸೋದರತ್ತೆಯ ಪುತ್ರಿಯಾದ ಮಿತ್ರವಿಂದೆಯನ್ನು ಲಗ್ನವಾಗಿ, ಷಣ್ಮಹಿಷಿಯರಲ್ಲಿ ಒಬ್ಬಳನ್ನಾಗಿ ವರಿಸಿದನು. ಶ್ರೀಕೃಷ್ಣನಿಂದ ಮಿತ್ರವಿಂದಾದೇವಿಯಲ್ಲಿ ಆದ ಸಂತಾನದ ವಿವರ–ವೃಕ–ಹರ್ಷ-ಅನಿಲ– ಗೃಧ್ರ–ವರ್ಧನ–ಉನ್ನಾದ–ಮಹಾಶ–ಪಾವನ–ವಹ್ನಿ ಮತ್ತು ಕ್ಷುಧಿ–ಎಂಬ 10 ಮಂದಿ ಪುತ್ರರು.

## (4) ಕಾಳಿಂದೀದೇವಿ :–

ಪೂರ್ವದಲ್ಲಿ ವಿವಸ್ವಾನ್‌ನಾಮಕ ಸೂರ್ಯನಪುತ್ರಿಯು. ಯಮುನಾ ದೇವಿಯ ತಂಗಿಯಾಗಿ ಜನಿಸಿದಳು.

**ಪ್ರಮಾಣ :–**

"ವಿವಸ್ವಾನ್‌ನಾಮ ಸೂರ್ಯೋಽಭೂತ್ತಸ್ಯ ಪುತ್ರೀವ್ಯಜಾಯತ ।
ಕಾಲಿಂದೀ ಸಂಜ್ಞ ಕಾಂಪೀಂದ್ರ ಯಮುನಾ ಅನುಜಾಸ್ಮೃತಾ" ॥–

ಶ್ರೀಕೃಷ್ಣನ ಪತ್ನಿಯಾಗಬೇಕೆಂಬ ಮಹದಭಿಲಾಷೆಯಿಂದ, ಜಿತೇಂದ್ರಿಯಳಾಗಿ, ಹರಿಸ್ಮರಣೆಯಲ್ಲಿಯೇ ಆಸಕ್ತಮನಸ್ಕಳಾಗಿ, ಘೋರತಪಸ್ಸನ್ನಾ

ಚರಿಸಿದಳು. ಯಮುನಾನದಿಯ ತೀರದಲ್ಲಿ ತಪೋನಿರತಳಾಗಿದ್ದ ಕಾಲಂದಿಯನ್ನು, ಬೇಟೆಗಾಗಿ ಅಲ್ಲಿಗೆ ಬಂದಿದ್ದ ಅರ್ಜುನನು ನೋಡಿದನು. ಆಗ ಕಾಲಂದಿಯು ತನ್ನ ಮನೋಭಿಲಾಷೆಯನ್ನು ಅರ್ಜುನನಲ್ಲಿ ಅರುಹಿದಳು. ಅರ್ಜುನನ ಕೋರಿಕೆಯಂತೆ, ಶ್ರೀಕೃಷ್ಣನು ಕಾಳಿಂದಿಯನ್ನು ಪಂಗ್ರಹಿಸಿ, ತನ್ನ ಷಣ್ಮಹಿಷಿಯರಲ್ಲಿ ಒಬ್ಬಳನ್ನಾಗಿ ಮಾಡಿಕೊಂಡನು.

ಶ್ರೀಕೃಷ್ಣನಿಂದ ಕಾಳಿಂದೀದೇವಿಯಲ್ಲಿ ಆದ ಸಂತಾನದ ವಿವರ—ಶ್ರುತ–ಕವಿ–ವೃಷ–ವೀರ–ಸುಬಾಹು–ಭದ್ರ–ಶಾಂತಿ–ದರ್ಶ–ಪೂರ್ಣಮಾಸ ಮತ್ತು ಸೋಮಕ–ಎಂಬ 10 ಮಂದಿ ಪುತ್ರರು.

## (5) ಲಕ್ಷಣಾದೇವಿ :–

ಈಕೆ ಬರ್ಹಿಷ್ಮತು–ಎಂಬ ರಾಜನ ಪುತ್ರಿ. ಲಕ್ಷಣಯುಕ್ತಳಾಗಿದ್ದರಿಂದ, **ಲಕ್ಷಣಾ**–ಎಂದು ರಾಜನು ನಾಮಕರಣ ಮಾಡಿದನು. 27 ಲಕ್ಷಣಗಳಿಂದ ಯುಕ್ತಳಾಗಿದ್ದ ಲಕ್ಷಣಾದೇವಿ, ರಮಾಬ್ರಹ್ಮಾದಿವಂದ್ಯನಾದ ಸರ್ವಗುಣಲಕ್ಷಣ ಸಂಪೂರ್ಣನಾದ ಶ್ರೀಹರಿಯ ಪ್ರತಿಮೆಗೆ ಸರ್ವಾಲಂಕಾರಮಾಡಿ, ಹಾಲು ಬೆಣ್ಣೆ-ಇತ್ಯಾದಿ ವಸ್ತುಗಳನ್ನು ನಿತ್ಯ ನಿವೇದನಮಾಡಿ, ಭೋಜನಮಾಡುತ್ತಾ, ಶ್ರೀಹರಿಯೇ ಪತಿಯಾಗಬೇಗೆಂದು ಮನಸಾ ಧ್ಯಾನಿಸುತ್ತಿದ್ದಳು. ಶ್ರೀಹರಿ ಸ್ಮರಣೆಯಲ್ಲಿಯೇ ದೇಹತ್ಯಾಗ ಮಾಡಿದಳು. ದ್ವಾಪರಯುಗದಲ್ಲಿ ಮದ್ರ ರಾಜನ ಪುತ್ರಿಯಾಗಿ ಅವತರಿಸಿದಳು. ರಾಜನು ಪುತ್ರಿಯ ಸ್ವಯಂವರವನ್ನು ಏರ್ಪಡಿಸಿ, ಬಲವಾದ ಧನುಸ್ಸನ್ನು ಹದೆಯೇರಿಸುವ ಮಹಾವೀರನಿಗೆ ಪುತ್ರಿಯನ್ನು ಕೊಡುವೆನೆಂದು ಪಣವನ್ನಿಟ್ಟನು. ಆಗ ಶ್ರೀಕೃಷ್ಣನು ಸ್ವಯಂವರ ಮಂಟಪಕ್ಕೆ ಆಗಮಿಸಿ, ಲೀಲೆಯಿಂದ ಧನುರ್ಭಂಗಗೈದನು. ಲಕ್ಷಣಾದೇವಿಯು ಶ್ರೀಕೃಷ್ಣನ ಸಿರಿಕಂಠಕ್ಕೆ ಮಾಲೆ ಹಾಕಿ ವರಿಸಿದಳು.

ಶ್ರೀಕೃಷ್ಣನಿಂದ ಲಕ್ಷಣಾದೇವಿಯಲ್ಲಿ ಆದ ಸಂತಾನದ ವಿವರ,

ಪ್ರಘೋಷ--ಗಾತ್ರವಂತ-ಸಿಂಹಬಲ-ಪ್ರಬಲ-ಊರ್ಧ್ವಗ-ಮಹಾಶಕ್ತಿ-ಸಹಜವ ಎಂಬ 8 ಮಂದಿ ಪುತ್ರರು. ಅಪರಿಚಿತ ಎಂಬ ಏಕೈಕ ಪುತ್ರಿ ಜನಿಸಿದಳು.

## (6) ಶ್ರೀಜಾಂಬವತೀದೇವಿ :-

ಜಾಂಬವತಿಯು ಪೂರ್ವದಲ್ಲಿ ಸೋಮಪುತ್ರಿಯಾಗಿ ಅವತರಿಸಿದಳು. ಕನ್ಯಾವಸ್ಥೆಯಲ್ಲಿ ಮಹಾವೈರಾಗ್ಯಶಾಲಿಯಾಗಿ, ಸರ್ವೇಂದ್ರಿಗಳ ಕ್ರಿಯೆಗಳನ್ನು ಶ್ರೀಹರಿಯ ಪಾದಾವಿಂದಗಳಿಗೆ ಅರ್ಪಿಸುತ್ತಿದ್ದಳು. ಬ್ರಾಹ್ಮಣರನ್ನು ಅತ್ಯಂತ ಭಕ್ತಿಯಿಂದ ಪೂಜಿಸಿ, ಶ್ರೀನಿವಾಸನ ದರ್ಶನವನ್ನು ಹೊಂದಿ, ಆ ಪರಮ ಪುರುಷನನ್ನು ಆಪಾದಮೌಳಿಪರ್ಯಂತ ಸ್ತೋತ್ರಮಾಡಿದಳು. ಮಹರುದ್ರ ದೇವರ ಅವತಾರಭೂತರಾದ ಜೈಗೀಷವ್ಯ-ಮುನಿಗಳಿಂದ ಉಪದೇಶ ಹೊಂದಿ, ಸದಾ ಶ್ರೀಪರಮಾತ್ಮನ ಧ್ಯಾನದಲ್ಲಿಯೇ ಮಗ್ನಳಾಗಿದ್ದು, ಋಷಿತೀರ್ಥದಲ್ಲಿ ಕೃಷ್ಣಾವತಾರ ಪರ್ಯಂತ ತಪಸ್ಸನ್ನು ಮಾಡಿ, ಯೋಗಶಕ್ತಿಯಿಂದ ದೇಹ ತ್ಯಾಗಮಾಡಿದಳು.

ದ್ವಾಪರಯುಗದಲ್ಲಿ ಋಕ್ಷರಾಜನಾದ ಜಾಂಬುವಂತನಿಂದ ಸಾಕಲ್ಪಟ್ಟು ಸಾಕುಪುತ್ರಿಯಾಗಿ, ಜಾಂಬವತೀ-ನಾಮಕಳಾದಳು. ಸ್ಯಮಂತಕಮಣಿಯ, ಅನ್ವೇಷಣದ ನಿಮಿತ್ತ, ಶ್ರೀಕೃಷ್ಣನು ಗಹನವಾದ ಅರಣ್ಯವನ್ನು ಪ್ರವೇಶಿಸಿ, ಜಾಂಬವಂತನಿದ್ದ ಗುಹೆಯನ್ನು ಹೊಕ್ಕನು. ಅಲ್ಲಿ ಜಾಂಬವಂತನೊಂದಿಗೆ ಯುದ್ಧಮಾಡಿ, ರಾಮಾವತಾರದರ್ಶನಮಾಡಿಸಿದನು. ರಾಮಭಕ್ತಾಗ್ರೇಸರನಾದ ಜಾಂಬುವಂತನು ಶ್ರೀಹರಿಯ ಪಾದಾಕ್ರಾಂತನಾಗಿ, ಜಾಂಬವತಿಯನ್ನು ಪಾಣಿಗ್ರಹಣ ಮಾಡಿಕೊಟ್ಟನು.

ಸಮುದ್ರಮಥನಸಮಯದಲ್ಲಿ, ಶ್ರೀಹರಿಯು ಧನ್ವಂತ್ರೀರೂಪ ಧರಿಸಿ, ಅಮೃತದಿಂದ ತುಂಬಿದ ಸುವರ್ಣಕಲಶವನ್ನು ತನ್ನ ಕರದ್ವಯಗಳಲ್ಲಿ ಹಿಡಿದು ಕೊಂಡು ಕ್ಷೀರಸಮುದ್ರದಿಂದ ಮೇಲೆದ್ದನು. ಆ ಸಮಯದಲ್ಲಿ, ಧನ್ವಂತ್ರಿಯು

ಕಣ್ಣಿಂದ ಆನಂದ್ರಾಶುಗಳು ಅಮೃತದಲ್ಲಿ ಬಿದ್ದಾಗ, ಆ ನೇತ್ರಬಿಂದುಗಳಿಂದ **ತುಲಸಿಯು** ಉದ್ಭವಿಸಿದಳು. ಆ ತುಲಸಿಯೇ ಜಾಂಬವತಿಯು.

**ಪ್ರಮಾಣ** :–

"ತುಲಸೀ ಜಾಂಬವತೀತ್ಯುಕ್ತಾ ಲಕ್ಷ್ಮ್ಯಾವೇಶೇನ ಸಂಯುತಾ ।
ತಯಾ ಸಂಪೂಜಯೇದ್ಭಕ್ತ್ಯಾ ವಿಷ್ಣುಲೋಕಮವಾಪ್ನುಯಾತ್ ತ ॥"—

**—ಇತಿ ಪಾದ್ಮೇ-ಉತ್ತರಖಂಡೇ-ಉಮಾಮಹೇಶ್ವರ ಸಂವಾದೇ.**

**ವಿಶೇಷಾಂಶ** :–

1. ಜಾಂಬವತಿಯೇ ತುಳಸಿಯು.

2. ನೀಲಾದಿ ಇತರ ಐದುಮಂದಿ ಶ್ರೀಕೃಷ್ಣನ ಮಹಿಷಿಯರಲ್ಲಿರುವುದಕ್ಕಿಂತ ಜಾಂಬವತಿಯಲ್ಲಿ ರಮಾವೇಶ ಹೆಚ್ಚು. ಇದರಿಂದ, ನೀಲಾದಿಗಳಿಗಿಂತ ಜಾಂಬವತಿಯೇ ಶ್ರೇಷ್ಠಳು.

3. ರಮಾವೇಶಾಧಿಕ್ಯವಿರುವ ಸಮಯದಲ್ಲಿ, ಜಾಂಬವತಿಯು ಶೇಷದೇವರಿಗೆ ಸಮಾನಳೆನಿಸುವಳು. ಆವೇಶಹ್ರಾಸವಾದಾಗ ಪ್ರದ್ಯುಮ್ನನಿಗಿಂತ 20 ಗುಣಗಳು ಅಧಿಕಳು.

**ಪ್ರಮಾಣ** :–

"ರಮಾವೇಶಾಧಿಕ್ಯಕಾಲೇ ಜಾಂಬವತೀ ಶೇಷಸಮಾ ಅನ್ಯಾಃ ಕಿಂಚಿದೂನಾಃ ॥
ರಮಾವೇಶಹ್ರಾಸಕಾಲೇ ಪ್ರದ್ಯುಮ್ನಾತ್ ವಿಂಶದ್ಗುಣಾಧಿಕಾಃ ॥"–

**—ತಾರತಮ್ಯಕೌಸ್ತುಭೇ** ॥

ಶ್ರೀಕೃಷ್ಣನಿಂದ ಜಾಂಬವತಿಯಲ್ಲಿ ಆದ ಸಂತಾನದ ವಿವರ :–

ಸಾಂಬ-ಸುಮಿತ್ರ-ಪುರುಜಿತ್-ಶತಜಿತ್-ಸಹಸ್ರಜಿತ್-- ವಿಜಯ-ಚಿತ್ರಕೇತು-ವಸುಮಾನ-ದ್ರವಿದ ಮತ್ತು ಕ್ರತು-ಎಂಬ 10 ಮಂದಿ ಪುತ್ರರೂ ಮತ್ತು ಏಕೈಕಪುತ್ರಿ.

5. ಬಲರಾಮನ ಪತ್ನೀ **ರೇವತಿ.** ಈಕೆ ರೇವತಿರಾಜನ ಪುತ್ರಿ. ಬಲರಾಮನಲ್ಲಿ ಶ್ರೀವರಮಾತ್ಮನ ಶುಕ್ಲಕೇಶಾವಿರುವಂತೆ, ಮೂಲರೂಪವಾದ ಶೇಷನಪತ್ನಿ ವಾರುಣಿಯಲ್ಲಿ ರಮಾವೇಶವಿದೆ. ಇದರಿಂದ ಮೂಲರೂಪದ ವಾರುಣೀದೇವಿಗೆ ಶ್ರೀ-ಎಂದು ಹೆಸರು. ಈ ವಿಷಯವನ್ನೇ ದಾಸರಾಯರು "ಶ್ರೀಲಕುಮಿಯುತ ರೇವತೀ ಸಿರಿ ಮೂಲರೂಪದಿ"-ಎಂದಿದ್ದಾರೆ.

6. ವಾರುಣಿಯು ಮದ್ಯರೂಪಳಾಗಿ, ಬಲರಾಮನನ್ನು ತೃಪ್ತಿಪಡಿಸುತ್ತಿದ್ದಳು. ಇದರಿಂದ **ಪೇಯು**-ಎಂಬ ಹೆಸರು ಬಂದಿತು.

**ಪ್ರಮಾಣ :-**

"ರೇವತೀ ಶ್ರೀಯುತಾ ಶ್ರೀಶ್ಚ ಪೇಯ ರೂಪಾಚ ವಾರುಣೀ ।
ಸೌಪರ್ಣೀ ಪಾರ್ವತೀ ಚೈವ ತಿಸ್ರಃ ಶೇಷಾದ್ಧಶಾದ್ಧಮಾ ॥"-

**—ಇತಿ ವಚನಾತ್ (ನಿರ್ಣಯೋಕ್ತಿ).**

7. ರುದ್ರದೇವರ ಪತ್ನಿ ಸತೀದೇವಿಯು ದಕ್ಷಪ್ರಜಾಪತಿಯ ಯಾಗಶಾಲೆಯಲ್ಲಿ ಅವಮಾನಿತಳಾಗಿ,ಯೋಗಾಗ್ನಿಯಿಂದ ದಗ್ಧಳಾದ ನಂತರ, ಶ್ರೀಶಂಕರನನ್ನು ಒಲಿಸುವುದಕ್ಕಾಗಿ, ಹಿಮವತ್ಪರ್ವತರಾಜನ ಪತ್ನಿ ಮೇನಕೆಯಲ್ಲಿ ಜನಿಸಿದಳು. ಇದರಿಂದ ಅವಳಿಗೆ "ಪಾರ್ವತೀ"-(ಪರ್ವತರಾಜಕುಮಾರಿ) ಮತ್ತು **"ಶೈಲಜಾ"-(ಶೈಲ-ಪರ್ವತ)** ಎಂದು ಹೆಸರಾಯಿತು.

8. ಶೈಲಜಾದ್ಯರು-ಎಂದರೆ, ಗರುಡಪತ್ನಿ ಸೌಪರ್ಣೀ, ಶೇಷಪತ್ನಿ ವಾರುಣೀ ಮತ್ತು ರುದ್ರಪತ್ನಿ ಪಾರ್ವತೀ-ಈ ಮೂವರು ತಮ್ಮ ತಮ್ಮ ಪತಿಗಳಿಗಿಂತ ದಶವಿಜಾತೀಯಗುಣಗಳಿಂದ ಅಧಮರಾಗಿದ್ದಾರೆ. ॥13॥

★★

## ಪದ್ಯ-೧೪

**ಮೂಲ :-**

**ನರಹರಿ ಆವೇಶ ಸಂಯುತ ।**
**ನರ ಪುರಂದರ ಗಾಧಿ ಕುಶ ಮಂ ।**
**ದರದ್ಯುಮ್ನ ವಿಕುಕ್ಷಿವಾಲಿ ಇಂದ್ರನವತಾರ ॥**
**ಭರತ ಬ್ರಹ್ಮಾವಿಷ್ಟ ಸಾಂಬ ಸು ।**
**ದರುಶನ ಪ್ರದ್ಯುಮ್ನ ಸನಕಾ ।**
**ದ್ಯರೊಳಗಿಪ್ಪ ಸನತ್ಕುಮಾರನು ಷಣ್ಮುಖ ಕಾಮ ॥೧೪॥**

**ಅವತರಣಿಕೆ :-**

ಸೌಪರ್ಣೀ, ವಾರುಣೀ, ಪಾರ್ವತಿಗಳಿಗೆ- ಅವರರಾದ ಇಂದ್ರ ಮತ್ತು ಕಾಮ-ಇವರ ಅವತಾರವಿಶೇಷಗಳನ್ನು ಹೇಳುತ್ತಾರೆ. ॥14॥

**ಪ್ರತಿಪದಾರ್ಥ :-**

**ಇಂದ್ರನ** = ಇಂದ್ರದೇವರ, **ಅವತಾರ** = ಅವತಾರವಿಶೇಷಗಳು ಯಾವುವೆಂದರೆ- **ನರ** = ನರನಾಮಕರಾದ ಶೇಷದೇವರು, **ಹರಿ** = ಶ್ರೀಮನ್ನಾರಾಯಣ, **ಆವೇಶಸಂಯುತ** = ಈರ್ವರ ಆವೇಶಯುಕ್ತನಾದ, **ನರ** = ಅರ್ಜುನ, **ಪುರಂದರ** = ಪುರಂದರನಾಮಕ ಇಂದ್ರನ ಅವತಾರ, **ಗಾಧಿ** = ವಿಶ್ವಾಮಿತ್ರನ ತಂದೆ ಗಾಧಿರಾಯ, **ಕುಶ** = ಶ್ರೀರಾಮನ ಪುತ್ರ ಕುಶರಾಯ, **ಮಂದರದ್ಯುಮ್ನ** = ಮಂದರದ್ಯುಮ್ನನಾಮಕ ಅವತಾರ, **ವಿಕುಕ್ಷಿ** = ಇಕ್ಷ್ವಾಕುವಂಶದಲ್ಲಿ ಜನಿಸಿದ ವಿಕುಕ್ಷಿ- ಎಂಬ ರಾಜನು. **ವಾಲಿ** = ಸುಗ್ರೀವನ ಅಣ್ಣನಾದ ವಾಲಿ,- ಇವಿಷ್ಟೂ ಇಂದ್ರದೇವರ ಅವತಾರಗಳು.

**ಕಾಮ**= ಮನ್ಮಥನ ಅವತಾರಗಳು—**ಭರತ** = ಶ್ರೀರಾಮದೇವರ ತಮ್ಮ ಭರತ, **ಬ್ರಹ್ಮಾವಿಷ್ಟ**= ಬ್ರಹ್ಮದೇವರ ಆವೇಶದಿಂದ ಯುಕ್ತನಾದ, **ಸಾಂಬ** = ಜಾಂಬವತೀಪುತ್ರ, **ಸುದರುಶನ** = ಸುದರ್ಶನ ಚಕ್ರ, **ಪ್ರದ್ಯುಮ್ನ** = ಶ್ರೀಕೃಷ್ಣ ಪುತ್ರ ಪ್ರದ್ಯುಮ್ನನು, **ಸನಕಾದ್ಯರೊಳಗಿಪ್ಪ** = ಸನಕಾದಿ ಯತಿಚತುಷ್ಟಯರಲ್ಲಿ ಒಬ್ಬನಾದ, **ಸನತ್ಕುಮಾರನು** = ಸನತ್ಕುಮಾರನು, **ಷಣ್ಮುಖ** = ರುದ್ರಪುತ್ರ ಷಡಾನನ (ಸ್ಕಂಧ-ಸೇನಾನಿ)-ಇವು ಕಾಮದೇವರ ಅವತಾರಗಳು. ॥14॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಸೌಪರ್ಣ್ಯಾದಿಗಳಿಗೆ ಅವರರಾದ ಇಂದ್ರಕಾಮರ ವಿಚಾರ ಹೇಳುತ್ತಾರೆ.

ಸೌಪರ್ಣ್ಯಾದಿಗಳ ತರುವಾಯ ಇಂದ್ರದೇವರು, ಮನ್ಮಥನು — ಇವರಿಬ್ಬರೂ ಸಮಾನರು. ಈ ಉಭಯರಿಗೆ ಅವತಾರಗಳು- ಇವರಲ್ಲಿ, ಇಂದ್ರದೇವರ ಅವತಾರಗಳು—ನರಸಾಂಕೇತನಾದ ಅರ್ಜುನನು, ಗಾಧಿರಾಯನು, ರಾಮದೇವರ ಪುತ್ರ ಕುಶ, ಮಂದರದ್ಯುಮ್ನ, ವಿಕುಕ್ಷಿ, ವಾಲಿನಾಮಕನು— ಎಂತ ಆರು ಅವತಾರಗಳು. ಇವರಲ್ಲಿ,ಶೇಷದೇವರ, ನಾರಾಯಣದೇವರ ಈ ಉಭಯರ ಆವೇಶದಿಂದ ಚಂದಾಗಿಯುಕ್ತನಾದವ, ನರ ಸಾಂಕೇತನಾದ ಅರ್ಜುನನು. ಇಲ್ಲಿಗೆ, ಇಂದ್ರನಅವತಾರ ಮುಗಿಯಿತು.

ಇನ್ನು,ಕಾಮದೇವರ ಅವತಾರಗಳು ದಾವವೆಂದರೆ- ರಾಮದೇವರ ತಮ್ಮ ಭರತ, ಸಾಂಬ ಎಂಬುವನು. ಸುದರುಶನ ಎಂಬುವನು, ಪ್ರದ್ಯುಮ್ನ ಎಂಬುವನು, ಸನಕಾದಿಗಳಲ್ಲಿ ಇರತಕ್ಕ ಸನತ್ಕುಮಾರನು, ಷಣ್ಮುಖ- ಇಂತು ಆರು ಅವತಾರಗಳು ಕಾಮದೇವರಿಗೆ. ಇವರಲ್ಲಿ, ಬ್ರಹ್ಮದೇವರ ಆವೇಶದಿಂದ ಯುಕ್ತನಾದವನು ಪೂರ್ವೋಕ್ತ ಭರತನು. ಇಲ್ಲಿಗೆ ಕಾಮದೇವರ ವಿಚಾರ ಮುಗಿಯಿತು. ಮುಂದೆ ತಾರತಮ್ಯ ಹೇಳತಾರೆ. ॥14॥

## ೨. ಭಾವಪ್ರಕಾಶಿಕೆ :-

ನರಾಂಶದಿಂದಲೂ, ವಿಶೇಷವಾದ ಪರಮಾತ್ಮನ ಅಂಶದಿಂದಲೂ ಕೂಡಿದ ಇಂದ್ರನ ಅವತಾರವೇ ಅರ್ಜುನನು. ಮಹಾಭಾರತ ತಾತ್ಪರ್ಯ ನಿರ್ಣಯ 12ನೆಯ ಅಧ್ಯಾಯದಲ್ಲಿ "ಇತೀರಿತಾಸಾಧ್ವಯವಾಪುಪಾಸವಂ ತತಃ ಪ್ರಜಜ್ಞೇಸ್ವಯಮೇವಶಕ್ರಃ ॥ ಸಚಾರ್ಜುನೋನಾಮ ನರಾಂಶಯುಕ್ತೋ ವಿಷ್ಣ್ವಾವೇಶೀ ಬಲವಾನಸ್ತ್ರವೇತ್ತಾ ॥99॥"-ಪಾಂಡುರಾಜನ ವಾಕ್ಯವನ್ನು ಕೇಳಿ, ಕುಂತೀದೇವಿಯು ಮಂತ್ರಬಲದಿಂದ ಇಂದ್ರನನ್ನು ಕರೆದಳು. ಆಗ ದೇವೇಂದ್ರನು ತಾನೇ ಕುಂತಿಯಲ್ಲಿ ಅರ್ಜುನನೆಂಬ ಹೆಸರಿನಿಂದ ಜನಿಸಿದನು. ಅವನು ನರಾಂಶದಿಂದಲೂ, (ಅಂದರೆ ಹರಿ ಆವೇಶದಿಂದ ಕೂಡಿದ ಶೇಷಾಂಶನೆಂದು ತಾತ್ಪರ್ಯ; ಹರಿಯಂಶದಿಂದ ಕೂಡಿದ ಶೇಷದೇವರೇ ನರಾವತಾರವೆಂದು 11 ನೆಯ ಪದ್ಯದಲ್ಲಿ ಸ್ಪಷ್ಟ ಮಾಡಿರುವರು.) ಮತ್ತು ವಿಶೇಷವಾದ ಪರಮಾತ್ಮನ ಆವೇಶದಿಂದಲೂ ಕೂಡಿ, ಮಹಾಬಲಾಢ್ಯನಾಗಿಯೂ, ಸಕಲಶಾಸ್ತ್ರಗಳನ್ನು ತಿಳಿದವನಾಗಿಯೂ ಇದ್ದನು-ಎಂದು ಹೇಳಿರುವರು. ಈ ವಾಕ್ಯವೇ ನರಹರಿಯಾವೇಶಯುಕ್ತ ನರ-ಎಂಬುವದಕ್ಕೆ ಆಧಾರವೆಂದು ತಿಳಿಯಬೇಕು. ನರಾಂಶವುಳ್ಳವನಾದುದರಿಂದ, ನರನೆಂದು ಅರ್ಜುನನಿಗೂ, ನಾರಾಯಣನೆಂದು ಕೃಷ್ಣನಿಗೂ ಹೆಸರು. "ನರನಾರಾಯಣವೇತೌ"-ಎಂಬ ಭಾರತವಾಕ್ಯದಿಂದ, ಕೃಷ್ಣಾರ್ಜುನರೇ ನಾರಾಯಣ ನರರೆಂದು ಸ್ಪಷ್ಟವಾಗುವುದು.

ಆ ಅಭಿಪ್ರಾಯದಿಂದಲೇ, ದಾಸರಾಯರು ಅರ್ಜುನನ ಹೆಸರು ನರನೆಂದು ಹೇಳಿರುವರು. ನರಹರಿಯಾವೇಶಯುತನರ-ಅಂದರೆ, ನರಹರಿ, ಅನ್ನುವುದಕ್ಕೆ ಪರಮಾತ್ಮನೆಂದು ಅರ್ಥಮಾಡಿ, ಪರಮಾತ್ಮನ ಆವೇಶದಿಂದ ಕೂಡಿದ ನರನೇ ಪುರಂದರನೆಂದು ಅರ್ಥಮಾಡುವುದಾದರೆ, ಅರ್ಜುನನ ಹೆಸರನ್ನು ಬೇರೆಯಾಗಿ ಹೇಳಬೇಕಾಗಿತ್ತು. ಹಾಗೆ ಹೇಳಲಿಲ್ಲ. ಆದ್ದರಿಂದ, ನರಹರಿ ಎಂಬುದಕ್ಕೆ ನರಾಂಶವೂ, ಹರಿಯ ಅಂಶವೂ ಕೂಡಿದ ನರ ಎಂದರೆ, ಅರ್ಜುನನೆಂದರ್ಥ ಮಾಡಬೇಕಾಯಿತು. ಪುರಂದರನೆಂದರೆ, ಪುರಂದರನೆಂಬ ದೇವೇಂದ್ರನು. ವಿಷ್ಣುರಹಸ್ಯ-44ನೆಯ ಅಧ್ಯಾಯದಲ್ಲಿ "ವಿಷವಿವಮನುರ್ಜಾತಃ ಸಪ್ತಮೋ

ಹಿರವೇಸುತಃ ॥37॥ ಇಕ್ಷ್ವಾಕುಮುಖ್ಯಾಸ್ತಸ್ಯಾಸುಃ ಪುತ್ರಾದಶಮಹಾಬಲಾಃ॥ ಇಂದ್ರಃ ಪುರಂದರಸ್ತತ್ರ ದೇವಾರುದ್ರಾದಯಸ್ತಥಾ ॥38॥ ಆರನೆಯ ಮನ್ವಂತರದ ಅಂತ್ಯದಲ್ಲಿ,ಸತ್ಯವ್ರತನೆಂಬ ರಾಜನಲ್ಲಿ ಪರಮಾತ್ಮನು ಮತ್ಸ್ಯಾವತಾರವನ್ನು ಮಾಡಿ,ಅವನಿಗೆ ತತ್ತ್ವೋಪದೇಶವನ್ನು ಮಾಡಿದನು. ಆ ಸತ್ಯವ್ರತನು ಭಗವದನುಗ್ರಹದಿಂದ ವಿವಸ್ವಾನ್-ಎಂಬ ಸೂರ್ಯನ ಮಗನಾಗಿ, ಶ್ರಾದ್ಧದೇವನೆಂತಲೂ, ವೈವಸ್ವತನೆಂತಲೂ ಹುಟ್ಟಿ, ಈ ಮನ್ವಂತರಕ್ಕೆ ಅಧಿಪತಿಯಾದನು. ಅವನ ಮಕ್ಕಳು ಇಕ್ಷ್ವಾಕು ಮೊದಲಾದ 19 ಮಂದಿಗಳು. ಆ ಮನ್ವಂತರದಲ್ಲಿ ಪುರಂದರನೆಂಬ ಕಶ್ಯಪರ ಮಗನು ಇಂದ್ರನಾಗಿದ್ದನು-ಎಂದು ಹೇಳಿರುವರು. ಆದ್ದರಿಂದ, ವೈವಸ್ವತ ಮನ್ವಂತರದ ಇಂದ್ರನಿಗೆ ಪುರಂದರನೆಂದು ಹೆಸರು. ಗಾಧಿ ರಾಜನು ಚಂದ್ರ ವಂಶದಲ್ಲಿ ಹುಟ್ಟಿದವನು.

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ 4ನೆಯ ಅಧ್ಯಾಯದಲ್ಲಿ "ತತಃ ಸುವಂಶೇ ಶಶಿನಃ ಪ್ರಸೂತೇ ಗಾಧೀತಿ ಶಕ್ರಸ್ತನುಜೋಽಸ್ಯಚಾಸೀತ್" ॥-ಉತ್ತಮವಾದ ಚಂದ್ರವಂಶದಲ್ಲಿ ದೇವೇಂದ್ರನು ಗಾಧಿ ಎಂಬ ಹೆಸರಿನಿಂದ ಹುಟ್ಟಿದನು. ಅವನ ಮಗನು ವಿಶ್ವಾಮಿತ್ರನು- ಎಂದು ಹೇಳಿರುವರು. ರಾಮದೇವರ ಮಕ್ಕಳಾದ ಕುಶಲವರಲ್ಲಿ ಕುಶನೇ ಇಂದ್ರನು. ನಿರ್ಣಯ ಅಧ್ಯಾಯ ಒಂಭತ್ತರಲ್ಲಿ "ದೇವ್ಯಾಂಸಚಾಜನಯದಿಂದ್ರಹುತಾಶನೌದ್ವೌ ಪುತ್ರೌಯಮೌ ಕುಶಲವೌ ಬಲಿನೌ ಗುಣಾಢ್ಯೌ ॥"- ಶ್ರೀರಾಮದೇವರು ಸೀತಾದೇವಿಯಲ್ಲಿ ಇಂದ್ರ,ಅಗ್ನಿಯರನ್ನು ಲವ, ಕುಶ ಎಂಬ ಹೆಸರುಳ್ಳ ಮಕ್ಕಳನ್ನಾಗಿ ಪಡೆದರು. ಅವರಲ್ಲಿ ಕುಶನು ಇಂದ್ರನು. ಲವನು ಅಗ್ನಿಯು. ಇವರಿಬ್ಬರೂ ಅವಳಿಜವಳಿಗಳಾಗಿ ಹುಟ್ಟಿದರು. ಗುಣಾಢ್ಯರು, ಬಲಾಢ್ಯರು-ಎಂದು ಹೇಳಿರುವರು. ಕುಶನೇ ಇಂದ್ರನೆಂಬುವುದಕ್ಕೆ ಈ ವಾಕ್ಯವು ಆಧಾರವು. ಮಂದರದ್ಯುಮ್ನನು ಪೂರ್ವೇಂದ್ರನು. ಪ್ರಮಾಣ-ವಿಷ್ಣುರಹಸ್ಯ 44ನೆಯ ಅಧ್ಯಾಯ "ಷಷ್ಠಸ್ತು ಚಕ್ಷುಷಃ ಪುತ್ರಃ ಚಾಕ್ಷುಷೋ ಮನುರೀರಿತಃ ॥ ಮಂದ್ರದ್ಯುಮ್ನಃ ಸ್ವಯಂ ಶಕ್ರಃ ಐಂದ್ರಂಪದಮಶಾಸತ ॥8॥"-ಆರನೆಯ ಮನು ಚಕ್ಷುಷನ ಮಗನು, ಚಾಕ್ಷುಷನೆಂಬುವನು. ಸ್ವಯಂ ದೇವೇಂದ್ರನು ಮಂದ್ರದ್ಯುಮ್ನನೆಂಬ ಹೆಸರು

ನಿಂದ ಇಂದ್ರಪಟ್ಟವನ್ನಾಳಿದನು—ಎಂದು ಹೇಳಿರುವರು. ಇಕ್ಷ್ವಾಕುರಾಜನ ಮಗನು ವಿಕುಕ್ಷಿರಾಜನು, ಇಂದ್ರಾವತಾರನು. ವಾಲಿ ಇಂದ್ರಾವತಾರನು.

ಮನ್ಮಥನ ಅವತಾರಗಳನ್ನು ಹೇಳುತ್ತಾರೆ :—ರಾಮದೇವರ ತಮ್ಮನಾದ ಕೈಕೇಯಿಯ ಮಗ ಭರತನು ಪೂರ್ವದಲ್ಲಿ ಮನ್ಮಥನು. ನಿರ್ಣಯ ಮೂರನೆಯ ಅಧ್ಯಾಯದಲ್ಲಿ —"ಪೂರ್ವಂ ನರೇಶ್ವ ಕ್ರಮಭೂದ್ದಿದುರ್ಗಾತಮಃ ಸ್ಥಿತಾಶ್ರೀ ರಿತಿಯಾಂ ವದಂತಿ ॥ ಸತ್ವಾತ್ಮಿಕಾಶಂಖಮಥೋರಜಸ್ಥಾ ಭೂರ್ನಾಮಿಕಾಪದ್ಮ ಮಭೂದ್ದರೇರ್ಹಿ ॥75॥ ಗದಾತುವಾಯುರ್ಬಲ ಸಂವಿದಾತ್ಮಾಶಾರ್ಙ್ಗಾತ್ವ ವಿದ್ಯೇತಿರಮ್ಯೈವಖಡ್ಗಃ ॥ ದುರ್ಗಾತ್ಮಿಕಾಸೇವ ಚ ಚರ್ಮನಾಮ್ನೀ ಪಂಚಾ ತ್ಮಕೋ ಮಾರುತ ಏವ ಬಾಣಃ ॥76॥ ಏವಂಸ್ಥಿತೇಷ್ವೇವ ಪುರಾತನೇಷು ವರಾದ್ರಥಾಂಗ ತ್ವಮವಾಪಕಾಮಃ ॥ ತತ್ಸೂನು ತಾಮಾಪ ಚ ಸೋಽನಿರುದ್ಧೋ ಬ್ರಹ್ಮೋದ್ಭವಃ ಶಂಖಿತನುಃ ಪ್ರಮಾತ್ಮಾ ॥77॥ ತಾವೇವ ಜಾತೌ ಭರತತ್ವ ನಾಮ್ನಾ ಶತ್ರುಘ್ನ ಇತ್ಯೇವ ಚ ರಾಮತೋನು"— ಮೊಟ್ಟಮೊದಲು, ಸತ್ತ್ವ ರಜೋಸ್ತಮೋಗುಣಾತ್ಮಕರಾದ, ಶ್ರೀಭೂದುರ್ಗೆಯರೆಂಬ ಲಕ್ಷ್ಮೀದೇವಿಯರ ಮೂರು ರೂಪಗಳಲ್ಲಿ ತಮೋಗುಣಾತ್ಮಕರಾದ ದುರ್ಗಾದೇವಿಯರು ಪರ ಮಾತ್ಮನ ಚಕ್ರರೂಪರಾಗಿದ್ದರು. ಸತ್ತ್ವಗುಣಾತ್ಮಕರಾದ ಶ್ರೀದೇವಿಯರು ಶಂಖರೂಪಕರಾಗಿದ್ದರು. ರಜೋಗುಣಾತ್ಮಕರಾದ ಭೂದೇವಿಯರು ಪದ್ಮ ರೂಪರಾಗಿದ್ದರು. ಬಲಜ್ಞಾನದಿಂದ ಕೂಡಿದ ವಾಯುದೇವರು ಗದೆಯಾಗಿ ದ್ದರು. ವಿದ್ಯಾನಾಮಕ ರಮಾದೇವಿಯರು ಶಾರ್ಙ್ಗವೆಂಬ ಧನುಸ್ಸಾಗಿದ್ದರು. ರಮಾದೇವಿಯರೇ ಖಡ್ಗರೂಪರಾಗಿದ್ದರು. ದುರ್ಗಾದೇವಿಯರು ಚರ್ಮ ಪ್ರಾಣಾಪಾನಾದಿ ಪಂಚರೂಪಿಯಾದ ವಾಯುದೇವರು ಬಾಣರೂಪರಾಗಿದ್ದರು. ಹಿಂದಿನ ಸ್ಥಿತಿ ಹೀಗಿರಲಾಗಿ, ಮನ್ಮಥನು ತಪಸ್ಸನ್ನು ಮಾಡಿ, ವರದಿಂದ ಚಕ್ರತ್ವ ವನ್ನು ಹೊಂದಿದನು.

ಮನ್ಮಥನ (ಪ್ರದ್ಯುಮ್ನನ) ಮಗನಾಗಿ, ಅನಿರುದ್ಧನು ತಪಸ್ಸಿನಿಂದ ವರ ವನ್ನು ಪಡೆದು, ಶಂಖರೂಪನಾಗಿ ಬ್ರಹ್ಮದೇವರಿಂದ ಜನಿಸಿ, ಪರಮಾತ್ಮನ ಕೈ

ಸೇರಿದನು. ಅವರಿಬ್ಬರೇ ಭರತ, ಶತುಘ್ನರೆಂಬ-ಹೆಸರಿನಿಂದ ರಾಮದೇವರ ನ್ನನುಸರಿಸಿ ಕೈಕೇಯಿ, ಸುಮಿತ್ರೆಯರ ಮಕ್ಕಳಾಗಿ ಹುಟ್ಟಿದರೆಂದು ಹೇಳು ವರು. ಈ ಆಧಾರದಮೇಲೆ,ಮನ್ಮಥನೇ ಸುದರ್ಶನನೆಂಬ ಚಕ್ರನಾಗಿದ್ದವನು. ಅವನೇ ಭರತ. ಕಾಮನು ಭರತ, ಸುದರ್ಶನ-ಎಂಬ ಎರಡು ರೂಪಗಳಗೂ ಆಧಾರಕೊಟ್ಟಂತಾಯಿತು. ಜಾಂಬವತೀ ಕುಮಾರನಾದ ಸಾಂಬನು ಬ್ರಹ್ಮ ದೇವರ ಅಂಶದಿಂದ ಕೂಡಿದ ಮನ್ಮಥನು. ಇದಕ್ಕೆ ಆಧಾರ—ನಿರ್ಣಯ 17 ನೆಯ ಅಧ್ಯಾಯದಲ್ಲಿ "ಅಥಾಪ ಸಾಂಬನಾಮಕಂ ಸುತಂಚರೋಹಿಣೀಹರೇಃ ॥220॥ ಚತುರ್ಮುಖಾಂಶ ಸಂಯುತಂ ಕುಮಾರಮೇವ ಷಣ್ಮುಖಂ"-ಶ್ರೀ ಕೃಷ್ಣನು ಜಾಂಬವತೀ ಸತ್ಯಭಾಮೆಯರನ್ನು ಮದುವೆಮಾಡಿಕೊಂಡಮೇಲೆ ರೋಹಿಣಿಯು ಕೃಷ್ಣನ ದೆಸೆಯಿಂದ ಸಾಂಬನೆಂಬ ಕುಮಾರನನ್ನು ಪಡೆದಳು. (ರೋಹಿಣಿ ಎಂದು ಜಾಂಬವತಿಗೆ ಹೆಸರು. ಜಾಂಬವಂತನ ಮಗಳಾದುದ ರಿಂದ ಜಾಂಬವತೀಯೆಂದು ಪ್ರಸಿದ್ಧಿಯಾದರೂ,ಆಕೆಯ ಮೊದಲನೆಯ ಹೆಸರು ರೋಹಿಣಿಯೆಂದು ಇದ್ದಿತು) ಆ ಸಾಂಬನು ಪೂರ್ವದಲ್ಲಿ ಷಣ್ಮುಖನು. ಬ್ರಹ್ಮ ದೇವರ ಅಂಶದಿಂದ ಹುಟ್ಟಿದನು- ಎಂದು ಹೇಳಿರುವರು.

ಈ ಆಧಾರದಿಂದ, ಮನ್ಮಥನು ಬ್ರಹ್ಮಾವೇಶದಿಂದ ಕೂಡಿದ ಸಾಂಬ ನೆಂತಲೂ, ಮನ್ಮಥನೇ ಷಣ್ಮುಖನೆಂತಲೂ, ಎರಡು ಅವತಾರಗಳಿಗೂ ನಿರ್ಣಯ ಮಾಡಿದಂತಾಯಿತು. ಪ್ರದ್ಯುಮ್ನನು ಮನ್ಮಥನೆಂಬ ವಿಷಯದಲ್ಲಿ ನಿರ್ಣಯ ಅಧ್ಯಾಯದಲ್ಲಿ "ತಯೋರನುಜ್ಞನಾರ್ದನೋವಿಯೋಗ ಶೂನ್ಯಯಾ ಸದಾ ॥181॥ ಅಧತ್ತಪುತ್ರಮುತ್ತಮಂ ಮನೋಭವಂ ಪುರಾತನಂ ॥ ಚತುಸ್ತ ನೋಹರೇ ಪ್ರಭೋಸ್ತೃತೀಯರೂಪ ಸಂಯುತಃ ॥182॥ "ಶ್ರೀಕೃಷ್ಣನು ಸಾಕ್ಷಾದ್ರಮಾವತಾರಳಾದ ರುಗ್ಮಿಣೀದೇವಿಯನ್ನು ಮದುವೆಮಾಡಿಕೊಂಡು ಸದಾವಿಯೋಗಶೂನ್ಯಳಾದ ಆ ರುಗ್ಮಿಣಿಯಿಂದ ರಮಿಸುತ್ತಿದ್ದನು. ಆಕೆಯಲ್ಲಿ ಪ್ರದ್ಯುಮ್ನನೆಂಬ ಕುಮಾರನು ಜನಿಸಿದನು. ಅವನು ಪೂರ್ವದಲ್ಲಿ,ಮನ್ಮಥನು ಪರಮಾತ್ಮನ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೆಂಬ 4 ರೂಪಗಳ ಪೈಕಿ, ಮೂರನೆಯದಾದ ಪ್ರದ್ಯುಮ್ನನಾಮಕ ಪರಮಾತ್ಮನ ಅಂಶ

ದಿಂದ ಕೂಡಿ ಅದೇ ಹೆಸರಿನಿಂದ ಜನಿಸಿದನೆಂಬುವುದೇ ಇದಕ್ಕೆ ಆಧಾರವು. ಬ್ರಹ್ಮದೇವರ ಮಾನಸಪುತ್ರರಾದ ಸನಕಾದಿ ನಾಲ್ವರಲ್ಲಿ ಸನತ್ಕುಮಾರನು ಸನ-ತ್ಕುಮಾರನಾಮಕ ಪರಮಾತ್ಮನ ಅಂಶದಿಂದ ಕೂಡಿದ ಮನ್ಮಥನ ಅವತಾರವು. ಇವೆಲ್ಲವೂ ಮನ್ಮಥನ ಅವತಾರಗಳೆಂದು ತಿಳಿಯಬೇಕು. ॥14॥

**೩. ಭಾವದರ್ಪಣ :-**

ಏಳುಮಂದಿ ಅವತಾರಮಾಡಿದಂಥ ಇಂದ್ರನ ವಿಚಾರ ಹೇಳುತ್ತಾರೆ । ನರ ಹರೀತಿ । ತದುಕ್ತಂ ತಾರತಮ್ಯೇ । "ಪುರಂದರೋ ಮಂದ್ರದ್ಯುಮ್ನೋಽರ್ಜುನ ನೃಹರೀರಯುಕ್ । ವಾಲಿ ಗಾಧಿ ವಿಕುಕ್ಷಿಶ್ಚ ಕುಶಾದ್ಯಾ ಇಂದ್ರ ಉಚ್ಯತೇ"— ಇತಿ । ಆರು ಅವತಾರ ಉಳ್ಳಂಥ ಕಾಮನ ವಿಚಾರ ಹೇಳುತ್ತಾರೆ । ಭರತೇತಿ ತದುಕ್ತಂ ತಾರತಮ್ಯೇ । "ಪ್ರದ್ಯುಮ್ನಯುಕ್ತಃ ಪ್ರದ್ಯುಮ್ನೋ ಭರತಶ್ಚ ಸುದ ರ್ಶನಃ । ಬ್ರಹ್ಮಯುಕ್ ಸಾಂಬ ಸ್ಕಂದ ಶ್ರೀಕುಮಾರಃ ಕಾಮ ಉಚ್ಯತೇ ಇತಿ ॥ ॥14॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-**

ಕ್ರಮಾಗತೇಂದ್ರಾವತಾರಾನ್ ಆಹ. "ನರ"–ಇತಿ ॥ ಶೇಷಃ ॥ ನರಃ ಪಾರ್ಥಃ ॥ ಸ ಚಾರ್ಜುನೋನಾಮ ನರಾಂಶಯುಕ್ತಃ ವಿಷ್ಣ್ವಾವೇಶೀ ॥ ಯುಧಿಷ್ಠಿರಾದ್ಯೇಷು ಚತುರ್ಷುವಾಯುಃ ಸಮಾವಿಷ್ಟಃ ॥ ಇತಿ ॥ ಗಾಧಿಃ ವಿಶ್ವಾಮಿತ್ರ ಪಿತಾ ॥ ಇಂದ್ರಃ ಸಪ್ತಮಃ ಪುರಂದರಃ ॥ ಮಂದ್ರದ್ಯುಮ್ನಃ ಷಷ್ಠಃ ॥ ಕುಶಃ ರಾಮನಂದನಃ ॥ ದೇವ್ಯಾಂ ಸ ಚಾಜನಯದಿಂದ್ರ ಹುತಾ ಶನೌ ದ್ವೌಪುತ್ರೌ ಕುಶಲವೌ ॥ ವಿಕುಕ್ಷಿಃ ಇಕ್ಷ್ವಾಕುಜಃ ॥ ವಾಲೀ ಸತ್ವ ಏವ ವಾಸವಃ ॥ ಇಂದ್ರಾವತಾರೋತ್ತರಂ ಕಾಮಾವತಾರಾನ್ ವಕ್ತಿ "ಭರತ"— ಇತಿ ॥ ಶ್ರೀರಾಮಾನುಜಃ ॥ ಅತ್ರವಿಶೇಷಃ ॥ "ಪ್ರದ್ಯುಮ್ನಪರತಂತ್ರಮ್ ॥ ಆದ ವ್ಯೂಹಗಃ ಪ್ರದ್ಯುಮ್ನಃ ॥ ದ್ವಿತೀಯಃ ಕಸ್ನಜನ್ಯಃ ॥ ಪ್ರದ್ಯುಮ್ನ

ಭರತೌ ಹರಿಪ್ರದ್ಯುಮ್ನಯುಕ್ತೌ ॥ ಸುದರ್ಶನಂ ತನ್ನಾಮ್ನೀ ಕಾಮಃ ಭರತಃ ಇತಿ — ಭರತೇ ಮಾನವಮ್ ॥ ಸಂಕರ್ಷಣಾದ್ಯೈಃ ತ್ರಿಭಿರೇವ ರೂಪೈಃ ಆವಿಷ್ಟ ಆಸೀತ್ ತ್ರಿಷು ವಿಷ್ಣುಃ" — ಪ್ರದ್ಯುಮ್ನೇನ ಪ್ರದ್ಯುಮ್ನಃ ಇತ್ಯತ್ರ ಚತುಸ್ತನೋರ್ಹರೇಃ ಪ್ರಭೋಃ ತೃತೀಯರೂಪ ಸಂಯುತಃ ॥ "ಸಾಂಬೇ"-ಬ್ರಹ್ಮಾವೇಶೇ, "ಅಥಾಪ ಸಾಂಬನಾಮಕಂ ಸುತಂ ಚ ರೋಹಿಣೀ ಹರೇಃ ॥ ಚತುರ್ಮುಖಾಂಶ ಸಂಯುತಂ ಕುಮಾರಮೇವ ಷಣ್ಮುಖವತ್"-ಇತಿ ॥ ನನು ಸಾಂಬಸ್ಯ ಜಾಂಬವತೀಜನಿ ವಿರೋಧಃ "ತತಃ ಕ್ಷಮಾಪಯನ್ ಸತ್ರಾಂ ಪ್ರದಾಯ ರೋಹಿಣೀಂ ಸುತಾಂ । ಮಣಿಂ ಚೇತಿ ರೋಹಿಣೀತ್ಯುಕ್ತೇಃ ॥ ವಾಲಿಗಾರ್ಧಿರ್ವಿಕುಕ್ಷಿಶ್ಚ ಪಾರ್ಥ ಇಂದ್ರಃ ಪುರಂದರಃ ॥ ಸುದರ್ಶನಶ್ಚ ಭರತಃ ಪ್ರದ್ಯುಮ್ನಃ ಸ್ಕಂದ ಏವ ಚ ॥ ಸನತ್ಕುಮಾರಃ ಕಾಮಶ್ಚೇತ್ಯೇಕ ಏವ ವ್ಯವಸ್ಥಿತಃ ॥ತಾಭ್ಯಃ ಶತತ್ರಿಂದ್ರಾಃ ಪುರಂದರ ಇತೀರಿತಾಃ॥ಪುರಂಪ್ರತ್ರಾದಿ ಶತಪರಾಃ ಶರೀರಂ ದಾರಯತಿ ಇತಿ ಪುರಂದರಃ ॥ ಮಂದಾನ್ ದೇವಾನ್ ಅಜ ಅತಃ ಮಂದ್ರದ್ಯುಮ್ನಃ ॥ ತತ್ರ ವಿಶೇಷಃ, ಮಂದ್ರದ್ಯುಮ್ನ ಏವ ಅರ್ಜುನಃ ॥ ಪುರಂದರಃ ವಾಲೀ ॥ ಚಂದ್ರವಂಶಃ ಗಾಧಿಃ ಮಂದ್ರದ್ಯುಮ್ನಃ ॥ ವೇದೋಕ್ತ ಮಂತ್ರಾಃ ಗಾಃ ಪ್ರೋಕ್ತಾಃ ಧಿಯಾ ಧಾರಯತೇ ನುತಃ ॥ ವಿಶೇಷೇಣ ಪರಂ ಕುಕ್ಷೌವಿಜಾನಾತಿ ॥ ವಾಲ್ಮೀಕಿ ಋಷಿಣಾ ಯಸ್ಮಾತ್ ಕುಶೇನೈವ ವಿನಿರ್ಮಿತಃ॥ ಪ್ರಕೃಷ್ಟ ಪ್ರಕಾಶರೂಪತ್ವಾತ್ ಪ್ರದ್ಯುಮ್ನಃ ॥ "ರಾಮಾಜ್ಞಾಂ ಭರತಃ ಇತಿ॥ ರಿಪೂಣಾಂ ಸಾಮರ್ಥ್ಯಂ ಯಸ್ಮಾತ್ ಸ್ಕಂದತೇ. ॥14॥

## ಕನ್ನಡಾರ್ಥ

ಕ್ರಮಪ್ರಾಪ್ತವಾದ ಇಂದ್ರಾವತಾರಗಳನ್ನು ಹೇಳುತ್ತಾರೆ— "ನರ"-ಎಂಬ ಪದ್ಯದಿಂದ. ಇಲ್ಲಿರುವ ಮೊದಲನೆಯ ನರಪದಕ್ಕೆ— ಶ್ರೀಪನೆಂದು ಅರ್ಥ. ಎರಡನೆಯ ನರಪದಕ್ಕೆ-ಪಾರ್ಥ-ಅರ್ಜುನನೆಂದು ಅರ್ಥ. ಪಾರ್ಥನು ಅರ್ಜುನನು. ಅವನು ವಿಷ್ಣುವಿನ ಆವೇಶವುಳ್ಳವನು. ಯುಧಿಷ್ಠಿರ ಮುಂತಾದ ನಾಲ್ವರಲ್ಲಿ ವಾಯುದೇವರು ಸಮಾವಿಷ್ಟರು."— ಎಂದು ಮುಂತಾದ ವಚನಗಳಿರುತ್ತವೆ. ವಿಶ್ವಾಮಿತ್ರನ ತಂದೆಯ-ಗಾಧಿ. ಪುರಂದರನಾಮಕ ಇಂದ್ರನು

ಏಳನೆಯ ಮನ್ವಂತರದಲ್ಲಿ ಇಂದ್ರನಾಗಿರುವನು. ಆರನೆಯ ಮನ್ವಂತರದ ಇಂದ್ರನು ಮಂದ್ರದ್ಯುಮ್ನನು. ಕುಶನು ರಾಮಪುತ್ರನು. "ಲಕ್ಷ್ಮೀಸ್ವರೂಪ ಳಾದ ಸೀತಾದೇವಿಯಲ್ಲಿ ಇಂದ್ರಾಗ್ನಿ ಸ್ವರೂಪರಾದ ಕುಶ-ಲವರೆಂಬ ಇಬ್ಬರು ಪುತ್ರರನ್ನು ಹುಟ್ಟಿದರು."- ಎಂಬ ವಚನವು ಇದರಲ್ಲಿ ಆಧಾರ. ಇಕ್ಷ್ವಾಕು ವಿನ ಮಗನು ವಿಕುಕ್ಷಿಯು. ಇಂದ್ರಾವತಾರನೇ ವಾಲಿಯು.

ಇಂದ್ರಾವತಾರಗಳನ್ನು ಹೇಳಿದನಂತರ, ಕಾಮಾವತಾರಗಳನ್ನು ಹೇಳು ತ್ತಾರೆ—"ಭರತ"-ಎಂಬ ಉತ್ತರಾರ್ಧದಿಂದ. ರಾಮನ ತಮ್ಮನು ಭರತನು. ಕೈಕೇಯಿಯ ಮಗನು. ಇಲ್ಲಿ ವಿಶೇಷ-ಪ್ರದ್ಯುಮ್ನಪದವನ್ನು ತಂತ್ರದಿಂದ ಆವರ್ತಿಸಬೇಕು. ಪ್ರಥಮವ್ಯೂಹದಲ್ಲಿ ಸೇರಿರುವ ಪ್ರದ್ಯುಮ್ನನು ಮನ್ಮಥನು. ಅವನೇ ಶ್ರೀಕೃಷ್ಣಪುತ್ರನಾದ ಪ್ರದ್ಯುಮ್ನನು. ಪ್ರದ್ಯುಮ್ನರೂಪೀ ಹರಿಯ ಆವೇಶಯುಕ್ತಳು. ಭರತನು ಕಾಮಾಂಶನು ಹಾಗೂ ಹರಿಯ ಆವೇಶ ಯುಕ್ತನು. ಪ್ರದ್ಯುಮ್ನನು-ಕಾಮನು ತಪಸ್ಸನ್ನು ಮಾಡಿ ವರದಿಂದ ಹರಿಚಕ್ರ ಸ್ವರೂಪನಾದವನು. ಅಂದರೆ ಅದಕ್ಕೆ ಅಭಿಮಾನಿಯಾದನು."—ಎಂದು ಪ್ರಮಾಣವಿರುತ್ತದೆ. ಕಾಮನೇ ಭರತನು. ಈ ವಿಷಯದಲ್ಲಿ, "ಸಂಕರ್ಷಣ ಮುಂತಾದ ಮೂರು ರೂಪಗಳಿಂದ ಆ ಮೂವರು ದಶರಥ ಸುತರಲ್ಲಿಯೂ ಹರಿಯು ಆವಿಷ್ಟನಾಗಿರುತ್ತಾನೆ."- ಎಂಬ ವಾಕ್ಯವು ಪ್ರಮಾಣ. ಕಾಮನಲ್ಲಿ ಪ್ರದ್ಯುಮ್ನರೂಪದ ಆವೇಶವಿರುವುದೆಂಬಲ್ಲಿ,-"ನಾಲ್ಕು ರೂಪಿಯಾದ (ನಾರಾ ಯಣನ) ಹರಿಯ ಮೂರನೆಯ ರೂಪವು (ಪ್ರದ್ಯುಮ್ನ) ಕಾಮನಲ್ಲಿ ಆವಿಷ್ಟ ವಿರುವುದೆಂಬ"—ವಚನಗಳು ಪ್ರಮಾಣಗಳಿರುವುವು. ಇನ್ನು ಸಾಂಬನಲ್ಲಿ ಬ್ರಹ್ಮಾವೇಶವಿರುವದೆಂಬ ವಿಷಯದಲ್ಲಿ, "ಷಣ್ಮುಖಾವತಾರ ಸ್ಕಂದನು, ಬ್ರಹ್ಮಾವೇಶಯುಕ್ತನಾಗಿ ರೋಹಿಣಿಯಲ್ಲಿ ಹುಟ್ಟಿದನು. ಅವನೇ ಸಾಂಬನು"- ಎಂಬ ವಚನಗಳು ಆಧಾರಗಳು.

ಹಾಗಾದರೆ, ಸಾಂಬನು ರೋಹಿಣೀತನಯನೆಂದು ಹೇಳಿದರೆ-ಜಾಂಬವತೀ ಕುಮಾರನೆಂದು ಹೇಳುವ ವಚನಗಳಿಂದ ವಿರೋಧ ಬರುವುದು,"-ಎಂದು ಶಂಕಿಸ

ಬಾರದು. ಯಾಕೆಂದರೆ, "ಜಾಂಬವಂತನು ಶ್ರೀಕೃಷ್ಣನಿಗೆ ಕ್ಷಮೆಯನ್ನು ಬೇಡಿಕೊಂಡು, ರೋಹಿಣಿಯೆಂಬ ತನ್ನ ಮಗಳನ್ನೂ, ಸ್ಯಮಂತಕಮಣಿಯನ್ನೂ ಕೊಟ್ಟನು."—ಎಂಬ ವಚನಗಳಿಂದ ಜಾಂಬವತಿಯ ಮುಂಚಿನ ಹೆಸರು ರೋಹಿಣಿಯೆಂದೇ ಇರುತ್ತದೆ. ವಾಲಿ, ಗಾಧಿ, ವಿಕುಕ್ಷಿ, ಪಾರ್ಥ, ಇಂದ್ರ, ಪುರಂದರ–ಇವರೆಲ್ಲರೂ ಸಮಾನರು. ಅದರಂತೆ, ಸುದರ್ಶನಾಭಿಮಾನಿಯಾದ ಕಾಮ, ಪ್ರದ್ಯುಮ್ನ, ಭರತ, ಸ್ಕಂದ, ಸನತ್ಕುಮಾರ-ಇವರು ಸಹ ಅಭಿನ್ನರೇ ಹೊರತು ಭಿನ್ನರಲ್ಲ- ಎಂದೇ ನಿಶ್ಚಿತವಿರುತ್ತದೆ. ಇವರು ಪಾರ್ವತಿಗಿಂತ ಹತ್ತು ಗುಣಗಳಿಂದ ಕಡಿಮೆಯವರು. ವೃತ್ರಾಸುರನ ಶರೀರವು ಪುರ. ಅದನ್ನು ವಿದಾರಣ ಮಾಡುವವನು, ಸೀಳುವವನು, ಪುರಂದರನು. ಅದರಂತೆ,ಮಂತ್ರವಾಗಿ ವೇದಗಳನ್ನು ಹೇಳುವವನು—ಮಂದ್ರದ್ಯುಮ್ನ. ಅರ್ಜುನನೇ ಮಂದ್ರದ್ಯುಮ್ನನು. ಪುರಂದರನೇ ವಾಲಿ ಅಥವಾ ಚಂದ್ರವಂಶದವನಾದ ಗಾಧಿಯು –ಮಂದ್ರದ್ಯುಮ್ನನು. ವೇದೋಕ್ತಮಂತ್ರಗಳಿಗೆ 'ಗಾ'–ಎಂದು ಕರೆಯುತ್ತಾರೆ. ಅಂಥಾ ವೇದಮಂತ್ರಗಳನ್ನು ಧರಿಸುವವನು "ಗಾಧಿ"–ಎಂದು– ವಿಶ್ವಾಮಿತ್ರನ ತಂದೆಗೆ ಗಾಧಿ-ಎಂದು ಕರೆಯುತ್ತಾರೆ.

ವಿಶೇಷವಾಗಿ, ಹರಿಯನ್ನು ಕುಕ್ಷಿಯಲ್ಲಿ (ಉದರದಲ್ಲಿ) ತಿಳಿಯುವವನು ವಿಕುಕ್ಷಿ. ಇಕ್ಷ್ವಾಕುಕುಮಾರ. ಅತಿಶಯಪ್ರಕಾಶಸ್ವರೂಪನಾದುದರಿಂದ, ಪ್ರದ್ಯುಮ್ನನೆಂದು ಕಾಮನ ಹೆಸರು. ವಾಲ್ಮೀಕಿಋಷಿಗಳಿಂದ ಕುಶದಿಂದ ನಿರ್ಮಿಸಿದುದರಿಂದ, ನಾಮಕರಣ ಮಾಡಿದ್ದುದರಿಂದ, "ಕುಶ"–ಎಂದು ಹೆಸರು ಕುಶನಿಗೆ–(ರಾಮನ ಜ್ಯೇಷ್ಠಪುತ್ರನಿಗೆ) ಬಂದಿರುತ್ತದೆ. ರಾಮನ ಆಜ್ಞೆಯನ್ನು ಪರಿಪಾಲಿಸುವುದರಿಂದ, ಭರತನೆಂದು ಕೈಕೇಯೀಪುತ್ರನಿಗೆ ಹೆಸರು. ರಿಪುಗಳ ಸಾಮರ್ಥ್ಯವು ಯಾವನಿಂದ ಸ್ಕಂಧಿತವಾಗುತ್ತದೆಯೋ, ಅವನು ಸ್ಕಂದನು. ಹೀಗೆ ಸ್ಕಂದಾದಿ ಪದಗಳ ಅರ್ಥವಿವರಣೆಯನ್ನು ತಿಳಿಯಬೇಕು. ॥14॥

**ಶ. ಶ್ರೀಗುರುಹೃದಯ ಪ್ರಕಾಶಿಕೆ :-**

ಏಳು ಸಾವುದಿಂದ ಅವತಾರ ಮಾಡಿದಂಥ ಇಂದ್ರನ ವಿಚಾರವನ್ನು ಹೇಳುತ್ತಾರೆ—

**ಪುರಂದರೋ ಮಂದ್ರದ್ಯುಮ್ನೋ ಅರ್ಜುನ ನೃಹರೀರಯುತ್ ।**
**ಗಾಧಿ ವಿಕುಕ್ಷಿಶ್ಚ ಕುಶಾದ್ಯಾ ಇಂದ್ರ ಉಚ್ಯತೇ ॥**

ಎಂಬುದಾಗಿ ಹೇಳಿರುವುದರ ಮೇರೆ, ವಿಷ್ಣು ವಾಯು ಆವೇಶ ಇರುವ, ನರಾವೇಶಯುಕ್ತ ಪುರಂದರನೆಂಬ ಇಂದ್ರಪುತ್ರಾರ್ಜುನನ ಅವತಾರ ಒಂದು. ಗಾಧಿರಾಜನೆಂಬ ಅವತಾರ ಒಂದು. ಶ್ರೀರಾಮಚಂದ್ರನ ಪುತ್ರ ಕುಶನೆಂಬುದು ಒಂದು. ಮಂದರದ್ಯುಮ್ನರಾಜ ಒಂದು. ವಿಕುಕ್ಷಿ—ಎಂಬ ರಾಜ ಒಂದು. ಈ ಆರೂನೂ-ಇಂದ್ರದೇವರ ಅವತಾರಗಳು. ಪ್ರದ್ಯುಮ್ನರೂಪಾವೇಶಯುಕ್ತ ಭರತನು, ಬ್ರಹ್ಮಾವೇಶವುಳ್ಳ ಸಾಂಬನೆಂಬ ಕೃಷ್ಣಪುತ್ರನು, ಸುದರ್ಶನ ಎಂಬ ಚಕ್ರಾಭಿಮಾನಿರೂಪ, ಕೃಷ್ಣಪುತ್ರ ಪ್ರದ್ಯುಮ್ನ, ಸನಕಾದಿಗಳಲ್ಲಿ ಸನತ್ಕುಮಾರನೆಂಬ ಯೋಗಿರೂಪ, ರುದ್ರಪುತ್ರ ಷಣ್ಮುಖನೂ-ಸಹ ಕಾಮನ ಅವತಾರಗಳು. ॥14॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ, ಸಾವರ್ಣ್ಯಾದಿಗಳಿಗಿಂತ ಅವರರಾದ ಇಂದ್ರ ಮತ್ತು ಕಾಮ—ಈರ್ವರ ಅವತಾರ ವಿಶೇಷಗಳನ್ನು ತಿಳಿಸುತ್ತಾರೆ.

1. **ನರಹರಿ :-**

ಈ ಪದವನ್ನು ನರ ಮತ್ತು ಹರಿ ಎಂದು ಎರಡು ಪದಚ್ಛೇಧ ಮಾಡಿಕೊಳ್ಳಬೇಕು.

(1) ನರ-ಎಂದರೆ, ಶೇಷಾವೇಶಯುಕ್ತನಾದ ಅರ್ಜುನನು. (2) ಹರಿ-ಎಂದರೆ, ಶ್ರೀಮನ್ನಾರಾಯಣ-ನರಾಂಶದಿಂದಲೂ ಮತ್ತು ವಿಶೇಷವಾದ ಪರಮಾತ್ಮನ ಅಂಶದಿಂದಲೂ ಕೂಡಿದ ಇಂದ್ರನ ಅವತಾರವೇ ಅರ್ಜುನನು.

**ಪ್ರಮಾಣ :–**

ಸಚಾರ್ಜುನೋ ನಾಮ ನರಾಂಶಯುಕ್ತೋ ವಿಷ್ಣ್ವಾವೇಶೀ ಬಲವಾನ ಸ್ತ್ರೈವೇತ್ತಾ ॥

**(ಭಾ. ತಾ. ನಿರ್ಣಯ-ಅಧ್ಯಾಯ-12. ಶ್ಲೋಕ-99).**

ಕುಂತಿಯು, ಮಂತ್ರಬಲದಿಂದ ದೇವೇಂದ್ರನನ್ನು ಆಹ್ವಾನಿಸಿದಳು. ಆಗ ದೇವೇಂದ್ರನೇ ಕುಂತಿಯಲ್ಲಿ ಅರ್ಜುನನಾಮದಿಂದ ಅವತರಿಸಿದನು. ನರಾಂಶ ದಿಂದಲೂ (ಹರಿಯ ಆವೇಶದಿಂದ ಕೂಡಿದ ಶೇಷಾಂಶ) ಮತ್ತು ಹರಿಯ ವಿಶೇಷವಾದ ಅಂಶದಿಂದಲೂ ಕೂಡಿ, ಮಧ್ಯಮಪಾಂಡವನಾದ ಅರ್ಜುನನು ಮಹಾಬಲಾಢ್ಯನಾಗಿದ್ದನು. ಸಕಲಶಾಸ್ತ್ರವೇತ್ತನಾಗಿದ್ದನು.

**"ನರನಾರಾಣವೇತೌ"-ಎಂಬ ಭಾರತವಾಕ್ಯದಿಂದ**-ಕೃಷ್ಣಾರ್ಜುನರೇ ನರನಾರಾಯಣರೆಂದು ತಿಳಿಯಬೇಕು.

ಅಂದರೆ, ನರಹರಿ ಆವೇಶದಿಂದ ಯುಕ್ತನಾದ ನರನಾಮಕ ಮೊದಲ ನೆಯದು.

**2. ಪುರಂದರ :–**

ಆರನೆಯ ಮನ್ವಂತರದಲ್ಲಿ ಸತ್ಯವ್ರತನೆಂಬ ರಾಜನಲ್ಲಿ,ಶ್ರೀಹರಿಯು ಮತ್ಸ್ಯಾವ ತಾರ ಮಾಡಿ, ಅವನಿಗೆ ತತ್ತ್ವೋಪದೇಶಮಾಡಿದನು. ಆ ಸತ್ಯವ್ರತನೇ ಭಗವ ದನುಗ್ರಹದಿಂದವಿವಸ್ವಾನ್-ಎಂಬ ಸೂರ್ಯನ ಮಗನಾಗಿ,ಶ್ರಾದ್ಧದೇವ ಮತ್ತು

ಸ್ವತ-ಎಂಬ ಹೆಸರಿನಿಂದ ಆ ಮನ್ವಂತರದಲ್ಲಿ ಅಧಿಪತಿಯಾದನು. ಆತನ ರು ಇಕ್ಷ್ವಾಕು ಮೊದಲಾದ 19 ಮಂದಿ. ಆ ಮನ್ವಂತರದಲ್ಲಿ ಪುರಂದರ ಕಶ್ಯಪರ ಮಗನು ಇಂದ್ರನಾಗಿದ್ದನು. ಆದ್ದರಿಂದ, ವೈವಸ್ವತಮನ್ವಂತ ಇಂದ್ರನಿಗೆ **ಪುರಂದರ**–ಎಂದು ಹೆಸರು.

**ರಾಣ :–**

"ಏಷ ಏವ ಮನುರ್ಜಾತಃ ಸಪ್ತಮೋಽ ರವೇಸುತಃ ॥37॥
ಇಕ್ಷ್ವಾಕು ಮುಖ್ಯಾಸ್ತಸ್ಯಾಸುಃ ಪುತ್ರಾದಶಾ ಮಹಾಬಲಾಃ ॥
ಇಂದ್ರಃ ಪುರಂದರಸ್ತತ್ರ ದೇವಾ ರುದ್ರಾದಯಸ್ತಥಾ"–॥38॥
**(ವಿಷ್ಣುರಹಸ್ಯ–ಅಧ್ಯಾಯ–44).**

**ಗಾಧಿ :–**

ಚಂದ್ರವಂಶದ ಜಹ್ನುರಾಜನ ಸಂತತಿಯಲ್ಲಿ ಜನಿಸಿದ ಕುಶಿಕ ರಾಜನಮಗ. ನ ರಾಜಧಾನಿ ಕನ್ಯಾಕುಬ್ಜ. ಪುರುಕುತ್ಸನ ಮಗಳು ಈತನ ತಾಯಿ, ನ ಮಗನೇ ವಿಶ್ವಾಮಿತ್ರ. ಇಂದ್ರನೇ ಗಾಧಿನಾಮಕನಾಗಿ ಅವತರಿಸಿದನು,

**ಕುಶ :–**

ಶ್ರೀರಾಮಚಂದ್ರನು ಸೀತಾದೇವಿಯರಲ್ಲಿ ಲವ ಮತ್ತು ಕುಶರೆಂಬ ಅವಳಿ ಳನ್ನು ಪಡೆದನು. ಅವರಲ್ಲಿ, ಕುಶರಾಯನು ಇಂದ್ರಾಂಶಸಂಭೂತನು. ನು ಅಗ್ನಿಯ ಅವತಾರನು. ಅವಳೀ ಮಕ್ಕಳಲ್ಲಿ ಕುಶನೇ ಜ್ಯೇಷ್ಠನು. ವಾಲ್ಮೀಕಿಮಹರ್ಷಿಗಳು ಕುಶದಿಂದ (ಧರ್ಭೆ) ವಿನಿರ್ಮಿಸಿದುದರಿಂದ, ಏವಿಗೆ "**ಕುಶ**"–ನೆಂನು ನಾಮಕರಣ ಮಾಡಿದರು.

**ಪ್ರಮಾಣ :-**

"ದೇವ್ಯಾಂಶಜಾಜನಯದಿಂದ್ರ, ಹುತಾಶನೌ ದ್ವೌ ಪುತ್ರೌ ।
ಯವನೌ ಕುಶಲಿನೌ ಬಲಿನೌ ಗುಣಾಢ್ಯೌ ॥"-
**(ಮ. ಭಾ. ತಾ. ನಿರ್ಣಯ-ಅಧ್ಯಾಯ-9)**

**5. ವಿಕುಕ್ಷಿ :-**

ಸೂರ್ಯವಂಶೋತ್ಪನ್ನನಾದ ಇಕ್ಷ್ವಾಕು ರಾಜನ ಮಗನು ವಿಕುಕ್ಷಿಯು. ಇವನು ದೇವೇಂದ್ರನ ಅವತಾರನು.

**6. ಮಂದರದ್ಯುಮ್ನ :-**

ಆರನೆಯ ಚಾಕ್ಷುಷ ಮನ್ವಂತರದಲ್ಲಿ ಇಂದ್ರನು **"ಮಂದರದ್ಯುಮ್ನ"**-ಎಂಬ ಹೆಸರಿನಿಂದ ಇಂದ್ರಪಟ್ಟವನ್ನಾಳಿದನು.

**ಪ್ರಮಾಣ :-**

"ಷಷ್ಠಸ್ತು ಚಕ್ಷುಷಃ ಪುತ್ರಃ ಚಾಕ್ಷುಷೋ ಮನುರೀರಿತಃ ॥
ಮಂದ್ರದ್ಯುಮ್ನಃ ಸ್ವಯಂ ಶಕ್ರಃ ಐಂದ್ರ ಪದಮಶಾಸತ ॥8॥
**—ವಿಷ್ಣು ರಹಸ್ಯ-ಅಧ್ಯಾಯ-88.**

**7. ವಾಲಿ :-**

ಇಂದ್ರಾಂಶಸಂಭೂತನಾದ ವಾಲಿಯು ಬಹು ಪರಾಕ್ರಮಶಾಲಿ. ಸುಗ್ರೀವನ ಅಗ್ರಜನು. ತಾರೆ ಈತನ ಪತ್ನಿ. ಅಂಗದ ಈತನ ಪುತ್ರನು. ರಾಮನ ಏಕಬಾಣದಿಂದ ಹತನಾದ.

"ವಾಲಿಃ ಸ್ಮೃತ ಏವ ವಾಸವಃ"—ಎಂಬ ಪ್ರಮಾಣವಿದೆ.

ಇಂತು, ಇಂದ್ರನಿಗೆ–ನರ–ಪುರಂದರ (ವೃತ್ರಾಸುರನ ಶರೀರವು ಪುರ. ಅದನ್ನು ವಿದಾರಣ ಮಾಡಿದ್ದರಿಂದ, ಪುರಂದರನಾಮ ಸಾಂಕೇತ)–ಗಾಧಿ (ಗಾ–ವೇದಮಂತ್ರಗಳನ್ನು ಧಿ–ಧರಿಸುವವನು). ಕುಶ-ಮಂದರದ್ಯುಮ್ನ—ವಿಕುಕ್ಷಿ–ವಾಲಿ–ಎಂದು ಏಳು ಅವತಾರವಿಶೇಷಗಳು.

## ಮನ್ಮಥನ ಅವತಾರವಿಶೇಷಗಳು :–

### 1. ಭರತ :–

ದಶರಥನ ದ್ವಿತೀಯಪುತ್ರ. ಕೈಕೇಯಿಯಮಗ. ಶ್ರೀರಾಮನ ಅಂತರಂಗಭಕ್ತ. ಶ್ರೀರಾಮನು ವನವಾಸವನ್ನು ಮುಗಿಸಿಕೊಂಡು ಬರುವ ಪರ್ಯಂತ ನಂದೀಗ್ರಾಮದಲ್ಲಿ ಜಟಾವಲ್ಕಲಧಾರಿಯಾಗಿ, ಶ್ರೀರಾಮನ ಪಾದುಕೆಗಳನ್ನು ಚಕ್ರವರ್ತಿಸಾಂಕೇತವಾಗಿ ಪೂಜಿಸುತ್ತಿದ್ದು, ಶ್ರೀರಾಮನಿಗೆ ರಾಜ್ಯವನ್ನು ಒಪ್ಪಿಸಿದ ನಿಸ್ವಾರ್ಥಭಾತೃ. ಭರತನು ರಾಮನ ಅವತಾರನು.

### 2. ಬ್ರಹ್ಮಾವಿಷ್ಟ ಸಾಂಬ :–

ಬ್ರಹ್ಮದೇವರ ಆವೇಶಯುತನಾದ ಜಾಂಬವತೀಪುತ್ರನಾದ ಸಾಂಬನು ಮನ್ಮಥನ ಅವತಾರಭೂತನು.

ಇದಕ್ಕೆ–"ಸಾಂಬೇ"–ಬ್ರಹ್ಮಾವೇಶೇ. "ಅಥಾಪ ಸಾಂಬನಾಮಕಂ ಸುತಂ ಚ ರೋಹಿಣೀ ಹರೇಃ ॥–ಚತುರ್ಮುಖಾಂಶ ಸಂಯುತಂ ಕುಮಾರಮೇವ ಷಣ್ಮುಖಮ್"–
—ಎಂಬ ಪ್ರಮಾಣವಾಕ್ಯವಿದೆ.

ಅಂದರೆ, ಷಣ್ಮುಖಾವತಾರನಾದ ಕುಮಾರನು, ಬ್ರಹ್ಮಾವೇಶಯುಕ್ತನಾಗಿ ರೋಹಿಣಿಯಲ್ಲಿ ಜನಿಸಿದನು. ಅವನೇ ಸಾಂಬನು. ರೋಹಿಣಿ-ಎಂದರೆ, ಬಲರಾಮನ ತಾಯಿಯಲ್ಲ. ಜಾಂಬವತಿಯ ಹೆಸರು— "ರೋಹಿಣೀ"–ಎಂದು,

ಜಾಂಬವಂತನ ಸಾಕುಮಗಳಾದ್ದರಿಂದ, ಆ ರೋಹಿಣಿಗೆ ಜಾಂಬವತೀ–ಎಂಬ ಹೆಸರಾಯಿತು. ಜಾಂಬವಂತನೂ ಶ್ರೀಕೃಷ್ಣನಿಗೆ ರೋಹಿಣಿ ಎಂಬ ಕನ್ಯಾ ಮಣಿಯನ್ನು ಮತ್ತು ಸ್ಯಮಂತಕಮಣಿಯನ್ನೂ ಕೊಟ್ಟನು–ಎಂದು ಭಾಗವತ ವಾಕ್ಯವಿದೆ. ಜಾಂಬವತೀದೇವಿಯಲ್ಲಿ ಶ್ರೀಕೃಷ್ಣನಿಂದ ಜನಿಸಿದ ಸಾಂಬನು ಮನ್ಮಥನ ಅವತಾರನು. ಬ್ರಹ್ಮಾವೇಶಯುತನು.

**3. ಸುದರುಶನ :-**

ಶ್ರೀಮನ್ನಾರಾಯಣನ ಚಕ್ರಕ್ಕೆ "**ಸುದರ್ಶನ**"–ಎಂತ ನಾಮ. ಕಾಮನು ಚಕ್ರಾಭಿಮಾನಿ. **ವಿಶೇಷ ವಿಚಾರ :–**

1. ಸತ್ವಗುಣಾಭಿಮಾನಿಯಾದ ಶ್ರೀದೇವಿ (ಲಕ್ಷ್ಮಿ) ಶಂಖರೂಪರಾಗಿದ್ದರು.
2. ರಜೋಗುಣಾಭಿಮಾನಿ ಶ್ರೀಭೂದೇವಿ ಪದ್ಮರೂಪರಾಗಿದ್ದರು.
3. ತಮೋಗುಣಾಭಿಮಾನಿ ಶ್ರೀದುರ್ಗಾದೇವಿ ಚಕ್ರರೂಪವಾಗಿದ್ದರು.
4. ಬಲಜ್ಞಾನಾತ್ಮಕರಾದ ಶ್ರೀವಾಯುದೇವರು ಗದಾರೂಪವಾಗಿದ್ದರು.
5. ವಿದ್ಯಾನಾಮಕ ರಮಾದೇವಿ ಶಾರ್ಙ್ಗ ಧನುಸ್ಸಿನ ರೂಪರಾಗಿದ್ದರು.
6. ರಮಾದೇವಿಯರೇ ಖಡ್ಗರೂಪರಾಗಿದ್ದರು.
7. ದುರ್ಗಾದೇವಿಯರೇ ಚರ್ಮರೂಪರಾಗಿದ್ದರು.
8. ಪ್ರಾಣಾಪಾನಾದಿ ಪಂಚರೂಪೀ ಶ್ರೀವಾಯುದೇವರೇ ಬಾಣರೂಪರಾಗಿದ್ದರು.

—ಹೀಗೆ ನಿರ್ಣಯದ ಮೂರನೆಯ ಅಧ್ಯಾಯದಲ್ಲಿ–ಪ್ರಮಾಣವಿದೆ.

ಪೂರ್ವಸ್ಥಿತಿ ಹೀಗಿರಲಾಗಿ, ಒಮ್ಮೆ ಮನ್ಮಥನು ತಪಸ್ಸನ್ನು ಮಾಡಿ, ಶ್ರೀಹರಿಯನ್ನು ಮೆಚ್ಚಿಸಿ, ಚಕ್ರಾಯುಧಕ್ಕೆ ಅಭಿಮಾನಿಯಾದನು. ಮನ್ಮಥನ (ಪ್ರದ್ಯುಮ್ನ) ಪುತ್ರನಾದ ಅನಿರುದ್ಧನು ಶಂಖರೂಪದಿಂದ ಬ್ರಹ್ಮದೇವ

ರಿಂದ ಜನಿಸಿ, ಶ್ರೀಹರಿಯ ಕೈ ಸೇರಿದನು. ಇದರಿಂದ,ಮನ್ಮಥನು ಶ್ರೀಹರಿಯ ಚಕ್ರಾಭಿಮಾನಿಯಾಗಿ, ಸುದರ್ಶನನಾಮಕನಾಗಿದ್ದಾನೆ.

## 4. ಪ್ರದ್ಯುಮ್ನ :–

ಕಾಮನು ಶ್ರೀಕೃಷ್ಣ ರುಕ್ಮಿಣಿಯ ಪುತ್ರನಾಗಿ"ಪ್ರದ್ಯುಮ್ನ"-ಎಂಬ ಹೆಸರಿನಿಂದ ಅವತರಿಸಿದನು. ಶ್ರೀಹರಿಯ ಪ್ರದ್ಯುಮ್ನಾಂಶವಿಭೂತಿರೂಪ ಇವನಲ್ಲಿ ರುವುದರಿಂದ, "ಪ್ರದ್ಯುಮ್ನ"–ನಾಮಕನು. ಅತಿಶಯಪ್ರದೇಶರೂಪಕಾದ್ದರಿಂದ,ಈ ಹೆಸರು (ಪ್ರ–ಪ್ರಕೃಷ್ಟವಾಗಿ–ದ್ಯುಮ್ನ-ಪ್ರಕಾಶರೂಪನು). ರುಕ್ಮಿಣಿಯ ಪುತ್ರಿ ರುಕ್ಮವತಿಯನ್ನು ಲಗ್ನವಾಗಿ, ಅನಿರುದ್ಧನೆಂಬ ಮಗನನ್ನು ಪಡೆದನು. ರುಕ್ಮವತಿಯೇ ರತೀದೇವಿಯು.

## 5. ಸನತ್ಕುಮಾರ :–

ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರ,—ಎಂಬ ನಾಲ್ವರೂ ಬ್ರಹ್ಮನ ಮಾನಸಪುತ್ರರು. ಅಸ್ಖಲಿತ ಬ್ರಹ್ಮಚಾರಿಗಳು. ಉಗ್ರತಪಸ್ವಿಗಳು. ಈ ಮುನಿಚತುಷ್ಟಯರಲ್ಲಿ ಸನತ್ಕುಮಾರನು–ಮನ್ಮಥನ ಅವತಾರನು. ಅವನೇ ಪ್ರದ್ಯುಮ್ನನಾಗಿ, ಶ್ರೀಕೃಷ್ಣರುಕ್ಮಿಣಿಯರ ಪುತ್ರನಾಗಿ ಜನಿಸಿದನು.

## 6. ಷಣ್ಮುಖ :–

ಮಹರುದ್ರದೇವರಿಂದ ಪಾರ್ವತೀದೇವಿಯಲ್ಲಿ ಜನಿಸಿದ ಪುತ್ರನೇ"ಷಣ್ಮುಖನು."—ಧರ್ಭೆಯ ವನದಲ್ಲಿ ಜನಿಸಿದ್ದರಿಂದ,ಇವನಿಗೆ"ಶರವಣಭವ"-(ಶರವಣ-ಧರ್ಭೆ), ಎಂದು ಹೆಸರು. ಕೃತ್ತಿಕಾನಕ್ಷತ್ರಾಭಿಮಾನಿದೇವತೆಗಳು ಆರುಮಂದಿ ಇವನಿಗೆ ಸ್ತನ್ಯಪಾನ ಮಾಡಿಸಿದರು. ಆರು ಮುಖಗಳಿಂದ ಏಕಕಾಲದಲ್ಲಿ ಸ್ತನ್ಯಪಾನ ಮಾಡಿದ್ದರಿಂದ,"ಷಣ್ಮುಖ"-(ಷಟ್ + ಮುಖ) ಅಥವಾ

"ಷಡಾನನ"—ಎಂಬ ಹೆಸರಾಯಿತು. ಇವನನ್ನು "ಸೇನಾನಿ,"-"ಕುಮಾರ,"-"ಸ್ಕಂಧ"-ಎಂಬ ಹೆಸರುಗಳಿಂದ ಕರೆಯುವರು. ದೇವತೆಗಳ ಸೇನಾಧಿಪತಿಯಾಗಿ, ತಾರಕಾಸುರನನ್ನು ಸಂಹರಿಸಿದನು. ಇದಕ್ಕಾಗಿಯೇ, ಕುಮಾರಸ್ವಾಮಿ. ಶತ್ರುಗಳ ಸಾಮರ್ಥ್ಯವು ಯಾರಿಂದ ಸ್ಕಂಧಿತವಾಗುತ್ತದೆಯೋ (ಕುಂಠಿತ)ಅವನೇ "ಸ್ಕಂಧ"-ನಾಮಕನು. ಶ್ರೀರುದ್ರದೇವರು ತಮ್ಮ ಫಾಲನೇತ್ರಾಗ್ನಿಯಿಂದ ಕಾಮನನ್ನು ದಹಿಸಿದ ನಂತರ, ರತೀದೇವಿಯಿಂದ ಪ್ರಾರ್ಥ್ಯಮಾನರಾಗಿ, ಮನ್ಮಥನನ್ನೇ ಪುತ್ರತ್ವೇನ ಪಡೆದರು. ಅವನೇ "ಷಣ್ಮುಖನು."—ಶ್ರೀರುದ್ರದೇವರ ವರದಿಂದ ಕಾಮನು ರತಿಯ ಪಾಲಿಗೆ ಅಂಗಸಹಿತನು. ಜಗತ್ತಿನ ದೃಷ್ಟಿಯಿಂದ ಅಸಂಗನು.

ಹೀಗೆ ಭರತ-ಸಾಂಬ-ಸುದರ್ಶನ-ಪ್ರದ್ಯುಮ್ನ-ಸನತ್ಕುಮಾರ-ಎಂಬ ಐದು ಅವತಾರಗಳನ್ನು ಮನ್ಮಥನು ಮಾಡಿದನು. ॥14॥

★★

## ಪದ್ಯ-೧೫

ಮೂಲ :-

ಈರೈದು ಗುಣಕಡಿನು ಪಾರ್ವತಿ ।
ವಾರುಣೀಯರಿಗಿಂದ್ರ ಕಾಮ ಕ ।
ರೀರಮಾನಿ ಪ್ರಾಣ ದಶಗುಣವವರ ಶಕ್ರನಿಗೆ ॥
ಮಾರಜಾರತಿ ದಕ್ಷ ಗುರು ವೃ ।
ತ್ರಾರಿಜಾಯಾ ಶಚಿ ಸ್ವಯಂಭುವ ।
ರಾರು ಜನ ಸಮ ಪ್ರಾಣಗವರರು ಹತ್ತು ಗುಣದಿಂದ ॥ ॥೧೫॥

**ಅವತರಣಿಕೆ :–**

ಇಂದ್ರ ಮತ್ತು ಕಾಮರಿಗಿಂತ ಅವರರಾದ ಅಹಂಕಾರಿಕ ಪ್ರಾಣ, ಅನಿರುದ್ಧ, ರತೀದೇವಿ, ದಕ್ಷಪ್ರಜಾಪತಿ, ಬೃಹಸ್ಪತ್ಯಾಚಾರ್ಯರು, ಶಚೀದೇವಿ, ಸ್ವಾಯಂಭುವಮನು-ಇವರ ವಿಚಾರ ತಿಳಿಸುತ್ತಾರೆ. ॥15॥

**ಪ್ರತಿಪದಾರ್ಥ :–**

**ಪಾರ್ವತಿ ವಾರುಣಿಯರಿಗೆ** = ರುದ್ರಪತ್ನಿ ಪಾರ್ವತೀ ಮತ್ತು ಶೇಷ ಪತ್ನಿ ವಾರುಣೀ ಈ ಉಭಯರಿಗೆ, **ಇಂದ್ರಕಾಮ** = ಇಂದ್ರ ಮತ್ತು ಮನ್ಮಥ ಈರ್ವರು, **ಈರೈದು ಗುಣ ಕಡಿಮೆ** = ಹತ್ತು ವಿಜಾತೀಯ ಗುಣಗಳಿಂದ ಕಡಿಮೆಯಾದವರು (ಈರೈದು–2 × 5 = 10). **ಶರೀರಾಭಿಮಾನಿ** = ಪ್ರಾಣಿಗಳ ಸ್ಥೂಲದೇಹಕ್ಕೆ ಅಭಿಮಾನಿಯಾದ (ತ್ವಗಿಂದ್ರಿಯಾಭಿಮಾನಿ), **ಪ್ರಾಣ** = ಅಹಂಕಾರಿಕಪ್ರಾಣನು (ಜೀವೋತ್ತಮರಾದ ಪ್ರಾಣದೇವರಲ್ಲಿ), **ಶಕ್ರನಿಗೆ** = ಇಂದ್ರ (ಕಾಮನೂ ಗ್ರಾಹ್ಯ)ನಿಗಿಂತ, **ದಶಗುಣಾವರ** = ಹತ್ತು ವಿಜಾತೀಯಗುಣಗಳಿಂದ ನ್ಯೂನನು. **ಮಾರಜಾ** = ಮನ್ಮಥನ ಪುತ್ರನಾದ ಅನಿರುದ್ಧನು, **ರತಿ** = ಕಾಮನಪತ್ನಿ ರತೀದೇವಿ, **ದಕ್ಷ** = ದಕ್ಷಪ್ರಜಾಪತಿ, **ಗುರು** = ಬೃಹಸ್ಪತ್ಯಾಚಾರ್ಯರು, **ವೃತ್ರಾದಿಜಾಯಾ** = ವೃತ್ರಾಸುರ ಸಂಹಾರಕರಾದ ಇಂದ್ರದೇವರ ಪತ್ನಿಯಾದ, **ಶಚಿ** = ಶಚೀದೇವಿಯರು, **ಸ್ವಯಂಭುವ** = ಸ್ವಾಯಂಭುವಮನು, **ಆರುಜನ** = ಈ ಆರು ಮಂದಿ, **ಸಮ** = ಪರಸ್ಪರ ಸಮಾನಕಕ್ಷಾಪನ್ನರು. **ಪ್ರಾಣಗೆ** = ಅಹಂಕಾರಿಕ ಪ್ರಾಣನಿಗೆ, **ಹತ್ತು ಗುಣದಿಂದ** = ಹತ್ತು ವಿಜಾತೀಯ ಗುಣಗಳಿಂದ, **ಅವರರು** = ಕಡಿಮೆ ಎನಿಸುತ್ತಾರೆ. ॥15॥

## ವ್ಯಾಖ್ಯಾನಗಳು

೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಅಹಂಕಾರ ಪ್ರಾಣದೇವರ, ದಕ್ಷಪ್ರಜೇಶ್ವರರ ತಾರತಮ್ಯ ಹೇಳತಾರೆ.

ಪಾರ್ವತೀ ವಾರುಣೀ, ಈ ಉಭಯರಿಗೆ ಇಂದ್ರದೇವರು ಮನ್ಮಥ ಈ ಉಭಯರು ಹತ್ತುಗುಣದಿಂದ ಅವರರು. ಇಲ್ಲಿಗೆ, ಇಂದ್ರಕಾಮರ ವಿಚಾರ ಮುಗಿಯಿತು. ಇವರ ತರುವಾಯ, ತ್ವಗಭಿಮಾನಿಪ್ರಾಣದೇವರ ವಿಚಾರ.

ಪ್ರಾಣಿಗಳ ಸ್ಥೂಲದೇಹಕ್ಕೆ ಅಭಿಮಾನಿಯಾದ, ಜೀವೋತ್ತಮರಾದ ದೇವರಿಗೆ ಅನ್ಯನಾದ ಅಹಂಕಾರಿಕಪ್ರಾಣದೇವರು, ಇಂದ್ರಕಾಮರಿಗೆ ಹತ್ತುಗುಣ ದಿಂದ ಕಡಿಮೆಯಾದವರು. ಇಲ್ಲಿಗೆ,ಆಹಂಕಾರಿಕಪ್ರಾಣದೇವರ ವಿಚಾರ ಮುಗಿ ಯಿತು. ಇನ್ನೂ ರತೀದೇವಿ-ಮೊದಲಾದವರ ವಿಚಾರ ಹೇಳತಾರೆ.

ಮನ್ಮಥನ ಪುತ್ರ ಅನಿರುದ್ಧನು, ಕಾಮನ ಪತ್ನಿಯಾದ ರತೀದೇವೇರು, ದಕ್ಷಪ್ರಜೇಶ್ವರನು, ಬೃಹಸ್ಪತ್ಯಾಚಾರ್ಯರು, ವೃತ್ರಾಸುರಗೆ ಶತ್ರುವಾದ ಇಂದ್ರ ದೇವರ ಪತ್ನಿಯಾದ ಶಚೀದೇವೇರು, ಸ್ವಾಯಂಭುವಮನು-ಇತ್ಯಾದಿ ಈ ಆರು ಮಂದಿ ಸಮಾನರು. ಹತ್ತುಗುಣದಿಂದ ಆಹಂಕಾರಿಕಪ್ರಾಣದೇವರಿಗೆ ಕಡಿಮಿ ಎಂತ ಅನಿಸೋವರಾಗತಾರೆ. ||15||

೨. ಭಾವಪ್ರಕಾಶಿಕೆ :-

ಪಾರ್ವತಿ ಮೊದಲಾದ ಮೂವರಕ್ಕಿಂತಲೂ ಇಂದ್ರ ಮನ್ಮಥರು10 ಗುಣ ಕಮ್ಮಿಯಾದವರು. ಇವರಗಿಂತಲೂ ಅಹಂಕಾರಿಕಪ್ರಾಣನು 10 ಗುಣಗಳಿಂದ ಧಮನು. ಇವನಿಗಿಂತಲೂ ರತಿ, ಸ್ವಯಂಭುವಮನು, ಬೃಹಸ್ಪತಿ, ಶಚಿ, ದಕ್ಷಪ್ರಜೇಶ್ವರ, ಪ್ರದ್ಯುಮ್ನನ ಮಗನಾದ ಅನಿರುದ್ಧ, —ಇವರಾರು ಜನರೂ

10 ಗುಣಗಳಿಂದ ಅಧಮರು. ತಮ್ಮೊಳಗೆ 6 ಜನರೂ ಸಮರೆಂದೂ ತಾತ್ಪರ್ಯ. ॥15॥

**೩. ಭಾವದರ್ಪಣ :-**

ಪಾರ್ವತಿಗೆ ಹತ್ತುಗುಣ ಕಡಿಮೆ ಇಂದ್ರಕಾಮರು । ಈ ಉಭಯರಿಗೆ ಹತ್ತುಗುಣ ಕಡಿಮೆ ಅಹಂಕಾರಿಕಪ್ರಾಣನೆಂದು ಹೇಳುತ್ತಾರೆ। ಈರೈದು। ತದುಕ್ತಂ ತಾರತಮ್ಯೇ। "ದಶಾವರ ಉಮಾಯಾಶ್ಚ ಕಾಮ ಇಂದ್ರಾಧಮೋ ಲ್ಪತ"—ಇತಿ। ಶರೀರಮಾನೀತಿ। "ಅಹಂಕಾರಭವಃ ಪ್ರಾಣಃ ಶಕ್ರಾಚ್ಛ್ನಯೋಃ ದಶಾವರ"—ಇತಿ। ಮನ್ಮಥನ ಪುತ್ರಾನಿರುದ್ಧ ಗುರುಶಚ್ಯಾದಿಗಳು ಅಹಂಕಾರಿಕ ಪ್ರಾಣನಿಗಿಂತ ದಶಗುಣಾಧಮರು। ಮಾರಜೇತಿ। "ತತೋದಶಮ ಕಕ್ಷಿಸ್ಥಾ ಅನಿರುದ್ಧೋ ಗುರುಃ ಶಚಿ। ಸ್ವಾಯಂಭುವೋ ಮನುರ್ದಕ್ಷಃ ರತಿರೇತೇ ದಶಾಧಮಾ"—ಇತಿ **ತಾರತಮ್ಯರತ್ನಾವಲ್ಯಾಂ.** ॥15॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-**

"ಈರೈದು"—ಇತಿ ॥ ಪ್ರಾಣಃ ಅಹಂಕಾರಿಕ ಏವ ಚ ಇಂದ್ರಾತ್ ಅನಂತರಃ ॥ "ಮಾರಜಃ"—ಅನಿರುದ್ಧಃ ॥15॥

**ಕನ್ನಡಾರ್ಥ**

ಅಹಂಕಾರಿಕಪ್ರಾಣನು ಇಂದ್ರನ ಅನಂತರ ಕೆಳಗಿನವನು. ಕಾಮ ಪುತ್ರನಾದ ಅನಿರುದ್ಧನಿಗೆ **ಮಾರಜನೆಂದು** ಹೆಸರು. ॥15॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಈ ಇಂದ್ರ-ಕಾಮರಿಬ್ಬರೂ, ವಾರುಣೀ-ಪಾರ್ವತಿಯರಿಗಿಂತ ಹತ್ತು ಗುಣ ಕಡಿಮೆ. ಈ ಇಂದ್ರನಿಗಿಂತ ಹತ್ತುಗುಣ ಕಡಿಮೆ ತ್ವಗಭಿಮಾನಿವಾಯು,

ಮಾರಜನೆಂಬ ಕಾಮಪುತ್ರ ಅನಿರುದ್ಧ, ಇಂದ್ರಪತ್ನಿ ಶಚೀ, ಕಾಮಪತ್ನೀ ರತೀ, ಗುರುವೆಂಬ ಬೃಹಸ್ಪತಿ, ದಕ್ಷಪ್ರಜೇಶ, ಸ್ವಾಯಂಭುವಮನು ಸಹ-ಆರು ಮಂದಿ ಜ್ಞಾನಾದಿ ಗುಣಗಳಲ್ಲಿ ಸಮಾನರು. ತ್ವಗಭಿಮಾನಿವಾಯುಗಿಂತ ಹತ್ತುಗುಣ ಕಡಿಮೆ. ॥15॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ,ಅಹಂಕಾರಿಕಪ್ರಾಣಾದಿ- ಇತರ ದೇವತೆಗಳ ತಾರತಮ್ಯ ವಿಚಾರ ತಿಳಿಸುತ್ತಾರೆ.

1. ಇಂದ್ರದೇವರು ಮತ್ತು ಕಾಮದೇವರು.—ಪಾರ್ವತೀ, ವಾರುಣೀ ಗಳಿಗಿಂತ (ಸೌಪರ್ಣೀ ಗ್ರಾಹ್ಯ) ಹತ್ತು ವಿಜಾತೀಯ ಗುಣಗಳಿಂದ ಅಧಮರು. **ಈರೈದು–ಎಂದರೆ,** $2 \times 5 = 10$ ಎಂದರ್ಥ.

2. ಸಕಲಪ್ರಾಣಗಳ ಸ್ಥೂಲಶರೀರಾಭಿಮಾನಿಯು **ಅಹಂಕಾರಿಕ ಪ್ರಾಣನು.** ಇವನು ತ್ವಗಿಂದ್ರಿಯಾಭಿಮಾನಿಯು. ತ್ವಗಿಂದ್ರಿಯವು ಶರೀರಾದ್ಯಂತ ವ್ಯಾಪಿಸಿಕೊಂಡಿರುವುದರಿಂದ, ಈತನು ಸ್ಥೂಲಶರೀರಕ್ಕೆ ಅಭಿಮಾನಿ ಎನಿಸಿದ್ದಾನೆ. 49 ಮರುದ್ಗಣಗಳಲ್ಲಿ ಒಬ್ಬನು. ಪ್ರಾಣ-ಶಬ್ದದಿಂದ ಮುಖ್ಯಪ್ರಾಣದೇವರೆಂದು ತಿಳಿಯಬಾರದು.

ಇಂದ್ರನಿಗೆ (ಶಕ್ರ) ಹಾಗೂ ಮನ್ಮಥನಿಗೆ ಅಹಂಕಾರಿಕ ಪ್ರಾಣನು ಹತ್ತು ವಿಜಾತೀಯ ಗುಣಗಳಿಂದ ಅವರನು (ದಶಗುಣಾವರ).

3. **ಮಾರಜಾ :–**

**ಮಾರ–ಎಂದರೆ,** ಮನ್ಮಥ. ಅವನ ಪುತ್ರನಾದ **ಅನಿರುದ್ಧನೇ**-ಮಾರಜನು"–ಈ ಅನಿರುದ್ಧನೇ, ದ್ವಾಪರಯುಗದಲ್ಲಿ ರುಕ್ಮಿಣಿ ಕೃಷ್ಣರ ಪುತ್ರನಾದ ಪ್ರದ್ಯುಮ್ನನ ಮಗನಾಗಿ ಅವತರಿಸಿದನು. ಪ್ರದ್ಯುಮ್ನನು ಮನ್ಮಥನ ಅವ

ಹಾರನು. ಅನಿರುದ್ಧನು ರುಕ್ಮಿಯ ಮೊಮ್ಮಗಳಾದ ರೋಚನೆಯನ್ನು ಲಗ್ನವಾಗಿ, ವಜ್ರನೆಂಬ ಪುತ್ರನನನ್ನು ಪಡೆದನು. ಬಾಣಾಸುರನ ಪುತ್ರಿ ಉಷೆಯು ಅನಿರುದ್ಧನ ಪತ್ನಿ.

**4. ರತೀದೇವಿ :–**

ದಕ್ಷಬ್ರಹ್ಮನ ಪುತ್ರಿ. ಮನ್ಮಥನ ಮಡದಿ. ರೂಪಲಾವಣ್ಯಾತಿಶಗಳಿಂದ ಶೋಭಿತಳು.

**5. ದಕ್ಷ :–**

ಬ್ರಹ್ಮಪುತ್ರ. ಒಬ್ಬ ಪ್ರಜೇಶ್ವರ. ಸ್ವಾಯಂಭುವಮನ್ವಂತರದಲ್ಲಿ ಬ್ರಹ್ಮದೇವರ ಬಲಗೈಯಿನ ಹೆಬ್ಬೆರಳಿನಿಂದ ಜನಿಸಿದನು. ಹತ್ತು ಮಂದಿ ಪ್ರಚೇತಸರಿಂದ ಮಾರಿಷೆಯಲ್ಲಿ ಹುಟ್ಟಿದವನು. ಮಾರಿಷೆಯು ಕಂಡೂಮುನಿಯಿಂದ ಪ್ರಮ್ಲೋಚನೆ ಎಂಬ ಅಪ್ಸರಸ್ತ್ರೀಯಲ್ಲಿ ಜನಿಸಿದವಳು. ಈತನ ಮಗಳೇ ದಾಕ್ಷಾಯಿಣೀ ಎಂಬ ನಾಮದ ಪಾರ್ವತೀ. ಅವಳಿಗೆ ಸತಿ–ಎಂಬ ಹೆಸರಿದೆ. ರುದ್ರದೇವರ ಮಾವ. ಹಸ್ತಾಭಿಮಾನಿದೇವತಾ.

**6. ಗುರು :–**

ಸುರುಗುರುಗಳಾದ **ಬೃಹಸ್ಪತ್ಯಾಚಾರ್ಯರು** ಅಂಗಿರಸ ಮುನಿಯ ಪುತ್ರರು. ಅಗ್ನಿರೂಪವನ್ನು ಧರಿಸಿ, ಲೋಕಗಳನ್ನು ಕಾಪಾಡಿದರು. ತಾರಾದೇವಿ ಈತನ ಪತ್ನಿ. ಕಚನು ಇವರ ಪುತ್ರ. ಅಗ್ನೀ ಪತ್ನೀ ಸ್ವಾಹಾದೇವಿ ಬೃಹಸ್ಪತ್ಯಾಚಾರ್ಯರ ಮಗಳು.

**7. ವೃತ್ರಾರಿಜಾಯಾ :–**

ವೃತ್ರಾರಿ–ವೃತ್ರಾಸುರನನ್ನು ಸಂಹರಿಸಿದ ಇಂದ್ರ. ಜಾಯಾ–ಇಂದ್ರನ ಪತ್ನೀ **ಶಚೀದೇವಿ**–ಎಂದರ್ಥ.

ತ್ವಷ್ಟೃವಿನಿಂದ ಇಂದ್ರನನ್ನು ಕೊಲ್ಲುವುದಕ್ಕಾಗಿ, ವೃತ್ರಾಸುರನು ಸೃಷ್ಟನಾದನು. ಇಂದ್ರನು ದಧೀಚಿಯಷಿಯ ಬೆನ್ನೆಲುಬನ್ನು ವಜ್ರಾಯುಧವನ್ನಾಗಿ ಮಾಡಿಕೊಂಡು, ವೃತ್ರಾಸುರನನ್ನು ಸಂಹರಿಸಿದನು. ಇದರಿಂದ, ಇಂದ್ರನಿಗೆ ವೃತ್ರಾರಿ–ಎಂದು ಹೆಸರು.

ಶಚೀದೇವಿಯು ಇಂದ್ರನ ಪಟ್ಟದರಸಿ. ಶಚಿಯು ಪುಲೋಮನೆಂಬ ಅಸುರನ ಪುತ್ರಿ. ಇದರಿಂದ ಶಚಿಗೆ "ಪೌಲೋಮಿ"–ಎಂದು ಹೆಸರು. ಜಯಂತ ಈಕೆಯ ಪುತ್ರ. ನಹುಷನು ಇಂದ್ರಪದವಿಯಲ್ಲಿದ್ದಾಗ,ಶಚಿಯನ್ನು ಮೋಹಿಸಿ, ಅಗಸ್ತ್ಯರ ಶಾಪದಿಂದ ಹೆಬ್ಬಾವಾದನು. ಬ್ರಹ್ಮನ ಶಾಪದಿಂದ, ಶಚಿಯು ದ್ರೌಪದಿಯ ಶರೀರದಲ್ಲಿ ಆಶ್ರಯಪಡೆದರೂ,ನೀತಪತಿಯಾದ ಅರ್ಜುನನೊಡನೆ (ಇಂದ್ರಾಂಶ ಸಂಭೂತ) ಭೋಗಿಸುತ್ತಿದ್ದಳು.

8. ಸ್ವಯಂಭುವಮನು :–

ಮನ್ವಂತರಾಧಿಪತಿ, ಉಪಸ್ಥತತ್ತ್ವಾಭಿಮಾನಿ.

ಅನಿರುದ್ಧ–ರತೀದೇವಿ–ದಕ್ಷಪ್ರಜೇಶ್ವರ–ಗುರು ಬೃಹಸ್ಪತ್ಯಾಚಾರ್ಯರು-ಶಚೀದೇವಿ ಮತ್ತು ಸ್ವಾಯಂಭುವಮನು–ಈ ಆರುಮಂದಿ ಸಮಾನರು. ಏಕ ಕಕ್ಷಾಪನ್ನರು. ಈ ಆರುಮಂದಿಯೂ ಅಹಂಕಾರಿಕಪ್ರಾಣನಿಗಿಂತ ಹತ್ತು ವಿಜಾತೀಯ ಗುಣಗಳಿಂದ ಅವರರು. ॥15॥

★★

## ಪದ್ಯ-೧೬

**ಮೂಲ :-**

> ಕಾಮಪುತ್ರನಿರುದ್ಧ ಸೀತಾ ।
> ರಾಮನಾನುಜ ಶತ್ರುಹನ ಬಲ ।
> ರಾಮನಾನುಜ ಪೌತ್ರನಿರುದ್ಧ ನೊಳಗನಿರುದ್ಧ ॥
> ಕಾಮಭಾರ್ಯಾ ರುಗ್ಮವತಿ ಸ ।
> ನ್ನಾಮ ಲಕ್ಷಣಗಳೆನಿಸುವಳು ಪೌ ।
> ಲೋಮಿ ಚಿತ್ರಾಂಗದೆಯು ತಾರಾ ಎರಡು ಪೆಸರುಗಳು ॥೧೬॥

**ಅವತರಣಿಕೆ :-**

ಅನಿರುದ್ಧಾದಿ ಆರು ಮಂದಿಗಳ ವಿಚಾರ ತಿಳಿಸುತ್ತಾರೆ. ॥16॥

**ಪ್ರತಿಪದಾರ್ಥ :-**

**ಕಾಮಪುತ್ರ ಅನಿರುದ್ಧ** = ಮನ್ಮಥನ ಪುತ್ರನಾದ ಅನಿರುದ್ಧನ ಅವತಾರಗಳು ಎರಡು, **ಸೀತಾರಾಮನಾನುಜ** = ಸೀತಾಪತಿಯಾದ ಶ್ರೀರಾಮದೇವರ ತಮ್ಮನಾದ, **ಶತ್ರುಹನ** = ಶತ್ರುಘ್ನ ಅವತಾರ ಒಂದು. **ಬಲರಾಮನಾನುಜ** = ಬಲರಾಮದೇವರ ತಮ್ಮನಾದ ಶ್ರೀಕೃಷ್ಣದೇವರ, **ಪೌತ್ರನಿರುದ್ಧನೊಳು** = ಮೊಮ್ಮಗನಾದ ಅನಿರುದ್ಧನಲ್ಲಿ, **ಅನಿರುದ್ಧ** = ಅನಿರುದ್ಧದೇವರ ಆವೇಶವಿದೆ. (ಕೃಷ್ಣನ ಪುತ್ರ ಪ್ರದ್ಯುಮ್ನ. ಪ್ರದ್ಯುಮ್ನನ ಮಗ ಅನಿರುದ್ಧ. ಇದರಿಂದ, ಅನಿರುದ್ಧನು ಶ್ರೀಕೃಷ್ಣನಿಗೆ ಮೊಮ್ಮಗ. (ಪೌತ್ರ) ನಾಗಬೇಕು. **ಕಾಮಭಾರ್ಯಾ** = ಮನ್ಮಥನ ಪತ್ನಿಯಾದ ರತೀದೇವಿಗೆ

ಎರಡು ಅವತಾರಗಳು. **ರುಗ್ಮವತಿ** = ರುಗ್ಮವತೀ-ಎಂಬ ಹೆಸರಿನ ಅವತಾರ ಒಂದು. (ರುಕ್ಮಿಣಿಯ ಅಣ್ಣ ರುಕ್ಮಿಯ ಪುತ್ರಿ). **ಸನ್ನಾಮ** = ಸಮೀಚೀನವಾದ ಹೆಸರಿನಿಂದ ಯುಕ್ತಳಾದ, **ಲಕ್ಷಣಳೆನಿಸುವಳು** = ಲಕ್ಷಣಾದೇವಿ ಎಂಬ ಅವತಾರ ಎರಡನೆಯದು. **ಪೌಲೋಮಿ** = ಇಂದ್ರದೇವರ ಪತ್ನಿಯಾದ ಶಚೀದೇವಿಗೆ ಅವತಾರಗಳು ಎರಡು. **ಚಿತ್ರಾಂಗದೆಯು** = ಅರ್ಜುನನ ಪತ್ನಿ ಚಿತ್ರಾಂಗದೆ. **ತಾರಾ** = ವಾಲೀಪತ್ನಿಯಾದ ತಾರಾ. ಎರಡು ಹೆಸರುಗಳು = ಚಿತ್ರಾಂಗದೆ ಮತ್ತು ತಾರಾ- ಎಂಬ ಎರಡು ಜನ್ಮನಾಮಗಳಿಂದ ಅವತರಿಸಿದಳು. ॥16॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಹದಿನೈದನೇ ಶ್ಲೋಕಗತ ಕಾಮಪುತ್ರ ಅನಿರುದ್ಧಾದಿ ಆರುಮಂದಿ ಒಳಗೆ ಅವತಾರವುಳ್ಳವರನ್ನು ಹೇಳುತಾರೆ.

ಕಾಮಪುತ್ರ ಅನಿರುದ್ಧನ ಅವತಾರಗಳು ಎರಡು. ಸೀತಾದೇವೇರ ಪತಿಯಾದ ಶ್ರೀರಾಮಚಂದ್ರದೇವರ ತಮ್ಮನಾದ **ಶತೃಘ್ನ**-ಎಂತ ಅವತಾರ ಒಂದು. ಬಲರಾಮದೇವರ ತಮ್ಮನಾದ ಶ್ರೀಕೃಷ್ಣದೇವರ ಮಗನಾದ ಪ್ರದ್ಯುಮ್ನನ ಪುತ್ರ- ಶ್ರೀಕೃಷ್ಣದೇವರಿಗೆ ಮೊಮ್ಮಗನಾದ **ಅನಿರುದ್ಧ** ಎಂತ ಅವತಾರ ಒಂದು, ಅಂತು, ಎರಡು ಅವತಾರಗಳು. ಶ್ರೀಕೃಷ್ಣದೇವರ ಪುತ್ರನಾದ ಈ ಅನಿರುದ್ಧನಲ್ಲಿ ಗುಣಪೂರ್ಣನಾದ ಅನಿರುದ್ಧದೇವರ ಆವೇಶವಿದೆ. ಅನಿರುದ್ಧನ ವಿಚಾರ ಮುಗಿಯಿತು.

ಕಾಮಭಾರ್ಯರಾದ ರತೀದೇವೇರಿಗೆ ಅವತಾರಗಳು ಎರಡು. **ರುಗ್ಮವತೀ** ಎಂತ ಅವತಾರ ಒಂದು. ಸಮೀಚೀನವಾದ ಲಕ್ಷಣೋಪೇತ ಆಕಾರವುಳ್ಳ **ಲಕ್ಷಣಾ**-ಎಂತ ನಾಮಾಂಕಿತವಾದ ಲಕ್ಷಣಾರೂಪ ಒಂದು, ಅಂತು ಎರಡು. ಈ

**ಪ್ರ**ಕಾರ ರತೀದೇಯರು ಎರಡು ಅವತಾರಗಳು ಉಳ್ಳವರೆಂದೆನಿಸೋವರಾಗ **ತಾರೆ.** ರತೀದೇವೇರ ವಿಚಾರ ಮುಗಿಯಿತು.

ಇಂದ್ರದೇವರ ಪತ್ನಿಯಾದ ಶಚೀದೇವೇರಿಗೆ ಅವತಾರಗಳು ಎರಡು. ದಾವವೆಂದರೆ-**ಚಿತ್ರಾಂಗದೆ** ಎಂಬ ಅವತಾರ-ಒಂದು, ವಾಲೀ **ಪತ್ನಿ**ಯಾದ **ತಾರ.**ಎಂತ ಒಂದು. ಎರಡು ಅವತಾರಗಳ ಮಾಡಿ, ಎರಡು ನಾಮಗಳಿಂದ **ಯುಕ್ತ**ರಾದವರು ಎಂತ ತಾತ್ಪರ್ಯ. ಇಲ್ಲಿಗೆ ಶಚೀದೇವೇರ ವಿಚಾರ ಮುಗಿ ಯಿತು. ಅವಶಿಷ್ಟ ಮುಂದೆ ಹೇಳತಾರೆ. ॥16॥

**೨. ಭಾವಪ್ರಕಾಶಿಕೆ :-**

ಪ್ರದ್ಯುಮ್ನನ ಮಗನಾದ ಅನಿರುದ್ಧನೇ- ಶತ್ರುಘ್ನನೆಂಬ ವಿಷಯದಲ್ಲಿ ಮನ್ಮಥನ ಅವತಾರಗಳನ್ನು ಹೇಳುವ ಪ್ರಕರಣವಲ್ಲಿ ಬರೆದಿರುವ ನಿರ್ಣಯ ಶ್ಲೋಕದಿಂದಲೇ ಸಿದ್ಧಾಂತವಾಗುವುದು. ಮನ್ಮಥನು ತಪ್ಪನ್ನುಮಾಡಿ ಚಕ್ರತ್ವವನ್ನು ಹೊಂದಿನು. ಅವನ ಮಗನಾದ ಅನಿರುದ್ಧನು ಶಂಖನಾದನು. ಅವರಿಬ್ಬರೇ ಭರತ ಶತ್ರುಘ್ನರಾಗಿ ಜನಿಸಿದರೆಂದು ಹೇಳಿರುವದರಿಂದ, ಶಂಖಾತ್ಮಕನಾದ ಅನಿರುದ್ಧನೇ ಶತ್ರುಘ್ನನೆಂದು ಸ್ಪಷ್ಟಮಾಡಿದಂತಾಯಿತು. ಅನಿರುದ್ಧನಲ್ಲಿ ಅನಿರುದ್ಧನಾಮಕ ಪರಮಾತ್ಮನ ಅಂಶವಿರುವುದು ತಿಂದಮೇಲೆ, ಅದೇ ಅನಿರುದ್ಧನೇ ಶತ್ರುಘ್ನನಾದುದರಿಂದ,ಶತ್ರುಘ್ನನಲ್ಲೂ ಅನಿರುದ್ಧನಾಮಕ ಪರಮಾತ್ಮನ ಅಂಶವಿರುವುದೆಂದು ಬೇರೆ ಹೇಳಬೇಕಾಗಿಲ್ಲ ಸ್ವತಃ ಸಿದ್ಧವಾಯಿತು. ಮನ್ಮಥನ ಹೆಂಡತಿಯಾದ ರತೀದೇವಿಯು ರುಕ್ಮಿಣಿಯ ಅಣ್ಣನಾದ ರುಗ್ಮಿಯ ಮಗಳಾಗಿ ಜನಿಸಿ, ಪ್ರದ್ಯುಮ್ನನ ಹೆಂಡತಿಯಾದಳು.

ಮತ್ತೊಂದು ರೂಪವು-ದುರ್ಯೋಧನನ ಮಗಳಾದ **ಲಕ್ಷಣಾದೇವಿಯು.** ನಿರ್ಣಯ 19ನೆಯ ಅಧ್ಯಾಯದಲ್ಲಿ —"ತಸ್ಯಾಂಸುತಂತ್ವಜನಯತ್ಪುರು ಅಸಯೋಃ ಕ್ಷಃ ಕನ್ಯಾಂ ಪುರಾಪ್ರಿಯತಮಾಂಚ ಷಡಾನನಸ್ಯ."-**ಪೂರ್ವ**ದಲ್ಲಿ ಕಲಿಯ **ಹೆಂಡತಿ**ಯಾದ ಅಲಕ್ಷ್ಮಿಯು ಕಾಶಿರಾಜನ ಮಗಳಾಗಿ ಹುಟ್ಟಿದ್ದಳು. **ಆಕೆ**

ಯನ್ನು ದುರ್ಯೋಧನನು ಮದುವೆಮಾಡಿಕ್ಕೊಂಡು, ಅವಳಲ್ಲಿ ಪೂರ್ವದಲ್ಲಿ ರಾವಣನ ಮಗನಾದ ಅಕ್ಷಕುಮಾರನನ್ನೇ ಲಕ್ಷಣನೆಂಬ ಹೆಸರುಳ್ಳ ಮಗನನ್ನಾಗಿ ಪಡೆದನು. ಮತ್ತೊಬ್ಬ ಹೆಣ್ಣುಮಗಳು ಹುಟ್ಟಿದಳು. ಆಕೆಯ ಹೆಸರು ಲಕ್ಷಣೆ. ಆಕೆಯು ಪೂರ್ವದಲ್ಲಿ ಷಣ್ಮುಖನ ಪ್ರಿಯತಮಳಾದ ಹೆಂಡತಿಯು. ಷಣ್ಮುಖನು ಮನ್ಮಥಾವತಾರವೆಂದು ಪೂರ್ವದಲ್ಲಿ ಹೇಳಲ್ಪಟ್ಟಿದೆ. ಷಣ್ಮುಖನೇ ಮನ್ಮಥ ನೆಂಬ ವಿಷಯದಲ್ಲಿ ಮತ್ತೊಂದು ಆಧಾರ. ಮಹಾಭಾರತ ತಾತ್ಪರ್ಯ ನಿರ್ಣಯದ 22ನೆಯ ಅಧ್ಯಾಯದಲ್ಲಿ —"ದುರ್ಯೋಧನಸ್ಯಾಸ ಪುತ್ರೀರತಿರ್ಯಾ ಪೂರ್ವಂ ನಾಮ್ನಾ ಲಕ್ಷಣಾಕಾಂತ ರೂಪಾ ॥ ಸ್ವಯಂವರ ಸ್ಥಾಂತಾಂಬಲ್ಯ ನೈವಸಾಂಬೋ ಜಗ್ರಾಹಸಾ ಚೈನ ಮಾಸಾನುರಕ್ತಾ ॥ ॥41॥"—ದುರ್ಯೋಧನನಿಗೆ ಮಗಳಾದ ಲಕ್ಷಣಾ-ಎಂಬಾಕೆಯು ಪೂರ್ವದಲ್ಲಿ ರತೀದೇವಿಯು. ಆಕೆಯನ್ನು ಸ್ವಯಂವರದಲ್ಲಿಟ್ಟಿರುವಾಗ, ಜಾಂಬವತೀ ಕುಮಾರನಾದ ಸಾಂಬನು ಬಲಾತ್ಕಾರದಿಂದ ಅಪಹರಿಸಿದನು.

ಆ ಲಕ್ಷಣೆಯೂ ಇವನಲ್ಲಿ ಅನುರಕ್ತಳಾಗಿದ್ದಳು- ಎಂದು ಹೇಳಿರುವರು. ಈ ವಾಕ್ಯದಿಂದ, ಮೇಲಿನ ಪ್ರಮಾಣದಲ್ಲಿ ಷಣ್ಮುಖನ ಹೆಂಡತಿಯು ಎಂದು ಹೇಳಿದರು. ಷಣ್ಮುಖನವತಾರ ಸಾಂಬನೆಂದು, ಮೇಲೆ ಹೇಳಿರುವರು. ಆತನು ಈ ಲಕ್ಷಣೆ-ಎಂಬ ರತಿಯನ್ನು ವಿವಾಹ ಮಾಡಿಕೊಂಡನೆಂದು, ಮೇಲೆ ಷಣ್ಮುಖನೇ ಮನ್ಮಥನೆಂತಲೂ, ಅವನೇ ಸಾಂಬ, ಮತ್ತು ಪ್ರದ್ಯುಮ್ನ ಈ ಎರಡು ರೂಪದಿಂದ ಹುಟ್ಟಿ, ರತಿಗೆ ಮೊದಲನೆಯ ಅವತಾರವಾದ ರುಗ್ಮಿಯ ಮಗಳಾದ ರುಗ್ಮವತಿಯನ್ನು ಪ್ರದ್ಯುಮ್ನನೂ, ರತಿಗೆ ಎರಡನೆಯ ರೂಪವಾದ ಲಕ್ಷಣೆಯನ್ನು ಸಾಂಬನು ಮದುವೆಮಾಡಿಕೊಂಡರೆಂಬ ಭಾವ. ಶಚೀದೇವಿಯು ಅವತಾರವನ್ನು ಹೇಳುತ್ತಾರೆ :—ಪಾಂಡ್ಯದೇಶಾಧಿಪತಿಯಾದ ವೀರಸೇನನ ಮಗಳು ಚಿತ್ರಾಂಗದೆ- ಎಂಬಾಕೆಯು ಶಚಿಯ ಅವತಾರವು. ಮಹಾಭಾರತ ತಾತ್ಪರ್ಯ ನಿರ್ಣಯದ 20ನೆಯ ಅಧ್ಯಾಯದಲ್ಲಿ "ಸವತ್ಸರಾಂತೇ ಫಲ್ಗುನಸ್ಯಾನುರೂಪಾಚಿತ್ರಾಂಗದಾ ವೀರಸೇನೇನತೋಪಾತ್ ॥ ಸವೀರಸೇನಸ್ತ್ವಪ್ಯೈರಂಶಿಯಮಸ್ಯಾಪ್ಯಾವೇಶಯುಕ್ ಸಾಚಕನ್ಯಾಶ ಚೀಪಿ ॥161॥

ಅರ್ಜುನನು ತೀರ್ಥಯಾತ್ರಾ ಪ್ರಸಂಗದಿಂದ ಪಾಂಡ್ಯದೇಶಕ್ಕೆ ಬಂದನು. ಆಗ, ಅರ್ಜುನನ ತೀರ್ಥಯಾತ್ರೆಗೆ ಸಂವತ್ಸರದ ಕಡೆಯಾಗಿದ್ದಿತು.

ಪಾಂಡ್ಯದೇಶಾಧಿಪತಿಯಾದ ವೀರಸೇನರಾಜನು ಅರ್ಜುನನಿಗೆ ಅನುರೂಪಳಾದ ತನ್ನ ಮಗಳಾದ ಚಿತ್ರಾಂಗದೆಯನ್ನು ಸಂತೋಷದಿಂದ ಮದುವೆಯನ್ನು ಮಾಡಿಕೊಟ್ಟನು. ಆ ವೀರಸೇನನು ತ್ವಷ್ಟಾ-ಎಂಬ ಸೂರ್ಯನ ಅಂಶವುಳ್ಳವನು. ಮತ್ತು ಯಮನಾವೇಶವೂ ಉಂಟು. ಅವನ ಮಗಳಾದ ಚಿತ್ರಾಂಗದೆಯು ಇಂದ್ರನ ಹೆಂಡತಿಯಾದ ಶಚೀದೇವಿಯು. ಆದರೆ, ಈಕೆಯನ್ನು ಮದುವೆಯಾದ ಮೇಲೆ, ಆಕೆಯಲ್ಲಿ ಮಗನಾದ ಬಭ್ರುವಾಹನನು ಹುಟ್ಟುವವರೆಗೂ ಅಲ್ಲಿದ್ದು, ಆಕೆಯನ್ನು ಬಿಟ್ಟು ಹೊರಟು ಹೋದನು.

ಆದುದರಿಂದ,ಚಿತ್ರಾಂಗದೆಗೂ ಅರ್ಜುನನಿಗೂ ಒಂದು ಕಡೆ ವಾಸವಿರಲಿಲ್ಲ. ಹಾಗಿರಲು ಕಾರಣವೇನೆಂದರೆ :—ನಿರ್ಣಯ "ತಾರಾದೇಹೇಸೂರ್ಯಜಸ್ಯಾಂಗ ಸಂಗಾತ್ಸ್ವರ್ಗಂನಾಯಾದಂತರಿಕ್ಷಾದಿಹಾಸೀತ್ ॥ ತೇನೈವ ಹೇತೋರ್ನಾತಿ ಸಾಮೀಪ್ಯಮಾಸೀತ್"—ಪೂರ್ವದಲ್ಲಿ ವಾಲಿಯ ಹೆಂಡತಿಯಾದ ತಾರೆಯಾಗಿದ್ದಾಗ, ಸೂರ್ಯಪುತ್ರನಾದ ಸುಗ್ರೀವನ ಅಂಗಸಂಗವು ಈಕೆಗೆ ಆದ ದೋಷದಿಂದ ಆಗ ಈಕೆಯು ಸ್ವರ್ಗಕ್ಕೆ ಹೋಗದೆ, ಅಂತರಿಕ್ಷಲೋಕದಲ್ಲಿದ್ದು, ಇಲ್ಲಿ ಚಿತ್ರಾಂಗದೆಯಾಗಿ ಹುಟ್ಟಿದಳು.

ಆ ಕಾರಣದಿಂದಲೇ, ಅರ್ಜುನನಿಗೂ ಚಿತ್ರಾಂಗದೆಗೂ ಅತಿ ಸಾಮೀಪ್ಯ ಇರಲಿಲ್ಲವೆಂದು ಹೇಳಿರುವರು. ವಾಲಿಯೆಂಬ ಕಪಿಯು ಇಂದ್ರಾವತಾರದವನು ಅವನ ಹೆಂಡತಿಯು ತಾರೆ. ಆಕೆಯು ಶಚೀದೇವಿಯೆಂದು ಮೇಲಿನ ಪ್ರಮಾಣದಿಂದಲೇ ಸಿದ್ಧವಾಗುವುದು. ಹೀಗೆ ಶಚೀದೇವಿಗೆ ಎರಡು ರೂಪಗಳೆಂದು ತಾತ್ಪರ್ಯ. ॥16॥

### ೩. ಭಾವಪ್ರಕಾಶ :-

ಶ್ರೀರಾಮಚಂದ್ರಾನುಜ ಶತ್ರುಘ್ನನಲ್ಲಿ ಶ್ರೀಕೃಷ್ಣಪುತ್ರ ಪ್ರದ್ಯುಮ್ನಾತ್ಮಜ ಅನಿರುದ್ಧನಲ್ಲಿ ಕೂಡ ಶ್ರೀಅನಿರುದ್ಧಾವೇಶ ಉಂಟೆಂದು ಹೇಳುತ್ತಾರೆ। ಕಾಮೇತಿ। ಅನಿರುದ್ಧ ಯುಕ್ ಶತ್ರುಘ್ನೋಽನಿರುದ್ಧೋ ಕಾಮನಂದನಃ"— ಇತಿ। ಮನ್ಮಥನ ಪತ್ನಿ ರತಿ, ಇಂದ್ರಪತ್ನಿ ಶಚೀ–ಇವರ ವಿಚಾರ ಹೇಳುತ್ತದೆ। ಕಾಮಭಾರ್ಯೇತಿ। ತದುಕ್ತಂ। "ಕಾಮಭಾರ್ಯಾ ರುಗ್ಮವತೀ ಲಕ್ಷಣೇತ್ಯಾದಿ ರೂಪಿಣೀ। ತಾರಾ ಚಿತ್ರಾಂಗದೇತ್ಯಾದಿ ರೂಪ ಶಚ್ಯಪಿಸಂಸ್ಮೃತಾ"–ಇತ್ಯುಕ್ತೇಃ ॥16॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

"ಕಾಮ"—ಇತಿ॥ ವರಾತ್ ರಥಾಂಗತ್ವಮವಾಪ ಕಾಮಃ ತತ್ಸೂನುತಾಂ ಆಪ ಚ ಸೋಽನಿರುದ್ಧಃ॥ ಬ್ರಹ್ಮೋದ್ಭವಃ ಶಂಖತನುಃ ಮಹಾತ್ಮಾ॥ ಚಕ್ರಮಾನಿಕಾಮಂ ಶಂಖಮಾನಿತತ್ತನಯಂ ಚ ಪರಾಮೃಶ್ಯ ತಾವೈವ ಜಾತೌ ಭರತಶ್ಚ ನಾಮ್ನಾ ಶತ್ರುಘ್ನ ಇತ್ಯೇವ ಚ ರಾಮತೋನುಪ್ರಾಕ್ ಭರತಸ್ಯ ಸುದರ್ಶನತ್ವಂ ಉಕ್ತಮ್॥ ತಚ್ಚ ಪ್ರಮಾಣಿತಮ್॥ ಪೌತ್ರಃ ಪ್ರದ್ಯುಮ್ನೋತ್ಥಃ ಹರಿಃ॥ ಶತ್ರುಘ್ನೇ ಅನಿರುದ್ಧ ಹರೇಃ ಆವೇಶೇ 'ಸಂಕರ್ಷಣಾದ್ಯೈಃ ತ್ರಿಭಿಃ॥ ಇತ್ಯುಕ್ತಮ್॥ ಕೃಷ್ಣಪೌತ್ರೇಽನಿರುದ್ಧೇ ಇತ್ಯತ್ರ ಅನಿರುದ್ಧಃ ಕಾರ್ಷ್ಣಿಂ ಅನುಪ್ರದ್ಯುಮ್ನಾತ್ ಅಜನಿಷ್ಟಃ ಹ॥ ಪೂರ್ವಮಪಿ ಅನಿರುದ್ಧಾಖ್ಯಃ ವಿಷ್ಣೋಃ ತನ್ನಾಮ ಏವ ಚ॥ ಆವೇಶಯುಕ್ತಃ ಬಲವಾನ್ ಇತಿ॥–'ಕಾಮ'–ಇತಿ॥ ರತಿಃ॥ ತದ್ರೂಪದ್ವಯಮ್॥ ಸದಿತಿ ಪೂರ್ವಮೇವ ಅನ್ವೇತಿ॥ ರುಕ್ಮಿಪುತ್ರ್ಯಾಂ ರುಕ್ಮವತ್ಯಾಂ ಆಹೃತಯಾಂ ಸ್ವಯಂ ವರೇ॥ ರತಿರೇವ ಹಿ ತಸ್ಯಾಂ॥ ದುರ್ಯೋಧನಸ್ಯಾಸ ಪುತ್ರೀ ರತಿಃ ಯಾ ಪೂರ್ವನಾಮ್ನಾ ಲಕ್ಷಣಾ ಕಾಂತಿರೂಪಾಂ ಇತಿ॥ ರುಕ್ಮವತೀ ಲಕ್ಷಣವತೀತ್ಯಭೂತ್ವಾ ದುಷ್ಟವೀರ್ಯೋದ್ಭವೇತಿ ಲಕ್ಷಣಾ ಜಾತಾ॥ ಪೌಲೋಮ್ಯಾಃ ಶಚ್ಯಾಃ ಚಿತ್ರೇತಿ ತಾರೇತಿ ರೂಪದ್ವಯಮ್॥ ಶಚೀ ಚ ಶಕ್ರಸ್ಯ ಭಾರ್ಯೈವ

ಬಭೂವ ತಾರಾ ॥ ಸಾ ಚ ಕನ್ಯಾ ಶಚೀ ಹಿ ॥ ಚಿತ್ರಾಂಗದಾ ವೀರಸೇನೇನ ತೋಷಾತ್ ಅತಿ ಪ್ರಕಾಶಯುತತ್ವಾತ್ ॥ ಚಿತ್ರಾಂಗದಾ ಅರ್ಜುನ ಭಾರ್ಯಾ ॥ ಗಾಧಿಭಾರ್ಯಾ ಕೌಶಿಕಾ ॥ ವಿಕುಕ್ಷಿಭಾರ್ಯಾ ವಸುಮತೀ ॥ ಕುಶಪ್ರಿಯಾ ಕಾಂತಿಮತೀ ॥ ವಾಲಿಭಾರ್ಯಾ ತಾರಾ ॥ ಪುಲೋಮಜಾ ಮಂದ್ರದ್ಯುಮ್ನ ಮಹಿಷೀ. ॥16॥

## ಕನ್ನಡಾರ್ಥ

ಕಾಮನು ವರದಿಂದ ಚಕ್ರಸ್ವರೂಪವನ್ನು (ತದಭಿಮಾನವನ್ನು) ಹೊಂದಿದನು. ಅನಿರುದ್ಧನು ಕಾಮಪುತ್ರನು. ಬ್ರಹ್ಮಾವೇಶವುಳ್ಳವನು. ಶಂಖಾಭಿಮಾನಿಯು. ಕಾಮ-ಅನಿರುದ್ಧರು ಭರತ ಶತ್ರುಘ್ನರೆಂಬ ಹೆಸರಿನಿಂದ ರಾಮಾನುಜರಾಗಿ ಹುಟ್ಟಿದರು. ಹೀಗೆ, ತಾತ್ಪರ್ಯ ನಿರ್ಣಯದಲ್ಲಿ ಚಕ್ರಾಭಿಮಾನಿತ್ವವು ಹೇಳಲಾಗಿರುತ್ತದೆಂದು ಪ್ರಮಾಣವನ್ನು ತೋರಿಸಿದ್ದಾಯಿತು. ಶತ್ರುಘ್ನನಲ್ಲಿ ಅನಿರುದ್ಧರೂಪೀ ಹರಿಯ ಆವೇಶವಿದೆಯೆಂದು— 'ಸಂಕರ್ಷಣಾದ್ಯೈ:'–ಎಂದು ಹಿಂದಿನ ಪದ್ಯದ ವ್ಯಾಖ್ಯಾನದಲ್ಲಿ ಸಾಧಾರವಾಗಿ ಹೇಳಿರುತ್ತದೆ.

ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನು,ಕೃಷ್ಣ ಪುತ್ರನಾದ ಪ್ರದ್ಯುಮ್ನನಿಂದ ಹುಟ್ಟಿದನು. ಆವನೇ ಕಾಮಪುತ್ರ ಹಾಗೂ ಅನಿರುದ್ಧರೂಪೀ ಹರಿಯ ಆವೇಶಯುಕ್ತನು. ರತಿಗೆರಡು ರೂಪಗಳು. ರುಕ್ಮಿಯಮಗಳು ರುಕ್ಮವತಿ; ಇನ್ನೊಂದು ದುರ್ಯೋಧನನ ಪುತ್ರಿ ಲಕ್ಷಣಾ. ಶಚೀದೇವಿಗೆ ಚಿತ್ರಾ, ತಾರಾ ಎಂದು ಎರಡು ರೂಪಗಳು. ಪಾಂಡ್ಯದೇಶದ ವೀರಸೇನನೆಂಬ ರಾಜನ ಮಗಳು ಚಿತ್ರಾಂಗದಾ, ಅರ್ಜುನನ ಹೆಂಡತಿ. ಗಾಧಿಯ ಹೆಂಡತಿಯು ಕೌಶಿಕೀ. ವಿಕುಕ್ಷಿಯ ಹೆಂಡತಿ ವಸುಮತಿ. ಕುಶನ ಹೆಂಡತಿಯು ಕಾಂತಿಮತೀ. ವಾಲಿಯ ಹೆಂಡತಿ ತಾರಾ. ಪುಲೋಚನನ ಮಗಳು (ಪುಲೋಮಜಾ) ಮಂದ್ರದ್ಯುಮ್ನನ ಹೆಂಡತಿ. ॥16॥

**ಶ್ರೀಗುರುಹೃದಯ ಪ್ರಕಾಶಿಕೆ :-**

ಕಾಮಪುತ್ರ-ಎಂದು ಮೊದಲು ಮಾಡಿ, ಎರಡು ಪದ್ಯದಿಂದ ಅನಿರುದ್ಧ ಮೊದಲಾದ ಈ ಆರು ಜನರ ಅವತಾರನಾಮಗಳನ್ನು ತಿಳಿಸುತ್ತಾರೆ. ಸೀತಾ ರಾಮರ ತಮ್ಮ ಶತ್ರುಘ್ನನು ಅನಿರುದ್ಧನ ಅವತಾರ. ಬಲರಾಮನ ತಮ್ಮ ಶ್ರೀಕೃಷ್ಣನ ಮೊಮ್ಮಗ ಅನಿರುದ್ಧ ಸಹ ಎರಡು, ಕಾಮಪುತ್ರನಾದ ಅನಿ ರುದ್ಧನ ಅವತಾರಗಳು. ಇವರಲ್ಲಿ ಅನಿರುದ್ಧದೇವರ ಆವೇಶ ಉಂಟೆಂದು ಅರ್ಥ. ಪ್ರದ್ಯುಮ್ನನ ಹೆಂಡತೀ ರುಗ್ಮವತೀ-ಎಂಬುವಳೂ, ಸಾಂಬನ ಹೆಂಡತಿ ಲಕ್ಷಣೆ-ಎಂಬುವಳೂ ಸಹ ರತೀದೇವಿಯ ಅವತಾರ. ವಾಲಿಯ ಹೆಂಡತಿ ತಾರೆ. ಅರ್ಜುನನ ಹೆಂಡತಿ ಚಿದ್ರಾಂಗದೆ-ಸಹ ಪೌಲೋಮಿ-ಎಂಬ ಶಚೀ ದೇವಿಯ ಅವತಾರ. ॥16॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಕಾಮಪುತ್ರ ಅನಿರುದ್ಧ ಮತ್ತು ಕಾಮಪತ್ನೀ ರತೀ ದೇವಿ ಮತ್ತು ಇಂದ್ರಪತ್ನೀ ಶಚೀದೇವಿ——ಇವರ ಅವತಾರವಿಶೇಷಗಳನ್ನು ತಿಳಿಸುತ್ತಾರೆ.

1. ಸೀತಾಪತಿಯಾದ ಶ್ರೀರಾಮಚಂದ್ರನಿಗೆ ಭರತ–ಲಕ್ಷಣ–ಶತ್ರುಘ್ನ ರೆಂಬ ಮೂರುಮಂದಿ ತಮ್ಮಂದಿರು. ಅವರ ಪೈಕಿ, ಲಕ್ಷಣನು ಶೇಷಾಂಶ ಸಂಭೂತನು. ಭರತನು ಮನ್ಮಥನ ಅವತಾರನು. ಚಕ್ರಾಭಿಮಾನಿಯು. ಶತ್ರುಘ್ನನು ಅನಿರುದ್ಧನ ಅಂಶನು. ಮನ್ಮಥನಪುತ್ರನು ಅನಿರುದ್ಧನು. ಅವನೇ ಶತ್ರುಘ್ನನಾಮಕನಾಗಿ ದಶರಥಮಹಾರಾಜನಿಗೆ ಸುಮಿತ್ರಾದೇವಿಯಲ್ಲಿ ಜನಿಸಿದನು. ಮನ್ಮಥನು ತಪಸ್ಸುಮಾಡಿ,ಶ್ರೀಹರಿಯ ಅನುಗ್ರಹ ಸಂಪಾದಿಸಿ, ಅವನ ಚಕ್ರಾಯುದ್ಧಕ್ಕೆ ಅಭಿಮಾನಿಯಾದನು. ಮನ್ಮಥನಪುತ್ರನಾದ ಅನಿ ರುದ್ಧನು ಶಂಖಾಭಿಮಾನಿಯಾದನು. ಇದರಿಂದ, ಭರತನು ಚಕ್ರಾಭಿಮಾನಿ

**ಯಾಗಿಯೂ**, ಶತ್ರುಘ್ನನು ಶಂಬಾಭಿಮಾನಿಯೂ ಆಗಿರುವರು. ಅನಿರುದ್ಧ ನಲ್ಲಿ ಅನಿರುದ್ಧನಾಮಕ ಶ್ರೀಹರಿಯ ಅಂಶವಿದೆ. ಇದರಿಂದ,ಶತ್ರುಘ್ನನಲ್ಲಿಯೂ ಸಹ ಅನಿರುದ್ಧನ ಅಂಶವಿದೆ. (ಶ್ರೀಹರಿಯ ಆವೇಶಯುಕ್ತನು).

**"ಅನಿರುದ್ಧಯುಕ್ ಶತ್ರುಘ್ನೋಽನಿರುದ್ಧೋ ರಾಮನಂದನಃ ॥"- ಎಂಬ ಪ್ರಮಾಣದಂತೆ.**

2. ಬಲರಾಮನ ತಮ್ಮನೇ ಶ್ರೀಕೃಷ್ಣನು (**ಬಲರಾಮನಾನುಜ**). ಶ್ರೀಕೃಷ್ಣನಿಗೆ ರುಕ್ಮಿಣೀದೇವಿಯಲ್ಲಿ ಪ್ರದ್ಯುಮ್ನನೆಂಬ ಪುತ್ರನು ಜನಿಸಿದನು, ಆ ಅನಿರುದ್ಧನೇ ಕಾಮಪುತ್ರನಾದ ಮೂಲರೂಪೀ ಅನಿರುದ್ಧನು. ಅಲ್ಲಿಗೆ, ಅನಿರುದ್ಧನು ಶ್ರೀಕೃಷ್ಣನಿಗೆ ಮೊಮ್ಮಗನಾದನು (**ಪ್ರಪೌತ್ರ ಅನಿರುದ್ಧನೊಳಗ ನಿರುದ್ಧ**) ಅಂದರೆ, ಶ್ರೀಕೃಷ್ಣನ ಪೌತ್ರನಾದ ಅನಿರುದ್ಧನಾಮಕ ಕಾಮಪುತ್ರ ಅನಿರುದ್ಧನ ಅವತಾರನು. ಇಂತು, ಕಾಮಪುತ್ರನಾದ ಅನಿರುದ್ಧನಿಗೆ ಎರಡು ಅವತಾರಗಳು.

(1) ರಾಮಚಂದ್ರನ ತಮ್ಮನಾದ **ಶತ್ರುಘ್ನ**. (2) ಶ್ರೀಕೃಷ್ಣನ ಪೌತ್ರನಾದ **ಅನಿರುದ್ಧ**.

3. ಮನ್ಮಥನಪತ್ನೀ (**ಕಾಮಭಾರ್ಯಾ**) ರತೀದೇವಿಯು. ದ್ವಾಪರ ಯುಗದಲ್ಲಿ ರುಕ್ಮಿಣಿಯ ಅಣ್ಣನಾದ ರುಕ್ಮಿಯಲ್ಲಿ **ರುಗ್ಮವತೀ**–**ನಾಮಕಳಾಗಿ**, ಪುತ್ರಿಯಾಗಿ ಅವತರಿಸಿದಳು. ಶ್ರೀಕೃಷ್ಣ ಪುತ್ರನಾದ ಪ್ರದ್ಯುಮ್ನನು (ಮನ್ಮಥನ ಅವತಾರ) ರುಗ್ಮವತಿಯನ್ನು ವಿವಾಹವಾದನು. ಪ್ರದ್ಯುಮ್ನ-ರುಕ್ಮವತಿಯ ಪುತ್ರನೇ ಅನಿರುದ್ಧನು.

4. ದುರ್ಯೋಧನನ ಪುತ್ರಿ **ಲಕ್ಷಣಾ**–ಎಂಬುವಳು. ರತೀದೇವಿಯೇ ಲಕ್ಷಣೆಯು.

**ಕಥಾಪ್ರಸಂಗ :—**

ಪೂರ್ವದಲ್ಲಿ,ಕಲಿಯ ಪತ್ನಿ ಅಲಕ್ಷ್ಮಿಯು ಕಾಶೀರಾಜನ ಮಗಳಾಗಿ ಜನಿಸಿದ್ದಳು. (ಕಾಶೀರಾಜನ ಪುತ್ರಿ ಭಾರತೀ-ಬೇರೆ) ಆಕೆಯನ್ನು ಧುರ್ಯೋಧನನು ಲಗ್ನವಾದನು. ಅವಳಲ್ಲಿ ಪೂರ್ವದಲ್ಲಿ ರಾವಣನ ಮಗನಾದ ಅಕ್ಷಕುಮಾರನನ್ನೇ ಲಕ್ಷಣನೆಂಬ ಹೆಸರುಳ್ಳ ಮಗನಾಗಿ ಪಡೆದನು. ರಾವಣನ ಪುತ್ರ ಅಕ್ಷಕುಮಾರನೇ (ಹನುಮಂತನಿಂದ ತೊಡೆಯ ಸಂದಿಗೆ ಸಿಕ್ಕಿ ಹತನಾದ) ಲಕ್ಷಣನು. ಅವನ ತಂಗಿಯೇ ಲಕ್ಷಣೆಯು. ಆಕೆ ಪೂರ್ವದಲ್ಲಿ ಷಣ್ಮುಖನ ಪ್ರಿಯತಮಳಾದ ಹೆಂಡತಿಯ. ಷಣ್ಮುಖನು ಮನ್ಮಥನ ಅವತಾರನಾದ್ದರಿಂದ, ಈ ಪ್ರಸಂಗ ಸರಿ ಹೊಂದುವುದು.

**ಪ್ರಮಾಣ :–**

"ತಸ್ಯಾಂ ಸುತಂ ತ್ವಜನಯತ್ಸುರು ಅಸಯೋಕ್ಷ: ಕನ್ಯಾಪುರಾ ಪ್ರಿಯತಮಾಂಚ ಷಡಾನನಸ್ಯ ॥"–(ಮ. ಧಾ. ತಾ. ನಿರ್ಣಯ-ಅಧ್ಯಾಯ-19).

ದುರ್ಯೋಧನನು ಲಕ್ಷಣೆಯ ಸ್ವಯಂವರವನ್ನು ಏರ್ಪಡಿಸಿದ ಪ್ರಸಂಗದಲ್ಲಿ, ಜಾಂಬವತೀಪುತ್ರನಾದ ಸಾಂಬನು ಆಕೆಯನ್ನು ಬಲಾತ್ಕಾರದಿಂದ ಅಪಹರಿಸಿದನು. ಲಕ್ಷಣೆಯೂ ಸಹ ಸಾಂಬನಲ್ಲಿ ಅನುರುಕ್ತಳಾಗಿದ್ದಳು. ಷಣ್ಮುಖನ ಅವತಾರನೇ ಸಾಂಬನಾದ್ದರಿಂದ,ರತೀದೇವಿಯ ಅಶಂಸಂಭೂತಳಾದ ಲಕ್ಷಣೆಯು ಪತ್ನಿಯಾದಳು.

**ಪ್ರಮಾಣ :–**

"ದುರ್ಯೋಧನಸ್ಯಾ ಸಪುತ್ರೀ ರತಿರ್ಯಾ ಪೂರ್ವಂ ನಾಮ್ನಾ ಲಕ್ಷಣಾ ಕಾಂತರೂಪಾ ॥

ಸ್ವಯಂವರಸ್ಥಾಂ ತಾಂ ಬಲೈನ್ನೈವ ಸಾಂಬೋಜಗ್ರಾಹ ಸಾ ಚೈನ ಮಾಸಾ ನುರಕ್ತಾ." ॥41॥

(ಮ. ಭಾ. ತಾ. ನಿರ್ಣಯ-ಅಧ್ಯಾಯ-22).

ಇದರಿಂದ, ರುಗ್ಮಿಯಪುತ್ರಿಯಾದ ರುಗ್ಮವತಿಯನ್ನು ಶ್ರೀಕೃಷ್ಣನಪುತ್ರನಾದ ಪ್ರದ್ಯುಮನು ವಿವಾಹವಾದನು. ರತಿಯ ದ್ವಿತೀಯಾವತಾರಸಂಭೂತಳಾದ ಲಕ್ಷಣಾದೇವಿಯನ್ನು (ದುರ್ಯೋಧನನ ಪುತ್ರಿ) ಶ್ರೀಕೃಷ್ಣನಪುತ್ರನಾದ ಸಾಂಬನು ಲಗ್ನವಾದನು.

ಇಂತು, ರತೀದೇವಿಗೆ ಎರಡು ಅವತಾರಗಳು.

(1) ಪ್ರದ್ಯುಮ್ನನ ಪತ್ನಿ ರುಗ್ಮವತೀ. (2) ಸಾಂಬನ ಪತ್ನೀ ಲಕ್ಷಣಾದೇವಿ.

5. ಇನ್ನು ಇಂದ್ರ ಪತ್ನಿ ಶಚೀದೇವಿಯ ಅವತಾರಗಳನ್ನು ತಿಳಿಸುತ್ತಾರೆ.

ಇಂದ್ರನಿಗೆ "**ಪುಲೋಮ**"-ನೆಂದು ಹೆಸರು. ಆತನ ಪತ್ನಿಯಾದ ಶಚೀದೇವಿಯು "**ಪೌಲೋಮಿ**".–

ದ್ವಾಪರಯುಗದಲ್ಲಿ **ಚಿತ್ರಾಂಗದಾ**–ಎಂಬ ಹೆಸರಿನಿಂದ ಅವತರಿಸಿದಳು. ಚಿತ್ರಾಂಗದೆಯು ಮಣಲೂರಿನ ಅರಸನಾಗಿದ್ದ ಚಿತ್ರವಾಹನನ ಪುತ್ರಿ. ಚಿತ್ರವಾಹನನಿಗೆ ವೀರಸೇನ ಎಂದೂ ಹೆಸರಿತ್ತು. ಮಣಲೂರು ಪಾಂಡ್ಯದೇಶದ ರಾಜಧಾನಿ. ಅರ್ಜುನನು ತೀರ್ಥಯಾತ್ರಾಪ್ರಸಂಗದಿಂದ, ಪಾಂಡ್ಯದೇಶಕ್ಕೆ ಬಂದನು. ಅಲ್ಲಿ ಚಿತ್ರಾಂಗದೆಯನ್ನು ಗಾಂಧರ್ವರೀತಿಯಲ್ಲಿ ವಿವಾಹಮಾಡಿಕೊಂಡನು. ಅವಳಲ್ಲಿ, ಅರ್ಜುನನಿಗೆ **ಬಭ್ರುವಾಹನನು** ಪುತ್ರನಾಗಿ ಜನಿಸಿದನು. ವೀರಸೇನ ಮಹಾರಾಜನು —"**ತ್ವಷ್ಟಾ**"-ಎಂಬ ಸೂರ್ಯನ ಅಂಶಸಂಭೂತನು, ಅವನಲ್ಲಿ ಯಮನಾವೇಶವೂ ಉಂಟು. ಬಭ್ರುವಾಹನನು ಜನಿಸುವ ಪರ್ಯಂತ,

ಅರ್ಜುನನು ಚಿತ್ರಾಂಗದೆಯ ಜೊತೆಗೆ ಇದ್ದನು. ನಂತರ, ಆಕೆಯನ್ನು ಬಿಟ್ಟು ಹೊರಟು ಹೋದನು. ಕಾರಣವೇನೆಂದರೆ–ಪೂರ್ವದಲ್ಲಿ ಶಚೀದೇವಿಯು ವಾಲಿಯ ಪತ್ನಿಯಾದ ತಾರಾದೇವಿ ಎಂಬ ಹೆಸರಿನಿಂದ ಅವತರಿಸಿದ್ದಳು. ವಾಲಿಯು ದುಂದುಭಿಯೊಡನೆ ಯುದ್ಧಮಾಡುವ ಪ್ರಸಂಗದಲ್ಲಿ, ಗವಿಯನ್ನು ಹೊಕ್ಕು, ಬಹಳ ದಿನಗಳಾದರೂ ಬಾರದಿರಲು, ಸುಗ್ರೀವನು ದುಃಖಿತನಾಗಿ, ಗವಿಯ ಬಾಗಿಲನ್ನು ಹೆಬ್ಬಂಡೆಯಿಂದ ಮುಚ್ಚಿ, ನಗರಕ್ಕೆ ಹಿಂದಿರುಗಿ, ತಾನೇ ಕಿಷ್ಕಿಂಧಾರಾಜ್ಯದ ಅರಸನಾದನು. ಆಗ, ಅಣ್ಣನ ಪತ್ನಿಯಾದ ತಾರೆಯ ಸಂಗವನ್ನು ಮಾಡಿದನು. (ವಾನರವರ್ಗದ ನಿಯಮದಂತೆ). ಆ ದೋಷ ದಿಂದ, ತಾರೆಯೇ ದ್ವಾಪರಯುಗದಲ್ಲಿ ಚಿತ್ರಾಂಗದೆಯಾಗಿ ಅವತರಿಸಿದಾಗ, ಅರ್ಜುನನ ಸಾಮೀಪ್ಯ ಹೆಚ್ಚು ದಿನ ಉಂಟಾಗಲಿಲ್ಲ.

**ಪ್ರಮಾಣ :–**

"ತಾರಾದೇಹೀ ಸೂರ್ಯಜಸ್ಯಾಂಗ ಸಂಗಾತ್ ಸ್ವರ್ಗಂನಾಯಾದಂತ ರಿಕ್ಷಾದಿಹಾಸೀತ ॥

ತೇನೈವ ಹೇತೋರ್ನಾತಿ ಸಾಮಿಪ್ಯ ಮಾಸೀತ್ ॥"––ನಿರ್ಣಯ **ಪ್ರಮಾಣ.**

ಶಚೀದೇವಿಯೇ, ತ್ರೇತಾಯುಗದಲ್ಲಿ ತಾರಾನಾಮಕಳಾಗಿ ಅವತರಿಸಿ, ವಾಲಿಪತ್ನಿಯಾದಳು. ಇಂತು, ಶಚೀದೇವಿಗೆ ಎರಡು ಅವತಾರಗಳು.

1. ಅರ್ಜುನನ ಪತ್ನೀ ಚಿತ್ರಾಂಗದೆ. 2. ವಾಲಿಯ ಪತ್ನೀ ತಾರಾ ದೇವಿ, (ಬೃಹಸ್ಪತ್ಯಾಚಾರ್ಯರ ಪತ್ನೀ ತಾರಾದೇವಿ ಬೇರೆ). ॥16॥

★★

## ಪದ್ಯ-೧೭

**ಮೂಲ :-**

ತಾರನಾಮಕ ತ್ರೇತೆಯೊಳು ಸೀ ।
ತಾರಮಣನಾರಾಧಿಸಿದನು ಸ ।
ಮೀರಯುಕ್ತೋದ್ಧವನು ಕೃಷ್ಣಗೆ ಪ್ರಿಯನೆನಿಸಿದನು ॥
ವಾರಿಜಾಸನಯುಕ್ತ ದ್ರೋಣನು ॥
ಮೂರು ಇಳೆಯೊಳು ಬೃಹಸ್ಪತಿಗವ ।
ತಾರವೆಂಬರು ಮಹಾಭಾರತ ತಾತ್ಪರ್ಯದೊಳಗೆ ॥೧೭॥

**ಅವತರಣಿಕೆ :**

ಸುರಗುರುಗಳಾದ ಬೃಹಸ್ಪತ್ಯಾಚಾರ್ಯರ ಅವತಾರ ವಿಶೇಷಗಳನ್ನು ತಿಳಿಸುತ್ತಾರೆ. ॥17॥

**ಇಳೆಯೊಳು** = ಭೂಮಿಯಲ್ಲಿ, **ಬೃಹಸ್ಪತಿಗೆ** = ಬೃಹಸ್ಪತ್ಯಾಚಾರ್ಯರಿಗೆ, **ಮೂರು ಅವತಾರ** = ಅವತಾರಗಳು ಮೂರು ಯಾವುವೆಂದರೆ, **ತ್ರೇತೆಯೊಳು** = ತ್ರೇತಾಯುಗದಲ್ಲಿ, **ಸೀತಾರಮಣನ** = ಸೀತಾಪತಿಯಾದ ಶ್ರೀರಾಮಚಂದ್ರದೇವರನ್ನು, **ತಾರನಾಮಕ** = "ತಾರ"-ಎಂಬ ಹೆಸರಿನಿಂದ ಕಪಿರೂಪದಿಂದ ಅವತರಿಸಿ, **ಆರಾಧಿಸಿದನು** = ಸೇವೆಮಾಡಿದ್ದಾರೆ. **ಸಮೀರಯುಕ್ತ** = ಶ್ರೀವಾಯುದೇವರ ಆವೇಶದಿಂದ ಕೂಡಿದ, **ಉದ್ಧವನು** = ಉದ್ಧವನೆಂಬ ಹೆಸರಿನಿಂದ, **ಕೃಷ್ಣಗೆ ಪ್ರಿಯನೆನಿಸಿದನು** = ದ್ವಾಪರಯುಗದಲ್ಲಿ ಅವತರಿಸಿ, ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯನಾದವನೆಂದು ಕರೆಸಿದನು. **ವಾರಿಜಾಸನಯುಕ್ತ** = ಬ್ರಹ್ಮದೇವರ ಆವೇಶದಿಂದ ಯುಕ್ತರಾದ, **ದ್ರೋಣನು** = ದ್ರೋಣಾಚಾರ್ಯರೆಂದು ದ್ವಾಪರದಲ್ಲಿ ಪ್ರಸಿದ್ಧರಾದ ಧನು

ವಿದ್ಯಾಚಾರ್ಯರೆನಿಸಿದರು. **ಮಹಾಭಾರತ ತಾತ್ಪರ್ಯದೊಳಗೆ**= ಶ್ರೀಮನ್ಮಧ್ವ ಮುನಿಗಳಿಂದ ವಿರಚಿತ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯವೆಂಬ ಉದ್ಗ್ರಂಥದಲ್ಲಿ, **ಎಂಬರು**= ಪೂರ್ವೋಕ್ತ ಮೂರು ಅವತಾರ ವಿಶೇಷಗಳನ್ನು ತಿಳಿಸಲಾಗಿದೆ. ॥17॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಬೃಸಸ್ಪತ್ಯಾಚಾರ್ಯರ ಅವತಾರ ಆವೇಶ- ಅವರನ್ನ ಹೇಳತಾರೆ. ಭೂಮಿಯಲ್ಲಿ ಬೃಹಸ್ಪತ್ಯಾಚಾರ್ಯರಿಗೆ ಅವತಾರಗಳು ಮೂರು. ದಾವವೆಂದರೆ, ತ್ರೇತಾಯುಗದಲ್ಲಿ ಅವತಾರ ಮಾಡಿದ ರೂಪ, ಸೀತಾಪತಿ ಶ್ರೀರಾಮಚಂದ್ರದೇವರ, ತ್ರೇತಾಯುಗದಲ್ಲಿ ತಾರ ಎಂಬ ಕಪಿರೂಪದಿಂದ ಅವತಾರ ಮಾಡಿ ಸೇವಾ ಮಾಡೋವರಾಗಿದ್ದಾರೆ. ಈ ತಾರನಾಮಕ ಕಪಿರೂಪ ಒಂದು, ದ್ವಾಪರ ಯುಗದಲ್ಲಿ ಕೃಷ್ಣಾವತಾರದಲ್ಲಿ ಉದ್ಧವನಾಗಿ, ಅವತಾರ ಮಾಡಿ ಕೃಷ್ಣದೇವರಿಗೆ ಅತ್ಯಂತ ಪ್ರಿಯರಾದವರು ಎಂತ ಕರೆಸೋವರಾದರು ಇದು ಒಂದು. ದ್ರೋಣಾಚಾರ್ಯರು ಎಂಬ ಅವತಾರ ಒಂದು. ಅಂತು, ಈ ಮೂರು ಅವತಾರಗಳೊಳಗೆ ಜೀವೋತ್ತಮರಾದ ಶ್ರೀವಾಯುದೇವರ ಆವೇಶದಿಂದ ಯುಕ್ತನಾದವನು ಉದ್ಧವನು. ಕಮಲಾಸನರಾದ ಬ್ರಹ್ಮದೇವರ ಆವೇಶದಿಂದ ಯುಕ್ತರಾದವರು ದ್ರೋಣಾಚಾರ್ಯರು. ಈ ಪ್ರಕಾರ,ಮೂರು ಅವತಾರಗಳು ಎಂತ ಹೇಳತಾರೆ. ಶ್ರೀಮದಾನಂದತೀರ್ಥರಿಂದ ವಿರಚಿತವಾದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದೊಳಗೆ ಪೂರ್ವೋಕ್ತಪ್ರಕಾರ ಹೇಳತದೆ–ಎಂತಲೂ ಉತ್ತರೋತ್ತರ ಹೇಳತಕ್ಕ ವಿಷಯಗಳನ್ನೂ ಹೇಳತದೆ–ಎಂತಲೂ ತಾತ್ಪರ್ಯ.

॥17॥

## ೨. ಭಾವಪ್ರಕಾಶಿಕೆ :–

ಬೃಹಸ್ಪತ್ಯಾಚಾರ್ಯರಿಗೆ ಮೂರು ಅವತಾರಗಳು. ತ್ರೇತಾಯುಗದಲ್ಲಿ ರಾಮದೇವರ ಸೇವಾರ್ಥವಾಗಿ ತಾರನೆಂಬ ಕಪಿಯಾಗಿ ಅವತರಿಸಿರುವರು. ಮಹಾಭಾರತ ತಾತ್ಪರ್ಯ ನಿರ್ಣಯ ಮೂರನೆಯ ಅಧ್ಯಾಯದಲ್ಲಿ– "ಬೃಹಸ್ಪತಿಸ್ತಾರ ಉತೋಶಚೀಚ ಶಕ್ರಸ್ಯಭಾರ್ಯೈವ ಬಭೂವ ತಾರಾ ॥70॥ ಬೃಹಸ್ಪತಿ ಬ್ರಹ್ಮಸುತೋಽಪಿಪೂರ್ವಂ ಸಹೈವ ಶಚ್ಯಾ ಮನಸೋಽಭಿಜಾತಃ॥ ಬ್ರಹ್ಮೋದ್ಭವಸ್ಯಾಂಗಿರಸಃ ಸುತೋಽಭೂನ್ಮರೀಚಿಜಸ್ಯೈವಶಚೀಪುಲೋಮ್ನಃ ॥71॥ ಸವವಶಚ್ಯಾಸಹವಾನರೋಽಭೂತ್ಸ್ವಸಂಭವೋದೇವ ಗುರುಬೃಹಸ್ಪತ್ಯಾಚಾರ್ಯರ ತಾರನೆಂತಲೂ, ಪೂರ್ವದಲ್ಲಿ ಇಂದ್ರನ ಹೆಂಡತಿಯಾದ ಶಚೀದೇವಿಯು ತಾರೆಯೆಂತಲೂ, ಅಣ್ಣ ತಂಗಿಯರಾಗಿ ಏಕೋದರದಲ್ಲಿ ಜನಿಸಿದರು. ಈ ತಾರೆಯೇ ಇಂದ್ರಾವತಾರನಾದ ವಾಲಿಯ ಹೆಂಡತಿಯು. ಬೃಹಸ್ಪತ್ಯಾಚಾರ್ಯರು ಪೂರ್ವದಲ್ಲಿ ಬ್ರಹ್ಮದೇವರ ಮಕ್ಕಳಾದರೂ, ಬ್ರಹ್ಮದೇವರ ಮನಸ್ಸಿನಿಂದ ಶಚೀದೇವಿಯಿಂದ ಸಹಿತರಾಗಿಯೇ ಜನಿಸಿದರು. ಆದ್ದರಿಂದ, ಆಗಲೂ ಅಣ್ಣ ತಂಗಿಯರೇ ಆಗಿದ್ದರು. ಮಧ್ಯದಲ್ಲಿ ಒಂದು ಜನ್ಮ ಭಿನ್ನಶರೀರರಾಗಿದ್ದರು. ಬ್ರಹ್ಮದೇವರ ಮಕ್ಕಳಾದ ಅಂಗೀರಸ ಎಂಬ ಋಷಿಗಳ ದೆಸೆಯಿಂದ ಬೃಹಸ್ಪತ್ಯಾಚಾರ್ಯರು ಹುಟ್ಟಿದರು. ಮರೀಚಿಋಷಿ ಮಕ್ಕಳಾದ ದೆಸೆಯಿಂದ ದನೂ ದೇವಿಯಲ್ಲಿ ಹುಟ್ಟಿದ ಪುಲೋಮನೆಂಬ ದಾನವನ ಮಗಳಾಗಿ ಶಚೀ ದೇವಿಯು ಹುಟ್ಟಿದಳು. ಆದ್ದರಿಂದಲೇ, ಪೌಲೋಮಿಯೆಂದು ಶಚೀ ದೇವಿಗೆ ಹೆಸರು ಬರಲು ಕಾರಣವು. ಈಗ, ಅದೇ ಬೃಹಸ್ಪತ್ಯಾಚಾರ್ಯರು ಶಚೀದೇವಿಯಿಂದೊಡಗೂಡಿ ವಾನರರೂಪಿಗಳಾಗಿ ಜನಿಸಿದರು. ಆದ್ದರಿಂದ, ದೇವಗುರುವಾದ ಬೃಹಸ್ಪತ್ಯಾಚಾರ್ಯರೇ ತಾರನೆಂಬ ಕಪಿಯಾಗಿ ಜನಿಸಿದರೇ ಹೊರತು, ಬೃಹಸ್ಪತ್ಯಾಚಾರ್ಯರ ಮಗ ತಾರನೆಂಬ ಕಪಿಯೆಂದರ್ಥವಲ್ಲವೆಂಬ ಭಾವ. ವಾಯುದೇವರ ಆವೇಶದಿಂದ ಕೂಡಿ, ಬೃಹಸ್ಪತ್ಯಾಚಾರ್ಯರೇ ದ್ವಾಪರಾ

ರಾಂತ್ಯದಲ್ಲಿ ಶ್ರೀಕೃಷ್ಣನ ಸೇವಾರ್ಥವಾಗಿ ಜನಿಸಿದರು. ಮಹಾಭಾರತ ತಾತ್ಪರ್ಯ ನಿರ್ಣಯ-12ನೆಯ ಅಧ್ಯಾಯದಲ್ಲಿ, ಬೃಹಸ್ಪತಿಃ ಪೂರ್ವಮುಘೋದ್ಧರೇಃ ಪದಂ ಸಂಸೇವಿತುಂ ಪವನಾವೇಶಯುಕ್ತಃ॥ ॥100॥ಸ ಉದ್ಧವೋನಾಮಯುಪ್ರವೀರಾಜ್ಞಾತೋ ವಿದ್ವಾನುಪಗವನಾಮಧೇಯಾತ್॥ ದ್ರೋಣಾತ್ಮಕಂನಾರಾಂ ಸ್ವಸೇವಕಂ ಕುರ್ಯಾದ್ಧರಿರ್ಮಾಮಿತಿ ಭೂಯ ಏವ ॥101॥ ಸ ಉದ್ಧವಾತ್ಮಾವತಾರಯಾದ ವೇಷ್ವಾಸೇವನಾರ್ಥಂ ಪುರುಷೋತ್ತಮ್॥ "ಬೃಹಸ್ಪತ್ಯಾಚಾರ್ಯರು ಪರಮಾತ್ಮನ ಸೇವೆಯನ್ನು ಮಾಡುವುದಕ್ಕಾಗಿ,ದ್ರೋಣಾಚಾರ್ಯರಾಗಿ ಜನಿಸಿದ್ದರೂ,ಅಷ್ಟಕ್ಕೇ ತೃಪ್ತರಾಗದೇ, ವಾಯುದೇವರ ಆವೇಶದಿಂದ ಕೂಡಿ ಯಾದವ ಶ್ರೇಷ್ಠನಾದ ಉಪಗವನೆಂಬುವನ ದೆಸೆಯಿಂದ ಉದ್ಧವನೆಂಬ ಹೆಸರಿನಿಂದ ಜನಿಸಿದನು. ಅದೇಕೆಂದರೆ:- ದ್ರೋಣರೂಪಿಯಾದ ತನ್ನನ್ನು ಶ್ರೀಹರಿಯು ಅತ್ಯಂತ ಪ್ರೀತ್ಯಾಸ್ಪದನಾದ ಸೇವಕನನ್ನಾಗಿ ಮಾಡಿಕೊಳ್ಳಲಾರನೆಂದು ಯೋಚಿಸಿ, ಶ್ರೀಕೃಷ್ಣನನ್ನು ಚೆನ್ನಾಗಿ ಸೇವೆಮಾಡಬೇಕೆಂಬ ಇಚ್ಛೆಯಿಂದ ಉದ್ಧವರೂಪದಿಂದ ಯಾದವರಲ್ಲಿ ಜನಿಸಿದರು- ಎಂದು ಹೇಳಿರುವರು. ಬ್ರಹ್ಮಾವೇಶದಿಂದ ಕೂಡಿ ದ್ರೋಣಾಚಾರ್ಯರೆಂಬ ಹೆಸರಿನಿಂದ ಇದೇ ಬೃಹಸ್ಪತ್ಯಾಚಾರ್ಯರು ಉದ್ಧವನಾಗಿ ಜನಿಸುವುದಕ್ಕೆ ಮುಂಚಿತವಾಗಿ ಜನಿಸಿರುವರು. ಮೊದಲನೆಯ ಅವತಾರವು ತಾರನೆಂಬ ಕಪಿಯು. ಎರಡನೆಯದು ಉದ್ಧವ. ಮೂರನೆಯದು- ದ್ರೋಣನೆಂದು ಉದ್ಧವನ ಅವತಾರದ ವಿಷಯದಲ್ಲಿ ಕೊಟ್ಟ ಪ್ರಮಾಣದಿಂದ ಸಿದ್ಧವಾಗುವುದು. ದ್ರೋಣರೂಪಿಯಾದ ನನ್ನನ್ನು ಶ್ರೀಕೃಷ್ಣನು ಅತ್ಯಂತ ಪ್ರಿಯಸೇವಕನನ್ನಾಗಿ ಮಾಡಿಕೊಳ್ಳುವುದಿಲ್ಲವೆಂದು ಯೋಚಿಸಿ, ಯಾದವರಲ್ಲಿ ಉದ್ಧವನಾಗಿ ಜನಿಸಿದವನೆಂಬ ಪ್ರಮಾಣದಿಂದಲೂ, ಉದ್ಧವನೂ, ದ್ರೋಣಾಚಾರ್ಯರೂ ಸಮಕಾಲೀನರು. ಅವರಲ್ಲಿ ದ್ರೋಣಾಚಾರ್ಯರ ಉತ್ಪತ್ತಿ ಮೊದಲು ಆದುದೆಂತಲೂ, ತದನಂತರ ಉದ್ಧವನ ಉತ್ಪತ್ತಿ ಆದುದೆಂತಲೂ, ನಿರ್ಣಯಾದಿ ವಾಕ್ಯಗಳಿಂದ ಸ್ಪಷ್ಟವಾಗುವುದು. ಆದರೆ, ದಾಸರಾಯರು ಏಕೆ ವ್ಯತ್ಯಾಸವಾಗಿ ಮೊದಲು ತಾರ, ಎರಡನೆಯದು ಉದ್ಧವ, ಆಮೇಲೆ ದ್ರೋಣನೆಂದು ಹೇಳಿದರೆಂದರೆ- ಅವರ ಅಭಿಪ್ರಾಯ ಬೃಹಸ್ಪತಿಗೆ ಅವತಾರ ಮೂರೆಂದು ಹೇಳಬೇಕಾಗಿ ಹೇಳಿದರೇ ಹೊರತು,ಅವತಾರಕ್ರಮ ಹೇಳ

ಹೇಳಬೇಕಾಗಿರಲಿಲ್ಲ. ಆದ್ದರಿಂದ, ವಿರೋಧವಿಲ್ಲವೆಂಬ ತಾತ್ಪರ್ಯ. ದ್ರೋಣಾಚಾರ್ಯರು ಬೃಹಸ್ಪತಿ ಎಂಬ ವಿಷಯದಲ್ಲಿ ಪ್ರಮಾಣ :- ನಿರ್ಣಯ 11ನೆಯ ಅಧ್ಯಾಯದಲ್ಲಿ-"ಯದೈವ ಜಾತಃ ಸಕೃಪ ಸ್ತದೈವ ಬೃಹಸ್ಪತೇಃ ಸೂಸುರಗಾಚ್ಚ ಗಂಗಾಂ ॥ ಸ್ನಾತುಂ ಘೃತಾಚೀಂ ಸದದರ್ಶ ತತ್ರ ಶ್ಲಥದ್ದುಕೂಲಾಂ ಸುರ ವರ್ಯ ಕಾಮಿನೀಂ ॥64॥ ತದ್ದರ್ಶನಾತ್ಸ್ಕನ್ನ ಮಥೇಂದ್ರಿಯಂ ಸದ್ರೋಣೇ ದಧಾರಾಶು ಶತೋಭವತ್ಸ್ವಯಂ ॥ ಅಂಭೋಜ ಜಾವಾವೇಶಯುತೋ ಬೃಹಸ್ಪತಃ ಕರ್ತುಂ ಹರೇಃ ಕರ್ಮಭುವೋಭರೋದ್ಧೃತೌ ॥65॥ ದ್ರೋಣೇತಿ ನಾಮಾಸ್ಯ ಚಕಾರತಾತೋ ॥"—ಯಾವಾಗ ಕೃಪಾಚಾರ್ಯರು ಭೂಮಿಯಲ್ಲಿ ಜನಿಸಿದರೋ, ಅದೇ ಕಾಲದಲ್ಲಿ ಬೃಹಸ್ಪತ್ಯಾಚಾರ್ಯರ ಮಕ್ಕಳಾದ ಭರದ್ವಾಜರು ಸ್ನಾನಮಾಡುವುದಕ್ಕಾಗಿ ಗಂಗೆಗೆ ಬಂದರು. ಆ ಸಮಯದಲ್ಲಿ ಅಲ್ಲಿ ಮುಂಚಿತವಾಗಿ ಬಂದಿದ್ದ ದೇವತಾಕಾಮಿನಿಯಾದ ಘೃತಾಚಿಯೆಂಬ ಅಪ್ಸರಸ್ತ್ರೀಯನ್ನು ನೋಡಿದರು. ಆಕೆಯು ಉಟ್ಟ ವಸ್ತ್ರವು ಸ್ನಾನದಿಂದ ಜಾರಿ, ಕೆಳಗೆ ಬಂದು ಬಿಟ್ಟಿದ್ದಿತು. ಅಂತಹಾ ಸ್ತ್ರೀಯನ್ನು ನೋಡಿದ ಕೂಡಲೇ ಇವರಿಗೆ ಇಂದ್ರಿಯವು ಸ್ಖಲನವಾಯಿತು. ಅವರು ಅಮೋಘವೀರ್ಯರಾದುದರಿಂದ, ಆ ವೀರ್ಯವನ್ನು ತಮ್ಮ ಕೈಯಲ್ಲಿದ್ದ ದ್ರೋಣಪಾತ್ರೆಯಲ್ಲಿ ಹಿಡಿದರು. ಆ ಪಾತ್ರೆಯ ದಶೆಯಿಂದ ಸ್ವಯಂ ಬೃಹಸ್ಪತ್ಯಾಚಾರ್ಯರು ಬ್ರಹ್ಮದೇವರ ಆವೇಶದಿಂದ ಕೂಡಿ,ಶ್ರೀಪರಮಾತ್ಮನ ಭೂಭಾರಹರಣರೂಪವಾದ ಕೃತ್ಯಕ್ಕೆ ಸಹಾಯಕರಾಗಬೇಕೆಂಬ ಉದ್ದೇಶದಿಂದ ಜನಿಸಿದರು. ಅವರ ತಂದೆಯಾದ ಭರದ್ವಾಜರು ಇವರಿಗೆ ದ್ರೋಣ– ಎಂದು ನಾಮಕರಣವನ್ನು ಮಾಡಿದರು- ಎಂದು ಹೇಳಿರುವರು. ಈ ವಾಕ್ಯಗಳನ್ನು ಉದ್ದೇಶಿಸಿ, ದಾಸಾರ್ಯರು ಈ ಅವತಾರ ಆವೇಶಗಳನ್ನು ಮಹಾಭಾರತ ತಾತ್ಪರ್ಯದೊಳಗೆ ಅಂದರೆ, ತಾತ್ಪರ್ಯ ನಿರ್ಣಯದಲ್ಲಿ ಹೇಳಿರುವರೆಂದು ಹೇಳಿರುವರು. ಆದ್ದರಿಂದ, ಇಲ್ಲಿ ಆ ನಿರ್ಣಯದ ಮೂಲ ಶ್ಲೋಕಗಳು ಅರ್ಥ ಸಹಿತವಾಗಿ ಬರೆಯಲ್ಪಟ್ಟಿದೆ. ॥17॥

೩. ಭಾವದರ್ಪಣ :-

ತಾರನಾಮಕ ಕಪಿಯಲ್ಲೂ, ದ್ರೋಣಾಚಾರ್ಯರಲ್ಲೂ, ಬ್ರಹ್ಮಾವೇಶವು ।

ಉದ್ಧವನಲ್ಲಿ ವಾಯುಆವೇಶವು ಆದೆ- ಎಂದು ಹೇಳುತ್ತಾರೆ । ತದುಕ್ತಂ "ತಾರೋ"-ಬ್ರಹ್ಮಾಂಶಯುಗ್ದ್ರೋಣೋ ವಾಯುಯುಕ್ತೋದ್ಧವೋಗುರು ರಿತಿ"- ಸಮೀರ-ವಾಯು ॥ ॥17॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

'ತಾರ'-ಇತಿ ॥ ಬೃಹಸ್ಪತಿಃ ತಾರಃ ॥ ಶ್ರೀರಾಮಚರಿತೋಪದೇಶೇನ ದೇವಯೋನಿವಾನ್ ॥ ಅನತಾರಕತ್ವಾತ್ ತಾರಃ ಪೂರ್ವಂ ಅಭೂತ್ ಹರೇಃ ಪದಂ ಸಂಸೇವಿತುಂ ಪವನಾವೇಶಯುಕ್ತಃ ॥ ಸ ಉದ್ಧವೋ ನಾಮ ಯದು ಪ್ರವೀರಾತ್ ವಿದ್ವಾನ್ ಉಪಗವಿನಾಮಧೇಯಾತ್ ॥ ಉತ್ಕೃಷ್ಟಃ ಕೃಷ್ಣಃ ಧವಃ ಯಸ್ಯ ಇತಿ ಉದ್ಧವಃ ॥ ಅಂಭೋಜಜನಾವೇಶಯುತಃ ಬೃಹಸ್ಪತಿಃ ಕರ್ತುಂ ಹರೇಃ ಕರ್ಮಭುವೋ ಭರೋದ್ಧೃತೌ ॥ 'ದ್ರೋಣ'-ಇತಿ ॥ ದ್ರೋಣಪಾತ್ರೋತ್ಪನ್ನಃ. ॥17॥

## ಕನ್ನಡಾರ್ಥ

ಬೃಹಸ್ಪತಿಯೇ ತಾರನಾಮಕ ಕಪಿಯು. ಶ್ರೀರಾಮಚರಿತ್ರೆಯ ಉಪ ದೇಶದಿಂದ ದೇವಯೋನಿಯವನಾದ ತಾರನು ಪಾಪಗಳನ್ನು ಪರಿಹರಿಸುವುದ ರಿಂದ, ತಾರನೆನಿಸಿಕೊಳ್ಳುತ್ತಾನೆ. ತ್ರೇತಾಯುಗದಲ್ಲಿ ಬೃಹಸ್ಪತಿಯು ಹರಿಸೇವೆ ಯನ್ನು ಮಾಡಲು, ತಾರನಾಮಕ ಕಪಿಯಾದನು. ಅವನೇ ವಾಯುದೇವರ ಆವೇಶದಿಂದ ಯುಕ್ತನಾಗಿ, ಯದುವೀರ ಉಪಗವಿಯಲ್ಲಿ ಮಗನಾಗಿ ಉದ್ಧವ ನಾಗಿ ಹುಟ್ಟಿದನು. ಗುಣೋತ್ಕೃಷ್ಟನಾದ ಶ್ರೀಕೃಷ್ಣನೇ ನಾಯಕನಾಗಿ ಉಳ್ಳ ವನು ಉದ್ಧವನೆಂದು ಅರ್ಥ. ಬ್ರಹ್ಮದೇವರ ಆವೇಶಯುಕ್ತರಾಗಿ ಬೃಹ ಸ್ಪತಿಯೇ ದ್ರೋಣಾಚಾರ್ಯರಾಗಿ ಹುಟ್ಟಿ, ಭೂಭಾರಹರಣಾತ್ಮಕವಾದ ಹರಿ ಸೇವೆಯಲ್ಲಿ ಅಂಗನಾದನು. ತಂದೆಯಾದ ಭರದ್ವಾಜಮಹರ್ಷಿಯು ಘೃತಾಚಿ ಎಂಬ ಅಪ್ಸರೆಯನ್ನು ಕಂಡು,ಸ್ಖಲಿತವಾದ ಇಂದ್ರಿಯರೇತಸ್ಸನ್ನು ದ್ರೋಣವೆಂಬ ಪಾತ್ರೆ (ದೊನ್ನೆ)ಯಲ್ಲಿ ಇಡಲು, ಆದರಿಂದ ದ್ರೋಣಾಚಾರ್ಯ ಹುಟ್ಟಿದುದರಿಂದ ದ್ರೋಣಾಚಾರ್ಯರೆಂಬ ಹೆಸರನ್ನೇ ಭರದ್ವಾಜ ಎಂದು ಕರೆದರು. ॥17॥

**ಶ. ಶ್ರೀಗುರುಹೃದಯ ಪ್ರಕಾಶಿಕೆ :-**

ತ್ರೇತಾಯುಗದಲ್ಲಿ ತಾರಾ-ಎಂಬ ಕಪಿನಾಯಕನಾಗಿ, ಸೀತಾರಮಣ ರಾಮನನ್ನು ಆರಾಧಿಸಿದ ರೂಪ ಒಂದು. ದ್ವಾಪರದಲ್ಲಿ ಸಮೀರ-ಎಂಬ ವಾಯು ಆವೇಶಯುಕ್ತನಾದ ಉದ್ಧವನೆಂಬ ಯಾದವನಾಗಿ, ಶ್ರೀಕೃಷ್ಣನಿಗೆ ಪ್ರೀತಿಪಾತ್ರನೆನಿಸಿದ ರೂಪ ಒಂದು. ಬ್ರಹ್ಮಾವಿಷ್ಟ ದ್ರೋಣಾಚಾರ್ಯರ ರೂಪ ಒಂದು. ಸಹ ಈ ಮೂರೂನೂ ಭೂಮಿಯಲ್ಲಿ ಬೃಹಸ್ಪತಿಗಳ ಅವತಾರವೆಂದು ಮಹಾಭಾರತ ತಾತ್ಪರ್ಯದಲ್ಲಿ ಹೇಳುತ್ತಾರೆ. ॥17॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ, ಸುರಗುರುಗಳಾದ ಶ್ರೀಬೃಹಸ್ಪತ್ಯಾಚಾರ್ಯರ ಅವತಾರವಿಶೇಷಗಳನ್ನು ತಿಳಿಸುತ್ತಾರೆ.

ಬೃಹಸ್ಪತ್ಯಾಚಾರ್ಯರಿಗೆ-ಮೂರು ಅವತಾರಗಳು.

1. **ತಾರ-ಎಂಬ ಕಪಿ :-**

ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಸೇವಾರ್ಥವಾಗಿ, **"ತಾರ"**-ಎಂಬ ನಾಮದಿಂದ, ವಾನರಜನ್ಮದಲ್ಲಿ ಅವತರಿಸಿದರು. ಸುಗ್ರೀವನ ಮಾವನಾದರು. ಸುಗ್ರೀವನ ಪತ್ನಿಯಾದ ರುಮೆಯು ತಾರನ ಪುತ್ರಿ.

**ಕಥಾಪ್ರಸಂಗ :-**

ಪೂರ್ವದಲ್ಲಿ ಇಂದ್ರನ ಪತ್ನಿಯಾದ ಶಚೀದೇವಿಯು, **ತಾರೆ**-ಎಂಬ ಹೆಸರಿನಿಂದಲೂ, ಬೃಹಸ್ಪತ್ಯಾಚಾರ್ಯರು **ತಾರನೆಂಬ** ಹೆಸರಿನಿಂದಲೂ,ಅಣ್ಣ ತಂಗಿಯರಾಗಿ ಏಕೋದರರಾಗಿ ಜನಿಸಿದರು. ತಾರೆಯ ಅಣ್ಣ ತಾರ. **ತಾರೆಯೇ**

ಇಂದ್ರಾವತಾರಿಯಾದ ವಾಲಿಯ ಪತ್ನೀ. ಪೂರ್ವದಲ್ಲಿ ಬ್ರಹ್ಮದೇವರ ಮನಸ್ಸಿನಿಂದ ಶಚೀದೇವಿಯಿಂದ ಸಹಿತರಾಗಿಯೇ ಜನಿಸಿದ್ದರು. ಆಗಲೂ, ಅಣ್ಣ ತಂಗಿಯರೇ ಆಗಿದ್ದರು. ಬ್ರಹ್ಮದೇವರ ಮಕ್ಕಳಾದ ಅಂಗೀರಸಮಹಾಮುನಿಗಳಿಂದ ಬೃಹಸ್ಪತ್ಯಾಚಾರ್ಯರ ಜನನ. ಮರೀಚಿಋಷಿ ಪುತ್ರರಾದ ಕಶ್ಯಪರ ದೆಶೆಯಿಂದ ದನೂದೇವಿಯಲ್ಲಿ ಪುಲೋಮನೆಂಬ ದಾನವನು ಜನಿಸಿದನು. ಪುಲೋಮನ ಮಗಳೇ ಶಚೀದೇವಿಯು. ಇದರಿಂದ, ಶಚೀದೇವಿಗೆ "**ಪೌಲೋಮಿ**"-ಎಂದು ಹೆಸರು. ಅದೇ ಬೃಹಸ್ಪತ್ಯಾಚಾರ್ಯರು ಶಚೀದೇವಿಯೀದ ಸಹಿತರಾಗಿ, ವಾನರಯೋನಿಯಲ್ಲಿ ಜನಿಸಿದರು. ತಮ್ಮ ತಂಗಿ ತಾರೆಯನ್ನು ವಾಲಿಗೂ, ತಮ್ಮ ಮಗಳು ರುಮೆಯನ್ನು ಸುಗ್ರೀವನಿಗೂ ವಿವಾಹ ಮಾಡಿಕೊಟ್ಟರು.

2. **ಉದ್ಧವ :-**

ದ್ವಾಪರಯುಗದಲ್ಲಿ ಆ ಬೃಹಸ್ಪತ್ಯಾಚಾರ್ಯರೇ, ಶ್ರೀವಾಯುದೇವರ ಆವೇಶಯುಕ್ತರಾಗಿ, (**ಸಮೀರಯುಕ್ತ**) "**ಉದ್ಧವ**"-ನೆಂಬ ನಾಮದೀದ ಯಾದವಕುಲದಲ್ಲಿ ಜನಿಸಿದರು. ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯರಾಗಿ, ಎಡಬಿಡದೆ ಅವನ ಸೇವೆಮಾಡಿದರು.

3. **ದ್ರೋಣಾಚಾರ್ಯ :-**

ದ್ವಾಪರಯುಗದಲ್ಲಿ ಬೃಹಸ್ಪತ್ಯಾಚಾರ್ಯರು ಬ್ರಹ್ಮದೇವರ ಆವೇಶಯುಕ್ತರಾಗಿ (**ವಾರಿಜಾಸನಯುಕ್ತ**) "**ದ್ರೋಣ**"-ಎಂಬ ಅಭಿಧಾನದೀದ ಅವತರಿಸಿದರು.

ಒಮ್ಮೆ, ಭರದ್ವಾಜಋಷಿಗಳು ತಪಸ್ಸು ಮಾಡುತ್ತಿದ್ದ ಸಮಯದಲ್ಲಿ, ಘೃತಾಚಿ-ಎಂಬ ಅಪ್ಸರ ಕನ್ಯೆ ಗಂಗಾನದಿಗೆ ಸ್ನಾನಕ್ಕಾಗಿ ಬಂದಳು. ಅವಳ ರೂಪ ಲಾವಣ್ಯಗಳಿಂದ ಮೋಹಿತರಾದ ಭರದ್ವಾಜರಿಗೆ ವೀರ್ಯಸ್ಖಲನವಾಯಿತು. ಅವರು ಅಮೋಘವೀರ್ಯರಾದ್ದರಿಂದ, ವೀರ್ಯವನ್ನು

ತಮ್ಮ ಕೈಯಲ್ಲಿದ್ದ ದೊನ್ನೆಯಲ್ಲಿ (ದ್ರೋಣ) ಓಡಿದು ಇರಿಸಿದರು. ಅದರಿಂದ, ಗಂಡು ಮಗು ಜನಿಸಿದ-ಅವರೇ ದ್ರೋಣಾಚಾರ್ಯರು. (ದ್ರೋಣದಿಂದ ಜನಿತರು). ಚಿಕ್ಕಂದಿನಲ್ಲಿಯೇ ತಮ್ಮ ಚಿಕ್ಕಪ್ಪನಾದ ಅಗ್ನಿವೇಶ್ಯಮಹರ್ಷಿಗಳಲ್ಲಿ ಧನುರ್ವಿದ್ಯೆ ಕಲಿತರು. ದ್ರುಪದನು ದ್ರೋಣರ ಸಹಪಾಠಿ. ಶರದ್ವಂತನ ಮಗಳಾದ ಕೃಪಿ-ಎಂಬಾಕೆಯನ್ನು ಲಗ್ನವಾಗಿ, ಅಶ್ವತ್ಥಾಮನೆಂಬ ವೀರ ಪುತ್ರನನ್ನು ಪಡೆದನು. ಅಶ್ವತ್ಥಾಮಾಚಾರ್ಯರು ಮಹರುದ್ರದೇವರ ಅಂಶಸಂಭೂತರು. ಕೃಪೆಯು ಕೃಪಾಚಾರ್ಯರ ತಂಗಿ. ದ್ರೋಣಾಚಾರ್ಯರು ಕೌರವ ಪಾಂಡವರೀರ್ವರಿಗೂ ಧನುರ್ವಿದ್ಯೆ ಕಲಿಸಿದರು. ಅರ್ಜುನನು ಇವರ ಅತ್ಯಂತ ಪ್ರೀತಿಯ ಶಿಕ್ಷ್ಯ. ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನನ ಪಕ್ಷ ಸೇರಿ, ಸೇನಾಪತಿ ಶಸ್ತ್ರ ಸನ್ಯಾಸವನ್ನು ಮಾಡಿದರು.

ಇಂತು, ಬೃಹಸ್ಪತ್ಯಾಚಾರ್ಯರಿಗೆ ಭೂಮಿಯಲ್ಲಿ ಮೂರು ಅವತಾರಗಳು.

(1) ತಾರ ಎಂಬ ಕಪಿ (ತ್ರೇತಾಯುಗ). (2) ದ್ರೋಣಾಚಾರ್ಯರು. (3) ಉದ್ಧವನೆಂಬ ಯಾದವ. ದ್ರೋಣಾಚಾರ್ಯರು ಉದ್ಧವನಿಗಿಂತ ಮೊದಲು ಜನಿಸಿದವರು.

ಈ ವಿಷಯವು ಶ್ರೀಮದಾನಂದತೀರ್ಥರುಭಗವತ್ಪಾದರಿಂದ ವಿರಚಿತ ಶ್ರೀಮನ್ಮಾಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಲ್ಪಟ್ಟಿದೆ.

**ಪ್ರಮಾಣ :–**

(1) ಬೃಹಸ್ಪತಿಸ್ತಾರ ಉಕ್ತೋ ಶಚೀಚ ಶಕ್ರಸ್ಯ ಭಾರ್ಯೈವ ಬಭೂವ ತಾರಾ ॥70॥

ಬೃಹಸ್ಪತಿ ಬ್ರಹ್ಮ ಸುತೋಪಿ ಪೂರ್ವಂ ಸಹೈವ ಶಚ್ಯಾ ಮನಸೋಽಭಿಜಾತಃ ॥

ಬೃಹಸ್ಪತ್ಯೋದ್ಭವಸ್ತ್ವಾಂಗಿರಸಃ ಸುಶೋಽ ಭೂಸ್ತ್ವಾಂಽಚಜನ್ಯೈವ ಶಚೀ ಪುಲೋಮ್ನಃ ॥ ॥71॥

ಸ ಏವ ಸಜ್ಯಾಸಹವಾಸರೋಽ ಭೂತ್ಸ್ವಂಭವೋಽ ದೇವ ಗುರುಃ ರ್ಬೃಹಸ್ಪತಿಃ ॥

**(ಶಾ. ನಿರ್ಣಯ-ಅಧ್ಯಾಯ-3).**

(2) ಬೃಹಸ್ಪತಿಃ ಪೂರ್ವಮಭೂದ್ಧರೇಃ ಪದಂ ಸೇವಿತುಂ ಪವನಾವೇಶಯುಕ್ತಃ ॥

ಸ ಉದ್ಧವೋಽ ನಾಮದಯಾ ಪ್ರವೀರಾಜ್ಞಾತೋಽ ವಿದ್ವಾನುಪಗವನಾಮ ದೇಯಾತ್ ॥

ದ್ರೋಣಾತ್ಮ ಕಂನಾತಿತರಾಂ ಸ್ವಸೇವಕಂ ದುರ್ಯಾದ್ಧರಿರ್ಮಾಮಿತಿ ಭೂಯ ಏವ ॥

ಸ ಉದ್ಧವಾತ್ಮಾವತತಾರ ಯಾದವೇಷ್ವಾ ಸೇವನಾರ್ಥಂ ಪುರುಷೋತ್ತಮಸ್ಯ ॥

**(ಶಾ. ನಿರ್ಣಯ-ಅಧ್ಯಾಯ-12).**

ಉದ್ಧವನು **ಉಪಗವನೆಂಬ**-ಮಹಾತ್ಮನ ಪುತ್ರನಾಗಿ, ಯಾದವ ವಂಶದಲ್ಲಿ ಜನಿಸಿದನು. ದ್ರೋಣನಾಗಿ, ಶ್ರೀಕೃಷ್ಣನ ಸೇವೆಮಾಡಲು ಸಾಧ್ಯವಾಗಲಿಲ್ಲ. ಆ ಕಾರಣದಿಂದ, ಉದ್ಧವನಾಗಿ,ಬೃಹಸ್ಪತ್ಯಾಚಾರ್ಯರೇ ದ್ರೋಣಾವತಾರದ ನಂತರ ಜನಿಸಿ, ಕೃಷ್ಣನಿಗೆ ಅತ್ಯಂತ ಪ್ರಿಯನಾದನು. ॥17॥

★★

## ಪದ್ಯ-೧೮

**ಮೂಲ:-**

**ಮನು ಮುಖಾದ್ಯರಿಗಿಂತ ಪ್ರವಹ ।**
**ಗುಣದಿ ಪಂಚಕ ನೀಚನೆನಿಸುವ ।**
**ಇನ ಶಶಾಂಕರು ಧರ್ಮಮಾನವಿ ಎರಡು ಗುಣದಿಂದ ॥**
**ಕನಿಯರೆನಿಪರು ಪ್ರವಹಗಿಂತಲಿ ।**
**ದಿನಪ ಶಶಿ ಯಮಧರ್ಮರೂಪಗ ।**
**ಕನುದಿನದಿ ಚಿಂತಿಪುದು ಸಂತರು ಸರ್ವಕಾಲದಲಿ ॥೧೮॥**

**ಅವತರಣಿಕೆ :-**

ಪ್ರವಹವಾಯು, ಸೂರ್ಯ ಮತ್ತು ಚಂದ್ರರ–ವಿಚಾರ ಹೇಳುತ್ತಾರೆ.
**॥18॥**

**ಪ್ರತಿಪದಾರ್ಥ :-**

**ಪ್ರವಹ** = ಪ್ರವಹವಾಯುದೇವರು, **ಮನು** = ಸ್ವಾಯಂಭುವ ಮನುವೇ, **ಮುಖ್ಯಾದರಿಗಿಂತ** = ಮೊದಲಾದ ಆರು ಮಂದಿಗೀತ, **ಗುಣದಿ ಪಂಚಕ** = ಐದು ವಿಜಾತೀಯ ಗುಣಗಳಿಗೀತ, **ನೀಚನೆನಿಸುವ** = ನ್ಯೂನನೆಂದು ಕರೆಸುವನು. **ಪ್ರವಹಗಿಂತಲಿ** = ಈ ಪ್ರವಹವಾಯುವಿಗಿಂತ, **ಇನ** = ವಿವಸ್ವಾನ್‌ನಾಮಕ ಸೂರ್ಯದೇವರು, **ಶಶಾಂಕನು** = ಚಂದ್ರನು, **ಧರ್ಮ** = ಯಮಧರ್ಮರಾಯನು, **ಮಾನವಿ** = ಸ್ವಾಯಂಭುವಮನು ಪತ್ನಿ ಶತರೂಪಾದೇವಿ (ಮನುವಿನ ಪತ್ನಿಯಾದ್ದರಿಂದ "ಮಾನವಿ"–ಎಂದು ಸಾಕೇಂತ), **ಎರಡು ಗುಣದಿಂದ** = ಎರಡು ವಿಜಾತೀಯ ಗುಣಗಳಿಂದ **ಕನಿಯರೆನಿಪರು** = ಕಡಿಮೆ ಎನಿಸುತ್ತಾರೆ, **ದಿನಪ** = ದಿವಾಭಿಮಾನಿಯಾದ

ಸೂರ್ಯ, ಶಶಿ= ಚಂದ್ರ (ನಿಶಾಭಿಮಾನಿ), ಯಮಧರ್ಮ ಯಮ ಧರ್ಮರಾಯ, ರೂಪಗಳನು= ಈ ದೇವತೆಗಳ ರೂಪಗಳನ್ನು, (ತದಂತರ್ಗತ ಭಗವದ್ರೂಪಗಳ ಉಪಾಸನಾಕ್ರಮ), ಸಂತರು= ಜ್ಞಾನಿಗಳು, ಸರ್ವ ಕಾಲದಲಿ= ಯಾವಾಗಲೂ, ಅನುದಿನದಿ = ಪ್ರತಿಕ್ಷಣಕ್ಕೂ, ಚಿಂತಿ ಪುದು= ಸ್ಮರಿಸುವವರಾಗಬೇಕು. ॥18॥

## ವ್ಯಾಖ್ಯಾನಗಳು

೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪ್ರವಹಮಾರುತ ಸೂರ್ಯ, ಚಂದ್ರಾದಿಗಳ ವಿಚಾರ ಹೇಳುತ್ತಾರೆ. ಪ್ರವಹ ವಾಯುದೇವರು ಸ್ವಾಯಂಭುವಮನುವೇ ಮೊದಲಾದ ಆರುಮಂದಿಗಿಂತ ಎರಡು ಗುಣಗಳಿಂದ ಕಡಿಮಿ-ಎಂತ ಕರೆಸುವನು.

ಈ ಪ್ರವಹವಾಯುದೇವರಿಗಿಂತ ಕಡಿಮೆಯಾದವರು ವಿವಸ್ವಾನ್ ನಾಮಕ ಸೂರ್ಯದೇವರು, ಚಂದ್ರದೇವರು ಇವರಿಬ್ಬರು, ಯಮಧರ್ಮರಾಯನು ಸ್ವಾಯಂಭುವಮನು, ಪತ್ನಿ ಶತರೂಪಾದೇವೇರು (ಮನುಪತ್ನಿಯಾದ್ದರಿಂದ ಮಾನವಿ ಎಂತ ಸಾಂಕೇತನಾಮ), ಅಂತು, ನಾಲ್ಕು ಮಂದಿ ಪ್ರವಹ ವಾಯುವಿಗಿಂತಲೂ ಎರಡು ಗುಣದಿಂದ ಕಡಿಮಿ-ಎಂತ ಎನಿಸೋಪರಾಗುತಾರೆ. ಸೂರ್ಯ-ಹಗಲು ಆಯುಸ್ಸುಸಾರ್ಥಕ್ಕಕ್ಕಾಗಿ ಸೂರ್ಯನು-ಚಂದ್ರ, ರಾತ್ರಿ ಆಯುಸ್ಸು ಸಾರ್ಥಕ್ಯವಾಗಿ ಚಂದ್ರನು, ಯಮದೇವರು - ಧರ್ಮಾಧರ್ಮಗಳ ಸೂಕ್ಷ್ಮಗಳ ತಿಳಿಕೊಂಬೊದಕ್ಕೆ ಯಮಧರ್ಮರಾಯನ್ನ-ಈ ಪ್ರಕಾರ ದಾವ ದಾವ ದೇವತಾರೂಪಗಳ ದ್ವಾರಾ ದಾವ ದಾವ ಸನ್ಮಾರ್ಗಗಳು ಸಿದ್ಧಿಸಬೇಕೋ, ದಾವುದಾವುದಕ್ಕೆ ಅಭಿಮಾನಿಗಳೋ, ಅದರನ್ನ ತಿಳಿದು, ಆಯಾ ದೇವತಾ ರೂಪಗಳ ಅಂತರ್ಗತದಲ್ಲಿ ಪರಮಾತ್ಮನ್ನ ತಿಳಿದು, ಜ್ಞಾನಿಗಳಾದವರು ಕ್ಷಣಲ ವಾದಿ ಸರ್ವಕಾಲಗಳಲ್ಲಿ ಚಿಂತಿಸೋವರಾಗಬೇಕು,

ದಾವ ದಾವ ಕಾರ್ಯಕ್ಕೆ ದಾವ ದಾವ ದೇವರುಗಳನ್ನ ಭಜಿಸಬೇಕು ಎಂದರೆ–

| | | |
|---|---|---|
| 1. | ಬ್ರಹ್ಮವರ್ಚಸ್ಸು | ಬ್ರಹ್ಮದೇವರು |
| 2. | ಇಂದ್ರಿಯ ಪಟುತ್ವ | ಇಂದ್ರದೇವರು |
| 3. | ಪ್ರಜಾಕಾಮ | ದಕ್ಷಾದಿ ಪ್ರಜಾಪತಿಗಳು |
| 4. | ಭೋಜನಕಾಮ | ದಿತಿ ದೇವೇರು. |
| 5. | ವರ್ಣಕಾಮ | ಆದಿತ್ಯ |
| 6. | ರಾಜ್ಯಕಾಮ | ವಿಶ್ವೇದೇವತೆಗಳು |
| 7. | ದೇಶ, ಪ್ರಜಾಸ್ವಾಧೀನ | ಸಾಧ್ಯರು |
| 8. | ಶ್ರೀಕಾಮ | ದುರ್ಗಾದೇವೇರು |
| 9. | ತೇಜಃಕಾಮ | ಅಗ್ನಿದೇವರು |
| 10. | ಧನಕಾಮ | ಅಷ್ಟವಸುಗಳು |
| 11. | ವೀರ್ಯಕಾಮ | ರುದ್ರದೇವರು |
| 12. | ಆಯುಸ್ಸು | ಅಶ್ವಿನೀ ದೇವತೆಗಳು |
| 13. | ಪುಷ್ಟಿಕಾಮ | ಭೂದೇವರು |
| 14. | ಪ್ರತಿಷ್ಠಾಕಾಮ | ಗಗನ, ಭೂದೇವತೆಗಳು |
| 15. | ಸರ್ವಾಧಿಪತ್ಯ | ಬ್ರಹ್ಮದೇವರು |
| 16. | ಕೀರ್ತಿಕಾಮ | ಶ್ರೀ ವಿಷ್ಣುರೂಪೀ ಪರಮಾತ್ಮ |
| 17. | ಆಸ್ತಿ ಸೇರಿಸೋವಕ್ಕೆ | ಪ್ರಚೇತಸರು |
| 18. | ವಿದ್ಯಾಕಾಮ | ಉಮಾವಲ್ಲಭರಾದ ರುದ್ರ ದೇವರು |
| 19. | ದಾಂಪತ್ಯ ಪ್ರೀತಿ ಕಾಮ | ಉಮಾದೇವೇರು |
| 20. | ಧರ್ಮಕಾಮ | ವಿಷ್ಣುರೂಪೀ ಪರಮಾತ್ಮ |
| 21. | ಸಂತಾನಕಾಮ | ಪಿತೃದೇವತೆಗಳು |
| 22. | ರಕ್ಷಾಕಾಮ | ಯಕ್ಷರು |

| | | |
|---|---|---|
| 23. | ಸೌಂದರ್ಯಕಾಮ | ಗಂಧರ್ವರು |
| 24. | ಸ್ತ್ರೀಕಾಮ | ಊರ್ವಶೀ ಮೊದಲಾದ ಅಪ್ಸರಾ ಸ್ತ್ರೀಯರು |
| 25. | ಬಲಕಾಮ | ಮರುದ್ಗಣರು |
| 26. | ರಾಜ್ಯಕಾಮ | ಮನುಗಳು |
| 27. | ಶತ್ರುಮರಣ | ಗೋಪಾಲ |
| 28. | ಭೋಗಕಾಮ | ಚಂದ್ರದೇವರು |

ಈ ಪ್ರಕಾರ, ಆಯಾ ಕಾರ್ಯಗಳಲ್ಲಿ ಆಯಾ ದೇವತಾಂತರ್ಗತ ಶ್ರೀ ಪರಮಾತ್ಮನ್ನ ಚಿಂತನ ಮಾಡಿ, ಪೂಜಾದಿಗಳು ಮಾಡಬೇಕಂತ ತಾತ್ಪರ್ಯ. ॥18॥

**೨. ಭಾವಪ್ರಕಾಶಿಕೆ :-**

**ವಿಶೇಶ ಸೂಚನೆ:-** ಈ ಪದ್ಯದಲ್ಲಿ ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ ಪುಸ್ತಕದಲ್ಲೂ, ಉಡುಪಿಯ ಛಾಪಾಮೂಲಪುಸ್ತಕದಲ್ಲೂ ಸಹ "ಮನು ಮುಖ್ಯಾದ್ಯರಿಗಿಂದ ಪ್ರವಹಾ ಗುಣಗಳದ್ವಯ ನೀಚನೆನಿಸುವ"–ಎಂದು ಪಾಠವಿರುವುದು. ಕಮಲಾಪತಿದಾಸರ ವ್ಯಾಖ್ಯಾನ ಪುಸ್ತಕದ ಮೂಲದಲ್ಲಿ-"ಮನು ಮುಖ್ಯಾದರಿಗಿಂದ ಪ್ರವಹಾ ಗುಣವು ಪಂಚಕ ನೀಚನೆನಿಸುವ"– ಎಂದು ಪಾಠವಿರುವುದು. ಈ ಪಾಠದ್ವಯದಲ್ಲಿ ಕಮಲಾಪತಿದಾಸರ ಪುಸ್ತಕಪಾಠವು ಸಾಧುವೆಂದು ಕಾಣುತ್ತದೆ. ಹೇಗೆಂದರೆ, ಗುಣತಾರತಮ್ಯಸಂಧಿ- ಎಂಬ 20ನೆಯ ಸಂಧಿ ೮ನೆಯ ಪದ್ಯದಲ್ಲಿ "ಮಾರಜಾದ್ಯರಿಗೈದು ಗುಣದಿಂದಧಮ ಪ್ರವಹಾಖ್ಯ"– ಎಂದು ಎಲ್ಲಾ ಪುಸ್ತಕಗಳಲ್ಲೂ ಒಂದೇ ಪಾಠವಾಗಿರುವುದು. ಹೀಗೆ, ದಾಸರಾಯರು ಮೇಲಿನ ಸಂಧಿಯಲ್ಲಿ, ಮಾರಜಾದ್ಯರು ಅಂದರೆ ಅನಿರುದ್ಧ, ರತಿ, ಮನು, ಗುರು, ದಕ್ಷ, ಶಚಿ–ಹೀಗೆ ಕಾಮಪುತ್ರನಾದ ಅನಿರುದ್ಧ ಮೊದಲಾದ 5 ಮಂದಿಯರಕಿಂತಲೂ 5 ಗುಣ ಕಮ್ಮಿ ಪ್ರವಹ ವಾಯು–ಎಂದು ಹೇಳಿ, ಈ ಸಂಧಿಯಲ್ಲಿ "ಮನು ಮುಖ್ಯಾದ್ಯರಿಗಿಂತ ಪ್ರವಹ ಗುಣಗಳದ್ವಯ ನೀಚನೆನಿಸುವ"–ಮನು ಶಚಿ ಮೊದಲಾದ 6 ಮಂದಿಯರಿ

ಕಿಂತಲೂ ಎರಡು ಗುಣಗಳಿಂದ ಕಡಿಮೆ ಯೆಂದು ಹೇಳಿದರೆ, ದಾಸರಾಯರ ಸ್ವೋಕ್ತಿ ವಿರೋಧ, ಅಂದರೆ, ದಾಸರಾಯರು ಹೇಳಿದ ಮೇಲಿನ ಮಾತಿಗೂ ಕೆಳಗಿನ ಮಾತಿಗೂ ಪರಸ್ಪರ ವಿರೋಧವಾಗುತ್ತದೆ. ಆದ್ದರಿಂದ, ಗುಣಗಳದ್ವಯ ಎಂಬ ಕಡೆ ಗುಣವು ಪಂಚಕವೆಂದು ಇರುವ ಪಾಠವನ್ನೇ ಅಂಗೀಕರಿಸುವುದು ನ್ಯಾಯವೆಂದು ಕಾಣುತ್ತದೆ.

**ತಾತ್ಪರ್ಯ:**– ಸ್ವಾಯಂಭುವಮನು, ಬೃಹಸ್ಪತ್ಯಾಚಾರ್ಯರು, ಕಾಮ ಪುತ್ರನಾದ ಅನಿರುದ್ಧ, ರತಿ, ಶಚಿ, ದಕ್ಷ–ಇವರಾರು ಮಂದಿಯಕಿಂತಲೂ, ಏಕೋನಪಂಚಾಶಮರುದ್ಗಣಕ್ಕೆ ಸೇರಿದ ಪ್ರವಹವಾಯ 5 ಗುಣಗಳಿಂದ ಕಡಿಮೆ ಎನಿಸುವನು. ಇವನಕಿಂತಲೂ ಚಂದ್ರ, ಸೂರ್ಯ, ಯಮ, ಶತರೂಪಾ (ಮನುಪತ್ನಿ)–ಇವರುಗಳು ಎರಡು ಗುಣಗಳಿಂದ ಕಮ್ಮಿ–ಎನಿಸುವರು. ಸೂರ್ಯ, ಚಂದ್ರ, ಯಮಧರ್ಮ–ಇವರನ್ನು ನಿತ್ಯದಲ್ಲೂ ಸ್ಮರಿಸುತ್ತಿದ್ದರೆ, ಯಮದೇವರ ಸ್ಮರಣೆಯಿಂದ ಪಾಪ ಪರಿಹಾರದ್ವಾರ ಬಾಧೆ ಕಮ್ಮಿಯಾಗುವುದು. ಸೂರ್ಯನ ಮಂತ್ರವನ್ನು ಜಪಾದಿಗಳನ್ನು ಮಾಡುವುದರಿಂದ, ಸಕಲಾಭೀಷ್ಟಪ್ರದವೂ, ಸರ್ವರೋಗನಿವಾರಣೆಯೂ ಆಗುವುದಲ್ಲದೇ, ಕಾಲಕ್ಕೆ ಮಳೆಯೂ ಬರುವುದು. ಚಂದ್ರನ ಸ್ಮರಣೆಯಿಂದ ಭೋಗಗಳನ್ನನುಭವಿಸುವರೆಂದು, ಅಲ್ಲಲ್ಲಿ ಭಾಗವತಾದಿ ವಾಕ್ಯಗಳಿಂದ ಸಿದ್ಧವಾಗುವುದು. ॥18॥

**೩. ಭಾವದರ್ಪಣ :–**

ಸ್ವಾಯಂಭುವಮನುವಿಗೆ ಮತ್ತು ದಕ್ಷಗೆ ಅವತಾರವಿಲ್ಲ। ಇವರು ಪ್ರವಹ ಮಾರುತನಗಿಂತ ಪಂಚಗುಣಾಧಿಕರೆಂತಲೂ, ಈ ಪ್ರವಹ ವಾಯುವಿಗೆ ಸೂರ್ಯ ಚಂದ್ರರು ದ್ವಿಗುಣ ನೀಚರೆಂತಲೂ ಹೇಳುತ್ತಾರೆ। ಮನು ಇತಿ। ತದುಕ್ತಂ ತಾರತಮ್ಯೇ। "ಪ್ರವಹಾತ್ಪಂಚಗುಣಾಧಿಕೇತಿ ಇನೇತಿ "ಭೂತಾಭಿಮಾನಿ ಪ್ರವಹ ಸೂರ್ಯಾಚ್ಚ ದ್ವಿಗುಣಾಧಿಕ-ಇತ್ಯುಕ್ತೇಃ। ಈ ಪ್ರವಹಗೆ ನಾಸಿಕ್ಯ ಎಂತಲೂ, ಭೌತಿಕ-ಎಂತಲೂ, ಆತಿವಾಹ- ಎಂತಲೂ ನಾಮ। "ನಾಸಿಕ್ಯಸ್ತು

ಸುಖವ್ಯೋಕ್ತೋ ಭೌತಿಕಸ್ತು ಸ ಏವಚ । ಆತಿವಾಹ ಸ ಏವೋಕ್ತಃ ಯತೋಗ ಮ್ಯೋ ಮುಮುಕ್ಷುಭಿರಿತಿ" । ಬೃಹತ್ತಾರತಮ್ಯೇ. ॥18॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

'ಮನು' ಇತಿ ॥ ಮುಖ್ಯವಾಯು ಪೋತಃ- 'ಕೋಣಪ' ನಾಸಿಕ್ಯಃ ॥ ಭೌತಿಕಃ ಮುಮುಕ್ಷುಃ ಪ್ರಾಪ್ಯಾತಿವಾಹಕಃ ॥ ತತ್ತ್ವವಾದಃ ಅನ್ಯಥಾ ಚೇದ್ದ್ವೇಶಃ ಇತಿ ಪ್ರತಿಜ್ಞಾಯೋರಗಂ ಜಗ್ರಾಹ ॥ ನಾದರ್ಶಾತ್ ಪ್ರಕರ್ಷೇಣ ಹರಿತತ್ತ್ವವಾಹಕತ್ವಾತ್ ಪ್ರವಹಃ ॥ ಸತಾಂ ಸೌಮ್ಯರೂಪ ಧಾರಕತ್ವಾತ್ ಧರ್ಮಃ ॥ ಪಾಪಿ ಶಿಕ್ಷಕತ್ವಾತ್ ಯಮಃ ॥ ರೂಪದ್ವಯಂ ಯಮಲೋಕೇತಿ. ॥18॥

### ಕನ್ನಡಾರ್ಥ

ಮುಖ್ಯವಾಯುಪುತ್ರನು ಕೋಣಾಧಿಪನು, ನಾಸಿಕ್ಯನು ಭೂತವಾಯುವಿಗೆ ಅಭಿಮಾನಿ. ಮುಮುಕ್ಷುಗಳಿಂದ ಹೊಂದಲ್ಪಡುವವನು. ಆತಿವಾಹಕನು ಪ್ರಕರ್ಷದಿಂದ ಹರಿತತ್ತ್ವವಾಹಕನು ಪ್ರವಹನು. ಹೀಗೆ, ವ್ಯುತ್ಪತ್ತಿಯನ್ನು ತಿಳಿಯಬೇಕು. ಸಜ್ಜನರಿಗೆ ಸೌಮ್ಯರೂಪವನ್ನು ಧರಿಸುವುದರಿಂದ, ಧರ್ಮನೆಂದು ಯಮನಿಗೆ ಕರೆಯುತ್ತಾರೆ. ಪಾಪಿಗಳನ್ನು ಶಿಕ್ಷಿಸುವುದರಿಂದ, ಯಮನೆಂದು ಹೆಸರು. ಈ ಎರಡೂ ರೂಪಗಳೂ ಯಮಲೋಕದಲ್ಲಿ ಇರುವುವು. ॥18॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಮೇಲೆ ಹೇಳಿದ ಸ್ವಾಯಂಭುವಮನು- ಮೊದಲಾದವರಿಗಿಂತ ಬೀಸುವ ಗಾಳಿಗೆ ಅಭಿಮಾನಿ-ಪ್ರವಹವಾಯುದೇವರು ಎರಡು ಗುಣ ಕಡಿಮೆ. ಆ, ಪ್ರವಹವಾಯುವಿಗಿಂತ ಚಂದ್ರ, ಸೂರ್ಯ, ಯಮಧರ್ಮ, ಮನುಪತ್ನಿ-ಶತರೂಪಾ

ದೇವಿ ಸಹ, ನಾಲ್ಕುಜನ ಎರಡುಗುಣ ಕಡಿಮೆ. ಈ ಚಂದ್ರ-ಸೂರ್ಯ,ಯಮ ಧರ್ಮ ರೂಪಗಳನ್ನು ಸಜ್ಜನರು ಸದಾ ಚಿಂತಿಸಬೇಕೆಂದು-ಮುಂದೆ ಹೇಳುವ ರೆಂದು ಅರ್ಥ. ॥18॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಪ್ರವಹವಾಯು, ಸೂರ್ಯ, ಚಂದ್ರ, ಯಮ ಧರ್ಮರಾಯ, ಶತರೂಪಾದೇವಿ-ಇವರ ವಿಚಾರಗಳನ್ನು ತಿಳಿಸುತ್ತಾರೆ.

### ೧. ಪ್ರವಹ

ಪ್ರವಹವಾಯುವು 49 ಮರುದ್ಗಣಗಳಲ್ಲಿ ಒಬ್ಬನು. ಈತನು ಭೂತ ವಾಯುತತ್ವಕ್ಕೆ ಅಭಿಮಾನಿದೇವತೆ. ವಾಯುವ್ಯ ದಿಕ್ಕಿನ ಅಧಿಪತಿ. ಅಂದರೆ, ಕೋಣಾಧಿಪತಿ. ಇವನಿಗೆ (೧) ನಾಸಿಕ್ಯ (೨) ಭೌತಿಕ ಮತ್ತು (೩) ಅತಿವಾಹ-ಎಂಬ ಮೂರು ಹೆಸರುಗಳಿವೆ.

**ಪ್ರಮಾಣ:-**

"ನಾಸಿಕ್ಯಸ್ತು ಸ ಏವೋಕ್ತೋ ಭೌತಿಕಸ್ತು ಸ ಏವಚ ಅತಿವಾಹ ಸ ಏವೋಕ್ತಃ ಯತೋ ಗಮ್ಯೋ ಮುಮುಕ್ಷುಭಿರಿತಿ ॥"

**-ಬೃಹತ್ತಾರತಮ್ಯೇ ॥**

ಶ್ವಾಸಕ್ರಿಯೆಯಲ್ಲಿ ಗಾಳಿಯನ್ನು ಪೂರಕ ಮತ್ತು ರೇಚಕಕ್ರಮಗಳಿಂದ ವ್ಯಾಪಾರ ಮಾಡುತ್ತಾನಾದ್ದರಿಂದ, "**ನಾಸಿಕ್ಯ**" ನೆಂತ ಅಭಿಧಾನ. ಆದರೆ, ನಾಸತ್ಯಮತ್ತು ದಸ್ರ-ಎಂಬ ಅಶ್ವಿನೀದೇವತೆಗಳು ನಾಸಿಕೇಂದ್ರಿಯಭಿಮಾನಿ ಗಳು. ಭೂತವಾಯುವಿಗೆ ಅಭಿಮಾನಿಯಾದ್ದರಿಂದ, "**ಭೌತಿಕ**" ನಾಮಕನು. ಮುಮುಕ್ಷುಗಳಿಂದ ಹೋದಲ್ಪಡುವವನಾದ್ದರಿಂದ, "**ಅತಿವಾಹಕನು**" ವೇಗ

ವಾಗಿಬೀಸುವ ಬಿರುಗಾಳಿ ರೂಪದಲ್ಲಿರುವುದರಿಂದಲೂ, ಪ್ರವಹವಾಯುವಿಗೆ– **"ಅತಿವಾಹಕ"**– ನೆಂದು ಹೆಸರು.

ಪ್ರವಹವಾಯುವು - ಸ್ವಾಯಂಭುವಮನು. ಅನಿರುದ್ಧ, ರತಿ, ಬೃಹಸ್ಪತ್ಯಾಚಾರ್ಯ, ದಕ್ಷ ಮತ್ತು ಶಚೀ– ಈ ಆರು ಮಂದಿಗಿಂತ ಪಂಚ ವಿಜಾತೀಯ ಗುಣಗಳಿಂದ ಕಡಿಮೆ- **(ಪ್ರವಹ ಗುಣದಿ ಪಂಚಕ ನೀಚ ನೆನಿಸುವ)**

**೨. ಇನ–**

"ಇನ"– ಎಂದರೆ ಸೂರ್ಯ. ಇಲ್ಲಿ ವಿವಸ್ವಾನ್‌ನಾಮಕ ಸೂರ್ಯನು ಗ್ರಾಹ್ಯ.

**೩. ಶಶಾಂಕನು–**

"ಶಶಿ"– ಎಂದರೆ ಮೊಲ. "ಶಶ"–ತತ್ಸಂಬಂಧೀ. 'ಅಂಕ'–ಮೊಲದ ಸಾಂಕೇತ (ಚಿಹ್ನೆ) ಯನ್ನು ಧರಿಸಿರುವುದರಿಂದ, ಚಂದ್ರನಿಗೆ **ಶಶಾಂಕ**-ಎಂದು ಹೆಸರು.

ಚಂದ್ರನು ದಿಗ್ದೇವತೆ. ಶ್ರೋತ್ರೇಂದ್ರಿಯಾಭಿಮಾನಿ. ನವಗ್ರಹಗಳಲ್ಲಿ ಒಬ್ಬನು. ಬ್ರಹ್ಮನು ಅತ್ರಿಮುನಿಯನ್ನು ಸೃಷ್ಟಿಕಾರ್ಯದಲ್ಲಿ ನಿಯಮಿಸಿದ್ದ ಅತ್ರಿ ತಪೋನಿರತನಾಗಿದ್ದಾಗ, ಆತನ ಕಣ್ಣಿನಿಂದ ದಿವ್ಯವಾದ ತೇಜಸ್ಸು ಹೊರಹೊಮ್ಮಿತು. ದಶದಿಕ್ಕುಗಳು ಆ ತೇಜಸ್ಸನ್ನು ಭರಿಸಲಾರದೇ, ಕ್ಷೀರ ಸಮುದ್ರದಲ್ಲಿ ಬಿಟ್ಟವು. ಬ್ರಹ್ಮನು ಆ ತೇಜೋಂಶಗಳನ್ನೆಲ್ಲಾ ಒಟ್ಟುಗೂಡಿಸಿ ಪುರುಷಾಕಾರದಿಂದ ಚಂದ್ರನನ್ನು ಸೃಷ್ಟಿಸಿದನು. ಸಮುದ್ರಮಂಥನ ಸಮಯದಲ್ಲಿ, ಚಂದ್ರನು ಕ್ಷೀರಸಾಗರದಿಂದ ಉದ್ಭವಿಸಿದನು. ಇದರಿಂದ, ಚಂದ್ರನು ಅತ್ರಿಪುತ್ರನಾದನು. ದಕ್ಷಬ್ರಹ್ಮನ ಪುತ್ರಿಯರು ಅಶ್ವಿನ್ಯಾದಿ 27 ನಕ್ಷತ್ರಾಭಿಮಾನಿಸ್ತ್ರೀಯರೂ ಈತನ ಮಡದಿಯರು. ಇದರಿಂದ, ಚಂದ್ರನಿಗೆ **'ಉಡುರಾಜ'**— ನೆಂದು ಹೆಸರು. ಶ್ರೀಮನ್ನಾರಾಯಣನ ಪುರುಷರೂಪದಿಂದ

ಮನಸ್ಸಿನಲ್ಲಿ ಜಾತನಾದವನು. "ಚಂದ್ರಮಾ ಮನಸೋಜಾತಃ"- ಎಂಬ **ಪುರುಷಸೂಕ್ತ ಪ್ರಮಾಣ.** ವನಸ್ಪತಿಗಳಿಗೆ ರಾಜನು. 27 ಪತ್ನಿಯರಲ್ಲಿ ರೋಹಿಣಿ ಇವನ ಪ್ರೇಯಸಿ. 16 ಕಲೆಗಳಿಂದ ಯುಕ್ತನಾದವನು. ಬೃಹಸ್ಪತ್ಯಾಚಾರ್ಯರ ಪತ್ನಿ ತಾರೆಯಲ್ಲಿ ಬುಧವನ್ನು ಪಡೆದನು.

## ೪. ಧರ್ಮ

ಧರ್ಮಾಧರ್ಮಗಳ ನಿರ್ಣಯಕಾರನಾದ ಯಮಧರ್ಮರಾಯನು. ಸಜ್ಜನರ ಪಾಲಿಗೆ ಸೌಮ್ಯರೂಪವನ್ನು ಧರಿಸುವನು. ಇದರಿಂದ "**ಯಮ**"- ಎಂತ ನಾಮ. ದಕ್ಷಿಣ ದಿಕ್ಕಿನ ಅಧಿಪತಿ. ಸೂರ್ಯಪುತ್ರನು. ಸಂಜ್ಞಾದೇವಿ ಯಲ್ಲಿ ಸೂರ್ಯನಿಂದ ಜನಿಸಿದನು. ಯಮುನೆ ಈತನ ತಂಗಿ. ಶನಿ ಇವನ ಮಲತಾಯಿ ಛಾಯಾದೇವಿಯ ಮಗ. ಅಣಿಮಾಂಡವ್ಯ ಮುನಿಯ ಶಾಪ ದಿಂದ, ಭೂಲೋಕದಲ್ಲಿ ಶೂದ್ರನಾಗಿ ಜನ್ಮವೆತ್ತಿದನು. ವಿದುರನು ಯಮನ ಅವತಾರ. ವಿದುರನು ದಾಸೀಪುತ್ರನು (ವೇದವ್ಯಾಸರ ಪುತ್ರ). ಕುಂತಿಯಲ್ಲಿ ಧರ್ಮರಾಯ ಅಥವಾ ಯುಧಿಷ್ಠಿರನೆಂಬ ಹೆಸರಿನಿಂದ ಜನಿಸಿ, ಪಾಂಡವ ಜ್ಯೇಷ್ಠನಾಗಿದ್ದನು. ಸಾವಿತ್ರಿಯ ಪಾತಿವ್ರತ್ಯಕ್ಕೆ ಮೆಚ್ಚಿ, ಸತ್ಯವಾನನನ್ನು ಬದುಕಿಸಿದನು. ನಚಿಕೇತನೊಂದಿಗೆ ಧರ್ಮವಿಷಯದಲ್ಲಿ ಸಂವಾದ.

## ೫. ಮಾನವಿ–

ಸ್ವಾಯಂಭುವಮನುವಿನ ಪತ್ನಿ **ಶತರೂಪಾದೇವಿ.** ಮನುವಿನ ಪತ್ನಿ ಯಾದ್ದರಿಂದ -"**ಮಾನವಿ**"- ಎಂಬ ನಾಮ ಸಂಕೇತ. ಸ್ವಾಯಂಭುವಮನು ವಿನಂತೆ ಈಕೆಯೂ ಉಪಸ್ಥತತ್ವಕ್ಕೆ ಅಭಿಮಾನಿ ದೇವತಾ.

ಪೂರ್ವೋಕ್ತ ನಾಲ್ಕುಮಂದಿ (ಸೂರ್ಯ–ಚಂದ್ರ–ಯಮಧರ್ಮ–ಶತ ರೂಪಾದೇವಿ) ಪ್ರವಹವಾಯುವಿಗಿಂತ ಎರಡು ವಿಜಾತೀಯ ಗುಣಗಳಿಂದ ಅವರರಾಗಿದ್ದಾರೆ. **(ಎರಡು ಗುಣಗಳಿಂದ ಕನಿಯರೆನಿಪರು)**

6. ದಿನಾಧಿಪತಿಯಾದ ಸೂರ್ಯನಿಗೆ **ದಿನಪ**ನೆಂದು ಹೆಸರು. ಸೂರ್ಯ ಮಂತ್ರಜಪದಿಂದ ಆಯುರ್ವೃದ್ಧಿಯೂ, ಸಕಲಾಭೀಷ್ಟಸಿದ್ಧಿಯೂ, ಸರ್ವ ರೋಗ ನಿವಾರಣೆಯೂ ಆಗುವುವು.

7. ಮೂಲದ ಸಾಂಕೇತ (**ಚಿಹ್ನೆ**) ಯನ್ನು ಹೊಂದಿರುವುದರಿಂದ, ಚಂದ್ರನಿಗೆ "**ಶಶಿ**" ಎಂದು ಹೆಸರು. ಚಂದ್ರನ ಮಂತ್ರಜಪದಿಂದ ಭೋಗಪ್ರಾಪ್ತಿ ಮತ್ತು ಸಸ್ಯಗಳ ಸಮೃದ್ಧಿಯಾದ ಬೆಳವಣಿಗೆ ಉಂಟಾಗುವುವು. (ವನಸ್ಪತಿ ರಾಜನಾದ್ದರಿಂದ).

8. ಯಮಧರ್ಮರಾಯನ ಸ್ಮರಣೆಯಿಂವ, ಪಾಪಪರಿಹಾರ. ನರಕದಲ್ಲಿ ಯಾತನಾನುಭವ ಕಡಿಮೆಯಾಗುವುದು.ಅಪಮೃತ್ಯು ಪರಿಹಾರಕಮಂತ್ರವು.

9. ಈ ರೀತಿ, ಜ್ಞಾನಿಗಳು (**ಸಂತರು**) ಸೂರ್ಯ, ಚಂದ್ರ ಮತ್ತು ಯಮ- ಈ ದೇವತೆಗಳನ್ನು,ಸದಾ ಸರ್ವಕಾಲಗಳಲ್ಲಿಯೂ ಸ್ಮರಿಸುತ್ತಿರಬೇಕೆಂದು ತಿಳಿಸುತ್ತಾರೆ. ॥18॥

★★

## ಪದ್ಯ-೧೯

**ಮೂಲ :-**

**ಮರುತನಾವೇಶಯುತ ಧರ್ಮಜ**
**ಕರದಿ ವಿದುರನು ಸತ್ಯಜಿತು ಈ**
**ರೆರಡು ಧರ್ಮನರೂಪ ಬ್ರಹ್ಮಾವಿಷ್ಟಸುಗ್ರೀವ ॥**
**ಹರಿಯ ರೂಪಾವಿಷ್ಟ ಕರ್ಣನು ।**
**ತರಣಿಗೆರಡವತಾರ ಚಂದ್ರನು ।**
**ಸುರಪನಾವೇಶಯುತನಂಗದನಿಸಿಕೊಳ್ಳುತಿಪ್ಪ ॥** ॥೧೯॥

**ಅವತರಣಿಕೆ** :-

ಪ್ರಸಕ್ತಪದ್ಯದಿಂದ ಯಮಧರ್ಮರಾಯ ಮತ್ತು ಸೂರ್ಯ-ಇವರ ಅವತಾರವಿಶೇಷಗಳನ್ನು ತಿಳಿಸುತ್ತಾರೆ. ॥೧೯॥

**ಪ್ರತಿಪದಾರ್ಥ** :-

**ಧರ್ಮನ ರೂಪ** = ಯಮಧರ್ಮರಾಯನ ಅವತಾರಗಳು. **ಈರೆರಡು** = ನಾಲ್ಕು- ಅವುಗಳು ಯಾವುವೆಂದರೆ, **ಧರ್ಮಜ** = ಯಮ ಧರ್ಮನ ಮಂತ್ರಮಹಿಮೆಯಿಂದ ಕುಂತಿಯಲ್ಲಿ ಅವತರಿಸಿದ ಯುಧಿಷ್ಠಿರ. **ಕರಡಿ** = ಭಲ್ಲೂಕಶ್ರೇಷ್ಠನಾದ ಜಾಂಬವಂತನು. **ವಿದುರನು** = ವಿದುರ ನಾಮಕ ಅವತಾರ, **ಸತ್ಯಜಿತು** = ಸತ್ಯಜಿತು- ಎಂಬ ಹೆಸರಿನ ಅವತಾರ- ಈ ನಾಲ್ಕು ಅವತಾರಗಳು. **ಮರುತನಾವೇಶ** = ನಾಲ್ಕು ಅವತಾರಗಳಲ್ಲಿ ವಾಯುದೇವರ ಆವೇಶದಿಂದ ಅವತರಿಸಿದವನು- ಪಾಂಡವರ ಜೇಷ್ಠನಾದ ಧರ್ಮರಾಯನು. (ಯುಧಿಷ್ಠಿರನು), **ತರಣಿಗೆ** = ಸೂರ್ಯನಿಗೆ. **ಎರಡವತಾರ** = ಎರಡು ಅವತಾರಗಳು,ಅವು ಯಾವುವೆಂದರೆ. **ಹರಿಯು ರೂಪಾವಿಷ್ಟ** = ಶ್ರೀಪರಮಾತ್ಮನ ಆವೇಶಯುಕ್ತನಾದ, **ಕರ್ಣನು** = ಕುಂತಿಯ ಜೇಷ್ಠಪುತ್ರ ಕರ್ಣನು, **ಬ್ರಹ್ಮಾವಿಷ್ಟಸುಗ್ರೀವ** = ಬ್ರಹ್ಮ ದೇವರ ಆವೇಶಯುತನಾದ ಸುಗ್ರೀವನು. **ಚಂದ್ರನು** = ಚಂದ್ರನ ಅವತಾರವ್ಯಾವುದೆಂದರೆ, **ಸುರಪನಾವೇಶಯುತ** = ಇಂದ್ರನ ಆವೇಶ ದಿಂದ ಅವತಾರಮಾಡಿದ, **ಅಂಗದನೆನಿಸಿಕೊಳುತಿಪ್ಪ** = ವಾಲಿಪುತ್ರ ನಾದ ಅಂಗದನೆಂದು ಕರೆಯಿಸುತ್ತಾನೆ. ॥೧೯॥

## ವ್ಯಾಖ್ಯಾನಗಳು

೧. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ** :-

೧೯ನೇ ಶ್ಲೋಕಗತ ಯಮಾದಿಗಳ ಅವತಾರ ಹೇಳತಾರೆ.

ಯಮಧರ್ಮರಾಯನ ಅವತಾರಗಳು ಎರಡು ಎರಡುಗಳು, ನಾಲ್ಕು ದಾವವೆಂದರೆ, ವಿವರ-ಯಮಧರ್ಮರಾಯನಿಂದ ಉತ್ಪನ್ನನಾದ ಯಮಧನ್ಮಾಂಶನಾದ ಯುಧಿಷ್ಠಿರ ಎಂಠ ಅವತಾರ. ಜಾಂಬವಂತ ನಾಮಕ ಕಪಿ ಅವತಾರ, ವಿದುರನೆಂಬ ಅವತಾರ, ಸತ್ಯಜಿತು-ಎಂಬ ಅವತಾರ. ಅಂತು, ನಾಲ್ಕು ಯಮದೇವರ ಅವತಾರಗಳು. ಇದರೊಳಗೆ, ವಾಯುದೇವರ ಆವೇಶ ಯುಕ್ತನಾದವನು ಧರ್ಮರಾಯನು. ಇಲ್ಲಿಗೆ, ಯಮದೇವರ ವಿಚಾರ ಮುಗಿಯಿತು.

ಸೂರ್ಯನಿಗೆ- ಎರಡು ಅವತಾರಗಳು. ದಾವವೆಂದರೆ, ಕುಂತೀದೇವಿ ಪುತ್ರನಾದ ಕರ್ಣ ಎಂತಲೂ, ಸುಗ್ರೀವನಾಮಕ ಕಪಿ ಎಂತಲೂ, ಎರಡು ಅವತಾರಗಳು. ಇದರೊಳಗೆ, ಶ್ರೀ ಪರಮಾತ್ಮ ಆವೇಶಯುತನಾ ಕರ್ಣನು. ಬ್ರಹ್ಮದೇವರ ಆವೇಶಯುತನು ಸುಗ್ರೀವನು ಇಲ್ಲಿಗೆ, ಸೂರ್ಯದೇವರ ವಿಚಾರ ಮುಗಿಯಿತು.

ಚಂದ್ರನ ಅವತಾರ ದಾವದೆಂದರೆ, ಅಂಗದನಾಮಕ ಕಪಿ. ಇವನು ಇಂದ್ರದೇವರ ಆವೇಶದಿಂದ ಯುಕ್ತ-ಎಂತ ಕರೆಸಿಕೊಳ್ಳಲ್ಪಡುತ್ತಾನೆ. ॥18॥

## ೨. ಭಾವಪ್ರಕಾಶಿಕೆ

ಯಮಧರ್ಮನಿಗೆ ೪ ಅವತಾರಗಳು. ಕುಂತೀಪುತ್ರನಾದ ಯಮ ಧರ್ಮರಾಜನರೂಪ ಒಂದು. ಇವನಲ್ಲಿ ವಾಯುದೇವರ ಆವೇಶವಿರುವದು. ಮಹಾಭಾರತ ತಾತ್ಪರ್ಯ ನಿರ್ಣಯದ ೧೨ನೆಯ ಅಧ್ಯಾಯದಲ್ಲಿ-"ಇತೀರಿತೇತ ಯಾಯಮಃ ಸಮಾಹುತೋಗಮ ದ್ರುತಂ ॥೩೨॥ ತತಶ್ಚ ಸದ್ಯಏವಸಾಸು ಪಾವ ಪುತ್ರಮುತ್ತಮಂ ॥ ಯುಧಿಷ್ಠಿರಂ ಯಮೋಹಿಸಃ ಪ್ರವೇದೇ ಆತ್ಮ ಪುತ್ರತಾಂ ॥೩೩॥" ಪತಿಯ ಅಪ್ಪಣೆಯನ್ನು ಕೇಳಿ, ಕುಂತೀದೇವಿಯು ಯಮ ದೇವರನ್ನು ಮಂತ್ರಬಲದಿಂದ ಕರೆದಳು. ಯಮನು ತಕ್ಷಣದಲ್ಲಿ ಅಲ್ಲಿಗೆ ಬಂದನು. ಕುಂತಿಯು ಯಮನದೆಶೆಯಿಂದ ತಕ್ಷಣದಲ್ಲೇ ಉತ್ತಮನಾದ ಮಗನನ್ನು ಪಡೆದಳು. ಯುಧಿಷ್ಠಿರನೆಂದು ಆಪುತ್ರನಿಗೆ ಹೆಸರಾಯಿತು.

ಆವನು ಯಮಧರ್ಮನು. ಯಮನು ತನ್ನದೆಶೆಯಿಂದ ತಾನೇ ಕುಂತಿಯಲ್ಲಿ ಪುತ್ರನಾಗಿ ಜನಿಸಿದನು—ಎಂಬ ವಾಕ್ಯವು ಧರ್ಮರಾಜನು ಯಮನೆಂಬ ವಿಷಯಕ್ಕೆ ಆಧಾರವು. ಇವನಲ್ಲಿ ವಾಯುದೇವರ ಆವೇಶವುಂಟೆಂಬ ವಿಷಯದಲ್ಲಿ, ಮಹಾಭಾರತ ತಾತ್ಪರ್ಯ ನಿರ್ಣಯ ೧೨ನೆಯ ಅಧ್ಯಾಯದಲ್ಲಿ ೧೨೫ನೆಯ ಶ್ಲೋಕದಲ್ಲಿ —"ಯುಧಿಷ್ಠಿರಾದ್ಯೇಷು ಚತುರ್ಷುವಾಯುಃ ಸಮಾವಿಷ್ಟಃ ಫಲ್ಗುತೋಽವಿಶೇಷಾತ್ ॥೧೨೫॥ ಯುಧಿಷ್ಠಿರೇ ಸೌಮ್ಯರೂಪೇಣ ವಿಷ್ಟಃ ವೀರೇಣರೂಪೇಣ ಧನಂಜಯೇಸೌ॥" ಧರ್ಮರಾಜ ಮೊದಲಾದ ನಾಲ್ವರಲ್ಲಿ, ಅಂದರೆ, ಭೀಮಸೇನದೇವರು ಸ್ವಯಂ ವಾಯುದೇವರೇ ಆದುದರಿಂದ, ಅವರನ್ನು ಬಿಟ್ಟು, ಉಳಿದ ಧರ್ಮರಾಜ, ಅರ್ಜುನ, ನಕುಲ, ಸಹದೇವ– ಈ ನಾಲ್ವರಲ್ಲೂ ವಾಯುದೇವರು ಪ್ರವಿಷ್ಟರಾಗಿದ್ದರು. ಅದರಲ್ಲೂ, ಅರ್ಜುನನಲ್ಲಿ ವಿಶೇಷವಾದ ಆವೇಶವಿದ್ದಿತು. ಧರ್ಮರಾಜನಲ್ಲಿ ಸೌಮ್ಯರೂಪದಿಂದ ವಾಯುದೇವರ ಪ್ರವೇಶವು. ಅರ್ಜುನನಲ್ಲಿ ವೀರರೂಪದಿಂದ ಪ್ರದೇಶಮಾಡಿದ್ದರು. ಇತ್ಯಾದಿ ವಾಕ್ಯಗಳಿಂದ ಧರ್ಮರಾಜನಲ್ಲಿ ವಾಯುಆವೇಶ ಸಿದ್ಧವಾಗುವುದು. ಯಮಧರ್ಮನಿಗೆ ಕರಡಿ ಅವತಾರವೆಂದರೆ, ಜಾಂಬುವಂತನ ಅವತಾರ ಒಂದು. ಮಹಾಭಾರತ ತಾತ್ಪರ್ಯ ನಿರ್ಣಯ ಮೂರನೆಯ ಅಧ್ಯಾಯದಲ್ಲಿ–"ಯಯೇವಪೂರ್ವಂ ಪರಮೇಷ್ಠಿ ವಕ್ಷಸಸ್ತ್ವಗುದ್ಭವೋ ಧರ್ಮ ಇಹಾಸ್ಯತೋ ಭವತ್ ॥೬೮॥ ಯಯೇವ ಸೂರ್ಯಾತ್ಪುನರೇವ ಸಂಜ್ಞಯಾಂ ನಾಮ್ನಾ ಯಮೋ ದಕ್ಷಿಣದಿಕ್ಪಆಸೀತ್ ॥ ಸ ಜಾಂಬವಾ ದೈವತಕಾರ್ಯದರ್ಶಿನಾ ಪುರೈವಸೃಷ್ಟೋ ಮುಖತಃ ಸ್ವಯಂಭುವಾ ॥೬೯॥ ಯಾವ ಧರ್ಮನು ಪೂರ್ವದಲ್ಲಿ ಬ್ರಹ್ಮದೇವರ ವಕ್ಷಸ್ಥಳವಾದ ಚರ್ಮದ ದೆಶೆಯಿಂದ ಹುಟ್ಟಿದ್ದನೋ, ಅದೇ ಧರ್ಮನೇ ಮತ್ತೂ ಬ್ರಹ್ಮದೇವರ ಬಾಯಿಯ ದೆಶೆಯಿಂದ ಈಗ ಹುಟ್ಟಿದನು. ಮತ್ತು ಯಾವನು ಪೂರ್ವದಲ್ಲಿ, ವಿವಸ್ವಾ–ಎಂಬ ಸೂರ್ಯನ ದೆಶೆಯಿಂದ, ಸುಂಜ್ಞಾದೇವಿಯಲ್ಲಿ ಯಮನೆಂದು ಹುಟ್ಟಿ, ದಕ್ಷಿಣ ದಿಕ್ಪಾಲಕನೆಂದೆನಿಸದನೋ, ಅದೇ ಯಮ ಧರ್ಮನೇ ದೇವತಾಕಾರ್ಯವನ್ನು ಮುಂಚಿತವಾಗಿ ಬಲ್ಲವರಾದ ಬ್ರಹ್ಮದೇವರ ಮುಖದ ದೆಶೆಯಿಂದ ಮೊದಲೇ ಸೃಜಿಲ್ಪಟ್ಟನು. ಅವನೇ ಜಾಂಬವಂತನು

ಎಂಬ ಪ್ರಮಾಣದಿಂದ ಜಾಂಬವಂತನು ಯಮಾವತಾರವೆಂದು ಸಿದ್ಧವಾಯಿತು. ವಿದುರನು ಧರ್ಮರಾಜನೆಂಬ ವಿಷಯದಲ್ಲಿ,—ಮಹಾಭಾರತ ತಾತ್ಪರ್ಯ ನಿರ್ಣಯದ 11ನೆಯ ಅಧ್ಯಾಯದಲ್ಲಿ— "ತಸ್ಯಾಂಸದೇವ್ಯೋಜನಿಧರ್ಮರಾಜೋ ಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಂ ॥ ವಸಿಷ್ಠಸಾಮ್ಯಂ ಸಮಭೀಪ್ಸಮಾನಂ ಪ್ರಚ್ಛಾವಯನ್ನಿಚ್ಛಯಾ ಶಾಪಮಾಪ ॥ ॥139॥"—ವೇದವ್ಯಾಸದೇವರ ತಾಯಿಯಾದ ಸತ್ಯವತಿಯ ಮಾತಿನ ಪ್ರಕಾರ, ವಿಚಿತ್ರವೀರ್ಯನ ಹೆಂಡಂದಿರಾದ ಇಬ್ಬರಲ್ಲಿ ಅಂಬಿಕೆಯು, ಧೃತರಾಷ್ಟ್ರನೆಂಬ ಅಂಧನನ್ನೂ, ಎರಡನೆಯವಳಾದ ಅಂಬಾಲಿಕೆಯು ಪಾಂಡುರಾಜನೆಂಬುವನನ್ನೂ, ವೇದವ್ಯಾಸದೇವರ ಸ್ಪರ್ಶಮಾತ್ರದಿಂದಲೇ ಪಡೆದರು.

ಇಬ್ಬರಲ್ಲಿ ದೊಡ್ಡವನು ಅಂಧನೂ, ಎರಡನೆಯವನು ಶುದ್ಧವಾದ ಬಿಳಿಯ ಬಣ್ಣದವನೂ, ತಾಯಿಯರ ದೋಷದಿಂದ ಆದುದನ್ನು ಕಂಡು, ಸತ್ಯವತಿಯು, ನಿರ್ದೋಷಿಯಾದ ಮತ್ತೊಬ್ಬ ಕುಮಾರನನ್ನು ಕೊಡಬೇಕೆಂದು ವೇದವ್ಯಾಸರನ್ನು ಬೇಡಿ, ಅವರ ಒಪ್ಪಿಗೆಯ ಮೇಲೆ ದೊಡ್ಡ ಸೊಸೆಯಾದ ಅಂಬಿಕೆಯನ್ನು ನೀನು ಮೊದಲು ವೇದವ್ಯಾಸರನ್ನು ಕಂಡು ಹೆದರಿ,ಕಣ್ಣುಮುಚ್ಚಿಬಿಟ್ಟೆ; ಆದುದರಿಂದ,ನಿನ್ನ ಮಗನು ಕುರುಡನಾದನು, ಈಗ ಹಾಗೆ ಮಾಡದೆ ನಿನ್ನ ಭಾವನಾದ ವೇದವ್ಯಾಸನನ್ನು ಭಕ್ತಿಯಿಂದ ಸೇವಿಸೆಂದು ಅಪ್ಪಣೆ ಮಾಡಿದಳು. ಆಕೆಯು ಹೆದರಿಕೆಯಿಂದ ತನ್ನ ದಾಸಿಯಾದ ಶೂದ್ರ ಸ್ತ್ರೀಗೆ ತನ್ನಂತೇ ಅಲಂಕರಿಸಿ, ವೇದವ್ಯಾಸರ ಸಮೀಪಕ್ಕೆ ಕಳುಹಿಸಿದಳು. ಆಕೆಯು ಭಕ್ತಿಯಿಂದ ವೇದವ್ಯಾಸದೇವರನ್ನು ಸೇವಿಸಿದಳು. ಆಕೆಯಲ್ಲಿ ಯಮಧರ್ಮನು ಹುಟ್ಟಿದನು. ಶೂದ್ರಸ್ತ್ರೀಯಲ್ಲಿ ಯಮನು ಹುಟ್ಟಲು ಕಾರಣವೇನೆಂದರೆ-ಮಾಂಡವ್ಯನೆಂಬ ಒಬ್ಬ ಋಷಿಯು ತಾನು ವಸಿಷ್ಠರಿಗೆ ಸಮನಾಗಬೇಕೆಂಬ ಇಚ್ಛೆಯಿಂದ ತಪಸ್ಸು ಮಾಡುತ್ತಿದ್ದನು. ಆ ಸಮಯದಲ್ಲಿ, ಆ ದೇಶಾಧಿಪತಿಯಾದ ರಾಜನ ಮನೆಯಲ್ಲಿ ಕಳ್ಳರು ಬಿದ್ದು ರಾಜದ್ರವ್ಯವನ್ನು ಅಪಹರಿಸಿದರು. ಒಂದೆಯೇ ರಾಜನಾಜ್ಞಾಪ್ರಕಾರ ರಾಜದೂತರು ಆ ಕಳ್ಳರನ್ನು ಅಟ್ಟಿಕೊಂಡು ಬರುವಾಗ, ಕಳ್ಳರು ಭಯಪಟ್ಟು ಈ ಮಾಂಡವ್ಯರ ಆಶ್ರಮದಲ್ಲಿ ಪ್ರವೇಶಮಾಡಿಬಿಟ್ಟರು. ಆಗ ಮಾಂಡವ್ಯನು ಅಸಂಪ್ರಜ್ಞಾತಸಮಾಧಿಯಲ್ಲಿದ್ದುದರಿಂದ, ಮೈಮೇಲೆ

ಪ್ರಜ್ಞೆ ಇರಲಿಲ್ಲ. ರಾಜದೂತರು ಮಾಂಡವ್ಯಾಶ್ರಮದಲ್ಲಿ ಕಳ್ಳರನ್ನು ಕಂಡು, ದೈವಪ್ರೇರಣೆಯಿಂದ ತಪಸ್ಸುಮಾಡುತ್ತಾ ಕುಳಿತಿದ್ದ ಪ್ರಜ್ಞೆಯಿಲ್ಲದಿರುವ ಮಾಂಡವ್ಯರನ್ನೂ ಕೂಡ ಕಳ್ಳನೆಂಬ ಭಾವನೆಯಿಂದ ಕಳ್ಳರಕೂಡ ಇದರನ್ನೂ ಹಿಡಿದು ಕಟ್ಟಿ ತೆಗೆದುಕೊಂಡು ಹೋಗಲು, ರಾಜನು, ಎಲ್ಲರಿಗೂ ವಿಧಿಸಿದಂತೆ ಇವರಿಗೂ ಶೂಲಾರೋಪಣೆ ಶಿಕ್ಷೆಯನ್ನು ಕೊಟ್ಟನು.

ಆಗಲೂ, ಇವರು ಸಮಾಧಿಯಲ್ಲೇ ಇದ್ದರು. ಮಿಕ್ಕ ಕಳ್ಳರೆಲ್ಲರೂ ಮೃತರಾದರು. ಇವರಿಗೆ ಕ್ಲುಪ್ತಕಾಲದಲ್ಲಿ ಸಮಾಧಿಯಿಂದ ಎಚ್ಚರವಾಯಿತು. ನೋಡುವಾಗ, ತಮಗೆ ಶೂಲಾರೋಪಣೆ ಆಗಿದ್ದಿತು. ಆಗ ಅಲ್ಲಿರುವ ದೂತರನ್ನು ಕುರಿತು, "ರಾಜನನ್ನು ಕರೆಯಿರಿ"—ಎಂದು ಅಪ್ಪಣೆಯನ್ನಿತ್ತರು. ದೂತರು ಭಯದಿಂದ ಓಡಿಹೋಗಿ, ರಾಜನಿಗೆ ಸಮಾಚಾರ ಕೊಡಲು, ರಾಜನು ಬಂದು ನೋಡಿ, ಕ್ಷಮಾ ಬೇಡಿಕೊಂಡು, ತ್ರಿಶೂಲವು ದೇಹದಲ್ಲಿ ಎಂದ್ದುದರಿಂದ ಮಾಂಡವ್ಯನನ್ನು ಬೇರ್ಪಡಿಸಲು ಸಾಧ್ಯವಾಗದೇ, ಅಪಾನಕ್ಕೆ ಕೆಳಭಾಗದಲ್ಲಿ ಶೂಲವನ್ನು ಕತ್ತರಿಸಿಬಿಟ್ಟನು. ಶೂಲಾಗ್ರವು ದೇಹದಲ್ಲೇ ನಿಂತ ಪ್ರಯುಕ್ತ, ಅಣಿ ಮಾಂಡವ್ಯನೆಂದು ಹೆಸರಾಯಿತು. ಮಾಂಡವ್ಯನು ಇದು ರಾಜನು ಮಾಡಿದ ಶಿಕ್ಷೆಯಲ್ಲ. ಯಮದೇವರ ಪ್ರೇರಣೆಯಿಂದ ತನಗೆ ಶಿಕ್ಷೆಯಾಗಿದೆಯೆಂದು ಜ್ಞಾನದೃಷ್ಟಿಯಿಂದ ತಿಳಿದು, ರಾಜನನ್ನು ಕ್ಷಮಿಸಿ, ಅಲ್ಲಿಂದ ಯಮದೇವರಲ್ಲಿ ಬಂದು,ತನಗೆ ಶೂಲಾರೋಪಣೆ ಮಾಡಿಸಲು ಕಾರಣವೇನೆಂದು ಕೇಳಿದರು. ವಾಸ್ತವದಲ್ಲಿ ಶೂಲಾರೋಪಣೆಗೆ ಕಾರಣವು, ತನಗೆ ಯೋಗ್ಯತೆಯಿಲ್ಲದ ವಶಿಷ್ಠಸಾಮ್ಯವನ್ನು ಅಪೇಕ್ಷಿಸಿದುದೇ ಕಾರಣವಾದರೂ, ಯಮದೇವರು, ಇವರು ಮಾಡಿದ ಹೆಚ್ಚು ತಪಸ್ಸನ್ನು ನಾಶಮಾಡುವ ಉದ್ದೇಶದಿಂದ ಇವರಿಗೆ ಕೋಪವನ್ನುಂಟು ಮಾಡಿಸಿ ತಾನು ಶಾಪವನ್ನು ತೆಗೆದುಕೊಳ್ಳುದಾಗಿ ನಿಶ್ಚಯಿಸಿ-"ನೀವು ಬಾಲ್ಯದಲ್ಲಿ ನೊಣಗಳಿಗೆ ಅಪಾನದಲ್ಲಿ ಕಡ್ಡಿ ಹಾಕಿ ಕೊಂದಿರಿ! ಆದರಿಂದ ಶೂಲಾರೋಪಣೆ ಆಯಿತೆಂದು ಸುಳ್ಳು ಹೇಳಿದನು. ಇದು ಅವರ ತಪೋನಾಶರೂಪವಾದ ಶಿಕ್ಷೆಗಾಗಿ ಹೇಳಿದ ಸುಳ್ಳಾದುದರಿಂದ, ಶಿಕ್ಷಾಕರ್ತನಾದ ಯಮದೇವನಿಗೆ ಸುಳ್ಳು ಹೇಳಿದ ದೋಷವು ಬರಲಿಲ್ಲ.

ಮಾಂಡವ್ಯನು ಕೋಪದಿಂದ, ನಾನು ಬಾಲ್ಯದಲ್ಲಿ ಅಜ್ಞಾನದ ದೆಶೆಯಲ್ಲಿ ಪಕ್ಷಿಕೆಯ ವಧಾ ಮಾಡಿದ್ದರೂ, ಅದರ ಶಿಕ್ಷೆಯು ಇದಾಗುವುದಿಲ್ಲ. ನೀನು ನನ್ನಲ್ಲಿ ಯಥಾರ್ಥವನ್ನು ಹೇಳದೆ ಸುಳ್ಳನ್ನು ಹೇಳುವೆ. ಆದ್ದರಿಂದ ಶೂದ್ರನಾಗಿ ಭೂಮಿಯಲ್ಲಿ ಹುಟ್ಟೆಂದು ಶಾಪವನ್ನು ಕೊಟ್ಟನು. ಅದರಿಂದ, ಮಾಂಡವ್ಯರ ತಪಸ್ಸಿನ ಫಲವೆಲ್ಲವೂ ನಾಶವಾಯಿತು. ಹೀಗೆ ಅವರಿಗೆ ತಪಸ್ಸನ್ನು ನಾಶಮಾಡುವ ಉದ್ದೇಶದಿಂದ ತನ್ನ ಇಚ್ಛೆಯಿಂದಲೇ,ಅವರ ದೆಶೆಯಿಂದ ಶಾಪವನ್ನು ಹೊಂದಿದನು. ಆ ಕಾರಣದ ವೆಶೆಯಿಂದಲೇ ವೇದವ್ಯಾಸದೇವರ ದೆಶೆಯಿಂದ ಶೂದ್ರಸ್ತ್ರೀಯಲ್ಲಿ ಯಮಧರ್ಮನು ವಿದುರನಾಗಿ ಹುಟ್ಟಿದನು. ಆದರೂ ಮಹಾಜ್ಞಾನಿಯಾಗಿ ಧರ್ಮನಿರತನಾಗಿದ್ದನು- ಎಂದು ಹೇಳಿರುವರು. ಮತ್ತೂ ಯಮಧರ್ಮನಿಗೆ ಸತ್ಯಜಿತು-ಎಂದು ಒಂದು ಅವತಾರ ಉಂಟು. ಅದು ಯಾವ ಕಾಲ ? ಎಲ್ಲಿ ಅಂದರೆ,ವಿಷ್ಣುರಹಸ್ಯ 27ನೆಯ ಅಧ್ಯಾಯದಲ್ಲಿ—"ತೃತೀಯೋಂತ್ವಂತರೇ ಬ್ರಹ್ಮನ್ನುತ್ತಮೋನಾಮವೈ ಮನುಃ ॥4॥ ಯಃ ಸ್ತನಾದ ಭವದ್ವಿಷ್ಣೋಃ ಸಧರ್ಮಸ್ತ್ವಿಂದ್ರತಾಂಗತಃ ॥ ಸತ್ಯಜಿನ್ನಾಮವಿಖ್ಯಾತೋ ಧರ್ಮಾದವನಿಯಃ ಸ್ವಯಂ ॥5॥"–ಮೂರನೆಯ ಮನು ಪ್ರಿಯವ್ರತರಾಜನ ಮಗನು ಉತ್ತಮನೆಂಬುವನು. ಪೂರ್ವದಲ್ಲಿ ಯಾವನು "ಧರ್ಮಸ್ತನಾದ್ದಕ್ಷಿಣತಃ"–ಎಂಬ ಭಾಗವತವಾಕ್ಯದಂತೆ ಪರಮಾತ್ಮನ ಬಲದಸ್ತನದಿಂದ ಹುಟ್ಟಿದ್ದನೋ, ಅದೇ ಧರ್ಮನ ದೆಶೆಯಿಂದ ಸತ್ಯಜಿತ್-ಎಂಬ ಹೆಸರಿನಿಂದ ತಾನೇ ಜನಿಸಿ, ಈ ಮೂರನೇ ಮನ್ವಂತರದಲ್ಲಿ ಇಂದ್ರನಾಗಿದ್ದನು- ಎಂದು ಹೇಳಿರುವರು. ಇದೇ ಆಧಾರವು ಸತ್ಯಜಿತ್ ಯಮಧರ್ಮನೆಂಬುವ ವಿಷಯದಲ್ಲಿ- ಎಂದು ತಿಳಿಯಬೇಕು. ಹೀಗೆ ಯಮಧರ್ಮನಿಗೆ ನಾಲ್ಕು ಅವತಾರಗಳು.

ಸೂರ್ಯನಿಗೆ ಎರಡವತಾರಗಳು. ಬ್ರಹ್ಮದೇವರ ಆವೇಶದಿಂದ ಕೂಡಿದ ಸುಗ್ರೀವನೆಂಬ ಕಪಿಯ ರೂಪ ಒಂದು. ಈ ವಿಷಯದಲ್ಲಿ ಆಧಾರ ಮಹಾಭಾರತ ತಾತ್ಪರ್ಯ ನಿರ್ಣಯದ ಮೂರನೆಯ ಅಧ್ಯಾಯದಲ್ಲಿ –"ಸುಗ್ರೀವ ಆಸೀತ್ಸ್ವರಮೇಷ್ಠಿತೇಜಸಾಯುತೋರವಿಃ"–ಬ್ರಹ್ಮದೇವರ ಆವೇಶದಿಂದ ಕೂಡಿ ಸೂರ್ಯನು ಸುಗ್ರೀವನೆಂಬ ಹೆಸರಿನಿಂದ ಜನಿಸಿದನು-ಎಂದು ಹೇಳಿರುವರು. ಎರಡನೆಯ ಅವ

ತಾರವು ಕರ್ಣನು ನಿರ್ಣಯ ೧೧ನೇ ಅಧ್ಯಾಯದಲ್ಲಿ-"ಅಧಾಸಸಾದಭಾಸ್ಕರಃ ॥ ಸತತ್ರಜಜ್ಞೇರ್ವಾ ಸ್ವಯಂ ದ್ವಿತೀಯ ರೂಪಕೋವಿಭುಃ ॥ ಸವರ್ಮ ದಿವ್ಯ ಕುಂಡಲೋ ಜ್ವಲನ್ನಿವಸ್ವತೇಜಸಾ ॥೧೫೬॥ಪುರಾ ಸವಾಲೀ ಮಾರಣಪ್ರಭೂತ ದೋಷ ಕಾರಣಾತ್॥ ಸಹಸ್ರವರ್ಮನಾಮಿನಾ ಸುರೇಣವೇಷ್ಟಿತೋಜನಿ ॥೧೫೭॥ ಯಥಾಗ್ರಹೈರ್ವಿದೂಷಿತೇ ಮತಿರ್ನೃಣಾಂ ತಥೈವಹಿ ॥ ಅಭೂಚ್ಚ ದೈತ್ಯ ದೂಷಿತಾಮತಿರ್ದಿವಾಕರಾತ್ಮನಃ ॥೧೫೮॥ ತಥಾಪಿ ರಾಮಸೇವಾನಾಧರೇಶ್ವ ಸನ್ನಿಧಾನಯುಕ್ ॥ ಸುದರ್ಶನೀಯ ಕರ್ಣತಃ ಸಕರ್ಣನಾಮಕೋಭದತ್ ॥ ॥೧೫೯॥ ಕುಂತೀದೇವಿಯು ಮಂತ್ರದಿಂದ ಕರೆಯಲು, ಸೂರ್ಯನು ಅಲ್ಲಿಗೆ ಬಂದು,ತಾನೇ ಎರಡನೆಯ ರೂಪದಿಂದ ಸಹಜವಾದ ಕರ್ಣಕುಂಡಲಗಳಿಂದಲೂ ದಿವ್ಯವಾದ ಕವಚದಿಂದಲೂ ಕೂಡಿ, ತನ್ನ ತೇಜಸ್ಸಿನಿಂದ ಪ್ರಜ್ವಲಿಸಸುತ್ತಾ ಹುಟ್ಟಿದನು. ಆದರೆ, ಪೂರ್ವಜನ್ಮದಲ್ಲಿ ಸುಗ್ರೀವನಾಗಿದ್ದಾಗ, ವಾಲಿಯನ್ನು ಕೊಲ್ಲಿಸಿದ ಪಾಪದಿಂದ ಸಹಸ್ರವರ್ಮನೆಂಬ ದೈತ್ಯನಾವೇಶದಿಂದ ಕೂಡಿದ್ದುದ ರಿಂದ, ಹೇಗೆ ಮನುಷ್ಯರಿಗೆ ಭೂತಗ್ರಹಾದಿಗಳು ಹಿಡಿದಿದ್ದರೆ, ಬುದ್ಧಿಯು ಕೆಟ್ಟರುವುದೋ, ಹಾಗೆಯೇ ಸೂರ್ಯಸ್ವರೂಪನಾದ ಇವನಿಗೆ ಬುದ್ಧಿಯು ಕೆಟ್ಟುಹೋಗಿದ್ದಿತು. ಹಾಗಿದ್ದರೂ, ಪೂರ್ವಜನ್ಮದಲ್ಲಿ ರಾಮದೇವರ ಸೇವೆ ಮಾಡಿದ ಪುಣ್ಯದಿಂದ, ಪರಮಾತ್ಮನ ಸನ್ನಿಧಾನದಿಂದ ಯುಕ್ತನಾಗಿದ್ದನು.

ಇವನ ಕಿವಿಗಳು ಕುಂಡಲಗಳಿಂದ ಶೋಭಿತವಾಗಿ ದರ್ಶನೀಯವಾಗಿದ್ದು ದರಿಂದ,ಕರ್ಣನೆಂದು ನಾಮವಾಯಿತು. ಹೀಗೆ,ಸೂರ್ಯನಿಗೆ ೨ ಅವತಾರಗಳು. ಚಂದ್ರನು ಇಂದ್ರನಾವೇಶದಿಂದ ಕೂಡಿ,ಅಂಗದನೆಂಬ ಕಪಿಯಾಗಿ ಜನಿಸಿರುವನು. ಮಹಾಭಾರತ ತಾತ್ಪರ್ಯ ನಿರ್ಣಯದ ಮೂರನೆಯ ಅಧ್ಯಾಯದಲ್ಲಿ-"ಬ್ರಹ್ಮೋದ್ಭವಃ" ಸೋಮ ಉತಾಸ್ಯ ಸೂನೋರತ್ರೇರಭೂತ್ಸೋಂಗದ ಏವಜಾತಃ ॥70॥ಇಂದ್ರೋಂದೇಗದೇಚ್ಛೈವ ತತೋಂಗ ದೋಹಿ ಬಲೀನಿತಾಂ ತಂಸ ಬಭೂವ ಶಶ್ವತ್ ॥80॥

ಪೂರ್ವದಲ್ಲಿ, ಬ್ರಹ್ಮದೇವರ ಮಗನಾಗಿದ್ದ ಚಂದ್ರನೇ, ಬ್ರಹ್ಮದೇವರ ಮಕ್ಕಳಾದ ಅತ್ರಿಋಷಿಗಳ ಮಗನಾಗಿ ಜನಿಸಿದ್ದನು. ಅವನೇ ಮತ್ತೂ ಅಂಗದ

ನೇದು ವಾಲಿಯ ಮಗನಾಗಿ ಜನಿಸಿದನು- ಎಂದು 70ನೆಯ ಶ್ಲೋಕದಲ್ಲಿ ಹೇಳಿರುವರು. ಅದೇ ಅಧ್ಯಾಯ 80ನೆಯ ಶ್ಲೋಕದಲ್ಲಿ, ಅಂಗದನಲ್ಲಿ ಚಂದ್ರನ ಆವೇಶವೂ ಇದ್ದಿತು. ಆದುದರಿಂದ, ಅಂಗದನು ಬಹಳ ಬಲಾಢ್ಯನಾಗಿದ್ದನು- ಎಂದು ಹೇಳಿರುವರು. ಈ ಅಭಿಪ್ರಾಯವನ್ನೇ ದಾಸಾರ್ಯರು "ಸುರಪನಾವೇಶಯುತ ಅಂಗದ"-ಎಂದು ಹೇಳಿರುವರು. ॥19॥

**೩. ಭಾವದರ್ಪಣ :–**

ಯಮಧರ್ಮಗೆ ನಾಲ್ಕವತಾರ ಎಂತಲೂ, ಸೂರ್ಯಗೆ ಎರಡವತಾರ ಎಂತಲೂ, ಇಂದ್ರಾವೇಶಯುಕ್ತಚಂದ್ರನು ಅಂಗದನೆಂತಲೂ ಹೇಳುತ್ತಾರೆ. "ಜಾಂಬವಾನ್ ವಾಯುಯುಗ್ಧರ್ಮೋ ವಿದುರಃ ಸತ್ಯಜಿದ್ಯಮಃ । ಬ್ರಹ್ಮಾವಿಷ್ಟಶ್ಚ ಸುಗ್ರೀವೋ ಹರಿಯುಸ್ಕರ್ಣಏವಚ । ಏವಂ ದ್ವಿರೂಪ ಸೂರ್ಯಸ್ಯ -ಇಂದ್ರಾವಿಷ್ಟೋಂಗದಃ ಶಶೀತಿ" ತಾರತಮ್ಯೋಕ್ತೇಃ ॥19॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–**

ಮರುತ ಇತಿ ॥ ಯುಧಿಷ್ಠಿರಾದ್ಯೇಷ್ವಿತಿ ॥ ಕರಡಿ–ಜಾಂಬವಾನ್ ॥ ಋಕ್ಷಾದಿಯೋನಿಂ ಪ್ರಾರಬ್ಧಂ ಭೋಕ್ತುಂ ॥ ಅತ್ರಾಯಂ ವಿಶೇಷಃ ॥ ಯ ಏವ ಪೂರ್ವಂ ಪರಮೇಷ್ಠಿವಕ್ಷಸಃ ಇತಿ ಧರ್ಮಃ ಸೂರ್ಯಾತ್ ಸಂಜ್ಞಯಾ ನಾಮ್ನಾ ಯಮಃ ಇತಿ ॥ ಸ ಜಾಂಬವಾನ್ ದೈವತಕಾರ್ಯೇತಿ ವಚನಾತ್ ಆದಿಸ್ಯಷ್ಟ್ವಾ ತ್ವಗುದ್ಭವಃ ಅಜಸ್ಯ ಜಾಂಬವಾನ್ ಜಾಂಬೂನದಾಭೇ ರಾಮಚಂದ್ರೇ ಸುಭಕ್ತಃ ॥ ಸ ಏವ ಧರ್ಮಃ ಸೂರ್ಯಾತ್ ಸಂಜ್ಞಾಯಾಂ ಯಮಃ ಜಾತಃ ॥ ಧರ್ಮಾಭಿನ್ನ ಧರ್ಮಜೇತ್ಯೇತ್ ಸೂನುಶಬ್ದವತ್ ॥ ಧರ್ಮಜಃ ವಿದುರಃ ॥ ಸತ್ಯಜಿತ್‌ಮಯಂ ಇತಿ ಸ್ವರೂಪೈಕ್ಯೇಪಿ ಯಮಶಬ್ದಃ ಇಂದ್ರೇಷು ತೃತೀಯಃ ಸತ್ಯಂ ಹರಿಂ ಜಯತಿ ಭಕ್ತ್ಯಾ ವಶೀಕರೋತಿ ಇತಿ ತಥಾ ॥ ಬ್ರಹ್ಮಾವಿಷ್ಟ ಇತಿ॥ ಸುಗ್ರೀವ ಆಸೀತ್ ಪರಮೇಷ್ಠೀತೇಜಸಾ ಯುತಃ ರವಿಃ ಇತಿ ಹರೀಶಿ ॥ ಹರೇಶ್ಚ ಸನ್ನಿಧಾನಯುಕ್ ಸುದರ್ಶನೀಯಕರ್ಣತಃ ಕರ್ಣಃ ॥ ಇಂದ್ರಾವಿಷ್ಟಃ ಅಂಗದಃ ಶಶೀ ॥ ಬ್ರಹ್ಮೋದ್ಭವ್ ಸೋಮ ಉತಾಸ್ಯ

ಸೂನೋಃ ಅತ್ರೇಃ ಅಭೂತ್ ಸೋಂಗದ ಏವ ಜಾತಃ । ಇಂದ್ರಃ ಅಂಗದೇ.
॥19॥

## ಕನ್ನಡಾರ್ಥ

ಯುಧಿಷ್ಠಿರಾದಿಗಳಲ್ಲಿ ವಾಯುದೇವನ ಆವೇಶವಿರುವುದೆಂದು ನಿರ್ಣಯಾದಿಗಳಲ್ಲಿ ಹೇಳಲಾಗಿರುತ್ತದೆ. ಕರಡಿ— ಜಾಂಬವಂತನು. ಪ್ರಾರಬ್ಧದಿಂದ,ಅವನಿಗೆ ಕರಡಿಯ ಜನ್ಮ ಬಂದಿದ್ದು. ಬ್ರಹ್ಮದೇವರ ವಕ್ಷಸ್ಸಿವಲ್ಲಿ ತ್ವಗುದ್ಭವನಾದ ಧರ್ಮನೇ ಬ್ರಹ್ಮದೇವರ ಆವೇಶದಿಂದ ಯುಕ್ತನಾಗಿ ಸಂಜ್ಞಾನಾಮಕ ಸೂರ್ಯಪತ್ನಿಯಲ್ಲಿ ದಕ್ಷಿಣ ದಿಕ್ಪಾಲಕನಾದ ಯಮನಾಗಿ ಹುಟ್ಟಿದನು. ಪೂರ್ವದಲ್ಲಿ ಪರಮಾತ್ಮನ ಕಾರ್ಯವನ್ನು ಭಾವಿದೃಷ್ಟಿಯಿಂದ ನೋಡಿದ ಬ್ರಹ್ಮದೇವರು ಆ ಧರ್ಮನನ್ನೇ ಮತ್ತೆ ಮುಖದಿಂದ ಸೃಷ್ಟಿಮಾಡಿದರು. ಅವನೇ ಜಾಂಬವಂತ. ಯಮ-ಧರ್ಮಗಳೆರಡೂ ಧರ್ಮನ ರೂಪಗಳೇ. ಧರ್ಮಾವತಾರನಾದ ಧರ್ಮನಿಂದ ಹುಟ್ಟಿದ ಸತ್ಯಜಿತ್ತನೇ ವಿದುರನಾಗಿ ಮತ್ತೆ ಜನಿಸಿದನು. ಮೂರನೆಯ ಮನ್ವಂತರದಲ್ಲಿ ಇಂದ್ರನಾದ ಸತ್ಯಜಿತ್– ಎಂಬುವವನು ಯಮಧರ್ಮನ ಅವತಾರ. ಹರಿಯನ್ನು ಭಕ್ತಿಯಿಂದ ವಶೀಕರಿಸಿದ್ದರಿಂದ, ಸತ್ಯಜಿತ್-ಎಂನು ಆವನಿಗೆ ಹೆಸರು. ಅವನೇ ವಿದುರನಾದನು. ಸುಗ್ರೀವನು ಬ್ರಹ್ಮಾವೇಶದಿಂದ ಯುಕ್ತನು. ಅವನು ಸೂರ್ಯಾಂಶನು. ಹರಿಯ ಸನ್ನಿಧಾನದಿಂದ ಯುಕ್ತನಾದ ಕರ್ಣನು ಕೂಡಲೇ ಕರ್ಣದಿಂದ ಹುಟ್ಟಿದನು. ಅವನು ಸೂರ್ಯಾಂಶನೇ. ಅಂಗದನು ಇಂದ್ರಾವೇಶಯುಕ್ತನು. ಚಂದ್ರಾವತಾರ. ಬ್ರಹ್ಮದೇವರ ಪುತ್ರನಾದ ಸೋಮನು (ಚಂದ್ರನು) ಅತ್ರಿಪುತ್ರನಾಗಿ ಹುಟ್ಟಿದನು. ಹೀಗೆ ತಾತ್ಪರ್ಯನಿರ್ಣಯದಲ್ಲಿ-ಅವರವರ ಅಂಶಾವೇಶಗಳನ್ನು ಹೇಳಿದಂತೆ, ದಾಸರಾಯರು ಇಲ್ಲಿ ಹೇಳಿರುತ್ತಾರೆ. ॥19॥

### ಶ. ಶ್ರೀಗುರುಹೃದಯ ಪ್ರಕಾಶಿಕೆ :–

ಮಾರುತನೆಂಬ ವಾಯುಆವೇಶಯುಕ್ತ ಧರ್ಮರಾಜನು ಕರಡಿ– ಎಂಬ ಜಾಂಬವಂತನು, ವಿದುರನು, ಸತ್ಯಜಿಶು- ಎಂಬ ಪಾಂಚಾಲಪುತ್ರನು, ಈ

ನಾಲ್ಕು ಯಮಧರ್ಮರೂಪಗಳು. ಬ್ರಹ್ಮಾವೇಶಯುಕ್ತ ಸುಗ್ರೀವನು, ವಿಷ್ಣು ಆವೇಶವುಳ್ಳ ಕರ್ಣನೂ ಸಹ ಸೂರ್ಯನ ಎರಡು ಅವತಾರಗಳು. ಸುರಪನೇಬ ಇಂದ್ರನ ಆವೇಶವುಳ್ಳ ಅಂಗದನು ಚಂದ್ರನ ಅವತಾರವೆನಿಸುವನು. ॥19॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಧರ್ಮ ಸ್ವರೂಪಿಯಾದ ಯಮಧರ್ಮರಾಯನಿಗೆ ನಾಲ್ಕು ಅವತಾರಗಳು.

2. ಧರ್ಮಜ :–

ಕುಂತೀಪುತ್ರನಾದ ಯುಧಿಷ್ಠಿರನಾಮಕ ಅವತಾರ ಒಂದು. ಪತಿಯಾದ ಪಾಂಡುರಾಜನ ಅಪ್ಪಣೆಯನ್ನು ಕೇಳಿ, ಕುಂತಿಯು ಯಮದೇವರನ್ನು ಮಂತ್ರ ಬಲದಿಂದ ಆಹ್ವಾನಿಸಿದಳು. ಯಮನು ತಕ್ಷಣ ಪ್ರತ್ಯಕ್ಷನಾಗಿ, ಅವನ ವರ ಪ್ರಸಾದದಿಂದ ಪುತ್ರನನ್ನು ಪಡೆದಳು. ಅವನೇ ಪಂಚಪಾಂಡವರ ಜ್ಯೇಷ್ಠನಾದ ಯುಧಿಷ್ಠಿರನು. ಯಮಧರ್ಮನೇ ಒಂದಂಶದಿಂದ ಯುಧಿಷ್ಠಿರನೆಂದು ಅವತರಿಸಿದನು. ಇವನಲ್ಲಿ ವಾಯುದೇವರ ಆವೇಶವಿದೆ. **(ಮರುತನಾವೇಶ ಯುತ ಧರ್ಮಜ).**

**ಪ್ರಮಾಣ :-**

"ಯುಧಿಷ್ಠಿರಾದ್ಯೇಷು ಚತುರ್ಷ ವಾಯುಃ ಸಮಾವಿಷ್ಟಃ ಫಲ್ಗುಣೇತೋಃ ವಿಶೇಷಾತ್ ॥ ಯುಧಿಷ್ಠಿರೇ ಸೌಮ್ಯರೂಪೇಣವಿಷ್ಟಃ ವೀರೇಣ ರೂಪೇಣ ಧನಂಜಯೇಸೌ ॥

**(ಮ. ತಾ. ನಿರ್ಣಯ–ಅಧ್ಯಾಯ–12)**

ಭೀಮಸೇನದೇವರು (ಶ್ರೀವಾಯುದೇವರೇ) ಸ್ವಯಂ ರೂಪವನ್ನು ಬಿಟ್ಟು, ಉಳಿದ ಧರ್ಮರಾಯ, ಅರ್ಜುನ, ನಕುಲ ಮತ್ತು ಸಹದೇವರಲ್ಲಿ ಆವಿಷ್ಟ

ರಾಗಿದ್ದರು. ಯುಧಿಷ್ಠಿರನಲ್ಲಿ ಸೌಮ್ಯರೂಪದಿಂದಲೂ, ಅರ್ಜುನನಲ್ಲಿ ವೀರ ರೂಪದಿಂದಲೂ, ನಕುಲ ಸಹದೇವರಲ್ಲಿ ಸೌಂದರ್ಯರೂಪದಿಂದಲೂ,ಆವಿಷ್ಟ ರಾಗಿದ್ದರೆಂದು ಪ್ರಮಾಣವಿದೆ.

3. **ಕರಡಿ :–**

ತ್ರೇತಾಯುಗದಲ್ಲಿ ಭಲ್ಲೂಕಶ್ರೇಷ್ಠನಾದ ಜಾಂಬವಂತನು ಶ್ರೀರಾಮ ದೇವರ ಸೇವೆಗಾಗಿ ಅವತರಿಸಿದನು. ಯಮಧರ್ಮನ ಅಂಶದಿಂದ ಅವತರಿಸಿ ದವನೇ ಜಾಂಬವಂತನು.

**ಕಥಾಪ್ರಸಂಗ :–**

ಪೂರ್ವದಲ್ಲಿ ಬ್ರಹ್ಮದೇವರ ವಕ್ಷಸ್ಥಳದ ಚರ್ಮದಿಂದ ಯಮಧರ್ಮನು ಜನಿಸಿದನು. ಅದೇ ಧರ್ಮನು ಬ್ರಹ್ಮದೇವರು ಆಕಳಿಸುತ್ತಿರುವಾಗ ಬಾಯಿ ಯಿಂದ ಹೊರಬಿದ್ದನು. ಅವನೇ ಜಾಂಬವಂತನೆಂಬ ಕರಡಿಯು. ಪೂರ್ವ ದಲ್ಲಿ,ವಿವಸ್ವಾನ್ ಎಂಬ ಸೂರ್ಯನಿಂದ ಸಂಜ್ಞಾದೇವಿಯಲ್ಲಿ ಯಮನಾಮಕನಾಗಿ ಜನಿಸಿ, ದಕ್ಷಿಣದಿಕ್ಪತಿಯಾಗಿದ್ದು, ಬ್ರಹ್ಮದೇವರ ಮುಖದಿಂದ ಮೊದಲೇ ಸೃಜಿಸಲ್ಪಟ್ಟನು. ಜಾಂಬವಂತನು ಪ್ರಾಚೀನಪುರುಷ.

**ಪ್ರಮಾಣ :–**

"ಯ ಯೇವ ಪೂರ್ವಂ ಪರಮೇಷ್ಠಿ ವಕ್ಷಸಸ್ತ್ವಗುದ್ಭವೋ ಧರ್ಮ ಇಹಾಸ್ಯತೋ ಭವತ್ ॥

"ಯ ಯೇವ ಸೂರ್ಯಾತ್ಪುನರೇವ ಸಂಜ್ಞಾಯಾಂ ನಾಮೋ ಯಮೋ ದಕ್ಷಿಣದಿಕ್ಪ ಆಸೀತ್ ॥

ಸ ಜಾಂಬವಾನ್ ದೈವತ ಕಾರ್ಯದರ್ಶಿನಾ ಪುರೈವ ಸೃಷ್ಟೋ ಮುಖತಃ ಸ್ವಯಂಭುವಾ ॥

(ಮ. ತಾ. ನಿರ್ಣಯ–ಅಧ್ಯಾಯ-2)

## ೪. ವಿದುರನು

ವಿದುರನು ಸಾಕ್ಷಾತ್ ನಾರಾಯಣಾವತಾರಿಯಾದ ಶ್ರೀ ವೇದವ್ಯಾಸರ ಪುತ್ರನು. ವಿಚಿತ್ರವೀರ್ಯನ ಹೆಂಡತಿಯಾದ ಅಂಬಿಕೆಯಲ್ಲಿ (ದಾಸಿಯಲ್ಲಿ) ಶ್ರೀವೇದವ್ಯಾಸರ ಪುತ್ರನಾಗಿ ಯಮಧರ್ಮನು ವಿದುರನಾಮದಿಂದ ಅವತರಿಸಿದನು. ವಿದುರನು ದಾಸೀಪುತ್ರನು. ವಿಚಿತ್ರವೀರ್ಯನಿಗೆ ಅಂಬಿಕೆ ಮತ್ತು ಅಂಬಾಲಿಕೆ ಎಂಬ ಇಬ್ಬರು ಪತ್ನಿಯರು. ವೇದವ್ಯಾಸರ ತಾಯಿಯಾದ ಸತ್ಯವತಿಯ ಮಾತಿನಂತೆ, ಅಂಬಿಕೆಯು ಧೃತರಾಷ್ಟ್ರನನ್ನು ಮತ್ತು ಅಂಬಾಲಿಕೆಯು ಪಾಂಡುರಾಜನನ್ನೂ ವೇದವ್ಯಾಸರ ಸ್ಪರ್ಶಮಾತ್ರದಿಂದಲೇ ಪುತ್ರರನ್ನಾಗಿ ಪಡೆದರು. ಅಂಬಿಕೆಯು ವೇದವ್ಯಾಸರ ದಿವ್ಯ ತೇಜಸ್ಸನ್ನು ನೋಡಿ, ಕಣ್ಣುಮುಚ್ಚಿಬಿಟ್ಟಳು. ಅದರಿಂದ, ಧೃತರಾಷ್ಟ್ರನು ಕುರುಡನಾಗಿ ಜನಿಸಿದನು. (ಜಾತ್ಯಂಧ). ಇದರಿಂದ, ಸತ್ಯವತಿಯು ಅಂಬಿಕೆಗೆ ವೇದವ್ಯಾಸರನ್ನು ಅತಿಭಕ್ತಿಯಿಂದ ಸೇವಿಸಬೇಕೆಂದು ತಿಳಿಸಿದಳು. ಆದರೆ ಅಂಬಿಕೆಯು ಹೆದರಿಕೆಯಿಂದ ತನ್ನ ದಾಸಿಯಾದ ಶೂದ್ರಸ್ತ್ರೀಗೆ ತನ್ನಂತೆಯೇ ಅಲಂಕರಿಸಿ, ವೇದವ್ಯಾಸರ ಸನ್ನಿಧಿಗೆ ಕಳುಹಿಸಿದಳು. ಆ ದಾಸಿಯು ವೇದವ್ಯಾಸರನ್ನು ಅತ್ಯಂತ ಭಕ್ತಿಯಿಂದ ಸೇವಿಸಿದಳು. ಆ ಸೇವೆಯ ಪರಿಣಾಮವಾಗಿ, ಯಮಧರ್ಮರಾಯನೇ **ವಿದುರನೆಂಬ**–ಹೆಸರಿನಿಂದ. ಸುಪುತ್ರನಾಗಿ ಅವತರಿಸಿದನು. ಪರಮಭಗವದ್ಭಕ್ತ ನೀತಿವಿಶಾರದ ಧೃತರಾಷ್ಟ್ರ ಮತ್ತು ಧುರ್ಯೋಧನಾದಿಗಳಿಗೆ ಹಲವಾರು ವಿಧಗಳಲ್ಲಿ ನೀತಿಯನ್ನು ಉಪದೇಶಿಸಿದನು.

ಯಮನು ದಾಸೀಪುತ್ರನಾಗಿ ಹುಟ್ಟಲು ಕಾರಣವೇನೆಂದರೆ–

ಹಿಂದೆ, ಮಾಂಡವ್ಯನೆಂಬ ಋಷಿಯು ತಾನು ವಶಿಷ್ಠಮಹರ್ಷಿಗಳಿಗೆ ಸಮನಾಗಬೇಕೆಂಬ ದುರುದ್ದೇಶದಿಂದ, ತಪಸ್ಸನ್ನು ಆಚರಿಸಿದನು. ಆ ಸಮಯದಲ್ಲಿ, ಆ ದೇಶದ ರಾಜನ ಮನೆಗೆ ಕಳ್ಳರು ಬಿದ್ದು, ದ್ರವ್ಯವನ್ನು. ಅಪಹರಿಸಿದರು. ರಾಜದೂತರು ಆ ಕಳ್ಳರ ಗುಂಪನ್ನು ಅಟ್ಟಿಬಂದರು. ಆಗ, ಕಳ್ಳರು ಮಾಂಡವ್ಯರ ಆಶ್ರಮ ಪ್ರವೇಶಿಸಿಬಿಟ್ಟರು. ಮಾಂಡವ್ಯನು

ಅಸಂಪ್ರಜ್ಞಾನ ಸಮಾಧಿ ಸ್ಥಿತಿಯಲ್ಲಿದ್ದ ಕಾರಣ ವಿಷಯ ತಿಳಿಯಲಿಲ್ಲ. ರಾಜ ದೂತರು ಮಾಂಡವ್ಯನನ್ನೂ ಕಳ್ಳನೆಂಬ ಭಾವನೆಯಿಂದ ಬಂಧಿಸಿದರು. ರಾಜನು ಎಲ್ಲರಿಗೂ ಶೂಲಾರೋಪಣೆಯ ಶಿಕ್ಷೆ ವಿಧಿಸಿದನು. ಕಳ್ಳರೆಲ್ಲರೂ ಮೃತರಾದರು. ಆದರೆ,ತಪೋನಿರತನಾಗಿದ್ದ ಮಾಂಡವ್ಯನಿಗೆ ಮರಣ ಸಂಭವಿಸಲಿಲ್ಲ. ತ್ರಿಶೂಲವು ಮಾಂಡವ್ಯನ ದೇಹವನ್ನು ಹೊಕ್ಕಿತು. ಆದರಿಂದ ದೇಹವನ್ನು ಬೇರ್ಪಡಿಸಲು ಸಾಧ್ಯವಾಗದೇ, ಅಪಾನಕ್ಕೆ ಕೆಳಭಾಗದಲ್ಲಿ ಶೂಲವನ್ನು ಕತ್ತರಿಬಿಟ್ಟನು. ಶೂಲಾಗ್ರವು ಮಾಂಡವ್ಯನ ದೇಹದಲ್ಲಿಯೇ ನಿಂತಿತು. ಇದರಿಂದ ಅವನಿಗೆ **"ಅಣಿಮಾಂಡವ್ಯ"**—ನೆಂದು ಹೆಸರು ಬಂದಿತು. ಭಯದಿಂದ ತತ್ತರಿಸಿದ ರಾಜನು ಋಷಿಯ ಕ್ಷಮಾಯಾಚಿಸಿದನು. ಮಾಂಡವ್ಯನು ರಾಜನನ್ನು ಕ್ಷಮಿಸಿ, ಯೋಗಶಕ್ತಿಯಿಂದ ಯಮಧರ್ಮರಾಯನಲ್ಲಿಗೆ ಬಂದನು. ತನ್ನ ಯಾವ ತಪ್ಪಿಗಾಗಿ ಶೂಲಾರೋಪಣೆಯ ಶಿಕ್ಷೆಯಾಯಿತೆಂದು ಕೇಳಿದನು. ಮುಖ್ಯ ಕಾರಣವು, ತನ್ನ ಯೋಗ್ಯತೆಗೆ ಮೀರಿದ ವಶಿಷ್ಠರ ಸಾಮ್ಯವನ್ನು ಅಪೇಕ್ಷಿಸು ದುದು. ಆದರೂ, ಯಮದೇವರು ಇವರ ತಪಸ್ಸಿನ ಆಧಿಕ್ಯವನ್ನು ಕಳೆಯುವ ಉದ್ದೇಶ್ಯದಿಂದ,–"ನೀವು ಬಾಲ್ಯದಲ್ಲಿ ನೊಣಗಳಿಗೆ ಅಪಾನದಲ್ಲಿ ಕಡ್ಡಿಹಾಕಿ, ಹಿಂಸೆ ಮಾಡಿ ಕೊಂದಿರಿ. ಆದರಿಂದ, ಶೂಲಾರೋಪಣೆಯ ಶಿಕ್ಷೆ !"–ಎಂದು ಸುಳ್ಳು ನುಡಿದರು. ಆಗ ಮಾಂಡವ್ಯನು ಕೋಪದಿಂದ ಯಮನನ್ನು ಕುರಿತು– "ನಾನು ಬಾಲ್ಯದಲ್ಲಿ ಅಜ್ಞಾನದಿಂದ ನೊಣವನ್ನು ಕೊಂದಿರಬಹುದು. ಆದರೆ, ಅದಕ್ಕೆ ಇಂತಹ ಘೋರ ಶಿಕ್ಷೆ ಸಲ್ಲದು. ನೀನು ಯಥಾರ್ಥ ನುಡಿಯದೆ, ಸುಳ್ಳು ಹೇಳಿರುವೆ. ಆ ಕಾರಣದಿಂದ ನೀನು ಶೂದ್ರನಾಗಿ ಭೂಮಿಯಲ್ಲಿ ಜನಿಸು"— ಎಂದು ಶಾಪವಿತ್ತನು. ಆ ಕೋಪದ ಪ್ರಭಾವದಿಂದ ಮಾಂಡವ್ಯನ ತಪಸ್ಸೆಲ್ಲವೂ ನಷ್ಟವಾಯಿತು. ಆ ಕಾರಣದಿಂದ ವೇದವ್ಯಾಸರ ದೆಸೆಯಿಂದ ಶೂದ್ರಸ್ತ್ರೀಯಲ್ಲಿ ಯಮಧರ್ಮನು ವಿದುರನಾಮಕನಾಗಿ ದಾಸೀಪುತ್ರನಾಗಿ ಅವತರಿಸಿದನು. ವಿದುರನು ಶೂದ್ರನಾಗಿ ಜನಿಸಿದ್ದರೂ, ಮಹಾಜ್ಞಾನಿಯಾಗಿದ್ದನು. ಧರ್ಮ ನಿರತನಾಗಿದ್ದನು.

**5. ಸತ್ಯಜಿತು :.**

ಪ್ರಿಯವ್ರತರಾಜನ ಪುತ್ರನು ಉತ್ತಮನೆಂಬುವನು. ಪೂರ್ವದಲ್ಲಿ ಪರ

ಮಾತ್ಮನ ಬಲದ ಸ್ತನದಿಂದ ಯಾವ ಧರ್ಮನು ಜನಿಸಿದ್ದನೋ, ಅವನೇ ಸತ್ಯ ಜಿತ ಎಂಬ ಹೆಸರಿನಿಂದ ಧರ್ಮನೇ ಜನಿಸಿ, ಮೂರನೆಯ ಮನ್ವಂತರದಲ್ಲಿ ಇಂದ್ರನಾಗಿದ್ದನು. ಉತ್ತಮನೇ ಸತ್ಯಜಿತು-

**ಪ್ರಮಾಣ :-**

"ತೃತೀಯೇತ್ವಂತರೇ ಬ್ರಹ್ಮನುತ್ತಮೋ ನಾಮ ವೈ ಮನುಃ ॥
ಯಸ್ತನಾದ ಭವದ್ವಿಷ್ಣೋಃ ಸ ಧರ್ಮಸ್ತ್ವಂ ದ್ರತಾಂಗತಃ ॥
ಸತ್ಯಜನ್ನಾಮವಿಖ್ಯಾತೋ ಧರ್ಮಾದಜನಿಯಃ ಸ್ವಯಂ ॥

— ವಿಷ್ಣುರಹಸ್ಯ (ಅಧ್ಯಾಯ–27)

ಇಂತು, ಯಮಧರ್ಮನ ಅವತಾರಗಳು ನಾಲ್ಕು–(1) ಯುಧಿಷ್ಠಿರ (2) ಜಾಂಬವಂತ (3) ವಿದುರ ಮತ್ತು (4) ಸತ್ಯಜಿತು.

ಇನ್ನು ಸೂರ್ಯನ ಅವತಾರಗಳನ್ನು ತಿಳಿಸುತ್ತಾರೆ.

**6. ಸುಗ್ರೀವ :–**

ಕಪಿರಾಜನಾದ ಋಕ್ಷರಜನೆಂಬುವನು ಒಂದು ಕೊಳದಲ್ಲಿ ಸ್ನಾನಮಾಡಿ ದಾಗ, ಶಾಪದ ಪರಿಣಾಮವಾಗಿ, ಒಂದು ದಿನದ ಮಟ್ಟಿಗೆ ಸ್ತ್ರೀಯಾಗಿದ್ದನು. ಆಗ ಅಸ್ತೋನ್ಮುಖನಾಗಿದ್ದ ಸೂರ್ಯನೂ ಮತ್ತು ಅಲ್ಲಿಗೆ ಬಂದಿದ್ದ ಇಂದ್ರನೂ ಆ ಸ್ತ್ರೀಯನ್ನು ಕಂಡು ಮೋಹಿತರಾದರು. ಸೂರ್ಯನ ತೇಜಸ್ಸು ಆ ಸ್ತ್ರೀಯರ ಕುತ್ತಿಗೆಯ ಮೇಲೆ (ಗ್ರೀವ) ಬಿತ್ತು. ಅದರಿಂದ ಜನಿಸಿದ ವಾನರನೇ ಸುಗ್ರೀವನು ಇಂದ್ರನ ತೇಜಸ್ಸು ಸ್ತ್ರೀಯ ಬಾಲದ(ವಾಲ)ಮೇಲೆ ಬಿತ್ತು ವಾಲದ ದೆಸೆಯಿಂದ ಜನಿಸಿದ ವಾನರ ಪರಾಕ್ರಮನೇ ವಾಲಿಯು. ಹೀಗೆ, ಋಕ್ಷರಜನ ಮಕ್ಕಳು ವಾಲಿ ಮತ್ತು ಸುಗ್ರೀವರು. ವಾಲಿಯ ತಮ್ಮ. ಕಿಷ್ಕಿಂಧೆಯ ಯುವ ರಾಜ ತಾರನೆಂಬ ವಾನರನ ಪುತ್ರಿ ರುಮೆ ಎಂಬುವಳು ಸುಗ್ರೀವನ ಪತ್ನಿ. ಶ್ರೀ ರಾಮನೊಡನೆ ಮಿತ್ರತ್ವ. ಸುಗ್ರೀವನು ಬ್ರಹ್ಮದೇವರ ಆವಿಷ್ಟಯುತನಾಗಿದ್ದನು.

**ಪ್ರಮಾಣ :–**

"ಸುಗ್ರೀವ ಆಸೀತ್ಪರಮೇಷ್ಠಿತೇಜಸಾಯು ತೋರವಿಃ ॥"–
—ತಾತ್ಪರ್ಯನಿರ್ಣಯ-(ಅಧ್ಯಾಯ-3).

**7. ಹರಿಯ ರೂಪಾವಿಷ್ಟ ಕರ್ಣನು :–**

ಕುಂತೀದೇವಿಯು ಸೂರ್ಯಮಂತ್ರವನ್ನು ಜಪಿಸಲು, ಸೂರ್ಯನು ಅವಳಿಗೆ ದರ್ಶನಕೊಟ್ಟು, ತನ್ನ ಸಹಜವಾದ ಕರ್ಣಕುಂಡಲಗಳಿಂದಲೂ, ದಿವ್ಯವಾದ ಕವಚದಿಂದಲೂ ಕೂಡಿ ಸ್ವತೇಜದಿಂದ ಜನಿಸಿದನು. ಪೂರ್ವಜನ್ಮದಲ್ಲಿ ಸುಗ್ರೀವನಾಗಿದ್ದಾಗ, ಶ್ರೀರಾಮನ ಬಾಣದಿಂದ ವಾಲಿಯನ್ನು ಕೊಲ್ಲಿಸಿದನು. ಆ ಹತ್ಯೆಯ ಪರಿಣಾಮವಾಗಿ, ಸೂರ್ಯಸ್ವರೂಪನಾಗಿದ್ದರೂ, ಕರ್ಣನಿಗೆ ಬುದ್ಧಿ ಕೆಟ್ಟಿತ್ತು, ಅಲ್ಲದೆ, ಸಹಸ್ರವರ್ಮನೆಂಬ ದೈತ್ಯನು ಕರ್ಣನಲ್ಲಿ ಆವಿಷ್ಟನಾಗಿದ್ದ ಕಾರಣ, ಕಲಿಯಾದ ಧುರ್ಯೋಧನನ ಸಂಗವುಂಟಾಯಿತು. ಅವನ ಆಪ್ತಮಿತ್ರರಲ್ಲಿ ಒಬ್ಬನಾದನು. (ದುಷ್ಟ ಚತುಷ್ಟಯರಲ್ಲಿ ಕರ್ಣನೂ ಒಬ್ಬ). ಜನಿಸುತ್ತಲೇ, ಈತನ ಕಿವಿಗಳು ಕರ್ಣಕುಂಡಲಗಳಿಂದ ಶೋಭಿತವಾಗಿದ್ದುದರಿಂದ, "ಕರ್ಣ"–ನೆಂದು ನಾಮವಾಯಿತು. ಈ ರೀತಿ ಸೂರ್ಯನಿಗೆ (1) ಸುಗ್ರೀವ ಮತ್ತು (2) ಕರ್ಣ–ಎಂಬ ಎರಡು ಅವತಾರಗಳು. ಹರಿಯ ರೂಪಾವಿಷ್ಟನೆಂದರೆ–ಸೂರ್ಯನ ಅಂಶವೆಂದರ್ಥ (ಹರಿ–ಸೂರ್ಯ).

**8. ಅಂಗದ :–**

ಚಂದ್ರನ ಅಂಶಸಂಭೂತನೇ ಅಂಗದನು. ವಾಲಿಯಪುತ್ರ. ಪೂರ್ವದಲ್ಲಿ ಬ್ರಹ್ಮದೇವರ ಪುತ್ರನಾಗಿದ್ದ ಚಂದ್ರನೇ ಬ್ರಹ್ಮಪುತ್ರನಾದ ಅತ್ರಿಋಷಿಗಳಲ್ಲಿ ಪುತ್ರತ್ವೇನ ಅವತರಿಸಿದನು. ದತ್ತಾತ್ರೇಯಾವತಾರದಲ್ಲಿ ದತ್ತನೇ ಸ್ವಯಂ ವಿಷ್ಣುವು. ದೂರ್ವಾಸನೇ ರುದ್ರನು. ಚಂದ್ರನೇ ಬ್ರಹ್ಮನ ಪ್ರತಿನಿಧಿಯು. (ಬ್ರಹ್ಮನಿಗೆ ಅವತಾರವಿಲ್ಲವಾದ ಕಾರಣದಿಂದ), ಈ ಅವತಾರತ್ರಯ ಯುಕ್ತನಾದ ಸ್ವಯಂ ವಿಷ್ಣುವೇ ದತ್ತಾವತಾರಿಯು.

**ಪ್ರಮಾಣ :-**

"ಬ್ರಹ್ಮೋದ್ಭವಃ ಸೋಮ ಉತಾಸ್ಯ ಸೂನೋ ರತ್ರೇರಭೂತ್ಸೋಂಗವ ಏವ ಜಾತಃ ॥"–

—**ತಾತ್ಪರ್ಯನಿರ್ಣಯ–(ಅಧ್ಯಾಯ–3).** ॥19॥

★★

## ಪದ್ಯ-೨೦

**ಮೂಲ :-**

**ತರುಣಿಗಿಂತಲಿ ಪಾದಪಾದರೆ ।**
**ವರುಣ ನೀಚನು ಮಹಾಭಿಷಕ್ ದರ ।**
**ದುರ ಸುಷೇಣನು ಶಂತನುವು ನಾಲ್ವರು ವರುಣರೂಪ ॥**
**ಸುರಮುನೀ ನಾರದನು ಕಿಂಚಿತ್ ।**
**ಕೊರತೆ ವರುಣಗೆ ಅಗ್ನಿ ಭೃಗುವಜ ।**
**ಗೊರಳಪತ್ನಿ ಪ್ರಸೂತಿ ಮೂವರು ನಾರದನಿಗಧವು ॥೨೦॥**

**ಅವತರಣಿಕೆ :-**

ಪ್ರಸಕ್ತಪದ್ಯದಲ್ಲಿ ವರುಣ, ನಾರದ, ಅಗ್ನಿ–ಮೊದಲಾದವರ ವಿಚಾರವನ್ನು ತಿಳಿಸುತ್ತಾರೆ. ॥20॥

**ಪ್ರತಿಪದಾರ್ಥ:-**

**ತರಣಿಗಿಂತಲಿ** = ಸೂರ್ಯದೇವರಿಗಿಂತ, **ವರುಣ** = ವರುಣ ದೇವರು, **ಪಾದ** = ಕಾಲುಗುಣ, **ಪಾದರೆ** = ಕಾಲುಗುಣದೊಳಗೆ ಅರ್ಧ, ಅಂದರೆ, ಎಂಟನೆಯ ಒಂದು ಅಂಶ. **ನೀಚನು** = ಕಡಿಮೆಯಾದ ವನು. **ಮಹಾಭಿಷಕ್** = ಮಹಾಭಿಷಕ್ (ಮಹಾವೈದ್ಯ) ಎಂಬುದು ವರುಣನ ಮೊದಲನೆಯ ಅವತಾರವು. **ದರದುರ** = ದರ್ಧುರ ಎರಡನೆಯ ಅವತಾರವು. **ಸುಷೇಣನು** = ಸುಷೇಣನೆಂಬ ವಾನರವೈದ್ಯ. **ಶಂತನು** = ಶಂತನುಚಕ್ರವರ್ತಿ- ಹೀಗೆ ವರುಣನಿಗೆ, **ನಾಲ್ವರು ವರುಣ ರೂಪ** = ನಾಲ್ಕು ಅವತಾರಗಳು. **ಸುರಮುನೀ ನಾರದನು** = ದೇವರ್ಷಿಗಳಾದ ನಾರದರು, **ವರುಣಗೆ** = ವರುಣನಿಗಿಂತ, **ಕಿಂಚಿತ್ ಕೊರತೆ** = ಸ್ವಲ್ಪ ಭಾಗದಷ್ಟು ಕಡಿಮೆ. **ಅಗ್ನಿ** = ಅಗ್ನಿದೇವರು, **ಭೃಗುವು** = ಭೃಗುಋಷಿ ಗಳು, **ಅಜಗೊರಳಪತ್ನಿ** = ಮೇಕೆ ಕುತ್ತಿಗೆಯಿಂದ ಯುಕ್ತನಾದ ದಕ್ಷ ಪ್ರಜೇಶ್ವರನ ಹೆಂಡತಿಯಾದ, **ಪ್ರಸೂತಿ** - ಪ್ರಸೂತಿದೇವಿಯು, **ಮೂವರು** = ಅಗ್ನಿ-ಭೃಗು-ಪ್ರಸೂತಿ-ಈ ಮೂರು ಮಂದಿ, **ನಾರದರಿಗೆ** = ನಾರದ ಋಷಿಗಳಿಗಿಂತ, **ಅಧಮು** = ಅವರರು. ॥20॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ವರುಣ, ನಾರದ, ಅಗ್ನಿ-ಮೊದಲಾದವರ ತಾರತಮ್ಯ ವಿಚಾರ ಹೇಳ ತಾರೆ.

ಸೂರ್ಯದೇವರಿಗಿಂತಲೂ ವರುಣದೇವರು ಕಾಲುಗುಣ, ಪಾದದೊಳಗೆ ಅರ್ಧ ಅಂದರೆ, ಅರೆಕಾಲುಗುಣ, ಅಂತು, ಕಾಲು ಅರೆಕಾಲು ಗುಣ ಕಡಿಮೆ ಆದ ವನು. ಈ ವರುಣನ ಅವತಾರಗಳು-ಮಹಾಭಿಷಕ್ ಎಂತ ಅವತಾರ ಒಂದು,

ದರ್ದುರ ಅವತಾರ ಎರಡು. ಸುರ್ಷೇಣ–ಎಂತ ಅವತಾರ ಮೂರು. ಶಂತನು ಚಕ್ರವರ್ತಿ ಅವತಾರ ನಾಲ್ಕು. ಈ ನಾಲ್ಕು ರೂಪಗಳೂನೂ ವರುಣ ದೇವರ ಅವತಾರಗಳು. ವರುಣದೇವರ ವಿಚಾರ ಮುಗಿಯಿತು.

ಅನಂತರ, ದೇವಋಷಿಗಳಾದ ನಾರದಋಷಿಗಳು. ಪೂರ್ವೋಕ್ತ ವರುಣ ದೇವರಿಗೆ ಕಿಂಚಿತ್‌ಶಬ್ದದಿಂದ, ವೀಸಭಾಗಗುಣದಿಂದ ಕಡಿಮೆ–ಎಂತ ತಾತ್ಪರ್ಯ ಇಲ್ಲಿ ನಾರದ ಋಷಿಗಳ ವಿಚಾರ ಮುಗಿಯಿತು.

ಅನಂತರ, ಅಗ್ನಿದೇವರು, ಭೃಗುಋಷಿಗಳು, ವ್ಯಾಕಿ ಕುತ್ತಿಗಿಯಿಂ. ಯುಕ್ತನಾದ ದಕ್ಷಪ್ರಜೇಶ್ವರನ ಪತ್ನಿಯಾದ ಪ್ರಸೂತೀದೇವೇರು– ಈ ಮೂರು ಮಂದಿ, ನಾರದಋಷಿಗಳಿಗೆ ವೀಸಗುಣದಿಂದ ಅಧಮರು -ಎಂತ ತಾತ್ಪರ್ಯ. ಆದ್ದರಿಂದಲೇ, ಸಂಖ್ಯಾಗಣನ ಮಾಡಲಿಲ್ಲ. ಇಲ್ಲಿಗೆ ಹದಿನೈದನೇ ಕಕ್ಷವಾಯಿತು. ॥20॥

**೨. ಭಾವಪ್ರಕಾಶಿಕೆ :-**

ಸೂರ್ಯನಕಿಂತಲೂ ಆರು ಆಣೆಯ ಭಾಗ ಗುಣಗಳಿಂದ ವರುಣನು ಕಮಿ ಯೆನಿಸುವನು. ವರುಣನಿಗೆ 4 ಅವತಾರಗಳು. ಮಹಾಭಿಷಕ್–ಎಂದು ರಾಜನಾಗಿ ಜನಿಸಿದುದು ಒಂದು ರೂಪವು. ವರುಣನು ರಾಜನಾಗಿ ಹುಟ್ಟಲು ಕಾರಣವೇನೆಂದರೆ - ಮಹಾಭಾರತ ತಾತ್ಪರ್ಯನಿರ್ಣಯದ 11ನೆಯ ಅಧ್ಯಾಯ ದಲ್ಲಿ-"ಪೂರ್ವೋದಧೇಸ್ತೀರಗತೇಬ್ಜ ಸಂಭವೇ ಗಂಗಾಯುತಃ ಪರ್ವಣಿಘೂರ್ಣ ತೋಬ್ಧಿಃ ॥ ಆವಾಕ್ಷಿಪತ್ತಸ್ಯ ತನೌ ನೀಜೋದಬಿಂದುಂಶ ಶಾಪೈನಮಥಾಬ್ಜ ಯೋನಿಃ ॥16॥ ಮಹಾಭಿಷಜ್ನಾಮನರೇಶ್ವರಸ್ತ್ವಂ ಭೂತ್ವಾ ಪುನಃ ಶಂತ ನುನಾಮಧೇಯಃ ॥ ಜನಿಷ್ಯಸೇ ವಿಷ್ಣುಪದೀತಥೈಷಾ ತತ್ರಾಪಿ ಭಾರ್ಯಾ ಭವತೋ ಭವಿಷ್ಯತಿ ॥17॥ ಶಾಂತೋಭವೇತ್ಯೇವಮಯೋದಿತಸ್ತ್ವಂ ತನು ತ್ವಮಾಪ್ನೋಷಿ ತತಶ್ಚ ಶಂತನುಂ ॥ ಇತೀರಿತಃ ಸೋಧನೃಪೋಬಭೂವ ಮಹಾ ಭಿಷಜ್ನಾಮ ಹರೇಃ ಪದಾಶ್ರಯಃ ॥18॥ ಸತತ್ರಭುಕ್ತ್ವಾ ಚಿರಕಾಲ ಮುರ್ವೀಂತನುಂ ವಿಹಾಯಾಪಸದೋ ವಿಧಾತುಃ ॥ ತತ್ರಾಪಿ ತಿಷ್ಠನ್ ಸುರ

ವೃಂದಸನ್ನಿಧೌ ದದರ್ಶಗಂಗಾಂಶ್ಲಥಿತಾಂಬರಾಂ ಸ್ವಕಾಂ ॥ ॥19॥ ಅವಾಙ್ಮು ಖೇಷುದ್ಯುಸದಸ್ಸು ಗಂಗಾಂ ನಿರೀಕ್ಷ್ಯಮಾಣಂ ಪುನರಾತ್ಮಸಂಭವಃ ॥ ಉವಾಚ ಭೂಮೌ ನೃಪತಿರ್ಭವಾಶು ಶಪ್ತೋಯಥಾ ತ್ವಂ ಹಿ ಪ್ರಾವಯ್ಯೆವ ॥20॥ ಇತೀರಿತಸ್ತತ್ಕ್ಷಣತಃ ಪ್ರತೀಪಾದ್ಭೂವನಾಮ್ನಾ ನೃಪತಿಶ್ಚ ಶಂತನುಃ ॥"— ಒಂದಾನೊಂದು ಪರ್ವಕಾಲದಲ್ಲಿ ಬ್ರಹ್ಮದೇವರು ಪೂರ್ವಸಮುದ್ರತೀರಕ್ಕೆ ಬಂದಿರಲು, ಸಮುದ್ರನು (ವರುಣನು) ಗಂಗಾಸಂಗಮದಿಂದಲೂ, ಪರ್ವಕಾಲವಾದುದರಿಂದಲೂ, ಬಲವಾದ ಅಲೆಗಳಿಂದ ಕೂಡಿ ಮೊರೆಯುತ್ತಾ, ಬ್ರಹ್ಮದೇವರ ಮೇಲೆ ತನ್ನ ಉದಕಬಿಂದುಗಳನ್ನು ಚೆಲ್ಲಿದನು.

ಆಗ, ಬ್ರಹ್ಮದೇವರು ಕೋಪದಿಂದ-"ಎಲೈ ವರುಣನೇ ! ನೀನು ಭೂಮಿಯಲ್ಲಿ **ಮಹಾಭಿಷೆಕ್** -ಎಂಬ ರಾಜನಾಗಿ ಹುಟ್ಟಿ, ಕೆಲವುಕಾಲವಿದ್ದು, ಆ ದೇಹವನ್ನು ಬಿಟ್ಟು, ಮತ್ತೂ ಶಂತನು, ಎಂಬ ಹೆಸರಿನಿಂದ ರಾಜಕುಮಾರನಾಗಿ, ಜನಿಸು. ಆಗಲೂ, ಈ ಗಂಗೆಯು ನಿನಗೆ ಭಾರ್ಯಳಾಗುವಳು, ಶಾಂತನಾಗು ಎಂದು ನನ್ನಿಂದ ಹೇಳಿಸಿಕೊಳ್ಳಲ್ಪಟ್ಟು ನೀನು ತನುವನ್ನು ಸ್ವೀಕರಿಸುವುದರಿಂದ, ನಿನಗೆ **ಶಂತನು**-ಎಂದು ಹೆಸರಾಗುವುದು–ಎಂದು ಬ್ರಹ್ಮದೇವರು ಶಾಪವನ್ನು ಕೊಟ್ಟರು. ಅದೇ ರೀತಿಯಾಗಿ, ಸಮುದ್ರರಾಜನಾದ ವರುಣನು ಪರಮಾತ್ಮನ ಭಕ್ತನಾಗಿ ಮಹಾಭಿಷಕ್- ಎಂಬ ಹೆಸರಿನಿಂದ ರಾಜನಾಗಿ ಹುಟ್ಟಿ, ಭೂಮಿಯಲ್ಲಿ ಬಹುಕಾಲದವರೆಗೂ ರಾಜ್ಯವನ್ನಾಳುತ್ತಿದ್ದು, ಆದೇಹವನ್ನು ಬಿಟ್ಟು, ಬ್ರಹ್ಮಲೋಕಕ್ಕೆ ಹೋಗಿ ಸೇರಿದನು. ಅಲ್ಲಿ ಒಂದು ದಿವಸ ಸಭೆಯಲ್ಲಿ ಎಲ್ಲರೂ ಕೂತಿರಲು. ಮಹಾಭಿಷಗ್ರಾಜನಿಗೆ ಹೆಂಡತಿಯಾದ ಗಂಗೆಗೆ ಆಕಸ್ಮಿಕವಾಗಿ ಉಟ್ಟವಸ್ತ್ರವು ಸೊಳ್ಳಾಗಿ ಬಿಚ್ಚಿಹೋಗಲು, ಅಲ್ಲಿ ಕೂತಿದ್ದ ದೇವತೆಗಳೆಲ್ಲರೂ "ನನಗ್ನಾಂಸ್ತ್ರೀಯಮಿಾಕ್ಷೇತ"- ವಸ್ತ್ರವಿಲ್ಲದಿರುವ ಸ್ತ್ರೀಯನ್ನು ನೋಡಬಾರದು ಎಂಬ ಪ್ರಮಾಣವನ್ನನುಸರಿಸಿ ತಲೆತಗ್ಗಿಸಿದರು. ಆಗ, ಈ ರಾಜನು ಮಾತ್ರ ಆಕೆಯನ್ನು ನೋಡುತ್ತಿದ್ದನು.

ಆಗ ಬ್ರಹ್ಮದೇವರು, ನಾನು ನಿನಗೆ ಪೂರ್ವದಲ್ಲಿ ಕೊಟ್ಟ ಶಾಪದಂತೆ,ಈಗಲೂ

ತಕ್ಷಣದಲ್ಲಿ ಭೂಮಿಯಲ್ಲಿ ರಾಜನಾಗಿ ಹುಟ್ಟು-ಎಂದು ಶಾಪವನ್ನಿತ್ತರು. ಆ ತಕ್ಷಣದಲ್ಲಿ, ಪ್ರತೀಪರಾಜನ ಮಗನಾಗಿ ಶಂತನು-ಎಂಬ ಹೆಸರಿನಿಂದ ಹುಟ್ಟಿ, ತನ್ನ ಮೊದಲಿನ ಪತ್ನಿಯಾದ ಗಂಗೆಯನ್ನೇ ಮದುವೆಯಾಗಿ, ಬಹುಕಾಲ ವಾಸ ಮಾಡುತ್ತಿದ್ದನು-ಎಂದು ಹೇಳಿರುವರು. ಈ ವಾಕ್ಯಗಳಿಂದ, ಮಹಾಭಿಷಕ್ ೧, ಶಂತನು ಚಕ್ರವರ್ತಿ ೨, ಇವೆರಡು ಅವತಾರಗಳ ಕಾರಣವೂ ಹೇಳಿದಂತಾಯಿತು. ದುರ್ದರನೆಂದು ಒಂದು ಅವತಾರವೆಂದು ಹೇಳಿರುವರು. ದುರ್ದರವೆಂದರೆ ಕಪ್ಪೆಗೆ ಹೆಸರು. ವರುಣನು ಕಪ್ಪೆಯರೂಪದಿಂದ ಪರಮಾತ್ಮನನ್ನು ಸ್ತೋತ್ರ ಮಾಡಿರುವುದನ್ನು **ಮಾಂಡೂಕೋಪನಿಷತ್ತಿನಲ್ಲಿ** ಹೇಳಿರುವರು. ಮಾಂಡೂಕೋಪನಿಷದ್ಭಾಷ್ಯದಲ್ಲಿ-"ಮಂಡೂಕರೂಪೀವರುಣ ಸ್ತುಷ್ಟಾವ ಹರಿಮವ್ಯಯಂ"

ವರುಣನು ಮಂಡೂಕ-ಅಂದರೆ,ಕಪ್ಪೆಯ ರೂಪದಿಂದ ಪರಮಾತ್ಮನನ್ನು ಸ್ತೋತ್ರಮಾಡಿದನು-ಎಂದು ಹೇಳಿರುವರು. ಆದುದರಿಂದ, ಮೂರನೆಯದು ಕಪ್ಪೆಯ ಅವತಾರವು. ಸುಷೇಣ-ಎಂಬ ಕಪಿರೂಪ ಒಂದು. ನಿರ್ಣಯ ಮೂರನೆಯ ಅಧ್ಯಾಯ ೭೨ನೆಯ ಶ್ಲೋಕದಲ್ಲಿ-"ಅಭೂತ್ಸುಷೇಣೋವರುಣಃ"॥ ವರುಣನು **ಸುಷೇಣನೆಂಬ** ಹೆಸರಿನಿಂದ ಜನಿಸಿದನು-ಎಂದು ಹೇಳಿರುವರು. ಹೀಗೆ ವರುಣನಿಗೆ ೪ ರೂಪಗಳು. ದೇವಋಷಿಯಾದ ನಾರದರು ವರುಣನಿಗಿಂತಲೂ ಸ್ವಲ್ಪ ಕಮ್ಮಿ ಎನಿಸುವರು. ನಾರದರಿಗಿಂತಲೂ ಅಗ್ನಿ, ಭೃಗುಋಷಿಗಳು, ದಕ್ಷಪ್ರಜೇಶ್ವರನ ಹೆಂಡತಿಯಾದ ಪ್ರಸೂತಿ-ಇವರು ಮೂವರು ಅಧಮರೆನಿಸುವರು. ಅಜಗೊರಳನೆಂದು ದಕ್ಷನಿಗೆ ಹೆಸರು. ಇದರ ಕಾರಣವೇನೆಂದರೆ-ರುದ್ರದೇವರನ್ನು ಅವಮಾನ ಮಾಡುವುದಕ್ಕಾಗಿ ಇವನು ಯಾಗವನ್ನು ಮಾಡುತ್ತಿರುವಾಗ, ಇವನ ಮಗಳೂ, ರುದ್ರದೇವರ ಹೆಂಡತಿಯೂ ಆದ ಸತೀದೇವಿಯು ಅಲ್ಲಿಗೆ ಬಂದಿರಲು, ರುದ್ರದೇವರ ದ್ವೇಷದಿಂದ ಆಕೆಯನ್ನು ತಿರಸ್ಕರಿಸಿದುದಲ್ಲದೆ, ಯಾಗದಲ್ಲಿ ರುದ್ರದೇವರಿಗೆ ಆಹುತಿಯನ್ನೂ ಕೊಡದೆ, ಅವಮಾನ ಮಾಡಲು, ಸತಿಯು ತಂದೆಯಾದ ದಕ್ಷನನ್ನು ಅನೇಕ ಪ್ರಕಾರ ದೂಷಿಸಿ, ಆ ದೇಹವನ್ನು ಅಲ್ಲೇ ಬಿಟ್ಟುಬಿಟ್ಟಳು.

ಇದನ್ನು ರುದ್ರದೇವರು ತಿಳಿದು, ಕೋಪದಿಂದ ಅವನ ಯಾಗವನ್ನು

ಧ್ವಂಸಮಾಡಿ, ದಕ್ಷನ ತಲೆಯನ್ನು ಕತ್ತರಿಸಿ, ಅಗ್ನಿಯಲ್ಲಿ ಆಹುತಿ ಕೊಟ್ಟುಬಿಟ್ಟರು. ಆಗ, ಬ್ರಹ್ಮದೇವರು ಬಂದು, ರುದ್ರದೇವರ ಕೋಪವನ್ನು ಶಾಂತಿಗೊಳಿಸಿ, ದಕ್ಷನು ಬದುಕುವಂತೆ ಮಾಡೆನಲು–ರುದ್ರದೇವರು ಬ್ರಹ್ಮದೇವರ ವಾಕ್ಯಪ್ರಕಾರ ಅವನನ್ನು ಬದುಕಿಸಲು, ತಲೆಯನ್ನು ಆಹುತಿಕೊಟ್ಟುದುದರಿಂದ ತಲೆಯಿಲ್ಲ ದಿರಲು, ಮೇಕೆಯ (ಆಡಿನ) ತಲೆಯನ್ನು ಅವನಿಗಿಟ್ಟು ಬದುಕಿಸಿದರು. ಆದುದ ರಿಂದ, ಅವನಿಗೆ ಅಜಗೊರಳನೆಂದು ಹೇಳಲು ಕಾರಣವಾಯಿತು. ॥೨೦॥

೩. ಭಾವದರ್ಪಣ :-

ಸೂರ್ಯನಕ್ಕಿಂತ ಆರು ಆಣೆಪಾಲು ಗುಣ ಕಡಿಮೆಯಾದ ವರುಣಗೆ ನಾಲ್ಕುವತಾರವೆಂತಲೂ, ಈತನಕಿಂತ ನಾರದರು ಕಿಂಚಿದ್ಗುಣ ಕಡಿಮೆ ಎಂತಲೂ, ಭೃಗ್ವಾದಿ ಮೂರು ಜನ ನಾರದರಿಗಧಮರೆಂತಲೂ ಹೇಳುತ್ತಾರೆ. ತರಣೇತಿ. "ಮಹಾಭಿಷಕ್ ಸುಷೇಣಶ್ಚ ಮಂಡೂಕಃ ಶಂತನುಸ್ತಥಾ । ಏತೇ ಪ್ರಾಗ್ವರುಣಾಃ ಸೂರ್ಯೋ ಪಾದಪಾದಾರ್ಧತೋಽಧಮಃ ಮಂಡೂಕರೂಪೀ ವರುಣಸ್ತು ಷ್ಟಾವ ಹರಿಮವ್ಯಯಮಿತಿ"–ತಾರತಮ್ಯೋಕ್ತೇಃ । ಬ್ರಹ್ಮದೇವರ ಅಂಕೋದ್ಭವ ರಾದ ನಾರದರ ವಿವರ. ಸುರಮುನೀ. ತದುಕ್ತಂ ತಾರತಮ್ಯೇಚ । "ವರುಣಾನ್ನಾರದೋ ನ್ಯೂನೋ ವಹ್ನೇರಪ್ಯಧಿಕೋತ್ತಮ"–ಇತಿಚ. ॥೨೦॥

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

ತರಣಿ ಇತಿ ॥ ಅಧ್ಯರ್ಧೋನಃ ನಮೋ ಮತಃ ॥ ಪಾದಪಾದಾರ್ಧತಃ ॥ ಮಹಾಭಿಷಕ್ ನಾಮ ನರೇಶ್ವರಸ್ತ್ವಂ ಭೂತ್ವಾ ಪುನಃ ಶಂತನು ನಾಮ ಧೇಯಃ ॥ ಅಭೂತ್ ಸುಷೇಣಃ ವರುಣಃ ॥ ಮಂಡೂಕರೂಪೀ ವರುಣಃ ॥ ಇಲಾಯಾಂಚ ನೃಪೋ ಭೂತ್ವಾ ಹರಿಂ ನಾರಾಯಣಾಭಿದಂ ॥ ಮಹಾಭಿಷೇಕ

ವಿಧಿನಾ ಪೂಜಯಾಮಾಸಸೋಬ್ಧಿಕಂ ॥ ಕಂ ತು ಮಸ್ತಕವಾಚಿ ಸ್ಯಾತ್ ಕಂ ಸುಖಂ ಚ ಸಮೀರಿತಮ್ ॥ ಸೂಕ್ತೋತ್ತೃಪ್ತಮಸ್ತಕತ್ವಾತ್ ತಥೋಕ್ತಃ ॥ ಸುಪೂರ್ಣಪದ್ಮಗೇ ವಿಷ್ಣೌ ಚೇಷ್ಟತೇ ಸರ್ವದಾಯತಃ ॥ ಸುಷೇಣಃ ಶಾಂತೋ ಭವೇದಿತ್ಯುದಿತೇ ಶಂತನುಃ ॥ ವರುಣ್ಣಾಗ್ನ್ಯಂತರಾ ತತ್ರನಾರದೇತ್ಯುಕ್ತಂ ಆಹ ಸುರ ಇತಿ ॥ ನರಸಂಬಂಧಿಜ್ಞಾನಂ ತ್ರಿವಿಧಂ ॥ ತ್ರಯಾಣಾಂ ದಃ ನಾರದಃ ॥ ಅಜಗೋರಳ ದಕ್ಷಃ ॥ ಭೃಗುರಗ್ನಿಸಮಃ ॥ ಪ್ರಸೂತಿಃ ವಹ್ನಿವತ್ ॥ ನನ್ವೇವಂ ಪ್ರಯಾಸೇನ ವೃತ್ತಿಪ್ರದರ್ಶನಂ ॥ ಹರಿಗುಣೋತ್ಕರ್ಷಬುದ್ಧ್ಯಪ ಯೋಗಿ ಇತ್ಯುಕ್ತವ್ ॥ ತತ್ ನ ॥ ಶಬ್ದಮುಖ್ಯಾಭಿಧೇಯೇ ಪ್ರಸಿದ್ಧ ಏವ ಗುಣಲಾಭಾತ್ ಕಿಂ ಲಬ್ಧಂ ಭವತಾ ಇತಿ ಶಂಕಾಂ ಪರಿಹರತಿ ಏವಂ ಇತಿ ॥ ಏವಮೇವ ಹಿ ಶಬ್ದಾನಾಂ ಪ್ರಸಿದ್ಧಿರಪಿ ಲೌಕಿಕೇ ॥ ವಾಚಕತ್ವಂ ಪ್ರಧಾನಸ್ಯತ್ವಿತರಸ್ಯ ತದನ್ವಯಾತ್. ॥೨೦॥

## ಕನ್ನಡಾರ್ಥ

ಸೂರ್ಯನಕಿಂತಲೂ ವರುಣನು ಒಂದೂವರೆ ಕಾಲು ಗುಣಗಳಿಂದ- ೩/೪ ಕಡಿಮೆಯವನು. ಪಾದಾರ್ಧದಿಂದ ಪಾದದಿಂದ ಕಡಿಮೆಯವನು, ಎಂದು "ಅಧ್ಯರ್ಧೋನಃ ಸಮೋ ಮತಃ"-ವಚನವಿದೆ. ವರುಣನಿಗೆ ನಾಲ್ಕು ಅವತಾರ ಗಳು—(೧) ಮಹಾಭಿಷಕ್ (೨) ಸುಷೇಣ (೩) ಮಂಡೂಕ (೪) ಶಂತನು ಎಂದು. ಬ್ರಹ್ಮದೇವರು ಪರ್ವಕಾಲದಲ್ಲಿ ಪೂರ್ವತೀರದ ಸಮುದ್ರಕ್ಕೆ ಹೋಗಿದ್ದರು. ಆಗ ವರುಣನು ಅವರನ್ನು ಲಕ್ಷೀಕರಿಸದೆ, ತನ್ನ ಪತ್ನಿಯಾದ ಗಂಗಾದೇವಿಯೊಡನೆ ಸಂಗತನಾಗಿ ತರಂಗಗಳನ್ನು ಉಕ್ಕಿಸಿದನು. ಅದರಿಂದ ಬಹ್ಮದೇವರ ಮೈಮೇಲೆ ನೀರನ್ನು ಎರಚಿದನು. ಈ ನಿಮಿತ್ತದಿಂದ ಕುಪಿತರಾಗಿ ಬ್ರಹ್ಮದೇವರು ಶಪಿಸಿದರು—"ಮಹಾಭಿಷಕ್-ಎಂಬ ಹೆಸರಿನಿಂದ ಭೂಮಿಯಲ್ಲಿ ಇಳಿ; ಮತ್ತೆ ಶಂತನುನಾಮಕನಾಗಿ ಅವತರಿಸು", ಹೀಗಿರುವ ಬಹ್ಮಶಾಪದಿಂದ ವರುಣನು ಮಹಾಭಿಷಕ್-ನಾಮಕ ರಾಜನಾದನು. ವರುಣನು ಭೂಮಿಯಲ್ಲಿ ರಾಜನಾಗಿ, ನಾರಾಯಣರೂಪೀಹರಿಯನ್ನು ಮಹಾಭಿಷೇಕವಿಧಿಯಿಂದ ಪೂಜಿಸಿ ದನು. ಅವನೇ ಪುನಃ ಶಂತನು ರಾಜನಾದನು. ರಾಗದಿಂದ ಬಹ್ಮದೇವರಿಗೆ

ಶಿಥಿಲವಾದ ವಸ್ತ್ರವುಳ್ಳಗಂಗಾವಿಲಾಸವನ್ನೇ ತೋರಿಸಿದ್ದರಿಂದ, ೨ನೆಯ ಸಲ ಶೀಘ್ರವಾಗಿ ರಾಜನಾಗೆಂದು ಶಾಪವಿತ್ತರು. ಈ ನಿಮಿತ್ತದಿಂದ, ಶಂತನು ರಾಜನಾದನು. ವರಣನು ಮಂಡೂಕರೂಪಿಯಾದವನೆಂದು ಉಪನಿಷತ್ತಿನಲ್ಲಿ ಹೇಳಲಾಗಿದೆ. ಮಂಡ = ಸೂಕ್ಷ್ಮವಾದ, ಉ = ಉತ್ಕೃಷ್ಟವಾದ, ಕಂ = ಸುಖರೂಪ ಮಸ್ತಕವುಳ್ಳವನಾದುದರಿಂದ 'ಮಂಡೂಕ' ಎಂದು ಹೆಸರು. ಪೂರ್ವದಲ್ಲಿ ಆ ವರುಣನೇ ಸುಷೇಣನಾಗಿದ್ದನು. ತಾತ್ಪರ್ಯನಿರ್ಣಯದಲ್ಲಿ 'ವರುಣನು' ಸುಷೇಣನಾದನು–ಎಂದು ಹೇಳಿರುತ್ತಾರೆ.

ಸುಪೂರ್ಣ ಷಡ್ಗುಣಗಳಿಂದ (ಜ್ಞಾನೈಶ್ವರ್ಯ-ಮುಂತಾದ ಗುಣಗಳಿಂದ) ಸಂಪನ್ನನಾದ ವಿಷ್ಣುವಿನಲ್ಲಿ ಯಾವಾಗಲೂ ಭಕ್ತಿಯುಕ್ತವಾಗಿ ವ್ಯಾಪಾರ ಮಾಡುವುದರಿಂದ, **ಸುಷೇಣನೆಂದು** ಹೆಸರು. ಬಹ್ಮದೇವರು 'ಶಾಂತೋಭವ'– ಶಾಂತನಾಗು–ಎಂದು ಹೇಳಿದುದರಿಂದ, 'ಶಂತನು'–ಎಂಬ ಹೆಸರು ಮೂಲ ರೂಪಕ್ಕೆ ಬಂದಿತು. ಶಾಪನಿಮಿತ್ತವಾದ ವರುಣನ ಎರಡನೆಯ ಜನ್ಮದಲ್ಲಿ ಅವನ ಅಪರಾಧವು ಶಾಂತವಾದುದರಿಂದ, 'ಶಂತನು'-ಎಂಬ ಹೆಸರು ಬಂದಿತು.

"ವರುಣ ಅಗ್ನಿಗಳ ನಡುವೆ ನಾರದನು"-ಎಂಬ ಪ್ರಮಾಣಾನುಸಾರವಾಗಿ ಹೇಳುತ್ತಾರೆ–'ಸುರಮುನೀ' ಎಂಬುದಾಗಿ. 'ನಾರ'-ಎಂದರೆ, ಮನುಷ್ಯಸಂಬಂಧಿ ಯಾದ ಜ್ಞಾನ ತ್ರಿವಿಧವಾದುದು. ಅದನ್ನು ನರರಿಗೆ ಉಪದೇಶದಿಂದ ಕೊಡು ವುದರಿಂದ, ನಾರದನೆಂದು ಹೆಸರು. ಅಜಗೊರಳ = ಕುರಿಮುಖದ ದಕ್ಷ. ಅವನ ಪತ್ನಿ ಪ್ರಸೂತಿ. ಭೃಗು, ಅಗ್ನಿ, ಪ್ರಸೂತಿ–ಇವರು ಸಮರು.

ಹರಿಗುಣೋತ್ಕರ್ಷಜ್ಞಾನವಾಗುವುದಕ್ಕೋಸ್ಕರ, ಶಬ್ದಗಳ ವ್ಯುತ್ಪತ್ತಿ ಯನ್ನು ವರ್ಣಿಸಬೇಕು. ಯಾಕೆಂದರೆ, ಕೇವಲ ಶಕ್ಯಾರ್ಥದಿಂದ ಆ ಗುಣಗಳು ತಿಳಿದು ಬರುವುದಿಲ್ಲ. ಆವಯವ ವ್ಯುತ್ಪತ್ತಿಯನ್ನು ತೋರಿಸಿದರೆ, ಮುಖ್ಯಾ ರ್ಥವು ಹೊರಡುವುದು. ಮುಖ್ಯಾರ್ಥವು ವಿಷ್ಣುವಿನಲ್ಲಿಯೇ ಹೊಂದುವುದು, ತಾರ್ಕಿಕ ವ್ಯುತ್ಪತ್ತಿಯನ್ನನುಸರಿಸಿದ ಅಮುಖ್ಯ ವೃತ್ತಿಯು ಇತರರಲ್ಲಿಯೂ ಅನ್ವಯಿಸುತ್ತದೆ. ॥೭೦॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ತರಣಿ–ಎಂಬ ಸೂರ್ಯನಿಗಿಂತ ಪಾದ ಪಾದರೆ, ಎಂದರೆ-ಹಾಗೂ ಬೇಳ ಪಾಲುಗುಣ ಕಡಿಮೆ, ವರುಣದೇವರು ಮಹಾಭಿಷಕ್–ಎಂಬ ದೊರೆ ಒಂದು, ದುರದುರ-ಎಂದರೆ, ಭಾರತ ಮಂಡೂಕೋಪಾಖ್ಯಾನದಲ್ಲಿ ಹೇಳಿದ ದುರ್ದರ ಅಂದರೆ, ಕಪ್ಪೆರೂಪ ಒಂದು, ಸುಷೇಣನೆಂಬ ಕಪಿನಾಯಕ ಒಂದು, ಶಂತನು ಚಕ್ರವರ್ತಿರೂಪ ಸಹ- ನಾಲ್ಕು ವರುಣನ ಅವತಾರಗಳು. ದೇವಋಷಿ ಆದ ನಾರದರು ವರುಣನಿಗಿಂತ ಸ್ವಲ್ಪ ಕಡಿಮೆ. ಅಗ್ನಿದೇವರು, ಭೃಗುಋಷಿ, ಅಜಗೊರಳನೆಂಬ ದಕ್ಷಪ್ರಜೇಶ್ವರನ ಹೆಂಡತಿಯಾದ ಪ್ರಸೂತಿದೇವಿ ಸಹ, ಮೂರು ಜನರು ನಾರದರಿಗಿಂತ ಕಡಿಮೆ. ॥20॥

# ಸರ್ವವ್ಯಾಖ್ಯಾನಸಾರಸಂಗ್ರಹ

## ೧. ವರುಣದೇವರು :–

ವರುಣನು ಸೂರ್ಯನಿಗಿಂತ (ತರಣಿಗಿಂತಲಿ) ಪಾದಪಾದರೆ ಭಾಗ ಅಧಮನು-ಅಂದರೆ, ಪಾದವೆಂದರೆ ಕಾಲುಭಾಗ, ಪಾದರೆ, ಎಂದರೆ, ಕಾಲಿನಲ್ಲಿ ಅರ್ಧ. ಅಂದರೆ, 1/8 ಭಾಗ. ಅಲ್ಲಿಗೆ ಪಾದ + ಪಾದರೆ = ಕಾಲುಭಾಗ + ಕಾಲನಲ್ಲಿ ಅರ್ಧಭಾಗ $= 1/4 + 1/8 = 3/8$ ಭಾಗವಾಯಿತು. (ಹಿಂದಿನ ರೂಪಾಯಿ ಆರಾಣೆ ಭಾಗದಷ್ಟು. ರೂಪಾಯಿ $= 16$ ಆಣೆಗಳು. ಅಲ್ಲಿಗೆ $4 + 2 = 6$ಆಣೆ ಭಾಗವಾಯಿತು.)

ವರುಣದೇವರಿಗೆ ನಾಲ್ಕು ಅವತಾರಗಳು.

## ೨. ಮಹಾಭಿಷಕ್ :–

ಒಂದು ವರ್ಷಾಕಾಲದ ಸಮಯ, ಆಗ ಬ್ರಹ್ಮದೇವರು ಪೂರ್ವ

ಸಮುದ್ರತೀರಕ್ಕೆ ಸ್ನಾನಾರ್ಥವಾಗಿ ಬಂದರು. ಸಮುದ್ರರಾಜನು (ವರುಣನು) ಬಲವಾದ ಅಲೆಗಳಿಂದ ಕೂಡಿ, ಬ್ರಹ್ಮದೇವರ ತಲೆಯ ಮೇಲೆ ಸಮುದ್ರೋದಕ ವನ್ನು ಎರಚಿದನು. ಕೋಪಗೊಂಡ ಬ್ರಹ್ಮದೇವರು, ವರುಣನಿಗೆ ಭೂಮಿ ಯಲ್ಲಿ ಜನಿಸೆಂದು ಶಾಪವಿತ್ತರು. ಅದರಂತೆ, ವರಣನು **ಮಹಾಭಿಷಕ್**-ಎಂಬ ರಾಜನಾಗಿ ಭೂಮಿಯಲ್ಲಿ ಜನಿಸಿ. ಕೆಲವು ಕಾಲವಿದ್ದು, ನಂತರ ದೇಹದಹತ್ಯಾಗ ಮಾಡಿದನು. ಮಹಾಭಿಷಕ್-ಎಂಬ ರಾಜನೇ ವರುಣನ ಪ್ರಥಮಾವತಾರವು.

**೩ ದರದುರ :–**

ದರದುರ- ಅಥವಾ ದುರದುರ–ಎಂದರೆ ಕಪ್ಪೆ (ಮಂಡೂಕ) ಎಂದರ್ಥ. ವರುಣನು ಕಪ್ಪೆಯ ರೂಪದಿಂದ ಶ್ರೀಹರಿಯನ್ನು ಸ್ತುತಿಸಿದನು. ಈ ವಿಷಯವು **ಮಾಂಡೋಕೋಪನಿಷತ್ತಿನಲ್ಲಿ** ಉಕ್ತವಾಗಿದೆ.

"ಮಂಡೂಕರೂಪೀ ವರುಣಸ್ತುಷ್ಟಾವ ಹರಿಮವ್ಯಯಮಿತಿ"- ಇದರಿಂದ, ವರುಣನಿಗೆ **ದುರ್ಧರನೆಂದು** ಹೆಸರು. ವರುಣನ **ಮಂಡೂಕರೂಪವು** ದ್ವಿತೀಯಾವತಾರವು.

ಧರ್ಮಸಂಸ್ಥಾಪನೆಗಾಗಿ, ಶ್ರೀಹರಿಯು ದೇವತೆಗಳಿಂದ ಪ್ರಾರ್ಥ್ಯಮಾನ ನಾಗಿ, ಶ್ರೀರಾಮನಾಗಿ ಅವತರಿಸಿದನು. ಆಗ-ಸಕಲದೇವತೆಗಳೂ ಶ್ರೀಹರಿಯ ಆದೇಶದಂತೆ ವಾನರ, ಭಲ್ಲೂಕಗಳಾಗಿ ಅವತರಿಸಿದರು. ಆ ಸಮಯದಲ್ಲಿ, ವರುಣನು **ಸುಷೇಣವೆಂಬ** ಹೆಸರಿನಿಂದ ವಾನರನಾಗಿ ಅವತರಿಸಿದನು. ಸುಷೇಣನು ಕಪಿವೈದ್ಯನು. ಇಂದ್ರಜಿತ್ತುವಿನ ಬಾಣಪ್ರಯೋಗದಿಂದ ಲಕ್ಷ್ಮಣನು ಮೂರ್ಛಿತನಾಗಲು, ಆಂಜನೇಯನಿಂದ ಗಂಧಮಾದನ ಪರ್ವತವನ್ನು ತರಿಸಿ, ಸಂಜೀವಿನೀ ಮೂಲಿಕೆಯನ್ನು ಪ್ರಯೋಗಿಸಿದ ಪ್ರಸಂಗ ರಾಮಾಯಣ ದಲ್ಲಿದೆ. ಷಡ್ಗುಣೈಶ್ವರ್ಯ–ಸಂಪನ್ನನಾದ ಶ್ರೀವಿಷ್ಣುವಿನಲ್ಲಿ ನಿರಂತರ ಭಕ್ತಿಯುಳ್ಳವನಾದ್ದರಿಂದ, **ಸುಷೇಣನೆಂಬ** ನಾಮ. ಸುಷೇಣನು ವಾಲಿಯ ಮಾವ, ತಾರೆಯ ತಂದೆ,

**೫. ಶಂತನು :-**

ಬ್ರಹ್ಮದೇವರ ಶಾಪದಿಂದ ವರುಣನು **ಮಹಾಭಿಷಕ್**-ಎಂಬ ನಾಮ ದಿಂದ ಭೂಮಿಯಲ್ಲಿ ಅವತರಿಸಿ, ದೇಹತ್ಯಾಗಾನಂತರ, ಮತ್ತೆ **ಶಂತನು** ಚಕ್ರವರ್ತಿಯಾಗಿ ಅವತರಿಸಿದನು. ವರುಣನು ಬ್ರಹ್ಮಲೋಕವನ್ನು ಸೇರಿದನಂತರ ಒಂದು ದಿನ ಸಭೆಯಲ್ಲಿ ಕುಳಿತಿರುವಾಗ, ಗಂಗೆಯು ಉಟ್ಟಿದ್ದ ವಸ್ತ್ರವು ಸಡಿಲ ವಾಗಿ ಬಿಚ್ಚಿಹೋಗಲು, ಅಲ್ಲಿ ಕೂತಿದ್ದ ದೇವತೆಗಳೆಲ್ಲರೂ ನಗ್ನಸ್ತ್ರೀಯನ್ನು ನೋಡಬಾರದೆಂದು ತಲೆತಗ್ಗಿಸಿದರು. ಆದರೆ, ಮಹಾಭಿಷೇಕ್ ರಾಜನು ಮಾತ್ರ ಗಂಗೆಯನ್ನು ನೋಡುತ್ತಿದ್ದನು. ಆಗ, ಬ್ರಹ್ಮದೇವರು ಕುಪಿತರಾಗಿ, ಮಹಾಭಿಷೇಕ್‌ನಿಗೆ ಪುನಃ ಭೂಮಿಯಲ್ಲಿ ಜನಿಸುವಂತೆ ಶಾಪವಿತ್ತರು. ಅನಂತರ, ವರುಣನು ಪ್ರತೀಪರಾಜನ ಮಗನಾಗಿ ಶಂತನು ಎಂಬ ಹೆಸರಿನಿಂದ ಜನಿಸಿದನು. ಗಂಗಾದೇವಿಯನ್ನೇ ಲಗ್ನವಾಗಿ, ಬಹುಕಾಲ ವಾಸವಾಗಿದ್ದನು. ಬ್ರಹ್ಮದೇವರು- "ಶಾಂತೋಭವ"- ಅಂದರೆ, "ಶಾಂತನಾಮು" ಎಂದು ಹೇಳಿದ್ದರಿಂದ "**ಶಂತನು**" ಎಂಬ ಹೆಸರಾಯಿತು. ವರುಣನು ಚಂದ್ರವಂಶದ ಪ್ರತೀಪರಾಜನಲ್ಲಿ ಪುತ್ರತ್ವೇನ ಅವತರಿಸಿದನು. ಸುನಂದೆ ಶಂತನುವಿನ ತಾಯಿ. ದೇವಾಪಿ ಮತ್ತು ಬಾಹ್ಲೀಕ ರೆಂಬುವರು ಶಂತನುವಿನ ಸಹೋದರರು.

**ಪ್ರಮಾಣ :-**

"ಮಹಾಭಿಷಕ್ ಸುಷೇಣಶ್ಚ ಮಂಡೂಕಃ ಶಂತನುಸ್ತಥಾ ।
ಏತೇ ಪ್ರಾಗ್ವರುಣಾಃ ಸೂರ್ಯೋ ಪಾದ ಪಾದಾರ್ಧತೋಽ ಧಮಃ ॥"

**—ತಾರತಮ್ಯಕೌಸ್ತುಭೇ :-**

ಇಂತು, ವರುಣನಿಗೆ (1) ಮಹಾಭಿಷಕ್ (2) ದರದುರ-ಎಂಬ ಮಂಡೂಕ. (3) ಸುಷೇಣ ಮತ್ತು (4) ಶಂತನು-ಎಂಬ ನಾಲು ಅವತಾರಗಳು.

ಇನ್ನು ನಾರದಮುನಿಗಳ ವಿಚಾರ ತಿಳಿಸುತ್ತಾರೆ.

## ೬. ನಾರದ–

ನಾರದರು ಬ್ರಹ್ಮದೇವರ ತೊಡೆಯಿಂದ ಜನಿಸಿದರು, (ಬ್ರಹ್ಮನ ಅಂಕೋದ್ಭವರು). ನಾರಂ=ದೋಷರಹಿತವಾದ ಜ್ಞಾನ. ದ=ಕೊಡುವವರು. ಇದರಿಂದ, **ನಾರದ**–ರೆಂಬ ನಾಮಾಂಕಿತ. ತ್ರಿಲೋಕಸಂಚಾರಿಗಳು. ಶ್ರೀಹರಿಕಾರ್ಯಸಾಧಕರು. ಸಕಲದೇವ, ಮಾನವ, ದಾನವರಿಂದಲೂ ಮಾನ್ಯರು. "ಮಹತೀ"– ಇವರ ಕರವೀಣೆ. ದೇವರ್ಷಿಗಳಾದ್ದರಿಂದ, **ಸುರಮುನೀ**–ಎಂದಿದ್ದಾರೆ–ದಾಸರಾಯರು. ನಾರದರು ಆಜನ್ಮ ಬ್ರಹ್ಮಚಾರಿ. ಸ್ವಾಯಂಭುವಮನ್ವಂತರದಲ್ಲಿ ಬ್ರಹ್ಮನ ಹತ್ತುಮಂದಿ ಪುತ್ರರಲ್ಲಿ ಕಡೆಯುವನು.

"ಮರೀಚಿರತ್ರ್ಯಂಗಿಸೌ ಪುಲಸ್ತ್ಯಃ ಪುಲಹಃ ಕ್ರತುಃ !
ಭೃಗುರ್ವಸಿಷ್ಠೋ ದಕ್ಷಶ್ಚ ದಶಮಸ್ತತ್ರ ನಾರದಃ ॥

**–ಭಾಗವತ ಮತ್ತು ಮತ್ಸ್ಯಪುರಾಣ ಪ್ರಮಾಣ (ಅಧ್ಯಾಯ-2)**

ಮರೀಚಿ– ಅತ್ರಿ– ಅಂಗೀರಸ– ಪುಲಸ್ತ್ಯ– ಪುಲಹ– ಕ್ರತು– ಭೃಗು– ದಕ್ಷ– ವಸಿಷ್ಠ ಮತ್ತು ನಾರದ– ಇವರು ಬ್ರಹ್ಮನ ದಶಪುತ್ರರು.

ವರುಣನಿಗಿಂತ ನಾರದ ಮುನಿಯು ಕಿಂಚಿತ್ ಅಧಮನು. (ವೀಸಭಾಗ)

## ೭. ಅಗ್ನಿ–

ಅಗ್ನಿಯು ಆಗ್ನೇಯ ದಿಕ್ಕಿಗೆ ಅಧಿದೇವತೆ. ಇದರಿಂದ ಆ ದಿಕ್ಕಿಗೆ"ಆಗ್ನೇಯು"-ಎಂದು ಹೆಸರು- (ವಿದಿಕ್ಪಾಲಕ). ತತ್ತ್ವಾಭಿಮಾನಿ ದೇವತೆ. ವಾಗಿಂದ್ರಿಯಾಭಿಮಾನಿ, ಮತ್ತು ತೇಜೋತತ್ತ್ವಕ್ಕೆ ಅಭಿಮಾನಿ. ಋಗ್ವೇದದಲ್ಲಿ ಪ್ರಥಮ ದೇವತೆ. ವಿರಾಟ್‌ಪುರುಷನ ಮುಖದಿಂದ ಜನಿಸಿದವ. ದಕ್ಷಬ್ರಹ್ಮನ ಪುತ್ರಿ

ಸ್ವಾಹಾದೇವಿ ಈತನ ಪತ್ನಿ. ಸ್ವಾಹಾ ಮತ್ತು ಸ್ವಧಾ–ಎಂಬ ಇಬ್ಬರು ಅಗ್ನಿಯ ಮಡದಿಯರು. ಯಾಗಗಳಲ್ಲಿ ದೇವತೆಗಳಿಗೆ ಹವಿಸ್ಸನ್ನು ಒಯ್ಯುವವನು. ಇದರಿಂದ, ಅಗ್ನಿಗೆ "ಅಮರಾಸ್ಯ" ಮತ್ತು "ಹುತವಹ"- ನೆಂದು ಹೆಸರು. ಟಗರು ಈತನ ವಾಹನ.

## ೮. ಭೃಗು

ಸರಸ್ವತೀತೀರದಲ್ಲಿ ನಡೆಯುತ್ತಿದ್ದ ಸತ್ರಯಾಗದಲ್ಲಿ ನಾರದರಿಂದ ಆದೇಶಿತರಾಗಿ, ತ್ರಿಮೂರ್ತಿಗಳ ಸ್ಥಾನಗಳಿಗೆ ಯೋಗಶಕ್ತಿಯಿಂದ ಧಾವಿಸಿ, ಶ್ರೀಹರಿಯೇ ಸರ್ವೋತ್ತಮನೆಂದು ಲೋಕಕ್ಕೆ ಸಾರಿದ ಮಹರ್ಷಿ. ಬ್ರಹ್ಮನ ಪುತ್ರನು. ಸ್ವಾಯಂಭುವಮನ್ವಂತರದವನು. ಕವಿ ಮತ್ತು ಚ್ಯವನ ಇಬ್ಬರು ಪುತ್ರರು. ಖ್ಯಾತಿ–ಎಂಬಾಕೆ ಭೃಗುವಿನ ಪತ್ನಿ. ಖ್ಯಾತಿಯಲ್ಲಿ ಲಕ್ಷ್ಮಿ ಅವತರಿಸಿದಳು. ಇದರಿಂದ ಲಕ್ಷ್ಮಿಗೆ "ಭಾರ್ಗವೀ"– ಎಂದು ಹೆಸರು. ಪರಶುರಾಮನೂ ಭೃಗುಕುಲೋತ್ಪನ್ನನೇ. ಇದರಿಂದ "ಭಾರ್ಗವ"–ನೆಂಬ ಅಭಿಧಾನ.

## ೯. ಅಜಗೊರಳಪತ್ನಿ ಪ್ರಸೂತಿ:–

ದಕ್ಷಪ್ರಜೇಶ್ವರನು ತನ್ನ ಅಳಿಯನಾದ ಮಹರುದ್ರ ದೇವರನ್ನು ಅವಮಾನಪಡಿಸಿದನು. ಇದರಿಂದ, ಕುಪಿತರಾದ ರುದ್ರದೇವರಿಂದ ದಕ್ಷಯಜ್ಞ ಧ್ವಂಸ. ಆ ಅವಾಂತರದಲ್ಲಿ ದಕ್ಷನ ತಲೆ ಕತ್ತರಿಸಲ್ಪಟ್ಟಿತು. ಯಜ್ಞದೀಕ್ಷಿತನಾಗಿದ್ದ ದಕ್ಷನಿಗೆ ಋಷಿಗಳು ಹೋತನ ತಲೆಯನ್ನು ಇಟ್ಟು, ಬದುಕಿಸಿದರು. ಇದರಿಂದ, ಮೇಕೆಯ ಕತ್ತುಳ್ಳ ದಕ್ಷನಿಗೆ ಅಜಗೊರಳ– ನೆಂದು ಹೆಸರು. ಅಂದರೆ, ಅಜ = ಮೇಕೆ, ಕೊರಳ = ಕತ್ತು. ದಕ್ಷಪ್ರಜಾಪತಿಯ ಪತ್ನಿಯೇ ಪ್ರಸೂತಿದೇವಿಯು.

ಅಗ್ನಿ– ಭೃಗು– ಪ್ರಸೂತಿ– ಈ ಮೂವರೂ ಸಮಾನಕಕ್ಷಾಪನ್ನರು- ಇವರು ನಾರದ ಮುನಿಗಿಂತ ಅಧಮರು. ॥20॥

★★

## ಪದ್ಯ-೨೧

**ಮೂಲ :-**

ನೀಲ ದುಷ್ಟದ್ಯುಮ್ನ ಲವ ಈ ।
ಲೇಲಿಹಾನನ ರೂಪಗಳು ಭೃಗು ।
ಕಾಲಿಲೊದ್ದದರಿಂದ ಹರಿಯನು ವ್ಯಾಧನೆನಿಸಿದನು ॥
ಏಳು ಋಷಿಗಳಿಗುತ್ತಮರು ಮುನಿ ।
ಮೌಳಿ ನಾರದಗಧಮ ಮೂವರು ।
ಗಾಳಿಯುತ ಪ್ರಹ್ಲಾದ ಬಾಹ್ಲೀಕರಾಯನೆನಿಸಿದನು ॥೨೧॥

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಅಗ್ನ್ಯಾದಿದೇವತೆಗಳ ಅವತಾರ ವಿಚಾರವನ್ನು ತಿಳಿಸುತ್ತಾರೆ. ॥21॥

**ಪ್ರತಿಪದಾರ್ಥ :-**

**ಲೇಲಿಹಾನನ** = ಅಗ್ನಿದೇವರ, **ರೂಪಗಳು** = ಅವತಾರಗಳು, **ನೀಲ** = ನೀಲನಾಮಕನಾದ ಕಪಿ, **ದೃಷ್ಟದ್ಯುಮ್ನ** = ದೃಷ್ಟದ್ಯುಮ್ನನೆಂಬ ಅವತಾರ, **ಲವ** = ಶ್ರೀರಾಮಚಂದ್ರನ ಪುತ್ರ ಲವನಾಮಕನು. **ಈ** = ಈ ಮೂರು ಅವತಾರಗಳು ಅಗ್ನಿಗೆ, **ಭೃಗು** = ಭೃಗುಋಷಿಗಳು, **ಹರಿಯನು** = ಶ್ರೀಮನ್ನಾರಾಯಣನನ್ನು, **ಕಾಲಲೊದ್ದದರಿಂದ** = ಪಾದ ತಾಡನಮಾಡಿದ ಪ್ರಯುಕ್ತ, **ವ್ಯಾಧನೆನಿಸಿದನು** = ಬೇಡರ ಜನ್ಮದಲ್ಲಿ ಅವತರಿಸಿದನು. **ಏಳು ಋಷಿಗಳಿಗೆ ಉತ್ತಮರು** = ೧೪ನೆಯ ಕಕ್ಷಾವನ್ನದ

ವರಾದ ಅಗ್ನಿ , ಭೃಗು ಮತ್ತು ಪ್ರಸೂತಿ- ಈ ಮೂವರೂ 26ನೆಯ ಕಕ್ಷ ದವರಾದ ಸಪ್ತಋಷಿಗಳಿಗಿಂತ ಉತ್ತಮರು. **ಮೂವರು** = ಅಗ್ನಿ, ಭೃಗು ಮತ್ತು ಪ್ರಸೂತಿ-ಈ ಮೂರು ಮಂದಿ, **ಮುನಿಮೌಳಿ** = 14ನೆಯ ಕಕ್ಷದ ಋಷಿಶ್ರೇಷ್ಠರಾದ. **ನಾರದಗೆ** = ನಾರದಮುನಿಗಳಿಗಿಂತ, **ಅಧಮ** = ಅವರರು. **ಗಾಳಿಯುತ** = ವಾಯುದೇವರ ಆವೇಶಯುಕ್ತನಾದ, **ಪ್ರಹ್ಲಾದ** = ಕರ್ಮಜದೇವತೆಯಾದ ಪ್ರಹ್ಲಾದನು, **ಬಾಹ್ಲೀಕರಾಯ ನೆನಿಸಿದ** = ಬಾಹ್ಲೀಕರಾಜನೆಂದು ಕರೆಸಿ, ಅವತಾರ ಮಾಡಿದನು. ॥21॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–**

ಇಪ್ಪತ್ತನೇ ಶ್ಲೋಕಗತ ಅಗ್ನ್ಯಾದಿದೇವತೆಗಳ ಅವತಾರ ಹೇಳತಾರೆ.

ಈ ಪೂರ್ವೋಕ್ತ ಅಗ್ನಿದೇವರಿಗೆ ಅವತಾರಗಳು ಮೂರು. ನೀಲ ನಾಮಕ ಕಪಿ ಅವತಾರ. ದೃಷ್ಟದ್ಯುಮ್ನ-ಎಂಬ ಅವತಾರ, ಶ್ರೀರಾಮಚಂದ್ರ ದೇವರ ಪುತ್ರ ಲವನಾಮಕನು, ಅಂತು ಮೂರು ಅವತಾರಗಳು. ಇಲ್ಲಿಗೆ ಅಗ್ನಿದೇವರ ವಿಚಾರ ಮುಗಿಯಿತು.

ಅನಂತರ ಭೃಗುಋಷಿಗಳು. ಶ್ರೀನಾರಾಯಣದೇವರನ್ನು ಪಾದದಿಂದ ತಾಡನಮಾಡಿದ ಕಡಿಯಿಂದ, ವ್ಯಾಧ-ಎಂತ ಅವತಾರ ಮಾಡಿದವನಾಗಿ, ಶ್ರೀ ಕೃಷ್ಣದೇವರು ಪರಂಧಾಮಕ್ಕೆ ಹೋಗೋದಕ್ಕೆ, ಈ ವ್ಯಾಧನೇ ಕಾರಣನಾದ. ವ್ಯಾಧ-ಎಂತ ಅವತಾರ ಒಂಮು. ಈ ಮೂರುಮಂದಿ- 14ನೆಯ ಕಕ್ಷದವರು. ಇವರು ಇಪ್ಪತ್ತಾರನೇ ಕಕ್ಷದವರಾದ ಸಪ್ತಋಷಿಗಳಿಗಿಂತ ಉತ್ತಮರು.

ಸಪ್ತಋಷಿಗಳಿಗಿಂತ ಉತ್ತಮರಾದ ಅಗ್ನ್ಯಾದಿ ಈ ಮೂರು ಮಂದಿ, ಋಷಿಶ್ರೇಷ್ಠರಾದ ಹದಿನಾಲ್ಕನೇ ಕಕ್ಷದವರಾದ ನಾರದಋಷಿಗಳಿಗೆ ಪೂರ್ವೋಕ್ತ ಪ್ರಕಾರ ಗುಣದಿಂದ ಅಧಮರು. ಪ್ರಹ್ಲಾದನು, ಕರ್ಮಜದೇವತೆಯಾವ ಕರ್ಮಜರ ಕಕ್ಷವಾದ ಹತ್ತೊಂಭತ್ತನೇ ಕಕ್ಷದಲ್ಲಿ ಇರತಕ್ಕಾದವರಾದ ಅಗ್ನ್ಯಾದಿ ಮೂರು ಮಂದಿ ಸಂಗಡ ಸೇರೋವನಾಗಿದ್ದಾನೆ. ಉಪಾಧಿವಶಾತ್, ನೈಜವಲ್ಲ. ಇವಗೆ ನೈಜಕಕ್ಷ ಹತ್ತೊಂಭತ್ತನೇ ಕಕ್ಷ. ತದ್ಗತ ಕರ್ಮಜರಿಗೆ ಸಮಾನವಾದವನೆಂದು ತಿಳಿಯಬೇಕು. ಈ ಪ್ರಹ್ಲಾದನ ಅವತಾರ, ವಾಯುದೇವರ ಆವೇಶದಿಂದ ಯುಕ್ತವಾದ ಬಾಹ್ಲೀಕರಾಯ-ಎಂತ ಕರೆಸಿಕೊಂಡು ಅವತಾರಮಾಡೋವನಾದ. ॥21॥

## ೨. ಭಾವಪ್ರಕಾಶಿಕೆ :–

ಅಗ್ನಿಗೆ ಮೂರು ಅವತಾರಗಳು. ರಾಮಾವತಾರದಲ್ಲಿ ನೀಲನೆಂಬ ಕಪಿ ರೂಪ ಒಂದನೆಯದು. –"ನೀಲೋಗ್ನಿರಾಸಿತ್"-ಎಂದು ನಿರ್ಣಯ ವಾಕ್ಯವು. ಎರಡನೆಯದು ಧೃಷ್ಟದ್ಯುಮ್ನರೂಪವು. ನಿರ್ಣಯ 18ನೆಯ ಅಧ್ಯಾಯದಲ್ಲಿ –"ಪುತ್ರಂಚ ದ್ರೋಣಹಂತಾರಮಿಚ್ಛನ್ ವಿಪ್ರವರೌ ಯಯೌ ॥ ಯಾಜೋಪ ಯಾಜಾವಾ ನೀಯಥಾರ್ಬುದೇನ ಗವಾನ್ನೃಪಃ ॥97॥ ಚಕಾರೇಷ್ಟಿಂತು ತದ್ಭಾರ್ಯಾ ದ್ವಿಜಾಭ್ಯಾಮತ್ರ ಚಾಹುತಾ । ದ್ರುಪದಾತ್ಸುತ ಲಭ್ಧ್ಯರ್ಥಂ ಸಾಹಂಕಾರಾದ್ವ್ಯಲಂ ಬಯತ್ ॥98॥ ಕಿಮೇತಯೇತ್ಯವಜ್ಞಾಯತಾ ವುಭೌ ವಿಪ್ರ ಸತ್ತಮೌ ॥ ಅಜುಹ್ವತಾಂ ತತ್ಸುತ್ರಾರ್ಥಂ ಪತ್ನ್ಯಾಪ್ರಾಶ್ಯಂ ಹವಿಸ್ತದಾ ॥99॥ ಹುತೇಹ ವಿಷಮಂ ತಾಭ್ಯಾಂ ವೈಷ್ಣವಾಭ್ಯಾಂ ತದೈವಹಿ ॥ ದೀಪ್ತಾಂಗಾರ ನಿಭೋ ವನ್ನಿಃ ಕುಂಡಮಧ್ಯಾತ್ಸಮುತ್ಥಿತಃ ॥100॥

ಕಿರೀಟೀ ಕುಂಡಲೀ ದೀಪ್ತೋ ಹೇಮಮಾಲೀ ಮಹಾಸಿರ್ಮಾ ರಥೇ ನಾದಿತ್ಯ ವರ್ಣೇನ ನರ್ದ ದ್ರುಪದ ಮಾದ್ರವತ್ ॥ ॥101॥ ಧೃಷ್ಟತ್ವಾ ತ್ಧ್ಯೋತನತ್ವಾಚ ಧೃಷ್ಟದ್ಯುಮ್ನ ಇತೀರಿತಃ"—ದ್ರೋಣಾಚಾರ್ಯರು ಭೀಮಾ

ರ್ಜುನನಿಂದ ದ್ರುಪದರಾಜನನ್ನು ಯುದ್ಧದಲ್ಲಿ ಸೋಲಿಸಿ, ಅವನ ರಾಜ್ಯಾರ್ಧ ವನ್ನು ತಾವು ಕಿತ್ತುಕೊಂಡು, ಆತನಿಗೆ ಅರ್ಧರಾಜ್ಯವನ್ನು ಕೊಟ್ಟು ಕಳು ಹಿಸಲು, ದ್ರುಪದರಾಜನು ತನಗಾದ ಪರಾಭವದಿಂದ, ಹಗಲೂ ರಾತ್ರಿಗಳಲ್ಲಿ ಸಂತ್ರಪ್ತನಾಗಿ, ಭೀಮಾರ್ಜುನರ ಬಲವನ್ನೂ, ಅರ್ಜುನನಲ್ಲಿರುವ ಮಾರ್ದವ ಗುಣವನ್ನೂ ನೋಡಿ, ಅರ್ಜುನನಿಗೆ ಕೊಟ್ಟು ಮದುವೆ ಮಾಡಲಿಕ್ಕಾಗಿ ಒಬ್ಬ ಮಗಳನ್ನೂ, ದ್ರೋಣಾಚಾರ್ಯರನ್ನು ಕೊಲ್ಲುವ ಒಬ್ಬ ಮಗನನ್ನೂ ಪಡೆಯ ಬೇಕೆಂದು ಯೋಚಿಸಿ, ಯಾಜೋಪಯಾಜರೆಂಬ ಬ್ರಾಹ್ಮಣೋತ್ತಮರಲ್ಲಿ ಬಂದು, ಅವರಿಗೆ 10 ಕೋಟಿ ಗೋವುಗಳನ್ನು ಕೊಟ್ಟು, ಅವರನ್ನು ಕರತಂದು ತನ್ನ ಉದ್ದೇಶ ಪೂರ್ತಿಮಾಡಿಕೊಳ್ಳುವುದಕ್ಕಾಗಿ, ಇಷ್ಟಿಯನ್ನು ಮಾಡಿದನು.

ಆ ಅಣ್ಣ ತಮ್ಮಂದಿರಾದ ಯಾಜ, ಉಪಯಾಜರು ಪುತ್ರಸಂತಾನಕರ ವಾದ ಹವಿಸ್ಸನ್ನು ಅಭಿಮಂತ್ರಿಸಿ, ದ್ರುಪದರಾಜನ ದೆಶೆಯಿಂದ ಅವನ ಹೆಂಡತಿ ಯಲ್ಲಿ ಪುತ್ರನಾಗುವಂತೆ ಮಾಡಬೇಕೆಂಬ ಉದ್ದೇಶದಿಂದ,ರಾಜನ ಹೆಂಡತಿಯನ್ನು ಕರೆದರು. –"**ಬಂದೆ ತಡೀರಿ**"–ಎಂದು ಅಹಂಕಾರದಿಂದ ತನ್ನ ಅಲಂಕಾರ ವನ್ನು ಮಾಡಿಕೊಳ್ಳುತ್ತಾ ಸಾವಕಾಶವನ್ನು ಮಾಡಿದಳು. ಆಕೆಯ ಮನಸ್ಸಿ ನಲ್ಲಿ ತನ್ನನ್ನು ಬಿಟ್ಟರೆ ಮಕ್ಕಳಾಗುವುದಿಲ್ಲವೆಂತಲೂ, ತಾನು ರಾಜನ ಹೆಂಡತಿ, ಇವರು ಪುರೋಹಿತರಾದ ವೈದಿಕ ಬ್ರಾಹ್ಮಣರು ಕಾದಿರುತ್ತಾರೆ ತನಗಾಗಿ— ಎಂದು ನಿಶ್ಚಯ ಮಾಡಿದ್ದಳು. ಆ ಬ್ರಾಹ್ಮಣೋತ್ತಮರು, ಇವಳ ಅಹಂಕಾರ ವನ್ನು ತಿಳಿದು,ಈಕೆಯಿಂದ ನಮಗಾಗುವುದೇನು-ಎಂದು ಯೋಚಿಸಿ, ಆಕೆಯನ್ನು ಲಕ್ಷೀಕರಿಸದೆ, ಆಕೆಗೆ ಕೊಡಬೇಕೆಂದು ಉದ್ದೇಶಮಾಡಿರುವ ಮಗನೂ, ಮಗಳೂ, ಹುಟ್ಟುವುದಕ್ಕಾಗಿ ಅಭಿಮಂತ್ರಿತವಾದ ಎರಡು ಹವಿಸ್ಸುಗಳನ್ನೂ, ವಿಷ್ಣುಸಂಬಂಧವಾದ ಎರಡು ಮಂತ್ರಗಳಿಂದ ಅಗ್ನಿಯಲ್ಲಿ ಆಹುತಿಕೊಟ್ಟು ಬಿಟ್ಟರು. ತಕ್ಷಣದಲ್ಲಿ, ಪ್ರಜ್ವಲಿಸುವ ಅಗ್ನಿಯಂತೆ ಕಾಂತಿಸಂಪನ್ನನಾಗಿ ಅಗ್ನಿಯೇ ಕುಂಡಮಧ್ಯದಿಂದ ಹೊರಟುಬಂದನು.

ದಿವ್ಯವಾದ ಕಿರೀಟದಿಂದಲೂ, ದಿವ್ಯಕುಂಡಲಗಳಿಂದಲೂ ಪ್ರಜ್ವಲಿಸುತ್ತಾ, ಬಂಗಾರದ ಹಾರಗಳಿಂದ ಅಲಂಕೃತನಾಗಿ, ಕೈಯಲ್ಲಿ ಉತ್ತಮವಾದ ಕತ್ತಿಯನ್ನು

ಹಿಡಿದುಕೊಂಡು, ಸೂರ್ಯನಂತೆ ಪ್ರಜ್ವಲಿತವಾದ ರಥದಲ್ಲಿ ಕುಳಿತು, ಅತಿಧಾಷ್ಟ್ರ್ಯ ದಿಂದ ಈಗಲೇ ಶತ್ರುವನ್ನು ಕೊಲ್ಲುವನೋ-ಎಂದು ತೋರುವಂತೆ ಘರ್ಜಿಸುತ್ತಾ, ದ್ರುಪದರಾಜನ ಸಮೀಪಕ್ಕೆ ಬಂದನು. ಅತಿಧಾಷ್ಟ್ರ್ಯವುಳ್ಳವನಾದುದ ರಿಂದಲೂ, ಕಾಂತಿಸಂಪನ್ನನಾದುದರಿಂದಲೂ, ಧೃಷ್ಟದ್ಯುಮ್ನನೆಂದು ಅವನಿಗೆ ನಾಮಕರಣ ಮಾಡಿದರು. ಅಗ್ನಿಕುಂಡಕ್ಕೆ ಸೇರಿದ ಕಟ್ಟೆಯಿಂದ ದ್ರೌಪದಿಯು ಹುಟ್ಟಿದಳು-ಎಂದು ಹೇಳಿರುವರು. ಅಗ್ನಿಗೆ ಧೃಷ್ಟದ್ಯುಮ್ನರೂಪವು ಎರಡ ನೆಯ ಅವತಾರವೆಂದು ಇದರಿಂದ ನಿಶ್ಚಯಿಸಿದಂತಾಯಿತು. ಮತ್ತೊಂದು ಅವತಾರವು ಲವನೆಂಬ ರಾಮದೇವರ ಮಗನು.

ಇವನ ವಿಷಯದಲ್ಲಿ ಹಿಂದೆ ಇಂದ್ರನ ಅವತಾರಗಳನ್ನು ಹೇಳುವಾಗ, ಇಂದ್ರನು ಕುಶನಾಗಿಯೂ, ಅಗ್ನಿಯು ಲವನಾಗಿಯೂ, ಹೀಗೆ, ಅವಳಿ ಜವಳಿ ಗಳಾಗಿ ಕುಶಲವರೆಂಬ ಇಬ್ಬರು ಮಕ್ಕಳು ಸೀತೆಯಲ್ಲಿ ಹುಟ್ಟಿದರೆಂದು ಪ್ರಮಾ ಣವು ಉದಾಹರಿಸಲ್ಪಟ್ಟಿದೆ. ಅದೇ ಪ್ರಮಾಣವೇ ಅಗ್ನಿಯು ಲವನೆಂಬ ವಿಷಯದಲ್ಲಿ ಆಧಾರವಾಗಿರುವುದು. ಭೃಗುಋಷಿಗಳು ಬ್ರಹ್ಮ, ವಿಷ್ಣು ಮಹೇಶ್ವರರಲ್ಲಿ ಉತ್ತಮರಾರೆಂದು ಪರೀಕ್ಷಿಸುವುದಕ್ಕಾಗಿ ಹೊರಟು ಬಂದು, ಬ್ರಹ್ಮದೇವರಿಗೆ ನಮಸ್ಕಾರ ಮಾಡದೇ ಇರಲು, ಬ್ರಹ್ಮದೇವರಿಗೆ ಕೋಪ ಬಂದುದನ್ನೂ ಮತ್ತೂ ಆ ಕೋಪವನ್ನು ತಡೆದುಕೊಂಡುದನ್ನೂ ತಿಳಿದು, ರುದ್ರದೇವರ ಸಮೀಪಕ್ಕೆ ಬರಲು, ಅವರು ಪಾರ್ವತಿಯ ಸಂಭೋಗದಲ್ಲಿದ್ದವರು ಬಿಟ್ಟು, ಪ್ರೀತಿಯಿಂದ ಭೃಗುಋಷಿಯನ್ನು ಆಲಿಂಗನ ಮಾಡಿಕೊಳ್ಳುವುದಕ್ಕಾಗಿ ಬರಲು, ಭೃಗುಋಷಿಯು ನೀನು ಅಶುಭಾಚಾರನೆಂದು ಆಲಿಂಗನವನ್ನು ನಿಷೇಧಮಾಡಲು, ರುದ್ರದೇವರು ಕೋಪದಿಂದ ಭೃಗುಮುನಿಯನ್ನು ಕೊಲ್ಲಲು ಬಂದುದನ್ನೂ ನೋಡಿ, ವಿಷ್ಣುವಿನ ಸಮೀಪಕ್ಕೆ ಬಂದು, ಆತನು ಮಲಗಿರುವುದನ್ನು ಕಂಡು, ಕಾಲಿಂದ ಒದೆಯಲು, ಪರಮಾತ್ಮನು ಆದರ ದಿಂದೆದ್ದು, ಭೃಗುಮುನಿಯನ್ನು ಉಪಚರಿಸಿದುದನ್ನೂ ಕಂಡು, ಭೃಗುಮುನಿಯು ಹರಿಸರ್ವೋತ್ತಮನೆಂತಲೂ, ಬ್ರಹ್ಮದೇವರು ಮಧ್ಯಮರೆಂತಲೂ, ರುದ್ರದೇವರು ಇವರಕಿಂತಲೂ ಕಮ್ಮಿಯಾದವರೆಂತಲೂ, ಲೋಕದಲ್ಲಿ ಪ್ರಖ್ಯಾತಿಪಡಿಸಿದರೆಂದು

ಕಥೆ ಇರುವುದು. ಈ ಕಥೆಯು ಭಾಗವತದಲ್ಲೂ, ಭವಿಷ್ಯೋತ್ತರಪುರಾಣ ದಲ್ಲೂ ಸಹ ಬರುವುದು. "ಪಾದಪ್ರಹಾರದೋಷೇಣ ಭೃಗುಂತುವಾ ಧತಾಂ ಗತಂ ಸ್ವಾಜ್ಞಾಪ್ರಾಪ್ತ ವಿಮಾನೇಂದಿವಂ ನಿನ್ಯೇ ಜನಾರ್ದನಃ" ಪರಮಾತ್ಮ ನನ್ನು ಕಾಲಿನ್ಲೊದ್ದದೋಷದಿಂದ ಭೃಗುಋಷಿಯು ಜರಾ ಎಂಬ ಬೇಡನಾಗಿ ಹುಟ್ಟಿದುದನ್ನು ತಿಳಿದ ಶ್ರೀಕೃಷ್ಣನು ಆತನನ್ನು ತನ್ನ ಆಜ್ಞಾಪ್ರಕಾರ ಪ್ರಾಪ್ತ ವಾದ ವಿಮಾನದಲ್ಲಿ ಕೂಡಿಸಿ ಸ್ವರ್ಗಕ್ಕೆ ಕಳುಹಿದನು- ಎಂದು ಭಾಗವತ ಏಕಾದಶಸ್ಕಂಧದ ಕಡೆಯ ಅಧ್ಯಾಯದ ತಾತ್ಪರ್ಯದಲ್ಲಿ ಹೇಳಿರುವರು. ಅದೇ ಅಭಿಪ್ರಾಯವನ್ನೇ ಇಲ್ಲಿ ಹೇಳಿರುವರು. ಹೀಗೆ, ಅಗ್ನಿ, ಭೃಗುಋಷಿ, ಪ್ರಸೂತಿ- ಇವರು ಮೂವರೂ, ಬ್ರಹ್ಮದೇವರ ಮಕ್ಕಳಾದ. ಇದೇ 23ನೇಯ ಪದ್ಯದಲ್ಲಿ ಹೇಳುವ ಮರೀಚಿ-ಮೊದಲಾದ ಸಪ್ತಋಷಿಗಳಿಗಿಂತಲೂ ಉತ್ತಮರೆನಿಸುವರು, ನಾರದಕಿಂತಲೂ ಕಮ್ಮಿ ಎನಿಸುವರು. ಈ ಮೂವರಿಗೆ ಸಮನಾದ ಪ್ರಹ್ಲಾದನು, ವಾಯುದೇವರ ಅಂಶದಿಂದ ಕೂಡಿ ಬಾಲ್ಹೀಕರಾಜನಾಗಿ ಜನಿಸಿದನು. ಕುರುವಂಶದ ರಾಜನಾದ ಪ್ರತೀಪನಿಗೆ ದೇವಾಪಿ, ಬಾಲ್ಹಿಕ, ಶಂತನು-ಎಂದು ಮೂವರು ಮಕ್ಕಳು, ಮಗಳನ್ನು ಕೊಟ್ಟು ಮೊಮ್ಮಗನನ್ನು ತನಗೇನೇ ಕೊಡಬೇಕೆಂದು ಮೊದಲೇ ನಿಶ್ಚಯ ಮಾಡಿ ಹೆಣ್ಣು ಕೊಡುವುದಕ್ಕೆ ಪುತ್ರಿಕಾಪುತ್ರಧರ್ಮವೇದು ಹೆಸರು. ಆ ರೀತಿಯಾಗಿ ಹಸ್ತಿನಾಪುರದ ರಾಜನಾದ ಪ್ರತೀಪರಾಜನ ಮಗನಾದ ಬಾಲ್ಹೀಕ ರಾಜನು ತನ್ನ ತಾಯಿಗೆ ತಂದೆಯಾದ ಬಾಲ್ಹೀಕದೇಶಾಧಿಪತಿಗೆ ಪುತ್ರಿಕಾಪುತ್ರ ಧರ್ಮದಿಂದ ದತ್ತನಾಗಿ ಆ ದೇಶಾಧಿಪತಿಯಾದನು. ಹಿರಣ್ಯಕಶಿಪುವಿನ ಮಗನಾದ, ಮಹಾಭಗವದ್ಭಕ್ತನಾದ ಪ್ರಹ್ಲಾದನು ವಾಯುದೇವರ ಆವೇಶ ದಿಂದ ಕೂಡಿದ ಮಹಾಬಲಾಢ್ಯನಾಗಿ ಬಾಲ್ಹೀಕನೆಂಬ ಹೆಸರಿನಿಂದ ಹುಟ್ಟಿ ದನು. ಇವನು ಹುಟ್ಟಿ ಭೂಸ್ಪರ್ಶವಾಗಲು ಭೂಮಿಯ ಆ ಭಾಗವು ಬಿರಿದು ಹೋಯಿತು. ಪರಮಾತ್ಮನು ಭೂಮಿಯಲ್ಲಿ ಕೃಷ್ಣಾವತಾರ ಮಾಡಿ, ಭೂ ಭಾರಹರಣ ಮಾಡುವುದರಲ್ಲಿ, ತಾನೂ ಅಂಗಭೂತನಾಗಿ ಭೂಭಾರಹರಣಕ್ಕೆ ಸಹಾಯರೂಪವಾದ ಸೇವೆಯನ್ನು ಮಾಡಬೇಕೆಂಬವದೇ ಇವನ ಉದ್ದೇಶವು.

ಪ್ರತೀಪರಾಜನ ಮಗನಾಗಿ ಹುಟ್ಟಿ, ಬಾಲ್ಹೀಕದೇಶಕ್ಕೆ ಅಧಿಪತಿಯಾದನು-ಎಂದು ಹೇಳಿರುವರು. ॥21॥

**೩. ಭಾವದರ್ಪಣ :-**

ಅಗ್ನಿಗೆ ನೀಲ-ಎಂಬ ಕಪಿ ಅವತಾರ ಎಂತಲೂ, ಧೃಷ್ಟದ್ಯುಮ್ನ ಎಂತಲೂ, ಶ್ರೀರಾಮಪುತ್ರ ಲವನೆಂತಲೂ-ಮೂರು ಅವತಾರವೆಂದು ಹೇಳುತ್ತಾರೆ. ನೀಲೇತಿ, ಈ ಅಗ್ನಿಗೆ ಲೇಲಿಹಾನನೆಂದು ಪದ್ಯದಲ್ಲಿ ಉಕ್ತವಾಗಿರುತ್ತದೆ. "ಲೇಲಿಹಾನೋ ದ್ವಿರಸನೋ".ಎಂದು ಅಮರಸಿಂಹನು ಸರ್ಪಪರ ಅರ್ಥ ಮಾಡಿರುತ್ತಾನೆ. ಶ್ರೀವೇದವ್ಯಾಸದೇವರಿಂದ ರಚನೆ ಮಾಡಲ್ಪಟ್ಟ ಶಬ್ದರತ್ನಾವಳಿಯೆಂಬ ಅಭಿಧಾನದಲ್ಲಿ ಅಗ್ನಿಪರವಾಗಿ ಅರ್ಥ ಇರುತ್ತದೆ. ಆದಕಾರಣ, ತದ್ರೀತ್ಯಾನೇ ಪದ್ಯೋಕ್ತಿ ಸಿದ್ಧವೆಂದು ತಿಳಿಬೇಕು. "ಲೇಲಿಹಾನಃ ಸಪ್ತಜಿಹ್ವೋ ಮೇಷವಾಹಃ ಸ್ವಹಾಪತಿಃ ವೀತಿಹೋತ್ರೋ ಬರ್ಹಿಶುಷ್ಮಾ ಕೃಶಾನುಃ ಪಾವಕೋನಲ"-ಇತಿ ಶಬ್ದರತ್ನಾವಲ್ಯಾಭಿದಾನಾತ್ । ಬ್ರಹ್ಮನ ತ್ವಗುತ್ಪನ್ನನಾದ ಭೃಗುಋಷಿಗೆ ಶ್ರೀಹರಿಯನ್ನು ಪಾದದಿಂದ ಪ್ರಹಾರಮಾಡಿದ್ದರಿಂದ, ಜರಾನಾಮಕ ವ್ಯಾಧಜನ್ಮ ಪ್ರಾಪ್ತಿ ಆಗಿರುತ್ತದೆ. ತದುಕ್ತಂ ತಾರತಮ್ಯೇ- "ಜರಾ ವ್ಯಾಧೋ ಭೃಗುಃ ಪೂರ್ವತ್ರಯೋ ದಕ್ಷಾಚ್ಚಾತಾವರಾಃ ವರುಣಾತ್ಪಾದತೋ ನ್ಯೂನಾ ಮಿತ್ರಾಚ್ಚ ದ್ವಿಗುಣಾಧಿಕಾ ಇತಿಃ ॥ ಪ್ರಹ್ಲಾದನ ವಿವರ ಮುಂದೆ ಹೇಳುತ್ತದೆ. ॥೨೧॥

**ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-**

ನೀಲ ಇತಿ ॥ ನೀಲೋಗ್ನಿರಾಸೀತ್ ॥ ದೀಪ್ತ್ಯಾಂಗಾರ ಸಮೋವಹ್ನಿಃ ॥ ಕುಂಡಮಧ್ಯಾತ್ ಸಮುತ್ಥಿತಃ ॥ ಧೃಷ್ಟತ್ವಾತ್ ದ್ಯೋತನಾಚ್ಚೈವ ಧೃಷ್ಟದ್ಯುಮ್ನ ಇತೀರಿತಃ ॥ ಲವಃ ದೇವ್ಯಾಃ ಹುತಾಶನಾತ್ ॥ ದ್ವೌ ಕುಶಲವೌ ಇತ್ಯುಕ್ತವತ್ ॥ ತಂ ಭೃಗಂ ವ್ಯಾಧತಾಂ ಗತಂ ದೃಷ್ಟ್ವಾ ಜರಾನಾಮೇತಿ ॥ ಭೃಗ್ವಗ್ನಿಪ್ರಸೂತಿನಾನ್ನ್ಯಃ ಮೂಪರಿತ್ಯುಕ್ತಾಃ ॥ "ಪ್ರಹ್ಲಾದಃ ಭಗವತ್ಪ್ರಿಯಃ ॥ ವಾಯುನಾ ಚ ಸಮಾವಿಷ್ಟಃ ॥ ಪ್ರತೀಪಪುತ್ರತಾಂ ಆಪ್ಯ

ಬಾಹ್ಲೀಕೇಷ್ವಭವತ್ ಪತಿಃ ॥ ನೀಲಂ ವಿಷ್ಣುಂ ನೀಲಾಯತೇ ಹೃದಿ ಇತಿ ತಥೋಕ್ತಃ ॥ ಲೇಲೀಯತೇ ರಾಮನಾಮ್ನೈವ ಯಸ್ಮಾತ್ ॥ ಸದಾ ಲವಃ ರಾಮಸೂನುಃ ॥ ಜರಾಗ್ರಸ್ತತ್ವಾತ್ ಜರಾ ॥ ಭೃಶಂ ಶೀಘ್ರಂ ಸಮುದ್ದಿಷ್ಟಂ ಗತಿಃ ಗಮನಮುಚ್ಯತೇ ॥ ಕಾರ್ಯಾರ್ಥೀತ್ವರಯಾ ಯಾತಿ ಹ್ಯತೋ ಭೃಗುಃ ॥21॥

## ಕನ್ನಡಾರ್ಥ

"ಅಗ್ನಿಯೇ ನೀಲನಾಮಕ ವಾನರನಾದನು"- ಎಂದು ತಾತ್ಪರ್ಯ ನಿರ್ಣಯದಲ್ಲಿ ಹೇಳಿರುತ್ತಾರೆ. ಪ್ರಜ್ವಲಿಸುವ ಅಗ್ನಿಯು ಕುಂಡವುಧ್ಯದಿಂದ ಮೇಲೆ ಬಂದು ನೀತನು. ಅವನೇ ಧೃಷ್ಟನಾದುದರಿಂದಲೂ, ಕಾಂತಿಯುಕ್ತನಾದುದರಿಂದಲೂ, ಧೃಷ್ಟದ್ಯುಮ್ನ "ಎಂದು ಅವನಿಗೆ ಎಂದು ಹೆಸರು ಅಗ್ನಿಯೇ ಧೃಷ್ಟದ್ಯುಮ್ನನೆಂಬಲ್ಲಿ ಪ್ರಮಾಣವಚನವಿದೆ. ಸೀತಾದೇವಿಯಲ್ಲಿ ಅಗ್ನಿಯು ಲವನಾಗಿ ಹುಟ್ಟಿದನು. ಕುಶಲವರಿಬ್ಬರೂ ಸೀತಾಪುತ್ರರು ಎಂದು ಹಿಂದೆಯೇ ಹೇಳಲಾಗಿದೆ. ಭೃಗುವೇವ್ಯಾಧನೆಂದು "ಜರಾನಾಮಕ ವ್ಯಾಧನಾಗಿರುವ ಭೃಗುವನ್ನು ನೋಡಿ"- ಎಂದು ಮುಂತಾದ ವಚನಗಳಿಂದ ಪ್ರಮಿತವಾಗಿರುತ್ತದೆ. ಮೂವರೇವರೆ ಭೃಗು, ಅಗ್ನಿ, ಪ್ರಸೂತಿಗಳು. "ಪ್ರಹಾದನು ಭಗವತ್ಪ್ರಿಯನು ವಾಯ್ವಾವೇಶಯುಕ್ತನು. ಅವನೇ ಪ್ರತೀಪನ ಪುತ್ರ ಬಾಹ್ಲೀಕರಾಜನಾದನು"- ಎಂದು ಪ್ರಮಾಣಗಳಿರುವುವು. ಯಾವನಲ್ಲಿ ಹರಿಯು ನೀಲರೂಪನಾಗಿ ತೋರುವನೋ ಅವನು ನೀಲ ಹೀಗೆ ಅಗ್ನಿಯೇ ನೀಲಾವತಾರನು. ರಾಮನಾಮವು ಅವನ ನಾಲಿಗೆಯಲ್ಲಿ ಸದಾ ಕುಣಿಯುತ್ತಿದ್ದರಿಂದ ಲೇಲಿಹಾನ-ಎಂದು ಅಗ್ನಿಪುತ್ರನಾದ ಅವನಿಗೆ 'ಲವ' ನೆಂದು ಅನ್ವರ್ಥಕವಾದುದು. 'ಭೃ' ಎಂದರೆ ಶೀಘ್ರವಾಗಿ, 'ಗ' ಎಂದರೆ ಗಮನವುಳ್ಳವನು. "ಭೃಗುಃ"-ಕಾರ್ಯಕ್ಕಾಗಿ ತ್ವರೆಯಿಂದ ಹೋಗುವವನು. ಎಂದು ಅರ್ಥ ॥21॥

### ಶ. ಶ್ರೀಗುರುಹೃದಯ ಪ್ರಕಾಶಿಕೆ :-

ನೀಲನೆಂಬ ಕಪಿನಾಯಕ ದುಷ್ಟದ್ಯುಮ್ನನೆಂಬ ಪಾಂಚಾಲಪುತ್ರ,

ಶ್ರೀರಾಮನಪುತ್ರ ಲವ ಸಹ, ಮೂರು ಲೇಲಿಹಾನನೆಂಬ ಅಗ್ನಿದೇವನ ಅವತಾರಗಳು. ಭೃಗುಋಷಿಯು ದೇವರನ್ನು ಕಾಲಿನಲ್ಲಿ ಒದ್ದದ್ದರಿಂದ, ಜರಾನಾಮಕ ವ್ಯಾಧನಾಗಿ ಹುಟ್ಟಿದನು. ಭೃಗು ಅಗ್ನಿ ಪ್ರಸೂತಿ ಸಹ. ಈ ಮೂರುಮಂದಿ ಮರೀಚಿ ಅತ್ರಿ-ಮೊದಲಾದ ಏಳು ಜನಕ್ಕಿಂತ ಉತ್ತಮರು. ಋಷಿಶ್ರೇಷ್ಠರಾದ ನಾರದರಿಗಿಂತ ಕಡಿಮೆ ಗಾಳಿ-ಎಂಬ ವಾಯು ಆವೇಶಯುಕ್ತ ಪ್ರಹ್ಲಾದರಾಯನೇ ಬಾಹ್ಲೀಕರಾಯನಾಗಿ ಹುಟ್ಟಿದನು. ॥21॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಅಗ್ನಿಯ ಅವತಾರವಿಶೇಷಗಳು ಭೃಗು ಮತ್ತು ಪ್ರಹ್ಲಾದರಾಜರ ವಿಚಾರವನ್ನು ತಿಳಿಸುತ್ತಾರೆ.

ಅಗ್ನಿದೇವರಿಗೆ **ಲೇಲಿಹಾನ**ನೆಂದು ಹೆಸರು. ಅಮರಸಿಂಹಕೃತ ಅಮರಕೋಶರೀತ್ಯಾ, ಲೇಲಿಹಾನ:- ಎಂದರೆ "ಸರ್ಪ -ಎಂದರ್ಥ".

"ಉರಗಃ ಪನ್ನಗೋ— —— ಲೇಲಿಹಾನೋ ದ್ವಿರಸನೋ ವ್ಯಾಳಹಃ ಕುಂಭೀನಸೋ ಹರಿಃ" -ಎಂದಿದೆ.

ಆದರೆ, ವೇದವ್ಯಾಸರಿಂದ ರಚಿತವಾದ **ಶಬ್ದರತ್ನಾವಳಿ** -ಎಂಬ ಶಬ್ದಕೋಶಗ್ರಂಥದಲ್ಲಿ "ಲೇಲಿಹಾನಃ ಸಪ್ತ ಜಿಹ್ವೋ ಮೇಷವಾಹಃ ಸ್ವಾಹಾಪತಿಃ ವೀತಿಹೋತ್ರೋ ಬರ್ಹಿಶುಷ್ಮಾ ಕೃಶಾನುಃ ಪಾವಕೋನಲಃ"- ಎಂದಿದೆ. ಆದರಂತೆ, "ಲೇಲಿಹಾನ"-ಶಬ್ದಕ್ಕೆ-"ಅಗ್ನಿ" ಎಂದಾಗುತ್ತದೆ.

ಅಗ್ನಿ ದೇವರ ಅವತಾರಗಳು ಮೂರು.

೧. ನೀಲ-

ಸುಗ್ರೀವನ ಕಪಿನಾಯಕರಲ್ಲಿ ಒಬ್ಬ. ಮಹಾಪರಾಕ್ರಮಶಾಲಿ. ಕುಂಭ

ಕರ್ಣನ ಪುತ್ರ ಕುಂಭನೇ ಮೊದಲಾದ ವೀರರೊಂದಿಗೆ ಯುದ್ಧ ಮಾಡಿದ ಸಾಹಸಿ. ನೀಲನಲ್ಲಿ ಶ್ರೀಹರಿಯು ನೀಲವರ್ಣದಿಂದ ವಿಶಿಷ್ಟನಾಗಿದ್ದನು. ಇದರಿಂದ ಅವನಿಗೆ "ನೀಲ"-ಎಂಬ ಹೆಸರಾಯಿತು.

**ಪ್ರಮಾಣ :-**

**"ನೀಲೋಗ್ನಿರಾಸೀತ್"— ನಿರ್ಣಯ ವಾಕ್ಯ.**

**೩. ದೃಷ್ಟದ್ಯುಮ್ನ :-**

ದ್ರುಪದರಾಜನ ಪುತ್ರ. ಅಯೋನಿಜನು. ಅಗ್ನಿಕುಂಡದಿಂದ ಜಾಜ್ವಲ್ಯಮಾನನಾಗಿ ಮೇಲೆದ್ದನು. ದ್ರೌಪದಿ ಈತನ ಸಂಗಡ ಅಗ್ನಿಕುಂಡದಿಂದ ಅವತರಿಸಿದಳು.

ಧೃಷ್ಟದ್ಯುಮ್ನ ಶಬ್ದ ನಿರ್ವಚನ–

"ದ್ಯುಷ್ಟತ್ವಾದತಿ ಧೃಷ್ಟ ತ್ವಾದ್ದ್ಯುಮ್ನದ್ಯುತ್ಸಂಭವಾದಪಿ ।
ಧೃಷ್ಟದ್ಯುಮ್ನ ಕುಮಾರೋಯಂ ॥

ಅಗ್ನಿಯಿಂದ ಏಳುತ್ತಲೇ, ಶಸ್ತ್ರಪೂರಿತವಾದ ರಥದಲ್ಲಿ ಕುಳಿತು ಬಿಲ, ಕವಚ, ಕುಂಡಲ, ಶಸ್ತ್ರ, ಶೌರ್ಯ, ಉತ್ಸಾಹಗಳಿಂದ ಯುಕ್ತನಾಗಿ ಪ್ರಗಲ್ಭನೂ ಪ್ರಜಾಪಾಲನಚತುರನಾಗಿ ಉದ್ಭವಿಸಿದ ಕಾರಣ, "ಧೃಷ್ಟದ್ಯುಮ್ನ" ನೆಂದು ಹೆಸರಾಯಿತು. ದ್ರೋಣಾಚಾರ್ಯರಲ್ಲಿ ಅಸ್ತ್ರವಿದ್ಯೆಯನ್ನು ಕಲಿತ ಅತಿರಥನು ಕುರುಕ್ಷೇತ್ರಯುದ್ಧದಲ್ಲಿ ಅಶ್ವತ್ಥಾಮನು ಇವನ ಶಿರಚ್ಛೇಧನ ಮಾಡಿದ.

**೪. ಲವ :-**

ಶ್ರೀರಾಮದೇವರ ಅವಳಿ ಜವಳಿ ಪುತ್ರರು ಲವ ಮತ್ತು ಕುಶ. ಲವನು **ಅಗ್ನಿಯ** ಅವತಾರನು. ಕುಶನು ಇಂದ್ರಾಂಶಸಂಭೂತನ. ಕುಶನು. ಹಿರಿಯನು. **ವಾಲ್ಮೀಕಿ** ಮುನಿಗಳ ಆಶ್ರಮದಲ್ಲಿ ಬೆಳೆದರು. ಆದರಿಂದ ಸಂಪೂರ್ಣ ರಾಮಾ

ಯಣವನ್ನು ಉಪದೇಶದ್ವಾರಾ ಅರಿತು, ವೀಣಾವಾದನದಿಂದ ಗಾನಮಾಡಿದರು.

ಇಂತು, ಅಗ್ನಿಯ ಅವತಾರಗಳು ಮೂರು- 1) ನೀಲ-ಎಂಬ ಕಪಿನಾಯಕ, 2) ಧೃಷ್ಟದ್ಯುಮ್ನ (ದ್ರುಪದಪುತ್ರ) ಮತ್ತು 3)-ಲವ-ಶ್ರೀರಾಮ ಪುತ್ರ.

* ಭೃಗು :—

ಸರಸ್ವತೀನದಿಯತೀರದಲ್ಲಿ ಅನೇಕ ಋಷಿಗಳು ಕೂಡಿ, ಸತ್ರಯಾಗ ಮಾಡುತ್ತಿದ್ದರು. ಪೂರ್ಣಾಹುತಿಸಮಯದಲ್ಲಿ ನಾರದರು ಯಾಗಶಾಲೆಗೆ ಬಂದರು. ಯಾಗಫಲವನ್ನು ಯಾರಿಗೆ ಅರ್ಪಿತವೆಂದು ಪ್ರಶ್ನಿಸಿದರು. ಅದರ ನಿರ್ಣಯಕ್ಕಾಗಿ, ಯೋಗಸಿದ್ಧರಾದ ಭೃಗುಋಷಿಗಳನ್ನು ನಾರದರ ಸೂಚನೆಯಂತೆ ನಿಯೋಜಿಸಿದರು. ಭೃಗುಮುನಿಯು ಕೈಲಾಸ ಮತ್ತು ಸತ್ಯ ಲೋಕಗಳಿಗೆ ತೆರಳಿ, ರುದ್ರದೇವರು ಮತ್ತು ಬ್ರಹ್ಮದೇವರು ಸರ್ವೋತ್ತಮರಲ್ಲ ವೆಂದು ನಿರ್ಣಯಿಸಿ, ನೇರವಾಗಿ ವೈಕುಂಠಕ್ಕೆ ಬಂದರು. ಕ್ಷೀರಸಮುದ್ರದಲ್ಲಿ ಶ್ರೀಮನ್ನಾರಾಯಣನು ಶೇಷಶಾಯಿಯಾಗಿ, ಶ್ರೀಲಕ್ಷ್ಮೀದೇವಿಯರಿಂದ ಕಾಲನ್ನು ಒತ್ತಿಸಿಕೊಳ್ಳುತ್ತಾ ಪವಡಿಸಿದ್ದನು. ಅಜ್ಞಾನ ದೆಶೆಯಿಂದ ಭೃಗುವು ಕುಪಿತನಾಗಿ, ಶ್ರೀಹರಿಯ ವಕ್ಷಕ್ಕೆ ತನ್ನ ಕಾಲಿನಿಂದ ಒದ್ದನು. ಈ ಪಾಪದ ಫಲವಾಗಿ, ದ್ವಾಪರದಲ್ಲಿ ವ್ಯಾಧ (ಬೇಡ)ನಾಗಿ ಅವತರಿಸಿದನು. ಅವನಿಂದ ಬಿಡಲ್ಪಟ್ಟ ಬಾಣವೇ ಶ್ರೀಕೃಷ್ಣನ ಪರಂಧಾಮಯಾತ್ರೆಗೆ ನಿಮಿತ್ತವಾಯಿತು. ಶ್ರೀಹರಿ ಇಚ್ಛೆ ಹಾಗಿತ್ತು. ಈ ಕಾರಣದಿಂದ ಹರಿಯನ್ನು ಭೃಗುವು ಕಾಲಿನಲಿ ಒದ್ದದರಿಂದ, ವ್ಯಾಧನೆನಿಸಿದನು-ಎಂದಿದ್ದಾರೆ ದಾಸರಾಯರು. (ಜರಾನಾಮಕ ವ್ಯಾಧ).

"ಭೃ"-ಎಂದರೆ, ಶೀಘ್ರವಾಗಿ, "ಗ"-ಎಂದರೆ ಗಮನವುಳ್ಳವನು ಎಂದು ಭೃಗು-ಶಬ್ದದ ವ್ಯುತ್ಪತ್ತಿ. ಅಂದರೆ, ಶೀಘ್ರಗಮನವುಳ್ಳವನು- ಭೃಗು ಎಂದರ್ಥ

ವಾಗುವುದು. ಇದರಿಂದಲೇ, ಭೃಗುಮುನಿಯು ಅಷ್ಟು ಶೀಘ್ರವಾಗಿ ತ್ರಿಲೋಕಗಳಿಗೆ ಹೋಗಲು ಸಾಧ್ಯವಾಯಿತು. (ಯೋಗಶಕ್ತಿ ಪ್ರಭಾವದಿಂದ).

೬. ಭೃಗು-ಪ್ರಸೂತಿ-ಅಗ್ನಿ-ಈ ಮೂವರೂ ಸಮಾನಕಕ್ಷಾಪನ್ನರು. ಈ ಮೂವರೂ ಮರೀಚ್ಯಾದಿ ಸಪ್ತಋಷಿಗಳಿಗಿಂತ ಉತ್ತಮರು. ಆದರೆ, ಮುನಿಕುಲಶ್ರೇಷ್ಠರಾದ ನಾರದರಿಗಿಂತ ಅಧಮರು.

೭. ಬಾಹ್ಲೀಕರಾಯ :-

ಚಂದ್ರವಂಶದ ಅರಸನಾದ ಪ್ರತೀಪರಾಜನಿಗೆ ದೇವಾಪಿ-ಶಂತನು-ಮತ್ತು ಬಾಹ್ಲೀಕರೆಂಬ- ಮೂವರು ಪುತ್ರರು. ಭಗವತೋತ್ತಮನಾದ ಪ್ರಹ್ಲಾದನೇ ಬಾಹ್ಲೀಕನಾಮಕನಾಗಿ, ಅವತರಿಸಿದರು. ಕುರುಸೇನೆಯಲ್ಲಿ ಅತಿರಥ. ಭೀಮಸೇನ ದೇವರ ಗದೆಯಿಂದ ದೇಹತ್ಯಾಗಮಾಡಿದ. ವಾಯು ದೇವರ ಆವಿಷ್ಟರಾದ ಪ್ರಹ್ಲಾದರಾಜರು ಬಾಹ್ಲೀಕರು. ॥21॥

★★

## ಪದ್ಯ-೨೨

**ಮೂಲ :-**

**ಜನಪ ಕರ್ಮಜರೊಳಗೆ ನಾರದ ।**
**ಮುನಿಯನುಗ್ರಹ ಬಲದಿ ಪ್ರಹ್ಲಾ ।**
**ದನಲಿ ಭೃಗುಮುನಿ ದಕ್ಷ ಪತ್ನಿಗೆ ಸಮನೆನಿಸಿಕೊಂಬ ॥**
**ಮನು ವಿವಸ್ವಾನ್ ಗಾಧಿಜೇರ್ವರು ।**
**ಅನಲಗಿಂತಲಿ ಕಿಂಚಿತಾಧಮ ।**
**ಎಣೆ ಎನಿಸುವರು ಸಪ್ತ ಋಷಿಗಳಿಗೆಲ್ಲಕಾಲದಲಿ ॥೨೨॥**

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಪ್ರಹ್ಲಾದ- ವೈವಸ್ವತಮನು- ವಿಶ್ವಾಮಿತ್ರ- ಮರೀಚ್ಯಾದಿ ಸಪ್ತರ್ಷಿಗಳ ವಿಚಾರ ತಿಳಿಸುತ್ತಾರೆ. ॥22॥

**ಪ್ರತಿಪದಾರ್ಥ :-**

**ಜನಪ** = ಚಕ್ರವರ್ತಿಗಳಾದ, **ಕರ್ಮಜರೊಳಗೆ** = ಕರ್ಮಜ ದೇವತೆಗಳ ಕಕ್ಷದಲ್ಲಿ, **ಪ್ರಹ್ಲಾದ** = ಪ್ರಹ್ಲಾದರಾಜನು, **ನಾರದ ಮುನಿಯು** = ನಾರದಋಷಿಗಳ, **ಅನುಗ್ರಹಬಲದಿ** = ಕೃಪಾಬಲ ದಿಂದ, **ಭೃಗುಮುನಿ** = ಭೃಗುಋಷಿಗಳು. **ದಕ್ಷಪತ್ನಿಗೆ** = ದಕ್ಷ ಪ್ರಜಾಪತಿಯ ಪತ್ನಿಯಾದ ಪ್ರಸೂತಿದೇವಿಗೆ, **ಅನಲ** — ಅಗ್ನಿದೇವರು. **ಸಮನೆನಿಸಿಕೊಂಬ** = ಈ ಮೂವರಿಗೆ ಸಮಾನನೆಂದು ಕರೆಯಿಸುತ್ತಾನೆ. **ಮನುವಿವಸ್ವಾನ್** = ವಿವಸ್ವಾನ್‌ನಾಮಕ ಸೂರ್ಯನಪುತ್ರನಾದ ವೈವಸ್ವತಮನುವು, **ಗಾಧಿಜ** = ಗಾಧಿರಾಜನ ಪುತ್ರನಾದ ವಿಶ್ವಾಮಿತ್ರ ಋಷಿ, **ಈರ್ವರು** = ಇವರಿಬ್ಬರೂ, **ಅನಲಗಿಂತಲಿ** = ಅಗ್ನಿ ಮೊದ ಲಾದವರಿಗಿಂತ, **ಕಿಂಚಿತಾಧಮ** = ಏಸಗುಣದಿಂದ ಅಧಮರು, **ಸಪ್ತ ಋಷಿಗಳಿಗೆ** = ಮರೀಚ್ಯಾದಿ ಸಪ್ತರ್ಷಿಗಳಿಗೆ, **ಎಲ್ಲ ಕಾಲದಲಿ** = ಅನಾದ್ಯನಂತಕಾಲದಿಂದಲೂ, **ಎಣೆಯೆನಿಸುವರು** = ಸಮಾನರೆಂದು ಕರೆಯಿಸುವರು. ॥22॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪ್ರಹ್ಲಾದ, ವೈವಸ್ವತಮನು, ವಿಶ್ವಾಮಿತ್ರ, ಮರೀಚ್ಯಾದಿಗಳ ವಿಚಾರ, ತಾರತಮ್ಯ-ಹೇಳತಾರೆ.

ಜನರುಗಳನ್ನು ಪಾಲನ ಮಾಡತಕ್ಕ ಪೃಥುಚಕ್ರವರ್ತಿಯೇ, ಮೊದಲಾದ ಕರ್ಮಜದೇವತೆಗಳಿಗೆ ಸಮಾನನಾದ, ಕರ್ಮಜಕಕ್ಷದಲ್ಲಿ ಇರಬೇಕಾದವನಾದ ಪ್ರಹ್ಲಾದರಾಯನು, ನಾರದಋಷಿಗಳ ಅನುಗ್ರಹಬಲದಿಂದ ಅಗ್ನಿದೇವರು, ಭೃಗುಋಷಿಗಳು, ದಕ್ಷಪತ್ನಿ ಪ್ರಸೂತಿ-ಈ ಮೂರು ಮಂದಿಗೆ ಸಮಾನ- ಎಂತ ಕರಸಕೋತಾನೆ. ಇಲ್ಲಿಗೆ ಪ್ರಹ್ಲಾದನ ವಿಚಾರ ಮುಗಿಯಿತು.

ನಂತರ, ವಿವಸ್ವಾನಾಮಕ ಸೂರ್ಯದೇವರ ಪುತ್ರನಾದ ವೈವಸ್ವತಮನು. ಗಾಧಿರಾಜನ ಪುತ್ರನಾದ ವಿಶ್ವಾಮಿತ್ರಋಷಿ- ಇವರಿಬ್ಬರು ಅಗ್ನಿ ಮೊದಲಾದ ವರಿಗಿಂತ ವೀಸಗುಣದಿಂದ ಅಧಮರು. ಇವರಿಬ್ಬರು ಮರೀಚ್ಯಾದಿ ಸಪ್ತಋಷಿ ಗಳಿಗೆ ಸಮಾನರೆಂದು ಕರೆಸುವರು. ಸದಾ ಸರ್ವಕಾಲವೂ, ಅನಾದ್ಯನಂತ ಕಾಲದಲ್ಲೂ ಮರೀಚ್ಯಾದಿ ಸಪ್ತಋಷಿಗಳು, ವೈವಸತಮನು ಮತ್ತು ವಿಶ್ವಾ ಮಿತ್ರಋಷಿ-ಅಂತು ಈ ಒಂಭತ್ತು ಮಂದಿ ಸಮಾನರು. ಅಗ್ನ್ಯಾದಿಗಳಿಗಿಂತ ವೀಸಗುಣದಿಂದ ನೀಚರು-ಎಂತ ತಾತ್ಪರ್ಯ. ಸಪ್ತಋಷಿಗಳ ನಾಮ ಮುಂದೆ ಹೇಳತಾರೆ. ॥22॥

**೨. ಭಾವಪ್ರಕಾಶಿಕೆ :-**

ಈ ಸಂಧಿಯ 37ನೆಯ ಪದ್ಯದಲ್ಲಿ ಹೇಳುವ ಅರಸರಾಗಿದ್ದು, ಕರ್ಮದಿಂದ ದೇವತ್ವ ಹೊಂದಿದ ಕರ್ಮದೇವತೆಗಳಲ್ಲಿ ಒಬ್ಬನಾದ ಪ್ರಹ್ಲಾದನು,ಅಗ್ನಿ ಮೊದ ಲಾದವರಿಗೆ ಸಮನು ಹೇಗಾದನೆಂದರೆ,—ಇವನು ತಾಯಿಯ ಗರ್ಭದಲ್ಲಿ ಇರು ವಾಗಲೇ,ನಾರದರು ಪರಮಾನುಗ್ರಹಮಾಡಿ, ಭಗವನ್ಮಹಿಮೆಯನ್ನು ಉಪದೇಶ ಮಾಡಿದುದರಿಂದ, ಅಧಿಕವಾದ ಭಗವದ್ಭಕ್ತಿಯಿಂದ ಈ ಅಗ್ನಿ ಮೊದಲಾದ ಮೂವರಿಗೆ ಸಮನಾದನೆಂಬ ತಾತ್ಪರ್ಯ. ವೈವಸ್ವತಮನುವು, ವಿಶ್ವಾ ಮಿತ್ರರು-ಇವರಿಬ್ಬರೂ ಅಗ್ನಿ ಮೊದಲಾದ ಮೂವರಕಿಂತಲೂ ಸ್ವಲ್ಪ ಕಮ್ಮಿ ಯೆನಿಸುವರು. ಮರೀಚಿ-ಮೊದಲಾದ 7 ಋಷಿಗಳಿಗೆ ಸರ್ವಕಾಲದಲ್ಲೂ ಸಮ ರೆನಿಸುವರು. ॥22॥

### ೩. ಭಾವದರ್ಪಣ :-

ವಾಯು ಅಂಶಯುಕ್ತ ಪ್ರಹ್ಲಾದರಾಜರು ನಾರದರ ಅನುಗ್ರಹಬಲದಿಂದ ಭೃಗ್ವಾದಿಗಳಿಗೆ ಸಮನಿಸಿದನೆಂದು ಹೇಳುತ್ತಾರೆ. ಜನಪೇತಿ. "ಪ್ರಕೃಷ್ಟಾಹ್ಲಾದರೂಪತ್ವಾನ್ನಾರದಸ್ಯೋಪದೇಶತಃ. ವಾಯುಯುಗ್ಭಾಲ್ಹಿಕಃ ಪೂರ್ವ ಪ್ರಹ್ಲಾದೋ ನಾರದಾಧಮ"-ಇತ್ಯುಕ್ತೇಃ. ಮನಸ್ಸಿನಿಂದ ಮರೀಚಿ, ನೇತ್ರ ದಿಂದ ಅತ್ರಿ, ಮುಖದಿಂದ ಅಂಗಿರ, ನಾಭಿಯಿಂದ ಪುಲಹ, ಕರದಿಂದ ಕ್ರತು, ಪ್ರಾಣದಿಂದ ವಸಿಷ್ಠ, ಕರ್ಣದಿಂದ ಪುಲಸ್ತ್ಯ-ಈ ಏಳು ಜನ ಪುತ್ರ ರೆಂದು ಎನಿಸಿ, ಬ್ರಹ್ಮದೇವರ ಅವಯವಗಳಿಂದ ಉತ್ಪನ್ನರೆಂಬ ವಿಷಯಕ್ಕೆ ಸುಳಾದಿಮಾನ,-"ಮನಿಂದ ಮರೀಚೀಯು ನೇತ್ರದಿಂದ ತ್ರೀಋಷೀ ಘನಮುಖ ದಿಂದಂಗೀರನು ನಾಭಿಯಿಂದ ಪುಲಹ ಋಷೀ ಮುನಿ ಕ್ರತು ಕರದಿಂದ ಪ್ರಾಣ ದಿ ವಸಿಷ್ಠನು ಕರ್ಣದಿ ಪುಲಸ್ತ್ಯನು ಜನಿಸಿಹರಯ್ಯ । ವಿಧಿಯನಯವದಿಂದ ಕೇಳೋ"-ಎಂದು ಪುರಂದರದಾಸರಾಜರು ಸೃಷ್ಟಿ ಸುಳಾದಿಯಲ್ಲಿ ಹೇಳಿದ ರೀತಿ ಯಾಗಿ, ಈ ಏಳು ಮಂದಿ ಋಷಿಗಳು ಗಾಧಿರಾಯನ ಪುತ್ರ ವಿಶ್ವಾಮಿತ್ರಋಷಿ, ವಿವಸ್ವಾನ್-ಸೂರ್ಯಪುತ್ರ ವೈವಸ್ವತಮನು, ಅಂತು 9 ಮಂದಿ-ಅಗ್ನಿಗೆ ದ್ವಿಗುಣಾ ಧಮರೆಂದು ತಿಳಿಯಬೇಕು. ಕಮಲಸಂಭವೇತಿ. ಜ್ಯೇಷ್ಠಮಾಸದ ಮಿತ್ರ ನಾಮಕಸೂರ್ಯನೇ ಭೀಷ್ಮಕರಾಯನಾಗಿ ಜನನ. ಈತ ರಾಹುಯುಕ್ತ. ಬೃಹಸ್ಪತಿಭಾರ್ಯಾ ತಾರಾನೇ ದ್ರೋಣಪತ್ನಿ ಕೃಪೆ. ಭಾನುಪುತ್ರಿ ಪ್ರಾವಹಿಗೆ ಅವ ತಾರವಿಲ್ಲ-ಎಂತ ತಿಳೀತಕ್ಕದ್ದು. ಇದೇ ವಿಷಯದಲ್ಲಿ ಪ್ರಮಾಣ.— ತದುಕ್ತಂ ತಾರತಮ್ಯೇ.—"ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ । ವಿಶ್ವಾಮಿತ್ರೋ ವಸಿಷ್ಟಶ್ಚ ವೈವಸ್ವತಮನುಸ್ತಥಾ. ನವವಹ್ನ್ಯವರಾ ನಿತ್ಯಂ ಮಿತ್ರಾತ್ಕಿಂಚಿದ್ಗುಣಾಧಿಕಾ ಇತಿ. ಕೃಪೀತಾರಾ ಪ್ರಕೀರ್ತಿತಾ ಇತಿ ಚ. ಸಂಯಮಿೂ ಯವಂನಿಯಮಾದಿ ಅಷ್ಟಸಿದ್ಧಿ ಉಳ್ಳಾವತೆಂಬರ್ಥ.

॥22॥ ॥23॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ವಿಶ್ವಾಮಿತ್ರರೆಂಬುವ ಪದದ ಅರ್ಥವನ್ನು ಮುಂದೆ 27ನೇ ಪದ್ಯದಲ್ಲಿ ಬರೆದಿರುವರು. 22ನೇ ಪದ್ಯಕ್ಕೆ ಟೀಕಾ ಬರೆದಿಲ್ಲ. ॥22॥

೫. ಶ್ರೀ ಗುರುಹೃದಯ ಪ್ರಕಾಶಿಕೆ

ಜನಪರೆಂಬ ದೊರೆಗಳಾದ ಕರ್ಮಜದೇವತೆಗಳಲ್ಲಿ, ನಾರದಮುನಿಯ ಅನುಗ್ರಹಬಲದಿಂದ ಪ್ರಹ್ಲಾದರಾಜನು, ಅಗ್ನಿ, ಭೃಗು, ದಕ್ಷಪತ್ನಿ ಪ್ರಸೂತಿಯರಿಗೆ ಸಮನೆನಿಸಿಕೊಳ್ಳುವನು. ವೈವಸ್ವತಮನುವು, ಗಾಧಿಜನೆಂಬ ವಿಶ್ವಾಮಿತ್ರರು-ಇಬ್ಬರೂ ಸಹ ಅಗ್ನಿಗಿಂತ ಕಿಂಚಿತ್ ಕಡಿಮೆ. ಮರೀಚ್ಯಾದಿ ಸಪ್ತರ್ಷಿಗಳಿಗೆ ಸದಾ ಸಮಾನರೆನಿಸುವರು. ॥22॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ದಾಸರಾಯರು ಪ್ರಹ್ಲಾದರಾಜರು–ವೈವಸ್ವತಮನು-ವಿಶ್ವಾಮಿತ್ರ–ಮರೀಚ್ಯಾದಿ ಸಪ್ತರ್ಷಿಗಳ ವಿಚಾರವನ್ನು ತಿಳಿಸುತ್ತಾರೆ.

**1. ಜನಪ ಕರ್ಮಜರೊಳಗೆ :–**

ರಾಜರಾಗಿದ್ದು (ಜನಪ), ಕರ್ಮತ್ವದಿಂದ ದೇವತ್ವವನ್ನು ಪಡೆದವರು ಜನಪಕರ್ಮಜರೆನಿಸುವರು. ಅಂತಹ ಜನಪಕರ್ಮಜದೇವತಾವರ್ಗದಲ್ಲಿ **ಪ್ರಹ್ಲಾದರಾಜರು** ಕೆಳಗಿನ ಕಕ್ಷದಲ್ಲಿದ್ದರೂ, **ನಾರದಮುನಿಗಳ ಅನುಗ್ರಹಬಲದಿಂದ,** 15ನೆಯ ಕಕ್ಷಾಪನ್ನರಾದ ಅಗ್ನಿ (ಅನಲ), ಭೃಗುಮುನಿ, ಮತ್ತು ಪ್ರಸೂತಿಗಳಿಗೆ (ದಕ್ಷಪತ್ನಿಗೆ) ಸಮಾನನೆನಿಸಿಕೊಂಡಿದ್ದಾರೆ. ಪ್ರಹ್ಲಾದರಾಜರು ತಾಯಿಯಾದ ಕಯಾದುವಿನ ಗರ್ಭಸ್ಥರಾಗಿದ್ದಾಗಲೇ, ನಾರದಮುನಿಗಳಿಂದ –"ಓಂ ನಮೋ ನಾರಾಯಣಾಯ"–ಎಂಬ ನಾರಾಯಣಅಷ್ಟಾ

ಕ್ಷರ ಮಂತ್ರವನ್ನು ಉಪದೇಶಿಸಿದರು. ಈ ಮಂತ್ರಬಲದಿಂದ, ಪ್ರಹ್ಲಾದ ರಾಜರು ಮಹಾ ಹರಿಭಕ್ತರೆನಿಸಿ, ಭಾಗವೋತ್ತಮರೆಂದು ಖ್ಯಾತನಾಮರಾಗಿ ಅಗ್ನಿಗೆ ಸಮಾನಕಕ್ಷಾಪನ್ನರಾದರು.

**2. ಮನುವಿವಸ್ವಾನ್ :–**

ವಿವಸ್ವಾನ್‌ನಾಮಕ ಸೂರ್ಯನ ಪುತ್ರನು ವೈವಸ್ವತಮನುವು. ಪ್ರಸಕ್ತ ಮನ್ವಂತರದ ಅಧಿಪತಿಯು. ಈಗ ಪ್ರಚಾರದಲ್ಲಿರುವ ಮನುಧರ್ಮಶಾಸ್ತ್ರವು ಈತನಿಂದ ರಚಿತವಾದುದು. ವಿವಸ್ವಾನ್-ಎಂಬ ಆದಿತ್ಯನಿಂದ ತ್ವಷ್ಟೃವಿನ ಪುತ್ರಿಯಾದ ಸಂಜ್ಞಾದೇವಿಯಲ್ಲಿ ಜನಿಸಿದವನು.

**3. ಗಾಧಿಜ :–**

ಗಾಧಿಯು ಚಂದ್ರವಂಶದ ಜಹ್ನುರಾಜನ ಸಂತತಿಯಲ್ಲಿ ಜನಿಸಿದ ಕುಶಕ ರಾಜನ ಪುತ್ರನು. ಕನ್ಯಾಕುಬ್ಜದ ಅರಸು. ಈತನ ಮಗನೇ ಲೋಕವಿಖ್ಯಾತ ನಾದ ಬ್ರಹ್ಮರ್ಷಿ-ಎಂದೆನಿಸಿಕೊಂಡ ವಿಶ್ವಾಮಿತ್ರನು. ಅಂದರೆ, ಗಾಧಿಜ– ನೆಂದರೆ, ವಿಶ್ವಾಮಿತ್ರ!ಋಷಿಯು ಗಾಧಿಯ ಪುತ್ರ ಸತ್ಯವತಿತಾಯಿ. ಆಕೆಯ ಪತಿ ಋಷೀಕನೆಂಬ ಮುನಿ. ಋಷೀಕಮುನಿಯ ಅನುಗ್ರಹದಿಂದ ಗಾಧಿಯು. ವಿಶ್ವಾಮಿತ್ರನನ್ನು ಪುತ್ರನಾಗಿ ಪಡೆದನು.

**4.** ವೈವಸತಮನು ಮತ್ತು ಗಾಧಿಜನಾದ ವಿಶ್ವಾಮಿತ್ರ-ಈರ್ವರೂ ಅಗ್ನ್ಯಾದಿಗಳಿಗಿಂತ ಸ್ವಲ್ಪ ಅಧಮರು (ದ್ವಿ ಗುಣಗಳಿಂದ ಅಧಮರು).

**5. ಸಪ್ತರ್ಷಿಗಳು :–**

ಬ್ರಹ್ಮದೇವರ ಅವಯವಗಳಿಂದ ಉತ್ಪನ್ನರಾದ ಏಳು ಮಂದಿ ಸಪ್ತರ್ಷಿ ಗಳ ವಿವರ ಇಂತಿದೆ :–

(1) ಮರೀಚಿ–ಬ್ರಹ್ಮದೇವರ ಮನಸ್ಸಿನಿಂದ ಜನಿಸಿದನು. (2) ಅತ್ರಿ-ನೇತ್ರದಿಂದ. (3) ಅಂಗಿರಸ–ಮುಖದಿಂದ. (4) ಪುಲಹ-ನಾಭಿಯಿಂದ. (5) ಕ್ರತು–ಕರದಿಂದ. (6) ವಸಿಷ್ಠ–ಪ್ರಾಣದಿಂದ ಮತ್ತು (7) ಪುಲಸ್ತ್ಯ –ಕರ್ಣದಿಂದ.

ಪೂರ್ವೋಕ್ತ ಸಪ್ತರ್ಷಿಗಳಿಗೆ ವೈವಸ್ವತಮನು ಮತ್ತು ವಿಶ್ವಾಮಿತ್ರ ಮುನಿ ಅನಾದ್ಯನಂತಕಾಲದಿಂದಲೂ ಸಮರು. (ಎಣೆ ಎನಿಸುವರು ಎಲ್ಲ ಕಾಲದಲಿ).

ಅಂದರೆ, ಸಪ್ತರ್ಷಿಗಳು–ವೈವಸ್ವತಮನು ಮತ್ತು ವಿಶ್ವಾಮಿತ್ರ–ಈ ಒಂಭತ್ತು ಮಂದಿ ಸಮಾನಸ್ಕಂಧರು.

**ಪ್ರಮಾಣ :–**

"ಮನಿನಿಂದ ಮರೀಚಿಯು ನೇತ್ರದಿಂದ ಅತ್ರಿ ।
ಘನಮುಖದಿಂದಂಗೀರನು ನಾಭಿಯಿಂದ ಪುಲಹ ಋಷಿ ।
ಮುನಿ ಕ್ರತು ಕರದಿಂದ ಪ್ರಾಣದಿ ವಸಿಷ್ಠನು ।
ಕರ್ಣದಿ ಪುಲಸ್ತ್ಯನು ಜನಿಸಿ ಹರಯ್ಯ ವಿಧಿಯುವದಿಂದ ಕೇಳೋ ॥"—

**—ಶ್ರೀಪುರಂದರದಾಸರ ಸೃಷ್ಟಿ ಸುಳಾದಿ. ॥22॥**

★★

## ಪದ್ಯ-೨೩

**ಮೂಲ :-**

**ಕಮಲಸಂಭವಭವರೆನಿಪ ಸಂ।**
**ಯಮಿ ಮರೀಚಿಯು ಅತ್ರಿಯಂಗಿರ।**
**ಸುಮತಿ ಪುಲಹ ಕ್ರತು ವಸಿಷ್ಠ ಪುಲಸ್ತ್ಯಮುನಿ ಸ್ವಾಹಾ॥**
**ರಮಣಗಧಮರು ಮಿತ್ರನಾಮಕ।**
**ದ್ಯುಮಣಿ ರಾಹುಯುಕ್ತ ಭೀಷ್ಮಕ।**
**ಯಮಳರೂಪನು ತಾರನಾಮಕನೆನಿಸಿ ತ್ರೈಕೆಯೊಳು ॥೨೩॥**

**ಅವತರಣಿಕೆ :-**

ಸಪ್ತರ್ಷಿಗಳ ನಾಮ-ಮಿತ್ರನಾಮಕ ಸೂರ್ಯಾದಿಗಳ ವಿಚಾರ ತಿಳಿಸುತ್ತಾರೆ. ॥23॥

**ಪ್ರತಿಪದಾರ್ಥ :-**

**ಕಮಲ ಸಂಭವ** = ಶ್ರೀ ಪರಮಾತ್ಮನ ನಾಭೀಕಮಲದಿಂದ ಉತ್ಪನ್ನರಾದ ಶ್ರೀ ಬ್ರಹ್ಮದೇವರ, **ಭವರೆನಿಪ** = ಅವಯಗಳಿಂದ ಜನಿಸಿದ, **ಸಂಯಮಿ** = ಜಿತೇಂದ್ರಿಯರಾದ, ನಿಯಮಾದಿ ಅಷ್ಟಸಿದ್ಧಿಯುಳ್ಳ, **ಮರೀಚೀಯು** = ಮರೀಚಿ, **ಅತ್ರಿ** = ಅತ್ರಿಋಷಿ, **ಅಂಗಿರನು** = ಅಂಗಿರಸಮುನಿ, **ಮತಿ** = ಜ್ಞಾನಶ್ರೇಷ್ಠರಾದ, **ಪುಲಹ** = ಪುಲಹಮುನಿ, **ಕ್ರತು** = ಕ್ರತುಋಷಿ, **ವಸಿಷ್ಠ** = ವಸಿಷ್ಠ ಋಷಿ ಮತ್ತು **ಪುಲಸ್ತ್ಯ ಮುನಿ** = ಪುಲಸ್ತ್ಯಋಷಿ- ಈ ಏಳುಮಂದಿ ಸಪ್ತರ್ಷಿಗಳು ಮತ್ತು ವೈವಸ್ವತಮನು, ವಿಶ್ವಾಮಿತ್ರ- ಇಬ್ಬರೂ ಸೇರಿ, ಒಟ್ಟು ಒಂಬತ್ತು

ಮಂದಿಯೂ, **ಸ್ವಾಹಾರಮಣಗೆ** = ಸ್ವಾಹಾಪತಿ ಅಗ್ನಿದೇವರಿಗಿಂತಲೂ, **ಅಧಮರು** = ವೀಸಗುಣದಿಂದ ಅಧಮರು, **ಮಿತ್ರನಾಮಕ** = ಮಿತ್ರನೆಂಬ ಹೆಸರುಳ್ಳ, **ದ್ಯುಮಣಿ** = ಸೂರ್ಯನು, **ರಾಹುಯುಕ್ತ** = ರಾಹುವಿನಿಂದ ಯುಕ್ತನಾದ, **ಭೀಷ್ಮಕ** = ಭೀಷ್ಮಕರಾಯನೆಂತಲೂ, **ತ್ರೈತೆಯೊಳು** – ತ್ರೇತಾಯುಗದಲ್ಲಿ, **ತಾರನಾಮಕನೆನಿಸಿ** = ತಾರನೆಂಬ ಹೆಸರಿನ ಕಪಿಯ ಅವತಾರ, **ಯಮಳರೂಪಗಳು** = ಇಂತು, ಮಿತ್ರನಾಮಕ ಸೂರ್ಯನಿಗೆ (1) ಭೀಷ್ಮಕ ಮತ್ತು (2) ತಾರಾ–ಎಂಬ ಎರಡು ಅವತಾರಗಳು. ॥23॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಸಪ್ತಋಷಿಗಳ ನಾಮ, ಮಿತ್ರನಾಮಕ ಸೂರ್ಯಾದಿಗಳ ತಾರತಮ್ಯ ವಿಚಾರ ಹೇಳತಾರೆ.

ಕಮಲೋದ್ಭವರಾದ ಬ್ರಹ್ಮದೇವರ ಅವಯವಗಳಿಂದ ಉತ್ಪನ್ನರಾದ ವರೆಂತ ಕರೆಸತಕ್ಕ, ಋಷಿಗಳಾದ, ನಿಯಮಾದಿ ಅಷ್ಟಸಿದ್ಧಿಯುಳ್ಳ ಜ್ಞಾನಿ ಶ್ರೇಷ್ಠರಾದ, 1. ಮರೀಚಿಯ ಮನಸ್ಸಿನಿಂದ, 2. ಅತ್ರಿಋಷಿ ನೇತ್ರದಿಂದ, 3. ಅಂಗಿರಸಋಷಿ ಮುಖದಿಂದ, 4. ಪುಲಹಋಷಿ ನಾಭಿಯಿಂದ, 5. ಕ್ರತುಋಷಿ ಕರದಿಂದ, 6. ವಸಿಷ್ಠಋಷಿ ಪ್ರಾಣದಿಂದ, 7. ಪುಲಸ್ತ್ಯಋಷಿ ಕರ್ಣದಿಂದ ಹುಟ್ಟಿದವರು ಸಪ್ತಋಷಿಗಳು. ಏತಾದೃಶ ಸಪ್ತಋಷಿಗಳು, ಪೂರ್ವೋಕ್ತರಾದ ವಿಶ್ವಾಮಿತ್ರ ವೈವಸ್ವತಮನು ಅಂತು, ಒಂಭತ್ತುಮಂದಿ, ಸ್ವಾಹಾದೇವೀಪತಿ ಅಗ್ನಿದೇವರಿಗೆ ಪೂರ್ವೋಕ್ತಪ್ರಕಾರ ವೀಸಗುಣದಿಂದ ಅಧಮರೆಂದು ತಾತ್ಪರ್ಯ. ಇಲ್ಲಿಗೆ ಸಪ್ತಋಷಿಗಳ ವಿಚಾರ ಮುಗಿಯಿತು.

ನಂತರ ಮಿತ್ರನಾಮಕ ಸೂರ್ಯ. ಇವಗೆ ಸಮಾನರಾದ ಈ ಕಕ್ಷದವರಾದ ಉತ್ತರೋತ್ತರ ಉಕ್ತರಾಗಿರುವ ನಿರುತಿ, ಪ್ರಾವಹಿ, ಬೃಹಸ್ಪತೀ ಭಾರ್ಯಾ ತಾರಾ-ಅಂತು ನಾಲ್ಕು ಮಂದಿ, ಮಿತ್ರನ ಉಪಲಕ್ಷಣಯಾ ಉತ್ತರೋತ್ತರ ಹೇಳಿರುವ ಈ ಕಕ್ಷದವರಾದ ಪ್ರಕೃತಶ್ಲೋಕದಲ್ಲಿ ಹೇಳದೇ ಇರುಪವರನ್ನ ಝಡಿತ್ಯಾ ಬೋಧಾರ್ಥ ಅಧ್ಯಾಹಾರ ಮಾಡಿಕೊಂಡು, ಹೇಳಲ್ಪಟ್ಟಿದೆ. ಈ ನಾಲ್ಕು ಮಂದಿಯೊಳಗೆ, ಮಿತ್ರನಾಮಕ ಸೂರ್ಯನ ಅವತಾರ ಭೀಷ್ಮಕರಾಯ ಎಂತಲೂ ತ್ರೇತಾಯುಗದಲ್ಲಿ ತಾರ ಎಂತ ನಾಮದಿಂದ ಕರಸಿದ ತಾರನಾಮಕ ಅವತಾರ. ಬೃಹಸ್ಪತ್ಯಾಚಾರ್ಯರ ಅವತಾರದಲ್ಲಿ ತಾರ ಎಂತ ಅವತಾರ ಒಂದು ಅದೆ. ಅಂತು ಎರಡೂ ಬ್ಯಾರೆ ಬ್ಯಾರೇನೇ-ಒಂದಲ್ಲ, ನಾಮ ಮಾತ್ರ ಒಂದಾಗೇ ಅದೆ. ಈ ತಾರ-ಎಂಬ ಅವತಾರ ಮಿತ್ರನಾಮಕ ಸೂರ್ಯನ ಅವತಾರ. ಈ ಮಿತ್ರನಾಮಕ ಸೂರ್ಯನು ಎರಡು ರೂಪದಿಂದ ಎರಡು ಅವತಾರಗಳುಳ್ಳವನು. ಈ ಎರಡರ ಒಳಗೆ, ರಾಹುವಿನಿಂದ ಯುಕ್ತನಾದವನು, ಭೀಷ್ಮಕರಾಯನು ಅವಶಿಷ್ಟ ಮುಂದೆ ಹೇಳತಾರೆ. ॥23॥

**ಭಾವಪ್ರಕಾಶಿಕೆ :-**

ಬ್ರಹ್ಮದೇವರ ಮಕ್ಕಳಾದ ಮರೀಚಿ, ಅತ್ರಿ, ಅಂಗಿರ, ಪುಲಹ, ಕ್ರತು ವಸಿಷ್ಟ, ಪುಲಸ್ತ್ಯ-ಈ ಏಳುಮಂದಿ ಋಷಿಗಳೂ, ಅಗ್ನಿ ಮೊದಲಾದ ಮೂವರಕ್ಕಿಂತಲೂ ಕಮ್ಮಿ ಎನಿಸುವರು. ಮಿತ್ರನೆಂಬ ಸೂರ್ಯನಿಗೆ ಎರಡು ರೂಪಗಳು ತ್ರೇತಾಯುಗದಲ್ಲಿ ತಾರನಾಮಕನಾಗಿದ್ದನು. ಆದರೆ, ಬೃಹಸ್ಪತ್ಯಾಚಾರ್ಯರು ತಾರನೆಂಬ ಕಪಿಯಾದರೆಂದು ದಾಸರಾಯರ ವಾಕ್ಯದಿಂದಲೂ, ನಿರ್ಣಯವಾಕ್ಯದಿಂದಲೂ, ಸಿದ್ಧಾಂತವಾಗಿರುವುದು. ಆದ್ದರಿಂದ ಮಿತ್ರನು ತಾರನೆಂದು ಮತ್ತೊಬ್ಬ ಕಪಿಯಾಗಿರಬಹುದೆಂದು ಊಹಿಸಬೇಕು. ಇದಕ್ಕೆ ಸರಿಯಾದ ಆಧಾರವು ನಮಗೆ ದೊರಕಲಿಲ್ಲ. ದಾಸಾರ್ಯರು ಅಪರೋಕ್ಷಜ್ಞಾನಿಗಳಾದುದರಿಂದಲೂ, ಅನೇಕ ಗ್ರಂಥಗಳನ್ನು ನೋಡಿದವರಾದುದರಿಂದ ಯಾವ ಗ್ರಂಥಗಳ ಆಧಾರದ ಮೇಲೆ ಈ ಅವತಾರವನ್ನು ಹೇಳಿದ

ರೆಂದು ಕಂಡು ಹಿಡಿಯಲು ನಮ್ಮ ಮಂದಬುದ್ಧಿಗೆ ಗೋಚರವಾಗಲಿಲ್ಲ. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲೂ ತಾರನೆಂಬ ಇವನು ಬೇರೆ ; ಬೃಹಸ್ಪತಿ ಅವತಾರನಾದ ತಾರನು ಬೇರೆ ಎಂದು ಮಾತ್ರ ಬರೆದಿರುವರು. ಅವರೂ ಆಧಾರ ಬರೆದಿಲ್ಲ. ಕಮಲಾಪತಿದಾಸರ ವ್ಯಾಖ್ಯಾನದಲ್ಲಿ —"**ತಾರನಾಮಕ ನೆನಿಸಿ**"-ಎಂಬ ಪದಕ್ಕೆ, ಬೃಹಸ್ಪತ್ಯಾಚಾರ್ಯರ ಹೆಂಡತಿ ತಾರೆಗೆ ಕೃಪೀ ಎಂಬ ಅವತಾರ ಉಂಟೆಂದು ಬರೆದಿರುತ್ತಾರೆ. ಇಲ್ಲಿರುವುದು ತಾರನೆಂದು ಪುಲ್ಲಿಂಗ ವಾಚಕವಾಗಿರುವುದು. ವ್ಯಾಖ್ಯಾನದಲ್ಲಿ ತಾರೆ-ಎಂದು ಅರ್ಥಮಾಡಿರುವರು. ಇದು ಮೂಲಕ, ವ್ಯಾಖ್ಯಾನಕ್ಕೂ ಸರಿ ಹೋಗುವುದಿಲ್ಲ. ಪುಸ್ತಕಾಂತರದಲ್ಲಿ ಪಾಠಾಂತರವಿರಬಹುದೋ-ಎಂಬ ಶಂಕೆಯೂ ಬಾಧಿಸುತ್ತಿರುವುದು.

ಅಂತು, ಇದು ಹೀಗೆ ನಿರ್ಧರಿಸಲು ಸಾಧ್ಯವಾಗಲಿಲ್ಲ. ಮಿತ್ರನೆಂಬ ಸೂರ್ಯನಿಗೆ ಮತ್ತೊಂದು ಅವತಾರವು ಭೀಷ್ಮಕರಾಜನ ರೂಪವು. ಇವನಲ್ಲಿ ರಾಹುವಿನ ಆವೇಶವೂ ಇರುವುದು. ನಿರ್ಣಯ 14ನೆಯ ಅಧ್ಯಾಯದಲ್ಲಿ,- ಪೂರ್ವದಲ್ಲಿ ಮನುಷ್ಯರನ್ನ ಕೊಲ್ಲುತ್ತಿದ್ದ ಇಲ್ವಲನೆಂಬ ದಾನವನೇ ರುಗ್ಮೀ— ಎಂಬ ಹೆಸರಿನಿಂದ ಹುಟ್ಟಿ,ಕುಂಡಿನ ಪಟ್ಟಣಕ್ಕೆ ಅಧಿಪತಿಯಾಗಿದ್ದನು. ಇವನಲ್ಲಿ ಶುಚಿ ಎಂಬ ಅಂಶವೂ ಇದ್ದಿತು. ಇವನ ತಂದೆಯಾದ ಭೀಷ್ಮಕರಾಜನು ರಾಹು ಅಂಶದಿಂದ ಕೂಡಿದ ಮಿತ್ರನೆಂಬ ಸೂರ್ಯನೆಂದು ತಿಳಿಯಬೇಕು-ಎಂದು ಹೇಳಿರುವರು. ॥23॥

## ೩. ಭಾವದರ್ಪಣ :-

ಈ ಪದ್ಯದ ತಾತ್ಪರ್ಯವನ್ನು ಹಿಂದಿನ 22ನೇ ಪದ್ಯದ ತಾತ್ಪರ್ಯದಲ್ಲೇ ಸೇರಿಸಿ ಕೊಟ್ಟಿದೆ. ॥23॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ವಿಶ್ವಸ್ಯ ಸದ್ವರ್ಗಸ್ಯ ಮಿತ್ರಂ ವಿಶ್ವಾಮಿತ್ರಃ ॥ ಸರ್ವಂ ಬ್ರಹ್ಮಣಾ

ನಿರ್ಮಿತಂ ಆಮಿನೋತಿ ನಿರ್ಮಾತಿ ಚ ತ್ರಾಯತೇ ಚ ಇತಿ ವಿಶ್ವಾಮಿತ್ರಃ ॥ ಇಷ್ಟಂ ವಿಷ್ಣುಂ ಸ್ವವಶೇ ಕರೋತಿ ಇತಿ. ವಿ(ವ)ಶಿಷ್ಟಃ ॥ ಮರೀಚಯಃ ಜ್ಞಾನರೂಪಾಃ ಖಗೇಂದ್ರ ಯಸ್ಯಾಸ್ಯದ್ವಾರೋದ್ಗಲಯಂತಿ ನಿತ್ಯಂ ಮರೀಚಿಃ॥ ಆನಂದರೂಪಃ ವಿಷ್ಣುಂ ಏವಂ ಸದೈವ ತ್ರಾತಿ ಹ್ಯಸ್ಮಾತ್ ಅತ್ರಿ ಸಂಜ್ಞಃ ॥ ಅಸ್ಯ ಆನಂದರೂಪಾಃ ಗಿರಃ ॥ ಅತಃ ಅಂಗಿರಾಃ ॥ ಹರಿಣಾ ಪಂಚಭೂತೈಃ ಸುನಿರ್ಮಿತಂ ಜರಾಯ್ವಾದ್ಯಾದಿ ಪಾಲಿತಂ ಗಾತ್ರಂ ಜ್ಞಾನಾದಿಕ್ರಚ್ಛ್ರೇಣ ಹರೌ ಚ ಭಕ್ತ್ಯಾ ಹನನಂ ಕರೋತಿ ಇತಿ ಪುಲಹಃ ॥ ಯೋಗ್ಯಾನುಸಾರಂ ಪೂರ್ಣ ಸುಖಂ ಭಿನತ್ತಿ ತತಃ ಅರಿಷಡ್ವರ್ಗಃ ಪುಲಃ ॥ ತಂ ಸ್ತ್ಯಾಯತಿ ಹಂತಿ ಇತಿ ಅತಃ ಪುಲಸ್ತ್ಯಃ ವಿಶೇಷೇಣ ಕ್ರಿಯತೇ ಪಂಚಯಜ್ಞಃ ನಾರಾಯಣೇ ಹ್ಯರ್ಪಣಂ ಸರ್ವದಾಪಿ ॥ ಅತಃ ಕ್ರತುಃ ॥ ಪ್ರಕರ್ಷಾಹ್ಲಾದಯುತಃ ಪ್ರಹ್ಲಾದಃ ॥ ಯಮಳ-ಮಿತ್ರರಾಹ್ವೋಃ ಸ ತು ಪಿತಾಸ್ಯ ಹಿ ಮಿತ್ರಭಾಗಾಃ ರಾಹೋಶ್ಚ ಇತಿ ಮಾನವಮ್ ॥ ವರ್ಷಾಕಾಲೇ ಪ್ರಮಿನೋತಿ ವೃಷ್ಟಿಂ ತಯಾ ಪ್ರಜಾಃ ತ್ರಾಯತಿ ಇತಿ ಮಿತ್ರಃ ॥ ಉತ್ತಮಸ್ತ್ರೀಣಾಂ ಪಾತಿವ್ರತ್ಯೋಪದೇಶಕತ್ವಾತ್ ತಾರಾ ॥ ತ್ರೇತಾಯಾಂ ತಾರಭಾರ್ಯೈವ ಕೃಪೀ ॥ (ನಾಪ್ಯೈಕ್ಯ ಮುಷಾವತ್) ॥ ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ ॥ ನಿಜಾಂ ಕೃಪೀಂ ಸ ದ್ರೋಣೇಪಿ ಭಾರ್ಯಾ ॥ ॥22॥ ॥23॥

## ಕನ್ನಡಾರ್ಥ

ಇಲ್ಲಿ ಸಪ್ತಋಷಿಗಳಿಗೆ ಒಪ್ಪುವಂಥ ನಾಮಗಳ ಅರ್ಥವನ್ನು ವಿವರಿಸುತ್ತಾರೆ. ಶೀಘ್ರವಾಗಿ ಹೋಗುವವರು-ಯಾವುದೋದು ಕಾರ್ಯಕ್ಕಾಗಿ ಅತಿ ತ್ವರೆಯಿಂದ ಹೋಗುವುದರಿಂದ 'ಭೃಗು'-ಎಂದು ಹೆಸರು.

(1) ಸಮಸ್ತವಿಶ್ವಕ್ಕೆ ಸಜ್ಜನವರ್ಗಕ್ಕೆ, ಮಿತ್ರನಾದುದರಿಂದ ವಿಶ್ವಾಮಿತ್ರ. ಬ್ರಹ್ಮನಿರ್ಮಿತ ವಿಶ್ವವನ್ನು ಮಾಸಕ್ಕೆ ತರದೆ, ಅವರಂತೆ ಪ್ರತಿವಿಶ್ವವನ್ನು ನಿರ್ಮಿಸಿ ಸಂರಕ್ಷಿಸುವನು. ಆದುದರಿಂದ, 'ವಿಶ್ವಾಮಿತ್ರ'-ಎಂದು ಹೆಸರು,

(2) ಪರಮಾನಂದಸ್ವರೂಪನಾದ ಶ್ರೀನಾರಾಯಣನನ್ನು ಭಕ್ತಿಯಿಂದ ತಮ್ಮ ವಶದಲ್ಲಿ ಮಾಡಿಕೊಳ್ಳುವುದರಿಂದ, '**ವ(ವಿ)ಸಿಷ್ಟ**'-ರೆಂದು ಹೆಸರು.

(3) ಜ್ಞಾನರೂಪಗಳಾದ ಮರೀಚಿ(ಕಿರಣ)ಗಳನ್ನು ಮುಖದ್ವಾರದಿಂದ ಹೊರಸೂಸುವುದರಿಂದ, '**ಮರೀಚಿ**'-ಎಂದು ಹೆಸರು.

(4) ಆನಂದರೂಪಿಯಾದ ವಿಷ್ಣುವು ಯಾವಾಗಲೂ ಈ ಋಷಿಯನ್ನು ಸಂರಕ್ಷಿಸುವುದರಿಂದ, '**ಅತ್ರಿ**'-ಎಂದು ಹೆಸರು.

(5) ಆನಂದಪ್ರದವಾದ ವಾಕ್ಯಗಳು ಇವರಿಗೆ ಇರುವುದರಿಂದ, '**ಅಂಗಿರಾ**'-ಎಂದು ಹೆಸರು.

(6) ಹರಿಯು ನಿರ್ಮಿಸಿದ ಪಾಂಚಭೌತಿಕವಾದ ಜರಾಯುವಿನಿಂದ ರಕ್ಷಿತವಾದ ಶರೀರವನ್ನು ಹರಿಯ ವಿಷಯಕ ಜ್ಞಾನ ಭಕ್ತಿ ಜನಿತವಾದ ಪ್ರಸಾದದಿಂದ ನಾಶಮಾಡುವುದರಿಂದ, "**ಪುಲಹ**"-ಎಂದು ಹೆಸರು.

(7) ಸ್ವಯೋಗ್ಯತಾನುಸಾರವಾದ ಜ್ಞಾನಾನಂದ ಪೂರ್ಣಸುಖವನ್ನು ತಡೆಮಾಡುವುದರಿಂದ, ಅರಿಷಡ್ವರ್ಗಗಳಿಗೆ ಪುಲವೆಂದು ಹೆಸರು. ಇಂಥ ಅರಿಷಡ್ವರ್ಗಪುಲವನ್ನು ಭಗವತ್ ಜ್ಞಾನ ಭಕ್ತಿ ವಿರಕ್ತಿಗಳಿಂದ ನಾಶಮಾಡುವುದರಿಂದ, '**ಪುಲಸ್ತ್ಯ**'-ರೆಂದು ಹೆಸರು.

(8) ಪಂಚಮಹಾಯಜ್ಞಗಳನ್ನು ವಿಶೇಷವಾಗಿ ಮಾಡಿ, ಸರ್ವದಾ ಅವುಗಳನ್ನು ನಾರಾಯಣನಲ್ಲಿ ಸಮರ್ಪಿಸುವುದರಿಂದ, '**ಕ್ರತು**'-ಎಂಬ ಹೆಸರು ಬಂದಿರುತ್ತದೆ.

ವಿಶ್ವಾಮಿತ್ರನು ವಸಿಷ್ಠ ಸಮನಾದುದರಿಂದ, ವಿಶ್ವಾಮಿತ್ರಶಬ್ದವನ್ನು ಇಲ್ಲಿ ವಿವರಿಸಿರುತ್ತಾರೆ. ಬಹಳ (ಆಹ್ಲಾದಯುಕ್ತನಾದುರಿಂದ ಪ್ರಹ್ಲಾದನು **ಹಿಂದಿನ ಪದ್ಯಕ್ಕೆ**) '**ಯಮಳ**'-ಮಿತ್ರ ಹಾಗೂ ರಾಹು ಇವರಿಂದ **ಕೂಡಿ**

ದವನು. ಈ ಭೀಷ್ಮಕನಲ್ಲಿ ಹೀಗೆ ಎರಡು ರೂಪಗಳಿರುವವೇಬಲ್ಲಿ **"ಸ ತು-ಷಿತಾಸ್ಮ"**-ಎಂಬ ವಚನಗಳು ಆಧಾರ. ವರ್ಷಾಕಾಲದಲ್ಲಿ ಮಳೆಯಿಂದ ಪ್ರಜೆಗಳನ್ನು ಸಂರಕ್ಷಿಸುವವನು ಮಿತ್ರ (ಸೂರ್ಯ). ಉತ್ತಮ ಸ್ತ್ರೀಯರಿಗೆ ಪಾತಿವ್ರತ್ಯವನ್ನು ಉಪದೇಶಿಸುವವಳು ತಾರಾ. ತ್ರೇತಾಯುಗದಲ್ಲಿ ತಾರನೆಂಬುವವನ ಹೆಂಡತಿ. ಅವಳೇ ಕೃಪೀ. ಅವಳನ್ನೇ ಬೃಹಸ್ಪತಿಯವತಾರನಾದ ದ್ರೋಣನು ಅಂಗೀಕರಿಸಿದನು. ॥23॥

**ಆ. ಶ್ರೀಗುರುಹೃದಯ ಪ್ರಕಾಶಿಕೆ :–**

ಕಮಲಸಂಭವನೆಂಬ ಬ್ರಹ್ಮನ ಮಕ್ಕಳಾದ ನಿಯಮವುಳ್ಳ,ಮರೀಚಿ,ಅತ್ರಿ, ಅಂಗಿರ, ಸುಬುದ್ಧಿಯಾದ ಪುಲಹನು,ಕ್ರತು, ವಸಿಷ್ಠ, ಪುಲಸ್ತ್ಯರೆಂಬ—ಏಳು ಮಂದಿಗಳು, ಸ್ವಾಹಾರಮಣನಾದ ಅಗ್ನಿಗಿಂತ ಕಡಿಮೆ. ಮಿತ್ರನಾಮಕ ಸೂರ್ಯನು ತ್ರೇತಾಯುಗದಲ್ಲಿ ತಾರನೆಂಬ ಕಪಿನಾಮಕ. ದ್ವಾಪರಯುಗದಲ್ಲಿ ರಾಮಯುಕ್ತ ಭೀಷ್ಮಕರಾಯನೆಂದು ಯಮಳ ರೂಪನು. ಅಂದರೆ, ಎರಡು ಅವತಾರ ಉಳ್ಳವ ಸಂದರ್ಭ. ॥23॥

# ಸರ್ವವ್ಯಾಖ್ಯಾನಸಾರಸಂಗ್ರಹ

**1. ಕಮಲಸಂಭವ ಭವರೆನಿಪ :–**

ಶ್ರೀಪದ್ಮನಾಭರೂಪೀ ಶ್ರೀಹರಿಯ ನಾಭೀಕಮಲದಲ್ಲಿ ಬ್ರಹ್ಮದೇವರು ಉತ್ಪನ್ನರಾದರು. ಈ ಕಾರಣದಿಂದ,ಬ್ರಹ್ಮದೇವರು–**"ಕಮಲಸಂಭವ"**–ರೆನಿಸಿದರು.

ಬ್ರಹ್ಮದೇವರ ಮಕ್ಕಳು ಮರೀಚ್ಯಾದಿ ಸಪ್ತರ್ಷಿಗಳು. ಇವರೇ ಕಮಲಸಂಭವಭವರು, ಅವರು ಕ್ರಮವಾಗಿ, ಮರೀಚಿ–ಅತ್ರಿ–ಅಂಗಿರಸ–ಪುಲಹ–

ಕ್ರತು–ವಸಿಷ್ಠ–ಪುಲಸ್ತ್ಯ–ಎಂದು ಏಳು ಮಂದಿ ಋಷಿಗಳು. ಈ ಸಪ್ತರ್ಷಿಗಳು ಸಾಹಾಜ್ಞಾನಿಗಳು (ಸುಮತಿ) ಮತ್ತು ಜಿತೇಂದ್ರಿಯರು (ಸಂಯಮಿ).

**2. ಮರೀಚಿ :–**

ಮರೀಚಿಯು ಬ್ರಹ್ಮದೇವರ ಮನಸ್ಸಿನಿಂದ ಉತ್ಪನ್ನನಾದನು. ಇವರಿಂದ, ಮರೀಚಿ ಋಷಿಯು ಬ್ರಹ್ಮಮಾನಸ ಪುತ್ರರು. ಜ್ಞಾನರೂಪಗಳಾದ ಮರೀಚಿ (ಕಿರಣಗಳನ್ನು) ಮುಖದ್ವಾರದಿಂದ ಹೊರಸೂಸುವುದರಿಂದ–**ಮರೀಚಿ**–ನಾಮ ಕನು. ಕಶ್ಯಪಮುನಿ ಈತನ ಪುತ್ರ. ಕರ್ದಮ ಮುನಿ ಪುತ್ರಿ, ಕಲಾದೇವಿ ಮರೀಚಿಯ ಪತ್ನಿ. ಊರ್ಣೆ-ಎಂಬುವಳು, ಈತನ ಕಿರಿಯ ಹೆಂಡತಿ. ಮರೀಚಿಯು ಸ್ವಾಯಂಭುವಮನ್ವಂತರದಲ್ಲಿ ಜನಿಸಿದನು ಮರೀಚಿಯು ಊರ್ಣೆಯಲ್ಲಿ ಸ್ಮರ–ಉದ್ಗೀಥ–ಪರಿಷ್ವಂಗ–ಪತಂಗ—ಕ್ಷುದ್ರಭೃತ–ಘೃಣೀ—ಎಂಬ ಆರು ಪುತ್ರರನ್ನು ಪಡೆದನು. ಅವರು ಬ್ರಹ್ಮನಿಗೆ ಹಿಂಸೆಯನ್ನುಂಟುಮಾಡಿದರು. ಬ್ರಹ್ಮದೇವರ ಶಾಪಕ್ಕೆ ತುತ್ತಾಗಿ, ಹಿರಣ್ಯಾಕ್ಷನ ಮಕ್ಕಳಾಗಿ ದುಷ್ಟ ಯೋನಿಯಲ್ಲಿ ಜನಿಸಿ, ದೇಹತ್ಯಾಗ ಮಾಡಿದರು. ಎರಡನೆಯ ಜನ್ಮದಲ್ಲಿ ವಸುದೇವನಿಂದ ದೇವಕಿಯಲ್ಲಿ ಜನಿಸಿದ ಈ ಆರು ಮಕ್ಕಳೇ ಕಂಸನ ಖಡ್ಗಕ್ಕೆ ಆಹುತಿಯಾದರು.

**3. ಅತ್ರಿಋಷಿ :–**

ಅತ್ರಿಋಷಿಯು ಬ್ರಹ್ಮದೇವರ ನೇತ್ರದಿಂದ ಉತ್ಪನ್ನರಾದರು. ಆನಂದ ರೂಪಿಯಾದ ಶ್ರೀವಿಷ್ಣುವು ಯಾವಾಗಲೂ ಈ ಋಷಿಯನ್ನು ಸಂರಕ್ಷಿಸುತ್ತಿರುವುದರಿಂದ–**ಅತ್ರಿ**–ಎಂದು ಹೆಸರು. ವೈವಸ್ವತ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬನು. ಕರ್ದಮನ ಪುತ್ರಿ ಅನುಸೂಯೆಯ ಪತಿ. ದತ್ತಾತ್ರೇಯ–ದುರ್ವಾಸ-ಚಂದ್ರ–ಈ ಮೂವರೂ ಅತ್ರಿಪುತ್ರರು. ದತ್ತಾತ್ರೇಯನೇ ಸಾಕ್ಷಾತ್ ಶ್ರೀಹರಿಯ ಅವತಾರನು. ಮಂತ್ರದೃಷ್ಟನಾದ ಮಹಾಮುನಿ. ಈತನ ಕಣ್ಣಿನಿಂದ ಚಂದ್ರನು ಜನಿಸಿದನು. ಶ್ರೀರಾಮನ ವನವಾಸಕಾಲದಲ್ಲಿ, ತನ್ನ ಆಶ್ರಮದಲ್ಲಿ ಅತ್ರಿ ಮುನಿಯು ರಾಮನಿಗೆ ಅನೇಕ ಧರ್ಮರಹಸ್ಯಗಳನ್ನು ತಿಳಿಸಿದನು.

### 4. ಅಂಗಿರಸಮುನಿ :–

ಅಂಗಿರಸಋಷಿಯು ಬ್ರಹ್ಮದೇವರ ಮುಖದಿಂದ ಜನಿಸಿದನು. ಆನಂದ ಪ್ರದನಾದ ವಾಕ್ಯಗಳು ಇವರಿಗೆ ಇರುವುದರಿಂದ–**ಅಂಗಿರಾ**–ಎಂತ ನಾಮ. ಈತನು ಪ್ರಸಕ್ತವೈವಸ್ವತಮನ್ವಂತರದಲ್ಲಿ ವರುಣನ ಯಜ್ಞದ ಅಗ್ನಿಕುಂಡ ದಿಂದ ಜನಿಸಿದನು. (**ಭಾರತ–ಆದಿಪರ್ವ ಮತ್ಸ್ಯಪುರಾಣ**). ಕರ್ದಮ ಬ್ರಹ್ಮನ ಪುತ್ರಿ ಶ್ರದ್ಧೆ-ಈತನ ಪತ್ನಿ. ಸ್ವಧಾ-ಎಂಬ ಪತ್ನಿಯಲ್ಲಿ ಮಿತ್ರದೇವತೆ ಗಳು ಜನಿಸಿದರು. ಸತಿ-ಎಂಬ ಮಡದಿಯಲ್ಲಿ ಅಥರ್ವಾಂಗಿರಸರನ್ನು ಪಡೆದನು.

### 5. ಪುಲಹ :-

ಸಪ್ತರ್ಷಿಗಳಲ್ಲಿ ಒಬ್ಬನಾದ ಪುಲಹನು,ಬ್ರಹ್ಮದೇವರ ನಾಭಿಯಿಂದ ಜನಿಸಿ ಹರಿಯು ನಿರ್ಮಿಸಿದ ಪಾಂಚಭೌತಿಕವಾದ ಜರಾಯುವಿನಿಂದ ರಕ್ಷಿತ ಶರೀರವನ್ನು ಹರಿಯ ವಿಷಯದ ಜ್ಞಾನಭಕ್ತಿ ಜನಿತವಾದ ಪ್ರಸಾದದಿಂದ ಮಾಡುವುದರಿಂದ, ಈತನಿಗೆ–**ಪುಲಹ**-ನೆಂದು ಹೆಸರು. ಕರ್ದಮಬ್ರಹ್ಮನ ಪುತ್ರಿ-ಎಂಬುವಳ ಪತಿ. ಕರ್ಮಶ್ರೇಷ್ಠ–ವರೀಯಸ್–ಸಹಿಷ್ಣು-ಎಂಬ ರು ಪುಲಹಮುನಿಯ ಪುತ್ರರು. (**ಭಾರತ–ಆದಿಪರ್ವ**).

### ಕ್ರತು :–

ಕ್ರತುಮುನಿಯು ಬ್ರಹ್ಮದೇವರ ಕರದಿಂದ ಜನಿಸಿದನು. ಪಂಚಮಹಾ ಯಜ್ಞಗಳನ್ನು ವಿಶೇಷವಾಗಿ ಮಾಡಿ, ಸರ್ವದಾ ಆ ಯಜ್ಞ ಫಲವನ್ನು ನಾರಾ ಯಣನಿಗೆ ಅರ್ಪಿಸುವುದರಿಂದ,ಈ ಮುನಿಗೆ-**ಕ್ರತು**-ಎಂಬಭಿಧಾನ. ಸೂರ್ಯನ ರಥದ ವಾಲಖಿಲ್ಯರು ಈತನ ಪುತ್ರರು. ಕ್ರಿಯೆ ಮತ್ತು ಸನ್ನತಿ-ಎಂಬ

## 7. ವಸಿಷ್ಠ :-

ವಸಿಷ್ಠಮಹರ್ಷಿಯು ಬ್ರಹ್ಮದೇವರ ಪ್ರಾಣದಿಂದ ಜನಿಸಿದರು. ಪರಮ ಇಷ್ಟರೂಪನಾದ ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ತಮ್ಮ ವಶದಲ್ಲಿ ಮಾಡಿಕೊಂಡಿರುವುದರಿಂದ— **ವಸಿಷ್ಠ**—ನೆಂದು ಖ್ಯಾತನಾಮರಾಗಿದ್ದಾರೆ. ಸ್ವಾಯಂಭುವಮನ್ವಂತರದ ಋಷಿ. ಕರ್ದಮಮುನಿಯ ಏಳನೆಯ ಪುತ್ರಿ ಊರ್ಜಾದೇವಿ-ಈತನ ಪತ್ನಿ. ಅರುಂಧತಿ ಎಂಬಾಕೆಯಲ್ಲಿ ಶಕ್ತಿ ಮಹರ್ಷಿಗಳನ್ನು ಪಡೆದನು. ಪ್ರಸಕ್ತ ವೈವಸ್ವತಮನ್ವಂತರದಲ್ಲಿ ಮಿತ್ರಾವರುಣರ ಅಂಶದಿಂದ ಊರ್ವಶಿಯಲ್ಲಿ ಜನಿಸಿದನು. ಮಿತ್ರಾವರುಣರಿಗೆ ಊರ್ವಶಿಯನ್ನು ಕಂಡು ಮೋಹ ಉಂಟಾಗಲು, ಅವರ ವೀರ್ಯವನ್ನು ಊರ್ವಶಿಯು ಕುಂಭದಲ್ಲಿ ಸಂಗ್ರಹಿಸಿದಳು. ಇದರಿಂದ,ವಸಿಷ್ಠ ಮತ್ತು ಅಗಸ್ತ್ಯರು ಜನಿಸಿದರು. ಈ ಕಾರಣದಿಂದ ವಸಿಷ್ಠರಿಗೆ-**ಕುಂಭಸಂಭವ**-ನೆಂದು ಹೆಸರು ಬಂದಿತು. ವಸಿಷ್ಠರು ಇಕ್ಷ್ವಾಕುವಂಶದ ರಾಜರಿಗೆಲ್ಲಾ ಪುರೋಹಿತರು. ವಸಿಷ್ಠ ಮತ್ತು ವಿಶ್ವಾಮಿತ್ರರ ಸಂವಾದದ ಫಲವಾಗಿ, ಹರಿಶ್ಚಂದ್ರನ ಸತ್ಯಸಂಧತೆಯನ್ನು ಲೋಕಕ್ಕೆ ತೋರಿದ ಪ್ರಸಂಗ.

## 8. ಪುಲಸ್ತ್ಯಮುನಿ :.

ಬ್ರಹ್ಮದೇವರ ಕರ್ಣದಿಂದ ಪುಲಸ್ತ್ಯನು ಜನಿಸಿದನು. ಸ್ವಯೋಗ್ಯತಾನು ಸಾರವಾದ ಜ್ಞಾನಾನಂದ ಪೂರ್ಣಸುಖವನ್ನು ತಡೆಮಾಡುವ ಅರಿಷಡ್ವರ್ಗ ಗಳಿಗೆ-"**ಪುಲ**"-ಎಂದು ಹೆಸರು. ಇವುಗಳನ್ನು ಭಗವತ್ ಭಕ್ತಿ ವಿರಕ್ತಿಗಳಿಂದ ನಾಶ ಮಾಡುವುದರಿಂದ-**ಪುಲಸ್ತ್ಯ**-ಎಂತ ನಾಮ. ತೃಣಮುನಿಯ ಮಗಳಾದ ಗೋ-ಎಂಬಾಕೆಯನ್ನು ಲಗ್ನವಾಗಿ,ವಿಶ್ರವಸ್-ಎಂಬ ಪುತ್ರನನ್ನು ಪಡೆದನು. ರಾವಣನು ಕಾರ್ತವೀರ್ಯಾರ್ಜುನನ ಮೇಲೆ ಯುದ್ಧ ಮಾಡಲು, ಅವನಿಂದ ಸೆರೆ ಸಿಕ್ಕಿ ಬಿದ್ದನು. ಆಗ ಪುಲಸ್ತ್ಯನು ಕಾರ್ತವೀರ್ಯನಲ್ಲಿ ಹೋಗಿ, ರಾವಣ ನನ್ನು ಬಿಡಿಸಿದನು. ಕರ್ದಮಬ್ರಹ್ಮನ ಪುತ್ರಿ ಹನಿರ್ಭಾಕ್— ಎಂಬಾಕಯು ಈತನ ಇನ್ನೊಬ್ಬ ಪತ್ನಿ. ಆಕೆಯಿಂದ ಅಗಸ್ತ್ಯ ಮಹರ್ಷಿಯನ್ನು ಪಡೆದನು.

ಇಲಿಬಿಲೆ- ಎಂಬಾಕೆಯಲ್ಲಿ ಕುಬೇರನನ್ನೂ, ಕೇಶನಿಯಲ್ಲಿ ರಾವಣಾದಿಗಳನ್ನೂ ಪಡೆದನು. ಪ್ರೀತಿ-ಎಂಬ ಪತ್ನಿಯಲ್ಲಿ ದಂಭೋಳಿ-ಎಂಬ ಪುತ್ರನು ಜನಿಸಿದನು.

9. ಪೂರ್ವೋಕ್ತ ಸಪ್ತರ್ಷಿಗಳು ಅಗ್ನಿಗಿಂತ (ಸ್ವಾಹಾರಮಣಗೆ) ನೀಚ ಗುಣಗಳಿಂದ ಅಧಮರು.

## 10. ಮಿತ್ರನಾಮಕಸೂರ್ಯ :–

ಮಿತ್ರನಾಮಕಸೂರ್ಯನು ದ್ವಾದಶಾದಿತ್ಯರ ವರ್ಗದಲ್ಲಿ ಒಬ್ಬನು. ವರ್ಷಕಾಲದಲ್ಲಿ ಮೇಘಗಳಿಂದ ಮಳೆಯನ್ನು ಬರಿಸಿ, ಪ್ರಜೆಗಳನ್ನು ಸಂರಕ್ಷಿಸುವನಾದ್ದರಿಂದ–**ಮಿತ್ರ**–ನಾಮಕನು. ಮಿತ್ರನಾಮಕಸೂರ್ಯನು ತತ್ತ್ವಭಿಮಾನಿಯು. ತತ್ತ್ವಪತಿ ದೇವತೆಗಳಲ್ಲಿ ಒಬ್ಬನು. ಇವನಿಗೆ (1) ಭೀಷ್ಮಕರಾಜ ಮತ್ತು (2) ತಾರಾ ಎಂಬ ಕಪಿ–ಇವೆರಡು ಅವತಾರಗಳು. (ಯಮಳ ರೂಪನು).

## 11. ಭೀಷ್ಮಕರಾಜ :–

ಮಿತ್ರನಾಮಕಸೂರ್ಯನ ಅವತಾರ. ವಿದರ್ಭ ದೇಶದ ಅರಸು. ಇವನಿಗೆ ಹಿರಣ್ಯರೋಮನೆಂದೂ ನಾಮಾಂತರವಿದೆ. (**ಭಾರತ.ಉದ್ಯೋಗಪರ್ವ**)— ಇವನಿಗೆ ರುಕ್ಮ, ರುಕ್ಮರಥ, ರುಕ್ಮಬಾಹು,ರುಕ್ಮಕೇಶ ಮತ್ತು ರುಕ್ಮಮಾಲಿ-ಎಂಬ ಐದು ಮಂದಿ ಪುತ್ರರು.

ಶ್ರೀಕೃಷ್ಣನ ಪತ್ನಿ ರಮಾರೂಪಳಾದ ಶ್ರೀರುಕ್ಮಿಣೀದೇವಿಯೇ ಈತನ ಏಕಮಾತ್ರ ಪುತ್ರಿ. ರಾಹುಅಂಶದಿಂದ ಯುಕ್ತನಾದವನು. (ರಾಹುಯುಕ್ತ ಭೀಷ್ಮಕ).

12. **ತಾರ :–**

ತ್ರೇತಾಯುಗದಲ್ಲಿ ಶ್ರೀರಾಮನ ಸೇವಾರ್ಥವಾಗಿ ಮಿತ್ರನಾಮಕ **ಸೂರ್ಯನು–ತಾರ–ನಾಮಕ ಕಪಿಯಾಗಿ** ಅವತರಿಸಿದನು. ಬೃಹಸ್ಪತ್ಯಾರ್ಯರೂ ಸಹ ತ್ರೇತೆಯಲ್ಲಿ ತಾರನೆಂಬ ಹೆಸರಿನಿಂದಲೇ ವಾನರರೂಪದಿಂದ ಅವತಾರ ಮಾಡಿದ್ದರು.— ಎಂಬುದು ದಾಸರ ವಾಕ್ಯಗಳಿಂದಲೂ ಮತ್ತು ನಿರ್ಣಯದಿಂದಲೂ ತಿಳಿಯಬರುವುದು. ಇವರಿಬ್ಬರೂ ಏಕನಾಮದವರಾದರೂ, ಬೇರೆ ಬೇರೆ. ಈತನ ಪತ್ನಿಯೇ ಕೃಪೀ. ಅವಳನ್ನು ದ್ರೋಣನು ಲಗ್ನವಾಗಿ, ಅಶ್ವತ್ಥಾಮನನ್ನು ಪಡೆದನು.

ಇಂತು, ಮಿತ್ರನಾಮಕ ಸೂರ್ಯನಿಗೆ ಭೀಷ್ಮಕ ಮತ್ತು ತಾರ- ಎಂಬ ವಾನರ–ಈ ರೀತಿ ಎರಡು ಅವತಾರಗಳು. ॥23॥

★★

## ಪದ್ಯ-೨೪

**ಮೂಲ :–**

**ನಿರುಋತಿಗೆರಡವತಾರ ದುರ್ಮುಖ ।**
**ಹರಿಯುತ ಘಟೋತ್ಕಚನು ಪ್ರಾವಹಿ ।**
**ಗುರುಮರುದದಿ ತಾರಾ ಸಮರು ಪರ್ಜನ್ಯಗುತ್ತಮರು ॥**
**ಕರಿಗೊರಳ ಸಂಯುಕ್ತ ಭಗದ ।**
**ತ್ತರಸು ಕರ್ತನ ಧನಪ ರೂಪಗ ।**
**ಳೆರಡು ವಿಷ್ಣುಪ ಚಾರುದೇಷ್ಣನು ಅಶ್ವಿನಿಗಳು ಸಮ ॥೨೪॥**

**ಅವತರಣಿಕೆ :**

17ನೆಯ ಕಕ್ಷಾಪನ್ನರಾದ ನಿರಋತಿ ಮತ್ತು 18ನೆಯ ಕಕ್ಷಾಪನ್ನರಾದವರ ವಿಚಾರವನ್ನು ತಿಳಿಸುತ್ತಾರೆ. ॥24॥

**ಪ್ರತಿಪದಾರ್ಥ :-**

**ನಿರಋತಿಗೆ** = 17ನೆಯ ಕಕ್ಷೆಗೆ ಸೇರಿದ ನಿರಋತಿಗೆ, **ಎರಡವತಾರ** = ಅವತಾರಗಳು ಎರಡು. **ದುರ್ಮುಖ** = ದುರ್ಮುಖನೆಂಬ ಕಪಿಯ ಅವತಾರ. **ಘಟೋತ್ಕಚ** = ಭೀಮಸೇನನಿಂದ ಹಿಡಿಂಬೆಯಲ್ಲಿ ಪುತ್ರತ್ವೇನ ಅವತರಿಸಿದ ಘಟೋತ್ಕಚನು. **ಹರಯುತ** = ರುದ್ರದೇವರ ಆವೇಶದಿಂದ ಕೂಡಿದವನು ಘಟೋತ್ಕಚನು. **ಪ್ರಾವಹಿ** = ಪ್ರವಹವಾಯುದೇವರ ಪತ್ನಿ ಪ್ರಾವಹೀದೇವಿ, **ಗುರುವುಡದಿ** = ಬೃಹಸ್ಪತ್ಯಾಚಾರ್ಯರ ಪತ್ನಿ ತಾರಾದೇವಿ, ಮತ್ತು ನಿರಋತಿ, ಮಿತ್ರನಾಮಕಸೂರ್ಯ–ಈ ನಾಲ್ವರೂ, **ಸಮರು** = ಸಮಾನರು (ಸಪ್ತರ್ಷಿಗಳಿಗಿಂತ ಕಿಂಚಿತ್ ಅಧಮರು). **ಪರ್ಜನ್ಯಗೆ ಉತ್ತಮರು** = ಪರ್ಜನ್ಯದೇವತೆಗಳಿಗಿಂತ ಉತ್ತಮರು. (ಪರ್ಜನ್ಯರು 18ನೆಯ ಕಕ್ಷಾಪನ್ನರು). **ಧನಪ** = ಕುಬೇರನ, **ರೂಪಗಳೆರಡು** = ಅವತಾರಗಳು ಎರಡು. **ಕರಿಗೊರಳ ಸಂಯುಕ್ತ** = ರುದ್ರದೇವರ ಆವೇಶದಿಂದ ಯುಕ್ತನಾದ, **ಭಗದತ್ತರಸು** = ಭಗದತ್ತನೆಂಬ ರಾಜನು. **ಕತ್ಥನೆ** = ಕತ್ಥನೆ ಎಂಬ ಹೆಸರಿನ ಅವತಾರ ಇನ್ನೊಂದು, **ವಿಘ್ನಪ** = ವಿಘ್ನರಾಜನಾದ ಗಣಪತಿಯು, **ಚಾರುದೇಷ್ಣ** = ಚಾರುದೇಷ್ಣನೆಂಬ ಹೆಸರಿನಿಂದ ಶ್ರೀಕೃಷ್ಣನ ಪುತ್ರನ ಅವತಾರನು, **ಅಶ್ವಿನಿಗಳು ಸಮ** = ಕುಬೇರ, ವಿಘ್ನೇಶ, ವಿಷ್ವಕ್ಸೇನ ಮತ್ತು ಅಶ್ವಿನೀದೇವತೆಗಳು-ಸಮಾನಕಕ್ಷಾಪನ್ನರು. ॥24॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಹದಿನೇಳನೇ ಕಕ್ಷದವರಾದ ಅವಶಿಷ್ಟ ಉಳಿದ ನಿರಋತಿ— ಮೊದಲಾದವರನ್ನೂ, ಹದಿನೆಂಟನೇ ಕಕ್ಷದವರನ್ನೂ ಹೇಳತಾರೆ.

ಹದಿನೇಳನೇ ಕಕ್ಷದ ನಿರಋತಿಗೆ ಎರಡು ಅವತಾರಗಳು. ಯಾವವೆಂದರೆ, ದುರ್ಮುಖಿ-ಎಂತ ಅವತಾರ ಒಂದು. ಘಟೋತ್ಕಚನು- ಎಂತ ಅವತಾರ ಒಂದು. ಈ ಎರಡರ ಒಳಗೆ,ರುದ್ರದೇವರ ಆವೇಶಯುಕ್ತನಾದವನು ಘಟೋತ್ಕಚನು. ಪ್ರವಹವಾಯುದೇವರ ಪತ್ನಿ ಪ್ರಾವಹೀ, ಬೃಹಸ್ಪತ್ಯಾಚಾರ್ಯರ ಪತ್ನಿ ತಾರಾದೇವಿ, ವರ್ತಮಾನ ಶ್ಲೋಕಗತ ನಿರಋತಿ, ಪೂರ್ವೋಕ್ತ ಮಿತ್ರ ನಾಮಕ ಸೂರ್ಯ-ಈ ನಾಲ್ಕು ಮಂದಿಗಳು ಸಮಾನರು. ಈ ನಾಲ್ಕು ಮಂದಿಗಳು,ಪೂರ್ವೋಕ್ತ ಸಪ್ತಋಷಿಗಳಿಗಿಂತಲೂ ಕಿಂಚಿತ್ಸಾಂಕೇತವಾದ ಮೀಸಗುಣದಿಂದ ನೀಚರು-ಎಂತ ತಾತ್ಪರ್ಯ. ಇಲ್ಲಿಗೆ, ಮಿತ್ರಾದಿ ನಾಲ್ಕು ಮಂದಿ ವಿಚಾರ ಮುಗಿಯಿತು.

ಅನಂತರ,ಹದಿನೆಂಟನೇ ಕಕ್ಷಸ್ಥರ ವಿಚಾರ ಹೇಳತಾರೆ. ಪರ್ಜನ್ಯ, ಉಪಲಕ್ಷಣಯಾ ಪೃಥ್ವೀದೇವೀ-ಉಭಯರೂ ಗ್ರಾಹ್ಯ. ಈ ಉಭಯರ ಸಹಿತವಾಗಿ,ನೂರು ಮಂದಿ ಸೋಮಪಾನಾರ್ಹರು. ಈ ನೂರು ಮಂದೀನ್ನ ಮುಂದೆ ಹದಿನೆಂಟನೇ ಕಕ್ಷದಲ್ಲಿ ಹೇಳತಾರೆ. ಈ ಹದಿನೆಂಟನೇ ಕಕ್ಷದಲ್ಲಿ ಬರತಕ್ಕ ನೂರು ಮಂದಿ ಒಳಗೆ ತೊಂಭತ್ತೆಂಟು ಮಂದಿ- ಪರ್ಜನ್ಯ ಪೃಥ್ವೀ ಇಬ್ಬರಿಗಿಂತಲೂ ಉತ್ತಮರು. ಅಂತು ನೂರು ಮಂದಿ. ಪರ್ಜನ್ಯ, ಪೃಥ್ವೀ—ಇವರಿಬ್ಬರು ಕಡಿಮೆ ಕಕ್ಷದವರು. ಇದರ ವಿವರ-ಹದಿನೆಂಟನೇ ಕಕ್ಷದಲ್ಲಿ ಬರತದೆ. ಪರ್ಜನ್ಯ ಗುತ್ತಮರು-ಎಂಬೋದಕ್ಕೆ ಇದು ತಾತ್ಪರ್ಯ. ಶತಸ್ಥರ ಕಕ್ಷ ಮುಂದೆ ಹೇಳತಾರೆ. ಧನವನ್ನೆ ಪಾಲನ ಮಾಡತಕ್ಕ ಕುಬೇರ, ವಿಘ್ನೇಶ್ವರ, ಪ್ರಮಾಣಾಂತರ

ದಿಂದ ವಿಷ್ವಕ್ಸೇನ–ಅಂತು, ಮೂರು ಮಂದಿಗಳು, ಅಶ್ವಿನೀದೇವತೆಗಳ ಸಹ ಎಂಭತ್ನಾಲ್ಕು ಮಂದಿ, ಅಂತು, ಎಂಭತ್ತೇಳು. ಈ ಎಂಭತ್ತೇಳು ಮಂದಿ ಸಮಾನರು.

ಹದಿನಾಲ್ಕು ಮಂದಿ, ಈ ಎಂಭತ್ತೇಳು ಜನಕ್ಕೆ ಉತ್ತಮರು. ಪೃಥ್ವೀ, ಪರ್ಜನ್ಯ-ಎಂಭತ್ತೇಳು ಜನಕ್ಕೆ ಅವರರು. ಅಂತೂ, ನೂರಾಮೂರು ಮಂದಿ. ಇವರೊಳಗೆ ಧನಪ, ವಿಷ್ವಕ್ಸೇನ, ಗಣೇಶ-ಈ ಮೂರು ಮಂದಿ ಹೋಗತಾ ಉಳಿದವರು ಮಾರುಮಂದಿ. ಈ ಧನಪಾದಿಗಳ ಅವತಾರಗಳು ಎರಡು, ಕತ್ಥನ-ಎಂತ ಅವತಾರ ಒಂದು, ರಾಜನಾದ ಭಗದತ್ತ-ಎಂತ ಒಂದು ಅವತಾರ. ಈ ಎರಡು ಕುಬೇರನ ಅವತಾರಗಳು. ಗಜಮುಖನಾದ ವಿಘ್ನೇಶ್ವರನ ಆವೇಶ ದಿಂದ ಯುಕ್ತನಾದವ ಭಗವದತ್ತರಾಜನು. ಕುಬೇರನ ವಿಚಾರ ಮುಗಿಯಿತು. ಇನ್ನು ಗಣೇಶನ ಅವತಾರ ವಿವರ—ಚಾರುದೇಷ್ಣ-ಎಂತ ಗಣೇಶನ ಒಂದು ಅವತಾರ. ಇಲ್ಲಿಗೆ,ಹದಿನೆಂಟನೇ ಕಕ್ಷದವರಾದ ನೂರಾಮೂರು ಮಂದಿ ಒಳಗೆ ಧನಪಾದಿ ಮೂರು ಮಂದಿ ವಿಚಾರ ಮುಗಿಯಿತು. ಉಳಿದ ನೂರು ಮಂದಿ ವಿಚಾರ ಮುಂದಿನ ಶ್ಲೋಕದಿಂದ ಹೇಳತಾರೆ. ॥24॥

## ೨. ಭಾವಪ್ರಕಾಶಿಕೆ

ನಿರ್ಋತಿಗೆ ಗುರ್ಮುಖನೆಂಬ ಕಪಿರೂಪ ಒಂದು, ಘಟೋತ್ಕಚನ ರೂಪ ಒಂದು, ಅಂತೂ,ಎರಡು ರೂಪಗಳುಂಟು. ಭೀಮಸೇನದೇವರ ಮಗನಾದ ಘಟೋತ್ಕಚನಲ್ಲಿ ರುದ್ರದೇವರ ಆವೇಶವೂ ಇದ್ದಿತು. ಈ ನಿರ್ಋತಿಗೆ ಸಮರು ಪ್ರವಹವಾಯುವಿನ ಪತ್ನಿ ಪ್ರಾವಹೀ, ಬೃಹಸ್ಪತ್ಯಾಚಾರ್ಯರ ಹೆಂಡತಿ.- ತಾರೆ. ಇವರೆಲ್ಲರೂ ಪರ್ಜನ್ಯನಗಿಂತಲೂ 2 ಗುಣಗಳುತ್ತಮರು. ತಾರತಮ್ಯಕೌಸ್ತುಭ ದಲ್ಲಿ ಹೇಳಿರುವ -"ಮಹಾಬಲೀದುರ್ಮುಖಶ್ಚ ರುದ್ರಯುಕ್ತೋ ಘಟೋತ್ಕಚಃ ॥ ದ್ವಾವೇತೌ ನಿರ್ಋತಿಃ ಪೂರ್ವಂ"—ಎಂಬ ವಾಕ್ಯವು ನಿರ್ಋತಿಯ ಅವತಾರ ಗಳಿಗೆ ಆಧಾರವೆಂದು ತಿಳಿಯಬೇಕು. ಕುಬೇರನಿಗೆ ಕತ್ಥನೆಂಬ ಕಪಿರೂಪ ಒಂದು, ನರಕಾಸುರನ ಮಗ ಭಗದತ್ತರೂಪ ಒಂದು. ಅಂತೂ,ಎರಡು ಅವ

ತಾರಗಳು. "**ಸಕತ್ಪನೋ ವಿತ್ತಪತಿಃ**"-ಎಂದು ನಿರ್ಣಯ ಎಂಟನೇ ಅಧ್ಯಾಯದಲ್ಲಿ ಹೇಳಿರುವರು.

ಭಗದತ್ತನಲ್ಲಿ ರುದ್ರದೇವರ ಅಂಶವೂ ಇದ್ದಿತು. ನಿರ್ಣಯ 11ನೇ ಅಧ್ಯಾಯದಲ್ಲಿ-"ವಿತ್ತೇಶ್ವರಃ ಪೂರ್ವಮಭೂದ್ಧಿ ಭೌಮಾತ್ಪರೇಃ ಸುತದ್ವೇಪಿ ತದಿಚ್ಛೇಯಾಸುರಾತ್ ॥ ಪಾಪೇನ ತೇನಾಪಹೃತೋ ಹಿ ಹಸ್ತೀ ಶಿವಪ್ರದತ್ತಃ ಸುಪ್ರತೀಕಾಭಿದಾನಃ ॥32॥ ತದರ್ಥಮೇವಾಸ್ಯ ಸುತೋಽಭಿಜಾತೋ ಧನೇಶ್ವರೋ ಭಗದತ್ತಾಭಿದೇಯಃ ॥ ಮಹಾಸೂರಸ್ಯಾಂಶಯುತಃ ಸ ಏವ ರುದ್ರಾವೇಶಾದ್ಬಲ ವಾನಸ್ತ್ರವೇತ್ತಾ."— ಪರಮಾತ್ಮನು ಕೃಷ್ಣಾವತಾರ ಮಾಡುವುದಕ್ಕೆ ಪೂರ್ವದಲ್ಲಿ, ದೇವತೆಗಳೆಲ್ಲರೂ ಆತನ ಸೇವಾರ್ಥವಾಗಿ ಜನಿಸಬೇಕೆಂದು ಬ್ರಹ್ಮದೇವರ ಅಪ್ಪಣೆಯಾಯಿತು. ಅದಕ್ಕಿಂತಲೂ ಮುಂಚಿತವಾಗಿಯೇ ಕುಬೇರನು ನರಕಾಸುರನ ಮಗನಾಗಿ ಜನಿಸಿದ್ದನು.

ಕಾರಣವೇನೆಂದರೆ, ಪಾಪಿಯಾದ ನರಕಾಸುರನು, ಕುಬೇರನಿಗೆ ದೇವರು ಕೊಟ್ಟಿದ್ದ ಸುಪ್ರತೀಕವೆಂಬ ಆನೆಯನ್ನು ಅಪಹರಿಸಿಬಿಟ್ಟಿದ್ದನು. ಅದರ ಲೋಭದಿಂದ ಆ ಪಾಪಿಗೆ ಮಗನಾಗಿ ಹುಟ್ಟಿ, ಆ ಆನೆಯನ್ನು ತನ್ನ ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ, ಕುಬೇರನು ಭಗದತ್ತನೆಂಬ ಹೆಸರಿನಿಂದ ನರಕಾಸುರನಿಗೆ ಮಗನಾಗಿ ಹುಟ್ಟಿದನು. ಅವನಲ್ಲಿ ನರಕಾಸುರನ ಆವೇಶವು ನರಕಾಸುರನು ಬದುಕಿರುವವರೆಗೂ ಇದ್ದಿತು. ನರಕಾಸುರನು ಮೃತನಾದ ಮೇಲೆ ಅಸುರಾವೇಶವು ನಿವೃತ್ತಿಯಾಯಿತು. ಇವನಲ್ಲಿ ರುದ್ರಾವೇಶವೂ ಇದ್ದುದರಿಂದ, ಮಹಾ ಬಲಾಢ್ಯನಾಗಿ, ಅಸ್ತ್ರಾಭಿಜ್ಞನಾಗಿ ಇದ್ದನು— ಎಂದು ಹೇಳಿರುವರು. ಹೀಗೆ ಕುಬೇರನಿಗೆ ಎರಡು ಅವತಾರಗಳು. ವಿಘ್ನೇಶ್ವರನಿಗೆ ಒಂದೇ ಅವತಾರವು.

ಚಾರುದೇಷ್ಣನೆಂದು-ನಿರ್ಣಯ 20ನೇ ಅಧ್ಯಾಯದಲ್ಲಿ "ಭೈಷ್ಮ್ಯಾಂ ಅಕ್ಷಿಚಾರುದೇಷ್ಣಃ ॥ ಸ ಚಾರುದೇಷ್ಣೋಽಪಿ ಹಿ ವಿಘ್ನರಾಜಃ"—ಶ್ರೀಕೃಷ್ಣನ ದೆಸೆಯಿಂದ ರುಕ್ಮಿಣಿಯಲ್ಲಿ ಚಾರುದೇಷ್ಣನೆಂಬ ಕುಮಾರನು ಹುಟ್ಟಿದನು. ಆ ಚಾರುದೇಷ್ಣನು ಪೂರ್ವದಲ್ಲಿ ವಿಘ್ನೇಶ್ವರನು-ಎಂದು ಹೇಳಿರುವರು. ಇದೇ

ವಾಕ್ಯವನ್ನೇ ದಾಸಾರ್ಯರು ಇಲ್ಲಿ ಹೇಳಿರುವರು. ಈ ಕುಬೇರನೂ, ಗಣಪತಿಯೂ, ಅಶ್ವಿನಿದೇವತೆಗಳಿಗೆ ಸಮರೆನಿಸುವರು. ॥24॥

### ೩. ಭಾವದರ್ಪಣ :–

ದುರ್ಮುಖನಾಮಕ ವಾನರರೂಪ, ರುದ್ರಾವಿಷ್ಟ ಘಟೋತ್ಕಚರೂಪ– ಈ ಎರಡವತಾರ ನಿಋುತಿ ಆಗಿದ್ದಾನೆಂತಲೂ, ಮಿತ್ರನಾಮಕ ಸೂರ್ಯ, ತಾರಾ, ನಿಋುರುತಿ, ಪ್ರಾವಹೀ– ಈ 4 ಜನ ಸಮರೆಂತಲೂ, ನರಕಾಸುರನ ಪುತ್ರ ರುದ್ರಾವಿಷ್ಟ ಭಗದತ್ತರೂಪ ಕತ್ಥನನಾಮಕ ಕಪಿರೂಪ, ಈ 2 ಕುಬೇರ ಆಗಿದ್ದಾನೆಂತಲೂ ಹೇಳುತ್ತಾರೆ, ನಿರ್ಋತೀತಿ. ತದುಕ್ತಂ ತಾರತಮ್ಯೇ- "ಮಹಾಬಲಿ ದುರ್ಮುಖಶ್ಚ ರುದ್ರಯುಕ್ತೋ ಘಟೋತ್ಕಚಃ । ದ್ವಾವೇತೌ ನಿರ್ಋತಿಃ ಪೂರ್ವಂ ಪ್ರಾವಹೀಚ ತಥಾ ಮತಾ । ಚತ್ವಾರ ಏತೇ ಪರ್ಜನ್ಯಾದ್ವಿಗುಣಾಃ ಪರಿಕೀರ್ತಿತಾಃ । ರುದ್ರಯುಗ್ಭಗದತ್ತಶ್ಚ ಕತ್ಥನದ್ವೌ ಧನೇಶ್ವರಃ । ಚಾರುದೇಷ್ಣೋ ವಿಘ್ನಪಃ ಪ್ರಾಗ್ವಿಷ್ವಕ್ಸೇನಸ್ತಥೈವ ಚೇತಿ"– ॥24॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ನಿಋುತಿ ಇತಿ ॥ ನಿಋುತಿ ತನು ಮಥೋಗ್ರದುರ್ಮುಖಂ ॥ ಪುರಾಯು ಆವೇಶಯುಕ್ ಚ ಗಿರಿಶಸ್ಯ ಘಟೋತ್ಕಚಸ್ಯ ॥ ಸಾಮ್ಯೇ ತಾರಾ ಚ ಮಿತ್ರವತ್ ॥ ನಿಋುತಿಃ ಮಿತ್ರಸದೃಶಃ ಮಿತ್ರವತ್ವೇಚ ಪ್ರಾವಹೀ ॥ **"ಅರಸು"**– ಧನೇಶ್ವರಃ ಭಗದತ್ತಾಭಿದಾನಃ ॥ ಸತ್ಕಥನಃ ವಿತ್ತಪತಿಶ್ಚ ॥ ಇತಿ ॥ ಸ ಚಾರುದೇಷ್ಣೋऽಪಿ ಹಿ ವಿಘ್ನರಾಜಃ ॥ ವಿಷ್ಣುದ್ರುಹ! ದುರ್ನರಾನ್ ಸರ್ವದೈವ ಹ್ಯತೀತಿ (ದ್ಯತೀತಿ) ನಿಋುತಿಃ ॥ ವಿಷ್ಣುದ್ರುಹಾನ್ ರಾಕ್ಷಸಾನ್ ಸರ್ವದೈವ ದುರ್ಮುಖಂ ಕರೋತಿ ॥ ಯೋಗ್ಯಮಹಿಲಾನಾಂ ಭೂಷಾತ್ಮನಾ ತಾರತಮ್ಯಕಥನೇನ ವಿಷ್ಣುಧರ್ಮ ಪ್ರವಾಹಕರ್ತೃತ್ವಾತ್ ಪ್ರಾವಹೀ ॥ ಇನಾಖ್ಯ

ಹರೀತತ್ವಾತ್ ಸೇನಃ ॥ ವಿಷ್ಣೋಃ ಮುಖಂ ಯಸ್ಯ ಪೃಥಕ್‌ನಾಸ ಅತಃ ವಿಷ್ವಕ್ಸೇನಃ ॥ ಗಂಧಂ ಪ್ರತಿ ಅಶು ಗಚ್ಛಮಾನೌ ಹಿ ಅಶ್ವ ಸಂಜ್ಞಾ. ॥24॥

## ಕನ್ನಡಾರ್ಥ

ದುರ್ಮುಖನೆಂಬ ಕಪಿಯು ನಿಋತಿಯ ಅವತಾರ. (ತ್ರೇತಾಯುಗದಲ್ಲಿ.) ನಿಋತಿಯೇ ಘಟೋತ್ಕಚನಾದನು. ಅವನಲ್ಲಿ ರುದ್ರಾವೇಶವಿರುತ್ತದೆ. ಹೀಗೆ, ನಿಋತಿಗೆ ಎರಡು ಅವತಾರಗಳು— ಮಿತ್ರ, ತಾರಾ, ನಿಋತಿ, ಪ್ರಾವಹೀ ಇವರು ಸಮರೆಂಬಲ್ಲಿ -"**ತಾರಾ ಚ ಮಿತ್ರವತ್**"- ಎಂಬ ವಾಕ್ಯವು ಆಧಾರ ವಾಗಿರುತ್ತದೆ. ಅದರಂತೆ –"ನಿಋತಿಃ ಮಿತ್ರ ಸದೃಶಃ. ನಿಋತಿಯು ಮಿತ್ರನ ಸಮಾನನು ; ಪ್ರಾವಹಿಯು ಅವನಿಗೆ ಸಮಾನಳೇ !"—ಎಂದು ಮುಂತಾದ ವಚನಗಳೂ ಆಧಾರಗಳಿರುತ್ತವೆ.

"**ಅರಸು**"–ಕುಬೇರನು. ಕುಬೇರನಿಗೆ ಭಗದತ್ತನೆಂಬುದೋದವತಾರ. "**ಕೆತ್ಥನ್**"-ನೆಂಬ ಕಪಿಯು (ತ್ರೇತಾಯುಗದಲ್ಲಿ)ಮತ್ತೊಂದು ಅವತಾರ. ಹೀಗೆ, ಎರಡು ಅವತಾರಗಳು. ಅದರಂತೆ,ವಿಘ್ನೇಶ್ವರನೇ ಚಾರುದೇಷ್ಣನು (ಶ್ರೀ ಕೃಷ್ಣನಿಗೆ ರುಕ್ಮಿಣಿಯಲ್ಲಿ ಹುಟ್ಟಿದವನು.)

ವಿಷ್ಣುದ್ರೋಹಿ ದುರ್ಜನರನ್ನು ಯಾವಾಗಲೂ ಸಂಹರಿಸುವುದರಿಂದ, ನಿಋತಿಯೆಂದು ಹೆಸರು. ವಿಷ್ಣುದ್ರೋಹಿಗಳಾದ ರಾಕ್ಷಸರನ್ನು ನೋಡಿ, ಯಾವಾಗಲೂ ದುರ್ಮುಖವನ್ನು ಮಾಡುವುದರಿಂದ ದುರ್ಮುಖನೆಂದು ನಿಋತಿಗೆ ಅವತಾರದ ಹೆಸರು. ಯೋಗ್ಯಸ್ತ್ರೀಯರಲ್ಲಿ ಭೂಷಣರೂಪವಾದ ತಾರ ತಮ್ಯವೆಂಬ ವಿಷ್ಣುಧರ್ಮವನ್ನು ಉಪದೇಶಿಸಿ, ಅದನ್ನು ಪ್ರವಹಿಸಿದುದರಿಂದ, ಪ್ರಾವಹೀ-ಎಂದು ಹೆಸರು.

ಕುಬೇರ, ವಿಘ್ನೇಶ, ಅಶ್ವಿನೀದೇವತೆಗಳು, ವಿಷ್ವಕ್ಸೇನರು- ಸಮಾನ ರಾಮುದರಿಂದ, ವಿಷ್ವಕ್ಸೇನನ್ನೂ ವ್ಯಾಖ್ಯಾನಕಾರರು ಉದಾಹರಿಸಿರುತ್ತಾರೆ.

ಇನನೆಂಬ ಹರಿ (ಸೂರ್ಯ) ಯುಕ್ತ ಹಾಗೂ ವಿಷ್ಣು ಮುಖವನ್ನುಳಿದು ಬೇರೆ ಮುಖವಿಲ್ಲದವನು. ಆದುದರಿಂದ,ವಿಷ್ವಕ್‌ಸೇನನೆಂದು ಹೆಸರು ಬಂದಿದೆ.

ಗಂಧವನ್ನು ಕುರಿತು ಶೀಘ್ರವಾಗಿ ಪೋಗುವವರು-ಘ್ರಾಣೇಂದ್ರಿಯ ಪ್ರಚೋದಕರು-ಅಶ್ವಿನಿದೇವತೆಗಳು. ॥24॥

ಆ. ಶ್ರೀಗುರುಹೃದಯ ಪ್ರಕಾಶಿಕೆ :-

ನಿರಋತಿ-ಎಂಬ ದಿಕ್ಪಾಲಕಗೆ ದುರ್ಮುಖನೆಂಬ ಕಪಿನಾಮಕ ಒಂದು, ರುದ್ರಾವೇಶಯುಕ್ತ ಘಟೋತ್ಕಚ ಒಂದು ಸಹ, ಎರಡು ಅವತಾರವು. ಪ್ರವಹ ವಾಯು ಪತ್ನಿ ಪ್ರಾವಹೀದೇವಿ, ಗುರುಪತ್ನಿ ತಾರಾ,— ಇವರಿಬ್ಬರೂ ಸಮಾನರು. ಪರ್ಜನ್ಯನಾಮಕ ಮೇಘಾಭಿಮಾನಿ ಸೂರ್ಯನಿಗಿಂತ ಉತ್ತಮರು. ಕರಿಗೂರಳನೆಂಬ ರುದ್ರಾವೇಶಯುಕ್ತನಾದ ಭಗದತ್ತನೆಂಬ ರಾಜನು ಒಂದು, ಕತ್ಥನನೆಂಬ ಕಪಿನಾಮಕ ಒಂದು ಸಹ,—ಎರಡೂ ಧನಪನೆಂಬ ಕುಬೇರನ ಅವತಾರಗಳು. ಚಾರುದೇಷ್ಣನೆಂಬ ಕೃಷ್ಣನ ಪುತ್ರನು- ವಿಘ್ನೇಶ್ವರನ ಅವತಾರ. ಅಶ್ವಿನೀದೇವತೆಗಳಿಗೆ ಸಮ. ॥24॥

## ಸರ್ವವ್ಯಾಖ್ಯಾನಸಾರಸಂಗ್ರಹ

17ನೆಯ ಕಕ್ಷೆಗೆ ಸೇರಿದ ನಿರಋತಿಯ ವಿಚಾರ ತಿಳಿಸುತ್ತಾರೆ.

1. ನಿರಋತಿ :-

ನೈರುತ್ಯದಿಕ್ಕಿನ ಅಧಿಪತಿ. ಜನ್ಮತಃ ರಾಕ್ಷಸಯೋನಿಯಲ್ಲಿ ಹುಟ್ಟಿದ್ದರೂ, ಪ್ರಹ್ಲಾದ-ವಿಭೀಷಣರಂತೆ,ದೇವತಾವರ್ಗಕ್ಕೆ ಸೇರಿದ ಉತ್ತಮಾಧಿಕಾರಿ ಈತನ ಪತ್ನಿ ದೀರ್ಘಾದೇವಿ.

ನಿಋುತಿಗೆ ಎರಡು ಅವತಾರಗಳು .— (1) ದುರ್ಮುಖ ಮತ್ತು (2) ಘಟೋತ್ಕಚ.

**2. ದುರ್ಮುಖ :-**

ನಿಋುತಿಯು ತ್ರೇತಾಯುಗದಲ್ಲಿ ಶ್ರೀರಾಮನ ಸೇವಾರ್ಥವಾಗಿ **ದುರ್ಮುಖ**–ನೆಂಬ ಹೆಸರಿನ ವಾನರನಾಗಿ ಅವತರಿಸಿದನು.

**3. ಘಟೋತ್ಕಚ :-**

ಭೀಮಸೇನದೇವರ ಪುತ್ರ. ಹಿಡಿಂಬಾಸುರನ ತಂಗಿ ಹಿಡಿಂಬೆ ಅಥವಾ ಕಾಮಪಾಲಿಕೆ. ಹಿಡಿಂಬೆಯ ಕೋರಿಕೆಯಂತೆ, ಭೀಮಸೇನದೇವರು ಅವಳನ್ನು ಪರಿಗ್ರಹಿಸಿ, ಘಟೋತ್ಕಚನೆಂಬ ಮಹಾಪರಾಕ್ರಮಶಾಲಿಯಾದ ಪುತ್ರನನ್ನು ಪಡೆದರು. ನಿಋುತಿಯ ದ್ವಿತೀಯಾವತಾರನೇ ಘಟೋತ್ಕಚನು. ಇವನಿಗೆ ಅಂಜನಪರ್ವ ಮತ್ತು ಮೇಘನಾದರೆಂಬ ಇಬ್ಬರು ಪುತ್ರರು. ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನಿಂದ ಪ್ರಯೋಗಿಸಲ್ಪಟ್ಟ ಶಕ್ತ್ಯಾಯುಧದಿಂದ ಹತನಾದನು.

**ಪ್ರಮಾಣ :-**

"ಮಹಾಬಲಿ ದುರ್ಮುಖಶ್ಚ ರುದ್ರಯುಕ್ತೋ ಘಟೋತ್ಕಚಃ ।
ದ್ವಾವೇತೌ ನಿರ್ಋತಿಃ ಪೂರ್ವಂ ಪ್ರಾವಹೀ ಚ ತಥಾ ಮತಾ ।
ಚತ್ವಾರ ಏತೇ ಪರ್ಜನ್ಯಾದ್ವಿಗುಣಾಃ ಪರಿಕೀರ್ತಿತಾಃ ॥
**— ತಾರತಮ್ಯಕೌಸ್ತುಭೇ.**

ಘಟೋತ್ಕಚನು ರುದ್ರಾವೇಶಸಂಯುಕ್ತನು. (ಹರಯುತ ಘಟೋತ್ಕಚನು) ಪ್ರಾವಹೀ–ಬೃಹಸ್ಪತ್ಯಾಚಾರ್ಯರ ಮಡದಿ ತಾರಾ–ನಿಋುತಿ–ಮಿತ್ರ

ನಾಮಕಸೂರ್ಯ-ಈ ನಾಲ್ವರೂ ಸಮಾನಕಕ್ಷಾಪನ್ನರು. ಪರ್ಜನ್ಯಗಿಂತ ಎರಡು ಗುಣಗಳಿಂದ ಉತ್ತಮರು. (ಮೇಲಿನ ಪ್ರಮಾಣ ಶ್ಲೋಕ ನೋಡುವುದು).

**4. ಪರ್ಜನ್ಯ :-**

ಪರ್ಜನ್ಯನೆಂಬ ದೇವತೆಯು ಮೇಘಾಭಿಮಾನಿ ಸೂರ್ಯನು. ಈತನಿಂದಲೇ ಮೇಘಗಳಿಂದ ಮಳೆ ಉಂಟಾಗುವುದು. ಇಂದ್ರನ ಅಂಕಿತದಲ್ಲಿರುವ ದೇವತಾವರ್ಗ. ಪರ್ಜನ್ಯನು ಪೂರ್ವೋಕ್ತ ನಾಲ್ವರಿಗಿಂತ ಎರಡು ಗುಣಗಳಿಂದ ಅಧಮನು.

ಇನ್ನು 18ನೆಯ ಕಕ್ಷೆಗೆ ಸೇರಿದ ಕುಬೇರ-ಗಣಪತಿ-ವಿಷ್ವಕ್ಸೇನ-ಅಶ್ವಿನೀ ದೇವತೆಗಳ-ವಿಚಾರ ತಿಳಿಸುತ್ತಾರೆ.

**5. ಕುಬೇರ :-**

ಧನವನ್ನು ಪಾಲಿಸುವುದರಿಂದ (ಧನಾಧಿಪತಿಯಾಗಿರುವುದರಿಂದ) ಕುಬೇರನಿಗೆ **ಧನಪ**-ನೆಂದು ಹೆಸರು.

ಉತ್ತರ ದಿಕ್ಕಿನ ದಿಕ್ಪಾಲಕ. ವಿಶ್ರವಸ್-ಎಂಬ ಬ್ರಹ್ಮನಿಂದ ಇಲಿಬಿಲೆಯಲ್ಲಿ ಜನಿಸಿದವನು. ಸೋಮನೆಂದೂ ಇವನ ನಾಮಾಂತರ. ಈ ಕಾರಣದಿಂದ, ಉತ್ತರ ದಿಕ್ಕಿಗೆ "**ಸೌಮ್ಯ**"-ಎಂಬ ಹೆಸರು ಬಂದಿದೆ. ಯಕ್ಷರು ಈತನ ಪ್ರಜೆಗಳು. ನರವಾಹನನು-ನವನಿಧಿಗಳೂ ಈತನ ವಶವರ್ತಿಗಳು. ಪತ್ನಿ ಬುದ್ಧಿ-ಎಂಬಾಕೆ. ನಳಕೂಬರನು ಕುಬೇರನ ಪುತ್ರ. ಸುಹಾರೂಪವಂತನು. ಅಲಕಾವತಿ-ಕುಬೇರನ ರಾಜಧಾನಿ. ಪರಮೇಶ್ವರನನ್ನು ತನ್ನ ತಪಸ್ಸಿನಿಂದ ಮೆಚ್ಚಿಸಿ, ಲಂಕಾಧಿಪತಿಯಾಗಿ, ಪುಷ್ಪಕವಿಮಾನವನ್ನು ಪಡೆದನು. ಈತನ ಮಲತಾಯಿಯ ಮಕ್ಕಳಾದ ರಾವಣ ಕುಂಭಕರ್ಣರು ಕುಬೇರನನ್ನು ಸೋಲಿಸಿ, ಅವನಿಂದ ಲಂಕಾಧಿಪತ್ಯವನ್ನೂ ಮತ್ತು ಪುಷ್ಪಕ ವಿಮಾನವನ್ನು ಪಡೆದರು, ನಂತರ

ಕುಬೇರನು ಶಿವನ ಅನುಮತಿಯಂತೆ,ಕೈಲಾಸ ಪರ್ವತದಲ್ಲಿ ಅಲಕಾ ನಗರಿಯನ್ನು ನಿರ್ಮಿಸಿಕೊಂಡು, ಯಕ್ಷಾಧಿಪತಿಯಾದನು. ಅತುಲೈಶ್ವರ್ಯಸಂಪನ್ನನು.

ಕುಬೇರನ ಅವತಾರಗಳು ಎರಡು. (1) ಭಗದತ್ತ ಮತ್ತು ಕರ್ತ್ವನ.

6. **ಭಗದತ್ತರಸು :-**

ನರಕಾಸುರನ ಪುತ್ರ. ಭೂದೇವಿ ಈತನ ತಾಯಿ. ಪ್ರಾಗ್ಜ್ಯೋತಿಷ ನಗರವು ಭಗದತ್ತನ ರಾಜಧಾನಿ. ಕೃತಪ್ರಜ್ಞ ಮತ್ತು ವಜ್ರದತ್ತರೆಂಬ ಇಬ್ಬರು ಪುತ್ರರು. ಕುರುಕ್ಷೇತ್ರದ ಮಹಾಸಮರದಲ್ಲಿ 12ನೆಯ ದಿನ ಅರ್ಜುನನೊಡನೆ ಹೋರಾಡಿ, ಅವನಿಂದಲೇ ಹತನಾದ. ಪೂರ್ವದಲ್ಲಿ ನರಕಾಸುರನು ಕುಬೇರನ ಸುಪ್ರತೀಕವೆಂಬ ಮಹಾಗಜವನ್ನು ಅಪಹರಿಸಿದ್ದನು. ಅದರ ಲೋಭದಿಂದ, ಆ ಪಾಪಿ ನರಕಾಸುರನ ಪುತ್ರನಾಗಿ ಕುಬೇರನು ಜನಿಸಿ, ಸುಪ್ರತೀಕವನ್ನು ಸ್ವಾಧೀನಪಡಿಸಿಕೊಂಡನು. ನರಕಾಸುರನ ಆವೇಶವು ಭಗದತ್ತನಲ್ಲಿ ನರಕಾಸುರನು ಜೀವಿಸಿರುವ ಪರ್ಯಂತ ಇದ್ದಿತು. ನರಕಾಸುರನ ಮರಣಾನಂತರ ಅಸುರಾವೇಶವು ನಿವೃತ್ತಿಯಾಯಿತು. ರುದ್ರಾವೇಶಸಂಯುಕ್ತನಾದ್ದರಿಂದ, ಅತಿ ಬಲಾಢ್ಯನಾಗಿದ್ದನು. ಅಸ್ತ್ರವಿದ್ಯೆಯಲ್ಲಿ ಚತುರನು.

**ಪ್ರಮಾಣ :.**

"ವಿತ್ತೇಶ್ವರಃ ಪೂರ್ವಮಭೂದ್ಧಿ ಭೌಮಾದ್ವರೇಃ ಸುತತ್ವೇಪಿ ತದಿಚ್ಛಯಾ ಸುರಾತ್ ।
ಪಾದೇನ ಸೇನಾಪಹೃತೋ ಹಿ ಹಸ್ತೀ ಶಿವಪ್ರದತ್ತಃ ಸುಪ್ರತೀಕಾಭಿಧಾನಃ ॥
ತದರ್ಥಮೇವಾಸ್ಯ ಸುತೋಽಭಿಜಾತೋ ಧನೇಶ್ವರೋ ಭಗದತ್ತಾಭಿಧೇಯಃ।
ಮಹಾಸುರಸ್ಯಾವೇಶಯುತಃ ಸ ಏವ ರುದ್ರಾವೇಶಾದ್ಬಲವಾನಸ್ತ್ರ ನಾಂಶ್ಚ ॥"
— **ನಿರ್ಣಯ ಪ್ರಮಾಣವಾಕ್ಯ-(ಅಧ್ಯಾಯ-11).**

**ಕರಿಗೊರಳ ಸಂಯುಕ್ತ**—ಎಂದರೆ, ರುದ್ರದೇವರ ಆವೇಶಯುಕ್ತ ಸಂದರ್ಭ. -"**ಕರಿಗೊರಳ**"-ಎಂತ ವಿಷಕಂಧರ (ವಿಷಕಂಠ)ನಾದ ರುದ್ರ ದೇವರು. ಇದಕ್ಕೆ ಶ್ರೀಸಂಕರ್ಷಣ ಒಡೆಯರು ಗಣಪತಿಯ **ಆವೇಶ**-ಎಂದು ಹೇಳಿದ್ದಾರೆ. ಗಣಪತಿಯ ಕರ್‍ಯಾಸ್ಯ (ಆನೆಯಂತೆ ಮುಖವುಳ್ಳವನು) ನೇ ಹೊರತು ಕರಿಗೊರಳನಲ್ಲ. ಗಣಪತಿಯಲ್ಲಿ ವಿದ್ಯಮಾನನಾಗಿರುವ ರುದ್ರದೇವ ರೆಂದು ದೂರಾನ್ವಯ ಮಾಡಿಕೊಳ್ಳಬಹುದು.

**7. ಕಥನ :-**

ತ್ರೇತಾಯುಗದಲ್ಲಿ ಶ್ರೀರಾಮನ ಸೇವಾರ್ಥವಾಗಿ ಕುಬೇರನು **ಕಥನ**— ಎಂಬ ಹೆಸರಿನ ವಾನರನಾಗಿ ಅವತರಿಸಿದನು.

ಇಂತು, ಕುಬೇರನ ಅವತಾರಗಳು ಭಗದತ್ತ ಮತ್ತು ಕಥನ- ಎಂಬ **ವಾನರ**-ಹೀಗೆ ಎರಡು ಇವೆ.

**8. ವಿಘ್ನಪ :-**

ಗಣಪತಿಯಾದ ವಿಘ್ನೇಶ್ವರನು ದ್ವಾಪರಯುಗದಲ್ಲಿ ರುಕ್ಮಿಣಿಯಲ್ಲಿ **ಚಾರುದೇಷ್ಣ**—ಎಂಬ ಹೆಸರಿನಿಂದ ಪುತ್ರತ್ವೇನ ಅವತರಿಸಿದನು. ಚಾರು ಮತಿಯುಈತನ ಸೋದರಿ..

ಕುಬೇರ (ಧನಪ)-ವಿಘ್ನೇಶ್ವರ (ವಿಘ್ನಪ)-ವಿಷ್ವಕ್ಸೇನ ಮತ್ತು ಅಶ್ವಿನೀ ದೇವತೆಗಳು—ಈ ನಾಲ್ಕು ಮಂದಿ ಪರಸ್ಪರ ಸಮಾನರು.

**ಪ್ರಮಾಣ :-**

"ಭೈಷ್ಮ್ಯಾ ಅಪಿ ಚಾರುದೇಷ್ಣಃ ॥ ಸ ಚಾರುದೇಷ್ಣೋಽತ್ರ ಓ ವಿಘ್ನರಾಜಃ ॥
ಪ್ರಾಗ್ವಿಷ್ವಕ್ಸೇನಸ್ತಥೈವ ಚೇತಿ ॥"
**—ನಿರ್ಣಯವಾಕ್ಯ–(20ನೆಯ–ಅಧ್ಯಾಯ).**

**ವಿಶೇಷಾಂಶ :-**

(1) ವಿಷ್ಣುದ್ರೋಹಿ ದುರ್ಜನರನ್ನು ಸಂಹರಿಸುವುದರಿಂದ, **ನಿರಋತಿ**-ಎಂದು ಹೆಸರು.

(2) ವಿಷ್ಣುದ್ರೋಹಿಗಳಾದ ರಾಕ್ಷಸರನ್ನು ನೋಡಿ, ದುರ್ಮುಖ ಮಾಡುವುದರಿಂದ, **ದುರ್ಮುಖ**-ನೆಂತ ಅಭಿಧಾನ.

(3) ಇನ-ಎಂಬ ಸೂರ್ಯಯುಕ್ತನೂ ಹಾಗೂ ವಿಷ್ಣುವಿನ ಉಪಾಸನಕನೂ ಆಗಿರುವುದರಿಂದ, **ವಿಷ್ವಕ್ಸೇನ**-ನೆಂದು ಹೆಸರು. ಈತನು ವಾಯುಪುತ್ರನು. ॥24॥

**

## ಪದ್ಯ-೨೫

ದ್ರೋಣ ಧ್ರುವ ದೋಷಾರ್ಕಾಗ್ನಿ ।
ಪ್ರಾಣ ದ್ಯು ವಿಭಾವಸುಗಳೆಂಟು ಕೃ ।
ಶಾನು ಶ್ರೇಷ್ಠ ದ್ಯುನಾಮವಸು ಭೀಷ್ಮಾರ್ಯ ಬ್ರಹ್ಮಯುತ ॥
ದ್ರೋಣನಾಮಕ ನಂದಗೋಪ ಪ್ರ ।
ಧಾನ ಅಗ್ನಿಯನುಳಿದೇಳು ಸ ।
ಮಾನರೆನಿಪರು ತಮ್ಮೊಳಗೆ ಜ್ಞಾನಾದಿ ಗುಣದಿಂದ ॥25॥

**ಅವತರಣಿಕೆ :-**

ನೂರು ಮಂದಿಗಳ ವಿಚಾರವನ್ನು ತಿಳಿಸುತ್ತಾರೆ- ಪ್ರಸಕ್ತಪದ್ಯದಿಂದ. ॥25॥

**ಪ್ರತಿಪದಾರ್ಥ :-**

**ದ್ರೋಣ** = ದ್ರೋಣ, **ಧ್ರುವ** = ಧ್ರುವ, **ದೋಷ** = ದೋಷ, **ಅರ್ಕ** = ಅರ್ಕ, **ಅಗ್ನಿ** = ಅಗ್ನಿ, **ಪ್ರಾಣ** = ಪ್ರಾಣ, **ದ್ಯು** = ದ್ಯು ನಾಮಕ, **ವಿಭಾವಸು** = ವಿಭಾವಸು-, **ವಸುಗಳೆಂಟು** = ಈ ರೀತಿ ಎಂಟು ಮಂದಿ ವಸುಗಳು, **ಕೃಶಾನು** = ಈ ಅಷ್ಟವಸುಗಳಲ್ಲಿ ಅಗ್ನಿನಾಮಕ ನಾದ ವಸುವು, **ಶ್ರೇಷ್ಠ** = ಉತ್ತಮನು. (ಅಗ್ನಿ 15ನೆಯ ಕಕ್ಷಾದಲ್ಲಿ ಸೇರಿದವನು). ಅಗ್ನಿಯನ್ನು ಒಟ್ಟು ಉಳಿದ ಏಳುಮಂದಿ ವಸುಗಳು 18ನೆಯ ಕಕ್ಷಾಪನ್ನರು. **ದ್ಯುನಾಮವಸು** = ಅವಶಿಷ್ಟರಾದ ಏಳುಮಂದಿ ವಸುಗಳೊಳಗೆ ದ್ಯುನಾಮಕ ವಸುವು, **ಬ್ರಹ್ಮಯುತ** = ಬ್ರಹ್ಮದೇವರ ಆವೇಶ ಯುಕ್ತರಾದ, **ಭೀಷ್ಮಾರ್ಯ** = ಭೀಷ್ಮಾಚಾರ್ಯರು, **ದ್ರೋಣ ನಾಮಕ** = ದ್ರೋಣನಾಮಕ ವಸುವು, **ನಂದಗೋಪ** = ನಂದನ

ಗೋಪನು, **ಪ್ರಧಾನ** = ಅಷ್ಟವಸುಗಳಲ್ಲಿ ಶ್ರೇಷ್ಠನಾದ, **ಅಗ್ನಿಯುನು ಉಳಿದು** = ಅಗ್ನಿಯನ್ನು ಬಿಟ್ಟು, **ಏಳು** = ಉಳಿದ ಏಳುವಸುಗಳು, **ತಮ್ಮೊಳಗೆ** = ತಮ್ಮ ತಮ್ಮಲ್ಲಿ, **ಜ್ಞಾನಾದಿಗುಣದಿಂದ** = ಜ್ಞಾನ, ಆನಂದ, ಬಲಾದಿ ಗುಣಗಳಿಂದ, **ಸಮಾನರೆನಿಪರು** = ಪರಸ್ಪರ ಸಮರು-ಎಂದು ಕರೆಯಿಸುತ್ತಾರೆ. ॥25॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

**ಪೂರ್ವೋಕ್ತ ನೂರುಮಂದಿಯ ಹೆಸರು ಹೇಳತಾರೆ.**

1. ದ್ರೋಣ, 2. ಧ್ರುವ, 3. ದೋಷ, 4. ಅರ್ಕ, 5. ಅಗ್ನಿ 6. ಪ್ರಾಣ, 7. ದ್ಯುನಾಮಕ, 8. ವಿಭಾವಸು.- ಇವರುಗಳು ಎಂಟು ಮಂದಿ ಅಷ್ಟವಸುಗಳು. ಇವರಲ್ಲಿ, 15ನೇ ಕಕ್ಷದಲ್ಲಿ ಸೇರಿದವ 5ನೇ ಸಂಖ್ಯಾ ಉಳ್ಳ ಅಗ್ನಿನಾಮಕನು ಒಬ್ಬ ಹೋಗತಾ, ಉಳದವರು- ಏಳುಮಂದಿ. ಈ ಎಂಟು ಮಂದಿಯೊಳಗೆ, ಕೃಶಾನುಸಾಂಕೇತನಾದ. 5ನೆ ಸಂಖ್ಯಾ ಉಳ್ಳ ಅಗ್ನಿ ಎಂಬುವನು ಉತ್ತಮನಾದವನು. ಈ ಅಗ್ನಿ ಹದಿನೈದನೇ ಕಕ್ಷದಲ್ಲಿ ಬಂದಿದ್ದಾನೆ. ಇವನ ಅವತಾರಗಳನ್ನು ಹದಿನೈದನೇ ಕಕ್ಷದಲ್ಲಿ ವಿವರಿಸಿದೆ. ಇವನು ಹೋಗುತಾ, ಏಳುಮಂದಿ ವಸುಗಳು- 18ನೇ ಕಕ್ಷದವರೆಂದು ತಿಳಿಬೇಕು- ಈ ಉಳದ ಏಳು ವಸುಗಳ ಒಳಗೆ, ಅವತಾರಗಳು ಇರೋ ವಿಚಾರ ಹೇಳತಾರೆ. ಏಳನೇ ವಸು ಆದ ದ್ಯುನಾಮಕವಸು ಭೀಷ್ಮಾಚಾರ್ಯರು. ಈ ಭೀಷ್ಮಾಚಾರ್ಯರು ಬ್ರಹ್ಮದೇವರ ಆವೇಶಯುತರು. ದ್ರೋಣನಾಮಕ ವಸುಅವತಾರ ದಾವದೇದರೆ, ನಂದಗೋಪ- ಎಂತ ಅವತಾರಮಾಡಿದ. ಎಂಟು ವಸುಗಳಲ್ಲಿ ಶ್ರೇಷ್ಠನಾದ ಅಗ್ನಿ- ಎಂಬ ವಸು ವ್ಯತಿರಿಕ್ತ ಉಳದ ಏಳು ವಸುಗಳು ಜ್ಞಾನಾದಿಗುಣಗಳಿಂದ ತಮ್ಮೊಳಗೆ ತಾವು ಎಲ್ಲರೂ ಸಮಾನರು- ಎಂತ ಕರಸತಾರೆ. ಇಲ್ಲಿಗೆ, ಅಷ್ಟವಸುಗಳ ವಿಚಾರ ಮುಗಿಯಿತು. ಇನ್ನು ಏಕಾದಶರುದ್ರರ ವಿಚಾರ ಹೇಳತಾರೆ. ॥25॥

**ಭಾವಪ್ರಕಾಶಿಕೆ :-**

ನವಕೋಟ್ಯೋಹಿ ದೇವಾನಾಂ ತೇಷಾಂ ಮಧ್ಯೇಶತಸ್ಯತು ॥ ಸೋಮಾಧಿಕಾರೋ ವೇದೋಕ್ತೋ"- ಎಂಬ ತಾರತಮ್ಯ ಸಂಗ್ರಹದ ವಾಕ್ಯದಂತೆ, ಬಿಟ್ಟು ದೇವತೆಗಳ ಒಂಭತ್ತು ಕೋಟಿಗಳ ಪೈಕಿ 100 ದೇವತೆಗಳಿಗೆ ಮಾತ್ರವೇ ಸೋಮಪಾನ ಉಂಟೆಂದು, ವೇದದಲ್ಲಿ ಹೇಳಿರುವುದು. ಆ 100 ಮಂದಿಯರಲ್ಲಿ, ಕೆಲವರ ತಾರತಮ್ಯವು ಹಿಂದೆ ಹೇಳಲ್ಪಟ್ಟಿದೆ. ಉಳಿದವರ ಅವತಾರಗಳನ್ನೂ ತಾರತಮ್ಯವನ್ನೂ ಹೇಳುತ್ತಾರೆ. 100 ಮಂದಿಯರಲ್ಲಿ ವಸುಗಳು 8 ಮಂದಿಗಳು- ದ್ರೋಣ, ಧೃವ, ದೋಷ, ಅರ್ಕ, ಅಗ್ನಿ, ಪ್ರಾಣ, ದ್ಯು, ವಿಭಾವಸು- ಎಂದು 8 ಮಂದಿ ವಸುಗಳು. ಇವರಲ್ಲಿ, ಪ್ರಧಾನಾಗ್ನಿಯು ಶ್ರೇಷ್ಠನು. ಅವನ ತಾರತಮ್ಯ, ಅವತಾರಗಳನ್ನು ಈ ಸಂಧಿ 21ನೆಯ ಪದ್ಯದಲ್ಲಿ- "ನೀಲ ದೃಷ್ಟದ್ಯುಮ್ನ ಲವ ಲೀಲಿಹಾನನ ರೂಪಗಳು"- ಎಂಬ ಪದ್ಯದಿಂದ ಹೇಳಿರುವರು. ಉಳಿದ ಏಳುಮಂದಿ ವಸುಗಳು ತಮ್ಮೊಳಗೆ ಬಲಜ್ಞಾನಾದಿ ಗುಣಗಳಿಂದ ಸಮಾನರೆಂದು ತಾತ್ಪರ್ಯ. ಇವರಲ್ಲಿ ದ್ಯುನಾಮಕ ವಸು ಬ್ರಹ್ಮಾವೇಶದಿಂದ ಕೂಡಿ, ಭೀಷ್ಮಾಚಾರ್ಯನಾಗಿ ಜನಿಸಿರುವನು. ನಿರ್ಣಯ 11ನೆಯ ಅಧ್ಯಾಯ- "ಅಥಾಷ್ಟಮೋ ವಸುರಾಸೀದ್ಯುನಾಮಾ"- ಎಂಬ 22ನೆಯ ಶ್ಲೋಕ ಮೊದಲು 37ನೆಯ ಶ್ಲೋಕದವರೆಗೂ, ಭೀಷ್ಮಾಚಾರ್ಯರ ಉತ್ಪತ್ತಿ-ಕಾರಣ- ಮೊದಲಾದುವುಗಳನ್ನು ಹೇಳಿರುವರು. ಗ್ರಂಥ ವಿಸ್ತಾರಭಯದಿಂದ ಆ ಶ್ಲೋಕಗಳನ್ನು ಇಲ್ಲಿ ಬರೆಯದೆ, ಅದರ ಅಭಿಪ್ರಾಯವನ್ನು ಮಾತ್ರ ಸ್ವಲ್ಪ ಸೂಚಿಸುತ್ತೇವೆ. ಅಷ್ಟವಸುಗಳಲ್ಲಿ 8ನೆಯ ವಸುವಾದ ದ್ಯುನಾಮಕವಸುವಿಗೆ ವರಾಂಗಿ-ಎಂಬ ಹೆಂಡತಿ ಇದ್ದಳು. ಸುವಿಂದನೆಂಬ ರಾಜನ ಹೆಂಡತಿಯಾದ ವರಾಂಗಿ- ಎಂಬ ರಾಜಕುಮಾರಿಯು ಈಕೆಗೆ ಸಖಿಯಾಗಿದ್ದಳು ರಾಜಕುಮಾರಿಯು ಮನುಷ್ಯಳಾದುದರಿಂದ ಆಕೆಗೆ ಮುದಿತನವು ಬಂದುದನ್ನು ನೋಡಿ, ವಸುಪತ್ನಿಯಾದ ವರಾಂಗಿಯು ತನ್ನ ಸಖಿಯನ್ನೂ ಕೂಡ ತನ್ನಂತೆ ಜರಾಮರಣವಿಲ್ಲದೆ ಮಾಡಬೇಕೆಂಬ ಉದ್ದೇಶದಿಂದ, ವಶಿಷ್ಠರಲ್ಲಿದ್ದ ನಂದಿನೀ- ಎಂಬ ಕಾಮಧೇನುವನ್ನು ಕಟ್ಟಿ ತರಬೇಕೆಂದು ತನ್ನ ಪತಿಗೆ ಬೋಧನ

ಮಾಡಿದಳು. ಆದೇಕೆಂದರೆ-ಕಾಮಧೇನುವಿನ ಹಾಲು ಅಮೃತಕ್ಕೆ ಸಮವಾದುದರಿಂದ, ಅದನ್ನು ಪಾನಮಾಡಲು ಜರಾಮರಣವಿಲ್ಲದಿರುವುದೆಂದು ತಿಳಿದು, ಆ ಹಾಲನ್ನು ತನ್ನ ಸಖಿಗೆ ಕೊಡಬೇಕೆಂಬುದೇ ಆಕೆಯ ಅಭಿಪ್ರಾಯವು. ಹೆಂಡತಿಯ ಮಾತಿನ ಮೇಲೆ, ದ್ಯುನಾಮಕನು ತನ್ನ ಸಹಾಯಕ್ಕಾಗಿ ಉಳಿದ ಏಳು ವಸುಗಳನ್ನು ಕರೆಯಲು, ತಮ್ಮಲ್ಲಿನ ಸ್ನೇಹದಿಂದ ಉಳಿದ ಏಳು ಮಂದಿ ವಸುಗಳೂ ಅವನ ಕೂಡಲೇ ಬಂದು, 8 ಮಂದಿಗಳೂ ಕೂಡಿ, ವಸಿಷ್ಠರ ಗೋವನ್ನು ಕಟ್ಟಿದರು. ಆಗ ವಸಿಷ್ಠರ ಒಳಗೆ ಬ್ರಹ್ಮದೇವರು ಪ್ರವಿಷ್ಟರಾಗಿದ್ದು, ಇವರನ್ನು ಶಪಿಸಿದರು. ಏನೆಂದರೆ-ನೀವೆಲ್ಲರೂ ಅಧರ್ಮದಲ್ಲಿ ಪ್ರವೃತ್ತರಾದುದರಿಂದ, ತಕ್ಷಣದಲ್ಲಿ ಮನುಷ್ಯರಾಗಿ ಹುಟ್ಟಿರಿ. ಯಾವನ ನಿಮಿತ್ತವಾಗಿ ನೀವು ಏಳು ಜನರು ಧರ್ಮಭ್ರಷ್ಟರಾದಿರೋ, ಆ ಒಬ್ಬ ದ್ಯುನಾಮಕವಸು ಹೊರತು ಮಿಕ್ಕವರು ಹುಟ್ಟಿದಕೂಡಲೇ, ಆ ದೇಹವನ್ನು ಬಿಟ್ಟು ನಿಮ್ಮ ಸ್ಥಾನವನ್ನು ಸೇರಿರಿ. ಅವನೊಬ್ಬನು ಮಾತ್ರ ನಿಮ್ಮ 8 ಜನರ ಆಯುಷ್ಯವನ್ನು ಹೊಂದಲಿ.

ಅವನನ್ನು ದುರ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಿದ ಅವನ ಹೆಂಡತಿ ವರಾಂಗಿಯು ಅಂಬಾ-ಹೆಸರಿನಿಂದ ಮನುಷ್ಯಳಾಗಿ ಜನಿಸಿ, ಪತಿ ಇಲ್ಲದಿದ್ದು ಪುರುಷ ಶರೀರ ಪ್ರವೇಶದಿಂದ ಪತಿಯನ್ನು ಕೊಲ್ಲಲು ಕಾರಣಳಾಗಲಿ. ಇವನು ಬ್ರಹ್ಮಚರ್ಯನಿಷ್ಠನಾಗಿರುವನು. ಈ ದಂಪತಿಗಳಿಗೆ ಬಲವತ್ತರವಾದ ವಿರೋಧವು ಉಂಟಾಗಲಿ. ಇವನು ಅಂತ್ಯಕಾಲದಲ್ಲಿ ಶರತಲ್ಪದಲ್ಲಿ ಮಲಗಿದ 8 ಜನರ ಗರ್ಭಯಾತನೆಯನ್ನೂ ಅನುಭವಿಸಲಿ. ಯುದ್ಧದಲ್ಲಿ ಬಲವಾದ ಶಸ್ತ್ರಗಳಿಂದ ಮೈಯೆಲ್ಲಾ ವ್ರಣವಾಗಿ, 8 ಜನರ ಮರಣವೇದನೆಯನ್ನು ಅನುಭವಿಸಲಿ-ಎಂದು ಶಾಪವನ್ನಿತ್ತರು. ಆಗ ವಸುಗಳೆಂಟು ಜನರೂ, ಶಾಪವನ್ನು ಕೊಟ್ಟವರು ಬ್ರಹ್ಮದೇವರೆಂದು ತಿಳಿದು, ಗೋವನ್ನು ಬಿಟ್ಟು ನಮಸ್ಕರಿಸಿ, ನಮಗೆ ಮನುಷ್ಯ ಸ್ತ್ರೀಗರ್ಭ ಸಂಬಂಧವಿಲ್ಲದಂತೆ ಮಾಡಬೇಕು, ದ್ಯುನಾಮಕನು ಕೀರ್ತಿವಂತನಾಗಿಯೂ, ಅಸ್ತ್ರಜ್ಞನಾಗಿಯೂ, ಇರುವುದಲ್ಲದೆ, ನಿಮ್ಮ ಆವೇಶವೂ

ಅವನಲ್ಲಿದ್ದು, ನಮ್ಮೆಲ್ಲರ ಬಲವೂ ಅವನಿಗಿರುವಂತೆ ಅನುಗ್ರಹ ಮಾಡ ಬೆಂದು ಕೇಳಿಕೊಂಡರು. ಬ್ರಹ್ಮದೇವರು ಹಾಗೆಯೇ ಆಗುವುದೆಂದು ವರವನ್ನಿತ್ತರು.

ಆಗ ವಸುಗಳೆಲ್ಲರೂ ಗಂಗೆಯ ಸಮೀಪಕ್ಕೆ ಬಂದು, ಶಾಪವನ್ನು ತಿಳಿಸಿ, ನೀನು ನಮ್ಮೆಂಟು ಮಂದಿಯರನ್ನೂ ಗರ್ಭದಲ್ಲಿ ಧರಿಸಿ, ದ್ಯುನಾಮಕನೊಬ್ಬನನ್ನು ಬಿಟ್ಟು, ಮಿಕ್ಕ 7 ಮಂದಿಗಳನ್ನು ಹುಟ್ಟಿದ ಕೂಡಲೇ ಕೊಂದುಬಿಡು. ಅದರಿಂದ, ನಿನಗೆ ಶಿಶುಹತ್ಯಾದಿ ದೋಷವು ಬಾರದಂತೆ ನಾವು ವರವನ್ನು ಕೊಟ್ಟಿರುತ್ತೇವೆಂದು ಹೇಳಲು, ಆಕೆಯು ಒಪ್ಪಿಕೊಂಡು, ಕುರುವಂಶದರಸನಾದ ಪ್ರತೀಪರಾಜನು ಮೃಗ ಬೇಟೆಗೆ ಬಂದು ಗಂಗಾತೀರದಲ್ಲಿರುವಾಗ, ದಿವ್ಯ ಸ್ತ್ರೀರೂಪವನ್ನು ಧರಿಸಿ ಇವನ ಬಲದ ತೊಡೆಯಮೇಲೆ ಕುಳಿತು, ನನಗೆ ಪತಿಯಾಗೆಂದು ಕಪಟದಿಂದ ಕೇಳಿದಳು. ಆಗ ಅವನು ಭಾರ್ಯಾಭಾಗವು ಎಡವು. ನೀನು ಬಲದ ತೊಡೆಯ ಮೇಲೆ ಕುಳಿತುಮದರಿಂದ, ಮಗಳು ಅಥವಾ ಸೊಸೆ ಕೂಡಬೇಕಾದ ಸ್ಥಳವದು. ಆದುದರಿಂದ, ನೀನು ನನಗೆ ಸೊಸೆಯಾಗು-ಎಂದು ಹೇಳಿದನು. ಇವಳು ಉದ್ದೇಶವೂ ಹಾಗೆಯೇ ಇದ್ದಿತು. ಏಕೆಂದರೆ, ತನ್ನ ಪತಿಯಾದ ವರುಣನೇ ಇವನ ಮಗನಾಗಿ ಶಂತನು-ಎಂಬ ಹೆಸರಿನಿಂದ ಜನಿಸಿದುದನ್ನು ತಿಳಿದಿದ್ದಳು. ಶಂತನುವಿನ ಹೆಂಡತಿ ತಾನಾಗಬೇಕೆಂಬ ಉದ್ದೇಶದಿಂದಲೇ ಬಲದ ತೊಡೆಯನ್ನಾಶ್ರಯಿಸಿದಳು. ನಿರ್ವಿಘ್ನವಾಗಿ 7 ಮಕ್ಕಳನ್ನು ಕೊಲ್ಲುವ ಉದ್ದೇಶವಾಗಿ, ಪ್ರತೀಪರಾಜನು ತನಗೆ ಸೊಸೆಯಾಗು- ಎಂದು ಬೇಡಿದ ಕೂಡಲೇ, ನಾನು ನಿನ್ನ ಮಗನನ್ನು ಮದುವೆಯಾದ ಮೇಲೆ, ನೀನಾರೆಂದು ನನ್ನನ್ನು ಕೇಳಬಾರದು. ನಾನು ಏನು ಕೆಟ್ಟ ಕೆಲಸ ಮಾಡುತ್ತಿದ್ದರೂ, ಮಾಡಬೇಡವೆಂದು ತಡೆಯಬಾರದು.

ಅದರ ಕಾರಣವನ್ನೂ ಕೇಳಬಾರದು. ಇವು ಮೂರರಲ್ಲಿ ಯಾವುದಾದರೂ ಒಂದನ್ನು ಮಾಡಿದರೂ, ನಿನ್ನ ಮಗನನ್ನು ಬಿಟ್ಟು ನಾನು ಹೊರಟು ಹೋಗುವೆನು. ಇದಕ್ಕೆ ಸಮ್ಮತವಾದರೆ, ನಾನು ಸೊಸೆಯಾಗುವೆನೆಂದು ಹೇಳಿದಳು,

ಪ್ರತೀಪನು ಅದಕ್ಕೊಪ್ಪಿ, ಮೂರು ಮಕ್ಕಳಲ್ಲಿ, ನಿನಗೆ ಬೇಕಾದವನಾರೆನಲು, ಶಂತನುವನ್ನು ನಾನು ವರಿಸುವೆನು-ಎಂದು ಹೇಳಿದಳು. ರಾಜನು ಈ ವೃತ್ತಾಂತ ವನ್ನು ಶಂತನುವಿಗೆ ಹೇಳಿ, ಗಂಗೆಯನ್ನು ಆತನಿಗೆ ಮದುವೆ ಮಾಡಿಸಿದನು. ಈ ಎಂಟು ವಸುಗಳೂ ಆಕೆಯ ಗರ್ಭದಲ್ಲಿ ಜನಿಸಿದರು. ಏಳು ಮಕ್ಕಳನ್ನು ಕೊಂದುಬಿಟ್ಟಳು. ಎಂಟನೆಯವನು ಹುಟ್ಟಿದಕೂಡಲೇ ತಾನು ಹೊರಟು ಹೋಗುವ ಉದ್ದೇಶದಿಂದ, ಪತಿಯ ಎದುರಿಗೆ ಕುಳಿತು, 8ನೆಯ ಮಗುವನ್ನೂ ಕೊಲ್ಲುವಂತೆ ತೋರಿಸಿದಳು.

ಆಗ ಶಂತನು ಚಕ್ರವರ್ತಿಯು ಈಕೆಯ ಕೈ ಹಿಡಿದು- ನಿಲ್ಲಿಸು, ನೀನ್ಯಾರು ? ಹೀಗೇಕೆ ಮಕ್ಕಳನ್ನು ಕೊಲ್ಲುವೆ ? ಕಾರಣವೇನು ? ಕೊಲ್ಲಬೇಡವೆಂದನು. ತಕ್ಷಣ ಕೊಲ್ಲುವುದನ್ನು ಬಿಟ್ಟು, ಎಲ್ಲಾ ಕಾರಣವನ್ನೂ ವಿಸ್ತಾರವಾಗಿ ಹೇಳಿ, ತಾನು ಪೂರ್ವದಲ್ಲಿ ಪ್ರತಿಜ್ಞೆ ಮಾಡಿದಂತೆ, ಬಿಟ್ಟು ಹೊರಟು ಹೋದಳು. ಆ ಎಂಟನೇ ಮಗನೇ ಭೀಷ್ಮಾಚಾರ್ಯರು. ಬ್ರಹ್ಮಾಂಶದಿಂದ ಕೂಡಿ ಹುಟ್ಟಿರುವ ರೆಂದು ಭಾರತದಲ್ಲೂ, ನಿರ್ಣಯದಲ್ಲೂ, ಇರುವ ಕಥೆಯ ತಾತ್ಪರ್ಯವು. ಇಲ್ಲಿ ದ್ರೋಣನಾಮಕ ವಸುವು ನಂದಗೋಪನಾಗಿ ಜನಿಸಿದನು.

ನಿರ್ಣಯ 11ನೆಯ ಅಧ್ಯಾಯದಲ್ಲಿ (ಪರಮಾತ್ಮನನ್ನು ದೇವತೆಗಳು ಪ್ರಾರ್ಥಿಸುವ ಘಟ್ಟ) ಹೇಳಿರುವ ಪ್ರಕಾರ,ದ್ರೋಣನೆಂಬ ವಸು ತನ್ನ ಭಾರ್ಯ ಳಿಂದ ಸಹಿತನಾಗಿ ನಿನ್ನ (ಭಗವಂತನ) ತಂದೆಯಾಗಬೇಕೆಂದು ತಪಸ್ಸು ಮಾಡಿ ದನು. ಅದರಂತೆ, ನಾನು (ಬ್ರಹ್ಮದೇವರು) ಅವರಿಗೆ ವರವನ್ನು ಕೊಟ್ಟರು ವೆನು. ಅವನು ಗೋಕುಲದಲ್ಲಿ ನಂದಗೋಪನೆಂತಲೂ, ಅವನ ಹೆಂಡತಿಯು ಯಶೋದೆಯೆಂತಲೂ, ಜನಿಸಿರುವರು. ನಂದಗೋಪನು ಶೂರರಾಜನ ದೆಸೆ ಯಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿ ಗೋಪಾಲನಾಗಿರುವನು. ನೀನು ವಸುದೇವ ನಲ್ಲಿ ಅವತರಿಸಿ, ನಂದಗೋಪನ ಮನೆಗೆ ಹೋಗಿ ವಾಸಮಾಡಬೇಕು— ಎಂದು ಹೇಳಿರುವರು. ಹೀಗೆ ದ್ರೋಣನೆಂಬ ವಸುವಿಗೆ ಬಂದು ಅವತಾರವೆಂದು ತಿಳಿಯಬೇಕು. ॥25॥

## ೩. ಭಾವದರ್ಪಣ :-

ದ್ರೋಣನಾಮಕ ವಸೂವೇ ನಂದಗೋಪನ ಅವತಾರ. ಬ್ರಹ್ಮಾವಿಷ್ಟ ಭೀಷ್ಮರೇ ದ್ಯುನಾಮಕ ವಸು. ಇವರಲ್ಲಿ, ಎಲ್ಲಾ ವಸುಗಳ ಆವೇಶ ಉಂಟು, ಎಂತಲೂ, ಅಗ್ನಿ ವ್ಯತಿರಿಕ್ತ ಏಳು ಮಂದಿ ವಸುಗಳು ಸಮರೆಂತಲೂ ಹೇಳುತ್ತಾರೆ, ದ್ರೋಣೇತಿ. ತದುಕ್ತಂ ತಾರತಮ್ಯೇ. –"ದ್ರೋಣಃ ಪ್ರಾಣೋ ಧ್ರುವೋಽರ್ಕೋಽಗ್ನಿರ್ದೋಷಾ ವಸು ವಿಭಾವಸುಃ । ವಸುಷ್ವೇತೇಷು ಭೀಷ್ಮಃ ಪ್ರಾಕ್ ಬ್ರಹ್ಮಯುಕ್ತೋಽದ್ಯುನಾಮಕ"—ಇತಿ. ॥ ಮತ್ತೊಂದು ಪ್ರಮಾಣ- "ವಸುಸಪ್ತಕಯುಗ್ ಭೀಷ್ಮಃ ಬ್ರಹ್ಮಾವೇಶೀ ದ್ಯುನಾಮಕ"–ಇತಿ ಅಂಶಾವೇಶಾವತಾರಣೇ. "ನಂದಗೋಪಃ ಪುರಾ ದ್ರೋಣೋ ವಸ್ವಾನ್ಯೇ ಸಪ್ತ ಕೀರ್ತಿತಾ"—ಇತಿ. ॥25॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ:-

ವಸೂನ್ 'ಆಹ'–"**ದ್ರೋಣ**"–ಇತಿ ॥ 'ಕೃಶಾನು'–ಅಗ್ನಿ ॥ ಸ ಸ್ವಾಹಾಪತಿತ್ವಾತ್ ಅತ್ರ ಅತ್ರಿರೇವ ಮೂಲಾಗ್ನಿಃ ॥ ಅಥಾಷ್ಟಮಃ ವಸುರಾಸೀತ್ ದ್ಯುನಾಮಾ ಮಹಾಸ್ತ್ರವೇತ್ತಾಽಭವದಂಶಯುಕ್ತಃ ॥ ಬ್ರಹ್ಮಯುಕ್ತಃ ದ್ಯುನಾಮಕಃ ॥ 'ದ್ರೋಣ'–ಇತಿ ॥ ಯಃ ದ್ರೋಣನಾಮಾ ವಸುಃ ಸ ಆಸ ನಂದಾಖ್ಯ ॥ ಇತಿ॥ "ವಹ್ನ್ಯನ್ಯೇ ಅಮಾ ಜ್ಞಾನಾದಿಭಿಃ"-ಇತ್ಯುಕ್ತೇಃ ॥25॥

### ಕನ್ನಡಾರ್ಥ

ಕೃಶಾನು-ಎಂದರೆ, ಅಗ್ನಿ. ಇವನು ಸ್ವಾಹಾದೇವಿಯ ಪತಿಯಾದುದರಿಂದ, ಮೂಲಾಗ್ನಿಯೇ ಇಲ್ಲಿ ಶ್ರೇಷ್ಠನೆಂದು ಹೇಳಲ್ಪಟ್ಟ ಕೃಶಾನುನಾಮಕನು. ಇವನು ಉಳಿದ ಏಳು ವಸುಗಳಲ್ಲಿ ಶ್ರೇಷ್ಠನು. ಇವನ ತಾರತಮ್ಯ ಸ್ವರೂಪವನ್ನು 'ನೀಲ'– ಎಂಬ ಪದ್ಯದಿಂದ ನಿರೂಪಿಸುತ್ತಾರೆ. ಎಂಟನೆಯ ವಸುವು 'ದ್ಯು'- ಎಂಬ ಹೆಸರಿನವನು. ಅವನೇ, ಮಹಾಶಾಸ್ತ್ರಗಳನ್ನು ಬಲ್ಲ

ಭೀಷ್ಮನು. ಅವನಲ್ಲಿ ಬ್ರಹ್ಮದೇವರ ಆವೇಶ. ದ್ರೋಣನೆಂಬ ವಸುವೇ ನಂದಗೋಪನೆಂಬ ಶ್ರೀಕೃಷ್ಣನ ಸಾಕುತಂದೆಯು. ಎಂಟು ವಸುಗಳಲ್ಲಿ ಪ್ರಧಾನಾಗ್ನಿಯು (ಅಗ್ನಿಯು) ಎಲ್ಲರಿಗಿಂತಲೂ ಶ್ರೇಷ್ಠನು. ಮಿಕ್ಕ ಏಳು ವಸುಗಳು-ಜ್ಞಾನ ಮುಂತಾದ ಗುಣಗಳಿಂದ ಸಮಾನರು. ॥25॥

**ಜ. ಶ್ರೀಗುರುಹೃದಯ ಪ್ರಕಾಶಿಕೆ :-**

ದ್ರೋಣ ಧ್ರುವ ದೋಷಾ ಅರ್ಕ ಅಗ್ನಿ ಪ್ರಾಣ ದ್ಯು ವಿಭಾವಸು-ಎಂಬ ಅಷ್ಟವಸುಗಳಲ್ಲಿ ಅಗ್ನಿ ಎಂಬ ವಸು ಶ್ರೇಷ್ಠನು. ದ್ಯುನಾಮಕ ಬ್ರಹ್ಮಾವೇಶವುಳ್ಳವನಾಗಿ, ಭೀಷ್ಮಾಚಾರ್ಯರೆಂದು ಕರೆಸಿದನು. ದ್ರೋಣನೆಂಬ ವಸು ನಂದಗೋಪನಾಗಿ ಹುಟ್ಟಿದನು. ಅಗ್ನಿ-ಎಂಬ ವಸುವನ್ನು ಬಿಟ್ಟು ಉಳಿದ ಏಳು ಜನ ವಸುಗಳು ತಮ್ಮೊಳಗೆ ಜ್ಞಾನಾದಿಗುಣಗಳಿಂದ ಸಮಾನರು. ಪ್ರಮಾಣ–

**ವಸುಸಪ್ತಕಯುಗ್ಭೀಷ್ಮಃ ಬ್ರಹ್ಮಾವೇಶೇ ದ್ಯುನಾಮಕಃ**
॥25॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಿಂದ ಅಷ್ಟವಸುಗಳ ವಿಚಾರ ತಿಳಿಸುತ್ತಾರೆ.

ಒಂಭತ್ತುಕೋಟಿ ದೇವತೆಗಳ ಪೈಕಿ, 100 ದೇವತೆಗಳಿಗೆ ಮಾತ್ರವೇ ಸೋಮಪಾನ ಉಂಟೆಂದು ವೇದೋಕ್ತವಾದ ವಿಷಯ. ಈ 100 ಮಂದಿ ದೇವತಾವರ್ಗಕ್ಕೆ ಸೋಮಪಾನಾರ್ಹರೆಂದು-ಹೆಸರು.

**ಪ್ರಮಾಣ :-**

"ನವಕೋಟ್ಯೋಹಿ ದೇವಾನಾಂ ತೇಷಾಂ ಮಧ್ಯೇ ಶತಸ್ಯ ನು ॥
ಸೋಮಾಧಿಕಾರೋ ವೇದೋಕ್ತೋ ॥"–

**—ಇತಿ ತಾರತಮ್ಯಸಂಗ್ರಹಗ್ರಂಥ.**

2. ಸೋಮಪಾನಾರ್ಹರಾದ ಆ ಶತಸಂಖ್ಯಾಕರಾದ ದೇವತೆಗಳ ಪೈಕಿ ಅಷ್ಟವಸುಗಳು ಯಾರೆಂದರೆ :—

(1) ದ್ರೋಣ. (2) ಧ್ರುವ. (3) ದೋಷ. (4) ಅರ್ಕ. (5) ಅಗ್ನಿ. (6) ಪ್ರಾಣ. (7) ದ್ಯುನಾಮಕ ವಸು ಮತ್ತು (8) ವಿಭಾವಸು.

3. ಪೂರ್ವೋಕ್ತ ಅಷ್ಟವಸುಗಳಲ್ಲಿ ಅಗ್ನಿಯು ಶ್ರೇಷ್ಠನು. (**ಕೃಶಾನು ಶ್ರೇಷ್ಠ**). ಅಗ್ನಿಯ ಅವತಾರ ವಿಶೇಷಗಳನ್ನು ಹಿಂದಿನ ಪದ್ಯಗಳಲ್ಲಿ ತಿಳಿಸಿರುತ್ತಾರೆ. ಅಗ್ನಿಯು ಭೃಗು, ಪ್ರಸೂತಿಗೆ ಸಮನಾಗಿದ್ದು, 15ನೆಯ ಕಕ್ಷೆಯಲ್ಲಿ ಸೇರಿದ್ದಾನೆ. ಅಗ್ನಿಯನ್ನು ಬಿಟ್ಟು, ಉಳಿದ ಏಳು ವಸುಗಳು 18ನೆಯ ಕಕ್ಷಾಪನ್ನರು. ಈ ಏಳು ಮಂದಿ ವಸುಗಳು ತಮ್ಮ ತಮ್ಮಲ್ಲಿ ಸಮಾನರು. (**ಅಗ್ನಿಯನ್ನು ಉಳಿದು ಏಳು ಸಮಾನರೆನಿಪರು**).

4. ಅವಶಿಷ್ಟರಾದ ಏಳು ಮಂದಿ ವಸುಗಳಲ್ಲಿ, **ದ್ಯುನಾಮಕ ವಸುವೇ** ಭೀಷ್ಮಾಚಾರ್ಯನೆಂಬ ಹೆಸರಿನಿಂದ ಅವತರಿಸಿದನು. ಭೀಷ್ಮಾಚಾರ್ಯರು ಬ್ರಹ್ಮದೇವರ ಆವೇಶಯುಕ್ತರು. (**ಬ್ರಹ್ಮಯುತ ಭೀಷ್ಮಾಚಾರ್ಯ**).

9. **ಕಥಾಪ್ರಸಂಗ** :-

ಅಷ್ಟವಸುಗಳ ಪೈಕಿ. ದ್ಯುನಾಮಕ ವಸುವಿನ ಪತ್ನಿ ವರಾಂಗಿ. ಸುವೀದನೆಂಬ ರಾಜನ ಹೆಂಡತಿಯಾದ ಅದೇ ಹೆಸರಿನ ವರಾಂಗಿ ಎಂಬಾಕೆಯು ದ್ಯುನಾಮಕವಸುವಿನ ಪತ್ನಿಯ ಪರಮ ಸಖಿಯಾಗಿದ್ದಳು. ರಾಜಕುಮಾರಿಯು ಮಾನವಳಾದ್ದರಿಂದ, ವಯೋಧರ್ಮಕ್ಕನುಗುಣವಾಗಿ ಮುಪ್ಪು ಬಂದಿತು. ಆಗ ವಸುಪತ್ನಿಯಾದ ವರಾಂಗಿಯು ತನ್ನ ಸಖಿಯನ್ನು ಸಹ ಜರಾಮರಣವಿಲ್ಲದಂತೆ ಮಾಡಬೇಕೆಂಬ ಉದ್ದೇಶದಿಂದ, ವಸಿಷ್ಠಮಹರ್ಷಿಗಳಲ್ಲಿದ್ದ ನಂದಿನೀ-ಎಂಬ ಕಾಮಧೇನುವನ್ನು ಕಟ್ಟಿ ತರಬೇಕೆಂದು ತನ್ನ ಪತಿಗೆ ಹೇಳಿದಳು.

ನಂದಿನಿಯ ಕ್ಷೀರವು ಅಮೃತಸದೃಶವಾದ್ದರಿಂದ, ಅದರ ಪಾನದಿಂದ ಮುಪ್ಪು ದೂರವಾಗುವುದೆಂದು ತಿಳಿದಿದ್ದ ವಸುಪತ್ನಿ ಆರೀತಿ ಹೇಳಿದಳು. ಅದರಂತೆ, ದ್ಯುನಾಮಕವಸುವು ಉಳಿದ ಏಳು ವಸುಗಳ ಸಹಾಯದಿಂದ ವಸಿಷ್ಠರ ಆಶ್ರಮಕ್ಕೆ ಬಂದು, ಆ ಗೋವನ್ನು ಬಂಧಿಸಿದರು. ಬ್ರಹ್ಮದೇವರ ಆವೇಶಯುಕ್ತರಾದ ವಸಿಷ್ಠರು ಕೋಪದಿಂದ. ಆ ಎಂಟು ಮಂದಿ ವಸುಗಳೆಲ್ಲರೂ ಭೂಮಿಯಲ್ಲಿ ಮಾನವರಾಗಿ ಜನಿಸುವಂತೆ ಶಪಿಸಿದರು. ದ್ಯುನಾಮಕವಸುವನ್ನು ಬಿಟ್ಟು, ಉಳಿದ ಏಳು ಮಂದಿ ವಸುಗಳು ಮಾನವಜನ್ಮದಲ್ಲಿ ಮರಣಾನಂತರ, ಅವರವರ ಸ್ಥಾನವನ್ನು ಸೇರುವಂತೆ ಶಾಪಕೊಟ್ಟರು. ದ್ಯುನಾಮಕವಸುವೇ ಭೀಷ್ಮಾಚಾರ್ಯರೆಂಬ ಹೆಸರಿನಿಂದ ಗಂಗಾಪುತ್ರರಾಗಿ ಜನಿಸಿದನು. ಅವನನ್ನು ದುರ್ಮಾರ್ಗದಲ್ಲಿ ಪ್ರೇರಿಸಿದ ಕಾರಣದಿಂದ ವರಾಂಗಿಗೆ ವಸಿಷ್ಠರು, ಅಂಬಾ ಎಂಬ ಹೆಸರಿನಿಂದ ಮಾನವಯೋನಿಯಲ್ಲಿ ಜನಿಸಿ, ಪುರುಷಶರೀರಪ್ರವೇಶದಿಂದ ಪತಿಯನ್ನು ಕೊಲ್ಲಲು ಕಾರಣಳಾಗಲಿ-ಎಂದು ಶಪಿಸಿದರು. ಭೀಷ್ಮಾಚಾರ್ಯರು ಅಸ್ಖಲಿತ ಬ್ರಹ್ಮಚಾರಿಗಳು. ಕುರುಕುಲಪಿತಾಮಹರು. ಶಂತನು ಚಕ್ರವರ್ತಿಯಿಂದ ಗಂಗಾಪುತ್ರರಾಗಿ ಅವತರಿಸಿದರು. ವಸಿಷ್ಠರ ಶಾಪದಂತೆ, ಅಂತ್ಯಕಾಲದಲ್ಲಿ ಭೀಷ್ಮಾಚಾರ್ಯರು ಶರತಲ್ಪದಲ್ಲಿ ಮಲಗಿ, ಎಂಟು ಜನರ ಗರ್ಭಯಾತನೆಯನ್ನು ಅನುಭವಿಸಿದರು. ಬಲವಾದ ಅಸ್ತ್ರ ಶಸ್ತ್ರಗಳಿಂದ ಮೈಯ್ಯೆಲ್ಲಾ ಗಾಯಗಳಾಗಿ, ಎಂಟು ಜನರ ಮರಣ ವೇದನೆಯನ್ನು ದಾರುಣವಾಗಿ ಅನುಭವಿಸಿದರು. ಆಗ,ಆವಳು ವಸುಗಳು ವಸಿಷ್ಠರಲ್ಲಿ ಬ್ರಹ್ಮದೇವರು ಆವೇಶಿತರಾಗಿ, ಶಾಪವನ್ನಿತ್ತರೆಂದು ತಿಳಿದು, ಬ್ರಹ್ಮದೇವರನ್ನು ದ್ಯುನಾಮವಸುವಿನ ಅವತಾರಭೂತನಾಗಿದ್ದ ಭೀಷ್ಮಾಚಾರ್ಯರಲ್ಲಿ ಆವೇಶವಾಗಿರಬೇಕೆಂದು ಪ್ರಾರ್ಥಿಸಿದರು. ಅದರಂತೆ, ಭೀಷ್ಮಾಚಾರ್ಯರಿಗೆ ಬ್ರಹ್ಮದೇವರ ಆವೇಶವಿತ್ತು.

10. ಅಷ್ಟವಸುಗಳ ಪೈಕಿ, **ದ್ರೋಣನಾಮಕ**-ವಸುವು ದ್ವಾಪರ ಯುಗದಲ್ಲಿ **ನಂದಗೋಪ**-ನೆಂಬ ಹೆಸರಿನಿಂದ ಅವತರಿಸಿದನು. (**ದ್ರೋಣ ನಾಮಕ ನಂದಗೋಪ**).

**ಪ್ರಮಾಣ :-**

"ದ್ರೋಣಃ ಪ್ರಾಣೋ ಧ್ರುವೋರ್ಕೋಗ್ನಿರ್ದೋಷಾ ವಸು ವಿಭಾವಸುಃ ॥
ವಸುಷ್ವೇ ತೇಷು ಭೀಷ್ಮಃ ಪ್ರಾಕ್ ಬ್ರಹ್ಮಾಯುತೋದ್ಯುನಾಮಕಃ ॥
ವಸುಸಪ್ತಯುಗ್ ಭೀಷ್ಮ! ಬ್ರಹ್ಮಾವೇಷೀ ದ್ಯುನಾಮಕ ॥
ನಂದಗೋಪಃ ಪುರಾ ದ್ರೋಣೋ ಪತ್ನ್ಯಾ ಕ್ಯೇ ಸಪ್ತಕೀರ್ತಿತಾ ॥"-

**—ಇತಿ ತಾರತಮ್ಯಸಂಗ್ರಹೇ-ಅಂಶಾವತಾರಾರಣೇ.**

ನಂದಗೋಪನು ಶ್ರೀಕೃಷ್ಣನ ಸಾಕು ತಂದೆಯು. ಯಶೋದೆ, ನಂದಗೋಪನ ಪತ್ನಿ. ವಸುದೇವನ ಆಪ್ತ ಮಿತ್ರ. ಗೊಲ್ಲರ ಮುಖ್ಯನಾಯಕ. ನಂದಗೋಪನು ಶೂರಸೇನ ಮಹಾರಾಜನ ದೆಸೆಯಿಂದ ವೈಶ್ಯಸ್ತ್ರೀಯಲ್ಲಿ ಜನಿಸಿ, ಗೋಪಾಲಕನಾದನು. ವಸುದೇವ ದೇವಕಿಯರಲ್ಲಿ ಪ್ರಕಟವಾದ ಶ್ರೀಕೃಷ್ಣನು, ನಂದಗೋಕುಲದಲ್ಲಿ ಬೆಳೆದು, ತನ್ನ ಬಾಲಲೀಲೆಗಳಿಂದ ನಂದ ಯಶೋದೆಯರನ್ನು ಸಂತೋಷಪಡಿಸಿದನು. ॥25॥

★★

## ಪದ್ಯ-೨೬

**ಮೂಲ:-**

**ಭೀಮ ರೈವತ ಜಜಜ್ಮೈಕಪ ।**
**ದಾ ಮಹನ್ ಬಹುರೂಪಕನು ಭವ ।**
**ವಾಮ ಉಗ್ರ ವೃಷಾಕಪಿಯಹಿರ್ಬುಧ್ನಿ ಎನುತಿಪ್ಪ ॥**
**ಈ ಮಹಾತ್ಮರ ಮಧ್ಯದೊಳಗೆ ಉ ।**
**ಮಾ ಮನೋಹರನುತ್ತಮನು ದಶ ।**
**ನಾಮಕರು ಸಮರೆನಿಸಿಕೊಂಟರು ತಮ್ಮೊಳೆಂದೆಂದು ॥೨೬॥**

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಏಕಾದಶರುದ್ರರ ವಿಚಾರವನ್ನು ತಿಳಿಸುತ್ತಾರೆ- ದಾಸರಾಯರು. ॥26॥

**ಪ್ರತಿಪದಾರ್ಥ :-**

**ಭೀಮ** - ಭೀಮ, **ರೈವತ** = ರೈವತ, **ಓಜ** = ಓಜ, **ಅಜೈಕಪದಾ** = ಅಜೈಕಪಾತ್, **ಮಹನ್** = ಮಹಾನ್, **ಬಹರೂಪಕನು** = ಬಹುರೂಪಕ, **ಭವ** - ಭವ, **ವಾಮ** = ವಾಮ, **ಉಗ್ರ** = ಉಗ್ರ, **ವೃಷಾಕಪಿಯು** = ವೃಷಾಕಪಿ. **ಅಹಿರ್ಬುಧ್ನಿ** = ಅಹಿರ್ಬುಧ್ನಿ, **ಎನುತಿಪ್ಪ** = ಎಂಬ ಹೆಸರಿನ ಏಕಾದಶರುದ್ರರ ವರ್ಗ. **ಈ ಮಹಾತ್ಮರ ಮಧ್ಯದೊಳಗೆ** = **ಪೂರ್ವೋಕ್ತ** ಮಹಾತ್ಮರಾದ 11 ಮಂದಿ ರುದ್ರವರ್ಗದವರಲ್ಲಿ, **ಉಮಾಮನೋಹರನು** = ಪಾರ್ವತೀಪತಿಯಾದ ರುದ್ರದೇವರು (ಇವರಿಗೆ "ವಾಮ"- ಎಂಬ ಹೆಸರು). **ಉತ್ತಮನು** = ಶ್ರೇಷ್ಠನಾದವನು. ಇವರು 5ನೆಯ ಕಕ್ಷೆಯಲ್ಲಿದ್ದಾರೆ. (ಅಹಂಕಾರತತ್ತ್ವಾಭಿಮಾನಿವರ್ಗ), **ದಶನಾಮಕರು** = ಪಾರ್ವತೀಪತಿಯಾದ ಶಂಕರನನ್ನು ಬಿಟ್ಟು, ಉಳಿದ 10 ಮಂದಿ ರುದ್ರರು, **ತಮ್ಮ ಲ್ಲಿ** = ತಮ್ಮ ತಮ್ಮಲ್ಲಿ, **ಎಂದೆಂದು** = ಅನಾದ್ಯನಂತಕಾಲಕ್ಕೂ, **ಸಮರೆನಿಸಿಕೊಂಬರು** = ಸಮಾನರು ಎಂತ ಕರೆಯಿಸಲ್ಪಡುತ್ತಾರೆ. ॥26॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ಏಕಾದಶರುದ್ರರ ನಾಮಗಳ ಹೇಳುತಾರೆ.

ಇಲ್ಲಿ ಆವರಣದಲ್ಲಿ ಕೊಟ್ಟಿರುವ ಸಂಖ್ಯೆಯು ನೂರು ಮಂದಿ ಸೋಮ ಪಾನಾರ್ಹರನ್ನು ಸೂಚಿಸುವ ಸಂಖ್ಯೆ. ಇಲ್ಲಿ ಸಂಖ್ಯೆ 9ರಿಂದ ಪ್ರಾರಂಭ ವಾಗಿರುವುದು ಹಿಂದಿನ ಶ್ಲೋಕಗತ ಎಂಟು ಮಂದಿ ವಸುಗಳನ್ನು, ಸೇರಿಸಿ ಕೊಂಡು ಮುಂದಕ್ಕೆ. ಮುಂದೆಯೂ ಇದೇ ರೀತಿ ತಿಳಿಯಬೇಕು.

1. ಭೀಮ(9), 2. ರೈವತ (10), 3. ಓಜ(11), 4. ಅಜೈಕಪಾತ್(12), 5. ಮಹಾನ್(13), 6. ಬಹುರೂಪಕ(14), 7. ಭವ(15), 8. ವಾಮ(16), 9. ಉಗ್ರ(17), 10. ವೃಷಾಕಪಿ(18), 11. ಅಹಿರ್ಬುಧ್ನಿ(19).

ರುದ್ರರು ಹನ್ನೊಂದು ಮಂದಿ. ಇವರಲ್ಲಿ, ಐದನೇಕಕ್ಷದಲ್ಲಿ ಹೇಳಿದ ಉಮಾಪತಿರುದ್ರ ಒಬ್ಬನು ಹೋಗತಾ, ಉಳಿದವರು 10 ಮಂದಿ. ಈ ಪ್ರಕಾರನಾಮಗಳಿಂದ ಕರೆಸತಕ್ಕ, ಈ ಹನ್ನೊಂದು ಮಂದಿ ಮಹಾತ್ಮರ ಮಧ್ಯ ದಲ್ಲಿ 8ನೇ ಸಂಖ್ಯಾದವನಾದ ಪಾರ್ವತೀಪತಿ ರುದ್ರದೇವರು. ಇವರಿಗೆ **ವಾಮ** ಎಂತ ನಾಮ. ಶ್ರೇಷ್ಠರಾದವರು. ಈ ರುದ್ರದೇವರು ಐದನೇ ಕಕ್ಷದಲ್ಲೇ ಇದ್ದಾರೆ. ಆ ಕಕ್ಷದಲ್ಲೇ ಅವರ ಅವತಾರಗಳು ಹೇಳಿವೆ. ಅವ ಶಿಷ್ಟ ಹತ್ತುಮಂದಿ ರುದ್ರರು ತಮ್ಮೊಳಗೆ ತಾವು ಅನಾದ್ಯನಂತಕಾಲಕ್ಕೂ ಸಮಾನರು-ಎಂತ ಕರೆಸಿಕೊಳ್ಳಲ್ಪಡುತ್ತಾರೆ. ॥26॥

**೨. ಭಾವಪ್ರಕಾಶಿಕೆ :-**

ಮೇಲೆ ಹೇಳಿದ ಏಕಾದಶ (11) ರುದ್ರರ ಪೈಕಿ ಭವ ಎಂಬ ಹೆಸರುಳ್ಳ ಪಾರ್ವತೀಪತಿಯು ಉತ್ತಮ ಕಕ್ಷದಲ್ಲಿ ಸೇರಿರುತ್ತಾರೆ. ಉಳಿದ 10 ರುದ್ರರು ಮಾತ್ರ ತಮ್ಮೊಳಗೆ ಎಲ್ಲರೂ ಸಮರೆಂದು ತಿಳಿಯಬೇಕು.

**೩. ಭಾವದರ್ಪಣ :-**

ಅಜೈಕಪಾತ್ ಭೂರಿರಾಯನು ಅಹಿರ್ಬುಧ್ನಿ ಸರ್ವರುದ್ರರ ಆವೇಶದಿಂದ

ಭೂರಿಶ್ರವ ಎಂತಲೂ, ವಿಷ್ಕಂಭನೇ ಕೃಪಾಚಾರ್ಯರ ಅವತಾರವೆಂತಲೂ, ಪತ್ರತಾಪಾಖ್ಯ ರುದ್ರನೇ ಸೋಮದತ್ತರೂಪ, ಜರಾಸಂಧನ ಪುತ್ರ ಸಹ ದೇವರೂಪ-ಈ ಎರಡವತಾರನಾಗಿದ್ದಾನೆಂತಲೂ ಎರಡು ಪದ್ಯದಿಂದ ಹೇಳು ತ್ತಾರೆ, ಭೀಮೇತಿ । ಭೂರೀತಿ । ತದುಕ್ತಂ। "ರೈವತೋऽಜೋ ಭವೋ ಭೀಮೋ ವಾಮ ಉಗ್ರೋ ವೃಷಾಕಪಿಃ । ಅಜೈಕಪಾದಹಿರ್ಬುಧ್ನಿರ್ಬಹು ರೂಪೋ ಮಹಾನಿತಿ । ಮೂಲರುದ್ರಮ್ಮೃತೋಹ್ಯೇತೇ ದಶರುದ್ರಾಃ ಪ್ರಕೀ ರ್ತಿತಾಃ । ರುದ್ರಾ ಏಕಾದಶೈತೇಷು ಭೂರಿಃ ಪೂರ್ವಮಜೈಕಪಾತ್ । ಭೂರಿ ಶ್ರವಾ ಸರ್ವರುದ್ರಯುಕ್ತೋऽಹಿರ್ಬುಧ್ನಿರುಚ್ಯತೇ । ಶಲಃ ಪೂರ್ವವಿರೂಪಾಕ್ಷಃ ಕೃಪೋ ವಿಷ್ಕಂಭ ಉಚ್ಯತೇ । ಮಹದೇವಃ ಸೋಮದತ್ತ ಏತೌ ಪ್ರಾಕ್ ಪತ್ರ ತಾಪಕಃ ! ವಿರೂಪಾಕ್ಷಾದಯೋ ನಾಮಭೇದಾ ರುದ್ರಾಃ ಪ್ರಕೀರ್ತಿತಾ". ಇತಿ॥ ॥26॥ ॥27॥

### ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :-

ರುದ್ರಾನ್ ಆಹ 'ಭೀಮ'- ಇತಿ ॥ ರುದ್ರಾದನ್ಯೇ ತತಃ ರುದ್ರಾಃ ಇತ್ಯುಕ್ತಿಃ ॥26॥

## ಕನ್ನಡಾರ್ಥ

ಏಕಾದಶರುದ್ರರಲ್ಲಿ ಪ್ರಧಾನರುದ್ರರನ್ನು ಬಿಟ್ಟು, ಉಳಿದ ರುದ್ರರನ್ನು ಹೇಳುತ್ತಾರೆ- 'ಭೀಮ'- ಎಂಬ ಪದ್ಯದಿಂದ. ಮೂರು. ರುದ್ರರನ್ನುಳಿದು, ಹತ್ತು ರುದ್ರರು ಸಮರೆಂದು ಪ್ರಮಾಣಗಳಲ್ಲಿ ಹೇಳಲಾಗಿದೆ. ಅದನ್ನನು ಸರಿಸಿಯೇ ಇಲ್ಲಿ 'ಸಮರೆನಿಸಿಕೊಂಬರು'- ಎಂದು ಹೇಳಿದೆ. ॥26॥

### ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ಭೀಮ ರೈವತ ಓಜ ಅಜೈಕಪಾತ್ ಮಹಾನ್ ಬಹುರೂಪ ಭವ ವಾಮ ಉಗ್ರ ವೃಷಾಕಪಿ ಅಹಿರ್ಬುಧ್ನಿ-ಎಂಬ ಏಕಾದಶರುದ್ರರಲ್ಲಿ, ಮಹಾನ್‌ಎಂಬ

ಉಮಾಪತಿಯಾದ ರುದ್ರಮನು ಉತ್ತಮನು. ಕಡಿಮೆ ಹತ್ತು ಜನ ರುದ್ರರು ತಮ್ಮೊಳಗೆ ಜ್ಞಾನಾದಿ ಗುಣಗಳಿಂದ ಸಮರು. ॥26॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಏಕಾದಶರುದ್ರರ ವಿಚಾರವನ್ನು ತಿಳಿಸುತ್ತಾರೆ– ದಾಸವರ್ಯರು.

1 ಏಕಾದಶರುದ್ರರ ಹೆಸರುಗಳು ಇಂತಿವೆ:—

1. ಭೀಮ 2. ರೈವತ, 3. ಓಜ. 4. ಅಜೈಕಪಾತ್. 5. ಮಹಾನ್, 6. ಬಹುರೂಪಕ, 7. ಭವ, 8. ವಾಮ, 9. ಉಗ್ರ. 10. ವೃಷಾಕಪಿ, ಮತ್ತು 11. ಅಹಿರ್ಬುಧ್ನಿ.

2. ಮಹಾಮಹಿಮರಾದ ಈ ಏಕಾದಶರುದ್ರರ ಪೈಕಿ (**ಈ ಮಹಾತ್ಮರ ಮಧ್ಯದೊಳಗೆ**) ಪಾರ್ವತೀಪತಿಯಾದ ಶಂಕರನು (**ಉಮಾಮನೋಹರನು**) ಶ್ರೇಷ್ಠನು (**ಉತ್ತಮನು**). ಮಹರುದ್ರದೇವರು 5ನೆಯ ಕಕ್ಷಾಪನ್ನರು. ಗರುಡ–ಶೇಷರಿಗೆ ಸಮ. ಅಹಂಕಾರತತ್ತ್ವಾಭಿಮಾನಿದೇವತಾ.

3. ಉಮಾಮನೋಹರನಾದ ಮಹರುದ್ರದೇವರನ್ನು ಬಿಟ್ಟು, ಉಳಿದ 10ಮಂದಿ ರುದ್ರರು ತಮ್ಮತಮ್ಮಲ್ಲಿ ಪರಸ್ಪರ ಸಮಾನರು. (**ದಶನಾಮಕರು ಸಮರೆನಿಸಿಕೊಂಬರು**) ॥26॥

★★

## ಪದ್ಯ-೨೭

**ಮೂಲ :-**

**ಭೂರ್ಯಜೈಕಪದಾಹ್ವಹಿ ಬುರ್ |**
**ಧ್ನ್ಯೇರಯಿದು ರುದ್ರಗಣಸಂಯುತ |**
**ಭೂರಿಶ್ರವನೆಂದೆನಿಪ ಶಲ ವಿರುಪಾಕ್ಷನಾಮಕನು ||**
**ಸೂರಿಕೃಪ ವಿಷ್ಕಂಭ ಸಹದೇ |**
**ವಾ ರಣಾಗ್ರಣಿ ಸೋಮದತ್ತನು |**
**ಶಾ ರಚಿಸಿದ ದ್ವಿರೂಪ ಧರೆಯೊಳು ಪತ್ರತಾಪಕನು ||೨೭||**

**ಅವತರಣಿಕೆ :-**

ದಶರುದ್ರರ ಅವತಾರ ವಿಶೇಷಗಳನ್ನು ತಿಳಿಸುತ್ತಾರೆ. ||27||

**ಪ್ರತಿಪದಾರ್ಥ :-**

**ಅಜೈಕಪದಾಹ್ವ** = ಏಕಾದಶ ರುದ್ರರಲ್ಲಿ ಅಜೈಕಪದ-ಎಂಬ ನಾಮಾಂಕಿತವಾದ ರುದ್ರನು, **ಭೂರಿ** = ಭೂರಿ-ಎಂಬ ಹೆಸರಿನ ಅವತಾರ ಮಾಡಿದನು. **ಅಹಿರ್ಬುಧ್ನ್ಯ** = ಅಹಿರ್ಬುಧ್ನ್ಯ ಎಂಬ ಹೆಸರಿನ ರುದ್ರನು. **ಭೂರಿಶ್ರವನು** = ಭೂರಿಶ್ರವ ಎಂತಲೂ, **ಶಲ** = ಶಲ ಎಂತಲೂ, **ವಿರೂಪಾಕ್ಷನಾಮಕನು** = ವಿರೂಪಾಕ್ಷ-ಎಂಬ ಹೆಸರಿನಿಂದಲೂ, **ಸೂರಿಕೃಪ** = ಜ್ಞಾನಿಗಳಾದ ಕೃಪಾಚಾರ್ಯನೆಂತಲೂ, **ವಿಷ್ಕಂಭ** = ವಿಷ್ಕಂಭನೆಂತಲೂ, **ಐದು** = ಈ ಪ್ರಕಾರ ಐದು ಅವತಾರಗಳು. ಅದೇ ಅಹಿರ್ಬುಧ್ನ್ಯ, **ಸಹದೇವ** = ಸಹದೇವ ಎಂತಲೂ, **ರಣಾಗ್ರಣೀ** = ಯುದ್ಧಶ್ರೇಷ್ಠನಾದ, **ಸೋಮದತ್ತನು** = ಸೋಮದತ್ತ ಎಂತಲೂ, **ರುದ್ರಗಣಸಂಯುತ** - ಉಮಾಪತಿಯಾದ

ಮಹರುದ್ರದೇವರ ಆವೇಶದಿಂದ ಕೂಡಿದವನಾಗಿ, **ಧರೆಯೊಳು** = ಭೂಮಿಯಲ್ಲಿ, **ತಾ ರಚಿಸಿದ ದ್ವಿರೂಪ** = ಇಂತು, ಎರಡು ರೂಪಗಳ ಅವತಾರಗಳನ್ನು ಮಾಡಿದನು. **ಪತ್ರತಾಪಕನು** = ಪತ್ರತಾಪಕನೆಂಬ ರುದ್ರದೇವರು.
॥27॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ದಶರುದ್ರರೊಳಗೆ ಅವತಾರಗಳ ಹೇಳತಾರೆ.

ಎರಡು ಪ್ರಕಾರವಾಗಿ, ಅವತಾರರೂಪಗಳುಳ್ಳವನು ಅಹಿರ್ಬುಧ್ನಿಯು. ಇದರ ವಿವರ ಮುಂದೆ ಹೇಳತಾರೆ. ಐದು ಒಂದು, ಮೂರು ಒಂದು-ಅಂತು, ಎರಡು ಎರಡಾವರ್ತಿ ಅವತಾರವಾದಾಗ, ಮೊದಲು ಐದು ರೂಪ, ಎರಡನೇ ಸಾರಿ ಮೂರು ರೂಪ. ನಾಲ್ಕನೇ ಸಂಖ್ಯಾದವನಾದ-ಅಜೈಕಪದ— ಎಂತ ನಾಮಾಂಕಿತನಾದ ರುದ್ರದೇವರ ಅವತಾರ. ಭೂರಿ-ಎಂತ ಒಂದು ಅವತಾರ ಮಾತ್ರವೇ. ಹನ್ನೊಂದನೇ ಸಂಖ್ಯಾದವನಾದ ಅಹಿರ್ಬುಧ್ನಿ- ಅವತಾರಗಳು ಭೂಮಿಯೊಳಗೆ ಆದದ್ದು ಎರಡಾವರ್ತಿ. ಮೊದರು ಐದು ಅವತಾರಗಳು, ವಿವರ–ಭೂರಿಶ್ರವನೆಂತಲೂ, ಶಲ–ಎಂತಲೂ, ವಿರೂಪಾಕ್ಷ-ಎಂತಲೂ, ಜ್ಞಾನಿಗಳಾದ ಕೃಪಾಚಾರ್ಯರು ಎಂತಲೂ, ಈ ಪ್ರಕಾರ ಐದು ಅವತಾರಗಳು. ಈ ಅಹಿರ್ಬುಧ್ನಿಗೆ ಎರಡನೇ ಆವರ್ತಿ ಮತ್ತೊಂದು ಪ್ರಕಾರ ಅವತಾರಗಳು–ಸಹದೇವ ಎಂತ ಅವತಾರ. ಯುದ್ಧದಲ್ಲಿ ಶ್ರೇಷ್ಠನಾದ ಸೋಮದತ್ತ-ಎಂತ ಅವತಾರ ಅಂತೂ ಮೂರು. ಐದು ಗಣ ಒಂದು. ಮೂರುಗಣ ಒಂದು ಅಂತು ಈ ಎರಡು ಗಣವೂ ಉಮಾಪತಿಯಾದ ರುದ್ರದೇವರ ಆವೇಶದಿಂದ ಯುಕ್ತ ಮಾದದ್ದು. ಪತ್ರತಾಪಕನೆಂಬ ರುದ್ರದೇವರು. ಅಹಿರ್ಬುಧ್ನಿ— ಎಂಬ ಹನ್ನೊಂದನೇ ರುದ್ರದೇವರು, ತಾವು ಈ ಪ್ರಕಾರ ಎರಡು ವಿಧದಿಂದ ಅವ

ತಾರಗಳ ಮಾಡಿದರೆಂತ ತಾತ್ಪರ್ಯ.ಅಹಿರ್ಬುಧ್ನ್ಯ-ಈ ಪ್ರಕಾರ ಅವತಾರಗಳುಳ್ಳವ ಎಂತ ತಿಳಿಯಬೇಕು. ||27||

೨. ಭಾವಪ್ರಕಾಶಿಕೆ

ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷರೆಂಬ–ಮೂರು ಮಂದಿ ರುದ್ರರು ಸೋಮದತ್ತನ ಮಕ್ಕಳಾಗಿ ಭೂರಿ, ಭೂರಿಶ್ರವ, ಶಲ-ಎಂಬ ಹೆಸರಿ ನಿಂದ ಜನಿಸಿರುವರು. ಈ ಮೂವರ ತಂದೆಯಾದ, ಪ್ರಹ್ಲಾದಾಂಶನಾದ ಬಾಲ್ಹೀಕರಾಜನ ಮಗನಾದ ಸೋಮದತ್ತರಾಜನು, ಪತ್ರತಾಪನೆಂಬ ರುದ್ರನ ಅವತಾರವು. ನಿರ್ಣಯ 11ನೆಯ ಅಧ್ಯಾಯದಲ್ಲಿ ಹೇಳಿರುವ ಪ್ರಕಾರ, ಪ್ರತೀಪರಾಜನ ಮಕ್ಕಳು ದೇವಾಪಿ, ಬಾಲ್ಹೀಕ, ಶಂತನು ಎಂಬ ಮೂವರು. ಅವರಲ್ಲಿ ಪ್ರಹ್ಲಾದನು ಬಾಲ್ಹೀಕರಾಜನಾಗಿ ಜನಿಸಿದನೆಂದು,21ನೆಯ ಪದ್ಯದಲ್ಲಿ ಹೇಳಲ್ಪಟ್ಟಿದೆ. ರುದ್ರರಲ್ಲಿ ಪತ್ರತಾಪನೆಂಬ ರುದ್ರನು ಸೋಮದತ್ತನೆಂಬ ಹೆಸರಿನಿಂದ ಬಾಲ್ಹೀಕರಾಜನ ಮಗನಾಗಿ ಜನಿಸಿದನು. ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷರೆಂಬ ಮೂರು ಮಂದಿ ರುದ್ರರು, ಭೂರಿ, ಭೂರಿಶ್ರವಾ, ಶಲ-ಎಂಬ ಹೆಸರುಗಳಿಂದ ಇವನ ಮಕ್ಕಳಾಗಿ ಜನಿಸಿದರು.

ಅವರಲ್ಲಿ ಭೂರಿಶ್ರವರಾಜನು ಉಮಾಪತಿಯಾದ ಶಿವ– ಮೊದಲಾದ ಎಲ್ಲಾ ರುದ್ರರ ಆವೇಶದಿಂದಲೂ, ವರಬಲದಿಂದಲೂ, ಪರಮಾಸ್ತ್ರವೇತ್ತ ನಾಗಿ ಮಹಾ ಬಲಾಢ್ಯನಾದನು. ವರ ಬಲವೇನೆಂದರೆ, ಪೂರ್ವದಲ್ಲಿ ಸೋಮ ದತ್ತನು ರುದ್ರದೇವರನ್ನು ಕುರಿತು,ಇಂತಹಾ ಮಗನು ಹುಟ್ಟಬೇಕೆಂದು ತಪಸ್ಸು ಮಾಡಿದನು. ಆಗ, ರುದ್ರದೇವರು-"ನಿನ್ನ ಶತ್ರುವನ್ನು ಮರ್ದನಮಾಡುವ ಶಕ್ತಿಯುಳ್ಳವನಾಗಿ ಬಲ, ವೀರ್ಯ, ಗುಣ, ಇವುಗಳಿಂದ ಕೂಡಿ, ಭೂರಿ– ಶ್ರವಾ-ಎಂಬ ಮಗನು ಹುಟ್ಟುವನು. ಅವನಲ್ಲಿ ನನ್ನ ಆವೇಶವೂ ಇರುವುದು· ಯಜ್ಞಶೀಲನೆಂದು ಕೀರ್ತಿ ಪಡೆಯುವನು."—ಎಂದು ವರವನ್ನಿತ್ತರು. ಆದುದ ರಿಂದ, ಭೂರಿಶ್ರವನು ಅಷ್ಟು ಬಲಾಢ್ಯನಾಗಲು ಕಾರಣವಾಯಿತು. ವಿಷ್ಕಂಭ ನೆಂಬ ರುದ್ರನು ಕೃಪಾಚಾರ್ಯನಾಗಿ ಜನಿಸಿದನು. ನಿರ್ಣಯ 10ನೆಯ ಅಧ್ಯಾಯ ದಲ್ಲ ಹೇಳಿರುವ ಪ್ರಕಾರ, ಶರದ್ವಾನ್-ಎಂಬ ಋಷಿಗಳು ತಪಸ್ಸು ಮಾಡುತ್ತಿರು

ವಾಗ ಊರ್ವಶಿಯನ್ನು ನೋಡಲು, ಇವರ ರೇತಸ್ಸು ಸ್ಖಲನವಾಗಿ, ಶರಸ್ತಂಭ ದಲ್ಲಿ ಬೀಳುವಾಗ ಎರಡು ಭಾಗಗಳಾಗಿ ಬೀಳಲು ಅಲ್ಲಿಂದ ಒಂದು ಗಂಡು, ಒಂದು ಹೆಣ್ಣು ಹೀಗೆ ಇಬ್ಬರು ಮಕ್ಕಳು ಹುಟ್ಟಿದರು. ಆ ಇಬ್ಬರ ಪೈಕಿ ಮಗನು ರುದ್ರರಲ್ಲಿ ವಿಷ್ಕಂಭನೆಂಬ ರುದ್ರನು, ಪರಮಾತ್ಮನು ಭೂಭಾರಹರಣ ಮಾಡಲು ಭೂಮಿಯಲ್ಲಿ ಅವತರಿಸುವನು ಅದಕ್ಕೆ ನಾನೂ ಅಂಗಭೂತನಾಗ ಬೇಕೆಂಬ ಉದ್ದೇಶದಿಂದ ಅಲ್ಲಿ ಹುಟ್ಟಿದನು. ಮಗಳು, ಬೃಹಸ್ಪತ್ಯಾಚಾರ್ಯರು, ದ್ರೋಣಾಚಾರ್ಯರಾಗಿ ಜನಿಸಿರುವರೆಂದು,ಅವರ ಪತ್ನಿಯಾದ ತಾರೆಯು ದ್ರೋಣ ಪತ್ನಿಯಾಗುವುದಕ್ಕಾಗಿ ಇಲ್ಲಿ ಜನಿಸಿದಳು.

ಇವರಿಬ್ಬರನ್ನು ಮೃಗಬೇಟೆಗೆ ಬಂದಿದ್ದ, ಶಂತನು ಚಕ್ರವರ್ತಿಯು ಕರುಣದಿಂದ ಮನೆಗೆ ಕರೆತಂದು, ಕೃಪಾವಿಷಯರಾದುದರಿಂದ, ಗಂಡಿಗೆ-ಕೃಪ ನೆಂತಲೂ, ಹೆಣ್ಣಿಗೆ-ಕೃಪೆಯೆಂತಲೂ, ನಾಮಕರಣ ಮಾಡಿದನು. ಈ ಕೃಪಾ ಚಾರ್ಯರೇ, ವಿಷ್ಕಂಭನೆಂಬ ರುದ್ರನೆಂದು ತಿಳಿಯಬೇಕು. ಯದ್ಯಪಿ 11 ರುದ್ರರಲ್ಲಿ ಪತ್ರತಾಪ, ವಿರೂಪಾಕ್ಷ, ವಿಷ್ಕಂಭ- ಇವರು ಸೇರಲಿಲ್ಲ. ಈ ರುದ್ರರು ಯಾರೆಂದರೆ ಏಕಾದಶರುದ್ರರಲ್ಲದೆ, ಇನ್ನೂ ಕೋಟಿ ಸಂಖ್ಯಾಕರಾದ ರುದ್ರರಿರುವರು. ಅವರಲ್ಲಿ ಪ್ರಧಾನರಿವರೆಂದು ತಿಳಿಯಬೇಕು. ಭಾಗವತ ಷಷ್ಠಸ್ಕಂಧ 6ನೆಯ ಅಧ್ಯಾಯವಲ್ಲಿ ಹೇಳಿರುವಂತೆ, ದಕ್ಷಪ್ರಜೇಶ್ವರನು ಪ್ರಾಚೇತಸನಾಗಿ, ಹುಟ್ಟಿ 60 ಹೆಣ್ಣು ಮಕ್ಕಳನ್ನು ಪಡೆದನು. ಅವರ ಪೈಕಿ, ಭೂತ-ಎಂಬುವರಿಗೆ ಇಬ್ಬರು ಹೆಣ್ಣುಮಕ್ಕಳನ್ನು ಕೊಟ್ಟನು.

ಭೂತೆ ಮತ್ತು ಸುರೂಪೆ ಎಂದು. ಅವರ ಪೈಕಿ ಭೂತೆ-ಎಂಬಾಕೆಯಲ್ಲಿ ಏಕಾದಶ (11) ರುದ್ರರು ಹುಟ್ಟಿದರು. ಸುರೂಪೆ-ಎಂಬಾಕೆಯಲ್ಲಿ ಕೋಟಿಶಃ ರುದ್ರರು ಹುಟ್ಟಿದರೆಂದು ಹೇಳಿರುವರು. ಆ ಆಧಾರದಿಂದ,ವಿಷ್ಕಂಭಾದಿಗಳು ಆ ರುದ್ರಗಣಕ್ಕೆ ಸೇರಿದವರೆಂದು ತಿಳಿಯಬೇಕು. ಪತ್ರತಾಪನೆಂಬ ರುದ್ರನಿಗೆ ಸೋಮದತ್ತರೂಪವಲ್ಲದೆ, ಮತ್ತೊಂದು ಅವತಾರವೂ ಉಂಟು. ಅದು ಯಾವುದೆಂದರೆ, ಜರಾಸಂಧನ ಮಗ ಸಹದೇವನೆಂಬುವದು. ನಿರ್ಣಯ 21 ನೆಯ ಅಧ್ಯಾಯದಲ್ಲಿ ಹೇಳಿರುವ ಪ್ರಕಾರ, ಜರಾಸಂಧನನ್ನು ಕೊಲ್ಲುವುದಕ್ಕಾಗಿ,

ಕೃಷ್ಣ, ಭೀಮಸೇನ,-ಅರ್ಜುನ, ಮೂವರೂ ಬಂದು, ನಮ್ಮ ಮೂವರ ಪೈಕಿ ಯಾರನ್ನಾದರೂ ಯುದ್ಧಕ್ಕೆ ಕರೆ-ಎಂದು ಕೃಷ್ಣನು ಹೇಳಲು, ಭೀಮಸೇನ ಸಂಗಡ ಯುದ್ಧವನ್ನು ಮಾಡುವೆನೆಂದು ಹೇಳಿ ಜರಾಸಂಧನು, ತನ್ನ ಮಗನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿಬಿಟ್ಟನು.

ಅವನು ಪೂರ್ವದಲ್ಲಿ ಪತ್ರತಾಪನೆಂಬ ರುದ್ರನು– ಎಂದು ಹೇಳಿರುವರು. ಇವನ ಹೆಸರನ್ನು ಹೇಳಲಿಲ್ಲ. ಸುಮ್ಮನೆ ಮಗನೆಂದು ಹೇಳಿರುವರು. ಇವನೇ ಸಹದೇವನೆಂದು ಹೇಗೆ ನಿಶ್ಚಯಿಸಬೇಕೆಂದರೆ- ಇದೇ ಅಧ್ಯಾಯ 171ನೆಯ ಶ್ಲೋಕದಲ್ಲಿ ಜರಾಸಂಧನ ಸಂಹಾರವಾದ ಕೂಡಲೇ, ತನ್ನ ತಂದೆಯನ್ನು ಭೀಮ ಸೇನನು ಸಂಹಾರ ಮಾಡಲು, ಜರಾಸಂಧನ ಮಗನಾದ ಸಹದೇವನು ಕೃಷ್ಣ ಭೀಮಾರ್ಜುನರನ್ನು ಮೊರೆಹೊಕ್ಕನು. ಅಲ್ಲದೇ,ಉತ್ತಮವಾದ ಒಂದು ರಥ ವನ್ನೂ, ತನ್ನ ತಂಗಿಯನ್ನೂ, ಭೀಮಸೇನಾರ್ಥವಾಗಿ ಕೊಟ್ಟನು. ಭೀಮ ಸೇನದೇವರು ತನ್ನ ತಮ್ಮನಾದ ಸಹದೇವನಿಗೆ ಆ ಕನ್ಯೆಯನ್ನು ಮದುವೆ ಮಾಡಿ ಸಿದರು. ಈ ಆಧಾರದಿಂದ ಸಹದೇವನೆಂಬ ಜರಾಸಂಧ ಮಗನೇ ಪತ್ರತಾಪಾವ ತಾರನೆಂದು ನಿಶ್ಚಯವಾಗುವುದು. ಅಂತು, ಪತ್ರತಾಪನೆಂಬ ರುದ್ರನಿಗೆ ಸಹ ದೇವ, ಸೋಮದತ್ತನೆಂಬ-ಎರಡು ಅವತಾರಗಳೆಂದು ಹೇಳಿದಂತಾಯಿತು.

॥27॥

**೩. ಭಾವದರ್ಪಣ :-**

ಈ ಪದ್ಯದ ತಾತ್ಪರ್ಯವನ್ನು ಹಿಂದಿನ ಪದ್ಯದ ತಾತ್ಪರ್ಯದಲ್ಲೇ ಸೇರಿಸ ಲಾಗಿದೆ. ॥27॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–**

ಅಜೈಕಪಾದಹಿರ್ಬುಧ್ನಿರ್ವಿರೂಪಾಕ್ಷ ಇತಿ ತ್ರಯಃ ॥ ರುದ್ರಾಣಾಂ ಸೋಮದತ್ತಶ್ಚ ಬಭೂವುಃ ಪ್ರಥಿತಾಸುತಾಃ ॥ ವಿಷ್ಣೋರೇವಾಂಗತಾಂ ಆಪ್ತಂ ಭೂರಿಃ ಭೂರಿಶ್ರವಾಃ ಶಲಃ ॥ ಶರ್ವಾದಿ ಸರ್ವರುದ್ರಾಣಾಂ ಆವೇಶಾತ್

ವರತಃ ತಥಾ ॥ ಭೂರಿಶ್ರವಾ ಅತಿ ಬಲಃ ॥ ಏ ವಂಚ ಅಜೈಕಪಾತ್ ಭೂರಿಃ॥ ಅಹಿರ್ಬುಧ್ನ್ಯಃ ಶಿವಾದ್ಯಾವಿಷ್ಟಃ ಭೂರಿಶ್ರವಾ ಬಭೂವ ॥ ಸ ಕೃಪಃ ವಿಷ್ಕಂಭಃ ನಾಮ ॥ ರುದ್ರಾಣಾಂ ಪತ್ರತಾಪಾಖ್ಯ ರುದ್ರಂ ಸಹದೇವಂ॥ ರುದ್ರೇಷು ಪತ್ರತಾಪಾಖ್ಯಃ ಸೋಮದತ್ತೋಽಸ್ಯ"—ಇತಿ. ॥27॥

## ಕನ್ನಡಾರ್ಥ

—'**ಅಜೈಕಪಾತ್**'—'**ಅಹಿರ್ಬುಧ್ನ್ಯ**'—'**ವಿರೂಪಾಕ್ಷ**'-ಎಂಬ ಮೂವರು ರುದ್ರರು ಬಾಹ್ಲೀಕರಾಜನ ಮಗನಾದ ಸೋಮದತ್ತನಿಗೆ ಮಕ್ಕಳಾಗಿ ಅವತರಿಸಿದರು. ಅವರು ಪರಾಕ್ರಮದಲ್ಲಿ ಸುಪ್ರಸಿದ್ಧರು. ವಿಷ್ಣುವಿನ ಭೂಭಾರಹರಣ ಸೇವೆಗೆ ಅಂಗರಾಗಬೇಕೆಂದು ಅಪೇಕ್ಷಿಸಿ, ಕ್ರಮವಾಗಿ ಭೂರಿ,ಭೂರಿಶ್ರವಾ, ಶಲ-ಎಂಬುವರಾಗಿ ಹುಟ್ಟಿದರು. ಶರ್ವ- ಮುಂತಾದ ಸರ್ವರುದ್ರರ ಆವೇಶದಿಂದಲೂ, ವರದಿಂದಲೂ ಯುಕ್ತನಾಗಿ,ಭೂರಿಶ್ರವನು ಬಹಳ ಬಲಿಷ್ಠನಾದನು. -'**ಅಜೈಕಪಾತ್**'-ಎಂಬ ರುದ್ರನು—'**ಭೂರಿ**'—ಯಾದನು. ಅಹಿರ್ಬುಧ್ನ್ಯಯೇ ಶಿವಾದಿ ಆವೇಶಯುಕ್ತನಾಗಿ ಭೂರಿಶ್ರವನಾದನು. ವಿರೂಪಾಕ್ಷನೇ ಶಲನಾದನು. ವಿಷ್ಕಂಭನೆಂಬ ರುದ್ರನೇ ಶರದ್ವಾನ್ ಋಷಿಗಳಲ್ಲಿ ಹುಟ್ಟದ ಕೃಪಾಚಾರ್ಯನಾಗಿ ಅವತರಿಸಿದನು. ಪತ್ರತಾಪಕನೆಂಬ ರುದ್ರ ಎರಡು ಅಂಶಗಳಿಂದ ಹುಟ್ಟಿದನು. ಒಂದು ಸಹದೇವನೆಂಬ ರಾಜನೆಂಬುದು (ಜರಾಸಂಧನ ಮಗ), ಭೂರಿಶ್ರವ ಮುಂತಾದವರ ತಂದೆಯಾದ ಸೋಮದತ್ತನೆಂಬುದು ಮತ್ತೊಂದು ಅಂಶ. ಹೀಗೆ,ನಿರ್ಣಯ-ಮುಂತಾದವುಗಳಲ್ಲಿ ಹೇಳಿರುವುದನ್ನೇ ದಾಸರಾಯರು ಪ್ರತಿಪಾದಿಸಿರುತ್ತಾರೆ. ॥27॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ಅಜೈಕಪಾತ್-ಎಂಬ ರುದ್ರನು ಸೋಮದತ್ತನ ಮಗ ಭೂರಿರಾಯನಾಗಿ ಹುಟ್ಟಿದನು. ಅಹಿರ್ಬುಧ್ನ್ಯ-ಎಂಬ ರುದ್ರನು ಹತ್ತು ರುದ್ರರ ಆವೇಶ ಉಳ್ಳವನಾಗಿ, ಸೋಮದತ್ತರಾಯನಾಗಿ ಅವತರಿಸಿದನು. ಉಗ್ರನೆಂಬ ವಿರೂಪಾಕ್ಷ

ನಾಮಕ ರುದ್ರನು ಶಲನೆಂಬ ರಾಯನಾಗಿ, ಸೋಮದತ್ತನಲ್ಲಿ ಹುಟ್ಟಿದನು. ಓಜನೆಂಬ ವಿಷ್ಕಂಭನಾಮಕ ರುದ್ರನು ಜ್ಞಾನಿಯಾದ ಕೃಪಾಚಾರ್ಯನಾಗಿ ಹುಟ್ಟಿದನು. ವಾಮನೆಂಬ ಪತ್ರತಾಪನೆಂಬ ರುದ್ರನು ಭೂಮಿಯಲ್ಲಿ ಸೋಮದತ್ತರಾಯನಾಗಿಯೂ, ಜರಾಸಂಧನ ಪುತ್ರ ಸಹದೇವನಾಗಿಯೂ–ಎರಡು ರೂಪ ಧರಿಸಿದನು. ॥27॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ,ಉಮಾಪತಿ ಶಂಕರನನ್ನು ಬಿಟ್ಟು,ಉಳಿದ 10 ಮಂದಿ ರುದ್ರಗಣದವರ ಅವತಾರ ವಿಚಾರವನ್ನು ತಿಳಿಸುತ್ತಾರೆ.

1. ಅವಶಿಷ್ಟರಾದ 10 ಮಂದಿ ರುದ್ರಗಣದವರಲ್ಲಿ, **ಅಜೈಕಪಾತ್**–ಎಂಬ ಹೆಸರಿನ ರುದ್ರನು ಸೋಮದತ್ತನ ಪುತ್ರನಾಗಿ **ಭೂರಿ**-ಎಂಬ ನಾಮಾಂಕಿತದಿಂದ ಜನಿಸಿದನು.

ಭೂರಿಯು ಚಂದ್ರವಂಶದ ಸೋಮದತ್ತನೆಂಬ ರಾಜನ ಮಗ. ಇವನಿಗೆ ಭೂರಿಶ್ರವ–ಶಲ ಎಂಬ ಇಬ್ಬರು ಸಹೋದರರು. ಭೂರಿಯು ಭಾರತಯುದ್ಧದಲ್ಲಿ ದುರ್ಯೋಧನನ ಪರವಾಗಿ ಹೋರಾಡಿ, 14ನೆಯ ದಿನದ ರಾತ್ರಿ ಯುದ್ಧದಲ್ಲಿ ಸಾತ್ಯಕಿಯಿಂದ ಸಂಹೃತನಾದನು.

2. **ಅಹಿರ್ಬುಧ್ನ್ಯ**-ಎಂಬ ರುದ್ರನು ರುದ್ರಗಣಗಳಿಂದ ಆವೇಶಯುಕ್ತನಾಗಿ, **ಭೂರಿಶ್ರವ**–ಎಂಬ ಹೆಸರಿನಿಂದ ಅವತರಿಸಿದನು.

ಭೂರಿಶ್ರವನು ಚಂದ್ರವಂಶದ ಸೋಮದತ್ತನ ಪುತ್ರನು. ನಾಲ್ಕನೆಯ ದಿನದ ಯುದ್ಧದಲ್ಲಿ ಸಾತ್ಯಕಿಯೊಡನೆ ಘೋರಯುದ್ಧ ಮಾಡಿದ. 5ನೆಯ ದಿನ ಸಾತ್ಯಕಿ ಈತನ ಹತ್ತು ಮಂದಿ ಪುತ್ರರನ್ನು ಕೊಂದ. 14ನೆಯ ದಿನದ ಹಗಲು ಯುದ್ಧದಲ್ಲಿ ಸಾತ್ಯಕಿಯ ಕತ್ತನ್ನು ಕತ್ತರಿಸಬೇಕೆಂದು, ಖಡ್ಗವನ್ನು ಎತ್ತಲಾಗಿ,

ಅರ್ಜುನನು ಇವನ ತೋಳನ್ನು ಕತ್ತರಿಸಿದ. ಅಂತ್ಯದಲ್ಲಿ, ಪ್ರಾಯೋಪವೇಶಕ್ಕೆ ಕುಳಿತಿದ್ದ ಇವನ ಶಿರವನ್ನು ಸಾತ್ಯಕಿ ಕತ್ತರಿಸಿದನು.

3. ಉಗ್ರನೆಂಬ ವಿರೂಪಾಕ್ಷನಾಮಕ ರುದ್ರನು ಶಲ–ಎಂಬ ನಾಮಾಂಕಿತದಿಂದ, ಸೋಮದತ್ತನ ಪುತ್ರನಾಗಿ ಅವತರಿಸಿದನು. ಭಾರತ ಯುದ್ಧದಲ್ಲಿ 14ನೆಯ ದಿನದ ಯುದ್ಧದಲ್ಲಿ ಹಗಲಿನಲ್ಲಿ ದ್ರೌಪದೀ ಪುತ್ರರಿಂದ ಸಂಹೃತನಾದನು. ಇವನ ಮಗನನ್ನು ನಾಲ್ಕನೆಯ ದಿನದ ಯುದ್ಧದಲ್ಲಿ ಧೃಷ್ಟ ದುಮ್ನನು ಕೊಂದನು.

4. ಓಜನೆಂಬ ವಿಷ್ಕಂಬನಾಮಕ ರುದ್ರನು–ಕೃಪಾಚಾರ್ಯನಾಗಿ ಅವತರಿಸಿದನು.

**ಕಥಾಪ್ರಸಂಗ :–**

ಗೌತಮವಂಶದ ಶರದ್ವಂತನೆಂಬ ಮುನಿ ತಪೋನಿರತನಾಗಿದ್ದಾಗ, ಇಂದ್ರನು ಆತನ ತಪೋಭಂಗಕ್ಕಾಗಿ, ಜಾಲವತಿ- ಎಂಬ ಅಪ್ಸರಾಸ್ತ್ರೀಯನ್ನು ಕಳುಹಿಸಿದನು. ಶರದ್ವಂತನು ಆಕೆಯಲ್ಲಿ ಮೋಹಗೊಂಡನು. ಆಗ, ಆತನ ವೀರ್ಯವು ಶರವನದಲ್ಲಿ ಬಿದ್ದಿತು. ಕೂಡಲೇ ಒಂದು ಗಂಡು ಮತ್ತು ಒಂದು ಹೆಣ್ಣು ಏಕ ಕಾಲದಲ್ಲಿ ಜನಿಸಿದುವು. ಆ ಸಮಯಕ್ಕೆ ಸರಿಯಾಗಿ, ಭೀಷ್ಮನ ತಂದೆ ಶಂತನು ಮಹಾರಾಜನು ಶರವನಕ್ಕೆ ಬೇಟೆಗಾಗಿ ಬಂದಿದ್ದನು. ಆ ಎರಡು ಮಕ್ಕಳನ್ನು ಕೃಪಾಭರಿತನಾಗಿ ಎತ್ತಿಕೊಂಡು, ತನ್ನ ರಾಜಧಾನಿಗೆ ಕರೆದೊಯ್ದನು. ಗಂಡು ಶಿಶುವಿಗೆ ಕೃಪ–ನೆಂತಲೂ, ಹೆಣ್ಣು ಮಗುವಿಗೆ ಕೃಪೀ–ಎಂತಲೂ ಹೆಸರಿಟ್ಟು ರಕ್ಷಿಸಿದನು. ಕೃಪನಿಗೆ ಉಪನಯನಾದಿ ಸಂಸ್ಕಾರಗಳನ್ನು ನೆರ- ವೇರಿಸಿ, ಧನುರ್ವಿದ್ಯಾರಹಸ್ಯಗಳನ್ನು ಉಪದೇಶಿಸಿದನು. ಬಳಿಕ, ಕೃಪಾ ಚಾರ್ಯರು ಪಾಂಡವರಿಗೂ ಮತ್ತು ಕೌರವರಿಗೂ ಧನುರ್ವಿದ್ಯಾಗುರುಗಳಾ ದರು. ತನ್ನ ತಂಗಿ ಕೃಪಿಯನ್ನು ದ್ರೋಣಾಚಾರ್ಯರಿಗೆ ಲಗ್ನಮಾಡಿ ಕೊಟ್ಟರು. ಕೃಪಿಯ ಪುತ್ರನೇ ಅಶ್ವತ್ಥಾಮನು.

5. ವಾಮನೆಂಬ ರುದ್ರನು ಪತ್ರನಾವುಳನೆಂಬ ಹೆಸರಿನಿಂದ- ಎರಡು ಅವತಾರಗಳನ್ನು ಮಾಡಿದನು. (1) ಸೋಮದತ್ತ. (2) ಸಹದೇವ.

**ಸೋಮದತ್ತ :-**

ಚಂದ್ರವಂಶದ ಪ್ರತೀಪರಾಜನ ಪುತ್ರನು ಬಾಹ್ಲೀಕರಾಜನು. ಬಾಹ್ಲೀಕನ ಮಗನು ಸೋಮದತ್ತನು. ಇವನಿಗೆ ಭೂರಿ-ಭೂರಿಶ್ರವ-ಶಲ—ಎಂಬ ಮೂವರು ಪುತ್ರರು. ಭಾರತಯುದ್ಧದಲ್ಲಿ ದುರ್ಯೋಧನನ ಪರವಾಗಿ ಕಾದು, 15ನೆಯ ದಿನ ಸಾತ್ಯಕಿಯೊಡನೆ ಯುದ್ಧಮಾಡಿ, ಅವನಿಂದ ಸೋತು, ಪುನಃ ಆತನನ್ನು ಕೆಣಕಿ, ಸಾತ್ಯಕಿಯಿಂದಲೇ ಸಂಹೃತನಾದ.

**ಸಹದೇವ :-**

ಮಗಧರಾಜನಾದ ಜರಾಸಂಧನ ಪುತ್ರ. ಇವನ ಕುದುರೆಗಳು ಚಿತ್ರ ವಿಚಿತ್ರವರ್ಣವುಳ್ಳವು. 14ನೆಯ ದಿನದ ಯುದ್ಧದಲ್ಲಿ ರಾತ್ರಿ ದ್ರೋಣನಿಂದ ಮಡಿದ. ॥27॥

★★

## ಮುಖ್ಯಾಂಶಗಳು

| ಕ್ರಮ ಸಂಖ್ಯೆ. | ರುದ್ರಗಣ. | ನಾಮಾಂತರ. | ಅವತಾರಗಳು. |
|---|---|---|---|
| 1. | ಅಜೈಕಪಾತ್ | — | ಸೋಮದತ್ತನ ಪುತ್ರನಾಗಿ, **ಭೂರಿ**-ಎಂಬ ಹೆಸರಿನ ಅವತಾರ. |
| 2. | ಅಹಿರ್ಬಧ್ನ | — | ಸೋಮದತ್ತನ ಇನ್ನೊಬ್ಬ ಪುತ್ರ. **ಭೂರಿಶ್ರವ**–ಎಂಬ ಹೆಸರಿನ ಅವತಾರ. |
| 3. | ಉಗ್ರ | ವಿರೂಪಾಕ್ಷ | ಸೋಮದತ್ತನ ಮೂರನೆಯ ಪುತ್ರ. **ಶಲ**–ಎಂಬ ಹೆಸರಿನ ಅವತಾರ. |
| 4. | ಓಜ | ವಿಷ್ಕಂಭ | ಕೃಪಾಚಾರ್ಯರ ಅವತಾರನು. |
| 5. | ವಾಮ | ಛತ್ರನಾಮಕ | 2 ಅವತಾರಗಳು. (1) ಸೋಮದತ್ತ. (2) ಸಹದೇವ. |

## ಪದ್ಯ-೨೮

**ಮೂಲ :-**

ದೇವಶಕ್ರನುರುಕ್ರಮಿಾ ಮಿ ।
ತ್ರಾವರುಣ ಪರ್ಜನ್ಯ ಭಗ ಪೂ ।
ಷಾ ವಿವಸ್ವನು ಸವಿತೃ ಧಾತಾ ಅರ್ಯಮನು ತ್ವಷ್ಟೃ ॥
ದೇವಕೀಸುತನಲಿ ಸವಿತೃ ವಿ ।
ಭಾವ ಸುಸುತ ಭಾನು ಎನಿಸುವ ।
ಜ್ಯಾವನಪಯುತ ವೀರಸೇನನು ತ್ವಷ್ಟೃನಾಮಕನು ॥೨೮॥

**ಅವತರಣಿಕೆ :-**

ದ್ವಾದಶಾದಿತ್ಯರ ವಿಚಾರವನ್ನು ತಿಳಿಸುತ್ತಾರೆ. ॥28॥

**ಪ್ರತಿಪದಾರ್ಥ:-**

**ದೇವ** = ದೇವತಾವರ್ಗಕ್ಕೆ ಸೇರಿದ, **ಶಕ್ರ** = ಶಕ್ರನಾಮಕ ಸೂರ್ಯ, **ಉರುಕ್ರಮ** = ಉರುಕ್ರಮನಾಮಕ ಸೂರ್ಯ, **ಮಿತ್ರ** = ಮಿತ್ರನಾಮಕ ಸೂರ್ಯ, **ವರುಣ** = ವರುಣನಾಮಕ ಸೂರ್ಯ, **ಪರ್ಜನ್ಯ** = ಪರ್ಜನ್ಯ ನಾಮಕ ಸೂರ್ಯ, **ಭಗ** = ಭಗನಾಮಕ ಸೂರ್ಯ, **ಪೂಷಾ** = ಪೂಷಾ ನಾಮಕ ಸೂರ್ಯ, **ವಿವಸ್ವನು** = ವಿವಸ್ವಾನ್‌ನಾಮಕ ಸೂರ್ಯ, **ಸವಿತೃ** = ಸವಿತೃನಾಮಕ ಸೂರ್ಯ, **ಧಾತಾ** = ಧಾತಾನಾಮಕ ಸೂರ್ಯ, **ಅರ್ಯಮನು** = ಅರ್ಯಮನಾಮಕ ಸೂರ್ಯ, **ತ್ವಷ್ಟೃ** = ತ್ವಷ್ಟೃ ನಾಮಕ ಸೂರ್ಯ- ಈ 12ಮಂದಿ ದ್ವಾದಶಾದಿತ್ಯರ ನಾಮಗಳು. ಇವರು

ಗಳ ಪೈಕಿ **ಸವಿತೃ** = ಸವಿತ್ರನಾಮಕನಾದ ಸೂರ್ಯನು. **ದೇವಕೀಸುತನಲಿ** = ದೇವಕೀಪುತ್ರನಾದ ಶ್ರೀಕೃಷ್ಣನಿಂದ, **ಭಾನುಎನಿಸುವ** = ಭಾನು ಎಂಬ ಹೆಸರಿನಿಂದ, **ವಿಭಾವಸುಸುತ** = ಸತ್ಯಭಾಮೆಯಲ್ಲಿ ಜನಿಸಿದನು. **ತ್ವಷ್ಟ್ರನಾಮಕನು** = ತ್ವಷ್ಟೃ ಎಂಬ ಹೆಸರಿನ ಸೂರ್ಯನು. **ಜ್ಯಾವನ ಶಯುತ** = ಯಮದೇವರ ಆವೇಶದಿಂದ ಯುಕ್ತನಾಗಿ (ಜವ = ಯಮ. ಜ್ಯಾವನ = ಯಮದೂತರು, ಜ್ಯಾವನಪ = ಯಮದೂತರಿಗೆ ಅಧಿಪತಿಯಾದ ಯಮದೇವರು) **ವೀರಸೇನನು** = ಅರ್ಜುನನ ಪತ್ನಿ ಚಿತ್ರಾಂಗದೆಯ ತಂದೆ ಯಾದ ಪಾಂಡ್ಯದೇಶಾಧಿಪತಿಯಾದ ವೀರಸೇನನೆಂಬ ಹೆಸರಿನಿಂದ ಅವತರಿಸಿ ದನು. ॥28॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ದ್ವಾದಶಾದಿತ್ಯರ ವಿಚಾರ ಹೇಳುತಾರೆ.

1. ಇಂದ್ರದೇವನು (20), 2. ಉರುಕ್ರಮ (21). 3. ಮಿತ್ರ (22).4, ವರುಣ (23), 5. ಪರ್ಜನ್ಯ (24), 6. ಭಗ (25), 7. ಪೂಷಾ(26), 8. ವಿವಸ್ವಾನ್(27). 9. ಸವಿತೃ (29), 10. ಧಾತಾ(29), 11. ಅರ್ಯಮ(30), 12. ತ್ವಷ್ಟೃ (10),—ಈ ರೀತಿ ದ್ವಾದಶಾದಿತ್ಯರು. ಇವರಲ್ಲಿ, ಅನ್ಯಕಕ್ಷದವರು ಹೋಗತಾ ಉಳಿದವರು ಆರು ಮಂದಿ ಈ ಕಕ್ಷದವರು. ಈ ಪ್ರಕಾರ,ದ್ವಾದಶಾದಿತ್ಯರಲ್ಲಿ ಅನ್ಯಕಕ್ಷದವ ರಾದ ಈ ಆರು ಮಂದಿ ಹೋಗತಾ, 1. ಉರುಕ್ರಮನಾಮಕ ಸೂರ್ಯ ಸಾಕ್ಷಾತ್ ಪರಮಾತ್ಮ, ಒಂದನೇ ಕಕ್ಷ. 2. ಶಕ್ರನಾಮಕ ಸೂರ್ಯ–ಇಂದ್ರ ದೇವರು, ಎಂಟನೇ ಕಕ್ಷ, 3. ವಿವಸ್ವಾನ್ ನಾಮಕ ಸೂರ್ಯ, ಹನ್ನೆರಡನೇ ಕಕ್ಷ, 4. ವರುಣನಾಮಕಸೂರ್ಯ, ಹದಿಮೂರನೇ ಕಕ್ಷ. 5. ಮಿತ್ರ

ನಾಮಕ ಸೂರ್ಯ, ಹದಿನೇಳನೇ ಕಕ್ಷ. 6. ಪರ್ಜನ್ಯನಾಮಕ ಸೂರ್ಯ, ಇಪ್ಪತ್ತನೇ ಕಕ್ಷ. ಅಂತು, ಈ ಆರುಮಂದಿ ಅನ್ಯಕಕ್ಷದವರು. ಉಳಿದ ಆರು ಮಂದಿ ವರ್ತಮಾನ ಕಕ್ಷದವರು. ಅನ್ಯಕಕ್ಷದವರ ಅವತಾರಗಳ ಆಯಾ ಕಕ್ಷ ವಲ್ಲಿ ಹೇಳಿದೆ. ವರ್ತಮಾನದ ಹದಿನೆಂಟನೇ ಕಕ್ಷದವರಾದ ಆರು ಮಂದಿ ಒಳಗೆ, ಅವತಾರ ಮಾಡಿದವರನ್ನ ಹೇಳುತಾರೆ. ಒಂಭತ್ತನೇ ಸಂಖ್ಯಾದವನಾದ ಸವಿತೃ ನಾಮಕಸೂರ್ಯನು ದೇವಕೀಪುತ್ರನಾದ ಶ್ರೀಕೃಷ್ಣನಲ್ಲಿ ಪುತ್ರನಾದ, ಭಾನು-ಎಂತ ಕರೆಸೋವನಾದ. ಹನ್ನೆರಡನೇ ಸಂಖ್ಯಾದವನಾದ ತ್ವಷ್ಟೃ ನಾಮಕ ಸೂರ್ಯನು, ಜವನಸಂಬಂಧಿ ಜ್ಯಾವನ ಎಂದರೆ, ಯಮದೂತರು ಎಂತ ತಾತ್ಪರ್ಯ. ಈ ಯಮದೂತರನ್ನು ಪಾಲಿಸತಕ್ಕವ ಯಮದೇವರು. ಈ ಯಮದೇವರ ಆವೇಶದಿಂದ ಯುಕ್ತನಾದ **ವೀರಸೇನ** –ಎಂತ ಅವತಾರ ಮಾಡಿದನು. ॥28॥

## ೨. ಭಾವಪ್ರಕಾಶಿಕೆ :–

ಅದಿತಿಮಕ್ಕಳಾದ ಆದಿತ್ಯರು-12 ಜನರು–ಶಕ್ರ, ಉರುಕ್ರಮ, ಮಿತ್ರ, ವರುಣ, ಪರ್ಜನ್ಯ, ಭಗ, ಪೂಷಾ, ವಿವಸ್ವಾ, ಸವಿತಾ, ಧಾತಾ, ಆರ್ಯಮಾ, ತ್ವಷ್ಟಾ, –ಎಂದು. ಇವರ ಮಧ್ಯದಲ್ಲಿ ಸವಿತಾ –ಎಂಬ ಸೂರ್ಯನು ಕೃಷ್ಣನ ದೆಸೆಯಿಂದ ಸತ್ಯಭಾಮೆಯಲ್ಲಿ ಭಾನು ಎಂದು ಜನಿಸಿದನು. ನಿರ್ಣಯ 20ನೇ ಅಧ್ಯಾಯದಲ್ಲಿ–ವಿವಸ್ವಾ ಎಂಬ ಸೂರ್ಯನ ತಮ್ಮನಾದ ಸವಿತಾ ಎಂಬ ಸೂರ್ಯನು ಸತ್ಯಭಾಮೆಯ ಉದರದಲ್ಲಿ ಭಾನು-ಎಂಬ ಹೆಸರಿನಿಂದ ಹುಟ್ಟಿದನು– ಎಂದು ಹೇಳಿರುವರು. ತ್ವಷ್ಟಾ –ಎಂಬ ಸೂರ್ಯನು ಯಮನ ಆವೇಶದಿಂದ ಕೂಡಿ, ಪಾಂಡ್ಯದೇಶಾಧಿಪತಿಯಾದ ವೀರಸೇನನಾಗಿ ಜನಿಸಿದನು. ನಿರ್ಣಯ 20ನೆಯ ಅಧ್ಯಾಯದ ಪ್ರಕಾರ, ಅರ್ಜುನನ ಹೆಂಡತಿ ಚಿತ್ರಾಂಗದೆ ತಂದೆ ಯಾದ, ಪಾಂಡ್ಯದೇಶಾಧಿಪತಿಯಾದವನು ವೀರಸೇನನೆಂತಲೂ, ಇವನು ಯಮದೇವರ ಆವೇಶದಿಂದ ಕೂಡಿದ ತ್ವಷ್ಟಾ ಎಂಬ –ಸೂರ್ಯನೆಂತಲೂ ಸಿದ್ಧ ವಾಗುವುದು. ॥28॥

೩. ಭಾವದರ್ಪಣ :-

ದ್ವಾದಶಾದಿತ್ಯರ ವಿಚಾರ ಹೇಳುತ್ತಾರೆ. ದೇವವರ ಶಕ್ರೇತಿ. ಉಕ್ತಂಚ ತಾರತಮ್ಯೇ ! "ವಿವಸ್ವಾನರ್ಯಮಾ ಪೂಷಾ ತ್ವಷ್ಟಾಚ ಸವಿತಾ ಭಗಃ । ಧಾತಾ ಪರ್ಜನ್ಯವರುಣೌ ಮಿತ್ರಃ ಶಕ್ರ ಉರುಕ್ರಮ"-ಇತಿ। ದೇವಕೀ ಸುತೇತಿ। ಏತೇಷು-"ಕೃಷ್ಣಜೋ ಭಾನುಃ ಸವಿತ್ರಂಶ ಉದಾಹೃತಃ ! ವೀರ ಸೇನೋ ಯಮಾವಿಷ್ಟಸ್ತ್ವಷ್ಟಾಪ್ಯೈ ಪರಿಕೀರ್ತಿತ" ಇತಿ ॥28॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಸೂರ್ಯಾನ್ ಆಹ–'ದೇವ' ಇತಿ ॥ ಉರುಕ್ರಮಃ ಹರಿಃ ॥ ವಿವಸ್ವತಃ ಯೋಽವರಜಃ ದಿತೇಃ ಸುತಃ ಖ್ಯಾತಶ್ಚ ನಾಮ್ನಾ ಸವಿತೇತಿ ॥ ಕೃಷ್ಣಾತ್ ಜಾತಃ ಸ ಸತ್ಯಾಜಠರೇತ್ರ ನಾಮ್ನಾ ಭಾನುಃ ಇತಿ ॥ ಸತ್ಯೋದರೇ ವಿಭಾವಸು ಸುತಃ ॥ 'ಜಾವನಪ'- ಯಮಃ ॥ ಸ ವೀರಸೇನಃ ತ್ವಷ್ಟುರಂಶಃ ಯಮಸ್ಯಾಪ್ಯಾದೇಶ ಯುತಃ. ॥28॥

## ಕನ್ನಡಾರ್ಥ

ದ್ವಾದಶಸೂರ್ಯರನ್ನು ಹೇಳುತ್ತಾರೆ– 'ದೇವ' ಎಂಬ ಪದ್ಯದಿಂದ. 'ಉರುಕ್ರಮ'- ನೆಂಬ ಆದಿತ್ಯನು ಹರಿಯು. ದಿತಿಯ ಮಗನು ವಿವಸ್ವತನ ತಮ್ಮನು 'ಸವಿತೃ'-ಎಂದು ಪ್ರಸಿದ್ಧನು. ಅವನೇ, ಶ್ರೀಕೃಷ್ಣನಿಗೆ ಸತ್ಯಭಾಮೆ ಯಲ್ಲಿ ಭಾನು–ಎಂಬ ಪುತ್ರನಾಗಿ ಹುಟ್ಟಿದನು. 'ಜ್ಯಾವನಪ'- ಯಮ. ವೀರಸೇನನೆಂಬ ಪಾಂಡ್ಯದೇಶದ ರಾಜನು (ಚಿತ್ರಾಂಗದೆಯ ತಂದೆಯು) ತ್ವಷ್ಟೃವೆಂಬ ಸೂರ್ಯನ ಅಂಶಾವತಾರ. ಅವನಲ್ಲಿ ಯಮನ ಆವೇಶವಿರು ತ್ತದೆ. ॥28॥

೫. ಶ್ರೀ ಗುರುಹೃದಯಪ್ರಕಾಶಿಕೆ

ದೇವಶರ್ಮ, ಉರುಕ್ರಮ, ಮಿತ್ರ, ವರುಣ, ಪರ್ಜನ್ಯ, ಭಾಗ

ಪೂಷಾ, ವಿವಸ್ವಾನ್, ಸವಿತೃ, ಧಾತಾ, ಅರ್ಯಮ, ತ್ವಷ್ಟೃ-ಎಂಬ ಹನ್ನೆರಡು ಜನ ಸೂರ್ಯರಲ್ಲಿ, ದೇವಕೀಪುತ್ರ ಶ್ರೀಕೃಷ್ಣನ ಮಗನಾಗಿ ಸವಿತೃ-ಎಂಬ ಸೂರ್ಯ ಭಾನುವೆಂದು ಹುಟ್ಟಿದನು. ಜೀವಪನೇವರೆ ಯವು ಇವನ ಆವೇಶಯುಕ್ತನಾದ-ತ್ವಷ್ಟೃ ಎಂಬ ಸೂರ್ಯನು ವೀರಸೇನರಾಜನಾಗಿ ಹುಟ್ಟಿದನು. ॥28॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ದ್ವಾದಶಾದಿತ್ಯರ ವಿಚಾರವನ್ನು ತಿಳಿಸುತ್ತಾರೆ.

೧. ದ್ವಾದಶಾದಿತ್ಯರ ಹೆಸರುಗಳು ಇಂತಿವೆ:-

1. ಶಕ್ರ. 2. ಉರುಕ್ರಮ. 3. ಮಿತ್ರ. 4. ವರುಣ. 5. ಪರ್ಜನ್ಯ. 6. ಭಗ. 7. ಪೂಷಾ. 8. ವಿವಸ್ವಾನ್. 9. ಸವಿತೃ(ಸವಿತಾ). 10. ಧಾತಾ. 11. ಅರ್ಯಮಾ ಮತ್ತು 12. ತ್ವಷ್ಟಾ.

೨. ಪೂರ್ವೋಕ್ತ 12ಮಂದಿ ಸೂರ್ಯರ ಪೈಕಿ,**ಸವಿತೃ (ಸವಿತಾ)** ನಾಮಕ ಆದಿತ್ಯನು ಕೃಷ್ಣನ ದೆಸೆಯಿಂದ ಸತ್ಯಭಾಮೆಯಲ್ಲಿ **ಭಾನು**-ಎಂಬ ಹೆಸರಿನಿಂದ ಅವತರಿಸಿದನು. **(ದೇವಕೀಸುತನಲಿ ಸವಿತೃ ವಿಭಾವಸುಸುತ ಭಾನು ಎನಿಸುವ).** ವಿವಸ್ವಾನ್-ಎಂಬ ಸೂರ್ಯನ ತಮ್ಮನೇ ಸವಿತೃನಾಮಕ ಆದಿತ್ಯನು ಈ ವಿಷಯವು **ನಿರ್ಣಯದ 20ನೇ ಅಧ್ಯಾಯದಲ್ಲಿ** ಉಕ್ತ ವಾಗಿದೆ).

೩. **ತ್ವಷ್ಟಾ**-ಎಂಬ ಸೂರ್ಯನು ಯಮುನ ಆವೇಶದಿಂದ ಯುಕ್ತನಾಗಿ, **ವೀರಸೇನ**ನೆಂಬ ಹೆಸರಿನಿಂದ ಅವತರಿಸಿದನು ವೀರಸೇನನು. ಪಾಂಡ್ಯದೇಶಾಧಿಪತಿಯು, ಅರ್ಜುನನ ಪತ್ನಿಯಾದ ಚಿತ್ರಾಂಗದೆ, ವೀರಸೇನನ ಪುತ್ರಿ.

(ನಿರ್ಣಯ ಇಪ್ಪತ್ತನೆಯ ಅಧ್ಯಾಯ). ಇಲ್ಲಿ ಜ್ಯಾನನಪಂಯುಃ-ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ- ದಾಸರಾಯರು. "ಜನ"-ಎಂದರೆ ಯಮ ದೇವರು. ಜ್ಯಾವನ ಯಮನ ಕಿಂಕರರಾದವರಿರಸು ಯಮದೂತರು (ತತ್ಸಂ-ಭಂದೀ) ಜ್ಞಾವನಪ-ಯಮಕಿಂಕರರ ಅರಸು ಯಮದೇವ. ಅವನ ಆವೇಶದಿಂದ ಯುಕ್ತನಾದವನು ವೀರಸೇನನಾದ ರಾಜ.

೪. ಉರುಕ್ರಮ–ನಾಮಕ ಸೂರ್ಯನೇ ಪರಮಾತ್ಮನು.

೫. ಇಂದ್ರದೇವರು ಶಕ್ರನಾಮಕ ಸೂರ್ಯರಾಗಿ ಅವತರಿಸಿದರು. ॥28॥

★★

## ಪದ್ಯ-೨೯

**ಮೂಲ :-**

**ಎರಡಧಿಕ ದಶ ಸೂರ್ಯರೊಳು ಮೂ ।
ರೆರಡು ಜನರುತ್ತಮರು ವಿವಸ್ವಾನ್ ।
ವರುಣ ಶಕ್ರನುರುಕ್ರಮನು ಪರ್ಜನ್ಯ ಮಿತ್ರಾಖ್ಯ ॥
ಮರುತನಾವೇಶಯುತ ಪಾಂಡೂ ।
ವರ ಪರಾವಹನೆಂದೆನಿಪ ಕೇ ।
ಸರಿ ಮೃಗಪ ಸಂಪಾತಿಶ್ವೇತ ತ್ರಯರು ಮರುದಂಶ ॥೨೯॥**

**ಅವತರಣಿಕೆ :-**

ದ್ವಾದಶಾದಿತ್ಯದಲ್ಲಿ ಉತ್ತಮರು ಮತ್ತು ಮರುತನ ವಿಚಾರವನ್ನು ತಿಳಿಸುತ್ತಾರೆ. ॥29॥

**ಪ್ರತಿಪದಾರ್ಥ :-**

**ಎರಡಧಿಕಶತ** = 12 ಸಂಖ್ಯಾಕವಾದ (10 + 2 = 12), **ಸೂರ್ಯ ರೊಳು** = ಆದಿತ್ಯರಲ್ಲಿ, **ಮೂರೆರಡು ಜನ ಉತ್ತಮರು** = ಐದುಮಂದಿ ಶ್ರೇಷ್ಠರು (ಮೂರೆರಡು = 3 + 2 = 5), ಅವರ್ಯಾರೆಂದರೆ-**ವಿವಸ್ವಾನ್** = ವಿವಸ್ವಾನ್‌ನಾಮಕನಾದ ಸೂರ್ಯ, **ವರುಣ** = ವರುಣನಾಮಕಸೂರ್ಯ, **ಶಕ್ರನು** = ಶಕ್ರನಾಮಕಸೂರ್ಯ, **ಉರುಕ್ರಮನು** = ಉರುಕ್ರಮ ನಾಮಕಸೂರ್ಯ (ಪರಮಾತ್ಮನ ಆವತಾರ). **ಮಿತ್ರಾಖ್ಯ** = ಮಿತ್ರನಾಮಕ ಸೂರ್ಯ-ಈ ಐದು ಮಂದಿ ಶ್ರೇಷ್ಠರು. **ಪರ್ಜನ್ಯ** = ಪರ್ಜನ್ಯನಾಮಕ ಸೂರ್ಯನು ಗಂಗಾದೇವಿಗೆ ಸಮನು. ಪೂರ್ವೋಕ್ತ ಐದು ಮಂದಿ ಸೂರ್ಯರಿ ಗಿಂತ ಅವರನು. **ಪಾಂಡೂ** = ಪಾಂಡವರ ತಂದೆಯಾದ ಪಾಂಡುರಾಜನು, **ಮರುತನಾವೇಶಯುತ** = 49 ಮರುದ್ಗಣಗಳ ಪೈಕಿ ಪರಾವಹನೆಂಬ ವಾಯುವಿನ ಆವೇಶದಿಂದ ಯುಕ್ತನಾದವನು. **ಮೃಗಪ** = ಕಪಿಶ್ರೇಷ್ಠನಾದ ಕೇಸರೀ, **ಸಂಪಾತೀ** = ಜಟಾಯುವಿನ ಸಹೋದರನಾದ ಸಂಪಾತಿ, **ಶ್ವೇತ** = ಶ್ವೇತನೆಂಬುವನು, **ತ್ರಯರು** = ಈ ಮೂರು ಮಂದಿ, **ಮರುದಂಶ ದಿಂದ** = ಮರುತ್ತುಗಳ ಅಂಶದಿಂದ ಜನಿಸಿದವರು. ॥29॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ದ್ವಾದಶಾದಿತ್ಯರಲ್ಲಿ ಉತ್ತಮರಾದವರನ್ನೂ, ಹಾಗೆ ಮರುತರ ವಿಚಾರ ವನ್ನು ಹೇಳುತಾರೆ.

ಪೂರ್ವೋಕ್ತ ಹನ್ನೆರಡು ಸಂಖ್ಯಾತರಾದ ಸೂರ್ಯರೊಳಗೆ, ವಿವಸ್ವಾ ಎಂಬ ಸೂರ್ಯ, ವರುಣನೆಂಬೋ ಸೂರ್ಯ. ಶಕ್ರಸಾಂಕೇತನಾದ ಇಂದ್ರನೆಂಬೋ ಸೂರ್ಯ, ಉರುಕ್ರಮನೆಂಬೋ ಸೂರ್ಯ (ಶ್ರೀಪರಮಾತ್ಮ), ಪರ್ಜನ್ಯನೆಂಬೋ

ಸೂರ್ಯ, ಮಿತ್ರನೆಂಬೋ ಸೂರ್ಯ, ಅಂತು, ಈ ಉಕ್ತ ಆರು ಜನರು ಅನ್ಯಕಕ್ಷದವರು. ಇದರೊಳಗೆ,ಉತ್ತಮರಾದವರು, ಎಂದರೆ-18ನೇ ಕಕ್ಷದವರಿಗಿಂತಲೂ ಉತ್ತಮರಾದವರು- ಐದು ಮಂದಿ. 18ನೇ ಕಕ್ಷದವರಿಗಿಂತಲೂ ಅವರನಾದವ ಪರ್ಜನ್ಯನಾಮಕ 20ನೇ ಕಕ್ಷದವ. ಅಂತು, ಆರು ಮಂದಿ. ಪರ್ಜನ್ಯನೆಂಬುವನೇ ಅವರನಾದವನು. ಉಳಿದ ಆರು ಮಂದಿ ಸಮಾನರು. ಈ 18ನೇ ಕಕ್ಷದವರೇವೇ. ಇಲ್ಲಿಗೆ ಆದಿತ್ಯರ ವಿಚಾರ ಮುಗಿಯಿತು.

## ಮರುತರ ವಿಚಾರ ಮತ್ತು ನಾಮಗಳ ವಿವರ :-

| | | |
|---|---|---|
| 1. ಪ್ರಾಣ (32). | 17. ಶಂಕು (48). | 33. ಸೌಮ್ಯ (64). |
| 2. ಅಪಾನ (33). | 18. ಕಾಲ (49). | 34. ಕಪಿ (65). |
| 3. ವ್ಯಾನ (34). | 19. ಶ್ವಾಸ (50). | 35. ಜಡ (66). |
| 4. ಉದಾನ (35). | 20. ಶಲ (51) | 36. ಮಂಡೂಕ (67). |
| 5. ಸಮಾನ (36). | 21. ಅನಿಲ (52). | 37. ಸಂಹೃತ (68). |
| 6. ನಾಗ (37). | 22. ಪ್ರತಿಭ (53). | 38. ಸಿದ್ಧ (69). |
| 7. ಕೃಕಲ (38). | 23. ಕುಮುದ (54). | 39. ರಕ್ತ (70). |
| 8. ಕೂರ್ಮ (39). | 24. ಕಾಂತ (55). | 40. ಕೃಷ್ಣ (71). |
| 9. ದೇವದತ್ತ (40). | 25. ಶುಚಿ (56). | 41. ಪಿಕ (72). |
| 10. ಧನಂಜಯ (41). | 26. ಶ್ವೇತ (57). | 42. ಶುಕ (73). |
| 11. ಆವಹ (42). | 27. ಅಜಿತ (58). | 43. ಯತಿ (74). |
| 12. ಪರಾವಹ (43). | 28. ಗುರು (59). | 44. ಭೀಮ (75). |
| 13. ಸಂವಹ (44). | 29. ಝುಝು (60). | 45. ಹನು (76). |
| 14. ಶಂಯು (45). | 30. ಸಂವರ್ತಕ (61). | 46. ಪಿಂಗ (77). |
| 15. ಉದ್ವಹ (46). | 31. ಕೀಲ (62). | 47. ಕಂಪನ (78). |
| 16. ವಿವಹ (47). | 32. ಜಿತ (63). | |

ಅಂತು, ಮರುತರು 47 ಮಂದಿ. ಈ ನಾಲ್ವತ್ತೇಳು ಮರುತರ ಒಳಗೆ ಅಂಶಸಾಂಕೇತ ಅವತಾರಗಳು ಇರತಕ್ಕವರ ನಾಮಗಳ ವಿವರ–12ನೇ ಸಂಖ್ಯಾದನಾದ ಪರಾವಹನೆಂಬ ಮರುತನ ಅವತಾರ ಉತ್ತಮನಾದ ಪಾಂಡು ಚಕ್ರವರ್ತಿ. ಇವನು ಶ್ರೀಪ್ರಧಾನವಾಯುದೇವರ ಆವೇಶದಿಂದ ಯುಕ್ತನಾದವ ಎಂತ ಎನಿಸೋವನಾಗತಾನೆ. 26ನೇ ಸಂಖ್ಯಾ ಶ್ವೇತನಾಮಕ ಮರುತನ ಅವತಾರ- ಒಂದು ಕೇಸರಿಮ್ಯಗ ಎಂತಲೂ, ಇನ್ನೊಂದು ಸಂಪಾತಿ ಎಂತಲೂ, ಅಂತು ಎರಡು ಅವತಾರ. ಪೂರ್ವೋಕ್ತ ಪರಾವಹನ ಅಂಶ ಒಂದು. ಶ್ವೇತನ ಅಂಶಗಳು ಎರಡು ಅಂತು ಮೂರು ಅಂಶಗಳು ಎಂತ ತಾತ್ಪರ್ಯ. ॥29॥

## ೨. ಭಾವಪ್ರಕಾಶಿಕೆ :–

ದ್ವಾದಶಾದಿತ್ಯರ ಪೈಕಿ, ಹಿಂದೆ ತಾರತಮ್ಯದಲ್ಲಿ ಹೇಳಿರುವ ವಿವಸ್ವಾನ್, ವರುಣ, ಶಕ್ರ, ಉರುಕ್ರಮ, ಮಿತ್ರ-ಇವರು ಐವರೂ ಉತ್ತಮರು. ಪರ್ಜನ್ಯನು ಇನ್ನು ಮುಂದೆ ಹೇಳುವ ಗಂಗೇಗೆ ಸಮನು. ಉಳಿದ 6 ಮಂದಿಯರು ಸಮರು. ಏಕೋನಪಂಚಾಶತ್ (49) ಮರುದ್ಗಣಗಳ ಪೈಕಿ, ಪರಾವಹನೆಂಬುವನು, ವಾಯುದೇವರ ಆವೇಶದಿಂದ ಕೂಡಿ, ಪಾಂಡುರಾಜನಾಗಿ ಜನಿಸಿದನು. ಕೇಸರಿ, ಸಂಪಾತಿ, ಶ್ವೇತ-ಎಂಬ ಮೂವರು ಕಪಿಗಳು–ಮರುತ್ತಗಳಲ್ಲಿ ಶ್ರೇಷ್ಠರಾದವರ ಅಂಶದಿಂದ ಹುಟ್ಟಿರುವರು. ನಿರ್ಣಯ 8ನೆಯ ಅಧ್ಯಾಯದಲ್ಲಿ-"**ಪವನಗಣವರಾಂಶೌ ಶ್ವೇತಸಂಪಾತಿನೌಚ**"–ಮತ್ತೂ "**ಕೇಸರೀತಿ ಪ್ರವರಮಥ ಮರುತ್ಸಪ್ತಾಸ್ಯದೇವರ್ತಾಮುಂಶೇಶಃ** ॥–॥106॥"– ಈ ವಾಕ್ಯಗಳಿಂದ ಶ್ವೇತ, ಸಂಪಾತಿ, ಕೇಸರೀ-ಮೂವರೂ ಪವನಗಣ ವರಾಂಶರು-ಅಂದರೆ, ಮರುದ್ಗಣರಲ್ಲಿ ಉತ್ತಮರ ಅಂಶದಿಂದ ಕೂಡಿದವರೆಂದು ಸಿದ್ಧವಾಗುವುದು. ಹೆಸರು ಹೇಳಲಿಲ್ಲ. ದಾಸಾರ್ಯರೂ ಹೆಸರು ಹೇಳಲಿಲ್ಲವೆಂದು ತಿಳಿಯಬೇಕು. ಮರುತ್ತುಗಳ ಅಂಶದಿಂದ ಹುಟ್ಟಿದವರು ಎಂದು ತಾತ್ಪರ್ಯ. ॥29॥

## ೩ ಭಾವದರ್ಪಣ :-

ಆರು ಮಂದಿ ಸೂರ್ಯರು ಈ ಕಕ್ಷದವರೇತಲ್ಲೂ, ಅದರೊಳಗೆ, 5 ಜನರು ತ್ರಮರೆಂತಲೂ, ಪರ್ಜನ್ಯಸೂರ್ಯ ಗಂಗಾಸದುಸೇಂದು, ಸೂಕ್ಷ್ಮವಾಗಿ ಭಾವ ತೋರಿಸುತ್ತಾರೆ,—ಎರಡೇತಿ. –"ವಿಶೇಷಿ ದ್ವಾದಶಾದಿತ್ಯಾ ಮಿತ್ರಂ ಶಕ್ರಂ ಉರುಕ್ರಮಂ । ವಿವಸ್ವತಂಚ ವರುಣಂ ಪರ್ಜನ್ಯಂಚ ವಿನಾತ್ರಷಟ್"—ಇತಿ ತಾರತಮ್ಯೋಕ್ತೇಃ । ಮರುತ್ತುಗಳ ವಿವರ ಹೇಳುತ್ತಾರೆ । ಮರುತ್ ಇತಿ । "ವಾಯು ಯುಕ್ತಃ ಪಾಂಡುರಾಜಃ ಪರಾವಹ ಉದಾಹೃತಃ । ಸಂಪಾತಿ ಕೇಸರೀ ಚೈತೇ ತ್ರಯೋ ಮರುತ ಏವಚೇತಿ । ತಾರತಮ್ಯೋಕ್ತೇಃ ॥29॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಮಿತ್ರಂ ಶಕ್ರಮುರುಕ್ರಮಂ ವಿವಸ್ವಂತಂ ಚ ವರುಣಂ ॥ ಪರ್ಜನ್ಯಂ ಚ ವಿನಾ ಅತ್ರ ಷಟ್ ॥ ಪಾಂಡುಃ (ಪಾಂಡವ) ॥ ಪರಾವಹೋ ನಾಮ ಮರುತ್ ತತೋಭವತ್ ವರ್ಣೇನ ಪಾಂಡುಃ ವಾಯೋಃ ಆವೇಶತಃ ॥ ಇತಿ ॥ –'ವೃಗಪ'–ಸಿಂಹವತ್ ಸನ್ ಕೇಸರೀ ಇತಿ ॥ ಪ್ರವರಮಥ ಮರುತ್ಸು ॥ ಇತಿ. ॥29॥

## ಕನ್ನಡಾರ್ಥ

ಮಿತ್ರ, ಶಕ್ರ, ಉರುಕ್ರಮ, ವರುಣ-ಎಂದು ಆರು ಆದಿತ್ಯರು ಮಿಕ್ಕವರಿಗೀತ ಶ್ರೇಷ್ಠರು. ಪರ್ಜನ್ಯನನ್ನು ಈ ಶ್ರೇಷ್ಠರ ಶ್ರೇಣಿಯಲ್ಲಿ ಎಣಿಸಬಾರದು.

ಪಾಂಡುರಾಜನು ಪರಾವಹನೆಂಬ ಮರುತ್ತನ ಅವತಾರ. ವರ್ಣದಿಂದ ಪಾಂಡುರನಾದುದ(ಬಿಳಪು)ರಿಂದ, ಪಾಂಡು ಎಂದು ಹೆಸರು ಬಂದಿತು. ಅವನಲ್ಲಿ ವಾಯುವಿನ ಆವೇಶ. –'ವೃಗಪ'–ಸಿಂಹದಂತೆ, ಇರುವ ಕೇಸರಿ. ಕೇಸರಿ, ಸಂಪಾತಿ, ಶ್ವೇತ-ಈ ಮೂವರು ಕಪಿಗಳು, ಮರುತ್ತರಲ್ಲಿ ಉತ್ತಮ ವರ್ಗದವರು. ಮರುತ್ಪ್ರವರನೇ ಕೇಸರಿ-ಎಂದು ನಿರ್ಣಯದಲ್ಲಿ ಹೇಳಲಾಗಿರುತ್ತದೆ. ॥29॥

ಙ. ಶ್ರೀಗುರುಹೃದಯ ಪ್ರಕಾಶಿಕೆ :-

ಮೇಲೆ ಹೇಳಿದ ಹನ್ನೆರಡು ಜನ ಸೂರ್ಯರಲ್ಲಿ, ವಿವಸ್ವಾನ್ ವರುಣ ಶಕ್ರ ಉರುಕ್ರಮನೆಂಬ ವಿಷ್ಣುರೂಪ, ಪರ್ಜನ್ಯಮಿತ್ರ ಈ ಆರು ಜನ ಉತ್ತಮರನ್ನು ಬಿಟ್ಟು,ಮಿಕ್ಕ ಆರು ಜನ ಶೇಷಶತರಲ್ಲಿ ಸೇರಿ ತಮ್ಮೊಳಗೆ ಸಮರು. ಪ್ರಾಣಾವೇಶ ಉಳ್ಳ ಪರಾವಹನೆಂಬ ವಾಯುದೇವರು ಪಾಂಡುರಾಯನಾಗಿ, ಹುಟ್ಟಿದನು. ಮೃಗಪತಿಯಾದ ಕೇಸರಿ-ಎಂಬ ಕಪಿನಾಯಕನು ಒಂದು,ಸಂಪಾತಿ-ಎಂಬ ಪಕ್ಷಿ ಒಂದು, ಶ್ವೇತರಾಯನೆಂಬುವನು ಒಂದು ಸಹ,— ಮೂರು ಜನರೂ ಮರುತ್ತುಗಳ ಅಂಶದಿಂದ ಹುಟ್ಟಿದವರು. ॥29॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಹನ್ನೆರಡು ಮಂದಿ ಆದಿತ್ಯರ ಪೈಕಿ (ಎರಡಧಿಕ ದಶ $= 2 + 10 = 12$).

(1) ವಿವಸ್ವಾನ್‌ನಾಮಕಸೂರ್ಯ. (2) ವರುಣನಾಮಕಸೂರ್ಯ. (3) ಶಕ್ರನಾಮಕಸೂರ್ಯ. (4) ಉರುಕ್ರಮನಾಮಕಸೂರ್ಯ. ಮತ್ತು (5) ಮಿತ್ರನಾಮಕಸೂರ್ಯ-ಈ ಐದು ಮಂದಿ ಶ್ರೇಷ್ಠರು. (ಮೂರೆರಡು ಜನರುತ್ತಮರು).

2. ಪರ್ಜನ್ಯ-ನಾಮಕ ಸೂರ್ಯನು ಗಂಗಾದೇವಿಗೆ ಸಮನು.

3. ಮರುದ್ಗಣಗಳ ಸಂಖ್ಯೆ 49. ಇವರ ಹೆಸರುಗಳ ಪಟ್ಟಿಯನ್ನು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ.

4. ಈ 49 ಮರುದ್ಗಣಗಳಲ್ಲಿ **ಪರಾವಹ**-ಎಂಬ ಮರುತ್ತು,ವಾಯುದೇವರ ಆವೇಶದಿಂದ ಕೂಡಿಕೊಂಡು.(ಮರುತನಾವೇಶಯುತ) ಪಾಂಡುರಾಜನಾಗಿ ಅವತರಿಸಿದನು.

**ಪಾಂಡುರಾಯ :–**

ಚಂದ್ರವಂಶದ ವಿಚಿತ್ರವೀರ್ಯನ ಪತ್ನಿಯಾದ ಅಂಬಾಲಿಕೆಯಲ್ಲಿ ವ್ಯಾಸ ಮುನಿಯಿಂದ ಜನಿಸಿದವನು. ಕುಂತೀದೇವಿ ಈತನ ಮೊದಲನೆಯ ಪತ್ನಿ. ಮಾದ್ರಿ ದ್ವಿತೀಯ ಪತ್ನಿ. ಒಂದು ದಿನ ಬೇಟೆಗಾಗಿ ವನಕ್ಕೆ ಹೋದನು. ಆ ಸಮಯದಲ್ಲಿ ಕಿಂದಮನೆಂಬ ಮುನಿ ಮೃಗರೂಪವನ್ನು ಧರಿಸಿ, ತನ್ನ ಪತ್ನಿಯೊಡನೆ ವಿಹರಿಸುತ್ತಿದ್ದನು. ಆಗ,ಪಾಂಡುರಾಜನು ಆ ಮೃಗವನ್ನು ಸಾಮಾನ್ಯವಾದ ಜಿಂಕೆ ಎಂದು ಭಾವಿಸಿ, ಗಂಡು ಜಿಂಕೆಯನ್ನು ಬಾಣದಿಂದ ಕೊಂದನು. ಆ ಜಿಂಕೆಯು ತಕ್ಷಣ ಮುನಿರೂಪ ಧರಿಸಿ, ಕೋಪದಿಂದ,–"ಎಲೈ ರಾಜನೇ ! ನೀನು ಸ್ತ್ರೀ ಸಂಪರ್ಕ ಮಾಡಿದರೆ, ನೀನೂ ಮರಣ ಹೊಂದುವೆ"–ಎಂದು ಶಪಿಸಿದನು. ಆದರಿಂದ, ಪಾಂಡುವಿಗೆ ಖಿನ್ನವಾಗಿ,ರಾಜಧಾನಿಗೆ ಹೋಗದೆ, ಶತಶೃಂಗ ಪರ್ವತದಲ್ಲಿಯೇ ತಾಪಸನಾಗಿದ್ದ. ತಾನು ಸಂತಾನಹೀನನಾಗಿರುವ ವಿಷಯವನ್ನು ಕುಂತಿಗೆ ಅರುಹಿದನು. ಕುಂತಿ-ಯಮ–ವಾಯು–ಇಂದ್ರದೇವರಿಂದ ಮಂತ್ರೋಪದೇಶವನ್ನು ಹೊಂದಿ, ಧರ್ಮ–ಭೀಮ–ಅರ್ಜುನರನ್ನು ಪಡೆದಳು. ಕೆಲವು ದಿನಗಳ ನಂತರ ಪಾಂಡು ಮಾದ್ರಿಯೊಂದಿಗೆ ವಿಹರಿಸಿ, ದೇಹತ್ಯಾಗ ಮಾಡಿದನು.

5. ಕಪಿಶ್ರೇಷ್ಠನಾದ (ಮೃಗಪ) **ಕೇಸರಿ**–ಜಟಾಯುವಿನ ಸಹೋದರ. **ಸಂಪಾತಿ**–ವಾನರರೂಪಿಯಾದ **ಶ್ವೇತ**–ಈ ಮೂರು ಮಂದಿ (ತ್ರಯರು) ಮರುದ್ಗಣಾಂಶಯುತರು.

**ಕೇಸರಿ :–**

ಅಂಜನಾದೇವಿಯಪತಿ. ಶಂಖಸಾದನನೆಂಬ ರಾಕ್ಷಸನು ಋಷಿಗಳನ್ನು ಪೀಡಿಸುತ್ತಿದ್ದನು. ಕೇಸರಿಯು ಆ ಋಷಿಗಳ ಆದೇಶವಂತೆ, ಆ ದಾನವನನ್ನು ಕೊಂದನು. ಸಂತುಷ್ಟರಾದ ಆ ಮುನಿಪುಂಗವರು.-"ನಿನಗೆ ಸಕಲಶಾಸ್ತ್ರ ಪಾರಂಗತನನೂ, ಬಲಾಢ್ಯನೂ, ಬ್ರಹ್ಮನಿಷ್ಠನೂ ಆದ ಪುತ್ರನು ಜನಿಸುವನು."–ಎಂದು ವರವಿತ್ತರು. ಅದರ ಪ್ರಭಾವದಿಂದ, ಹನುಮಂತನು ಅಂಜನೆಯಲ್ಲಿ ಜನಿಸಿದನು.

**ಸಂಪಾತಿ :-**

ಅರುಣನ ಪುತ್ರ. ಜಟಾಯು ಸಂಪಾತಿಯ ತಮ್ಮ. ಶ್ಯೇನಿ ಸಂಪಾತಿಯ ಜನನೀ. ॥29॥

★★

## ಪದ್ಯ-೩೦

**ಮೂಲ :-**

ಪ್ರತಿಭವಾತನು ಚೇಕಿತನು ವಿ ।
ಪೃಥು ಎನಿಸುವನು ಸೌಮ್ಯ ಮಾರುತ ।
ವಿತತ ಶರ್ವೋತ್ತುಂಗ ಗಜನಾಮಕನು ಪ್ರಾಣಾಂಶ ॥
ದ್ವಿತಿಯಪಾನ ಗವಾಕ್ಷ ಗವಯನು ।
ತೃತೀಯ ವ್ಯಾನ ಉದಾನ ವೃಷಪ ।
ವರ್ತುಳ ಶರ್ವ ಕ್ರಾತ ಗಂಧಸುಮಾದನರು ಸಮನ ॥೩೦॥

**ಅವತರಣಿಕೆ :**

ಉಳಿದ ಮರುದ್ಗಣಗಳ ವಿಚಾರ ತಿಳಿಸುತ್ತಾರೆ. ॥30॥

**ಪ್ರತಿಪದಾರ್ಥ :-**

**ಪ್ರತಿಭವಾತನು** = ಪ್ರತಿಭವ-ಎಂಬ ಮರುತನು, **ಚೇಕಿತನು** = ಚೇಕಿತನೆಂಬ ಹೆಸರಿನಿಂದ ಯಾದವನಾಗಿ ಅವತರಿಸಿದನು. **ಸೌಮ್ಯಮಾರುತ** = ಸೌಮ್ಯನಾಮಕಮರುತನು, **ವಿಪೃಥು ಎನಿಸುವನು** = ವಿಪೃಥು

ಎಂಬ ಯಾದವನಾಗಿ ಅವತರಿಸಿದನು. ಈತನು ಗ್ರಾಮರಕ್ಷಕನು. **ವಿತತ** = ವಿತತ -ಎಂಬ ವಾನರ, **ಶರ್ವೋತ್ತುಂಗ** = ಶರ್ವೋತ್ತುಂಗನೆಂಬ ವಾನರನು. **ಗಜನಾಮಕನು** = ಗಜನೆಂಬ ಹೆಸರಿನ ಕಪಿ-ಈ ಮೂವರೂ ತ್ರೇತಾಯುಗದಲ್ಲಿ ಶ್ರೀರಾಮನ ಸೇವಾರ್ಥವಾಗಿ, **ಪ್ರಾಣಾಂಶ** = ಪ್ರಾಣ ಎಂಬ ವಾಯುವಿನ ಅಂಶದಿಂದ ಜನಿಸಿದರು. **ದ್ವಿತೀಯ ಅಪಾನ** = ಎರಡನೆಯ ಮರುತನಾದ ಅಪಾನನು, **ಗವಾಕ್ಷ** = ಗವಾಕ್ಷನಾಮಕ ವಾನರನಾದನು. **ತೃತೀಯ ವ್ಯಾನ** = ಮೂರನೆಯ ಮರುತನಾದ **ವ್ಯಾನನು**, **ಗವಯನು** = ಗವಯನಾಮಕ ಕಪಿಯಾಗಿ ಅವತರಿಸಿದನು. **ಉದಾನ** = ಉದಾನನಾಮಕವಾಯುವು, **ವೃಷಪರ್ವ** = ವೃಷಪರ್ವ ನೆಂಬ ವಾನರನಾದನು, **ಸಮನ** = ಐದನೆಯ ಸಮಾನ ನಾಮಕ ವಾಯುವು, **ಶರ್ವತ್ರಾತನು** = ಶರ್ವತ್ರಾತನಾಮದಿಂದ ಭೀಮಸೇನನಿಂದ ಕಾಳಿಯಲ್ಲಿ ಜನಿಸಿದ ಪುತ್ರನು. **ಗಂಧಮಾದನರು** = ಗಂಧಮಾದನನೆಂಬ ವಾನರನೂ, ಸಮಾನವಾಯುವಿನ ಅವತಾರನು. ॥30॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಅವಶಿಷ್ಟಮರುತರ ವಿಚಾರ ಹೇಳುತಾರೆ.

ಪ್ರತಿಭವಾತನು, ಚೇಕಿತನು, ವಿಷ್ಪೃಥು- ಎನಿಸತಕ್ಕವನು, ಸೌಮ್ಯ ಎನಿಸತಕ್ಕವನು, ಮಾರುತ- ಎನತಕ್ಕವನು, ವಿತತ ಎನತಕ್ಕವನು, ಸರ್ವೋತ್ತುಂಗ ಎನತಕ್ಕವನು, ಗಜನಾಮಕ-ಈ ಎಂಟು ಮಂದಿಗಳು, ಪ್ರಾಣನಾಮಕ ಮರುತನ ಅಂಶಗಳು ಎಂತ ತಿಳಿಯಬೇಕು. ಎರಡನೇ ಸಂಖ್ಯಾದವನಾದ ಅಪಾನನಾಮಕ ಮರುತನ ಅಂಶ ದಾವದೆಂದರೆ, ಗವಾಕ್ಷನೆಂಬೋ ಅವತಾರ ಒಂದು. ಮೂರನೇ ಸಂಖ್ಯಾದವನಾದ ವ್ಯಾನನಾಮಕ ಮರುತನ ಅಂಶ ದಾವದೆಂದರೆ, ಗವಯ-ಎನತಕ್ಕ ಅವತಾರ ಒಂದು. ನಾಲ್ಕನೇ ಸಂಖ್ಯಾದವನಾದ ಉದಾನನಾಮಕ ಮರುತನ ಅಂಶ ದಾವದೆಂದರೆ, ವೃಷಪರ್ವ ಎನತಕ್ಕ

ಅವತಾರ ಒಂದು. ಐದನೇ ಸಂಖ್ಯಾದವನಾದ ಸಮಾನನಾಮಕ ಮರುತನ ಅಂಶಗಳು ದಾವವೆಂದರೆ, ಅತುಳ–ಎಂತ ಅವತಾರ, ಶರ್ವತ್ರಾತ ಅವತಾರ, ಗಂಧನಾಮಕ ಅವತಾರ, ಸುಮಾದನ–ಎಂತ ಅವತಾರ. ಅಂತು, ನಾಲ್ಕು ಅವತಾರ ಸಮಾನವಾಯುವಿನ ಅವತಾರಗಳು ಎಂತ ತಾತ್ಪರ್ಯ. ॥30॥

**೩. ಭಾವಪ್ರಕಾಶಿಕೆ :–**

49 ಮರುತ್ತುಗಳ ಅವತಾರದಲ್ಲಿ ಎಲ್ಲರಿಗೂ ಅವತಾರವಿಲ್ಲ. ಕೆಲವು ಮರುತ್ತುಗಳಿಗೆ ಮಾತ್ರ ಇರುವುದು. ಅಷ್ಟುಮಾತ್ರ ಹೇಳಿದರೆ, ಶ್ವೇತಾದಿಗಳು ಮರುದ್ಗಣ ಪ್ರವಿಷ್ಟರೋ, ಅಲ್ಲವೋ– ಎಂದು ಸಂಶಯ ಬರುವುದ್ಕ್ಕ ಆದುದರಿಂದ,ಮೊದಲು 49 ಮರುತ್ತುಗಳ ಹೆಸರು ತಿಳಿಯುವುದು- ಅವಶ, ಏರುವುದು. ಆದ್ದರಿಂದ, ಹಿಂದಿನ ತಾರತಮ್ಯಪ್ರಕರಣದಲ್ಲಿ ಬಂದಿದ್ದರೂ ಇಲ್ಲೊಮ್ಮೆ ಬರೆಯಲು ಕಾರಣವಾಯಿತು.

**ಮರುದ್ಗಣರ ಹೆಸರುಗಳು**

1 ಪ್ರಾಣ, 2 ಅಪಾನ, 3 ವ್ಯಾನ, 4 ಉದಾನ, 5 ಸಮಾನ, 6 ನಾಗ, 7 ಕೃಕಲ, 8 ಕೂರ್ಮ, 9 ದೇವದತ್ತ, 10 ಧನಂಜಯ 11 ಪ್ರವಹ, 12 ವಿವಹ, 13 ಏಂಯು, 14 ಸಂವಹ, 15 ಪರಾವಹ 16 ಉದ್ವಹ, 17 ಆವಹ, 18 ಶಂಕು, 19 ಕಾಲ. 20 ಶ್ವಾಸ, 21 ನಲ, 22 ಅನಿಲ, 23 ಪ್ರತಿಭ, 24 ಕುಮುದ, 25 ಕಾಂತ, 26 ಶುಚಿ, 27 ಶ್ವೇತ, 28 ಅಜಿತ, 29 ಗುರು, 30 ಝಂಝು, 31 ಸಂವರ್ತಕ, 32 ಕೀಲ, 33 ಜಿತ, 34 ಸೌಮ್ಯ, 35 ಕಪಿ, 36 ಜಡ, 37 ಮಂಡೂಕ, 38 ಸಂಹತ, 39 ಸಿದ್ಧಿ, 40 ರಕ್ತ, 41 ಕೃಷ್ಣ, 42 ಪಿಕ, 43 ಶಕ, 44 ಯತಿ, 45 ಭೀಮ, 46 ಹಸು, 47 ಪಿಂಗ, 48 ಅಹಂಕಾರಿಕ, 49 ಕಂಪನ–ಹೀಗೆ 49 ಮರುತ್ತುಗಳಲ್ಲಿ 15ನೆಯ ಮರುತ್ತು ಪರಾವಹನು ಪಾಂಡುರಾಜನು. 27ನೆಯ ಶ್ವೇತನೆಂಬುವನು ಸಂಪಾತಿ, ಕೇಸರಿ-ಎಂದು ಎರದು ಅವತಾರಗಳನ್ನು ತೆಗೆದಿರುವನು.

23ನೆಯ ಪ್ರತಿಭನೆಂಬ ಮಾರುತನು ಚೇಕಿತಾನನಾಗಿ, ಯಾದವರಲ್ಲಿ ಅವತರಿಸಿದನು. ಸೌಮ್ಯನಾಮಕನಾದ 34ನೆಯ ಮಾರುತನು-ವಿಪೃಥು-ಎಂಬ ಯಾದವನಾಗಿ ಜನಿಸಿದನು. ವಿತತ, ಶರ್ವೋತ್ತುಂಗ ಇವರಿಬ್ಬರೂ, ಗಜನೆಂಬ ಕಪಿ ಒಬ್ಬ, ಅಂತೂ, ಮೂವರೂ ಮೊದಲನೆಯವನಾದ ಪ್ರಾಣನಾಮಕ ಮರುತ್ತಿನ ಅಂಶದವರು. ಎರಡನೆಯವನಾದ ಅಪಾನನು,ಗವಾಕ್ಷನೆಂಬ ಕಪಿಯಾದನು. ಮೂರನೆಯ ವ್ಯಾನನು ಗವಯನೆಂಬ ಕಪಿಯು ನಾಲ್ಕನೆಯವನಾದ ಉದಾನನು ವೃಷಭನೆಂಬ ಕಪಿಯಾದನು. 5ನೆಯ ಸಮಾನನು ಶರ್ವತ್ರಾತನೆಂಬ ಭೀಮಸೇನ ದೇವರ ಮಗನ ಅವತಾರ ಒಂದು, ಗಂಧಮಾದನನೆಂಬ ಕಪಿರೂಪ-ಒಂದು ಅಂತು, ಎರಡು ರೂಪಗಳನ್ನು ಧರಿಸಿರುವನು.

## ೩. ಭಾವದರ್ಪಣ :-

ಚೇಕಿತಾನಃ ಪ್ರಾಕ್‌ಪ್ರತಿಭೋ ವಿಪೃಥುಃ ಸೋಮ ಉಚ್ಯತೇ ! ಗವಾಕ್ಷಸ್ತು ಪ್ರಾಗಪಾನೋ ಮರುಚ್ಛ್ರೇಷ್ಠಃ ಪ್ರಕೀರ್ತಿತಃ । ಗವಯಃ ಪ್ರಾಗ್ವ್ಯಾನನಾಮಾ ವೃಷಃ ಪೂರ್ವಮುಧಾನಕಃ । ಶರ್ವತ್ರಾತೋ ಗಂಧಮಾದೋ ದ್ವಾವಸಮಾನ ಉದಾಹೃತ ಇತಿ । ತಾರತಮ್ಯೋಕ್ತೇಃ ॥30॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-

'ಪ್ರತಿಭವ'ಇತಿ ॥ ಮರುತ್ಸುನಾಮ ಪ್ರತಿಭವಃ ಯದುಷ್ವಭೂತ್ ಸ ಚೇಕಿತಾನಃ ಹರಿಸೇವನಾರ್ಥಮ್ ॥ ನಿರ್ಗತ್ಯ ತುರ್ಯಾ ವಿಪೃಥುಂ ವದರ್ಗ ಏಕೋಹ್ಯಸೌ ಮರುತಾಂ ಸೌಮ್ಯನಾಮ ॥ ಪ್ರಾಣಃ ವಿತತಃ ವ್ಯಾಪ್ತಃ ಸ ಸರ್ವೋತ್ತುಂಗೋ ಗದಃ ॥ ಇತಿ ದ್ವಿರೂಪಃ ॥ ಸರ್ವೋತ್ತುಂಗೋ ರಾಮತಃ ಪ್ರಾಣವಾಯೋಃ ಅಂಶೋ ನಿಶಾಯಾಂ ಗುರುಪುತ್ರ ಸೂದಿತಃ ॥ ಗಜೋ ಗವಾಕ್ಷಃ ಗವಯಃ ವಷಷ್ಟ ಸ ಗಂಧಮಾದನ ದೇನಜಾತಾಃ ॥ ಪ್ರಾಣಾದಯಃ ಪಂಚ ಮರುತ್ಪ್ರವೀರಾಃ ॥ ಸರ್ವತ್ರಾತಃ ಸಮಾನೋಽಯಮ್. ॥30॥

## ಕನ್ನಡಾರ್ಥ

"ಪ್ರತಿಭವನೆಂಬ ಮರುತ್ತನು ಹರಿಸೇವೆಯನ್ನು ಮಾಡಲು,ಯಾದವರಲ್ಲಿ ಚೇಕಿತಾನನೆಂಬ ರಾಜನಾಗಿ ಹುಟ್ಟಿದನು."– ಪಟ್ಟಣದಿಂದ ಹೊರಬಿದ್ದ ನಂತರ, 'ವಿಪೃಥು'–ಎಂಬ ಗ್ರಾಮರಕ್ಷಕನನ್ನು ನೋಡಿದನು. ಈ ಗ್ರಾಮರಕ್ಷಕನು (ವಿಪೃಥುವು) ಸೌಮ್ಯನೆಂಬ ಮರುತ್ತನ ಅವತಾರನು. ವಿತತ, ಸರ್ವೋತ್ತುಂಗರಿಬ್ಬರು ಪ್ರಾಣವಾಯುವಿನ ಅವತಾರರು. ಗಜನೆಂಬ ತ್ರೇತಾಯುಗದ ಕಪಿಯೂ ಪ್ರಾಣವಾಯುವಿನ ಅವತಾರವೇ. ಹೀಗೆ,ಮೂವರೂ ಪ್ರಾಣವಾಯುವಿನ ಅವತಾರಗಳು. ಸರ್ವೋತ್ತುಂಗನೆಂಬ ಪ್ರಾಣವಾಯುವಿನ ಅಂಶಾವತಾರವು ರಾತ್ರಿಯಲ್ಲಿ ಗುರುಪುತ್ರರಾದ ಅಶ್ವತ್ಥಾಮಾಚಾರ್ಯರಿಂದ ಸಂಹೃತವಾಯಿತು. ಗವಾಕ್ಷನೆಂಬ ಕಪಿಯು ಅಪಾನನ ಅಂಶ. ಗವಯನೆಂಬುವವನು ವ್ಯಾನವಾಯುವಿನ ಅಂಶಾವತಾರ. 'ವೃಷ'–ನೆಂಬುವವನು ಉದಾನನ ಅವತಾರ. ಶರ್ವತ್ರಾತನು ಭೀಮಸೇನನಿಂದ ಕಾಳಿಯೆಂಬ ಕಾಶಿರಾಜನ ಪುತ್ರಿಯಲ್ಲಿ ಹುಟ್ಟಿದ ಮಗನು. ಅವನು ಸಮಾನವಾಯುವಿನ ಅವತಾರ. ಗಂಧಮಾದನನೆಂಬ ಕಪಿಯೂ ಸಮಾನನ ಅವತಾರ. ಹೀಗೆ, ನಿರ್ಣಯದಲ್ಲಿ ನಿರೂಪಿಸಿರುರುತ್ತಾರೆ. ॥30॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ಪ್ರತಿಭವಾತನೆಂಬರನು, ಚೇಕಿತಾನರಾಯನು ಮರುತ್ತುಗಳ ಅಂಶ. ಸೌಮ್ಯನಾಮಕ ಮರುತ್ತು, ವಿಪೃಥು-ಎಂಬ ಯಾದವನಾಗಿ ಹುಟ್ಟಿದನು. ವಿತತ-ಎಂದರೆ,ವಿಸ್ತಾರ ಪರಾಕ್ರಮಿ ಶರ್ವೋತ್ತುಂಗನು, ಗಜನಾಮಕ ಕಪಿರಾಜನು, ಪ್ರಾಣವಾಯುವಿನ ಅಂಶದಿಂದ ಹುಟ್ಟಿದನು. ಎರಡನೇ ಅಪಾನವಾಯುದೇವರ ಅಂಶವೇ ಗವಾಕ್ಷನೆಂಬ ಕಪಿನಾಯಕ. ಮೂರನೇ ವ್ಯಾನವಾಯುವಿನ ಅಂಶ ಗವಯನೆಂಬ ಕಪಿಯು. ಉದಾನವಾಯು ಅಂಶ ವೃಷಭನೆಂಬ ಕಪಿ. ಶರ್ವತ್ರಾತನೆಂಬ ಭೀಮಪುತ್ರನು, ಗಂಧಮಾದನನೆಂಬ ಕಪಿಯು ಸಮಾನವಾಯುವಿನ ಅಂಶಭೂತರು. ॥30॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಮರುದ್ಗಣಗಳ ವಿಚಾರವನ್ನು ಮುಂದುವರಿಸುತ್ತಾರೆ.

1. **ಪ್ರತಿಭವ**-ಎಂಬ ಹೆಸರಿನ ವಾಯುವು **ಚೇಕಿತ**-ನೆಂಬ ಅಭಿಧಾನ ದಿಂದ ಯಾದವನಾಗಿ ಅವತರಿಸಿದನು. ಶ್ರೀಕೃಷ್ಣನ ಸೇವಾರ್ಥವಾಗಿ, ದ್ವಾಪರ ಯುಗದಲ್ಲಿ ಪ್ರತಿಭವನ ಅವತಾರ.

2. **ಸೌಮ್ಯ**-ನೆಂಬ ಹೆಸರಿನ ಮರುತನು, **ವಿಪೃಥು**-ಎಂಬ ಹೆಸರಿನ ಯಾದವನಾಗಿ ಅವತರಿಸಿದನು. ವಿಪೃಥುವು ಗ್ರಾಮರಕ್ಷಕನಾಗಿದ್ದನು. ಅರ್ಜುನನು ಸುಭದ್ರೆಯನ್ನು ಅಪಹರಿಸಿದಾಗ, ವಿಪೃಥುವು ಅರ್ಜುನನ್ನು ಎದುರಿಸಿ, ಅವನಿಂದ ಸೋತ.

3. **ಪ್ರಾಣನಾಮಕ**-ವಾಯುವಿನ ಅವತಾರಗಳು ಮೂರು.

(1) ವಿಕತ-ಎಂಬ ವಾನರ. (2) ಶರ್ವೋತ್ತುಂಗ-ಎಂಬ ಕಪಿ ಮತ್ತು (3) ಗಜನೆಂಬ-ಹೆಸರಿನ ವಾನರಶ್ರೇಷ್ಠ.

ಶ್ರೀರಾಮನ ಸೇವಾರ್ಥವಾಗಿ, ಪ್ರಾಣನು ಮೂರು ವಾನರರೂಪದಿಂದ ಅವತರಿಸಿದನು. ಗಜನೆಂಬ ಕಪಿಯು ಸುಗ್ರೀವನ ಸೇನಾಧಿಪತಿಗಳಲ್ಲಿ ಒಬ್ಬನು.

4. **ಅಪಾನನಾಮಕ**-ವಾಯುವು **ಗವಾಕ್ಷನಾಮದಿಂದ**-ವಾನರನಾಗಿ ಅವತರಿಸಿದನು. ಗವಾಕ್ಷನು ಕಪಿ ಸೇನಾನಾಯಕರಲ್ಲಿ ಒಬ್ಬನು. ಕುಂಭಕರ್ಣ ನೊಡನೆ ಯುದ್ಧ ಮಾಡಿದನು.

5. **ವ್ಯಾನನಾಮಕ**-ವಾಯುವು **ಗವಯ**-ಎಂಬ ಹೆಸರಿನಿಂದ ವಾನರನಾಗಿ ಅವತರಿಸಿ, ಶ್ರೀರಾಮನ ಸೇವೆ ಮಾಡಿದನು. ಇವನೂ ಸುಗ್ರೀವನ ಸೇನಾಪತಿಗಳಲ್ಲಿ ಒಬ್ಬನು.

6. **ಉದಾನನಾಮಕ**–ವಾಯುವು ವೃಷಪರ್ವನೆಂಬ ಹೆಸರಿನಿಂದ ಅವತರಿಸಿದನು.

7. **ಸಮಾನನಾಮಕ**–ವಾಯುವು ಶರ್ವವ್ರಾತನೆಂಬ ಹೆಸರಿನಿಂದ ಅವತರಿಸಿದನು. ಶರ್ವವ್ರಾತನು ಭೀಮಸೇನನಿಂದ ಕಾಳಿ ಎಂಬಾಕೆಯಲ್ಲಿ ಜನಿಸಿದ ಪುತ್ರನು.

**ಗಂಧಮಾದವನೆಂಬ**–ವಾನರನೂ ಸಹ ಸಮಾನವಾಯುವಿನ ಅವತಾರನು. ಗಂಧಮಾದವನು ಸುಗ್ರೀವನ ಕಪಿ ಸೇನಾನಾಯಕರಲ್ಲಿ ಒಬ್ಬನು. **ಕುಂಭಕರ್ಣನನ್ನು** ಯುದ್ಧದಲ್ಲಿ ಎದುರಿಸಿದ ಮಹಾವೀರನು. ॥30॥

| ಕ್ರಮ ಸಂಖ್ಯೆ. | ಮರುದ್ಗಣ. | ಅವತಾರ. |
|---|---|---|
| 1. | ಪ್ರತಿಭವ | ಚೇಕಿತನೆಂಬ ಯಾದವ. |
| 2. | ಸೌಮ್ಯ | ವಿಪೃಥು-ಎಂಬ ಯಾದವ. |
| 3. | ಪ್ರಾಣ | (1) ವಿತತ (2) ಶರ್ವೋತ್ತುಂಗ ಮತ್ತು (3) ಗಜನೆಂಬ-ಮೂರು ಅವತಾರಗಳು. |
| 4. | ಅಪಾನ | ಗವಾಕ್ಷನೆಂಬ ವಾನರನು. |
| 5. | ವ್ಯಾನ | ಗವಯನೆಂಬ ಕಪಿ. |
| 6. | ಉದಾನ | ವೃಷಪರ್ವ. |
| 7. | ಸಮಾನ | (1) ಶರ್ವವ್ರಾತನೆಂಬ ಭೀಮನ ಪುತ್ರ. (2) ಗಂದಮಾಧವನೆಂಬ ವಾನರವೀರ. |

**

## ಪದ್ಯ-೩೧

**ಮೂಲ :-**

**ಐವರೊಳಗೀ ಕುಂತಿಭೋಜನು ।**
**ಆವಿನಾಮಕ ನಾಗಕೃಕಲನು ।**
**ದೇವದತ್ತ ಧನಂಜಯರು ಅವತಾರವರ್ಜಿತರು ॥**
**ಆವಹೋದ್ವಹ ವಿವಹ ಸಂವಹ ।**
**ಪ್ರಾವಹೀಪತಿ ಮರುತ ಪ್ರವಹನಿ ।**
**ಗಾವಕಾಲಕು ಕಿಂಚಿದಧಮರು ಮರುದ್ಗಣರೆಲ್ಲ ॥ ॥೩೧॥**

**ಅವತರಣಿಕೆ :-**

ಇನ್ನೂ ಅವಶಿಷ್ಟ ಮರುದ್ಗಣಗಳ ವಿಚಾರ ತಿಳಿಸುತ್ತಾರೆ. ॥31॥

**ಪ್ರತಿಪದಾರ್ಥ :-**

**ನಾಗ** = ನಾಗನಾಮಕ ವಾಯು, **ಕೃಕಲನು** = ಕೃಕಲನಾಮಕ ವಾಯು, **ದೇವದತ್ತ** = ದೇವದತ್ತ-ಎಂಬ ಹೆಸರಿನ ಮರುತ, **ಧನಂಜಯರು** = ಧನಂಜಯ ನಾಮಾಭಿಧ ವಾಯು, **ಆವಿನಾಮಕ** = ಕೂರ್ಮನಾಮಕ ವಾಯು, **ಐವರೊಳಗೆ** = ಪೂರ್ವೋಕ್ತ ಐದು ಮಂದಿ ಮರುತ್ತಗಳ ಪೈಕಿ, **ಆವಿನಾಮಕ** = ಕೂರ್ಮನಾಮಕ ವಾಯುವು, **ಕುಂತಿಭೋಜನು** = ಕುಂತೀಭೋಜನೆಂಬ ಹೆಸರಿನಿಂದ ಅವತರಿಸಿದನು. **ಅವತಾರ ವಿವರ್ಜಿತರು** = ಉಳಿದ ನಾಗ-ಕೃಕಲ-ದೇವದತ್ತ ಮತ್ತು ಧನಂಜಯ-ಎಂಬ ಹೆಸರಿನ ನಾಲ್ಕು ಮಂದಿ ಮರುತ್ತುಗಳಿಗೆ ಅವತಾರವಿಲ್ಲ, **ಆವಹ** = ಆವಹನಾಮಕ ವಾಯು, **ಉದ್ವಹ** = ಉದ್ವಹನಾಮಕಮರುತ, **ಸಂವಹ** = ಸಂವಹ ಎಂಬ ಹೆಸರಿನ ವಾಯು-ಇತ್ಯಾದಿ ಇತರ ಮರುದ್ಗಣಗಳೆಲ್ಲರೂ, **ಪ್ರಾವಹೀ**

**ಪತಿ ಮರುತ ಪ್ರವಹನಿಗೆ** = ಪ್ರಾವಹೀಪತಿಯಾದ ಪ್ರವಹವಾಯುವಿಗೆ, (ಹಾಗೆಯೇ ಅಹಂಕಾರಿಕ ಪ್ರಾಣನಿಗೆ), **ಕಿಂಚಿದಧಮರು** = ಸ್ವಲ್ಪ ಕಡಿಮೆ ಎನಿಸುತ್ತಾರೆ. ‖31‖

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ಅವಶಿಷ್ಟಮರುತರ ವಿಚಾರ ಹೇಳುತಾರೆ.

ನಾಗನಾಮಕ ಮರುತ, ಕೃಕಲನಾಮಕ ಮರುತ, ದೇವದತ್ತನಾಮಕ ಮರುತ, ಧನಂಜಯನಾಮಕ ಮರುತ-ಇವರು ನಾಲ್ಕು ಮಂದಿ, ಆವಿ ಎಂದರೆ,ಕೂರ್ಮನಾಮಕ ಮರುತ–ಅಂತು, ಈ ಐದು ಮಂದಿ ಮರುತರ ಒಳಗೆ ಆವಿನಾಮಕ ಕೂರ್ಮನ ಅವತಾರ ಕುಂತೀದೇವೇರಿಗೆ ತಂದೆಯಾದ ಕುಂತೀಭೋಜ ರಾಯ-ಎಂತ ಅವತಾರ ಮಾಡಿವನು. ಅವಶಿಷ್ಟ ಪೂರ್ವೋಕ್ತ ನಾಗಾದಿ ನಾಲ್ಕು ಮಂದಿ ಮರುತರು ಅವತಾರ ಮಾಡೋವರಾಗಲಿಲ್ಲ. ಮರುದ್ಗಣ ದೊಳಗೆ ವಿದ್ಯಮಾನರಾದ ಪ್ರಾಣಾದಿ ಪಂಚಪ್ರಾಣರಿಗಿಂತ ಉಳಿದ ನಲವತ್ತೆರಡು ಮಂದಿ ಮರುತರು ಕಿಂಚಿದಧಮರು. ಈ ನಾಲ್ವತ್ತೆರಡು ಮಂದಿಗಿಂತಲೂ ಪ್ರಾಣಾದಿಪಂಚಪ್ರಾಣರು ಕಿಂಚಿದಧಿಕರು-ಎಂತ ತಾತ್ಪರ್ಯ.

ಪ್ರವಹಮಾರುತನ ಪತ್ನಿ ಪ್ರಾವಹೀದೇವೇರಿಗೆ ಪತಿಯಾದ ಪ್ರವಹ ಮಾರುತನಿಗೆ—ಇವನು 11ನೇ ಕಕ್ಷದವನು—ದಿಕ್ಪ್ರದರ್ಶನದಿಂದ ಈ ಪ್ರವಹ ಮಾರುತ ಒಂಭತ್ತನೇ ಕಕ್ಷದವನಾದ ಅಹಂಕಾರಪ್ರಾಣದೇವನು. ಮೂರನೇ ಕಕ್ಷದವರಾದ ಪ್ರಧಾನವಾಯುದೇವರು, ಅಂತು, ಈ ಮೂರು ಮಂದಿ ಸೇರಿ ಐವತ್ತು, ಪಂಚಾಶನ್ಮರುತರು-ಎಂತಲೂ,ಪ್ರಧಾನವಾಯುದೇವರ ವ್ಯತಿರಿಕ್ತ

ಏಕೋನಪಂಚಾಶನ್ಮರುತರು-ಎಂತಲೂ, ಗ್ರಂಥಾಂತರಗಳಲ್ಲಿ ಪ್ರಯೋಗವದೆ. ಅಂತು,ಈ ಹದಿನೆಂಟನೇ ಕಕ್ಷದಲ್ಲಿ ಇರತಕ್ಕ ಮರುತರು ನಾಲ್ವತ್ತೇಳು ಮಂದಿ-ಯೇವೇ- ಅಧಿಕವಿಲ್ಲ.

ಮರುತರು ಪೂರ್ವದಲ್ಲಿ ಉಕ್ತರಾದವರು ನಲವತ್ತೇಳು ಮಂದಿಯೊಳಗೆ, ಪ್ರಾಣಾದಿ ಐದು, ನಾಗಾದಿ ಐದು ಹೋಗತಾ, ಉಳಿದ ಹನ್ನೊಂದನೇಯುವ ನಾದ ಆವಹ-ಎಂಬ ಮರುತ, ಹದಿನೈದನೇಯುವ ಉದ್ವಹ ಮರುತ, ಹದಿ ನಾರನೇಯವ ವಿವಹ ಮರುತ, ಹದಿಮೂರನೇಯವ ಸಂವಹ ಮರುತ-ಅಂತು, ನಾಲ್ಕು ಮಂದಿ-ಇವರೇ ಮೊದಲಾದ ಮೂವತ್ತೇಳು ಮಂದಿಗಳು, ಪೂರ್ವೋಕ್ತ ರಾದ ನಾಗಾದಿ ಐದು, ಪ್ರಾಣಾದಿ ಐದು-ಅಂತು,ಹತ್ತು ಮಂದಿ ಎಲ್ಲಾ ಸೇರಿ ನಲವತ್ತೇಳು ಮಂದಿ ಮರುದ್ಗಣರು ಯಾವತ್ತೂ ಮಂದಿ ಪ್ರಾವಹೀಪತಿ ಯಾದ ಪ್ರವಹಮರುತನೇ-ಮೊದಲಾದ ಮೂರು ಮಂದಿಗೆ ಅಧಮರು-ಎಂತ ತಾತ್ಪರ್ಯ. ಅನಾದ್ಯನಂತಕಾಲಕ್ಕೂ ಎಂತ ತಾತ್ಪರ್ಯ. ॥31॥

## ೨. ಭಾವಪ್ರಕಾಶಿಕೆ :-

ಮರುದ್ಗಣದಲ್ಲಿ 8ನೆಯವನಾದ ನಾಗಾದಿಗಳಲ್ಲಿ 3ನೆಯುವನಾದ ಕೂರ್ಮನು ಶೂರರಾಜನ ಸಖನಾದ ಕುಂತೀಭೋಜನಾಗಿ ಜನಿಸಿದನು. ಇವನು ಶೂರ ರಾಜನ ಮಗಳಾದ ಕುಂತೀದೇವಿಯನ್ನು ಸಾಕಿ, ಕುಂತೀ- ಎಂದು ಹೆಸರಿಟ್ಟನು. ಅದಕ್ಕೆ ಮುಂಚೆ ಕುಂತೀದೇವಿಗೆ ಪೃಥಾ-ಎಂದು ಹೆಸರಿದ್ದಿತು. ನಾಗ, ಕೃಕಲ, ದೇವದತ್ತ, ಧನಂಜಯರಿಗೆ ಅವತಾರವಿಲ್ಲ, ಅಹಂಕಾರಿಕಪ್ರಾಣ, ಪ್ರವಹ ವಾಯು (48,11, ಈ ಸಂಖ್ಯೆ ಉಳ್ಳವರು) ಇವರಿಬ್ಬರಿಕಿಂತಲೂ, ಮಿಕ್ಕ ಆವಹಾದಿ ಎಲ್ಲಾ ಮರುತ್ತುಗಳೂ ಸ್ವಲ್ಪ ಕಮ್ಮಿ ಎನಿಸುವರು. ॥31॥

## ೩. ಭಾವದರ್ಪಣ :-

ನಾಗಾದಿ ವಿವರ ಹೇಳುತ್ತಾರೆ । ಐವರೊಳಗೀತಿ । ಕೂರ್ಮ ಕುಂತೀ-ಭೋಜರಾಜ, ನಾಗ, ಕೃಕಲ, ದೇವದತ್ತ, ಧನಂಜಯ- ಇವರಿಗೆ ಅವತಾರ

ಇಲ್ಲವೆಂದು ಭಾವ । ತದುಕ್ತಂ ।-"ನಾಗಶ್ಚ ಕೃಕಲಶ್ಚೈವ ದೇವದತ್ತೋ ಧನಂಜಯಃ । ಕುಂತೀಭೋಜಃ ಪುರಾ ಕೂರ್ಮ ಉದ್ವಹಶ್ಚ ಪರಾವಹಃ । ಆವಹೋ ವಿವಹಶ್ಚೈವ ಸಂವಹಶ್ಚ ತಥಾಪರ ಇತಿ॥"-ಅಹಂಕಾರಿಕಪ್ರಾಣಾನಿಗೂ ಪ್ರವಹ ಮಾರುತನಿಗೂ ಮಿಗಿಲಾದ ಮರುತ್ತುಗಳು ಕಂಟಿದಧಮರೆಂದು ತಿಳೀಬೇಕೆಂಬ ತಾತ್ಪರ್ಯ. ॥31॥

ಳ. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಐವರೇತಿ ॥ ನಾಗಾದಿ ಪಂಚಕೇತ್ಯರ್ಥಃ ॥ 'ಆವಿ'-ಕೂರ್ಮ ಕೂರ್ಮಶ್ಚ ನಾಮ್ನಾ ಮರುದೇವ ಕುಂತೀಭೋಜಃ. ॥31॥

### ಕನ್ನಡಾರ್ಥ

ನಾಗ, ಕೃಕಲ, ಕೂರ್ಮ, ದೇವದತ್ತ, ಧನಂಜಯರೆಂಬ-ಪ್ರಾಣರಲ್ಲಿ ಕೂರ್ಮನೆಂಬ ಪ್ರಾಣನೇ ಕುಂತೀಭೋಜನೆಂಬ ರಾಜನು. ಮಿಕ್ಕ ನಾಗ, ಕೃಕಲ, ದೇವದತ್ತ, ಧನಂಜಯರಿಗೆ ಅವತಾರಗಳಿಲ್ಲ. ॥31॥

ಘ. ಶ್ರೀಗುರುಹೃದಯ ಪ್ರಕಾಶಿಕೆ :-

ಉಪವಾಯುಗಳು, ಐದು ಜನರಲ್ಲಿ ಆವಿನಾಮಕ ಎಂದರೆ, ಕೂರ್ಮನೆಂಬ ಹೆಸರುಳ್ಳ ಉಪವಾಯು ಕುಂತೀಭೋಜರಾಯನಾದನು. ನಾಗ, ಕೃಕಲ, ದೇವದತ್ತ, ಧನಂಜಯ-ಎಂಬ ನಾಲ್ಕು ಉಪವಾಯುಗಳು ಅವತಾರ ವರ್ಜಿತರು. ಆವಹ,ಉದ್ವಹ,ವಿವಹ, ಸಂವಹ-ಪ್ರಾವಹೀಪತಿಯಾದ ಪ್ರವಹವಾಯು ಇವರಿಗೆ ಮಿಕ್ಕ ಮರುತ್ತುಗಳೆಲ್ಲ ಸದಾ ಸ್ವಲ್ಪ ಕಡಿಮೆಯಾದವರು. ॥31॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ನಾಗ-ಕೃಕಲ-ದೇವದತ್ತ-ಧನಂಜಯ ಮತ್ತು ಕೂರ್ಮ ಎಂಬ

ಐದು ಮಂದಿ ಉಪವಾಯುಗಳ ಪೈಕಿ, **ಕೂರ್ಮ**-ನಾಮಕ ವಾಯುವು (ಆವಿನಾಮಕ), ಕುಂತೀಭೋಜನೆಂಬ ಹೆಸರಿನಿಂದ ಅವತರಿಸಿದನು.

**ಕುಂತೀಭೋಜ :–**

ಕುಂತೀದೇಶದ ಅರಸು. ಶೂರಸೇನನ ಸೋದರತ್ತೆಯ ಮಗ. ವಸುದೇವನ ತಂದೆ. ಅವನಿಗೆ ಮಕ್ಕಳಿಲ್ಲದ ಕಾರಣ, ಶೂರರಾಜನ ಮಗಳಾದ ಪೃಥೆಯನ್ನು ದತ್ತು ತೆಗೆದುಕೊಂಡ. ಆ ಕಾರಣದಿಂದ,ಪೃಥೆಗೆ **ಕುಂತೀ**-ಎಂಬ ಹೆಸರು ಬಂದಿತು. ಕುಂತಿಯ ಸಾಕು ತಂದೆಯೇ ಕುಂತೀಭೋಜನು. ಈತನು ಅತಿರಥನು. ಇವನ ಹತ್ತು ಮಂದಿ ಪುತ್ರರೂ ಭಾರತಯುದ್ಧದಲ್ಲಿ ಅಶ್ವತ್ಥಾಮನಿಂದ ಹತರಾದರು.

2. ಪೂರ್ವೋಕ್ತ ಐದು ಮಂದಿ ಮರುತರ ಪೈಕಿ, ದೇವದತ್ತ-ನಾಗ-ಕೃಕಳ ಮತ್ತು ಧನಂಜಯ-ಈ ನಾಲ್ವರಿಗೆ ಅವತಾರವಿಲ್ಲ. (**ಅವತಾರವರ್ಜಿತರು**).

3. ಆವಹ–ಉದ್ವಹ–ವಿವಹ–ಸಂವಹ- ಇತ್ಯಾದಿ ವಾಯುಗಳು, ಪ್ರಾವಹೀಪತಿಯಾದ ಪ್ರವಹವಾಯು (ಅಂತೆಯೇ ಅಹಂಕಾರಿಕಪ್ರಾಣ)ವಿಗಿಂತ ಕಿಂಚಿದಧಮರು, ಅನಾದ್ಯನಂತಕಾಲದಿಂದ. ॥31॥

★★

## ಪದ್ಯ-೩೨

**ಮೂಲ :-**

**ಪ್ರಾಣೋಪಾನ ವ್ಯಾನೋದಾನ ಸ ।**
**ಮಾನ ದೈವರನುಳಿದು ಮರುತರು ।**
**ಊನರೆನಿಪರು ಹತ್ತು ವಿಶ್ವೇದೇವರಿವರಿಂದ ॥**
**ನೂನುಗಳು ಎನಿಸುವರು ಐವರು ।**
**ಮಾನನೀ ದ್ರೌಪದಿಗೆ ಕೆಲವರು ।**
**ಕ್ಷೋಣಿಯೊಳು ಕೈಕೇಯರೆನಿಪರು ಎಲ್ಲ ಕಾಲದಲಿ ॥ ೩೨॥**

**ಅವತರಣಿಕೆ :-**

ಮರುತರ ಹಾಗೂ ವಿಶ್ವೇದೇವತೆಗಳ ವಿಚಾರವನ್ನು ತಿಳಿಸುತ್ತಾರೆ-ಪ್ರಸಕ್ತಪದ್ಯದಿಂದ. ॥32॥

**ಪ್ರತಿಪದಾರ್ಥ :-**

**ಪ್ರಾಣ** = ದಾಸಪ್ರಾಣಪಂಚಕರಲ್ಲಿ ಮೊದಲನೆಯವನಾದ ಪ್ರಾಣ ನಾಮಕವಾಯು, **ಅಪಾನ** = ಅಪಾನನಾಮಕವಾಯು, **ವ್ಯಾನ** = ವ್ಯಾನ ನಾಮಕವಾಯು, **ಉದಾನ** = ಉದಾನನಾಮಕವಾಯು, **ಸಮಾನ** = ಸಮಾನನಾಮಕವಾಯು, **ಐವರನುಳಿದು** = ಈ ಐದು ಮಂದಿಗಳನ್ನು ಬಿಟ್ಟು, **ಮರುತರು** = ಉಳಿದ 42 ಮಂದಿ ಮರುತರು, **ಊನರೆನಿಪರು** = ಪ್ರಾಣಾದಿ ಪಂಚವಾಯುಗಳಿಗಿಂತ ಅವರರೆನಿಸುತ್ತಾರೆ. **ಹತ್ತು ವಿಶ್ವೇದೇವರು** = ಹತ್ತು ಮಂದಿ ವಿಶ್ವೇದೇವತೆಗಳು, **ಇವರಿಂದ ನೂನುಗಳು ಎನಿಸುವರು** = ಮರುತ್ತುಗಳಿಗಿಂತ ಕಡಿಮೆ ಎನಿಸುತ್ತಾರೆ. **ಐವರು** = ಈ

10 ಮಂದಿ ವಿಶ್ವೇದೇವತೆಗಳಲ್ಲಿ ಮೊದಲನೆಯ ಐದು ಮಂದಿ, **ಮಾನಿನೀ ದ್ರೌಪದಿಗೆ** = ಪಂಚಪಾಂಡವರ ಪತ್ನಿ ಪತಿವ್ರತೆಯಾದ ದ್ರೌಪದಿಗೆ, **ಸೂನುಗಳು ಎನಿಸುವರು** = ಪುತ್ರರೆಂದು ಕರೆಯಿಸುವರು. **ಕೆಲವರು** = ಉಳಿದ ಐದು ಮಂದಿ ವಿಶ್ವೇದೇವತೆಗಳು, **ಕ್ಷೋಣಿಯೊಳು** = ಭೂಮಿಯಲ್ಲಿ, **ಎಲ್ಲ ಕಾಲದಲಿ** = ಪ್ರತಿ ದಿನ ಕಲ್ಪದಲ್ಲಿಯೂ, **ಕೈಕೇಯರೆನಿಪರು** = ಕೈಕೇಯ ದೇಶಾಧಿಪತಿಗಳಾಗಿ ಕೈಕೇಯರು-ಎಂಬ ಹೆಸರಿನಿಂದ ಕರೆಯಿಸುವರು. ॥32॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಮರುತರ ವಿಚಾರವೂ,ವಿಶ್ವೇದೇವತೆಗಳ ವಿಚಾರವೂ ಹೇಳತಾರೆ.

ಮರುತರೊಳಗೆ ಪ್ರತಿಷ್ಠಿತರಾದ,ದಾಸಪ್ರಾಣರಾದ,ಪ್ರಾಣನಾಮಕ ಮರುತ, ಅಪಾನಮರುತ, ವ್ಯಾನಮರುತ, ಉದಾನಮರುತ, ಸಮಾನಮರುತ-ಇವರು, ಮರುದ್ಗಣಪ್ರತಿಷ್ಠಿತರಾದ ನಲವತ್ತೇಳು ಮರುತರ ಒಳಗೆ, ಪೂರ್ವೋಕ್ತ-ಪ್ರಕಾರ, ಈ ಐದು ಮಂದಿಯ ಬಿಟ್ಟು, ನಲವತ್ತೆರಡು ಮಂದಿ ಮರುತರು ಕಿಂಚಿತ್ ಕಡಿಮೆ ಎನಿಸತಾರೆ. ಈ ಐದು ಮಂದಿ ಕಿಂಚಿತ್ ಅಧಿಕರು. ಇಲ್ಲಿಗೆ, ಮರುತರ ವಿಚಾರ ಮುಗಿಯಿತು. ಇನ್ನು ಮೇಲೆ, ವಿಶ್ವೇದೇವತೆಗಳ ನಾಮ, ತಾರತಮ್ಯ,ಅವತಾರಗಳು ಹೇಳತಾರೆ.

ಹತ್ತು ಮಂದಿ ವಿಶ್ವೇದೇವತೆಗಳು. ಇವರ ನಾಮಗಳು :—

1. ಪುರೂರವ (79), 2. ಆರ್ದ್ರವ (80), 3. ಕಾಲ(81), 4. ಕಾಮ (82), 5. ಧುರಿ (83), 6. ಲೋಚನ (84), 7. ಸತ್ಯ (85), 8. ವಸು (86), 9. ದಕ್ಷ (87), 10. ಕ್ರತು (88).

ಇವರು ಹತ್ತು ಮಂದಿ ವಿಶ್ವೇದೇವತೆಗಳು. ಈ ಹತ್ತು ಮಂದಿ ಅವತಾರಗಳ ವಿವರ.—ಪಂಚಪಾಂಡವರಿಗೆ ಪತ್ನಿಯಾದ ದ್ರೌಪದೀದೇವೇರಿಗೆ ಐದು ಮಂದಿ ಪುತ್ರರು ಎಂತ ಕರೆಸುವರು. ಭೂಮಿಯೊಳು ಉಳಿದ ಐದು ಮಂದಿಗಳು ಕೈಕೇಯದೇಶಾಧಿಪರಾಗಿ ಕೈಕೇಯರು-ಎಂತ ಎನಿಸೋವರಾದರು. ಪೂರ್ವೋಕ್ತ ದ್ರೌಪದೀ ಪುತ್ರರು ಐದು ಮಂದಿಗಳು. ಇವರ ನಾಮ ಅವತಾರಗಳ ಮುಂದೆ ಹೇಳತಾರೆ. ಪ್ರತಿದಿನ ಕಲ್ಪಕ್ಕೂ ಇದೇನೇ-ಎಂತ ತಾತ್ಪರ್ಯ. ॥32॥

### ೨. ಭಾವಪ್ರಕಾಶಿಕೆ :-

49 ಮರುತ್ತುಗಳಲ್ಲಿ ಮೇಲೆ ಹೇಳಿದ ಅಹಂಕಾರಿಪ್ರಾಣ, ಪ್ರವಹ-ಇವ, ರಿಬ್ಬರೂ ಉತ್ತಮರು. ಉಳಿದ 47 ಜನರಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ-ಎಂಬೈವರೂ ಸ್ವಲ್ಪ ಉತ್ತಮರು. ಆದ್ದರಿಂದ, ಭಾಗವತ ತಾತ್ಪರ್ಯದಲ್ಲಿ ಹೇಳಿರುವಂತೆ, ಮರುತ್ತುಗಳೆಲ್ಲ ಸಮರು. ಅವರ ಪೈಕಿ 7 ಜನರು ಪ್ರಧಾನರು, ಇದಲ್ಲದೆ ಶ್ವೇತ, ಸಂಪಾತಿ, ಕೇಸರಿ-ಎಂಬ ಮೂವರು ಕಪಿಗಳು,ಮರುತ್ತುಗಳಲ್ಲಿ ಶ್ರೇಷ್ಠರಾದವರ ಅಂಶದಿಂದ ಕೂಡಿದವರೆಂದು ಹೇಳಿದ್ದರಿಂದ,ಮರುತ್ತುಗಳೆಲ್ಲರೂ ಸಮಾನರಲ್ಲವೆಂದೂ ಸ್ವಲ್ಪ ತಾರತಮ್ಯ ಉಂಟೆಂ- ತಲೂ ಸಿದ್ಧವಾಗುವುದು. ಭಾಗವತತಾತ್ಪರ್ಯನಿರ್ಣಯದ ಪ್ರಕಾರ, ಅಹಂ- ಕಾರಿಕ ಪ್ರಾಣ, ಪ್ರವಹ, ಪ್ರಾಣಾಪಾನಾದಿ- ಐವರು ಅಂತು,7 ಜನರು ಪ್ರಧಾನರು.

ಉಳಿದವರು ಸಮಾನರು. ವಿಶ್ವೇದೇವತೆಗಳು ಮರುತ್ತುಗಳಿಗೆ ಸಮಾನ ರಾದರೂ,ಪ್ರಾಣಾಪಾನಾದಿ ಐವರಿಗೆ ಸ್ವಲ್ಪ ಕಮ್ಮಿಯೆನಿಸುವರೆಂಬ ತಾತ್ಪರ್ಯ. ವಿಶ್ವೇದೇವತೆಗಳು 10 ಮಂದಿಗಳು–ಪೂರೂವರ, ಆದ್ರವ, ಕಾಲ, ಕಾಮ ಧೂಃ, ಲೋಚನ, ದಕ್ಷ, ಕ್ರತು, ಸತ್ಯ, ವಸು-ಎಂದು. ಇವರಲ್ಲಿ ಮೊದಲ ನೆಯವರಾದ ಐವರು, ದ್ರೌಪದೀದೇವಿಯರಲ್ಲಿ ಧರ್ಮರಾಜ–ಮೊದಲಾದ 5 ಪಾಂಡವರ ದೆಸೆಯಿಂದ, 5 ಮಕ್ಕಳಾಗಿ ಹುಟ್ಟಿದರು. ದ್ರೌಪದೀಮಕ್ಕಳ ವಿಷಯವನ್ನು ಮುಂದಿನ ಪದ್ಯದಲ್ಲಿ ವಿವರಿಸಿರುತ್ತಾರೆ.

ನಿರ್ಣಯ-20ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಕೃಷ್ಣನಿಗೆ ಸೋದರ ತ್ತೆಯ ಮಕ್ಕಳೂ ಮತ್ತು ಕೃಷ್ಣನ ಅಷ್ಟಮಹಾಮಹಿಷಿಯರಲ್ಲಿ ಒಬ್ಬಳಾದ ಭದ್ರೆ ಎಂಬಾಕೆಯ ಸಹೋದರೂ ಆದ ಕೈಕೇಯರೆಂಬ ಐದು ಮಂದಿ ಅಣ್ಣ ತಮ್ಮಂದಿರು ವಿಶ್ವೇದೇವತೆಗಳ ಅವತಾರರಾದರು. ಪಾಂಡವರಿಗೆ ಇವರೈವರೂ ಮಾತೃಷ್ವಸಾ, ಅಂದರೆ ತಾಯಿಗೆ, ಒಡಹುಟ್ಟಿದವರೆಂದರ್ಥ. ಕೈಕೇಯರ ತಾಯಿಯೂ, ಕುಂತೀದೇವಿಯೂ ಅಕ್ಕ ತಂಗಿಯರು. ಆದುದರಿಂದ, ಪಾಂಡವರಿಗೆ ಬೇಕಾದವರಾಗಿದ್ದರು. ಇವರ ತಂದೆಯಾದ ಶೈಬ್ಯನೂ ಪಾಂಡವರ ವಶದಲ್ಲಿದ್ದನು. ॥32॥

## ೩. ಭಾವದರ್ಪಣ :–

ಹತ್ತೊಂಭತ್ತನೇ ಕಕ್ಷಿಸ್ಥಾನರಾದಂಥಾ ಸಾಲ್ವತ್ತೇಳು ಮರುತ್ತುಗಳಲ್ಲಿ ಪ್ರಾಣಾಪಾನ ವ್ಯಾನೋಪಾನ ಸಮಾನ ಈ 5 ಮರುತ್ತುಗಳು ಯತ್ಕಿಂಚಿದಧಿಕರೆಂದು ತಿಳೀತಕ್ಕದ್ದು. ವಿಶ್ವೇದೇವತೆಗಳು ಪಂಚಪ್ರಾಣರಿಗೆ ಕಿಂಚಿದಧಮರು. ಪುರೂವರವಾದಿ 5 ಮಂದಿ ವಿಶ್ವೇದೇವರು ದ್ರೌಪದೀ ಮಕ್ಕಳಾಗಿದ್ದಾರೆ. ಲೋಚನಾದಿ 5 ಮಂದಿ ಕೈಕೇಯರು. ಪ್ರಾಣೇತಿ. ಉಕ್ತಂಚ ತಾರತಮ್ಯೇ. ॥32॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

"ಪ್ರಾಣೇತಿ"– ||–'ಉಳಿದು'–ಬಿಟ್ಟು ಊನರು"–ಇವರಿಂದ. ॥32॥

## ಕನ್ನಡಾರ್ಥ

"ಉಳಿದು"–ಪ್ರಾಣಾದಿ ಪಂಚಕವನ್ನು ಬಿಟ್ಟು-ಎಂದು ಅರ್ಥ. ವಿಶ್ವೇದೇವತೆಗಳು ಪ್ರಾಣಾದಿ ಪಂಚರಿಂದ ಸ್ವಲ್ಪ ಕಡಿಮೆಯವರು. ವಿಶ್ವೇದೇವತೆಗಳು ದ್ರೌಪದಿಯ ಮಕ್ಕಳೆಂಬುದನ್ನು ಹೆಸರು ಸಹಿತವಾಗಿ ಮುಂದಿನ ಪದ್ಯದಲ್ಲಿ ನೋಡಬಹುದು. ॥32॥

ಙ. ಶ್ರೀಗುರುಹೃದಯ ಪ್ರಕಾಶಿಕೆ :-

ಪ್ರಾಣಾಪಾನ ವ್ಯಾನೋದಾನ ಸಮಾನರೆಂಬ- ಐದು ವಾಯುಗಳು ಹೊರತು, ಕಡಿಮೆ ಮರುತ್ತುಗಳೆಲ್ಲ ತಮ್ಮೊಳಗೆ ಸಮಾನರು. ಹತ್ತು ಜನ ವಿಶ್ವೇದೇವತೆಗಳು ಈ ಮರುತ್ತುಗಳಿಗಿಂತ ಕಡಿಮೆ. ಇವರಲ್ಲಿ, ಐದು ಜನ ವಿಶ್ವೇದೇವತೆಗಳು ದ್ರೌಪದೀ ಪುತ್ರರಾಗಿ ಹುಟ್ಟಿದರು. ಐದು ಜನ ಕೈಕೇಯ ರಾಜರುಗಳಾಗಿ ಹುಟ್ಟಿ, ಪಾಂಡವರ ಕಡೆಗೆ ಸಹಾಯಕ್ಕಾಗಿ ಬಂದರು. ॥32॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಮರುದ್ಗಣಗಳ ಸಂಖ್ಯೆ =49. ಇವರ ಪೈಕಿ (1) ಪ್ರವಹ ವಾಯು ಮತ್ತು (2) ಅಹಂಕಾರಿಕಪ್ರಾಣ-ಇವರಿಬ್ಬರೂ ಉತ್ತಮ ಕಕ್ಷಕ್ಕೆ ಸೇರಿದವರು. ಅವರು ಶ್ರೇಷ್ಠರು. ಉಳಿದ 47 ಮರುತ್ತರು, 18ನೇ ಕಕ್ಷಾಪನ್ನರಾಗಿದ್ದಾರೆ. ಅವರೆಲ್ಲರೂ ಪರಸ್ಪರ ಸಮಾನರಾದರೂ, ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ-ಈ ದಾಸಪ್ರಾಣ ಪಂಚಕರು ಉಳಿದ 42 ಗಿಂತ ಉತ್ತಮರು. ಉಳಿದ 42 ಜನರೂ ಸಮರೆಂದು ತಿಳಿಯಬೇಕು.

2. ವಿಶ್ವೇದೇವತಾವರ್ಗ :-

ಈ ವರ್ಗಕ್ಕೆ ಸೇರಿದ ದೇವತೆಗಳ ಸಂಖ್ಯೆ = 10.

ಇವರ ಹೆಸರುಗಳು ಕ್ರಮವಾಗಿ-1. ಪುರೂರವ. 2. ಆರ್ದ್ರವ. 3. ಕಾಲ. 4. ಕಾಮ. 5. ಧುರಿ. 6. ಲೋಚನ. 7. ಸತ್ಯ. 8. ವಸು. 9. ದಕ್ಷ ಮತ್ತು 10. ಕ್ರತು.

ಧರ್ಮನೆಂಬ ಮುನಿವರ್ಯನಿಂದ ದಕ್ಷ ಪುತ್ರಿಯಾದ ವಿಶ್ವಾ ಎಂಬಾಕೆ ಯಲ್ಲಿ ಜನಿಸಿದವರು 10 ಮಂದಿ ವಿಶ್ವೇದೇವತೆಗಳು. ಇವರು ಹವ್ಯಕವ್ಯ-ಗಳಲ್ಲಿ ಪೂಜನೀಯರು.

3. ಈ ಹತ್ತು ಮಂದಿ ವಿಶ್ವೇದೇವತೆಗಳಲ್ಲಿ ಮೊದಲನೆಯ ಐದು ಮಂದಿ- ದ್ರೌಪದಿಗೆ ಪಂಚಪಾಂಡವರಲ್ಲಿ ಕ್ರಮವಾಗಿ, ಐದು ಮಂದಿ ಪುತ್ರರಾಗಿ ಜನಿಸಿದರು. ಇವರೇ ಉಪಪಾಂಡವರು. ದುರ್ಯೋಧನನು ಭೀಮಸೇನ ದೇವರಿಂದ ತೊಡೆ ಮುರಿಸಿಕೊಂಡು, ವೈಶಂಪಾಯನಸರೋವರದ ತೀರದಲ್ಲಿ ಬಿದ್ದಿದ್ದಾಗ, ಅವನ ಆದೇಶದಂತೆ, ಅಶ್ವತ್ಥಾಮಾಚಾರ್ಯರು ಐದು ಮಂದಿ ಉಪಪಾಂಡವರನ್ನು ಕೊಂದು, ಅವರ ಶಿರಗಳನ್ನು ತಂದು,ದುರ್ಯೋಧನನಿಗೆ ತೋರಿಸಿದರು.

4. ಉಳಿದ ಐದು ಮಂದಿ ವಿಶ್ವೇದೇವತೆಗಳು,ಭೂಮಿಯಲ್ಲಿ **ಕೈಕೇಯರೆಂಬ**-ಹೆಸರಿನಿಂದ ಅವತರಿಸಿದರು. ಶ್ರೀಕೃಷ್ಣನ ಷಣ್ಮಹಿಷಿಯರಲ್ಲಿ **ಭದ್ರಾ**-ಎಂಬಾಕೆಯ ಸೋದರರೇ ಈ ಐದು ಮಂದಿ ಕೈಕೇಯರು. ಈ ಕೈಕೇಯರ ತಾಯಿ ಮತ್ತು ಕುಂತೀದೇವಿ ಇಬ್ಬರೂ ಅಕ್ಕ-ತಂಗಿಯರು. ಇದರಿಂದ, ಕೈಕೇಯರು ಪಾಂಡವರಿಗೆ ಆಪ್ತರಾಗಿದ್ದರು. ॥32॥

❋❋

## ಪದ್ಯ-೩೩

**ಮೂಲ :-**

ಪ್ರತಿವಿಂಧ್ಯ ಶ್ರುತಸೋಮ ಶ್ರುತಕೀ ।
ರುತಿ ಶತಾನಿಕ ಶ್ರುತಕರ್ಮ ದ್ರೌ ।
ಪತಿ ಕುವರರಿವರೊಳಗೆ ಅಭಿಶಾಮ್ರ ಪ್ರಮುಖ ಚಿತ್ರ ॥
ರಥನು ಗೋಪಕಿಶೋರ ಬಲರೆಂ ।
ಬಹುಲರ್ಕೈಗಂಧರ್ವರಿಂದಲಿ ।
ಯುತರು ಧರ್ಮ ವೃಕೋದರಾದಿಜರೆಂದು ಕರೆಸುವರು ॥
॥೩೩॥

**ಅವತರಣಿಕೆ :-**

ವಿಶ್ವೇದೇವತೆಗಳ ನಾಮ ಮತ್ತು ಅವತಾರ ವಿಶೇಷಗಳನ್ನು ತಿಳಿಸುತ್ತಾರೆ. ॥33॥

**ಪ್ರತಿಪದಾರ್ಥ :-**

**ಪ್ರತಿವಿಂಧ್ಯ** = ಪುರೂರವ-ಎಂಬ ಹೆಸರಿನ ವಿಶ್ವೇದೇವತೆಯು, ಪ್ರತಿವಿಂಧ್ಯನೆಂಬ ಹೆಸರಿನಿಂದ ಅವತರಿಸಿದನು. **ಶ್ರುತಸೋಮ** = ಆರ್ದ್ರವನೆಂಬ ವಿಶ್ವೇದೇವತೆಯು, ಶ್ರುತಸೋಮನೆಂಬ ಅಭಿಧಾನದಿಂದ ಅವತಾರ ಮಾಡಿದನು. **ಶ್ರುತಕೀರ್ತಿ** = ಕಾಲನಾಮಕ ವಿಶ್ವೇದೇವತೆಯು, ಶ್ರುತಕೀರ್ತಿ - ಎಂಬ ಹೆಸರಿನಿಂದ ಅವತರಿಸಿದನು. **ಶತಾನಿಕ** = ಶತಾನಿಕನೆಂಬ ಹೆಸರಿನಿಂದ ಕಾಮನೆಂಬ ವಿಶ್ವೇದೇವತೆಯು ಅವತರಿಸಿದನು. **ಶ್ರುತಕರ್ಮ** = ಧುರೀನಾಮಕ ವಿಶ್ವೇದೇವತೆಯು. **ಶ್ರುತಕರ್ಮ** = ನೆಂಬ ಹೆಸರಿನಿಂದ ಅವತರಿಸಿದನು. **ದ್ರೌಪತಿಕುವವರು** = ಪೂರ್ವೋಕ್ತ ಪ್ರತಿವಿಂಧ್ಯಾದಿ ಐದು ಮಂದಿ ವಿಶ್ವೇದೇವತೆಗಳು ದ್ರೌಪದಿಯ ಪುತ್ರರಾಗಿ ಅವತರಿಸಿದರು. **ಅವರೊಳಗೆ** = ಆ ಐದು ಮಂದಿ ಪುತ್ರರಲ್ಲಿ, **ಅಭಿತ್ರಾವ** = ಅಭಿತ್ರಾವನೆಂಬ ಗಂಧರ್ವನ ಆವೇಶ ಪ್ರತಿವಿಂಧ್ಯನಲ್ಲಿ. **ಪ್ರಮುಖ ಚಿತ್ರರಥನು** = ಶ್ರುತಸೋಮನೆಂಬ ದ್ವಿತೀಯ ಪುತ್ರನು ಚಿತ್ರರಥನೆಂಬ ಗಂಧರ್ವನ ಆವೇಶಯುಕ್ತನು. **ಗೋಪ** = ಗೋಪನಾಮಕ ಗಂಧರ್ವನು, ತೃತೀಯ ಪುತ್ರನಾದ ಶ್ರುತಕೀರ್ತಿಯಲ್ಲಿ ಆವೇಶ. **ಕಿಶೋರ** = ಚತುರ್ಥಪುತ್ರ ಶತಾನಿಕನಲ್ಲಿ ಕಿಶೋರನೆಂಬ ಗಂಧರ್ವನ ಆವೇಶ. **ಬಲ** = ಪಂಚಮಪುತ್ರನಾದ ಶ್ರುತಕರ್ಮನು ಬಲನೆಂಬ ಗಂಧರ್ವನ ಆವೇಶಯುಕ್ತನು. **ಐಗಂಧರ್ವರಿಂದಲಿಯುತರು** = ಪೂರ್ವೋಕ್ತ ಅಭಿತ್ರಾವಾದಿ ಐವರ ಗಂಧರ್ವರ ಆವೇಶದಿಂದ ಯುಕ್ತರಾಗಿ, **ಅಮಲರು** = ದ್ರೌಪದಿಯ ಈ ಐದುಮಂದಿ ಪುತ್ರರೂ ಪರಾಕ್ರಮಿಗಳಾಗಿ ಜನಿಸಿದರು. **ಧರ್ಮ** = ಧರ್ಮರಾಜನಿಂದ ದ್ರೌಪದಿಯಲ್ಲಿ ಪ್ರತಿವಿಂಧ್ಯನೂ, **ವೃಕೋದರ** = ಭೀಮಸೇನನಿಂದ ದ್ರೌಪದಿಯಲ್ಲಿ ಶ್ರುತಸೋಮನೂ, **ಆದಿಜರಿಂದು** = ಆದಿಶಬ್ದದಿಂದ ಉಳಿದ ಅರ್ಜುನ- ನಕುಲ, ಸಹದೇವ

ರಿಂದ ಕ್ರಮವಾಗಿ ದ್ರೌಪದಿಯಲ್ಲಿ ಪ್ರುತಕೀರ್ತಿ-ಶತಾನಿಕ ಮತ್ತು ಶ್ರುತಕರ್ಮ ನಾಮಕರಾಗಿ ಪುತ್ರರೆಂದು, ಕರೆಸುವರು = ಕರೆಯಿಸುವವರಾಗಿದ್ದಾರೆ. ॥33॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ವಿಶ್ವೇದೇವತೆಗಳನಾಮ ಅವತಾರ ಹೇಳತಾರೆ.

ಒಂದನೇ ಸಂಖ್ಯಾದವನಾದ ಪುರೂರವ–ಎನತಕ್ಕ ವಿಶ್ವೇದೇವತೆಯ ಅವತಾರ ಪ್ರತಿವಿಂಧ್ಯ ಅಂತ ಒಂದು. ಇವನಲ್ಲಿ ಅಭಿತಾಮ್ರನೆಂಬೋ ಗಂಧರ್ವನ ಆವೇಶ. ಎರಡನೇ ಸಂಖ್ಯಾದವನಾದ ಆರ್ದ್ರವ–ಎನತಕ್ಕ ವಿಶ್ವೇದೇವತೆಯ ಅವತಾರಶ್ರುತಸೋಮ ಎಂತ. ಇವನಲ್ಲಿ ಚಿತ್ರರಥ ಎಂಬ ಗಂಧರ್ವನ ಆವೇಶ. ಮೂರನೇ ಸಂಖ್ಯಾದವನಾದ ಕಾಲ–ಎನತಕ್ಕ ವಿಶ್ವೇದೇವತೆಯ ಅವತಾರ ಶ್ರುತಕೀರ್ತಿ ಎಂತ. ಇವನಲ್ಲಿ, ಗೋಪನಾಮಕ ಗಂಧರ್ವನ ಆವೇಶ. ನಾಲ್ಕನೇ ಸಂಖ್ಯಾದವನಾದ ಕಾಮನಾಮಕ ವಿಶ್ವೇದೇವತೆಯ ಅವತಾರ ಶತಾನೀಕ ಎಂತ. ಇವನಲ್ಲಿ ಕಿಶೋರನಾಮಕ ಗಂಧರ್ವನ ಆವೇಶ. ಐದನೇಸಂಖ್ಯಾದವನಾದ ಧುಂನಾಮಕ ವಿಶ್ವೇದೇವತೆಯ ಅವತಾರ ಶ್ರುತಕರ್ಮ ಎಂತ ಇವನಲ್ಲಿ ಬಲ ಎಂಬ ಗಂಧರ್ವನ ಆವೇಶ. ಅಭಿತಾಮ್ರನೇ ಮೊದಲಾದ ಪೂರ್ವೋಕ್ತ ಪ್ರಕಾರ ಐದು ಮಂದಿ ವಿಶ್ವೇದೇತೆಗಳು ಐದು ಮಂದಿ ಗಂಧರ್ವರ ಆವೇಶಯುಕ್ತರು, ದ್ರೌಪದೀ ಪುತ್ರರೆಂಬ ಪ್ರತಿವಿಂಧ್ಯಾದಿ ಐವರು. ಬಲವಂತರು ಯುಧಿಷ್ಠಿರ ಎನತಕ್ಕ ಧರ್ಮರಾಯ, ಭೀಮಸೇನದೇವರು, ಆದಿ ಶಬ್ದದಿಂದ ಅರ್ಜುನ, ನಕುಲ, ಸಹದೇವ–ಈ ಮೂರೂ ಮಂದಿ ಗ್ರಾಹ್ಯ. ಅಂತು ಐದು ಮಂದಿ ಇವರದೆಸೆಯಿಂದ ಐದು ಪುತ್ರರು ಪೂರ್ವೋಕ್ತ ಪ್ರಕಾರ

ಉತ್ಪನ್ನರಾಗಿದ್ದಾರೆ. ದ್ರೌಪದೀದೇವೇರಿಗೆ ಕುಮಾರರು-ಎಂತ ಕರಸೋದ ರಾಗತಾರೆ. ದ್ರೌಪದೀದೇವೇರ ಪುತ್ರರೊಳು ಪೂರ್ವೋಕ್ತ ಪ್ರಕಾರ, ಗಂಧರ್ವರ ಆವೇಶ ತಿಳಿಯಬೇಕೆಂತಲೂ, ಉಳಿದ ಐದು ವಿಶ್ವೇದೇವತೆಗಳು ಕೈಕಯಾಧಿ ಪರೆಂತಲೂ ತಾತ್ಪರ್ಯ. ಅಂತು, ಹತ್ತುಮಂದಿ ವಿಶ್ವೇದೇವತೆಗಳು ಇವರ ವಿಚಾರ ಮುಗಿಯಿತು. ॥33॥

೨. ಭಾವಪ್ರಕಾಶಿಕೆ :-

ಧರ್ಮರಾಜ ಮೊದಲಾದ 5 ಮಂದಿ ಪಾಂಡವರ ದೆಸೆಯಿಂದ ದ್ರೌಪದಿಯಲ್ಲಿ 5 ಮಂದಿ ವಿಶ್ವೇದೇವತೆಗಳು ಪ್ರತಿವಿಂಧ್ಯ-ಮೊದಲಾದ 5 ಹೆಸರುಗಳಿಂದ ಹುಟ್ಟಿರುವರು. ಈ ಐವರಲ್ಲಿ, 5 ಮಂದಿ ಗಂಧರ್ವರ ಆವೇಶವೂ ಇರುವುದು. ನಿರ್ಣಯ 20ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ದ್ರೌಪದಿಯಲ್ಲಿ ವಿಶ್ವೇದೇವತೆಗಳು ಐವರು, 5 ಗಂಧರ್ವಶ್ರೇಷ್ಠರ ಆವೇಶದಿಂದ ಕೂಡಿ ಹುಟ್ಟಿದರು. ಚಿತ್ರರಥ, ಅಭಿತಾಮ್ರ, ಕಿಶೋರ. ಗೋಪಾಲ, ಬಲ-ಎಂಬ 5 ಗಂಧರ್ವಶ್ರೇಷ್ಠರು, ಪ್ರತಿವಿಂಧ್ಯ-ಮೊದಲಾದ ಐವರಲ್ಲಿ ಕ್ರಮದಿಂದ ಆವಿಷ್ಟರಾಗಿರುವರು ಈ ಐವರು ಧರ್ಮರಾಯ ಮೊದಲಾದ ಐವರ ದೆಸೆಯಿಂದ ದ್ರೌಪದಿಯಲ್ಲಿ ಕ್ರಮವಾಗಿ ಹುಟ್ಟಿದವರು. ಧರ್ಮರಾಜನ ಮಗನು ಪ್ರತಿವಿಂದ ಭೀಮಸೇನನ ಮಗನು ಶ್ರುತಸೋಮ. ಶ್ರುತಕೀರ್ತಿಯೆಂಬುವನು ಅರ್ಜುನನದೆಶೆಯಿಂದ ಹುಟ್ಟಿದವನು. ಶ್ರುತಾನೀಕನು ನಕುಲನ ಮಗನು ಶ್ರುತಕರ್ಮ (ಶ್ರುತಕ್ರಿಯ) ನೆಂಬುವನು ಸಹದೇವನ ಮಗನು. ॥33॥

೩. ಭಾವದರ್ಪಣ :-

ಪೂರೂರವಾದಿ ಧುರೀವರಿಗೂ, 5ಜನಗಳು ಚಿತ್ರರಥ, ಅಭಿತಾಮ್ರ, ಕಿಶೋರ, ಗೋಪ, ಬಲ-ಈ 5ಮಂದಿ ಗಂಧರ್ವರ ಆವೇಶದಿಂದ ಶ್ರೀ ಭೀಮಾದಿಗಳಿಂದ ದ್ರೌಪದಿಯಲ್ಲಿ ಜನಿತರೆಂದು ಹೇಳಿದರ್ಥವನ್ನೇ ವಿವರ ಮಾಡುತ್ತಾರೆ. ಪ್ರತಿವಿಂಧ್ಯೇತಿ "ಪ್ರತಿವಿಂಧ್ಯಃ ಶ್ರುತಸೋಮಃ ಶ್ರುತಕೀರ್ತಿಸ್ತಥೈವಚ। ಶತಾನೀಕ ಶ್ರುತಕರ್ಮಾ ಪಂಚೈತೇ ದ್ರೌಪದೀಸುತಾಃ । ಸಮಾವಿಷ್ಟಾಶ್ಚಿತ್ರರಥಾಭಿತಾಮ್ರಾಭ್ಯಾಂ ತಥೈವಚ। ಕಿಶೋರ ಗೋಪ ಬಾಲೈಶ್ಚ ಧರ್ಮಭೀಮಾರ್ಜುನಾದಿಜಾ"-ಇತಿ ತಾರತಮ್ಯೋಕ್ತೇಃ. ॥33॥

## ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :-

ವಿಶ್ವೇದೇವಾವತಾರಾನ್ ಆಹ "ಸೂನು" ಇತಿ ॥ ದ್ರೌಪದಯಾಃ ಪಂಚ । ಕೈಕಯಾಃ ಪಂಚ ॥ ಆಸನ್ ಕೃಷ್ಣಾಯಾಃ ಪಂಚ ಪುತ್ರಾಃ ಗುಣಾಢ್ಯಾಃ ವಿಶ್ವೇದೇವಾಃ ಪಂಚ ಗಂಧರ್ವ ಮುಖ್ಯೈಃ ॥ ಆವಿಷ್ಟಾಸ್ತೇ ಚಿತ್ರರಥಾಭಿ ತಾಮ್ರ ಕಿಶೋರ ಗೋಪಾಲ ಬಲೈಃ ಕ್ರಮೇಣ ॥ ಪ್ರತಿವಿಂಧ್ಯಃ ಶ್ರುತಃ ಸೋಮಃ ಶ್ರುತಾಖ್ಯಕೀರ್ತಿಃ ಶತಾನೀಕ ಉತ ಶ್ರುತಕ್ರಿಯಃ ವಿಶ್ವೇಷಾಂ ದೇವಾನಾಂ ಓ ಅವತಾರಾಃ ಪಂಚ ॥ "ಕೈಕಯಾಂ" ಕುವರಾಃ ಪುತ್ರಾಃ "ಐ" ಐವರು. ॥33॥

### ಕನ್ನಡಾರ್ಥ

ವಿಶ್ವೇದೇವತೆಗಳ ಅವತಾರಗಳನ್ನು ಹೇಳುತ್ತಾರೆ "ಸೂನು" ಎಂಬುದಾಗಿ ದ್ರೌಪದಿಯಲ್ಲಿ ಹುಟ್ಟಿವರು. ಐವರು ಕೈಕಯರಲ್ಲಿ ಹುಟ್ಟಿದವರು ಐವರು ದ್ರೌಪದಿಯಲ್ಲಿ ಮಕ್ಕಳಾಗಿ ವಿಶ್ವೇದೇವತೆಗಳಲ್ಲಿ ಐವರು ಹುಟ್ಟಿದರು. ಅವರಲ್ಲಿ ಐದು ಗಂಧರ್ವರ ಆವೇಶ ಚಿತ್ರರಥ, ಅಭಿತಾಮ್ರ, ಕಿಶೋರ, ಗೋಪಾಲ, ಬಲರೆಂಬುವವರು. ಕ್ರಮದಿಂದ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ ಶತಾನೀಕ, ಶ್ರುತಕ್ರಿಯ-ಇವರಲ್ಲಿ ಆವಿಷ್ಟರು, ಪ್ರತಿವಿಂಧ್ಯ-ಮುಂತಾದ ಐವರು ವಿಶ್ವೇದೇವತೆಗಳಲ್ಲಿ ಐವರ ಅವತಾರರು. ಕೈಕಯಕುವರರೆಂದರೆ ಪುತ್ರರು. ॥33॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ಪ್ರತಿವಿಂಧ್ಯನೆಂಬ ಧರ್ಮರಾಯನ ಮಗ ಅಭಿತಾಮ್ರ ಮುಖನೆಂಬ ಗಂಧರ್ವಾಂಶಯುಕ್ತನು. ಶ್ರುತಸೋಮನೆಂಬ ಭೀಮಪುತ್ರನು, ಚಿತ್ರರಥನೆಂಬ ಗಂಧರ್ವಾಯುಕ್ತನು. ಶ್ರುತಕೀರ್ತಿ-ಎಂಬ ಅರ್ಜುನನ ಪುತ್ರನು, ಗೋಪನೆಂಬ ಗಂಧರ್ವಾಯುಕ್ತನು. ಶ್ರುತಕರ್ಮನೆಂಬ ಸಹದೇವ ಪುತ್ರನು, ಬಲನೆಂಬ ಗಂಧರ್ವಯುಕ್ತನು. ಇವರೈದೂ ಐವರು ವಿಶ್ವೇದೇವತೆಗಳ ಅವತಾರ-ದ್ರೌಪದೀ ಪುತ್ರರೆನಿಸುವರು. ॥33॥

# ಸರ್ವವ್ಯಾಖ್ಯಾನಸಾರಸಂಗ್ರಹ

1. 10 ಮಂದಿ ವಿಶ್ವೇದೇವತಾವರ್ಗದವರಲ್ಲಿ ಮೊದಲನೆಯ ಐದು ಮಂದಿ ದ್ರೌಪದೀತನಯರಾಗಿ (ಉಪಪಾಂಡವರು) ಅವತರಿಸಿದ ವಿಚಾರವನ್ನು ತಿಳಿಸುತ್ತಾರೆ.

2. **ಪ್ರತಿವಿಂಧ್ಯ**— ಧರ್ಮರಾಯನಿಂದ ದ್ರೌಪದಿಯಲ್ಲಿ ಜನಿಸಿದ, ಪುರೂರವ-ಎಂಬ ವಿಶ್ವೇದೇವತೆ ಇವನಲ್ಲಿ ಅಭಿತ್ರಾಮನೆಂಬ ಗಂಧರ್ವನ ಆವೇಶ.

3. **ಶ್ರುತಸೋಮ** — ಭೀಮಸೇನದೇವರಿಂದ (ವೃಕೋದರ) ದ್ರೌಪದಿಯಲ್ಲಿ ಜನಿಸಿದ ಆರ್ದವನೆಂಬ ವಿಶ್ವೇದೇವತೆ. ಇವನಲ್ಲಿ ಚಿತ್ರರಥನೆಂಬ ಗಂಧರ್ವನ ಆವೇಶ.

4. **ಶ್ರುತಕೀರ್ತಿ**— ಅರ್ಜುನನೀದ ದ್ರೌಪದಿಯಲ್ಲಿ ತೃತೀಯ ಪುತ್ರನಾಗಿ ಅವತರಿಸಿದ ಕಾಲನಾಮಕನೆಂಬ, ವಿಶ್ವೇದೇವತೆ. ಗೋಪನಾಮಕ ಗಂಧರ್ವನ ಆವೇಶಯುಕ್ತನು.

5. **ಶತಾನೀಕ**— ನಕುಲನಿಂದ ದ್ರೌಪದಿಯಲ್ಲಿ ಚತುರ್ಥಪುತ್ರನಾಗಿ ಜನಿಸಿದ ಕಾಮನಾಮಕ ವಿಶ್ವೇದೇವತೆ. ಕಿಶೋರನೆಂಬ ಗಂಧರ್ವನ ಆವೇಶ ಈತನಲ್ಲಿ.

6. **ಶ್ರುತಕರ್ಮ**— ಸಹದೇವನಿಂದ ದ್ರೌಪದಿಯಲ್ಲಿ ಪಂಚಮ ಪುತ್ರನಾಗಿ ಅವತರಿಸಿದ ಧುರೀನಾಮಕ ವಿಶ್ವೇದೇವತೆಯು ಬಲನೆಂಬ ಗಂಧರ್ವನ ಆವೇಶಯುಕ್ತನು. ಪೂರ್ವೋಕ್ತ, ಪಂಚಪುತ್ರರ ವಿವರಗಳನ್ನು ಈ ಕೆಳಗಿನ ಪಟ್ಟಿಯಿಂದ ನೇರವಾಗಿ ತಿಳಿಯಬಹುದು. ||33||

| ಕ್ರಮ ಸಂಖ್ಯೆ. | ವಿಶ್ವೇದೇವತೆಯ ಹೆಸರು. | ಆವೇಶ. | ಯಾರ ಪುತ್ರರು. | ದ್ರೌಪದಿ ಪುತ್ರರ ಹೆಸರು. |
|---|---|---|---|---|
| 1 | ಪುರೂರವ | ಅಭಿತ್ರಾಮನೆಂಬ ಗಂಧರ್ವ | ಧರ್ಮರಾಯನಿಂದ | ಪ್ರತಿವಂಧ್ಯ |
| 2 | ಆರ್ದ್ರವ | ಚಿತ್ರರಥ | ಭೀಮಸೇನ ದೇವರಿಂದ | ಶ್ರುತಸೋಮ |
| 3 | ಕಾಲ | ಗೋಪ | ಅರ್ಜುನನಿಂದ | ಶ್ರುತಕೀರ್ತಿ |
| 4 | ಕಾಮ | ಕಿಶೋರ | ನಕುಲನಿಂದ | ಶತಾನೀಕ |
| 5 | ಧುರೀ | ಬಲ | ಸಹದೇವನಿಂದ | ಶ್ರುತಕರ್ಮ |

★★

## ಪದ್ಯ-೩೪

ಮೂಲ :–

ವಿವಿದ ವೈಂದರು ನಕುಲ ಸಹದೇ ।
ವ ವಿಭು ತ್ರಿಶಿಖಾಶ್ವಿನಿಗಳಲ್ಲಿ ।
ದಿವಿಷನಾವೇಶವಿಹುದೆಂದಿಗು ದ್ಯಾವಾ ಪೃಥ್ವಿ ಯುಭು ॥
ಪವನಸುತ ವಿಷ್ವಕ್ಸೇನನುವಾ ।
ಕುವರ ವಿಘ್ನವ ಧನಪ ವೊದಲಾ ।
ದವರು ಮಿತ್ರಗೆ ಕಿಂಚಿತಾಧಮರೆನಿಸಿಕೊಳುತಿಹರು ॥೩೪॥

**ಅವತರಣಿಕೆ :-**

ಅವಶಿಷ್ಟರಾದ 18ನೆಯ ಕಕ್ಷೆಕ್ಕೆ ಸೇರಿದವರ ವಿಚಾರ ತಿಳಿಸುತ್ತಾರೆ.
॥34॥

**ಪ್ರತಿಪದಾರ್ಥ :-**

**ಅಶ್ವಿನಿಗಳಲ್ಲಿ** = ನಾಸತ್ಯ ಮತ್ತು ದಸ್ರ–ಎಂಬ ಅಶ್ವಿನಿದೇವತೆಗಳ ಅವತಾರಗಳು ಯಾವುವೆಂದರೆ–**ವಿವಿದ ಮೈಂದರು** = ತ್ರೇತಾಯುಗದಲ್ಲಿ ವಿವಿದ ಮತ್ತು ಮೈಂದ-ಎಂಬ ಹೆಸರಿನ ಅವಳೀ ಜವಳೀ ವಾನರರು. **ನಕುಲ ಸಹದೇವ** = ದ್ವಾಪರಯುಗದಲ್ಲಿ ಮಾದ್ರೀಸುತರಾದ ನಕುಲ ಮತ್ತು ಸಹದೇವ–ರೆಂಬ ಹೆಸರಿನಿಂದ ಪಂಚಪಾಂಡವರಲ್ಲಿ ಕೊನೆಯ ಅವಳೀ ಸಹೋದರರಾಗಿ ಅವತರಿಸಿದರು. **ವಿಭು** = 4ನೆಯ ಮನ್ವಂತರದಲ್ಲಿ ಇಂದ್ರನಾಗಿ ಅವತರಿಸಿದ ವಿಭುನಾಮಕನು. **ತ್ರಿಶಿಖ** = ದಸ್ರನೆಂಬ ಅಶ್ವಿನೀದೇವತೆಯ ತ್ರಿಶಿಖಿನಾಮಕನಾಗಿ 5ನೆಯ ಮನ್ವಂತರದ ಇಂದ್ರನಾಗಿದ್ದನು. ಅಶ್ವಿನೀದೇವತೆಗಳ ಅವಳೀ ಅವತಾರಗಳಲ್ಲಿ, **ದಿವಿಜನಾವೇಶವಿಹುದೆಂದಿಗು** = ಎಲ್ಲಾ ಕಾಲಕ್ಕೂ ಇಂದ್ರನ (ದಿವಿಜ–ಸ್ವರ್ಗಾಧಿಪತಿ) ಆವೇಶಯುಕ್ತರಾಗಿದ್ದರು. **ದ್ಯಾವಾ** = ಅಂತರಿಕ್ಷಾಭಿಮಾನಿ ದೇವತೆ (ಸ್ವರ್ಗಾಭಿಮಾನಿ), **ಪೃಥ್ವೀ** = ಭೂತತ್ತ್ವಾಭಿಮಾನಿದೇವತೆ, **ಋಭು** = ದೇವತಾಗಣಕ್ಕೆ ಸೇರಿದವನು. **ಪವನಸುತ** ವಾಯುದೇವರ ಪುತ್ರನಾದ, **ವಿಷ್ವಕ್ಸೇನನು** = ವಿಷ್ವಕ್ಸೇನನೆಂಬ ದೇವತೆ, **ಉಮಾಕುವರ** = ಪಾರ್ವತೀಪುತ್ರನಾದ, **ವಿಘ್ನಪ** = ವಿಘ್ನೇಶ್ವರ, **ಧನಪ** = ಕುಬೇರ, **ವೊದಲಾದವರು** = ಪೂರ್ವೋಕ್ತ ದೇವತಾವರ್ಗ, **ಮಿತ್ರಗೆ** = ಮಿತ್ರನಾಮಕ ಸೂರ್ಯನಿಗಿಂತ, **ಕಿಂಚಿತ್ ಅಧಮರೆನಿಸಿಕೊಳುತಿಹರು** = ಸ್ವಲ್ಪ ಕಡಿಮೆ ಎನಿಸಿಕೊಳ್ಳುತ್ತಾರೆ. ॥34॥

## ವ್ಯಾಖ್ಯಾನಗಳು

೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಅವಶಿಷ್ಟರಾದ ಹದಿನೆಂಟನೇ ಕಕ್ಷದವರ ಹೇಳತಾರೆ,

ಅಶ್ವಿನಿಗಳಿಬ್ಬರು. 1. ನಾಸತ್ಯ (89), 2. ದಸ್ರ (90), 3. ದ್ಯಾವಾ (91), 4. ಪೃಥಿವಿ (92), 5. ಋಭು (93). ಈ ಐದು ಮಂದಿ ಹದಿನೆಂಟನೇ ಕಕ್ಷದಲ್ಲಿ ಸೇರಿದ್ದಾರೆ.

ಶತಸ್ಥರ ಸಂಖ್ಯಾ ನೂರು ಪೂರ್ತಿಗಾಗಿ ಅನ್ಯಕಕ್ಷದವರು ದಾರೇದರೆ—

| ಕ್ರಮ ಸಂಖ್ಯಾ. | ನಾಮ. | ಕಕ್ಷ ಸಂಖ್ಯಾ. | ಶತಸ್ಥ ಸಂಖ್ಯಾ. |
|---|---|---|---|
| 1. | ಬೃಹಸ್ಪತಿ | 10 | (94). |
| 2. | ಯಮಧರ್ಮರಾಯ | 12 | (95). |
| 3. | ಚಂದ್ರ | 12 | (96). |
| 4. | ಕವ್ಯವಾಹ | 19 | (97). |
| 5. | ಪ್ರಧಾನವಾಯು ದೇವರು | 2 | (98). |
| 6. | ಅಹಂಕಾರಿಕಪ್ರಾಣ ದೇವರು | 9 | (99). |
| 7. | ಪ್ರವಹವಾಯು | 11 | (100). |

ಇಲ್ಲಿಗೆ ಶತಸ್ಥರ ಸಂಖ್ಯಾ ನೂರು ಪೂರ್ತಿ ಆಯಿತು.

ಈ ಏಳು ಮಂದಿ ಅನ್ಯಕಕ್ಷದವರು ಹೋಗತಾ. ಪೂರ್ವೋಕ್ತ ಹನ್ನೆರಡು ಮಂದಿ ಒಳಗೆ ಅವತಾರಗಳ ವಿವರ—

ಮ್ಯಾಲೆ ಉದಹರಿಸಿದ ಅಶ್ವಿನೀದೇವತೆಗಳ ಒಳಗೆ, ಮೊದಲು ಸಂಖ್ಯಾ ನಾಸತ್ಯ ಎರಡನೇ ಸಂಖ್ಯಾ ದಸ್ರ,—ಈ ಉಭಯರ ಅವತಾರಗಳು ದಾವ ವೆಂದರೆ ವಿವಿದ-ನಾಸತ್ಯ, ಮ್ಯೆಂದನೇ ದಸ್ರ. ನಾಸತ್ಯನೇ ನಕುಲ, ದಸ್ರನೇ ಸಹದೇವ. ನಾಸತ್ಯನೇ ವಿಭು, ತ್ರಿಶಿಖನೇ ದಸ್ರ. ಅಂತು,ನಾಸತ್ಯನ ಅವ ತಾರಗಳು ವಿವಿಧ, ವಿಭು, ನಕುಲ ಎಂತ ಮೂರು. ದಸ್ರನ ಅವತಾರಗಳು ಮ್ಯಂದ ಸಹದೇವ,ತ್ರಿಶಿಖ ಎಂತ ಮೂರು. ಈ ಆರು ಮಂದಿಯೊಳಗೆ ಆವೇಶ ದಾವವೆಂದರೆ, ಸ್ವರ್ಗಾಧಿಪತಿ ಇಂದ್ರದೇವರ ಆವೇಶ ಇರೋದಾಗಿ ಅದೆ. ಅವತಾರ ಉಪರಮವಾಗೋವರಿಗೂ ಮಧ್ಯೆ ವಿಚ್ಛಿತಿ ಇಲ್ಲದೆ ಇರೋದಾಗಿ ಇರ ತದೆ-ಎಂತ ತಾತ್ಪರ್ಯ. ಮತ್ತು ಅಶ್ವಿನೀದೇವತೆಗಳು ಇಬ್ಬರೂ ವಿಯೋಗರಹಿತ ರಾಗಿ ಸ್ವರೂಪದಲ್ಲಿ ಅವತಾರಗಳಲ್ಲಿ ಇರತಾರೆ– ಎಂತಲೂ ತಾತ್ಪರ್ಯವೇ. ಮೂರನೇ ಸಂಖ್ಯಾದವನಾದ ದ್ಯಾವಾ ಎಂಬವ, ನಾಲ್ಕನೇ ಸಂಖ್ಯಾ ಪೃಥಿವೀ, ಐದನೇ ಸಂಖ್ಯಾ ಋಭು, ಬೃಹಸ್ಪತಿ ಆರಂಭಮಾಡಿ, ಪ್ರವಹವಾಯುದೇವರ ಪರ್ಯಂತ ಏಳು ಮಂದಿ, ಅನ್ಯಕಕ್ಷದಲ್ಲಿ ಉಕ್ತರಾದ್ದರಿಂದ ಹೇಳಲಿಲ್ಲ. ಆದರೂ ಶತಸ್ಥರಸಂಖ್ಯಾ ಪೂರ್ತಿ ಆಗಿ,ಝಡತಿ ಬರೋದಕ್ಕೋಸ್ಕರ ಸೇರಿಸಿಕೋಬೇಕು. ಅಂತೂ, ಇಲ್ಲಿಗೆ ಶತಸ್ಥರ ಸಂಖ್ಯಾ ನೂರು ಸರಿ ಆಯಿತು.

ಇದಲ್ಲದೇ, ಹದಿನೆಂಟನೇ ಕಕ್ಷದವರು ವಾಯುಪುತ್ರನಾದ ವಿಷ್ವಕ್ಸೇನ, ಉಮಾಪುತ್ರ ಗಣೇಶ, ಕುಬೇರ-ಮೊದಲಾದವರು, ಹದಿನೇಳನೇ ಕಕ್ಷದವನಾದ ಮಿತ್ರನಾಮಕ ಸೂರ್ಯಗೆ ವೀಸಗುಣದಿಂದ ಅಧಮರು-ಎಂತ ಎನಿಸಿಕೊಳ್ಳಲ್ಪಡ ತ್ತಾರೆ. ನೂರು ಒಂದು, ಮೂರು ಒಂದು, ಅಂತೂ,ನೂರಾಮೂರಕ್ಕೆ ಅನ ಕಕ್ಷದಲ್ಲಿ ಸೇರಿದವರು ಎಷ್ಟು ಮಂದಿ ವರ್ತಮಾನ 18ನೇ ಕಕ್ಷದವರು ಎಷು ಮಂದಿ ಎಂದರೆ,ವಿವರಿಸತೇವೆ.

| ಅನ್ಯಕಕ್ಷದವರು. | ಕಕ್ಷ. | ಈ ಹದಿನೆಂಟನೇ ಕಕ್ಷದವರು. | |
|---|---|---|---|
| ಆದಿತ್ಯರು. | | | |
| 1. ಉರುಕ್ರಮದೇವರು | 1. | ಹತ್ತು ಜನ ರುದ್ರರು | 10. |
| 2. ಪುರಂದರ | 8. | ಏಳು ವಸುಗಳು | 7. |
| 3. ಮಿತ್ರನಾಮಕ | 17. | ಆದಿತ್ಯರು | 6. |
| 4. ವರುಣ | 13. | ವಿಶ್ವೇದೇವತೆಗಳು | 10. |
| 5. ಪರ್ಜನ್ಯ | 20. | ಅಶ್ವಿನೀದೇವತೆಗಳು | 2. |
| 6. ವಿವಸ್ವಾನ್ | 12. | ದ್ಯಾವಾ | 1. |
| 1. ವಾಮದೇವನೆಂಬರುದ್ರ | 5. | ಋಭು | 1. |
| 2. ಅಗ್ನಿದೇವರು | 15. | ಮರುತ್ತರು | 47. |
| 3. ಬೃಹಸ್ಪತಿ | 10. | ಧನಪ | 1. |
| ಪಿತೃಗಳು. | | | |
| 1. ಯಮದೇವರು | 12. | ವಿಷ್ವಕ್ಸೇನ | 1. |
| 2. ಚಂದ್ರದೇವರು | 12. | ಗಣಪ | 1. |
| 3. ಕವ್ಯವಾಹ | 19. | | |
| ಮರುತರು. | | | |
| 1. ಪ್ರವಹವಾಯು | 11. | | |
| 2. ಅಹಂಕಾರಿಕಪ್ರಾಣ | 9. | | |
| 3. ಪ್ರಧಾನವಾಯು | 3. | | |
| 1. ಪೃಥಿವೀ | 24. | | |
| 16 ಒಟ್ಟು. | | 87 ಒಟ್ಟು. | |

87 ಮಂದಿ 18ನೇ ಕಕ್ಷದವರು. 16 ಮಂದಿ ಬೇರೆ ಕಕ್ಷದವರು. ಎರಡೂ ಸೇರಿ 103. ಇಲ್ಲಿಗೆ ಹದಿನೆಂಟನೇ ಕಕ್ಷದ ಶತಸ್ಥರ ವಿಚಾರ ಮುಗಿ-ಯಿತು. ಇನ್ನು ಮ್ಯಾಲೆ ಕರ್ಮಜರ ವಿಚಾರ ತಾರತಮ್ಯ ಹೇಳತಾರೆ. ॥34॥

**೨. ಭಾವಪ್ರಕಾಶಿಕೆ :-**

ರಾಮಾವತಾರಕಾಲದಲ್ಲಿ ರಾಮದೇವರ ಸೇವಾರ್ಥವಾಗಿ ಅಶ್ವಿನೀದೇವತೆಗಳು ವಿವಿದ-ಮೈಂದನರೆಂಬ ಕಪಿಗಳಾಗಿ ಹುಟ್ಟಿದರು. ಅಶ್ವಿನೀದೇವತೆಗಳೆಂಬುವರು,ಕುದುರೆಯ 2 ಮೂಗುಗಳ ರಂಧ್ರದಿಂದ ಸಮವಾಗಿ ಹುಟ್ಟಿದವರಾದು-ದರಿಂದ, ಅವರಿಬ್ಬರೂ ಯಾವಾಗಲೂ ಒಂದೇ ರೂಪದಿಂದ, ಒಂದೇ ಸ್ಥಳದಲ್ಲಿ ಇಬ್ಬರೂ ಇರುವರು. ಎಲ್ಲಿ ಅವತಾರ ಮಾಡಿದರೂ,ಇಬ್ಬರೂ ಸೇರಿ ಜನಿಸುವರು. ಆದುದರಿಂದ,ನಾಸತ್ಯ, ದಸ್ರರೆಂಬ, ಇಬ್ಬರು ಅಶ್ವಿನೀದೇವತೆಗಳು ವಿವಿದ,ಮೈಂದರಾಗಿ ಹುಟ್ಟಿದರು. ಕೃಷ್ಣಾವತಾರಕಾಲದಲ್ಲಿ ಪಾಂಡುರಾಜನ ಹೆಂಡತಿಯಾದ ಮಾದ್ರಿಯಲ್ಲಿ ಅಶ್ವಿನೀದೇವತೆಗಳು ತಮ್ಮ ದೆಶೆಯಿಂದ ತಾವೇ ನಕುಲ,ಸಹದೇವರಾಗಿ ಹುಟ್ಟಿದರು-ಎಂದು ನಿರ್ಣಯ 12ನೆಯ ಅಧ್ಯಾಯದಲ್ಲಿ ಹೇಳಿರುವರು.

ವಿಭು, ತ್ರಿಶಿಖ (ವಿಶಿಖ)-ಎಂಬೀರ್ವರು 4–5 ಈ ಮನ್ವಂತರಗಳಲ್ಲಿ ಇಂದ್ರರಾಗಿದ್ದರು. ಈ ವಿಷಯದಲ್ಲಿ ನಿರ್ಣಯ 18ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಪೂರ್ವಮನ್ವಂತರಗಳಲ್ಲಿ ಇಂದ್ರರಾಗಿದ್ದ ವಾಯುದೇವರು, ಯಮಧರ್ಮ, ಅಶ್ವಿನೀದೇವತೆಗಳೀರ್ವರು-ಅಂತೂ,ನಾಲ್ವರು,ಭೂಮಿಯಲ್ಲಿ ಹುಟ್ಟುವುದಕ್ಕಾಗಿ ಯೋಚಿಸುತ್ತಿದ್ದರು- ಎಂಬ ವಾಕ್ಯದಿಂದ, ಅಶ್ವಿನೀದೇವತೆಗಳೂ ಇಂದ್ರರಾಗಿದ್ದರೆಂದು ಸಿದ್ಧಾಂತವಾಗುವುದು.

ಆ ಇಂದ್ರರು ಯಾರು ? ಏನು ಹೆಸರು ? ಯಾವ ಕಾಲವೆಂಬುದಕ್ಕೆ ವಿಷ್ಣುರಹಸ್ಯವು ಆಧಾರ. ವಿಷ್ಣುರಹಸ್ಯ 28ನೆಯ ಅಧ್ಯಾಯದಲ್ಲಿ ಹೇಳಿರು-ವಂತೆ –"ಚತುರ್ಥಸ್ತ್ವಾಪಸೋ ನಾಮ್ನಾ ಹ್ಯತ್ರಮಸ್ಯಾನು ಚೋಮನಃ ॥

ನಾಸತ್ಯೋ ವಿಶಿಖೋನಾಮ್ನಾ ಪ್ರಾಪ್ತ ಇಂದ್ರ ಪದಂ ಸುರಾಃ ॥2॥"–ನಾಲ್ಕನೆಯ ಮನು ಉತ್ತಮನ ತಮ್ಮನಾದ ತಾಪಸನೆಂಬುವನು ಆ ಮನ್ವಂತರದಲ್ಲಿ ನಾಸತ್ಯ ದಸ್ರರೆಂಬ-ಅಶ್ವಿನೀದೇವತೆಗಳ ಪೈಕಿ, ನಾಸತ್ಯನೆಂಬುವನು ವಿಶಿಖನೆಂಬ ಹೆಸರಿನಿಂದ ಹುಟ್ಟಿ,ಇಂದ್ರಪದವಿಯನ್ನು ಹೊಂದಿದನು- ಎಂದು ಇರುವುದು. ಆದರೆ, ದಾಸಾರ್ಯರು ತ್ರಿಶಿಖನೆಂದು ಹೇಳಿರುವರು.

ಹೆಸರು ವ್ಯತ್ಯಾಸವಾಗಲು ಕಾರಣವೇನೆಂದು ಆಕ್ಷೇಪಣೆ ಬರಹುದು.ಭಾಗವತ ಅಷ್ಟಮಸ್ಕಂಧದಲ್ಲಿ –"ಚತುರ್ಥ ಉತ್ತಮಭ್ರಾತಾ ಮನುನಾಮ್ನಾ ಚ ತಾಪಸಃ ॥ ಸತ್ಯಕಾ ಹರಯೋ ವೀರಾ ದೇವಾಸ್ತ್ರಿಶಿಖ ಈಶ್ವರಃ ॥"– ನಾಲ್ಕನೆ ಮನು ಉತ್ತಮನ ತಮ್ಮನು ತಾಪಸನೆಂಬುವನು ಸತ್ಯಕಾಹರಿ, ವೀರ-ಮೊದಲಾದವರು ದೇವತಾಗಣಗಳು ತ್ರಿಶಿಖನೆಂದು ದೇವೇಂದ್ರನು– ಎಂದು ಹೇಳಿರುವರು. ಹೀಗೆ,ಭಾಗವತದಲ್ಲಿ ತ್ರಿಶಿಖನೆಂದೇ ಇರುವುದು. ದಾಸಾ-ರ್ಯರು ತ್ರಿಶಿಖನೆಂದೇ ಹೇಳಿರುವರು. ವಿಷ್ಣುರಹಸ್ಯದಲ್ಲಿ ಇದೇ ಪ್ರಕರಣದಲ್ಲಿ, ವಿಶಿಖನೆಂದು ಹೇಳಿದಿರುವುದರಿಂದ ಪುಸ್ತಕದಲ್ಲಿ ತಪ್ಪು ಇದ್ದರೂ ಇರಬಹುದು. ಅಥವಾ ಪಾಠಭೇದವಿದ್ದರೂ ಪುಸ್ತಕದಲ್ಲಿ ಇರಬಹುದು. ಅಥವಾ ಒಬ್ಬನಿಗೆ 2 ಹೆಸರು ಇದ್ದರೂ ಇರಬಹು. 5ನೆಯ ಮನ್ವಂತರದಲ್ಲಿ ಅಶ್ವಿನಿಗಳ ಪೈಕಿ, ದಸ್ರನೆಂಬುವನು ವಿಭು-ಎಂಬ ಹೆಸರಿನಿಂದ ಇಂದ್ರನಾಗಿದ್ದನು.

ಭಾಗವತಾಷ್ಟಮಸ್ಕಂಧ 5ನೆಯ ಅಧ್ಯಾಯದಲ್ಲಿ-"ಪಂಚಮೋರೈವತೋ ನಾಮಮನುಸ್ತಾಪಸಸೋದರಃ ॥ ವಿಭುರಿಂದ್ರಃ"–5ನೆಯವನು ತಾಪಸನ ತಮ್ಮನು ರೈವತನೆಂಬುವನು. ದೇವೇಂದ್ರನು ವಿಭು-ಎಂಬುವನು ಎಂದು ಹೇಳಿರುವರು. ಈ ಆಧಾರಗಳ ಮೇಲೆ,ವಿಭು ತ್ರಿಶಿಖರಿರ್ವರೂ ಪೂರ್ವೇಂ-ದ್ರರೆಂತಲೂ,ಅಶ್ವಿನೀ ಅವತಾರದವರೆಂತಲೂ ಸಿದ್ಧವಾಯಿತು. ಇವರುಗಳ ಪೈಕಿ, ವಿವಿದನೆಂಬ ಕಪಿಯಲ್ಲಿ, ಇಂದ್ರನಾವೇಶವಿರುವುದೆಂದು ನಿರ್ಣಯ 3ನೆಯ ಅಧ್ಯಾಯದ –"ಅಶ್ವಿನಾಚ ಬಭೂವತುಸ್ತೌ ವಿವಿದಶ್ಚ ಮೈಂದಃ ॥ ಬ್ರಹ್ಮೋ-

ದ್ಭೂತೌ ಪುನರೇವ ಸೂರ್ಯಾದ್ಘೋಟಕಃ ಸ್ತ್ರೀರೂಪತಸ್ತು ॥ ಅವೇಶ ಐಂದ್ರೋವರದಾನತೋ ಭೂತ್ತತೋ ಬಲೀಯಾನ್ ವಿವಿದೋಹಿ ಮೈಂದಾತ್. ॥34॥

ಅಶ್ವಿನೀದೇವತೆಗಳು ಪೂರ್ವದಲ್ಲಿ ಬ್ರಹ್ಮದೇವರ ಮಕ್ಕಳು. ಮತ್ತೂ ಸೂರ್ಯನ ದೆಶೆಯಿಂದ ಹೆಣ್ಣು ಕುದುರೆಯ ಮೂಗಿನ ದ್ವಾರದಿಂದ ಹುಟ್ಟಿದರು. ಅವರೇ, ರಾಮಾವತಾರದಲ್ಲಿ ಮೈಂದ- ವಿವಿದರೆಂದು ಕಪಿಗಳಾಗಿ ಹುಟ್ಟಿದರು. ಅವರಲ್ಲಿ ಚಿಕ್ಕವನಾದ ವಿವಿದನೆಂಬುವನಲ್ಲಿ ಇಂದ್ರನಾವೇಶವೂ, ವರಬಲವೂ ಇದ್ದುದರಿಂದ,ಮೈಂದನಕಿಂತಲೂ ವಿವದನು ಬಲಾಢ್ಯನಾಗಿದ್ದನು. ಎಂಬ ವಾಕ್ಯದಿಂದ ಸಿದ್ಧವಾಗುವುದು. ದ್ಯಾವಾ, ಪೃಥಿವೀ, ಋಭುಗಣದವರು, ವಿಷ್ವಕ್ಸೇನ, ವಿಘ್ನೇಶ, ಕುಬೇರ,-ಮೊದಲಾದವರು ಮಿತ್ರನಿಗಿಂತಲೂ ಸ್ವಲ್ಪ ಕಮ್ಮಿಯೆಂದು ತಾತ್ಪರ್ಯ. ॥34॥

**೩. ಭಾವದರ್ಪಣ :-**

ಅಶ್ವಿನೀದೇವತೆಗಳ ವಿವರ ಹೇಳುತ್ತಾರೆ. -"ಇಂದ್ರಯುಗ್ವಿವಿದೋ ಮೈಂದೋ ನಕುಲಃ ಸಹದೇವಕಃ । ತ್ರಿಶಿಖೋ ವಿಭುರಿತ್ಯೇತೇ ಅಶ್ವಿನೌ ಪರಿಕೀರ್ತಿತಾ"-ಎತಿ । ಪೃಥ್ವಾದಿಗಳು ಮಿತ್ರಗೆ ಕಿಂಚಿದಧಮರೆಂದು ಹೇಳುತ್ತಾರೆ. ದ್ಯಾವಾಪಿತಿ. -"ದ್ಯಾವಾಪೃಥಿವ್ಯೌ ಋಭವಃ ಪಿತ್ರೂಣಾಂ ಪತಯಸ್ತಥಾ । ವಿಘ್ನೇಶಪ್ರಮುಖಾಃ ಸರ್ವೇ ಮಿತ್ರಾತ್ಕಿಂಚಿದ್ಗುಣಾಧಮಾ"-ಇತಿ ತಾರತಮ್ಯೋಕ್ತೇಃ. ॥34॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-**

'ವಿವಿದ'-ಇತಿ ॥ -"**ಅಶ್ವಿನೌ ತೌ ಬಭೂವತುಃ** ||"-ತಾ ವಿವಿದಶ್ಚ ಮೈಂದಃ ॥ ತತ್ರ ಕನೀಯಸಃ ತು -"ಆವೇಶಃ ಐಂದ್ರಃ ವರದಾನತಃ ಅಭೂತ್ ತತೋ ಬಲೀಯಾನ್ ವಿವಿದೋ ಹಿ ಮೈಂದಾತ್ ॥"-'ಇವರೊಳು

ವಿವಿದೇ ॥ ಇತೀಕ್ಷಂತ್ಯಾಃ ಕಾಂತಾವಶ್ವಿಸೌ ತೌ ಶೀಘ್ರಂ ಪ್ರಾಪ್ತೌ ಪುತ್ರಕೌ ತ್ವತ್ಸುತೌ ॥ ತಾವೇವ ದೇವೌ ನಕುಲಃ ಪೂರ್ವಜಾತಃ ಸಹದೇವೋಽ ಥೋತ್ ಪಶ್ಚಿಮಸ್ತೌ ಇತಿ ॥ ತ್ರಿಶಿಖ ವಿಭೂ ಚತುರ್ಥಪಂಚಮೇಂದ್ರೌ ॥ ದ್ಯಾವಾ ಪೃಥಿವ್ಯೌ ॥ ಋಭುರಿತ್ಯೇಕೋ ಗಣಃ ॥ ವಿಷ್ವಕ್ಸೇನಃ ವಾಯುಜಃ ಶೇನ ತುಲ್ಯಃ ॥ ಅಯಂ ಹರಿಪಾರ್ಷದಃ. ॥34॥

## ಕನ್ನಡಾರ್ಥ

ವಿವಿದ, ಮೈಂದ, ನಕುಲ, ಸಹದೇವ, ವಿಭು, ತ್ರಿಶಿಖ,-ಇವು ಅಶ್ವಿನೀ ದೇವತೆಗಳ ಅವತಾರಗಳು. ನಕುಲ, ಸಹದೇವರು ಪಾಂಡುರಾಜನ ಪುತ್ರ-ರೆಂದು ಪ್ರಸಿದ್ಧವಿದೆ. ವಿವಿದ, ಮೈಂದವರಿಬ್ಬರು ಕಪಿಗಳು, ತ್ರೇತಾಯುಗ ದಲ್ಲಿ ಶ್ರೀರಾಮಸೇವಾರ್ಥವಾಗಿ ಜನಿಸಿದವರು. ಚಿಕ್ಕವನಾದ ಮೈಂದನಿ-ಗಿಂತಲೂ ವಿವಿದನು ಹೆಚ್ಚು ಬಲಿಷ್ಠನು. ವಿವಿದನಲ್ಲಿ ಇಂದ್ರನ ಆವೇಶವೂ ವರ ಬಲವೂ ಇದ್ದುದರಿಂದ, ಅವನು ಅತಿ ಬಲಾಢ್ಯನಾಗಿದ್ದನು— ಎಂಬ ಕಥೆಯು ತಾತ್ಪರ್ಯ ನಿರ್ಣಯದಲ್ಲಿ ಉಕ್ತವಾಗಿರುತ್ತದೆ. ಕುಂತೀದೇವಿಯಲ್ಲಿ ಒಂದೇ ಕಾಲದಲ್ಲಿ ಇಬ್ಬರು (ಅವಳಿ) ಮಕ್ಕಳಾಗುವ, ಇಚ್ಛೆಯಿಂದ, ಯಾವಾಗಲೂ ಕೂಡಿಯೇ ಇರುವ, ಕೂಡಿಯೇ ಅವತರಿಸುವ ಅಶ್ವಿನೀದೇವತೆಗಳನ್ನು ಮಂತ್ರ ದಿಂದ ಜಪಿಸಿ ಕರೆದಳು. ಕೂಡಲೇ, ಅಶ್ವಿನೀದೇವತೆಗಳು ಅವಳಲ್ಲಿ ಪುತ್ರರಾಗಿ ಜನಿಸಿದರು. ಅವರೇ ನಕುಲ ಸಹದೇವರು. ಅವರಲ್ಲಿ ಮೊದಲನೆಯವನು ನಕುಲನು. ಅನಂತರದವನು ಸಹದೇವನು. ತ್ರಿಶಿಖ ಹಾಗೂ ವಿಭು ಇವರಿ-ಬ್ಬರು ಕ್ರಮದಿಂದ ನಾಲ್ಕನೆಯ ಹಾಗೂ ಐದನೆಯ ಮನ್ವಂತರಗಳಲ್ಲಿ ಇಂದ್ರ-ಪದವಿಯಲ್ಲಿದ್ದವರು. ಆಗ ಇಂದ್ರರಾಗಿದ್ದರು.

-'ಋಭು'-ಎಂಬುದೊಂದು ದೇವತಾಗಣವು. ವಿಷ್ವಕ್ಸೇನನು ವಾಯು ಪುತ್ರನು. ಆಕಾಶಾಭಿಮಾನಿಯಾದ ಗಣೇಶನಿಗೆ ಸಮಾನನು. ಪರಮಾತ್ಮನ ಪಾರ್ಷದನು. ॥34॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :-**

ವಿವಿದ–ಮೈಂದರೆಂಬ ಕಪಿಗಳು, ನಕುಲ–ಸಹದೇವರು, ವಿಭುವೆಂಬ ಅರಸು, ತ್ರಿಶಿಖನೆಂಬ ಅರಸು, ಸಹ ಅಶ್ವಿನೀದೇವತೆಗಳ ಅವತಾರಗಳು. ಈ ವಿಭು–ತ್ರಿಶಿಖರಲ್ಲಿ ದಿವಿಪನೆಂಬ ಇಂದ್ರಾವೇಶವು ಸದಾ ಇರುವುದು. ದ್ಯಾವಾ–ಪೃಥಿವೀ-ಎಂಬ ಭೂಮ್ಯಂತರಿಕ್ಷ ದೇವತೆಗಳು, ಋಭುವೆಂಬ ದೇವತೆ, ವಾಯು ಪುತ್ರ ವಿಷ್ವಕ್ಸೇನ, ಉಮಾಪುತ್ರ ವಿಘ್ನೇಶ, ಧನಪನೆಂಬ ಕುಬೇರ ಮೊದಲಾದವರು ಮಿತ್ರನೆಂಬ ಸೂರ್ಯನಿಗಿಂತ ಕಿಂಚಿದಧಮರೆನಿಸಿಕೊಳ್ಳುವರು. ॥34॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಅಶ್ವಿನೀದೇವತೆಗಳ ಅವತಾರ ವಿಚಾರ ತಿಳಿಸುತ್ತಾರೆ. **ನಾಸತ್ಯ ಮತ್ತು ದಸ್ರ**-ಎಂಬ ಹೆಸರಿನ ಅಶ್ವಿನೀದೇವತೆಗಳು ಅವಳಿ ಜವಳಿಗಳು. ದೇವತೆಗಳ ವೈದ್ಯರು. ನಾಸಿಕೇಂದ್ರಿಯಕ್ಕೆ ಅಭಿಮಾನಿಗಳು. ಗಂಧಗ್ರಾಹಕರು.

ಸೂರ್ಯಪತ್ನಿಯಾದ ಸಂಜ್ಞಾದೇವಿ ಕುದುರೆಯ ರೂಪದಿಂದಿದ್ದಾಗ, ಸೂರ್ಯನಿಂದ ಜನಿಸಿದ ಅವಳಿ ಮಕ್ಕಳು. ಮಹಾರೂಪವಂತರು. ದೇವತೆಗಳಲ್ಲಿ ಶೂದ್ರವರ್ಣಕ್ಕೆ ಸೇರಿದವರು. ಕುದುರೆ–ಅಶ್ವ ಸಂಬಂಧೀ. ಇದರಿಂದ ಅಶ್ವಿನೀದೇವತೆಗಳೆಂದು ನಾಮಾಂತರ.

2. ತ್ರೇತಾಯುಗದಲ್ಲಿ ಶ್ರೀಹರಿಯ ಆಜ್ಞೆಯಂತೆ, ಶ್ರೀರಾಮನಸೇವೆಗೋಸ್ಕರ, ಅಶ್ವಿನೀದೇವತೆಗಳು-**ವಿವಿದ ಮತ್ತು ಮೈಂದ**–ಎಂಬ ಹೆಸರಿನ ಅವಳೀ ವಾನರರಾಗಿ, ಅವತರಿಸಿದರು. ಮೈಂದನು ವಾನರವೈದ್ಯನಾದ ಸುಷೇಣನೆಂಬ ವಾನರನ ಮಗ. ವಾಲಿ ಪತ್ನಿಯಾದ ತಾರೆ ಮೈಂದನ ತಂಗಿ. ದ್ವಿವಿದ-ಈತನ ಒಡಹುಟ್ಟಿದವ. ರಾಮಾಯಣ ಯುದ್ಧದಲ್ಲಿ ವಜ್ರಮುಷ್ಟಿ, ಯೂಪಾಕ್ಷ-ಮೊದಲಾದ ರಾಕ್ಷಸರನ್ನು ಕೊಂದ, ದ್ವಿವಿದನು ಸುಷೇಣನ ಕಿರಿಯ

ಮಗ. ಅಂಗದನ ಸೋದರಮಾವ. ಸುಗ್ರೀವನ ಮಂತ್ರಿಯಾಗಿದ್ದ. ಹತ್ತು ಸಾವಿರ ಗಜಬಲವುಳ್ಳವ. ನರಕಾಸುರನ ಆಪ್ತ ಸ್ನೇಹಿತನು. ಬಲರಾಮನಿಂದ ಹತನಾದ.

3. ದ್ವಾಪರಯುಗದಲ್ಲಿ ಪಾಂಡುರಾಜನ ದ್ವಿತೀಯ ಪತ್ನಿ ಮಾದ್ರಿ ದೇವಿಯಲ್ಲಿ ಅಶ್ವಿನೀದೇವತೆಗಳು ಅವರ ಮಂತ್ರಸಿದ್ಧಿಯಿಂದ ನಕುಲ ಮತ್ತು ಸಹದೇವ-ಎಂಬ ಹೆಸರಿನಿಂದ, ಅವಳಿ ಮಕ್ಕಳಾಗಿ ಅವತರಿಸಿದರು. ನಕುಲನು ಮೊದಲು, ನಂತರ, ಸಹದೇವನನ ಜನನ.

ನಕುಲನು ಅತ್ಯಂತ ರೂಪವಂತ. ಭೀಮಸೇನದೇವರು ನಕುಲನಲ್ಲಿ ಸೌಂದರ್ಯವಿಶೇಷದ ಅನುಗ್ರಹವನ್ನಿತ್ತರು. ಏಕರಥಿಕ. ಶಿಶುಪಾಲನ ಪುತ್ರಿ ರೇಣುಮತಿ-ಎಂಬುವಳು ನಕುಲನ ಪತ್ನಿ. ನಿರಮಿತ್ರನೆಂಬುವನು ನಕುಲನ ಪುತ್ರ. ಪಾಂಡವರು ವಿರಾಟನನಗರದಲ್ಲಿ ಧರ್ಮವೇಷದಲ್ಲಿದ್ದಾಗ (ಅಜ್ಞಾತ-ವಾಸ) ಜಯತ್ಸೇನನೆಂಬ ಹೆಸರಿನಿಂದ ಇದ್ದನು. ಸುಘೋಷವು ನಕುಲನ ಶಂಖ. ವೈಷ್ಣಣ ಧನುಸ್ಸನ್ನು ಹಿಡಿದು ಯುದ್ಧಮಾಡಿದ. 14ನೆಯ ದಿನದ ರಾತ್ರಿ ಯುದ್ಧದಲ್ಲಿ ಶಕುನಿಯನ್ನು ಸೋಲಿಸಿದ. 15ನೆಯ ದಿನದಲ್ಲಿ ದುರ್ಯೋಧನನನ್ನು ಪರಾಭವಗೊಳಿಸಿದ. 16ನೆಯ ದಿನದ ಯುದ್ಧದಲ್ಲಿ ಕರ್ಣನಿಂದ ಸೋತ. ಕರ್ಣನ ಪುತ್ರರಾದ ಸತ್ಯಸೇನ-ಚಿತ್ರಸೇನ-ಸುಶರ್ಮರೆಂಬುವರನ್ನು 18ನೆಯ ದಿನದ ಯುದ್ಧದಲ್ಲಿ ಕೊಂದ. ಈತ ದ್ರೌಪದಿಯಲ್ಲಿ ಶತಾನೀಕನೆಂಬ ಪುತ್ರನನ್ನು ಪಡೆದ.

ಸಹದೇವನು ನಕುಲನಿಗಿಂತ ಕಿರಿಯವನು. ದ್ರೌಪದಿಯಲ್ಲಿ ಶ್ರುತಸೇನನೆಂಬ ಪುತ್ರನನ್ನು ಪಡೆದ. ಮದ್ರದೇಶಾಧಿಪತಿ ಶಲ್ಯರಾಜನ ಪುತ್ರಿ ವಿಜಯ ಈತನ ಪತ್ನಿ. ಸುಹೋತ್ರನೆಂಬ ಪುತ್ರನು ವಿಜಯೆಯಲ್ಲಿ ಜನಿಸಿದ. ಅಜ್ಞಾತವಾಸದಲ್ಲಿ ತಂತ್ರೀಪಾಲನೆಂಬ ಹೆಸರು.

4. ತಾಪಸಮನ್ವಂತರದಲ್ಲಿ ನಾಸತ್ಯನೆಂಬ ಅಶ್ವಿನೀದೇವತೆಯು (**ತ್ರಿಶಿಖ ವಿಶಿಖ-ನಾಮಾಂತರ**)-ನೆಂಬ ಹೆಸರಿನಿಂದ ಇಂದ್ರಪದವಿಯನ್ನು ಆಳಿದನು.

ರೈವತನೆಂಬುವನು 5ನೆಯ ಮನುವು. ತಾಪಸನ ತಮ್ಮನು. ಈ ಮನ್ವಂತರದಲ್ಲಿ ದಸ್ರನು, **ವಿಭು**—ಎಂಬ ಹೆಸರಿನಿಂದ ಇಂದ್ರಪದವಿಯನ್ನು ಆಳಿದನು.

ಇಂತು, ಅಶ್ವಿನೀದೇವತೆಗಳು (1) ತ್ರೇತೆಯಲ್ಲಿ ದ್ವಿವಿದ-ಮೈಂದರೆಂತಲೂ (2) ದ್ವಾಪರದಲ್ಲಿ ನಕುಲ-ಸಹದೇವರೆಂತಲೂ, ಮತ್ತು (3) ತಾಪಸ ಮತ್ತು ರೈವತ ಮನ್ವಂತರಗಳಲ್ಲಿ ತ್ರಿಶಿಖ-ವಿಭು-ಎಂಬ ಪೂರ್ವೇಂದ್ರರೆಂತಲೂ ಅವತರಿಸಿದರು. ದ್ವಿವಿದನಲ್ಲಿ ಇಂದ್ರನ ಆವೇಶವಿತ್ತು. (ದ್ವಿವಿದನಾವೇಶ). ಇದರಿಂದ ಚಿಕ್ಕನಾದ ಮೈಂದನಿಗಿಂತಲೂ ಬಲಾಢ್ಯನು. ಅಂತೆಯೇ, ನಕುಲನು ಸಹದೇವನಿಗಿಂತಲೂ, ತ್ರಿಶಿಖನು ವಿಭುವಿಗಿಂತಲೂ ಬಲಾಢ್ಯರು-ಇಂದ್ರನ ಆವೇಶಯುಕ್ತರಾಗಿದ್ದ ಕಾರಣದಿಂದ.

5. ವಾಯುಪುತ್ರ ವಿಷ್ವಕ್ಸೇನ (ಪವನಸುತ ವಿಷ್ವಕ್ಸೇನ)-ಪಾರ್ವತೀಪುತ್ರ ವಿಘ್ನೇಶ್ವರ (ಉಮಾಕುವರ ವಿಘ್ನಪ)--ಕುಬೇರ (ಧನಪ)-ಈ ಮೂವರೂ ಸಮಾನಕಕ್ಷಾಪನ್ನರು. ಆದರೆ, ಮಿತ್ರನಾಮಕ ಸೂರ್ಯನಿಗಿಂತ ಕಿಂಚಿತ್ ಅಧಮರು. ॥34॥

★★

## ಪದ್ಯ-೩೫

**ಮೂಲ:–**

ಪಾವಕಾಗ್ನಿ ಕುಮಾರನೆನಿಸುವ |
ಚಾವನರುಚಥ್ಯಮುನಿ ಚಾಕ್ಷುಷ |
ರೈವತ ಸ್ವಾರೋಚಿಷೋತ್ತಮ ಬ್ರಹ್ಮ ರುದ್ರೇಂದ್ರ ||
ದೇವ ಧರ್ಮನು ದಕ್ಷನಾಮಕ |
ಸಾವರಣಿ ಶಶಿಬಿಂದು ಪೃಥು ಪ್ರಿ |
ಯುವ್ರತನು ಮಾಂಧಾತ ಗಯನು ಕಕುಸ್ಥ ದೌಷ್ಯಂತಿ ||೩೫||

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಕರ್ಮಜರ ವಿಚಾರವನ್ನು ತಿಳಿಸುತ್ತಾರೆ. ||35||

**ಪ್ರತಿಪದಾರ್ಥ :–**

**ಪಾವಕಾಗ್ನಿ** = ಅಗ್ನಿದೇವರ ಜ್ಯೇಷ್ಠಪುತ್ರರಾದ ಪಾವಕನೆಂಬ ದೇವತೆ, **ಚ್ಯವನಋಷಿಪುತ್ರರಾದ ಚವನರು, ಉಚಿಥ್ಯಮುನಿ** = ಉಚ್ಚಿಥ್ಯಮುನಿಗಳು, **ಚಾಕ್ಷುಷ** = ಚಾಕ್ಷುಷಮನು, **ರೈವತ** = ರೈವತಮನು, **ಸ್ವಾರೋಚಿಷ** = ಸ್ವಾರೋಚಿಷಮನು, **ಉತ್ತಮ** = ಉತ್ತಮಮನು, **ಬ್ರಹ್ಮ** = ಬ್ರಹ್ಮಸಾವರ್ಣೀಮನು, **ರುದ್ರ** = ರುದ್ರಸಾವರ್ಣೀ ಮನು, **ಇಂದ್ರ** = ಇಂದ್ರ ಸಾವರ್ಣೀ ಮನು, **ದೇವ** = ದೇವ ಸಾವರ್ಣೀ ಮನು, **ಧರ್ಮನು** = ಧರ್ಮಸಾವರ್ಣೀ ಮನು, **ದಕ್ಷನಾಮಕ** = ದಕ್ಷನಾಮಕನು, **ಸಾವ**

**ರಣಿ**= ಸಾರ್ವಣೀ ಮನು,-ಈ 11 ಮಂದಿ ಮನುಗಳು. **ಪೃಥು** = ಪೃಥು ಚಕ್ರವರ್ತಿ, **ಶಶಿಬಿಂದು** = ಶಶಿಬಿಂದುರಾಜ, **ಪ್ರಿಯವ್ರತನು** = ಪ್ರಿಯ ವ್ರತರಾಜ, **ಮಾಂಧಾತ** = ಮಾಂಧಾತ ಚಕ್ರವರ್ತಿ, **ಗಯನು** = ಗಯ ರಾಜನು, **ಕಕುಸ್ಥ** = ಕಕುಸ್ಥರಾಜ, **ದೌಷ್ಯಂತಿ** = ದುಷ್ಯಂತನ ಪುತ್ರ ಭರತಚಕ್ರವರ್ತಿ. ॥35॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಕರ್ಮಜರ ವಿಚಾರ ಹೇಳತಾರೆ.

ಅಗ್ನಿದೇವನಿಗೆ ಪುತ್ರ ಎನಿಸತಕ್ಕ ಪಾವಕನು, ಚ್ಯವನಪುತ್ರರಾದ ಚ್ಯವ ನರು, ಉಚಥ್ಯಮುನಿಗಳು, ಚಾಕ್ಷುಷಮನು, ರೈವತಮನು, ಸ್ವಾರೋಚಿಷ ಮನು, ಉತ್ತಮಮನು, ಬ್ರಹ್ಮಸಾವರ್ಣಿಮನು, ರುದ್ರಸಾವರ್ಣಿಮನು, ಇಂದ್ರಸಾವರ್ಣಿಮನು, ದೇವಸಾವರ್ಣಿಮನು, ಧರ್ಮಸಾವರ್ಣಿಮನು, ದಕ್ಷ ನಾಮಕಮನು, ಸಾವರ್ಣಿಮನು ಹನ್ನೊಂದು ಮನುಗಳು. ಉಳಿದ ಮೂರು ಮನುಗಳು ಋಡಿತ್ಯಾಬೋಂದಾರ್ಥ ಅಧ್ಯಾಹಾರ ಮಾಡಿ ಹೇಳತೇವೆ. ತಾಪಸ ಮನು, ಸ್ವಾಯಂಭುವಮನು, ವೈವಸ್ವತಮನು–ಅಂತೂ ಮನುಗಳು ಹದಿ- ನಾಲ್ಕು ಮಂದಿ. ಈ ಹದಿನಾಲ್ಕು ಮಂದಿಯೊಳಗೆ ಅನ್ಯಕಕ್ಷಕ್ಕೆ ಸೇರಿದ ಮನು ಗಳ ವಿವರ.—

| ಮನುಗಳು. | ಕಕ್ಷ. |
|---|---|
| ತಾಪಸಮನು, ಇವನು ಸಾಕ್ಷಾತ್ ಗುಣಪೂರ್ಣನಾದ ಪರಮಾತ್ಮ. | 1. |
| ಸ್ವಾಯಂಭುವಮನು. | 10. |
| ವೈವಸ್ವತಮನು. | 16. |

ಉಳಿದ ಹನ್ನೊಂದು ಮಂದಿ ಪೂರ್ವೋಕ್ತ ಮನುಗಳು 19ನೇ ಕಕ್ಷೆಕ್ಕೆ ಸೇರಿದವರು. ಪೃಥು ಚಕ್ರವರ್ತಿ, ಪ್ರಿಯವ್ರತರಾಜನು, ಮಾಂಧಾತರಾಜನು, ಗಯರಾಯನು, ಕಕುಸ್ಥರಾಯನು, ದೌಷ್ಯಂತಿರಾಯನು, ಶಶಿಬಿಂದುರಾಯನು. ॥35॥

## ೨. ಭಾವಪ್ರಕಾಶಿಕೆ :-

ಈ ಪದ್ಯದ ತಾತ್ಪರ್ಯವನ್ನು 38ನೆಯ ಪದ್ಯದ ಜೊತೆಯಲ್ಲಿ ಕೊಟ್ಟಿದೆ. ॥35॥

## ೩. ಭಾವದರ್ಪಣ :-

ಈಗ ಅಗ್ನಿಗೆ ಕಡಿಮೆಯಾದ ದೇವತೆಗಳ ಹೆಸರು ಹೇಳುತ್ತಾರೆ- ಪಾವಕೇತಿ. ಪಾವಕ-ಎಂದರೆ, ಅಗ್ನಿಗೆ ಒರೆಯುಗ ಎಂಬರ್ಥ. -"ಪಾವಕಾಗ್ನೇಃ ಪ್ರಥಮಜಃ ಉಚಥ್ಯಶ್ಚ್ಯಾವನಸ್ತಥಾ । ರೈವತಶ್ಚಾಕ್ಷುಷಶ್ಚೈವ ಸ್ವಾರೋಚಿಷ ಉತ್ತೋತ್ತಮಃ । ಸಾವರ್ಣೀ ಬ್ರಹ್ಮಸಾವರ್ಣಿಃ ರುದ್ರಸಾವರ್ಣಿರೇವಚ । ದೇವೇಂದ್ರ ದಕ್ಷಧರ್ಮಾದಿ ಸಾವರ್ಣ್ಯ ಪಿತ್ರ ಸಪ್ತಕಂ । ಕಾರ್ತವೀರ್ಯ ಪೃಥುಶ್ಚೈವ ಶಶಿಬಿಂದುಃ ಪ್ರಿಯವ್ರತಃ । ದೌಷ್ಯಂತಿರ್ಭರತಶ್ಚೈವ ಕಕುಸ್ಥೋಗಯ ಏವ ಚ ವೃಷಭಾದ್ಧರಿಣಾದ್ವಿಪ್ರಾತ್ರಿಜನ್ಮಾ ಭರತಸ್ತಥಾ । ಮಾಂಧಾತೇತ್ಯಾದಿ ರಾಜಾನೋ ವಿಷ್ಣ್ವಾವೇಶಯುತಾಃ ಸದಾ । ಬಲಿರದ್ಭುತಶಂಭೂಚ ವಿಧೃತಶ್ಚ ಸ್ವತೃಧಾಮಕಃ । ದಿವಸ್ಪತಿ ಶುಚಿಶ್ಚೈವ ಗಂಧರ್ವೇಷ್ವಷ್ಟಕಂ ತಥಾ। ಬಲ್ಯಾದ್ಯಾಃ ಕಾರ್ತವೀರ್ಯಾದ್ಯಾ ಕರ್ಮದೇವಾಃ ಪ್ರಕೀರ್ತಿತಾಃ । ಪಾವಕಾದ್ಯಾಃ ಕರ್ಮಜಾಶ್ಚ ವಹ್ನೇಃ ಶತಗುಣಾಧಮಾಃ । ವಿಘ್ನೇಶಾದಧಮಾಃ ಪ್ರೋಕ್ತಾಃ ಪರ್ಜನ್ಯಾದುತ್ತಮಾಮತಾ"—ಇತಿ ಬೃಹತ್ತಾರತಮ್ಯೋಕ್ತೇಃ । ಪರ್ಜನ್ಯಾಖ್ಯ ಸೂರ್ಯನೇ ಶರಭನಾಮಕ ಕಪಿಯಾಗಿ ಹುಟ್ಟಿರುತ್ತಾನೆಂದು ಹೇಳುತ್ತಾರೆ. ಶರಭೇತಿ. -"ಶರಭೋಕರ್ಣೇಷು ಪರ್ಜನ್ಯೋ ದೇವಕೀ ಶಾಮಲಾಪ್ಯರಾ । ಚಂದ್ರಸ್ತ್ರೀ ರೋಹಿಣೀಚೈವ ಸೂರ್ಯಭಾರ್ಯಾಚ ಸಂಜ್ಞಕೇತ್ಯುಕ್ತೇಃ"॥- ॥35॥ ॥36॥ ॥37॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ತತ್ರ ಸ್ಥಿತಮೇಕಮಾಹ .'**ಪಾವಕ**'–ಇತಿ ॥ ಅಗ್ನಿಜಃ ॥ ಸಾವರ್ಣಿ ಪದಂ ಪೃಥಗಸ್ತ್ವಯಿ ॥ ಪಾವಕಃ ಪಾವಮಾನಿಶ್ಚೇತ್ಯುಕ್ತಾಗ್ನಿ ಜ್ಯೇಷ್ಠಪುತ್ರಃ ॥ ವಾಯೋಃ ಸುತಃ ಮರುತ್ (ತಸ್ಮಾದಗ್ನಿಃ) ಪಾವಕಾಖ್ಯಃ ಇತ್ಯುಕ್ತೇಃ ಮರು–ಸ್ಸೈಲ್ಯಮ್ ॥ ಉಚಥ್ಯ ಚ್ಯಾವನಾ ಋಷೀ ॥ ತದಪರಮನೂನ್ ಅಪ –'**ಚಾಕ್ಷುಷ**'–ಇತಿ ॥ ಚಾಕ್ಷುಷ ಇತ್ಯತ್ರ ಉಚಥ್ಯ ಇತ್ಯತ್ರ ಚ –"ಅಶ್ವಿಪಶ್ಚಾದನ್ಯೇ ತತೋವರಾಃ ॥"–'**ಅನ್ಯೇ**'–ಉಕ್ತ ಮನುಭ್ಯಃ ಅನ್ಯೇ ಮನವಃ ॥ –"**ತೇ ಅಶ್ವಿಭ್ಯಃ ಪಶ್ಚಾತ್**"-ಇತಿ ತಟ್ಟೀಕಾ ॥ ಚ್ಯಾವನೋ ಚಥ್ಯವೈನಾಸ್ತ ಶಶಿಬಿಂದುಶ್ಚ ಹೈಹಯಃ ॥ ತದ್ವಚ್ಚ ವಿಪ್ರರಾಜನ್ಯ ವಿಶೇಷೋತ್ರಾಪಿ ಕಶ್ಚನ॥ ತದ್ವತ್ ಪ್ರಿಯವ್ರತಶ್ಚಾಪಿ ಕಾರ್ತವೀರ್ಯ ಪೃಥುಶ್ಚೈವ ದೌಷ್ಯಂತಿಃ ॥ ಹರಿಂ ಚವನತೇ ವಶೀಕರೋತಿ ಇತಿ ಚ್ಯವನಃ. ॥

ಉಚಯೇತಿ ಹರಿಂ ಪ್ರಾಹುಃ ಉಚಯೇತಿ ಚ ತದ್ವಿದಃ ॥ ತಥಾಪಯುತಿ ಯಸ್ಮಾತ್ ಸಃ ಉಚಥ್ಯಃ ॥ ರೈತು ದ್ರವ್ಯಂ ಚ ಸಂಪ್ರೋಕ್ತಂ ಹರೇರರ್ಪಣಾದ್ಯೈವೇತಿ ರೈವತಃ ॥ ಚಕ್ಷುಷ್ಯಂತರ್ಗತಂ ವಿಷ್ಣುಂ ವಿಜಾನನ್ ಚಾಕ್ಷುಷಃ॥ ಹರಿಜ್ಞಾನೇ ಸದಾ ಸ್ವಾವರಾತ್ ಉತ್ತಮತ್ವಾತ್ ತಥಾ ॥ ಸ್ವತಂತ್ರಂ ಚ ಹರಿಂ ವೀಂದ್ರಂ ವ್ಯಜಾನಾತ್ ರೋಚಿಷಾ ಸದಾ ॥ ಸ್ವಾರೋಚಿಷಃ ॥ ಉತ್ತಮಾನಂದಪೂರ್ಣಾಂ ಹರಿಂ ವರ್ಣಯತೇ ಸದಾ ಬ್ರಹ್ಮಸಾವರ್ಣಿಃ ॥ ರುಕ್ ರುಕ್ಮಂ ದ್ರಃ ತತ್ಸ್ವರೂಪಂ ಹರಿಂ ವರ್ಣಯತೇ ಇತಿ ರುದ್ರಸಾವರ್ಣಿಃ ॥ ವೇದ ಪ್ರತಿಪಾದ್ಯೋತ್ತಮಂ ಸದಾ ವರ್ಣಯತೇ ಹರಿಂ ದೇವಸಾವರ್ಣಿಃ ॥ ಐಶ್ವರ್ಯಾತ್ ಉತ್ತಮಾನಂದಂ ಹರಿಂ ಸದಾ ವರ್ಣಯತೇ ಅತಃ ಚೇಂದ್ರಸಾವರ್ಣಿಃ॥ ನಿತ್ಯಮುತ್ತಮಹರಿಂ ವರ್ಣಯಿತುಂ ದಕ್ಷು ಅತಃ ದಕ್ಷಸಾವರ್ಣಿಃ ॥ ಇತಿ. ॥
॥35॥

## ಕನ್ನಡಾರ್ಥ

ಅಲ್ಲಿ ಇರುವ ಮನುವನನ್ನು ಹೇಳುತ್ತಾರೆ.—**'ಪಾವಕ'**-ಎಂಬ ಪದ್ಯ ದಿಂದ. ಪಾವಕನು ಅಗ್ನಿಪುತ್ರನು. **'ಸಾವರ್ಣಿ'**-ಎಂಬ ಪದವನ್ನು ಪ್ರತ್ಯೇಕವಾಗಿ ಅನ್ವಯಿಸಬೇಕು. –**'ಪಾವಕಃ ಪದವಮಾನಿಶ್ಚ'**-ಎಂಬುದಾಗಿ ಹೇಳಲ್ಪಟ್ಟ ಅಗ್ನಿಜ್ಯೇಷ್ಠಪುತ್ರನು ಪಾವಕನು. ವಾಯುಸುತನಾದ ಮರುತ್ತ-ನಿಂದ ಅಗ್ನಿಯು ಪಾವಕನು. ಆದುದರಿಂದ,ಪಾವಕನು ಮರುತ್ತನಿಂದ ಕಡಿಮೆಯವನು. ಉಚಥ್ಯ, ಚ್ಯವನರೆಂಬುವರು ಋಷಿಗಳು. ಇನ್ನುಳಿದ ಅವರ ಮನುಗಳನ್ನು ಹೇಳುತ್ತಾರೆ- ಚಾಕ್ಷುಷ ಎಂಬುದಾಗಿ. ಅಶ್ವಿನೀದೇವತೆಗಳ ನಂತರ, ಹಿಂದೆ ಹೇಳಿದ ಮನುಗಳನ್ನು ಬಿಟ್ಟು, ಉಳಿದ ಮನುಗಳು ಕಡಿಮೆಯವರು-ಎಂಬುದಾಗಿ ವಚನಗಳು ಇರುತ್ತವೆ.

ಚ್ಯವನ, ಉಚಥ್ಯ, ಪೃಥು, ಶಶಿಬಿಂದು, ಕಾರ್ತವೀರ್ಯ-ಇವರುಗಳು ಕರ್ಮಜರು. ಇದರಂತೆ,ಭರತ ಮುಂತಾದ ರಾಜರ್ಷಿಗಳು ಹರಿಯನ್ನು ವಶೀಕರಿಸುವುದರಿಂದ –**'ಚ್ಯವನ'**-ರೆಂದು ಹೆಸರು. –**'ಉಚ'**—ಹರಿಯನ್ನು, -**'ಥ್ಯ'**.ಹೊಂದುವವ, ಹಾಗೂ ಹೊಂದಿಸುವವ. ಆದುರಿಂದ–**'ಉಚಥ್ಯ'**—ಎಂದು ಹೆಸರು. ಹರಿಯಲ್ಲಿಯೇ-'ರೈ'-ದ್ರವ್ಯಗಳನ್ನು ಸಮರ್ಪಿಸುವುದರಿಂದ, –**'ರೈವತ'**–ಎಂದು ಹೆಸರು. ಕಣ್ಣಿನಲ್ಲಿರುವ ಭಗವದ್ರೂಪವನ್ನು ತಿಳಿಯುವುದರಿಂದ-**ಚಾಕ್ಷುಷ** ಎಂದು ಹೆಸರು. ಹರಿಜ್ಞಾನವಲ್ಲಿ ಸ್ವಾವರರಿಂದ ಉತ್ತಮನಾದುದರಿಂದ,ಉತ್ತಮನು ಸ್ವತಂತ್ರನಾದ ಹರಿಯನ್ನು ತಿಳಿದುಕೊಳ್ಳುವುದರಿಂದ, **ಸ್ವಾರೋಚಿಷನು.**

ಆನಂದಪೂರ್ಣನಾದ ಹರಿಯನ್ನು ವರ್ಣಿಸುವುದರಿಂದ,**ಬ್ರಹ್ಮಸಾವರ್ಣಿ.** ರುಕ್ಮಸ್ವರೂಪನಾದ ಹರಿಯನ್ನು ತಿಳಿಯುವುದರಿಂದ-**'ರುದ್ರಸಾವರ್ಣಿ'**-ವೇದ ಪ್ರತಿಪಾದ್ಯನಾದ ಉತ್ತಮಹರಿಯನ್ನು ಸದಾ ವರ್ಣಿಸುವುದರಿಂದ—**'ಇಂದ್ರ ಸಾವರ್ಣಿ'**-ನಿತ್ಯದಲ್ಲಿಯೂ ಪರಮಪುರುಷನನ್ನು ನೋಡಿವರ್ಣಿಸುವುದರಲ್ಲಿ ದಕ್ಷನಾದುದರಿಂದ–**'ದಕ್ಷಸಾವರ್ಣಿ'**-ಹೀಗೆ ಮನುನಾಮಗಳ ಅರ್ಥವನ್ನು ತಿಳಿಯಬೇಕು. ||35||

**ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :-**

ಪಾವಕನೆಂಬ ಅಗ್ನಿಪುತ್ರನು, ಚ್ಯವನಋಷಿ, ಉಚಿಥ್ಯಋಷಿ, ಚಾಕ್ಷುಷ ಮನು,ರೈವತಮನು, ಸ್ವಾರೋಚಿಷ, ಉತ್ತಮ, ಬ್ರಹ್ಮಸಾವರ್ಣೀ, ದೇವ-ಸಾವರ್ಣೀ, ಇಂದ್ರಸಾವರ್ಣೀ, ಧರ್ಮಸಾವರ್ಣೀನಾಮಕ ಮನುಗಳು, ಶಶಿಬಿಂದುರಾಯ, ಪೃಥುರಾಯ, ಪ್ರಿಯವ್ರತರಾಯ, ಮಾಂಧಾತರಾಯ, ಗಯರಾಯ, ಕಕುಸ್ಥರಾಯ, ದುಷ್ಯಂತನಮಗ ಭರತರಾಯ. ॥35॥

## ಸರ್ವವ್ಯಾಖ್ಯಾನಸಾರಸಂಗ್ರಹ

**1. ಪಾವಕಾಗ್ನಿ :-**

ಅಗ್ನಿದೇವರ ಜ್ಯೇಷ್ಠಪುತ್ರನಿಗೆ **ಪಾವಕ**-ನೆಂದು ಹೆಸರು.

**2. ಚ್ಯಾವನ :-**

ಚ್ಯವನ ಮಹರ್ಷಿಗಳ ಪುತ್ರನು **ಚ್ಯಾವನ**-ನಾಮಕನು. **ಚ್ಯವನಮಹರ್ಷಿಯು**-ವರುಣಪುತ್ರನಾದಭೃಗು ಮಹರ್ಷಿಯ ಮಗ. ಚ್ಯವನನ ಜನನಿ ಪುಲೋಮೆ. ಈತನು ಮಾತೃಗರ್ಭದಲ್ಲಿರುವಾಗ, ಒಬ್ಬ ರಾಕ್ಷಸನು ಪುಲೋಮೆಯನ್ನು ಅಪಹರಿಸಿದ. ಆಗ ಅವಳು ಭಯಗ್ರಸ್ತಳಾದಳು. ಕೂಡಲೇ ಗರ್ಭಸ್ರಾವವಾಯಿತು. ಶಿಶುವು ಗರ್ಭದಿಂದ ಚ್ಯುತವಾಯಿತು. ಇದರಿಂದ ಈತನಿಗೆ, **ಚ್ಯವನ**-ನೆಂಬ ಹೆಸರಾಯಿತು. ಆ ಶಿಶುವು ರಾಕ್ಷಸನನ್ನು ದುರುಗುಟ್ಟಿಕೊಂಡು ನೋಡಿತು. ತಕ್ಷಣನು ರಾಕ್ಷಸನು ಸುಟ್ಟು ಬೂದಿ-ಯಾದನು. ರಾಕ್ಷಸರ ಗುರುಗಳಾದ ಶುಕ್ರಾಚಾರ್ಯರೂ ಮತ್ತು ಚ್ಯವನನೂ ಸಹೋದರರು. ಚ್ಯವನನು ಮನುಪುತ್ರಿಯಾದ ಆರುಷಿ-ಎಂಬ ಕನ್ಯೆಯನ್ನು ಲಗ್ನವಾಗಿ, ಔರ್ವನೆಂಬ ಪುತ್ರನನ್ನು ಪಡೆದನು. ಅವನೇ ಚ್ಯವನಪುತ್ರನಾದ **ಚ್ಯಾವನು.**

**3. ಉಚಥ್ಯಮುನಿ :–**

ಈ ಮಹರ್ಷಿಯು ಅಂಗಿರಸನ ಪುತ್ರ. ಬೃಹಸ್ಪತಿ ಮತ್ತು ಸಂವರ್ತ ಇಬ್ಬರೂ ಈತನ ತಮ್ಮಂದಿರು. ಚಂದ್ರನ ಪುತ್ರಿ ಭದ್ರೆಯು ಈತನ ಪತ್ನಿ. ಇವನ ಪುತ್ರನೇ ದೀರ್ಘತಮ.

**4. ಚಾಕ್ಷುಷ :–**

ಚಾಕ್ಷುಷ ಮನ್ವಂತರದ ಮನು.

**5. ರೈವತ :–**

ರೈವತ ಮನ್ವಂತರದ ಮನು.

**6. ಸ್ವಾರೋಚಿಷ :–**

ಸ್ವಾರೋಚಿಷನೆಂಬ ಮನ್ವಂತರದ ಮನು.

**7. ಉತ್ತಮ :–**

ಉತ್ತಮನಾಮ ಮನ್ವಂತರದ ಮನು.

**8. ಬ್ರಹ್ಮ :–**

ಬ್ರಹ್ಮಸಾವರ್ಣೀ ಎಂಬ ಮನ್ವಂತರದ ಮನು.

**9. ರುದ್ರ :**

ರುದ್ರಸಾವರ್ಣೀ ಮನ್ವಂತರದ ಮನು.

**10. ಇಂದ್ರ :–**

ಇಂದ್ರಸಾವರ್ಣೀ ಮನ್ವಂತರದ ಮನು.

11. **ದೇವ :–**

ದೇವಸಾವರ್ಣೀ ಮನ್ವಂತರದ ಮನು.

12. **ಧರ್ಮ :–**

ಧರ್ಮಸಾವರ್ಣೀ ಮನ್ವಂತರದ ಮನು.

13. **ದಕ್ಷ :–**

ದಕ್ಷನೆಂಬ ಹೆಸರಿನ ಮನು.

14. **ಸಾವರಣೀ :–**

ಸಾವರ್ಣೀ ಮನು.

ಈ 11 ಮಂದಿ ಮನುಗಳು. ಪೂರ್ವೋಕ್ತ ಹೆಸರುಗಳು ಮನ್ವಂತರದ ಪದವಿಯ ಹೆಸರುಗಳೇ ಹೊರತು, ಪದಸ್ಥ ಮನುಗಳ ಹೆಸರುಗಳಲ್ಲ. ಬ್ರಹ್ಮ ದೇವರ ಹಗಲಿನಲ್ಲಿ 14 ಇಂದ್ರರು ಸ್ವರ್ಗಲೋಕವನ್ನೂ ಮತ್ತು 14 ಮನು-ಗಳು ಭೂಲೋಕವನ್ನೂ ಆಳುತ್ತಾರೆ.

**ವಿಶೇಷ ವಿಷಯ :–**

ಮನುಗಳ ಸಂಖ್ಯೆ = 14. ಇವರಲ್ಲಿ ತಾಪಸಮನು (ಶ್ರೀಹರಿಯ ಅವ ತಾರ). ಸ್ವಾಯಂಭುವಮನು ಮತ್ತು ವೈವಸ್ವತಮನು–ಈ ಮೂರು ಮಂದಿ ಉತ್ತಮ ಕಕ್ಷಕ್ಕೆ ಸೇರಿದವರು. ಈ ಮೂರು ಮಂದಿ ಹೋಗತಾ, ಉಳಿದ 11 ಮಂದಿ ಮನುಗಳ ವಿಚಾರ ಪ್ರಸಕ್ತಪದ್ಯದಲ್ಲಿ ಉಕ್ತವಾಗಿದೆ. ಇವರು 19 ನೆಯ ಕಕ್ಷಾಪನ್ನರು.

15. **ಶಶಿಬಿಂದು :–**

ಯದುವಂಶದ ಒಬ್ಬ ರಾಜರ್ಷಿ. ವೃಷ್ಣಿವಂಶದ ಚಿತ್ರರಥನ ಪುತ್ರನು. ಇವನಿಗೆ ಲಕ್ಷ ಮಂದಿ ಪತ್ನಿಯರು. ಒಬ್ಬೊಬ್ಬರು ಸಾವಿರ ಪುತ್ರರನ್ನು ಪಡೆ-

ದನು. ಈತನ ಪುತ್ರಿ ಬಿಂದುಮತಿಯು ಮಾಂಧಾತರಾಜನ ಪತ್ನಿಯು. ಚೈತ್ರರಥನೆಂಬುದು ಈತನ ನಾಮಾಂತರ.

## 16. ಪೃಥು ಚಕ್ರವರ್ತಿ :-

ವೇನರಾಜನ ಪುತ್ರನು. ವೇನನು ಪರಮನಾಸ್ತಿಕನಾಗಿದ್ದನು. ಆ ಕಾರಣದಿಂದ, ಭೂಮಿಯಲ್ಲಿ ಬೆಳೆಯಾಗದೇ, ಬಿತ್ತಿದ ಬೀಜಗಳನ್ನೆಲ್ಲಾ ಭೂಮಿಯೇ ನುಂಗುತ್ತಿತ್ತು. ಆಗ, ಪ್ರಜೆಗಳೆಲ್ಲರೂ ವೇನನ ಶರೀರವನ್ನು ಮಥನಮಾಡಿದರು. ಆಗ, ಪೃಥುರಾಜನು ಜನಿಸಿದನು. ಪೃಥುವು ಮಹಾಧರ್ಮಿಷ್ಠನು ಮತ್ತು ಭಗವದ್ಭಕ್ತನು. ಅವನು ಭೂಮಿಯನ್ನು ಪ್ರಾರ್ಥಿಸಿ, ಅದು ನುಂಗಿದ್ದ ಸಮಸ್ತವಸ್ತುಗಳನ್ನೆಲ್ಲಾ ಪ್ರಜೆಗಳಿಗೆ ಕೊಡಿಸಿ, ಸುಖವನ್ನುಂಟುಮಾಡಿದನು. ಈ ಕಾರಣದಿಂದ, ಭೂಮಿಗೆ ಪೃಥಿವೀ-(ಪೃಥುರಾಜನ ಮಗಳು)-ಎಂಬ ಹೆಸರುಂಟಾಯಿತು. ಇವನು ಚಾಕ್ಷುಷಮನ್ವಂತರದ ರಾಜನು. ಅರ್ಚಿಸ್-ಎಂಬಾಕೆ ಪೃಥುವಿನ ಪತ್ನಿ. ಪ್ರಾಚೀನಬರ್ಹಿಯು ಈತನ ಮೊಮ್ಮಗನು.

## 17. ಪ್ರಿಯವ್ರತ :-

ಸ್ವಾಯಂಭುವಮನುವಿನಿಂದ ಶತರೂಪಾ-ಎಂಬಾಕೆಯಲ್ಲಿ ಜನಿಸಿದ ಹಿರಿಯ ಪುತ್ರ. ಉತ್ತಾನಪಾದನು ಈತನ ತಮ್ಮನು. ಈತನ ಪತ್ನಿ-ವಿಶ್ವಕರ್ಮನ ಪುತ್ರಿ ಬರ್ಹಿಷ್ಮತಿ. ಇವನಿಗೆ ಅಗ್ನೀಧ್ರ-ಇತ್ಯಾದಿ 10 ಮಂದಿ ಪುತ್ರರೂ ಮತ್ತು ಊರ್ಜಸ್ವತೀ-ಎಂಬ ಕನ್ಯೆಯೂ ಇದ್ದರು. ಶುಕ್ರಾಚಾರ್ಯರು ಊರ್ಜಸ್ವತಿಯನ್ನು ಲಗ್ನವಾದರು. ಪ್ರಿಯವ್ರತರಾಜನು ಇನ್ನೊಬ್ಬ ಪತ್ನಿಯಲ್ಲಿ ಉತ್ತಮ-ತಾಪಸ-ರೈವತ-ಎಂಬ ಮೂವರು ಪುತ್ರರನ್ನು ಪಡೆದನು. ಆ ಮೂವರೂ ಕಾಲಾಂತರದಲ್ಲಿ ಮನ್ವಂತರಾಧಿಪತಿಗಳಾದರು. ಪ್ರಿಯವ್ರತನು ತನ್ನ ರಥದ ಚಕ್ರದ ರೇಖೆಯಿಂದ ಸಪ್ತಸಮುದ್ರಗಳನ್ನು ಸಪ್ತದ್ವೀಪಗಳನ್ನಾಗಿ ಪರಿವರ್ತಿಸಿ, ತನ್ನ ಹಿರಿಯ ಪತ್ನಿಯ ಏಳು ಮಂದಿ ಪುತ್ರರಿಗೆ, ಆ ಸಪ್ತದ್ವೀಪಗಳನ್ನು ಹಂಚಿದನು. ನಾರದಮಹಾಮುನಿಗಳಿಂದ ಉಪದಿಷ್ಟನಾಗಿ,

ವೈರಾಗ್ಯ ತಾಳಿ, ಮುಕ್ತನಾದ. ಪ್ರಿಯವ್ರತರಾಜನು ಹನ್ನೊಂದು ಅರ್ಬುದ ವರ್ಷಗಳ ಕಾಲ ಅಖಂಡಭೂಮಂಡಲವನ್ನು ಮಹಾವೈಭವದಿಂದ ಪರಿ– ಪಾಲಿಸಿದ.

## 18. ಮಾಂಧಾತ :–

ಸೂರ್ಯವಂಶದ ಯವನಾಶ್ವರಾಜನ ಪುತ್ರ. ಯವನಾಶ್ವನಿಗೆ ನೂರು ಮಂದಿ ಪತ್ನಿಯರು. ಆದರೂ, ಪುತ್ರ ಸಂತಾನವಾಗಲಿಲ್ಲ. ಭೃಗುಮಹರ್ಷಿಯ ನೇತೃತ್ವದಲ್ಲಿ ಪುತ್ರಕಾಮೇಷ್ಟಿ ಮಾಡಿದ. ಆ ಸಮಯದಲ್ಲಿ, ಭೃಗು ಒಂದು ಕಲಶದಲ್ಲಿ ಪುತ್ರಪ್ರದಗಳಾದ ಮಂತ್ರಗಳಿಂದ ಅಭಿಮಂತ್ರಿತವಾಗಿದ್ದ ಉದಕ ವನ್ನು ಯಜ್ಞವೇದಿಕೆಯ ಮೇಲಿಟ್ಟಿದ್ದ. ಯವನಾಶ್ವ ಪ್ರಮಾದದಿಂದ ಆ ಕಳಶೋದಕವನ್ನು ಕುಡಿದನು. ಅದರ ಪರಿಣಾಮವಾಗಿ, ಗರ್ಭಧಾರಣ ಮಾಡಿದ. ಕಾಲಕ್ರಮದಲ್ಲಿ ಶಿಶು ಜನಿಸಿತು, ಮಗು ಏನನ್ನು ಕುಡಿಯುವುದು ? (ಕಂ ಧ್ಯಾಸ್ಯಾಸಿ ?) ಎಂಬ ಪ್ರಶ್ನೆ ಬಂದಿತು. ಆಗ, ಇಂದ್ರನು ತನ್ನ ಬಲಗೈ ಹೆಬ್ಬೆಟ್ಟಿನಲ್ಲಿ ಅಮೃತರಸವನ್ನು ತುಂಬಿ ಅಲ್ಲಿಗೆ ಬಂದು, –"**ಮಾಂಧಾಸ್ಯತಿ**"- (ನನ್ನನ್ನು ಚೀಪುತ್ತಾನೆ) ಎಂದು ಹೇಳಿ, ಶಿಶುವಿಗೆ ಅಮೃತಪಾನ ಮಾಡಿಸಿದನು. ಆ ಕಾರಣದಿಂದ, ಶಿಶುವಿಗೆ **ಮಾಂಧಾತ**–ಎಂದು ಹೆಸರಾಯಿತು. ಈತನು ಯದುವಂಶದ ಶಶಿಬಿಂದು ರಾಜನ ಪುತ್ರಿ ಬಿಂದುಮತಿಯನ್ನು ಲಗ್ನವಾಗಿ, ಪುರುಕುತ್ಸ–ಅಂಬರೀಷ–ಮುಚುಕುಂದ–ಎಂಬ ಮೂವರು ಪುತ್ರರನ್ನು ಪಡೆ ದನು. ಮಾಂಧಾತನಿಗೆ 50 ಮಂದಿ ಪುತ್ರಿಯರು. ಅವರೆಲ್ಲರನ್ನೂ ಸೌಭರಿ ಮಹರ್ಷಿಗಳಿಗೆ ಕೊಟ್ಟು ಲಗ್ನ ಮಾಡಿದ. ಮಹಾಪರಾಕ್ರಮಸಂಪನ್ನನು. ನೂರು ರಾಜಸೂಯಯಾಗಗಳನ್ನೂ, ನೂರು ಅಶ್ವಮೇಧಗಳನ್ನೂ ಮಾಡಿದ ಮಹಾವೀರನು. ಸಾರ್ವಭೌಮನೆನಿಸಿಕೊಂಡನು.

## 19. ಗಯರಾಜ :–

ಪ್ರಿಯವ್ರತನ ವಂಶದ ಋಷಭದೇವನ ಸಂತತಿಯಲ್ಲಿ ಪೃಥುಷೇಣನೆಂಬ ರಾಜನಿಂದ ದ್ಯುತಿ ಎಂಬಾಕೆಯಲ್ಲಿ ಜನಿಸಿದವನು. ಈತನಿಗೆ ಚಿತ್ರರಥ–ಸುಗತಿ ಮತ್ತು ಅವರೋಧನನೆಂಬ-ಮೂವರು ಪುತ್ರರು ಜನಿಸಿದರು.

## 20. ಕಕುಸ್ಥ :-

ಇಕ್ಷ್ವಾಕುರಾಜನ ಮೊಮ್ಮಗನೂ, ಶಶಾದನ ಮಗನೂ ಆದ ಇಂದ್ರವಾಹ ನೆಂಬ ರಾಜನ ನಾಮಾಂತರ-"ಕಕುಸ್ಥ"-ನೆಂದು. ಒಮ್ಮೆ ದೇವತೆಗಳು ರಾಕ್ಷಸ ರೊಡನೆ ಹೋರಾಡುವಾಗ, ಈತನಿಗೆ ಇಂದ್ರನು ವಾಹನವಾದನು. ಇದರಿಂದ ಕಕುಸ್ಥನಿಗೆ -"ಇಂದ್ರವಾಹ"-ನೆಂಬ ಹೆಸರುಂಟಾಯಿತು. ಇಂದ್ರನು ವೃಷಭ ರೂಪವನ್ನು ಧರಿಸಿ, ಆ ವೃಷಭದ ಕಕುತ್ ಅಂದರೆ, ಡುಬ್ಬದಮೇಲೆ ಕುಳಿತು, ರಾಕ್ಷಸರೊಡನೆ ಹೋರಾಡಿ, ಅವರನ್ನು ಸೋಲಿಸಿದನು. ಈ ಕಾರಣದಿಂದ, ಈತನಿಗೆ -"ಕಕುಸ್ಥ"-ಎಂಬ ಹೆಸರು ಬಂದಿತು. "ಪುರಂಜಯ"-ನೆಂದೂ ಈತನ ನಾಮಾಂತರ.

## 21. ದೌಷ್ಯಂತಿ :-

ದುಷ್ಯಂತಮಹಾರಾಜನ ಮಗನಾದ ಭರತಚಕ್ರವರ್ತಿಯೇ-ದೌಷ್ಯಂತಿಯು. ಪುರೂವಂಶದ ಇಲಿಲರಾಜನ ಮಗನಾದ ದುಷ್ಯಂತನಿಂದ ಶಕುಂತಲೆಯಲ್ಲಿ ಜನಿ ಸಿದ ಪುತ್ರ. ವಿದರ್ಭರಾಜನ ಮೂವರು ರಾಜ ಪುತ್ರಿಯರು ಈತನ ಮಡದಿ ಯರು. ಭರತನಿಗೆ -"ಸರ್ವದಮನ"-ನೆಂಬುದು ನಾಮಾಂತರ. ದೀರ್ಘ ತಮನೆಂಬ ಮುನಿಯು ಭರತನ ರಾಜಪುರೋಹಿತನು. ಅವನ ನೇತೃತ್ವದಲ್ಲಿ ಗಂಗಾನದಿಯತೀರದಲ್ಲಿ 55 ಅಶ್ವಮೇಧಗಳನ್ನು ಮಾಡಿದನು. ॥35॥

★★

## ಪದ್ಯ-೩೬

**ಮೂಲ :-**

ಭರತ ಋಷಭಜ ಹರಿಣಜ ದ್ವಿಜ ।
ಭರತ ಮೊದಲಾದಖಿಳರಾಯರೊ ।
ಳಿರುತಿಹುದು ಶ್ರೀವಿಷ್ಣು ಪ್ರಾಣಾವೇಶ ಪ್ರತಿದಿನದಿ ॥
ವರ ದಿವಸ್ಪತಿ ಶಂಭುರದ್ಭುತ ।
ಕರೆಸುವನು ಬಲಿ ವಿಧೃತ ಧೃತಶುಚಿ ।
ನೆರೆ ಋಲೂ ಕೃತಧಾಮ ಮೊದಲಾದಷ್ಟಗಂಧರ್ವ ॥೩೬॥

**ಅವತರಣಿಕೆ :**

ಕರ್ಮಜದೇವತೆಗಳು ಮತ್ತು ಎಂಟು ಮಂದಿ ಗಂಧರ್ವರ ವಿಚಾರವನ್ನು ತಿಳಿಸುತ್ತಾರೆ. ॥36॥

**ಪ್ರತಿಪದಾರ್ಥ :-**

**ಭರತ** = ಭರತಚಕ್ರವರ್ತಿ, **ಋಷಭಜ** = ಋಷಭನಾಮಕ ಹರಿಯ ಪುತ್ರ, **ಹರಿಣಜ** = ಜಿಂಕೆಯ ಜನ್ಮ, **ದ್ವಿಜಭರತ** = ಭರತನೆಂಬ ಹೆಸರಿನ ವಿಪ್ರಜನ್ಮ- ಹೀಗೆ ಮೂರು ಜನ್ಮಗಳು. **ಮೊದಲಾದ** = ಭರತಚಕ್ರವರ್ತಿ ಮುಂತಾದ, **ಅಖಿಳರಾಯರೊಳು** = ಸಮಸ್ತರಾದ ನೂರು ಮಂದಿ ರಾಜ ರಲ್ಲಿ, **ಪ್ರತಿದಿನದಿ** = ನಿರಂತರವಾಗಿ, **ಶ್ರೀವಿಷ್ಣು** = ಲಕ್ಷ್ಮೀಪತಿಯಾದ ವಿಷ್ಣು ಮತ್ತು, **ಪ್ರಾಣಾವೇಶ** = ಮುಖ್ಯಪ್ರಾಣದೇವರ ಆವೇಶವು, **ಇರುತಿಹುದು** = ಇರುವುದು. **ವರ** = ಶ್ರೇಷ್ಠರಾದ, **ದಿವಸ್ಪತಿ** = ದಿವಸ್ಪತಿ ನಾಮಕನು, **ಶಂಭು** = ಶಂಭು ಎಂಬ ಹೆಸರಿನ, **ಅದ್ಭುತ** = ಅದ್ಭುತ

**ನಾಮಕನು, ಬಲಿ** = ಬಲಿಚಕ್ರವರ್ತಿ, **ವಿಧೃತ** = ವಿಧೃತನಾಮಕನು, **ಧೃತ** = **ಧೃತ** ಎಂಬ ಹೆಸರಿನ, **ಶುಚಿ** = ಶುಚಿನಾಮಕನು, **ಕೃತಧಾಮ** = **ಮತ್ತು** ಕೃತಧಾಮ ಎಂಬ ಹೆಸರಿನ, **ನೆರೆಖಲೂ** = ಈ ಸಮುದಾಯದ, **ಅಷ್ಟಗಂಧರ್ವ** = ಎಂಟು ಮಂದಿ ಗಂಧರ್ವರು(ಗಂಧರ್ವ ಶ್ರೇಷ್ಠರು) ಕರ್ಮಜ **ದೇವತಾಗಣದಲ್ಲಿಯೇ ಸೇರಿದವರು.** ॥36॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಇನ್ನೂ ಕರ್ಮಜರ ವಿಚಾರವನ್ನೇ ಹೇಳುತಾರೆ.

ಭರತರಾಜನು-ಋಷಭ ಎಂತ-ಉತ್ಪನ್ನನಾದವನು, ಜಂಕ ಜನ್ಮದಿಂದ ಉತ್ಪನ್ನನಾದವನು. ಬ್ರಾಹ್ಮಣ ಜನ್ಮದಿಂದ ಉತ್ಪನ್ನನಾದವನು,-ಈ ಪ್ರಕಾರ ಜನ್ಮಗಳ ಧರಿಸಿದ ಭರತರಾಜನೇ ಮೊದಲಾದ ಸಮಸ್ತರಾಯರು ನೂರು ಮಂದಿ ಯಲ್ಲಿ ಶ್ರೀದೇವೇರ, ಶ್ರೀಪರಮಾತ್ಮನ, ಪ್ರಾಣದೇವರ ಆವೇಶ, ಪ್ರತಿದಿನದಲ್ಲಿ ಅವಿಚ್ಛೇದವಾಗಿ ಇರೋದಾಗಿ ಇರತದೆ. ತರುವಾಯ, ಹದಿನಾಲ್ಕು ಮಂದಿ ಇಂದ್ರರ ವಿಚಾರ-ಶ್ರೇಷ್ಠನಾದ ದಿವಸ್ಪತಿನಾಮಕ ಇಂದ್ರ, ಶಂಭುನಾಮಕ ಇಂದ್ರ, ಅದ್ಭುತನಾಮಕ ಇಂದ್ರ,ಬಲಿಚಕ್ರವರ್ತಿ (ಇವನು ಇಂದ್ರ-ಎಂತ ಕರ ಸೋವನಾಗತಾನೆ). ವಿಧೃತನಾಮಕ ಇಂದ್ರ, ಧೃತಶುಚಿನಾಮಕ ಇಂದ್ರ, ಕೃತಧಾಮನಾಮಕ ಇಂದ್ರ. —ಈ ಏಳು ಮಂದಿಗಿಂತಲೂ ಉತ್ತಮರಾದವರ ಹೆಸರುಗಳನ್ನು ಅಧ್ಯಾಹಾರದಿಂದ ಹೇಳತೇವೆ.

| ಇಂದ್ರರು. | | ಕಕ್ಷ. |
|---|---|---|
| 1. ಯಜ್ಞನಾಮಕ-ಇವನು ಸಾಕ್ಷಾತ್ ಗುಣಪೂರ್ಣನಾದ ಪರಮಾತ್ಮ | | 1. |
| 2. ರೋಚನನಾಮಕ-ಇವರು ಜೀವೋತ್ತಮರಾದ ಪ್ರಧಾನವಾಯು ದೇವರು | | 3. |
| 3. ಸತ್ಯಜಿತುನಾಮಕ–ಇವನು ಯಮಧರ್ಮರಾಯ | | 12. |
| 4. ತ್ರಿಶಿಖನಾಮಕ–ಇವನು ನಾಸತ್ಯನು. | ಇವರು ಅಶ್ವಿನೀ | |
| 5. ವಿಭುನಾಮಕ–ಇವನು ದಸ್ರನು | ದೇವತೆಗಳು | 18. |
| 6. ಮಂದರದ್ಯುಮ್ನ | ಈ ಎರಡೂ ಶಚೀಪತಿ | |
| 7. ಪುರಂದರ | ಇಂದ್ರನ ಎರಡು ರೂಪಗಳು | 8. |

ಇದೇ ಹತ್ತೊಂಭತ್ತನೇ ಕಕ್ಷಕ್ಕೆ ಸೇರಿದವರು ಏಳು ಮಂದಿ. ಅಂತೂ,ಹದಿನಾಲ್ಕು ಮಂದಿ ಇಂದ್ರರು. ಯಜ್ಞನಾಮಕ ಪರಮಾತ್ಮನಾರಭ್ಯ ಪುರಂದರನ ವರೆಗೂ ಏಳು ಮಂದಿ ಇಂದ್ರರು ಅನ್ಯಕಕ್ಷದವರು. ಈ ಕಕ್ಷದವರಲ್ಲಿ, ಒಟ್ಟಾಗಿಯೂ, ನಿಶ್ಚಯವಾಗಿಯೂ ಗಂಧರ್ವರು ಎಂಟು ಮಂದಿ. ಅವರ ಹೆಸರುಗಳನ್ನು ಅಧ್ಯಾಹಾರದಿಂದ ಹೇಳುತೇವೆ. ಹಾಹಾನಾಮಕ ಗಂಧರ್ವ, ಹೂಹೂನಾಮಕ ಗಂಧರ್ವ, ಧೃತರಾಷ್ಟ್ರನಾಮಕ ಗಂಧರ್ವ, ತುಂಬರನಾಮಕ ಗಂಧರ್ವ, ಚಿತ್ರರಥ ಗಂಧರ್ವ, ವಿಶ್ವಾವಸುನಾಮಕ ಗಂಧರ್ವ, ಪರಾವಸುನಾಮಕ ಗಂಧರ್ವ, ವಿದ್ಯಾಧರನಾಮಕ ಗಂಧರ್ವ-ಅಂತೂ ಎಂಟು ಮಂದಿ ಗಂಧರ್ವರು. ಇವರ ಅವತಾರಗಳನ್ನು 39–40ನೇ ಶ್ಲೋಕಗಳಲ್ಲಿ ಹೇಳಿದ್ದಾರೆ. ಅವನ್ನು ಝಡಿತ್ಯಾ-ಬೋಧಾರ್ಥ ಇಲ್ಲಿ ಉದಹರಿಸುತೇವೆ :—

| | ಮೂಲಗಂಧರ್ವನಾಮ. | ಅವತಾರ. | ಆವೇಶ. |
|---|---|---|---|
| 1. | ಹಾಹಾ | ವಿರಾಟರಾಯ | ವಿವಹ ಮರುತ್ತನ ಆವೇಶ. |
| 2. | ಹೂಹೂ | ದ್ರುಪದ, ಸತ್ರ | ಆವಹ ಮರುತ್ತನ ಆವೇಶ. |
| 3. | ಧೃತರಾಷ್ಟ್ರ | ಧೃತರಾಷ್ಟ್ರ | ವಾಯುದೇವರ ಆವೇಶ. |
| 4. | ತುಂಬರ | ವಿರಾಧ, ಸಂಜಯ | ಉದ್ವಹ ಮರುತ್ತನ ಆವೇಶ. |
| 5. | ಚಿತ್ರರಥ | ಜನಮೇಜಯ | ತ್ವಷ್ಟೃನಾಮಕ ಸೂರ್ಯನ ಆವೇಶ. |
| 6. | ವಿಶ್ವಾವಸು | ಯುಧಾಮನ್ಯು | ವಿವಸ್ವಾನಾಮಕ ಸೂರ್ಯನ ಆವೇಶ. |
| 7. | ಪರಾವಸು | ಉತ್ತಮೌಜ | ಅರ್ಯಮನಾಮಕ ಸೂರ್ಯನ ಆವೇಶ. |

—ಅಪ್ಸರಸ್ತ್ರೀಯರ ವಿವರ—

| | | |
|---|---|---|
| 1. ಊರ್ವಶೀ. | 5. ತಿಲೋತ್ತಮಾ. | 9. ಪೂರ್ವಚಿತ್ತೀ. |
| 2. ಘೃತಾಚೀ. | 6. ಸುಕೇಶಿ. | 10. ಸಹಜನ್ಯಾ. |
| 3. ಮೇನಕಾ. | 7. ಮಂಜುಘೋಷಾ. | 11. ವಿಶ್ವಾಚೀ. |
| 4. ರಂಭಾ. | 8. ಪಿಂಗಳಾ. | 12. ತ್ರಿಜಟಾ. |

ಅಜಾನಜರ ಕಕ್ಷಗತ ಅಪ್ಸ-
ಇತ್ಯಾದಿ ನಾಮಾಂಕಿತರಾದ 12 ಮಂದಿ,
ತೊಂಭತ್ತೆರಡು ಮಂದಿ ಈ 19ನೇ ಕಕ್ಷದವರು.
ರರು, ನೂರು ಮಂದಿಯೊಳಗೆ,
ಅನಾಖ್ಯಾತಅಜಾನಜರಲ್ಲಿ 29ನೇ ಕಕ್ಷದವ
ಆದ್ದರಿಂದ, ಇಲ್ಲಿ ಸೇರಿಸಿ ಅದೆ.
ಕರ್ಮಜರಿಗೆ ಸಮಾನರಾದ್ದರಿಂದ,ಈ ಕಕ್ಷದಲ್ಲಿ
ರಾದ ಚಿರಪಿತೃಗಳು ಏಳು ಮಂದಿ,
ಸೇರಿಸಿ ಅದೆ. ಚಿರಪಿತೃಗಳು ಏಳು ಮಂದಿ. ॥36॥

೨. ಭಾವಪ್ರಕಾಶಿಕೆ :–

ಈ ಪದ್ಯದ ತಾತ್ಪರ್ಯವನ್ನು 38ನೆಯ ಪದ್ಯದ ಜೊತೆಯಲ್ಲಿ ಕೊಟ್ಟಿದೆ.

॥36॥

೩. ಭಾವದರ್ಪಣ :–

ಈ ಪದ್ಯದ ತಾತ್ಪರ್ಯವನ್ನು ಹಿಂದಿನ ಪದ್ಯದ ಜೊತೆಯಲ್ಲಿ ಕೊಟ್ಟಿದೆ.

॥36॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

'ಭರತ'–ಇತಿ ॥ ಋಷಭಾತ್–ಹರಿಣಾತ್–ವಿಪ್ರಾತ್ ತ್ರಿಜನ್ಮಾ ಭರತಃ ॥–"ಭರತ ತಥಾ॥"–ಶಶಿಬಿಂದುಶ್ಚ ಮಾಂಧಾತಾ ಕಕುತ್ಸ್ಥಾದ್ಯಾ ತಥಾಪರೇ ॥ ಸರ್ವೇತೇ ವಿಷ್ಣುನಾವಿಷ್ಟಾಃ ವಿಷ್ಣೋರ್ಭಿನ್ನಾಃ ತಥೈವ ಚ॥ ಶತಾವರಾಶ್ಚ ದೇವೇಭ್ಯಃ ಕರ್ಮದೇವಾಃ ಇತೀರಿತಾಃ ॥ ಕರ್ಮದೇವಗಣಾಃ ಅಷ್ಟಗಂಧರ್ವಾಃ. ॥36॥

## ಕನ್ನಡಾರ್ಥ

ಭರತ ಮಹಾರಾಜನಿಗೆ ಮೂರು ಜನ್ಮಗಳು. ಋಷಭನಾಮಕ ಹರಿ ಯಿಂದ ಜನನ. ಒಂದು ಸಲ ಚಿಗರೆಮರಿಯಾಗಿ ಹುಟ್ಟಿದುದು. ಎರಡನೆಯ ಸಲ ಆಂಗೀರಸನೆಂಬ ವಿಪ್ರನಲ್ಲಿ ಹುಟ್ಟಿದುದು. ಮೂರನೆಯ ಸಲ ಭರತ, ಶಶಿಬಿಂದು, ಮಾಂಧಾತಾ, ಕಕುಸ್ಥ-ಮುಂತಾದವರೆಲ್ಲರೂ ವಿಷ್ಣುವಿನ ಆವೇಶ ಯುಕ್ತರು. ವಿಷ್ಣುಭಿನ್ನರು. ಕರ್ಮಜದೇವತೆಗಳಿಗೆ ಸಮಾನರು. ಕರ್ಮಜ ದೇವತೆಗಳ ಗಣದಲ್ಲಿಯೇ ಅಷ್ಟಗಂಧರ್ವರು ಸೇರಿರುತ್ತಾರೆ. ॥36॥

೫. ಶ್ರೀಗುರುಹೃದಯ ಪ್ರಕಾಶಿಕೆ :–

ಹರಿಣಜನೆಂಬ ಜಿಂಕೆ ಜನ್ಮ, ದ್ವಿಜಭರತನೆಂಬ ಬ್ರಾಹ್ಮಣ ಜನ್ಮ–ಸಹಾ ಎರಡು ಜನ್ಮ ಉಳ್ಳ ಋಷಭಪುತ್ರ–ಭರತರಾಯ–ಮೊದಲಾದ ಈ ಮಹಾ

ರಾಜರುಗಳಲ್ಲಿ ಶ್ರೀವಿಷ್ಣು ಪ್ರಾಣಾವೇಶ ಸಹ ಸದಾ ಇರುವುವು. ಪರಶ್ರೇಷ್ಠನಾದ ದಿವಸ್ಪತಿ ಒಂದು, ಶಂಭು ಒಂದು, ಅದ್ಭುತ ಒಂದು, ಬಲಿ ಒಂದು, ವಿಧೃತ ಒಂದು, ಧೃತ ಒಂದು, ಶುಚಿ ಒಂದು, ಕೃತಧಾಮ ಒಂದು,— ಈ ಎಂಟೂ ಮಂದಿ ಗಂಧರ್ವಶ್ರೇಷ್ಠರು- ಎಂದು ಕರೆಸುವರು. ॥36॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಹರಿಯು **ಋಷಭ**-ನಾಮಕನಾಗಿ ಅವತರಿಸಿದನು. ಅವನಿಂದ **ಜಯಂತಿ**-ಎಂಬುವಳಲ್ಲಿ ಜನಿಸಿದ ಹಿರಿಯ ಪುತ್ರನೇ **ಭರತಚಕ್ರವರ್ತಿಯು.** **ಹೀಗೆ, ಭರತನಿಗೆ ಋಷಭಜ**-ಎಂದು ಒಂದನೆಯ ಜನ್ಮ.

2. ಪರಮವೈರಾಗ್ಯಶಾಲಿಯಾಗಿದ್ದ ಭರತನು ತನ್ನ ಬಾಳಿನ ಕೊನೆಯ ದಿನಗಳಲ್ಲಿ, ಆಪತ್ತಿನಲ್ಲಿದ್ದ ಒಂದು ಹೆಣ್ಣು ಜಿಂಕೆಯನ್ನು ಸಂರಕ್ಷಿಸಲು ಹೋಗಿ, ಆ ಹೆಣ್ಣು ಜಿಂಕೆಯು ಸಿಂಹದ ಘರ್ಜನೆಯಿಂದ ಗರ್ಭಸ್ರಾವದ ಪರಿಣಾಮವಾಗಿ ಜಿಂಕೆಮರಿಯನ್ನು ಹಾಕಿ, ಮರಣ ಹೊಂದಿತು. ಆ ಜಿಂಕೆಯ ಮರಿಯನ್ನು ಭರತನು ತನ್ನ ಆಶ್ರಮಕ್ಕೆ ತಂದು, ರಕ್ಷಿಸಿ ಪಾಲಿಸಿದನು. ಅದರ ಮೋಹ ಎಷ್ಟು ಬಲವತ್ತರವಾಗಿತ್ತೆಂದರೆ, ಒಂದು ಕ್ಷಣವೂ ಭರತನು ಆ ಮರಿಯನ್ನು ಅಗಲಿರಲಾರ. ಅದರ ಸ್ಮರಣೆಯಲ್ಲಿಯೇ ದೇಹತ್ಯಾಗ ಮಾಡಿದನು. ಅದರಿಂದ ಅವನಿಗೆ ಹೆಣ್ಣುಜಿಂಕೆ ಜನ್ಮ ಪ್ರಾಪ್ತವಾಯಿತು. ಇದು ಭರತನ ಎರಡನೆಯ ಜನ್ಮ (ಹರಿಣಜ).

3. ಸಂಸ್ಕಾರವಿಶೇಷದಿಂದ ಭರತನು ಹರಿಣ ಜನ್ಮ ನೀಗಿ, ಬ್ರಾಹ್ಮಣನಾಗಿ ಜನಿಸಿದನು. ಅವಧೂತಚರ್ಯೆಯಲ್ಲಿದ್ದ ಅವನೇ ಜಡಭರತನು. ಇದು ಭರತನ ಮೂರನೆಯ ಜನ್ಮ. (ದ್ವಿಜಭರತ).

ಹೀಗೆ ಭರತರಾಯನಿಗೆ ಮೂರು ಜನ್ಮಗಳು.

4. ಭರತರಾಯನಿಂದ ಮೊದಲು 100 ಮಂದಿ ಸಕಲರಾಜರಲ್ಲೂ ನಿರಂತರದಲ್ಲಿಯೂ, ಶ್ರೀವಿಷ್ಣುವಿನ ಹಾಗೂ ಮುಖ್ಯಪ್ರಾಣದೇವರ ಆವೇಶ ವಿರುವುದು. ಇವರೆಲ್ಲರೂ ಕರ್ಮಜದೇವತಾವರ್ಗಕ್ಕೆ ಸೇರಿದವರು.

5. (1) ದಿವಸ್ಪತಿ. (2) ಶಂಭು. (3) ಅದ್ಭುತ. (4) ಬಲಿ. (5) ವಿಧೃತ. (6) ಧೃತ. (7) ಶುಚಿ ಮತ್ತು (8) ಕೃತಧಾಮ–ಎಂಬ ಈ ಎಂಟುಮಂದಿ ಗಂಧರ್ವಶ್ರೇಷ್ಠರೂ ಸಹ- ಕರ್ಮಜದೇವತಾಗಣಕ್ಕೆ ಸೇರಿದ ವರು.

ಪೂರ್ವೋಕ್ತ 8 ಮಂದಿಯೂ ಇಂದ್ರರಾಗಿ, ಇಂದ್ರಪದವಿಯನ್ನು ಆಳಿದರು.

18 ಮಂದಿ ಇಂದ್ರರಲ್ಲಿ, (1) ಯಜ್ಞನಾಮಕ ಇಂದ್ರ (ಸಾಕ್ಷಾತ್ ಶ್ರೀಹರಿಯ ಅವತಾರ)–(2) ರೋಚನನಾಮಕ ಇಂದ್ರ (ವಾಯುದೇವರು), (3) ಸತ್ಯಜಿತುನಾಮಕ ಇಂದ್ರ (ಯಮಧರ್ಮರಾಯ) (4) ತ್ರಿಶಿಖಿನಾಮಕ ಇಂದ್ರ (ನಾಸತ್ಯನೆಂಬ ಅಶ್ವಿನೀದೇವತೆ), (5) ವಿಭುನಾಮಕ ಇಂದ್ರ (ಅಶ್ವಿನೀ ದೇವತೆ–ದಸ್ರನು) (6) ಮಂದರದ್ಯುಮ್ನನಾಮಕ ಇಂದ್ರ ಮತ್ತು (7) ಪುರಂದರನಾಮಕ ಇಂದ್ರ (ಇವೆರಡೂ ಶಚೀಪತಿ ಇಂದ್ರನ ರೂಪಗಳು).—ಈ 7 ಮಂದಿ-ಪೂರ್ವೋಕ್ತ 7 ಮಂದಿಗಳಿಗಿಂತ ಉತ್ತಮರು. ॥36॥

★★

## ಪದ್ಯ-೩೭

ನಿಪ ಕರ್ಮಜರು ವೈಶ್ವಾ ।
ಧಮ್ಮ್ಶತಗುಣದಿ ವಿಘ್ನೇ ।
ಕಿಂಚಿದ್ಗುಣ ಕಡಿಮೆ ಬಲಿಮುಖ್ಯ ಪಾವಕರು ॥
ಪರ್ಜನ್ಯಾಖ್ಯ ಮೇಘಪ ।
ಭಾರ್ಯಾ ಸಂಜ್ಞಾ ಶಾರ್ವರೀ ।
ಪತ್ನಿಯು ರೋಹಿಣೀ ಶ್ಯಾಮಲೆಯು ದೇವಕಿಯು॥೩೭॥

:—

ದೇವತೆಗಳ ವಿಚಾರ- ಪರ್ಜನ್ಯ- ಸಂಜ್ಞಾದೇವಿ-
ಮಲಾದೇವಿ- ಇವರುಗಳ ವಿಚಾರ ತಿಳಿಸುತ್ತಾರೆ. ॥37॥

:—

ಪ = ರಾಜರುಗಳೆಂದು ಕರೆಯಿಸುವ, **ಕರ್ಮಜರು** =
ಗಳು, **ವೈಶ್ವಾನರಗೆ ಅಧಮ** = ಅಗ್ನಿದೇವರಿಗೆ ಅಧಮರು.
ನೂರು ಗುಣದಿಂದಕಡಿಮೆ, **ವಿಘ್ನೇಶ್ವರಗೆ** = 18
ದ ಗಣಪತಿಗಿಂತ, **ಕಿಂಚಿದ್ಗುಣ ಕಡಿಮೆ** = ಒಂದು
ಕಡಿಮೆ, **ಬಲ ಮುಖ್ಯ** = ಬಲಚಕ್ರವರ್ತಿಯೇ ಮೊದ
), **ಪಾವಕರು** = ಅಗ್ನಿಪುತ್ರನಾದ ಪಾವಕನು, **ಶರಭ**
ವಾನರ, **ಪರ್ಜನ್ಯಾಖ್ಯ** = ಪರ್ಜನ್ಯನೆಂಬ ಸೂರ್ಯ
ನ್ಯಾವತಾರನು), **ಮೇಘಪ** = ಮೇಘಾಧಿಪತಿ ದೇವತಾ

**ತರಣಿಭಾರ್ಯೆರ್** = ಸೂರ್ಯನ ಪತ್ನಿಯಾದ, **ಸಂಜ್ಞೆ** = ಸಂಜ್ಞಾದೇವಿ **ಶಾರ್ವರೀಕರನ ಪತ್ನಿಯು** = ಚಂದ್ರನ ಪತ್ನಿಯಾದ, **ರೋಹಿಣೀ** = ರೋಹಿಣೀದೇವಿಯು, **ಶ್ಯಾಮಲೆಯು** = ಯಮಧರ್ಮರಾಯನ ಪತ್ನಿ ಶ್ಯಾಮಲಾದೇವಿ, **ದೇವಕಿಯು** = ಶ್ರೀಕೃಷ್ಣನ ಜನನಿ ದೇವಕೀ ದೇವಿಯು (ದೇವಕಿಯು ಶ್ಯಾಮಲಾದೇವಿಯರ ಅವತಾರ). ವರುಣ ಪತ್ನಿ ಗಂಗಾದೇವಿ ಮತ್ತು ಅನಿರುದ್ಧನ ಪತ್ನಿ ವಿರಾಟದೇವಿ-ಬ್ರಹ್ಮಾಂಡಾಭಿಮಾನಿದೇವತೆ. ಈ ಆರು-ಮುಂದಿನ ಕಕ್ಷಾಕ್ಕೆ ಸೇರಿದವರು—20ನೆಯ ಕಕ್ಷಾಪನ್ನರು. ॥37॥

## ವ್ಯಾಖ್ಯಾನಗಳು

### ೧. ಶ್ರೀಕಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ಕರ್ಮಜರ ವಿಚಾರವೇ ಹೇಳತಾರೆ. ಮಾಂಧಾತಾದಿ ಪ್ರಭುಗಳು ಎಂತ ಎನಿಸತಕ್ಕವರು—ಮುಖ್ಯವಾಗಿ ಪರಮಾತ್ಮನಿಗೆ ಪ್ರತಿಕರನಾದ ಬಲಿಚಕ್ರವರ್ತಿ, ಅಗ್ನಿಪುತ್ರ ಪಾವಕಾದಿ—ಇವರೇ ಮೊದಲಾದ ಕರ್ಮಜರು ವರ್ತಮಾನ ಕಕ್ಷದವರು. ಹದಿನೈದನೇ ಕಕ್ಷದವರಾದ ಅಗ್ನಿದೇವರಿಗೆ ನೂರುಗುಣದಿಂದ ಅಧಮರು. 18ನೇ ಕಕ್ಷದವನಾದ ಪುಷ್ಕರೇಶ್ವರಗೆ ಒಂದು ವೀಸಗುಣ ಕಡಿಮೆ. ಇಲ್ಲಿಗೆ, ಕರ್ಮಜದೇವತೆಗಳೊಳಗೆ 19ನೇ ಕಕ್ಷದವರು ಮುಗಿದರು. ಮುಂದೆ ಅವಶಿಷ್ಟ ಇರುವ ಕರ್ಮಜರಕಕ್ಷ, ತಾರತಮ್ಯ, ಆವೇಶ ಹೇಳತಾರೆ. ಮೇಘವನ್ನು ಪಾಲನಿಮಾಡತಕ್ಕ ಪರ್ಜನ್ಯ-ತನ್ನಾಮಕ ಸೂರ್ಯ, ವಿವಸ್ವಾನ್ನಾಮಕ ಸೂರ್ಯನ ಪತ್ನಿಯಾದ ಸಂಜ್ಞಾದೇವೇರು, ಚಂದ್ರನ ಪತ್ನಿ ರೋಹಿಣೀ ದೇವೇರು, ಯಮಧರ್ಮರಾಯನ ಪತ್ನಿ ಶ್ಯಾಮಳಾದೇವೇರು, ಉಳಿದವರು ಇಬ್ಬರದು ಮುಂದಿನಶ್ಲೋಕದಾಗೆ ಅದೆ. ಅದನ್ನು ಝಡಿತ್ಯಾ ಬೋದಾರ್ಥ ಈ ಶ್ಲೋಕದಲ್ಲಿ ಹೇಳತೇವೆ. ವರುಣದೇವರಪತ್ನಿ ಗಂಗಾದೇವೇರು, ಅನಿರುದ್ಧನ ಪತ್ನಿ ವಿರಾಟ್‌ದೇವೇರು—ಅಂತು, ಆರು ಮಂದಿ ಪರ್ಜನ್ಯಾಖ್ಯ

ಸೂರ್ಯನ ಅವತಾರ ಶರಭ ಎಂತ ಒಂದು. ಯಮದೇವರ ಪತ್ನಿ ಶ್ಯಾಮಲಾ ದೇವೇರ ಅವತಾರ ದೇವಕಿ-ಎಂತ ಒಂದು, ಅನಿರುದ್ಧನ ಪತ್ನಿ ವಿರಾಟ್‌ದೇವೇರ ಅವತಾರ ಉಷಾದೇವಿ-ಎಂತ ಒಂದು. ಈ ಪ್ರಕಾರ ಅವತಾರಗಳು-ಎಂತ ತಾತ್ಪರ್ಯ. ॥37॥

೨. ಭಾವಪ್ರಕಾಶಿಕೆ :–

ಈ ಪದ್ಯದ ತಾತ್ಪರ್ಯವನ್ನು 38ನೆಯ ಪದ್ಯದ ಜೊತೆಯಲ್ಲಿ ಕೊಟ್ಟಿದೆ. ॥37॥

೩. ಭಾವದರ್ಪಣ :–

ಈ ಪದ್ಯದ ತಾತ್ಪರ್ಯವನ್ನು 35ನೆಯ ಪದ್ಯದ ಜೊತೆಯಲ್ಲಿ ಕೊಟ್ಟಿದೆ. ॥37॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

'ಅರಸು' ಇತಿ ॥ ಪಾವಕಾದ್ಯಾಃ ಕರ್ಮಜಾಶ್ಚ ವಹ್ನೇಃ ಶತಗುಣಾಧಮಾಃ ॥ ವಿಘ್ನೇಶಾದ್ಯಧಮಾಃ ಪ್ರೋಕ್ತಾಃ ಪರ್ಜನಾದುತ್ತಮಾಃ ॥ ಪರ್ಜನ್ಯಃ ಶರಭಃ ಜಜ್ಞೇ ॥ ವಿರಾಟ್ ಪರ್ಜನ್ಯ ವದ್ವಾರುಣೀ ಚ ತಥಾ ಸಂಜ್ಞಾಚ ರೋಹಿಣೀ ಧರ್ಮಿಣೀಚೇತಿ ॥ ದೇವಕೀ ಶ್ಯಾಮಲಾ ಪುರಾ ॥37॥

## ಕನ್ನಡಾರ್ಥ

ಪಾವಕ—ಮುಂತಾದ ಕರ್ಮಜರು, ಅಗ್ನಿಗಿಂತ ನೂರು ಗುಣ ಕಡಿಮೆಯವರು. ಗಣೇಶನಿಗಿಂತ ಕಡಿಮೆಯವರು. ಪರ್ಜನ್ಯನಿಗಿಂತ ಉತ್ತಮರು. ಶರಭನೆಂಬ ಕಪಿಯು ಪರ್ಜನ್ಯಾವತಾರ, ಮೇಘಗಳ ಅಧಿಪನು. ವಿರಾಟ

(ಉಷಾ), ಸಂಜ್ಞಾ, ಗಂಗಾ, ಪರ್ಜನ್ಯ ರೋಹಿಣೀ, ಶ್ಯಾಮಲಾ— ಇವರು ಕರ್ಮಜರಿಂದ ಕಡಿಮೆಯವರು. ಯಮಪತ್ನಿ ಶಾಮಲಾದೇವಿಯೀ ದೇವಕಿಯೆನಿಸಿದವಳು. ॥37॥

**ಜ. ಶ್ರೀಗುರುಹೃದಯ ಪ್ರಕಾಶಿಕೆ :-**

ಮೇಲೆ ಹೇಳಿದ ಮಹಾರಾಜರೆಂಬ ಕರ್ಮಜದೇವತೆಗಳು ಅಗ್ನಿದೇವರಿಗಿಂತ ನೂರುಗುಣ ಕಡಿಮೆ. ವಿಷ್ವಕ್ಸೇನರಿಗಿಂತ ಕಿಂಚಿದ್ಗುಣ ಕಡಿಮೆ. ಪಾವಕ ನೆಂಬ ಅಗ್ನಿಕುಮಾರ, ಬಲಿರಾಯ-ಮೊದಲಾದವರು ಶರಭನೆಂದೂ, ಪರ್ಜನ್ಯ ನೆಂದೂ, ಸಹ ಕರೆಸುವ ಮೇಘಾಭಿಮಾನಿಸೂರ್ಯನೂ, ಸವಿತೃವೆಂಬ ಸೂರ್ಯನ ಪತ್ನಿಯಾದ ಸಂಜ್ಞಾದೇವಿಯೂ, ಚಂದ್ರನ ಪತ್ನಿ ರೋಹಿಣಿಯೂ, ಯಮಪತ್ನಿ ಶ್ಯಾಮಲಾದೇವಿ ದೇವಕಿಯು. ॥37॥

## ಸರ್ವವ್ಯಾಖ್ಯಾನಸಾರಸಂಗ್ರಹ

1 ಮಾಂಧಾತಾದಿ ರಾಜರುಗಳು ಎಂದು ಕರೆಯಿಸುವ (ಅರಸರಿಪ) ಕರ್ಮಜರು 15ನೆಯ ಕಕ್ಷದವನಾದ ಅಗ್ನಿದೇವರಿಗೀಂತ (ವೈಶ್ವಾನರನಿಗೆ) 100 ಗುಣಗಳಿಂದ ಅಧಮರು. (ಶತಗುಣದಿ ಅಧಮರು)

2 ಈ ಕರ್ಮಜರು 18ನೆಯ ಕಕ್ಷದವನಾದ ವಿಷ್ವಕ್ಸೇನರಿಗಿಂತ ಒಂದು ವೀಸಗುಣದಿಂದ ಕಡಿಮೆಯಾದವರು. (ಕಿಂಚಿದ್ಗುಣ ಕಡಿಮೆ).

3 **ಬಲಿಚಕ್ರವರ್ತಿ –**

ಭಾಗವತಶ್ರೇಷ್ಠೋತ್ತಮನಾದ ಪ್ರಹ್ಲಾದರಾಜನ ಮಗ, ವಿರೋಚನನ ಪುತ್ರನೇ ಬಲಿಚಕ್ರವರ್ತಿ. ಇವನ ಮಗ ಬಾಣಾಸುರನು. ಈತನ ಪತ್ನಿ ವಿಂಧ್ಯಾವಳಿ. ಕಲ್ಯಾವೇಶದಿಂದ ದೈತ್ಯಪುರೋಹಿತರಾದ ಶುಕ್ರಾಚಾರ್ಯರ ಆದೇಶದಂತೆ, 100ನೆಯ ಅಶ್ವಮೇಧವನ್ನು ಪ್ರಾರಂಭಿಸಿದನು. ದೇವತೆಗಳಿಂದ

**ಪ್ರಾರ್ಥವಾನ್ನಾದ** ಶ್ರೀಹರಿಯು ವಾಮನಾವತಾರದಿಂದ ಬಲಿಯನ್ನು **ಯಾಚಿಸಿ.** ಎರಡು ಪಾದಗಳಿಂದ ಇಡೀ ಬ್ರಹ್ಮಾಂಡವನ್ನು ಅಳೆದು, ಸ್ವೀಕರಿಸಿ **ದನು.** ತನ್ನ 3ನೆಯ ಪಾದದದಾನವನ್ನು ಸ್ವೀಕರಿಸಲು, ಬಲಿಚಕ್ರವರ್ತಿಯ **ತಲೆಯಮೇಲಿಟ್ಟು**, ರಸಾತಳಕ್ಕೆ ತುಳಿದು, ಬಲಿಯ ಅಹಂಕಾರ ಭಂಗಗೈಸಿ, **ಅನುಗ್ರಹಿಸಿದನು.**

### 4 ಪಾವಕರು–

ಅಗ್ನಿದೇವರ ಜ್ಯೇಷ್ಠಪುತ್ರನೇ ಪಾವಕನು. ಬಲಿ ಮತ್ತು ಪಾವಕರು **ಕರ್ಮಜರ** ಗುಂಪಿಗೆ ಸೇರಿದವರು.

### 5 ಶರಭ–

ಪರ್ಜನ್ಯನಾಮಕ ದೇವತೆಯು ಶರಭನೆಂಬ ಹೆಸರಿನಿಂದ ವಾನರವೀರ **ನಾಗಿ** ಅವತರಿಸಿದನು. ಶ್ರೀರಾಮನಸೇವೆಗೈದು, ಅವನ ಕೃಪೆಗೆ ಪಾತ್ರನಾದ.

### 6 ಪರ್ಜನ್ಯ–

ಮೇಘಾಧಿಪತಿಯಾದ ಪರ್ಜನ್ಯನಾಮಕದೇವತೆ. ಈತನು ಪರ್ಜನ್ಯ ನಾಮಕಸೂರ್ಯನು. ಇವನ ತಾಪದಿಂದ ಸಮುದ್ರದ ನೀರು ಆವಿಯಾಗಿ, ಮೇಘಗಳಾಗಿ ಪರಿವರ್ತಿಸುವುದು. ಮೇಘಗಳಿಂದ ಮಳೆಯು ಸುರಿಯುವುದು. ಇದರಿಂದ, ಪರ್ಜನ್ಯನು ಮೇಘಾಧಿಪತಿಯು (ಮೇಘಪ).

### 7 ತರಣಿಭಾರ್ಯೆ–

ವಿವಸ್ವಾನ್‌ನಾಮಕಸೂರ್ಯನಪತ್ನಿ **ಸಂಜ್ಞಾದೇವಿ.** ಈಕೆಯು ವಿಶ್ವಕರ್ಮನ ಪುತ್ರಿ. ಈಕೆಯಲ್ಲಿ ಸೂರ್ಯನಿಂದ ವೈವಸ್ವತ (ಮನ್ವಂತರಾಧಿ **ಪತಿ**) ಮತ್ತು ಯಮ (ಯಮಧರ್ಮದೇವತೆ)-ಎಂಬ ಇಬ್ಬರು ಪುತ್ರರು ಜನಿಸಿದರು. ಯಮುನೆ-ಎಂಬುವಳು ಸಂಜ್ಞಾದೇವಿಯ ಏಕಮಾತ್ರಪುತ್ರಿ.

**8 ಶಾರ್ವರೀಕರನ ಪತ್ನಿ ರೋಹಿಣೀ–**

ಶಾರ್ವರೀ–ಎಂದರೆ ಕತ್ತಲು. ಕತ್ತಲಿನಲ್ಲಿ ಬೆಳಗುವುದರಿಂದ, ಚಂದ್ರನಿಗೆ "ಶಾರ್ವರೀಕರ" ನೆಂದು ನಾಮ. (ಸೂರ್ಯನಿಗೆ ದಿವಾಕರ--ಎಂಬ ಹೆಸರಿದ್ದಂತೆ), ಈತನಿಗೆ ಅಶ್ವಿನ್ಯಾದಿ 27ಮಂದಿ ಪತ್ನಿಯರು. (ನಕ್ಷತ್ರಾಭಿಮಾನಿ ದೇವತೆಗಳು). ಅವರಲ್ಲಿ ರೋಹಿಣೀ-ಚಂದ್ರನ ಮುಖ್ಯ ಪತ್ನಿಯು. ಈಕೆಯು ದಕ್ಷಬ್ರಹ್ಮನ ಪುತ್ರಿಯು.

**9 ಶಾಮಲಾದೇವಿ-**

ಯಮಧರ್ಮರಾಯನ ಪತ್ನಿಯು ಶ್ಯಾಮಲಾದೇವಿ. ಶ್ರೀಕೃಷ್ಣನ ಜನನಿ. ವಸುದೇವನ ಪತ್ನಿ ದೇವಕಿಯಾಗಿ ಶ್ಯಾಮಲಾ ಅವತರಿಸಿದಳು. ಕರ್ಮಜರ ತರುವಾಯ ಗರ್ಭ-ಪರ್ಜನ್ಯಾಖ್ಯ ಮೇಘಪ-ಸಂಜ್ಞಾ-ರೋಹಿಣೀ-ಶ್ಯಾಮಲಾ (ದೇವಕಿ) ಇವರ ವಿಚಾರ ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ. ಮುಂದಿನ ಪದ್ಯದಿಂದ, ಗಂಗಾದೇವಿ (ವರುಣಪತ್ನಿ), ಉಷಾದೇವಿ (ಅನಿರುದ್ಧನ ಪತ್ನಿ)- ಇವರ ವಿಚಾರ ತಿಳಿಸುತ್ತಾರೆ. ॥37॥

**

## ಪದ್ಯ-೩೮

**ಮೂಲ :**

ಅರಸಿಯೆನಿಪಳು ಧರ್ಮರಾಜಗೆ ।
ವರುಣ ಭಾರ್ಯೋಷಾದಿಷಟ್ಕರು ।
ಕೊರತೆ ಎನಿಪರು ಪಾವಕಾದ್ಯರಿಗೆರಡು ಗುಣದಿಂದ ॥
ಎರಡು ಮೂರ್ಜನರಿಂದಧವು ಸ್ವಹ ।
ಕರೆಸುವಳುಷಾದೇವಿ ವೈಶ್ಯಾ ।
ನರನ ಮಡದಿಗೆ ದಶಗುಣಾವರಳಶ್ವಿನೀ ಭಾರ್ಯೆ ॥೩೮॥

**ಅವತರಣಿಕೆ :–**

ಯಮಧರ್ಮಪತ್ನಿ ಶ್ಯಾಮಲಾದೇವಿ–ವರುಣಪತ್ನಿ ಗಂಗಾದೇವಿ–ಅಗ್ನಿ ಪತ್ನಿ ಸ್ವಾಹಾದೇವಿ–ಅಶ್ವಿನೀಭಾರ್ಯೆ ಉಷಾದೇವಿ–ಇವರ ವಿಚಾರವನ್ನು **ತಿಳಿಸುತ್ತಾರೆ.** ಪ್ರಸಕ್ತಪದ್ಯದಿಂದ. ॥38॥

**ಪ್ರತಿಪದಾರ್ಥ:–**

**ಧರ್ಮರಾಜಗೆ** = ಯಮಧರ್ಮರಾಜನಿಗೆ, **ಅರಸಿ ಎನಿಪಳು** = 20ನೆಯ ಕಕ್ಷಾಪನ್ನರಾದ ಶ್ಯಾಮಲಾದೇವಿಯು ಪತ್ನಿ.ಎಂದು ಕರೆಯಿಸುವರಾಗು **ತ್ತಾರೆ. ವರುಣಭಾರ್ಯೆ** = ವರುಣದೇವರ ಪತ್ನಿ ಗಂಗಾದೇವಿಯು, **ಉಷಾ** = ವಿರಾಟ್-ಎಂಬ ಅನಿರುದ್ಧನ ಪತ್ನಿ, ಉಷಾನಾಮಕಳು, **ಆದಿ-ಷಟ್ಕರು** = ಪರ್ಜನ್ಯಾದಿ ಆರು ಮಂದಿ (1. ಪರ್ಜನ್ಯ ಸೂರ್ಯ. 2. ಸಂಜ್ಞಾ. 3. ರೋಹಿಣೀದೇವಿ. 4. ಶ್ಯಾಮಲಾದೇವಿ. 5. ಗಂಗಾದೇವಿ. 6. ಉಷಾದೇವಿ–ಈ ಆರು ಮಂದಿ), **ಪಾವಕಾದ್ಯರಿಗೆ** = 19ನೆಯ ಕಕ್ಷೆಕ್ಕೆ ಸೇರಿದ ಕರ್ಮಜರಾದ ಅಗ್ನಿಪುತ್ರರಾದ ಪಾವಕಾದಿಗಳಿಗಿಂತ, **ಎರಡು ಗುಣ ದಿಂದ** = ಎರಡು ಗುಣಗಳಿಂದ, **ಕೊರತೆ ಎನಿಪರು** = ಕಡಿಮೆಯಾದವ ರೆಂದು ಕರೆಯಿಸುತ್ತಾರೆ. **ಸ್ವಾಹ** = ಅಗ್ನಿದೇವರ ಪತ್ನಿಯಾದ ಸ್ವಾಹಾದೇವಿಯು, **ಎರಡು ಮೂರು** = 2 × 3, ಅಂದರೆ ಆರು ಮಂದಿ, **ಜನರಿಂದ** = ಪೂರ್ವೋಕ್ತ ಪರ್ಜನ್ಯಾದಿಗಳಿಗಿಂತ, **ಅಧನು** = ಕಡಿಮೆ. **ವೈಶ್ವಾನರ ಮಡದಿಗೆ** = ಅಗ್ನಿದೇವರ ಪತ್ನಿಯಾದ ಸ್ವಾಹಾದೇವಿಗಿಂತಲೂ, **ಅಶ್ವಿನೀ ಭಾರ್ಯೆ** = ಅಶ್ವಿನೀದೇವತೆಗಳ ಪತ್ನಿ, **ಉಷಾದೇವಿ** = ಉಷಾದೇವಿಯು, **ದಶಗುಣಾವರಳು** = ಹತ್ತು ಗುಣಗಳಿಂದ ಅವರಳು–ಎಂದು ತಿಳಿಯಬೇಕು. (ಉಷಾದೇವಿಯರು ಮೂರು ಮಂದಿ ಇದ್ದಾರೆ. 1. ಅಶ್ವಿನೀದೇವತೆಗಳ ಭಾರ್ಯೆ ಉಷಾದೇವಿ. 2. ಅನಿರುದ್ಧನಾಮಕ ವಿರಾಟ್‌ರೂಪೀ ಪರಮಾತ್ಮನ ಪತ್ನಿ ಉಷಾದೇವಿ ಮತ್ತು 3. ಕಾಮಪುತ್ರ ಅನಿರುದ್ಧನ ಪತ್ನಿ ಉಷಾದೇವಿ. ಈ ಮೂರು ಮಂದಿಯೂ ಪ್ರತ್ಯೇಕ, ಪ್ರತ್ಯೇಕ). ॥38॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಇನ್ನೂ ಕರ್ಮಜರ ವಿಚಾರವೇ ಹೇಳುತಾರೆ.

ಯಮಧರ್ಮರಾಜನಿಗೆ, ಮ್ಯಾಲಿನ ಶ್ಲೋಕಗತ 20ನೇ ಕಕ್ಷದಲ್ಲಿ ಪಿತ್ತ ಮಾನರಾದ ನಾಲ್ಕನೇ ಸಂಖ್ಯಾದನರಾದ ಶ್ಯಾಮಲಾದೇವಿಯರು, ಪತ್ನಿ- ಎಂತ ಕರಸೋವರಾಗತಾರೆ. ವರುಣದೇವರ ಪತ್ನಿ ಗಂಗಾದೇವೇರು, ವಿರಾಟ್ ಎಂತ-ಅನಿರುದ್ಧನ ಪತ್ನಿ,ಪೂರ್ವೋಕ್ತ ವಿರಾಟ್, ಈಕೆಗೆ ಉಷಾ-ಎಂತ ನಾಮ್ಯ ಪರ್ಜನ್ಯಾದಿ ಆರು ಮಂದಿ. ಈ ಆರು ಮಂದಿ ವ್ಯಾಲೆ ಹೇಳಿದ್ದೇವೆ ಮತ್ತೂ ಬೋಧಾರ್ಥ ವಿವರ. 1. ಪರ್ಜನ್ಯಸೂರ್ಯ, 2. ಸಂಜ್ಞಾ, 3. ರೋಹಿಣಿ. ದೇವಿ, 4. ಶ್ಯಾಮಲಾದೇವಿ, 5. ಗಂಗಾದೇವಿ, 6. ಉಷಾದೇವಿ-ಈ ಆರು ಮಂದಿಗಳು,19ನೇ ಕಕ್ಷದವರಾದ ಕರ್ಮಜರಾದ ಅಗ್ನಿಪುತ್ರರಾದ ಪಾವಕಾದಿಗಳಿಗೆ ಗುಣದ್ವಯದಿಂದ ಅಧಮರು-ಎಂತ ಕರಸತಾರೆ. ಎರಡು ಮೂರುಗಳಿಂದ ಎಂತ ತಾತ್ಪರ್ಯ.

ಆರು ಜನರಾದ ಪೂರ್ವೋಕ್ತ ಪರ್ಜನ್ಯಾದಿಗಳಿಂದ ಅಧಮರು. ದಾರು- ಎಂದರೆ,ಅಗ್ನಿದೇವೇರ ಪತ್ನಿ ಸ್ವಾಹಾದೇವೇರಿಗೆ, ಅಶ್ವಿನೀದೇವತೆಗಳ ಭಾರ್ ಉಷಾದೇವಿ-ಎಂತ ನಾಮವು. ಇವರಿಬ್ಬರಿಗೆ ಹತ್ತುಗುಣದಿಂದ. ಬುಧನಿಂದ ಹಿಡಿದು,ಪುಷ್ಕರಾಂತ ಎರಡೆರಡು ಗುಣ ಮ್ಯಾರಿಗೆ ಹತ್ತುಗುಣ ಅವರರೆಂದು ತಾತ್ಪರ್ಯ. ಉಷಾತ್ರಯರು ದಾರೆಂದರೆ– 1. ಅಶ್ವಿನೀದೇವತೆಗಳ ಭಾರ್ಯ ಉಷಾ, 2. ಅನಿರುದ್ಧನಾಮಕ ವಿರಾಟ್‌ರೂಪೀ ಪರಮಾತ್ಮನ ಪತ್ನಿ– ಉಷಾ ದೇವಿ, 3. ಕಾಮಪುತ್ರ ಅನಿರುದ್ಧನ ಪತ್ನಿ ಉಷಾ. ಅಂತೂ, ಮೂವರನ್ನು ಬ್ಯಾರೆ ಬ್ಯಾರೆ-ಎಂತ ತಿಳಿಯಬೇಕು. ॥38॥

## ೨. ಭಾವಪ್ರಕಾಶಿಕೆ :–

35ನೆಯ ಪದ್ಯ ಮೊದಲು, 38ನೆಯ ಪದ್ಯದವರೆಗೂ,ಆಗುವ 4 ಪದ್ಯಗಳಲ್ಲಿ,ಪದ್ಯಾಂತದಲ್ಲಿ ಕ್ರಿಯಾಪದಗಳು ಇಲ್ಲದೆ ಇದ್ದುದರಿಂದ, 4 ಪದ್ಯಗಳಿಗೂ ಸೇರಿಸಿ ಒಂದೇ ಅನ್ವಯವಾಗುವುದು. ಆದುದರಿಂದ, ಆ 4 ಪದ್ಯಗಳ ತಾತ್ಪರ್ಯವೂ ಇಲ್ಲಿ ಬರೆಯಲ್ಪಡುತ್ತದೆ. ಪ್ರಧಾನಾಗ್ನಿಗೆ ಹಿರಿಯಮಗನಾದ ಪಾವಕನೆಂಬುವನು ; ಪಾವನ, ಉಚಿಥ್ಯರೆಂಬ ಋಷಿಗಳೀರ್ವರು, ಚಾಕ್ಷುಷ—6ನೆಯ ಮನ್ವಂತರಕ್ಕೆ ಅಧಿಪತಿಯಾದ ಮನು, ರೈವತ—5ನೆಯ ಮನು, ಸ್ವಾರೋಚಿಷ—ಎರಡನೆಯ ಮನು, ಉತ್ತಮ-ಮೂರನೆಯ ಮನು, ಅಂತೂ, ಇವರು ನಾಲ್ಕು ಮನುಗಳು ; ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಇಂದ್ರಸಾವರ್ಣಿ,–ಎಂಬೀ ಏಳು ಮನುಗಳು-ಮುಂದಿನ 8ನೆಯ ಮನ್ವಂತರ ಮೊದಲು 14ನೆಯ ಮನ್ವಂತರದವರೆಗೂ ಆಗುವ ಏಳು ಮನ್ವಂತರಗಳಿಗೆ ಅಧಿಪತಿಗಳು.

ಒಟ್ಟು ಮನುಗಳು 14 ಜನರು. ಅವರಲ್ಲಿ 4ನೆಯ ಮನ್ವಂತರಾಧಿಪತಿಯಾದ ತಾಪಸನೆಂಬುವನು ಶ್ರೀಪರಮಾತ್ಮನ ಅವತಾರದವನು. ಸ್ವಾಯಂಭುವಮನುವು ರತಿ, ಶಚಿ, ಬೃಹಸ್ಪತಿ ಮೊದಲಾದವರ ಸಮನೆಂದು ಅಲ್ಲಿ ಸೇರಿಸಿರುವರು. ವೈವಸ್ವತ ಮನುವನ್ನು, ವಿಶ್ವಾಮಿತ್ರ,ಮರೀಚಿ-ಮೊದಲಾದವರ ಸಮನೆಂದು ಅಲ್ಲಿ ಸೇರಿಸಿರುವರು. ವೈವಸ್ವತಮನುವನ್ನು, ವಿಶ್ವಾಮಿತ್ರ ಮರೀಚಿ-ಮೊದಲಾದವರ ಕಕ್ಷಾವಲ್ಲಿ ಸೇರಿಸಿರುವರು. ಹೀಗೆ 3 ಜನರನ್ನು ಬಿಟ್ಟು, ಉಳಿದ 11 ಮನುಗಳನ್ನು ಇಲ್ಲಿ ಹೇಳರುವರು. ಶಶಿಬಿಂದುರಾಜನು ಪೃಥುಚಕ್ರವರ್ತಿ, ಪ್ರಿಯವ್ರತರಾಜನು, ಮಾಂಧಾತರಾಜನು, ಗಯ, ಕಕುಸ್ಥ, ದುಷ್ಯಂತನ ಮಗನಾದ ಭರತರಾಜನು, ಋಷಭದೇವರ ಮಗನಾದ ಭರತನಿಗೆ ಜಿಂಕೆಯ ಜನ್ಮವೂ, ಬ್ರಾಹ್ಮಣ ಜನ್ಮವೂ ಬಂದಿದ್ದವು. ಈ ಮೂರು ಜನ್ಮಗಳುಳ್ಳ ಭರತನು,–ಇವರೇ ಮೊದಲಾದ ಎಲ್ಲಾ ರಾಜರಲ್ಲೂ ಶ್ರೀಪರಮಾತ್ಮನಾವೇಶವೂ, ವಾಯುದೇವರ ಆವೇಶವೂ ಇರುವವು ಮತ್ತು ಇಂದ್ರರು 14 ಜನರು. ಅವರಲ್ಲಿ, 7 ಇಂದ್ರರನ್ನು ಉತ್ತಮಕಕ್ಷಾವಲ್ಲಿ ಸೇರಿಸಿರುವರು.

ಸ್ವಾಯಂಭುವಮನ್ವಂತರದಲ್ಲಿ ಯಜ್ಞನಾಮಕನಾದ ಪರಮಾತ್ಮನೇ ಇಂದ್ರನು. ಸ್ವಾರೋಚಿಷಮನ್ವಂತರದಲ್ಲಿ ರೋಚನರೆಂದು- ವಾಯುದೇವರು ಇಂದ್ರರು. ಉತ್ತಮಮನ್ವಂತರದ ಅಂದರೆ, ಮೂರನೆಯ ಮನ್ವಂತರದಲ್ಲಿ ಸತ್ಯಜಿತ್-ಎಂದು ಯಮಧರ್ಮನು ಇಂದ್ರನಾಗಿದ್ದನು. ತಾಪಸ, ರೈವತರೆಂಬ 4-5 ಈ ಮನ್ವಂತರಗಳಲ್ಲಿ ತ್ರಿಶಿಖಿ, ವಿಭು-ಎಂದು ನಾಸತ್ಯ, ದಸ್ರರೆಂಬ ಅಶ್ವಿನೀದೇವತೆಗಳು ಇಂದ್ರರಾಗಿದ್ದರು. 6ನೆಯ ಚಾಕ್ಷುಷಮನ್ವಂತರದಲ್ಲಿ ಮಂದರದ್ಯುಮ್ನನೆಂತಲೂ, ಈಗ ನಡೆಯುತ್ತಿರುವ ಏಳನೆಯ ವೈವಸ್ವತ ಮನ್ವಂತರದಲ್ಲಿ ಪುರಂದರನೆಂತಲೂ, ಈ ಇಬ್ಬರು ಇಂದ್ರರೂ ಶಚೀಪತಿಯಾದ ಪುರಂದರನೆಂದು ತಿಳಿಯಬೇಕು.

ಅಂತೂ, ಈ 7 ಇಂದ್ರರನ್ನು ಹಿಂದೆಯೇ ಹೇಳಿರುವರು. ಉಳಿದವರು ಏಳು ಮಂದಿ ಇಂದ್ರರು. ಬಲಿಚಕ್ರವರ್ತಿಯು 8ನೆಯ ಮನ್ವಂತರದಲ್ಲಿ,ಇಂದ್ರ ನಾಗುವನು. ಅದ್ಭುತನೆಂಬ ಇಂದ್ರನು 9ನೆಯ ಮನ್ವಂತರದಲ್ಲಿಯೂ, 10 ನೆಯ ಮನ್ವಂತರದಲ್ಲಿ ಶಂಭು-ಎಂಬ ಇಂದ್ರನೂ, 11ನೆಯ ಮನ್ವಂತರದಲ್ಲಿ ವಿಧೃತ,-ಎಂಬ ಇಂದ್ರನೂ, 12, 13, 14 ಈ ಮೂರು ಮನ್ವಂತರಗಳಲ್ಲಿ ಋತಧಾಮ, ದಿವಸ್ಪತಿ, ಶುಚಿ-ಎಂಬ ಮೂವರೂ ಇಂದ್ರರೂ. ಗಂಧರ್ವರ ಪೈಕಿ, ಪ್ರಧಾನರು 8 ಜನರು- ಇವರೆಲ್ಲರೂ ಸಮರು. ಪಾವಕನನ್ನು ಮೊದಲು ಮಾಡಿ, ಸಾವರ್ಣಿ ಪರ್ಯಂತರದ ದೇವತೆಗಳೂ, ಕರ್ಮದೇವತೆಗಳೆನಿಸುವ, ಶಶಬಿಂದು-ಮೊದಲಾದ ರಾಜರು, (ಕರ್ಮದೇವತೆಗಳೆಂದರೆ,ಮೊದಲು ರಾಜ ರಾಗಿದ್ದು,ಕರ್ಮದಿಂದ ದೇವತ್ವವನ್ನು ಹೊಂದಿದವರೆಂದರ್ಥ).

ಮತ್ತು ದಿವಸ್ಪತಿ ಮೊದಲಾದ ಇಂದ್ರರು, ಗಂಧರ್ವರೆಂಟು ಜನರು, ಇವರೆಲ್ಲರೂ ಪ್ರಧಾನಾಗ್ನಿಗೆ 100 ಗುಣಗಳಿಂದ ಕಮ್ಮಿ ಎನಿಸುವರು. ವಿಷ್ವೇಶ್ವರನಕಿಂತಲೂ ಬಲಿಚಕ್ರವರ್ತಿ-ಪಾವಕ,ಮೊದಲಾದವರು ಸ್ವಲ್ಪ ಕಮ್ಮಿ-ಎನಿಸುವರು. ಮೇಘಾಧಿಪತಿಯಾದ ಪರ್ಜನ್ಯನೆಂಬುವನು ದ್ವಾದಶಾದಿತ್ಯರ ಪೈಕಿ ಒಬ್ಬನು. ಇವನಿಗೆ ಶರಭನೆಂಬ ಕಪಿಯ ಅವತಾರವು ಬಂದಿರುವುದು. ರಾಮಾಯಣ ಬಾಲಕಾಂಡ 17ನೆಯ ಸರ್ಗದಲ್ಲಿ —"ಶರಭಂಜನಯಾಮಾಸ

**ಪರ್ಜನ್ಯಸ್ತು ಮಹಾಬಲಃ** ||"-ಮಹಾಬಲಾತ್ಮಕನಾದ ಪರ್ಜನ್ಯನು ಶರಭನೆಂಬ ಕಪಿಯನ್ನು ಸೃಷ್ಟಿಸಿದನು-ಎಂಬ ವಾಕ್ಯವು ಇದಕ್ಕೆ ಆಧಾರವು.

ಈ ಪರ್ಜನ್ಯನೆಂಬುವನು (1), ವಿವಸ್ವಾನ್ ಸೂರ್ಯನ ಹೆಂಡತಿ ಸಂಜ್ಞಾದೇವಿ (2), ಚಂದ್ರನ ಹೆಂಡತಿ ರೋಹಿಣಿ (3), ಯಮದೇವರ ಹೆಂಡತಿಯಾದ ಶ್ಯಾಮಲಾದೇವಿ (4), ವರುಣನ ಹೆಂಡತಿಯಾದ ಗಂಗೆ (5), ಅನಿರುದ್ಧನ ಹೆಂಡತಿ ಉಷೆ (6), ಇವರಾರು ಮಂದಿಗಳು,ಪಾವಕ ಮೊದಲಾದವರಕಿಂತಲೂ ಎರಡು ಗುಣಗಳು ಕಮ್ಮಿ-ಎಂದು ತಿಳಿಯಬೇಕು. ಇವರ ಪೈಕಿ, ಯಮನ ಹೆಂಡತಿ ಶಾಮಲೆಗೆ, ದೇವಕೀ-ಎಂದು ಒಂದು ಅವತಾರ ಉಂಟು. ಅಂದರೆ, ವಸುದೇವನ ಹೆಂಡತಿಯಾದ ದೇವಕಿಯಲ್ಲ. ಈಕೆಯು ಧರ್ಮರಾಜನ ಹೆಂಡತಿಯು. ನಿರ್ಣಯ 20ನೆಯ ಅಧ್ಯಾಯ -"ಅಘೋಷಯೇಮೇ ಶಿಶುಪಾಲಪುತ್ರೀಂ ಯುಧಿಷ್ಠಿರೋ ದೇವಕೀನಾಮ ಪೂರ್ವಾಂ । ಸ್ವೀಯಾಂ ಭಾರ್ಯಾಂ."-ಧರ್ಮರಾಜನು ಶಿಶುಪಾಲನ ಮಗಳಾದ ದೇವಕಿಯನ್ನು ಮದುವೆ ಮಾಡಿಕೊಂಡನು.

ಆಕೆಯು ಪೂರ್ವದಲ್ಲಿ ಯಮನ ಹೆಂಡತಿಯು. ಯಮನೇ ಧರ್ಮರಾಜನಾದುದರಿಂದ,ಪೂರ್ವದಲ್ಲಿ ಇವನ ಹೆಂಡತಿ-ಎಂದು ಹೇಳಿರುವರು. ಆ ವಾಕ್ಯವು ಶಾಮಲೆಯು ಶಿಶುಪಾಲನ ಮಗಳಾದ ದೇವಕೀ ಅವತಾರವೆಂದು ಸಿದ್ಧ ಮಾಡಲು ಆಧಾರವಾಗಿರುವುದು. ಮೇಲೆ ಹೇಳಿದ ಪರ್ಜನ್ಯಾದಿ 6 ಜನರ ಕಿಂತಲೂ, ಅಗ್ನಿಯ ಹೆಂಡತಿಯಾದ ಸ್ವಾಹಾದೇವಿಯು, ಎರಡು ಗುಣಗಳಿಂದ ಕಮ್ಮಿ ಎನಿಸುವಳು. ಅಶ್ವಿನೀದೇವತೆಗಳ ಹೆಂಡತಿಯಾದ ಉಷಾದೇವಿಯು ಸ್ವಾಹಾದೇವಿಯಕಿಂತಲೂ 10 ಗುಣಗಳು ಅಧಮರೆಂಬ ತಾತ್ಪರ್ಯ. ॥38॥

**೩. ಭಾವದರ್ಪಣ :-**

ಈ ಆರು ಮಂದಿ ಪಾವಕಾದ್ಯರಿಗೆ ಎರಡು ಗುಣ ಕಡಿಮೆ-ಎಂದು ಹೇಳುತ್ತದೆ- ಅರಸೀತಿ. -"ಅನಿರುದ್ಧಸ್ಯ ಭಾರ್ಯೋಷಾ ಗಂಗಾ ವರುಣಭಾರ್ಯಕಾ।

ಪಾವಕಾದಧಮಾ ಷಡ್ಭಿಃ ಸ್ವಾಹಾಯಾದ್ವಿಗುಣಾಧಿಕೇತಿ । ಸ್ವಾಹಾ ನಾಮ್ನ್ಯಗ್ನಿ ಭಾರ್ಯಾತು ಪರ್ಜನ್ಯಾದ್ವಿಗುಣಾಧಮೇತಿ"-ಸಾರಸಂಗ್ರಹೇ । ದಶಗುಣಾವರೇತಿ ॥ -"ಸ್ವಾಹಾಯಾ ಅಗ್ನಿಭಾರ್ಯಾಯಾ ಅಧಮಾದಶಭಿರ್ಗುಣೈ"-ರಿತಿಚ. ॥38॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :-

'ಅರಸಿ'-ಇತಿ ॥ ಪಾವಕಾದ್ಯಧಮಾಃ ಷಟ್ ಪಾವಕಾತ್ ಪರ್ಜನ್ಯಃ ತಸ್ಮಾದಿಮಾಃ ॥ ತತಃ ದ್ವಿಗುಣಾವರಾಃ ॥ ಏತೇಭ್ಯಃ ಚ ಅಗ್ನಿಜಾಯಾ ಸ್ವಾಹಾ ಉಷಸಃ ದಶಗುಣಾಧಿಕಾ. ॥38॥

### ಕನ್ನಡಾರ್ಥ

ಪಾವಕ-ಮೊದಲಾದವರಿಂದ ಉಷಾ-ಮುಂತಾದ ಆರು ದೇವತೆಗಳು 2 ಗುಣಗಳಿಂದ ಕಡಿಮೆಯಾದವರು. ಈ ಆರು ಜನರಿಂದಲೂ, ಅಗ್ನಿಪತ್ನಿಯಾದ ಸ್ವಾಹಾದೇವಿಯು ಕಡಿಮೆಯಾದವಳು—2 ಗುಣಗಳಿಂದ. ಅಶ್ವಿನೀದೇವತೆಗಳ ಪತ್ನಿಯಾದ -"ಉಷಾ"-ಎಂಬಾಕೆಯು (ನಾಮಾಖ್ಯಕಲಾಭಿಮಾನಿನಿ) ಸ್ವಾಹಾಳಿಗಿಂತ ಹತ್ತು ಗುಣಗಳಿಂದ ಕಡಿಮೆಯಾದವಳು. ॥38॥

## ೫. ಶ್ರೀ ಗುರುಹೃದಯಪ್ರಕಾಶಿಕೆ

ಶಿಶುಪಾಲನ ಮಗಳು ಧರ್ಮರಾಯನ ಪತ್ನಿಯಾಗಿ ಅವತರಿಸಿದವಳು. ವರುಣನ ಪತ್ನೀ ಹರಿನಾಮಾಭಿಮಾನೀ ಉಷಾ,ಸಹ ಆರು ಜನರು ಪಾವಕ ಬಲಿ ಮೊದಲಾದವರಿಗಿಂತ ಎರಡು ಗುಣ ಕಡಿಮೆ. ಈ ಎರಡು ಮೂರೆಂಬ ಆರು ಜನಕ್ಕಿಂತಲೂ, ಅಗ್ನಿಪತ್ನಿ ಸ್ವಾಹಾದೇವಿ ಕಡಿಮೆ. ಈಕೆಗಿಂತ ಕಡಿಮೆ-ಅಶ್ವಿನೀಗಳ ಪತ್ನಿ ಉಷಾದೇವಿ ಹತ್ತು ಗುಣದಿಂದ ಕಡಿಮೆ. ॥38॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಮೊದಲು ರಾಜರುಗಳಾಗಿದ್ದು, ಕರ್ಮದಿಂದ ದೇವತ್ವವನ್ನು ಹೊಂದಿದವರಿಗೆ -"**ಕರ್ಮಜ**"-ರೆಂದು ಹೆಸರು.

2. ಯಮಧರ್ಮರಾಯನ ಪತ್ನಿಯೇ **ಶ್ಯಾಮಲಾದೇವಿಯು.** **ಈಕೆಯು** ಶ್ರೀಕೃಷ್ಣನ ಜನನಿಯಾದ ದೇವಕೀದೇವಿಯಾಗಿ ಅವತರಿಸಿದಳು.

3. ಜಲಾಧಿಪತಿಯಾದ ವರುಣದೇವರ ಪತ್ನಿಯಾದ **ಗಂಗಾದೇವಿ.** ಅಮರತರಂಗಿಣಿ—ಎಂದು ಖ್ಯಾತನಾಮಳಾಗಿರುವ ಗಂಗಾದೇವಿಯು, ಶ್ರೀ ವಿಷ್ಣುವಿನ ಪಾದೋದ್ಭವೆ.

4. ಕಾಮನಪುತ್ರ ಅನಿರುದ್ಧನ ಪತ್ನೀ **ಉಷಾದೇವಿ.** ಈಕೆಯು ವಿರಾಟ್‌ನಾಮಕಳಾಗಿ ಬ್ರಹ್ಮಾಂಡಕ್ಕೆ ಅಭಿಮಾನಿದೇವತೆಯಾಗಿದ್ದಾಳೆ. (ವಿರಾಡ್ರೂಪ-ಬ್ರಹ್ಮಾಂಡ).

5. **ಷಟ್ಕರು**-ಎಂದರೆ, ಆರು ಮಂದಿ. ಇವರ್‍ಯಾರೆಂದರೆ-

1. ಪರ್ಜನ್ಯನಾಮಸೂರ್ಯ (ಮೇಘಾಭಿಮಾನಿ). 2. ಸಂಜ್ಞಾ (ಸೂರ್ಯಪತ್ನಿ). 3. ರೋಹಿಣೀದೇವಿ (ಚಂದ್ರನ ಪತ್ನಿ). 4. ಶ್ಯಾಮಲಾದೇವಿ (ಯಮಧರ್ಮನ ಭಾರ್ಯೆ). 5. ಗಂಗಾದೇವಿ (ವರುಣನ ಪತ್ನಿ,ಮತ್ತು 6. ಉಷಾದೇವಿ (ಅನಿರುದ್ಧನ ಮಡದಿ).

-ಈ ಆರು ಮಂದಿಯ ಗುಂಪಿಗೆ ಷಟ್ಕರು-ಎಂದಿದ್ದಾರೆ ದಾಸರಾಯರು.

6. ಪೂರ್ವೋಕ್ತ ಆರು ಮಂದಿ ಅಗ್ನಿದೇವರ ಜ್ಯೇಷ್ಠಪುತ್ರನಾದ ಪಾವಕಾ ಮತ್ತು 19ನೆಯ ಕಕ್ಷಾಪನ್ನರಾದವರಿಗಿಂತ ಎರಡು ಗುಣಗಳಿಂದ ಅಧಮರೆನಿಸುವರು. **(ಎರಡು ಗುಣದಿಂದ ಕೊರತೆ ಎನಿಪರು).**

7. **ಸ್ವಾಹಾದೇವಿ :-**

ದಕ್ಷಬ್ರಹ್ಮನ ಪುತ್ರಿ. ಅಗ್ನಿದೇವರ ಪತ್ನಿ. ಒಮ್ಮೆ ಅಗ್ನಿದೇವರು ಸಪ್ತರ್ಷಿಗಳ ಪತ್ನಿಯರನ್ನು ಮೋಹಿಸಿದಾಗ,ಸ್ವಾಹಾದೇವಿ ಅರುಂಧತಿಯ ಹೊರತು, (ವಸಿಷ್ಠ ಮಹರ್ಷಿಗಳ ಪತ್ನಿ) ಮಿಕ್ಕ ಆರು ಮಂದಿ ಮುನಿಪತ್ನಿಯರ ರೂಪವನ್ನು ತಾಳಿ, ಅಗ್ನಿಯನ್ನು ಸೇರಿ, ಆತನ ಮನೋರಥವನ್ನು ಪೂರ್ತಿಗೊಳಿಸಿದಳು. ವೈಶ್ವಾನರ ಮಡದಿಯಾದ ಸ್ವಾಹಾದೇವಿ, ಪೂರ್ವೋಕ್ತ ಆರು ಮಂದಿಗಿಂತ ಅಧಮಳು.

8. ಅಶ್ವಿನೀದೇವತೆಗಳ ಭಾರ್ಯಯಾದ **ಉಷಾದೇವಿ.** ಸ್ವಾಹಾದೇವಿಗಿಂತ ಹತ್ತು ಗುಣಗಳಿಂದ ಅವರಳು (**ದಶಗುಣಾವರಳು**). ॥38॥

★★

## ಪದ್ಯ-೩೯

**ಮೂಲ :-**

**ಸುದರುಶನ ಶಕ್ರಾದಿ ಸುರಯುಂತ ।**
**ಬುಧನು ತಾನಭಿಮನ್ಯುವೆನಿಸುವ ।**
**ಬುಧನಿಗಿಂತಾಶ್ವಿನೀಭಾರ್ಯಾ ಶಲ್ಯ ಮಾಗಧರ ॥**
**ಉದರಜೋಷಾದೇವಿಗಿಂತಲಿ ।**
**ಅಧಮನೆನಿಪ ಶನೈಶ್ಚರನು ಶನಿ ।**
**ಗಧಮ ಪುಷ್ಕರ ಕರ್ಮಪನು ಎನಿಸುವ ಬುಧರಿಂದ ॥ ॥೩೯॥**

**ಅವತರಣಿಕೆ :-**

ಬುಧ-ಉಷಾದೇವಿಯರ ಅವತಾರಗಳು-ಶನೈಶ್ಚರ-ಪುಷ್ಕರ- ಇವರ ವಿಚಾರ ತಿಳಿಸುತ್ತಾರೆ. ॥39॥

**ಪ್ರತಿಪದಾರ್ಥ :-**

**ಸುದರುಶನ** = ಶ್ರೀಹರಿಯ ಚಕ್ರಕ್ಕೆ ಅಭಿಮಾನಿಯಾದ ಕಾಮ, **ಶಕ್ರ** = ಇಂದ್ರ, **ಆದಿ** = ಆದಿ ಶಬ್ದದಿಂದ ಚಂದ್ರ-ಯಮಧರ್ಮ-ವಾಯು-ಅಗ್ನಿನೀದೇವತೆಗಳು-ಇತ್ಯಾದಿ ದೇವತೆಗಳ ಆವೇಶದಿಂದ ಯುಕ್ತನಾದ, (**ಶಾ ಅಭಿಮನ್ಯುವೆನಿಸುವ**), **ಬುಧನಿಗಿಂತ** = ಚಂದ್ರನ ಪುತ್ರನಾದ ಬುಧನಿಗಿಂತ, **ಅಶ್ವಿನೀಭಾರ್ಯಾ** = ಅಶ್ವಿನೀದೇವತೆಗಳ ಪತ್ನಿ ಉಷಾದೇವಿಗೆ ಎರಡು ಅವತಾರಗಳು. **ಶಲ್ಯ ಉದರಜ** = ಶಲ್ಯರಾಜನ ಪುತ್ರಿ- ನಕುಲನ ಪತ್ನಿ, **ಮಾಗಧರ ಉದರಜ** = ಮಗಧಾಧಿಪತಿಯಾದ ಜರಾಸಂಧನ ಪುತ್ರಿ-ಸಹದೇವನ ಪತ್ನಿ. **ಇವರಿಗಿಂತಲಿ** = ಅವತಾರದ್ವಯಗಳುಳ್ಳ ಉಷಾದೇವಿಇವರಿಗಿಂತ, **ಅಧಮನೆನಿಪ** = ಅವರನಾದ (ದ್ವಿಗುಣಾವರನು), **ಶನೈಶ್ಚರನು** = ಪೃಥ್ವಿಗೆ ಅಭಿಮಾನಿಯಾದ ಶನೈಶ್ಚರನು,ಬುಧ ಮತ್ತು ಉಷಾದೇವಿಯರಿಗಿಂತ ದ್ವಿಗುಣಾಧಮನು (**ಅಧಮನೆನಿಪ**), **ಪುಷ್ಕರನು** = ಪುಷ್ಕರನೆಂಬ ದೇವತೆಯು, **ಕರ್ಮಪನು** = ಸತ್ಕರ್ಮಾಭಿಮಾನಿಯು, **ಬುಧರಿಂದ** = ಜ್ಞಾನಿಗಳಿಂದ, **ಎನಿಸುವನು** = ಅಧಮನೆಂದು ಕರೆಯಿಸುತ್ತಾನೆ. ॥39॥

## ವ್ಯಾಖ್ಯಾನಗಳು

೧. **ಶ್ರೀಶಸಂಕರ್ಷಣ ಒಡೆಯರ ವ್ಯಾಖ್ಯಾನ :-**

ಇನ್ನೂ ಕರ್ಮಜರ ವಿಚಾರವನ್ನೇ ಹೇಳುತಾರೆ.

ಸ್ವಾಹಾದೇವಿಗಿಂತ ಬುಧನು ಎರಡು ಗುಣಾಧಮನು. ಈ ಬುಧನು ಅಭಿಮನ್ಯು ಎಂತ ಅವತಾರ ಮಾಡೋವನಾಗಿದ್ದಾನೆ. ಇವನಲ್ಲಿ ಆವೇಶ ದಾವದೆಂದರೆ.ಸುದರುಶನ ಸಾಂಕೇತವಾದ ಶ್ರೀಪರಮಾತ್ಮನ ಚಕ್ರಾಭಿಮಾನಿ ಯಾದ ಮನ್ಮಥನು. ಇಂದ್ರ, ಆದಿಶಬ್ದದಿಂದ ಚಂದ್ರ, ಅಶ್ವಿನೀದೇವತೆಗಳು, ರಮಾದೇವೇರು ವಾಯುದೇವರು, ಶ್ರೀಪರಮಾತ್ಮ ಏತಾದೃಶದೇವತಾವೇಶ ದಿಂದ ಯುಕ್ತನಾದವನು. ಬುಧನಿಗಿಂತಲೂ ಅಶ್ವಿನೀದೇವತೆಗಳ ಪೇಷ್ಯ ಯಾದ ಉಷಾದೇವೇರು ಎರಡು ಗುಣದಿಂದ ನೀಚರು. ಇವರ ಅವತಾರಗಳು ದಾವವೆಂದರೆ, ಶಲ್ಯರಾಜನ, ಮಗಧರಾಜನ ಉದರದಲ್ಲಿ ಜನಿಸಿ, ಶಲ್ಯಪುತ್ರಿ ಎಂತಲೂ, ಮಗಧಪುತ್ರಿ ಎಂತಲೂ-ಎರಡು ಅವತಾರದಿಂದ ಕರಸೋವರಾ- ದರು. ಈ ಉಷಾದೇವಿಯರಿಗಿಂತಲೂ, ಧರಣಿಅಭಿಮಾನಿ ಧರಣೀದೇವೇರು, ಈ ಧರಣೀದೇವಿರಿಗಿಂಲೂ ಎರಡು ಗುಣಗುಣದಿಂದ ಕಡಿಮಿ-ಎಂತ ಕರಸೋವ ನಾಗತಾನೆ. ದಾರು ಎಂದರೆ,ಶನೈಶ್ಚರ ಎನತಕ್ಕವನು. ಈ ಶನಿರಾಯನಿಗೆ ಅಧ- ಮನು ಎರಡು ಗುಣದಿಂದ ದಾರು ಎಂದರೆ,ಪುಷ್ಕರನಾಮಕನು. ಈ ಪುಷ್ಕರನು ಜ್ಞಾನಿಗಳಿಂದ ಕರ್ಮಾಭಿಮಾನಿ-ಎಂತ ಕರಸೋವನಾಗತಾನೆ. ಇಲ್ಲಿಗೆ, ಕರ್ಮಜರ ವಿಚಾರ ಮುಗಿಯಿತು.

ಪ್ರಥಮಕಕ್ಷ ಆರಂಭಮಾಡಿ, ಹದಿನೆಂಟನೇ ಕಕ್ಷದವರಾದ ಶತಸ್ಥದೇವತೆ ಗಳ ಪರಿಯಂತನ್ಯೆಜದೇವತ್ವವುಳ್ಳ ದೇವತೆಗಳು. ಹತ್ತೊಂಭತ್ತನೇ ಕಕ್ಷ ಆರಂಭಮಾಡಿ ಇಪ್ಪತ್ತಾರನೇ ಕಕ್ಷದವನಾದ ಪುಷ್ಕರಾಂತ ಕರ್ಮಜರು, ಕರ್ಮ ಮಾಡಿ, ಅದರಿಂದ ದೇವತ್ವಅಭಿವ್ಯಕ್ತರಾದವರು. ಬ್ರಹ್ಮದೇವರು ಆರಂಭ ಮಾಡಿ, ಪುಷ್ಕರಾಂತ ಒಂಭತ್ತುಕೋಟಿ ದೇವತೆಗಳು, ಆಜಾನಜರು ಇಪ್ಪತ್ತ- ನಾಲ್ಕುಕೋಟಿ. ಅಂತು,ಮೂವತ್ತಮೂರು ಕೋಟಿ ದೇವತೆಗಳು. ಇನ್ನು ಮ್ಯಾಲೆ,ಆಜಾನಜರ ವಿಚಾರ ತಾರತಮ್ಯ ಹೇಳತಾರೆ. ॥39॥

೨. ಭಾವಪ್ರಕಾಶಿಕೆ :-

ಚಂದ್ರನ ಮಗನಾದ ಬುಧನು ವಿಶೇಷವಾದ ಚಂದ್ರಾಂಶದಿಂದಲೂ,

ಸುದರ್ಶನವೆಂಬ ಭಗವಚ್ಚಕ್ರದ ಆವೇಶದಿಂದಲೂ, ಯಮ, ವಾಯು, ಇಂದ್ರ, ಅಶ್ವಿನೀ-ಇವರ ಆವೇಶದಿಂದಲೂ ಯುಕ್ತನಾಗಿ, ಸುಭದ್ರೆಯಲ್ಲಿ ಅರ್ಜುನನ ದೆಸೆಯಿಂದ ಹುಟ್ಟಿದನು. ನಿರ್ಣಯ 20ನೆಯ ಅಧ್ಯಾಯದ ವಾಕ್ಯದಲ್ಲಿ ಹೇಳಿರ್ಪವಂತೆ, ಅಭಿಮನ್ಯುವಿನಲ್ಲಿ ಶ್ರೀಕೃಷ್ಣನ ಸನ್ನಿಧಾನವೂ ಉಂಟೆಂದು ಸಿದ್ಧವಾಗುವುದು. ಅಶ್ವಿನೀದೇವತೆಗಳ ಹೆಂಡತಿಯಾದ ಉಷೆಯು ಬುಧನಕಿಂತಲೂ ಸ್ವಲ್ಪ ಅಧಮಳೆನಿಸುವಳು. ಈಕೆಗೆ ಎರಡು ಅವತಾರಗಳುಂಟು. ಶಲ್ಯನ ಮಗಳೂ, ನಕುಲನ ಹೆಂಡತಿಯೂ ಆದ ಕರೇಣುಮತಿಯು ಅವತಾರ ಒಂದು. ಜರಾಸಂಧನ ಮಗಳೂ, ಸಹದೇವನ ಹೆಂಡತಿಯೂ ಆದ ವಿಜಯಾ-ಎಂಬ ರೂಪ ಒಂದು.

ಇವೆರಡೂ ಉಷಾದೇವಿಯ ಅವತಾರಗಳು. ಅಶ್ವಿನೀದೇವತೆಗಳಿಬ್ಬರಿಗೂ ಉಷೆ-ಎಂಬ ಒಬ್ಬಳೇ ಭಾರ್ಯಳಾದುದರಿಂದಲೂ, ನಕುಲ ಸಹದೇವರು ಅಶ್ವಿನೀ-ದೇವತೆಗಳಾದುದರಿಂದಲೂ, ಇವರಿಬ್ಬರಿಗೂ ಹೆಂಡತಿಯಾಗುವುದಕ್ಕಾಗಿ ಒಬ್ಬಾಕೆಯೇ ಎರಡು ರೂಪದಿಂದ ಹುಟ್ಟಿ, ಇಬ್ಬರಿಗೂ ಪತ್ನಿಯಾದಳೆಂಬ ತಾತ್ಪರ್ಯ. ನಿರ್ಣಯ 20ನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಭೀಮಸೇನದೇವರು ಜರಾಸಂಧನನ್ನು ಕೊಂದ ಕೂಡಲೇ ಅವನ ಮಗನಾದ ಸಹದೇವನು ಒಂದು ರಥವನ್ನೂ ತನ್ನ ತಂಗಿಯನ್ನೂ ಭೀಮಸೇನದೇವರಿಗೆ ಕೊಟ್ಟು, ಅವರನ್ನು ಮೊರೆಹೊಕ್ಕನು. ಏಕಾದಶರುದ್ರರ ತಾರತಮ್ಯವನ್ನು ಹೇಳುವ ಶ್ಲೋಕದಲ್ಲಿ, ಪತ್ರತಾಪನೆಂಬ ರುದ್ರನು ಜರಾಸಂಧನ ಮಗನಾದ ಸಹದೇವನಾಗಿ ಜನಿಸಿದನೆಂದು ಹೇಳಿದೆ. ಭೀಮಸೇನದೇವರು ಜರಾಸಂಧನ ಮಗನಾದ ಸಹದೇವನು ಕೊಟ್ಟ ಕನ್ಯೆಯನ್ನು ತನ್ನ ತಮ್ಮನಾದ ಸಹದೇವನಿಗೋಸ್ಕರವಾಗಿ ಸ್ವೀಕರಿಸಿದರು. ಆಕೆಯನ್ನು ಸಹದೇವನಿಗೆ ಮದುವೆ ಮಾಡಿಸಿದರು. ಇದಕ್ಕೆ ಮುಂಚೆ ಶಲ್ಯನು ತನ್ನ ಸೋದರಳಿಯನಾದ ನಕುಲನಿಗೆ ತನ್ನ ಮಗಳನ್ನು ಕೊಟ್ಟಿದ್ದನು.

ಆ ಶಲ್ಯನ ಮಗಳೂ, ಈ ಸಹದೇವನ ತಂಗಿಯೂ, ಜರಾಸಂಧನ ಮಗಳೂ ಆದ ಇಬ್ಬರೂ, ಪೂರ್ವದಲ್ಲಿ ಅಶ್ವಿನೀದೇವತೆಗಳ ಹೆಂಡತಿಯಾದ

ಉಷಾದೇವಿ-ಎಂದು ತಿಳಿಯಬೇಕು. ಈ ಉಷಾದೇವಿಕಿಂತಲೂ ಶನೈಶ್ಚರನು ಅಧಮನು. ಅವನಕಿಂತಲೂ ಕರ್ಮಕ್ಕೆ ಅಭಿಮಾನಿಯಾದ ಪುಷ್ಕರನು ಅಧಮನೆನಿಸುವನು. ॥39॥

**೩. ಭಾವದರ್ಪಣ :–**

ಸುದರ್ಶನ, ಕೃಷ್ಣ, ಚಂದ್ರ, ಧರ್ಮ, ವಾಯು, ಇಂದ್ರ, ಅಶ್ವಿನೀದೇವತೆಗಳು-ಇಷ್ಟು ಅಂಶಗಳಿಂದ ಬುಧನು ಅಭಿಮನ್ಯು ಎನಿಸಿ, ಹುಟ್ಟಿದ್ದಾನೆಂದು ಹೇಳುತ್ತಾರೆ- ಸುದರ್ಶನೇತಿ. –"ಸುದರ್ಶನಂ ಕೃಷ್ಣಚಂದ್ರಧರ್ಮೇರಂದ್ರಾಶ್ವಿಯುಗ್ಬುಧ"–ಇತಿ ತಾರತಮ್ಯರತ್ನಾಲ್ಯಾ । ಬುಧೇತಿ । –"**ಬುಧಾದಪ್ಯಧಮಾ ಉಷಾ**"–ಇತಿ ರತ್ನಾವಲ್ಯೋಕ್ತೇಃ । ಜರಾಸಂಧಸ್ಯ ಪುತ್ರೀ ಚ ಶಲ್ಯಸ್ಯ ಚ ತಥಾತ್ಮಜಾ । ಉಭೇ ಅಪ್ಯಶ್ವಿಭಾರ್ಯೇಷಾ ತಸ್ಯಾ ಅಪ್ಯವರಃ ಶನಿಃ । ಶನೇಸ್ತು ಪುಷ್ಕರೋನ್ಯೂನ"–ಇತಿ ಬೃಹತ್ತಾರತಮ್ಯೋಕ್ತೇಃ. ॥39॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–**

–'**ಸುದರ್ಶನ**'–ಇತಿ ॥ × ಓಂ × ಪಶೂನಾಮಸ್ತಿ ಸುನ್ವತಾಂ ನ ಸೋಮೋ ಅಪ್ರತಾ ಪಪೇಪನ್ಯ ಇದುಪಗಾಯತ ಪನ್ಯ ಉಕ್ಥಾನಿ ಶಂಸಥ ಬ್ರಹ್ಮಾಕೃಣೋತ × ಓಂ × ಸುದರ್ಶಂ ಸುಧಿಯಂ ನಯತಿ ಇತಿ ಸುದರ್ಶನಃ ॥ ಸಹಸ್ರನಾಮಗಮಿದಂ ಕೃಷ್ಣಪರಮ್ ॥ ಅವರಜಃ ಅಭಿಮನ್ಯುಃ ॥ ಚಂದ್ರಾಂಶಯುಕ್ತಃ ಸಿತರಾಂ ಬುಧೋಽಸೌ ಜಾತಃ ಸುಭದ್ರಾಜಠರೇಽರ್ಜುನೇನ ॥ ಧರ್ಮೇರ ಶಕ್ರಾಂಶಯುತೋಽಶ್ವಿನೋಶ್ಚ ತಥೈವ ಕೃಷ್ಣಸ್ಯ ಚ ಸನ್ನಿಧಾನಯುಕ್॥ ಸ್ವಾಹಾತೋ ಮಂತ್ರದೇವತಾ ॥ ಉದಾಕಾತ್ಮಕಃ ಬುಧಃ ತಸ್ಮಾತ್ ಉಷಾನಾಮಾತ್ಮಿಕಾ ತತಃ ॥ ಶಲ್ಯಃ ಮದ್ರರಾಜಃ ॥ ಮಾಗಧಃ ಜರಾಸಂಧಃ ॥ ಜರಾಸಂಧಸ್ಯ ಪುತ್ರೀ ಚ ಶಲ್ಯಸ್ಯ ಚ ತಥಾತ್ಮಜಾ ॥ ಉಭೇ ಅಪ್ಯಶ್ವಿಭಾರ್ಯೇಷಾ ॥ ಉದರ ಜೋಷೇತ್ಯೇವ ಪಾಠಃ ॥ ಭೀಮಃ ಕನ್ಯಾಂ ಸಹದೇವಸ್ಯ ಹೇತೋಃ ಸಮಗ್ರಹೀತ್ ॥ ನಕುಲಸ್ಯಾದಾತ್ ಮದ್ರರಾಜೋ ಹಿ

ಘೋರ್ವಣಂ ಸ್ವೀಯಾಂ ಕನ್ಯಾಂ ಸಾ ತಥೈವಾಪ್ಯುಷಾ ಹಿ ॥ ಉಷಾ ನಾಮಾತ್ಮಿಕಾ ತತಃ । ಶನಿಃ ಪೃಥಿವ್ಯಾತ್ಮಾ ಕರ್ಮಾತ್ಮಾ ಪುಷ್ಕರಸ್ತಥಾ. ॥39॥

## ಕನ್ನಡಾರ್ಥ

ಸುದರ್ಶನವೆಂಬುದು ವಿಷ್ಣುವಿನ ಸಹಸ್ರನಾಮಗಳಲ್ಲಿರುವುದೊಂದು ನಾಮ. ಸರಿಯಾದ ಜ್ಞಾನವನ್ನು ಕೊಡುವವನೆಂದು ಅದರ ಅರ್ಥ. ಚಂದ್ರಾಂಶ ಯುಕ್ತನಾದ ಬುಧನೇ ಅಭಿಮನ್ಯುವಾಗಿ, ಅರ್ಜುನನಿಂದ ಸುಭದ್ರೆಯಲ್ಲಿ ಹುಟ್ಟಿದನು. ಧರ್ಮ (ಯಮ), ವಾಯು, ಇಂದ್ರ ಇವರುಗಳ ಅಂಶಗಳಿಂದ ಹಾಗೂ,ಶ್ರೀಕೃಷ್ಣ ಮತ್ತು ಅಶ್ವಿನೀದೇವತೆಗಳ ಸನ್ನಿಧಾನಗಳಿಂದ ಯುಕ್ತನಾದವನು. ಸ್ವಾಹಾ ಎಂಬುವಳು ಮಂತ್ರದೇವತೆಯು (ಅಗ್ನಿಪತ್ನಿಯು). ಅವಳಿಗಿಂತ ಬುಧನು ಕಡಿಮೆಯಾದವನು. ಉದಕಾತ್ಮಕನಾದ ಬುಧನಿಗಿಂತ ನಾಮಾತ್ಮಿಕೆಯಾದ ಉಷಾದೇವಿಯು ಕಡಿಮೆಯವಳು. ಜರಾಸಂಧ, ಶಲ್ಯರಾಜರಿಗೆ ಮಗಳಾಗಿ ಉಷಾದೇವಿಯು ಅವತರಿಸಿದಳು. ಇವಳೇ, ಅಶ್ವಿನೀದೇವತೆಗಳ ಹೆಂಡತಿಯು. ಜರಾಸಂಧಪುತ್ರಿ ವಿಜಯಾ-ಎಂಬ ಕನ್ಯೆಯನ್ನು ಸಹದೇವನ ಸಲುವಾಗಿ ಭೀಮಸೇನನು ಸ್ವೀಕರಿಸಿದನು. ನಕುಲನಿಗೆ ಮದ್ರರಾಜನು ತನ್ನ ಮಗಳಾದ ಕರೇಣುಮತಿಯನ್ನು ಕೊಟ್ಟನು. ಇವೆರಡು ರೂಪಗಳು– ಉಷಾದೇವಿಯವೇ ಆಗಿವೆ. ಪೃಥಿವಿಗೆ ಅಭಿಮಾನಿಯು ಶನೈಶ್ಚರನು. ಕರ್ಮಾಖ್ಯ ಕಲಾಭಿಮಾನಿಯು ಪುಷ್ಕರನು. ॥39॥

## [illegible] ಶ್ರೀಗುರುಹೃದಯ ಪ್ರಕಾಶಿಕೆ :-

ಸುದರುಶನನೆಂಬ ಚಕ್ರಾಭಿಮಾನಿ ಕಾಮ, ಇಂದ್ರ- ಮೊದಲಾದವರ ಆದೇಶವುಳ್ಳವನಾಗಿ,ಬುಧನು ಅರ್ಜುನನ ಪುತ್ರ ಅಭಿಮನ್ಯುವಾಗಿ ಹುಟ್ಟಿದನು. ಅಶ್ವಿನೀಪತ್ನಿ ಉಷಾದೇವಿಯು ಶಲ್ಯರಾಯನ ಮಗಳಾಗಿಯೂ, ಜರಾಸಂಧನ ಮಗಳಾಗಿಯೂ-ಎರಡು ರೂಪದಿಂದ ಹುಟ್ಟಿದಳು. ಈಕೆಗಿಂತಲೂ, ಶನೈಶ್ಚರನು ಕಡಿಮೆ, ಈತಗಿಂತಲೂ,ಸತ್ಕರ್ಮಾಭಿಮಾನಿ-ಎಂದು ಜ್ಞಾನಿಗಳಿಂದ ಕರೆ–

ಸುವ ಪುಷ್ಕರನು ಕಡಿಮೆ. ಈ ಮೇಲೆ ಹೇಳಲ್ಪಟ್ಟವರು, ಮೇಲಿನವರಿಗಿಂತ ಕೆಳಗಿನವರು-ಎರಡು ಗುಣದಿಂದ ಕಡಿಮೆಯಂತ ತಿಳಿಯಬೇಕು. ॥39॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಹರಿಯ ಚಕ್ರಾಯುದ್ಧಕ್ಕೆ **ಸುದರ್ಶನ**-ಎಂತ ಹೆಸರು. ಈ ಚಕ್ರಾಭಿಮಾನಿಯು **ಮನ್ಮಥನು.**

2. **ಶಕ್ರ**-ಇಂದ್ರದೇವರು. ಆದಿಶಬ್ದದಿಂದ ಚಂದ್ರ-ಅಶ್ವಿನೀದೇವತೆಗಳು-ವಾಯುದೇವರು-ರಮಾದೇವಿಯರು-ಈ ದೇವತೆಗಳು ಗ್ರಾಹ್ಯ.

3. **ಬುಧ :-**

ಬೃಹಸ್ಪತ್ಯಾಚಾರ್ಯರ ಪತ್ನಿ,ತಾರೆಯಲ್ಲಿ ಚಂದ್ರನಿಂದ ಪುತ್ರನಾಗಿ ಅವತರಿಸಿದವನು. ನವಗ್ರಹಗಳಲ್ಲಿ ಒಬ್ಬನು. ಬುಧನು ಇಲಾ-ಎಂಬಾಕೆಯಲ್ಲಿ ಪುರೂರವನೆಂಬ ಪುತ್ರನನ್ನು ಪಡೆದನು. ಇಂತಹ ಬುಧನು ಕಾಮ-ಇಂದ್ರಾದಿ ದೇವತೆಗಳ ಆವೇಶಯುಕ್ತನಾದವನು.

4. **ಅಶ್ವಿನೀಭಾರ್ಯಾ :-**

ಅಶ್ವಿನೀದೇವತೆಗಳ (ನಾಸತ್ಯ ಮತ್ತು ದಸ್ರ) ಪತ್ನಿ **ಉಷಾದೇವಿಯು.** ಈ ಉಷಾದೇವಿಗೆ ಎರಡು ಅವತಾರಗಳು.

(1) ಮದ್ರದೇಶಾಧಿಪತಿಯಾದ ಶಲ್ಯರಾಜನ ಪುತ್ರಿಯಾಗಿ ಜನಿಸಿದಳು. ಶಲ್ಯನು ಋತಾಯನನೆಂಬ ರಾಜನ ಪುತ್ರ. ಪಾಂಡುರಾಜನ ಕಿರಿಯಪತ್ನಿ ಮಾದ್ರೀದೇವಿ-ಈತನ ಸೋದರಿ. ಇದರಿಂದ,ಪಾಂಡವರಿಗೆ ಶಲ್ಯನು ಸೋದರ ಮಾವನಾಗಬೇಕು. ಶಲ್ಯನಿಗೆ **ಕರೇಣುಮತಿ**-ಎಂಬ ಪುತ್ರಿಯು ಜನಿಸಿದಳು.

ಈಕೆ ಉಷಾದೇವಿಯ ಅವತಾರಳು. ಶಲ್ಯ ಪುತ್ರಿಯನ್ನು ನಕುಲನು (ಅಶ್ವಿನೀ ದೇವತೆಯ ಅವತಾರನು) ವರಿಸಿದನು.

(2) ಮಗಧರಾಜ್ಯದ ಅಧಿಪತಿಯಾದ ಜರಾಸಂಧನ ಪುತ್ರಿಯಾಗಿ ಉಷಾದೇವಿ ಅವತರಿಸಿದಳು. ಶ್ರೀಕೃಷ್ಣನ ಕೃಪೆಯಿಂದ ಭೀಮಸೇನದೇವರು ಜರಾಸಂಧನನ್ನು ಸಂಹರಿಸಿದ ನಂತರ, ಜರಾಸಂಧನ ಪುತ್ರನಾದ ಸಹದೇವನು ಭೀಮಸೇನದೇವರಿಗೆ ಒಂದು ದಿವ್ಯರಥವನ್ನೂ ಮತ್ತು ತನ್ನ ತಂಗಿಯಾದ **ವಿಜಯೆ**-ಎಂಬ ಕನ್ಯೆಯನ್ನು ಕೊಟ್ಟು, ಅವರಿಗೆ ಶರಣಾಗತನಾದನು. ಜರಾ ಸಂಧನ ಪುತ್ರನು ಏಕಾದಶರುದ್ರ ಗಣಕ್ಕೆ ಸೇರಿದ ಪತ್ರತಾಪನೆಂಬ ರುದ್ರನ ಅವತಾರನು. ಭೀಮಸೇನದೇವರು ವಿಜಯೆಯನ್ನು ತಮ್ಮ ತಮ್ಮನಾದ ಸಹದೇವನಿಗೆ ಕೊಟ್ಟು, ವಿವಾಹಮಾಡಿದರು.

ಇದರಿಂದ, ಅಶ್ವಿನೀದೇವತೆಗಳ ಭಾರ್ಯೆ- ಉಷಾದೇವಿಯು ಶಲ್ಯಪುತ್ರಿ ಯಾಗಿ ಅವತರಿಸಿ, ನಕುಲನ ಪತ್ನಿಯಾಗಿಯೂ, ಜರಾಸಂಧನ ಪುತ್ರಿಯಾಗಿ ಅವತರಿಸಿ, ಸಹದೇವನ ಪತ್ನಿಯಾದಳು. ಈ ವಿಷಯವನ್ನು ದಾಸರಾಯರು- **ಶಲ್ಯ ಮಾಗಧರ ಉದರಜ-ಉಷಾದೇವಿ**-ಎಂದಿದ್ದಾರೆ.

5. **ಶನೈಶ್ಚರ :–**

ಶನೈಶ್ಚರನು ಪೃಥ್ವೀತತ್ತ್ವಕ್ಕೆ ಅಭಿಮಾನಿಯು. ಶನೈಶ್ಚರನು ಉಷಾ ದೇವಿ ಮತ್ತು ಬುಧರಿಗಿಂತ ಎರಡು ಗುಣಗಳಿಂದ ಅಧಮನಾಗಿದ್ದಾನೆ.

6. **ಪುಷ್ಕರ :–**

ಈತನು ಸತ್ಕರ್ಮಾಭಿಮಾನಿದೇವತೆಯು. ಪುಷ್ಕರನು ಶನೈಶ್ಚರನಿಗಿಂತ ಅವರನು- ಎಂದು ಜ್ಞಾನಿಗಳು ತಿಳಿಯುತ್ತಾರೆ.

ಹೀಗೆ, ಮನ್ಮಥ ಇಂದ್ರಾದಿ ದೇವತೆಗಳ ಆವೇಶಯುಕ್ತನಾದ ಚಂದ್ರನ ಪುತ್ರ ಬುಧ–ನಂತರ ಶಲ್ಯ ಜರಾಸಂಧರ ಪುತ್ರಿಯಾಗಿ ಅವತರಿಸಿದ ಅಶ್ವಿನೀ

ದೇವತೆಗಳ ಪತ್ನಿ ಉಷಾದೇವಿ-ತದನಂತರ ಪೃಥಿವೀ ತತ್ತ್ವಾಭಿಮಾನಿ ಶನೈಶ್ಚರ ನಂತರ, ಕರ್ಮಾಭಿಮಾನಿದೇವತೆ ಪುಷ್ಕರ-ಈ ರೀತಿ-ತಾರತಮ್ಯಕ್ರಮ ತಿಳಿಯ ಬೇಕು. ॥39॥

★★

## ಪದ್ಯ-೪೦

**ಮೂಲ :-**

**ಉದ್ವಹಾ ಮರುತಾನ್ವಿತ ವಿರಾ ।**
**ಧ ದ್ವಿತಿಯು ಸಂಜಯನು ತುಂಬುರ ।**
**ವಿದ್ವದುತ್ತಮ ಜನಮೇಯ ತ್ವಷ್ಟ್ರ್ಯಯುತ ಚಿತ್ರರಥ ॥**
**ಸದ್ವಿಸುತ ದಮಘೋಷಕ ಕಬಂ ।**
**ಧ ದ್ವಯರು ಗಂಧರ್ವ ದನು ಮನು ।**
**ಪದ್ಮಸಂಭವಯುತಾಕ್ರೂರ ಕಿಶೋರನೆನಿಸುವನು ॥೪೦॥**

**ಅವತರಣಿಕೆ :-**

ಆಜಾನಜದೇವತೆಗಳ ವಿಚಾರವನ್ನು ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ. ॥40॥

**ಪ್ರತಿಪದಾರ್ಥ :-**

**ತುಂಬುರ**= ತುಂಬುರನೆಂಬ ಹೆಸರಿನ ದೇವಗಂಧರ್ವನ ಅವತಾರಗಳು. (ಇವನು 19ನೆಯ ಕಕ್ಷೆಗೆ ಸೇರಿದವನು). **ಮರುತಾನ್ವಿತ** = ಮರುತನ ಆವೇಶದಿಂದ ಯುಕ್ತನಾದ. **ಉದ್ವಹಾ** = ಉದ್ವಹಾ-ಎಂಬ ಹೆಸರಿನ

ಅವತಾರ. **ವಿರಾಧ** = ವಿರಾಧ– ಎಂಬ ಹೆಸರಿನ ಅವತಾರ. **ದ್ವಿತೀಯ ಸಂಜಯನು** = ಎರಡನೆಯ ಅವತಾರ ಸಂಜಯನು, **ಚಿತ್ರರಥ** = 19 ನೆಯ ಕಕ್ಷಾಪನ್ನನಾದ ಚಿತ್ರರಥನೆಂಬ ಗಂಧರ್ವನು, **ವಿದ್ಯಾದುತ್ತಮ** = ವಿದ್ಯೆಯಲ್ಲಿ ಶ್ರೇಷ್ಠನಾದ, **ಜನಮೇಜಯ** = ಪರೀಕ್ಷಿದ್ರಾಜನ ಪುತ್ರ ಜನಮೇಜಯನಾಗಿ ಅವತರಿಸಿದನು. **ತ್ವಷ್ಟ್ರಯುತ** = ಜನಮೇಜಯನು ತ್ವಷ್ಟೃನಾಮಕ ಸೂರ್ಯನ ಆವೇಶದಿಂದ ಯುಕ್ತನಾದವನು. ಇವನೂ ಕರ್ಮಜನೇ, **ದನು** = ದನುನಾಮಕ ಗಂಧರ್ವನು. **ಸದ್ವಿನುತ** = ಸಜ್ಜನರಿಂದ ಸ್ತುತ್ಯನಾದ. **ಧರ್ಮಘೋಷಕ** = ಧರ್ಮಘೋಷರಾಯ–ಎಂಬ ಅವತಾರ. **ಕಬಂಧ** = ಕಬಂಧ ಎಂಬ ರಾಕ್ಷಸನಾಗಿ ಅವತಾರ. **ದ್ವಯರು** = ಇವೆರಡು ಅವತಾರಗಳು, **ಕಿಶೋರನು** = ಕಿಶೋರನಾಮಕ ಗಂಧರ್ವನು. **ಮನು** = ಸ್ವಾಯಂಭುವಮನುವಿನ ಆವೇಶ ಮತ್ತು **ಪದ್ಮಸಂಭವಯುತ** = ಬ್ರಹ್ಮದೇವರ ಆವೇಶ–ಇವುಗಳಿಂದ ಯುಕ್ತನಾಗಿ, **ಅಕ್ರೂರನೆನಿಸುವನು** = ಅಕ್ರೂರನೆಂಬ ಅಭಿದಾನದಿಂದ ಅವತರಿಸಿದನು. ॥40॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–

ಇಲ್ಲಿಂದ, ಆಜಾನಜ ದೇವತೆಗಳ ವಿಚಾರ ಹೇಳುತಾರೆ. ಈ ಆಜಾನಜರಲ್ಲಿ ಸೇರಿದ ಗಂಧರ್ವರು ನೂರುಮಂದಿ. ಇವರಲ್ಲಿ, ಎಂಟು ಮಂದಿ ಕರ್ಮಜದೇವತೆಗಳಿಗೆ ಸಮಾನರು. ಆದ್ದರಿಂದ, ಈ ಎಂಟು ಮಂದಿಯನ್ನು ಕರ್ಮಜರ ಕಕ್ಷವಾದ 19ನೇ ಕಕ್ಷದಲ್ಲಿ ಸೇರಿಸಿದೆ. ಆ ಸೇರಿಸಿದ ಗಂಧರ್ವರ ನಾಮ, ಅವತಾರ 19ನೇ ಕಕ್ಷದಲ್ಲಿ ಅಧ್ಯಾಹಾರ ಮಾಡಿಕೊಂಡು, ವಿವರ ಮಾಡಲ್ಪಟ್ಟಿದೆ. ತದನ್ಯರಾದವರನ್ನ ಇಲ್ಲಿ ಸ್ಪಷ್ಟವಾಗಿ ವಿವರ ಮಾಡುತಾರೆ.

ತುಂಬುರನಾಮಕ ಗಂಧರ್ವ. ಇವನ ಅವತಾರ–ಈ ಕರ್ಮಜರಾದ 19ನೇ

ಕಕ್ಷದವ-ವಿರಾಧ ಎಂತ ಒಂದು. ಎರಡನೇ ಅವತಾರ ಸಂಜಯನು. ಅಂತು, ಎರಡು ಅವತಾರಗಳು. ಉದ್ವಹನಾಮಕನಾದ ಮರುತನ ಆವೇಶದಿಂದ ಯುಕ್ತನು. ತುಂಬುರನ ವಿಚಾರ ಮುಗಿಯಿತು. ಚಿತ್ರರಥಗಂಧರ್ವನ ಅವತಾರ. ಇವನು ತ್ವಷ್ಟು ನಾಮಕ ಸೂರ್ಯನ ಆವೇಶಯುಕ್ತನಾದವನು. ಇವನು ಕರ್ಮಜರಲ್ಲಿ ಸೇರಿದ್ದಾನೆ. ದನುನಾಮಕ ಗಂಧರ್ವನ ಅವತಾರ, ಸಮೀಚೀನರಾದವರಿಂದ ನೂತನಾದ ದಮಘೋಷರಾಯ- ಎಂತ ಒಂದು ಅವತಾರ. ಕಬಂಧ-ಎಂತ ಅವತಾರ ಒಂದು. ಅಂತು, ಎರಡು ಅವತಾರ ವುಳ್ಳವನು- ಎಂತ ತಾತ್ಪರ್ಯ. ಕಿಶೋರನಾಮಕ ಗಂಧರ್ವನ ಅವತಾರ-ಅಕ್ರೂರ-ಎಂತ ಅವರ ಮಾಡಿದನು. ಇವನಲ್ಲಿ ಸ್ವಾಯಂಭುಮನು ಆವೇಶ ಒಂದು, ಬ್ರಹ್ಮದೇವರ ಆವೇಶ ಒಂದು. ಈ ಇಬ್ಬರ ಆವೇಶದಿಂದ ಯುಕ್ತನಾದವನು-ಅಕ್ರೂರ-ಎಂತ ಎನಿಸೋವನಾದನು. ॥40॥

## ೨. ಭಾವಪ್ರಕಾಶಿಕೆ :-

ತುಂಬರು-ಎಂಬ ಗಂಧರ್ವನಿಗೆ ವಿರಾಧನೆಂಬ ರಾಕ್ಷಸರೂಪ 1. ಎರಡನೆಯದು ಸಂಜಯನೆಂಬುವ ರೂಪವು 1. ಹೀಗೆ, ಎರಡು ಅವತಾರಗಳು. ತುಂಬರು-ಎಂಬ ಗಂಧರ್ವನು ವಿರಾಧನೆಂಬ ವಿಷಯದಲ್ಲಿ ನಿರ್ಣಯ 5ನೆಯ ಅಧ್ಯಾಯದಲ್ಲಿ ಹೇಳಿದ ವಾಕ್ಯದಂತೆ, ರಾಮದೇವರು ಸೀತಾಲಕ್ಷ್ಮಣರಿಂದ ಕೂಡಿ, ದಂಡಕಾರಣ್ಯ ಪ್ರವೇಶಮಾಡಿ ಬರುತ್ತಿರುವಾಗ, ವಿರಾಧನೆಂಬ ರಾಕ್ಷಸನನ್ನು ಕಂಡರು. ಅವನು ಪೂರ್ವದಲ್ಲಿ ತುಂಬರು ಎಂಬ ಗಂಧರ್ವನು. ಹಿಂದಕ್ಕೆ ಒಂದು ದಿವಸ,ಕುಬೇರನ ಅಪ್ಪಣೆಯಂತೆ ಊರ್ವಶಿಯು ಮನೆಗೆ ಅವಸರವಾಗಿ ಹೋಗುತ್ತಿರುವಾಗ,ಮಾರ್ಗದಲ್ಲಿ ತುಂಬರು-ಎಂಬ ಗಂಧರ್ವನು,ನಿರ್ಬಂಧದಿಂದ ಆಕೆಯನ್ನು ತಾನು ನಿಲ್ಲಿಸಿ, ಕುಬೇರನಲ್ಲಿ ಕಾಲಕ್ಕೆ ಸೇರದಂತೆ ಮಾಡಿದನು. ಇದನ್ನು ಕುಬೇರನು ತಿಳಿದು, ನೀನು ರಾಕ್ಷಸನಾಗಿ ಹುಟ್ಟೆಂದು ಗಂಧರ್ವನಿಗೆ ಶಾಪವನ್ನು ಕೊಟ್ಟನು. ಅವನೇ ವಿರಾಧನೆಂಬ ರಾಕ್ಷಸನಾಗಿ ಹುಟ್ಟಿ, ರುದ್ರ-ದೇವರ ವರದಿಂದ ಒಬ್ಬರಿಂದಲೂ ಕೊಲ್ಲಲ್ಪಡದವನಾಗಿದ್ದನು.

ಇದೇ ತುಂಬರು ಸಂಜಯನೆಂಬ ವಿಷಯದಲ್ಲಿ, ನಿರ್ಣಯ 11ನೆಯ ಅಧ್ಯಾಯದಲ್ಲಿ ಹೇಳಿದ ವಾಕ್ಯದಂತೆ, ಧೃತರಾಷ್ಟ್ರರಾಜನ ಸಾರಥಿಯಾದ ಗವ-ದ್ಗಣನೆಂಬ ಸೂತಜಾತಿಯವನ ದೆಸೆಯಿಂಧ ತುಂಬುರು- ಎಂಬ ಗಂಧರ್ವನು, ಉದ್ವಹನೆಂಬ ಮರುತ್ತನ ಅಂಶದಿಂದ ಕೂಡಿ ಸಂಜಯನೆಂಬ ಹೆಸರಿನಿಂದ ಹುಟ್ಟಿದನು-ಎಂದು ತಿಳಿದುಬರುತ್ತದೆ. ಚಿತ್ರರಥನೆಂಬ ಗಂಧರ್ವನು ತ್ವಷ್ಟ-ನೆಂಬ ಸೂರ್ಯನ ಆವೇಶದಿಂದ ಕೂಡಿ,ದ್ರುಪದರಾಜನ ಮಗನಾಗಿ, ಜನಮೇಜ-ಯನೆಂಬ ಹೆಸರಿನಿಂದ ಜನಿಸಿದನು. ನಿರ್ಣಯ 18ನೆಯ ಅಧ್ಯಾಯದಲ್ಲಿ ಹೇಳಿರುವ ವಾಕ್ಯದಂತೆ, ದ್ರೋಣಾಚಾರ್ಯರ ಅಪೇಕ್ಷೆಯಂತೆ ದ್ರುಪದರಾಜನನ್ನು ಜಯಿಸಿ ತಂದು, ದ್ರೋಣಾಚಾರ್ಯರಿಗೆ ಒಪ್ಪಿಸುವುದಕ್ಕಾಗಿ ಭೀಮಾರ್ಜುನರು ದ್ರುಪದರಾಜನ ಸಂಗಡ ಯುದ್ಧಕ್ಕೆ ಬರಲು,ದ್ರುಪದ ತನ್ನ ಮಕ್ಕಳಿಂದ ಕೂಡಿ ಯುದ್ಧಕ್ಕೆ ಬಂದನು. ಶಿಖಂಡಿಯು ಎಲ್ಲರಿಗೂ ಮುಂದೆ ಹೊರಟನು. ಅವನ ಹಿಂದೆಯೇ, ಅವನ ತಮ್ಮನಾದ ಜನಮೇಜಯನು ಬಾಣಗಳನ್ನು ವರ್ಷಿಸುತ್ತಾ ಬಂದನು ಅವನು ಪೂರ್ವದಲ್ಲಿ ಚಿತ್ರರಥನೆಂಬ ಗಂಧರ್ವನು. ತ್ವಷ್ಟನೆಂಬ ಸೂರ್ಯನ ಅಂಶದಿಂದ ಕೂಡಿದವನು-ಎಂದು ಹೇಳಿರುವರು.

–"ಧಮಘೋಷಕ ಬಂಧ್ವಾದನುಗಂಧರ್ವ ಉಚ್ಯತೇ"-ಎಂಬ ಬೃಹತ್ತಾರ ತಮ್ಯ ವಾಕ್ಯದಂತೆ,ರಾಮಾವತಾರದಲ್ಲಿ ರಾಮದೇವರಿಂದ ಮೃತನಾದ ಕಬಂದ ನೆಂಬ ರಾಕ್ಷಸನೂ, ಶ್ರೀಕೃಷ್ಣನ ಸೋದರತ್ತೆಯ ಪತಿಯಾದ ದಮಘೋಷ ರಾಜನೂ, ದನುವೆಂಬ ಗಂಧರ್ವನ ರೂಪಗಳು. –"ಬ್ರಹ್ಮಾಸ್ವಾಯಂಭು ವಾವಿಷ್ಟೋಹ್ಯಕ್ರೂರಃ ಪ್ರಾಕ್ಕಿಶೋರಃ"–ಎಂಬ ಪ್ರಮಾಣದಿಂದ,ಬ್ರಹ್ಮದೇವರು ಮತ್ತು ಸ್ವಾಯಂಭುವಮನು-ಇವರ ಅಂಶದಿಂದ ಕೂಡಿದ ಕಿಶೋರನೆಂಬ ಗಂಧ ರ್ವನು ಅಕ್ರೂರನೆಂದು ಸಿದ್ಧವಾಗುವುದು. ॥40॥

**೩. ಭಾವದರ್ಪಣ :-**

ವಿರಾಧ, ಸಂಜಯ ಜನುಮೇಜಯಾದಿಗಳ ವಿವರ ಹೇಳುತ್ತಾರೆ, ಉದ್ವ ಹೇತಿ, –"ವಿರಾಧಶ್ಚೋದ್ವಹಾವಿಷ್ಟೋ ಸಂಜಯೋ ದೌ ಚ ತುಂಬುರುಃ ।

ಜನಮೇಜಯಶ್ಚಾವಿಷ್ಟಸ್ತ್ವಷ್ಟಾ ಚಿತ್ರರಥಃ ಪುರಾ"–ದಮಘೋಷಕ ಎಂದರು ದಮಃಘೋಷನೆಂಬರ್ಥ। ಸ್ವಾರ್ಥೇಕ ಪ್ರತ್ಯಯಃ। ಇಂತೇ ಇರೋಣದರಿಂದ ಸಿದ್ಧ। –"ದಮಘೋಷಕಬಂಧೌ ದ್ವೌ ದನುಗಂಧರ್ವ ಉಚ್ಯತೇ। ಬ್ರಹ್ಮಾಸ್ವಾಯಂಭುವಾವಿಷ್ಣೋಹ್ಯಕ್ರೂರಃ ಪ್ರಾಕ್ಕಿಶೋರಕ"–ಇತಿ. ॥40॥

## ೪. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :-

ಉದ್ವಹ ಇತಿ ॥ –'ದ್ವಿತೀಯು'-ದೌ ತುಂಬುರೂ(ರು) ದ್ವಹಾವಿಷ್ಟ ವಿರಾಧಸಂಜಯೌ ದ್ವೌ ತುಂಬುರೂ ಇತ್ಯನ್ವಯಃ ॥ ರಾಮೋಪಿ ತತ್ರ ದದೃಶೇ ಧನವಸ್ಯ ಶಾಪಾತ್ ಗಂಧರ್ವಮುರ್ವಶಿರತೇರಥ ಯಾತುಧಾನೀವಮ್ ॥ ಪ್ರಾಪ್ತ್ಯಂ ದಶಾಂ ಸಪದಿ ತುಂಬುರು ನಾಮಧೇಯಂ ನಾಮ್ನಾ ವಿರಾಧಮಪಿ ಶಂಭುವರಾದವಧ್ಯಂ ॥ ಸಮಸ್ತ ಗಂಧರ್ವಪತಿಃ ಸ ತುಂಬುರುಃ ॥ ಯ ಉದ್ವಹೋನಾಮ ಮರುತ್ ತದಂಶಯುಕ್ತಃ ವಶೀ ಸಂಜಯನಾಮಧೇಯಃ ॥ ದಮಘೋಷಕಬಂಧೌ ದ್ವೌ ಗಂಧರ್ವ ಉಚ್ಯತೇ ॥ ಬ್ರಹ್ಮಸ್ವಾಯಂಭುವಾವಿಷ್ಟಃ ಹ್ಯಕ್ರೂರಃ ಪ್ರಾಕ್ಕಿಶೋರಕಃ ॥ ಯುಕ್ತ್ಯೋ ಯಯೌ ದಮಘೋಷೇಣ ಸಾರ್ಧಂ ಗಂಧರ್ವೋಸೌ ದನುನಾಮಾ ಕರೌ ಸಃ ॥ ಸಹಸಾಥ ಕಬಂಧನಾಮ್ನಾ॥ ನಾಮ್ನಾ ದನುಂ ತ್ರಿಜಟಯೈವ ಪುರಾಭಿಜಾತಂ ಗಂಧರ್ವಂ ॥ ದಮಘೋಷ ಕದಂಬ ಇತ್ಯೇವ ಪಾಠಃ ॥ ನಾಮ್ನಾ ಕಿಶೋರ ಇತಿ ಯಃ ಸುರಗಾಯಕೋsಭೂತ್ ಸ್ವಾಯಂಭುವಸ್ಯ ಚ ಮನೋಃ ಪರಮಾಂಶಯುಕ್ತಃ ॥ ಆವೇಶಯತ್ ಕರ್ಮಜಸ್ಯ ॥ ಇತಿ. ॥40॥

## ಕನ್ನಡಾರ್ಥ

"ವಿರಾಧ ಸಂಜಯರಿಬ್ಬರು ತುಂಬುರು ಗಂಧರ್ವನ ಅವತಾರಭೂತರು. ರಾಮನು ದಂಡಕಾರಣ್ಯದಲ್ಲಿ ವಿರಾಧನೆಂಬ ರಾಕ್ಷಸನನ್ನು ನೋಡಿದನು. ಪೂರ್ವದಲ್ಲಿ, ಅವನು ತುಂಬುರುನಾಮಕ ಗಂಧರ್ವನು. ಕುಬೇರನಿಂದ ಊರ್ವಶಿಯನ್ನು ವಿಯೋಗಿಸಿದುದರಿಂದ, ಅವನ ಶಾಪದಿಂದ ರಾಕ್ಷಸನಾಗಿ ಹುಟ್ಟಿದನು.

ರುದ್ರದೇವರ ವರದಿಂದ ಅವಧ್ಯನಾಗಿದ್ದನು." —ಎಂದು ನಿರ್ಣಯದಲ್ಲಿ ನಿರೂಪಿಸಿರುತ್ತಾರೆ. -"ಸಮಸ್ತಗಂಧರ್ವಪತಿಯಾದ ತುಂಬುರನೇ ಉದ್ವಹನೆಂಬ ಮರುದಂಶಯುಕ್ತನಾಗಿ ಹುಟ್ಟಿದನು. ಅವನೇ ಸಂಜಯನು. ದನುವೆಂಬ ಗಂಧರ್ವನ ಅವತಾರಗಳೆಂದು-ದಮಘೋಷ ಹಾಗೂ ಕಬಂಧರಾಕ್ಷಸರೆಂದು— ಕಬಂಧನು, ಪೂರ್ವದಲ್ಲಿ ತ್ರಿಜಟಾ ಎಂಬ ರಾಕ್ಷಸಿಯಲ್ಲಿ ಹುಟ್ಟಿದ್ದನು. ಹೀಗೆ ದನುವೆಂಬ ಗಂಧರ್ವನಿಗೆ ಕಬಂಧ, ದಮಘೋಷರೆಂಬ ಎರಡು ರೂಪಗಳು. ಕಿಶೋರನೆಂಬ ದೇವಗಾಯಕ ಗಂಧರ್ವನು ಸ್ವಾಯಂಭುವಮನುವಿನ ಅಂಶಯುಕ್ತನಾಗಿ, ಅಕ್ರೂರನೇಂಬುವನಾಗಿ ಹುಟ್ಟಿದನು. ಅಕ್ರೂರನು ಬ್ರಹ್ಮದೇವರ ಆವೇಶದಿಂದ ಕೂಡಿದವನು." – ಹೀಗೆ, ನಿರ್ಣಯದಲ್ಲಿ ಶ್ರೀಮದಾಚಾರ್ಯರು ನಿರೂಪಿಸಿರುತ್ತಾರೆ. ॥40॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ತುಂಬುರು ಎಂಬ ಗಂಧರ್ವನು, ಶಾಪದಿಂದ ವಿರಾಧನೆಂಬ ರಾಕ್ಷಸನಾಗಿ ಹುಟ್ಟಿದ್ದು. ಅವನೇ ಉದ್ವಹನೆಂಬ ವಾಯುವಿನಾವೇಶಯುಕ್ತನಾಗಿ, ಸಂಜಯನೆಂದು ಧೃತರಾಷ್ಟ್ರರಾಯನಿಗೆ ಮಂತ್ರಿಯಾಗಿ ಹುಟ್ಟಿದನು. ವಿದ್ವದುತ್ತಮನೆಂಬ ಜ್ಞಾನಿಶ್ರೇಷ್ಠನು, ಜನಮೇಜಯನೆಂಬ ಪಾಂಡವರ ಕಾಲದವನು, ತ್ವಷ್ಟ ಎಂಬ ಸೂರ್ಯಾಂಶಯುಕ್ತನಾಗಿ ಚಿತ್ರರಥನೆಂಬ ಗಂಧರ್ವನು ಹುಟ್ಟಿದನು. ದನುವೆಂಬ ಗಂಧರ್ವನು ಶಾಪಮೂಲಕವಾಗಿ, ಕಬಂಧನೆಂಬ ರಾಕ್ಷಸನಾಗಿ ಹುಟ್ಟಿದ್ದವನೇ ದಮಘೋಷರಾಯನಾಗಿ ಹುಟ್ಟಿದನು. ಸಜ್ಜನರಿಂದ ಶ್ಲಾಘಿತನಾದ ಕಿಶೋರನೆಂಬ ಗಂಧರ್ವನು, ಪದ್ಮಸಂಭವನೆಂಬ ಬ್ರಹ್ಮಾವಿಷ್ಟನಾಗಿ ಅಕ್ರೂರನೆಂದು ಹುಟ್ಟಿದನು. ॥40॥

## ಸರ್ವವ್ಯಾಖ್ಯಾನಸಾರಸಂಗ್ರಹ

1. **ತುಂಬುರ**—ತುಂಬುರನಾಮಕ ದೇವಗಂಧರ್ವನಿಗೆ ಎರಡು ಅವತಾರಗಳು: (1) ವಿರಾಧ-ಎಂಬ ರಾಕ್ಷಸಜನ್ಮ ಮತ್ತು (2) ಸಂಜಯನೆಂಬ ಅವತಾರ.

2. ತುಂಬುರನು **ಉದ್ವಹ-ನಾಮಕ** ಮರುತಆವೇಶದಿಂದ ಯುಕ್ತ-ನಾದವನು. ಒಮ್ಮೆ, ಕುಬೇರನ ಅಪ್ಪಣೆಯಂತೆ ಊರ್ವಶೀ-ಎಂಬ ಅಪ್ಸರ ಸ್ತ್ರೀಯು ಕುಬೇರನ ಮನೆಗೆ ಅವಸರವಾಗಿ ಹೋಗುತ್ತಿದ್ದಳು. ಆಗ ಮಾರ್ಗ ಮಧ್ಯದಲ್ಲಿ ತುಂಬುರ-ಎಂಬ ದೇವಗಂಧರ್ವನು ಆಕೆಯ ಲಾವಣ್ಯಕ್ಕೆ ಮೋಹ ಗೊಂಡು, ನಿರ್ಬಂಧದಿಂದ ಆಕೆಯನ್ನು ತಡೆದು ನಿಲ್ಲಿಸಿದನು. ಆಕೆಯು ಕುಬೇರ ನನ್ನು ಸಕಾಲಕ್ಕೆ ಸೇರಲಾಗಲಿಲ್ಲ. ಅದನ್ನು ತಿಳಿದು,ಕುಬೇರನು,ತುಂಬುರನನ್ನು ರಾಕ್ಷಸನಾಗೆಂದು ಶಾಪವನ್ನು ಕೊಟ್ಟನು. ಅವನೇ **ವಿರಾಧ**-ನೆಂಬ ಹೆಸರಿನ ರಾಕ್ಷಸನಾಗಿ ಜನಿಸಿ, ದಂಡಕಾರಣ್ಯದಲ್ಲಿ ಮುನಿ ಸಜ್ಜನರನ್ನು ಪೀಡಿಸುತ್ತಿದ್ದನು. ಶ್ರೀರಾಮಲಕ್ಷ್ಮಣರು ದಂಡಕಾರಣ್ಯ ಪ್ರವೇಶಿಸಿದ ಸಮಯದಲ್ಲಿ, ವಿರಾಧನು ಸೀತೆಯನ್ನು ಅಪಹರಿಸಿದನು. ಆಗ,ರಾಮ ಲಕ್ಷ್ಮಣರು ಹರಿತವಾದ ಬಾಣ ಗಳಿಂದ ಅವನ ಬಾಹುದ್ವಯಗಳನ್ನು ಕಡಿದರು. ಆಗ, ವಿರಾಧನು ಮೃತ ಹೊಂದಿ, ಪೂರ್ವಗಂಧರ್ವದೇಹವನ್ನು ಪಡೆದು, ಶ್ರೀರಾಮಲಕ್ಷ್ಮಣರ ಪಾದಾರವಿಂದಗಳಿಗೆ ಎರಗಿ, ಸ್ವಲೋಕವನ್ನು ಸೇರಿದನು. ಇದು ತುಂಬುರನ ರಾಕ್ಷಸನ ಜನ್ಮ.

3. **ಸಂಜಯ :-**

ಧೃತರಾಷ್ಟ್ರನ ಮಂತ್ರಿಯೂ ಮತ್ತು ಸಾರಥಿಯೂ ಆಗಿದ್ದ **ಗವಲ್ಗಣ**-ನೆಂಬ ಸೂತಜಾತಿಯವನ ಪುತ್ರನು **ಸಂಜಯನು.** ತುಂಬುರು ದೇವಗಂಧ ರ್ವನು, **ಉದ್ವಹನೆಂಬ**-ಮರುತ್ತನ ಆವೇಶದಿಂದ ಯುಕ್ತನಾಗಿ ಸಂಜಯನೆಂಬ ಅಭಿಧಾನದಿಂದ ಅವತರಿಸಿದನು. ಇದು ತುಂಬುರನ ದ್ವಿತೀಯಾವತಾರವು. ಸಂಜಯನು ಯಾವಾಗಲೂ ಧೃತರಾಷ್ಟ್ರನೊಡನೇ ಇರುತ್ತಿದ್ದನು. ಪಾಂಡವರು ಪಗಡೆಯಾಟದಲ್ಲಿ ಸೋತಾಗ, ಧೃತರಾಷ್ಟ್ರನಿಗೆ ಹಿತೋಪದೇಶ ಮಾಡಿದವನು. ವ್ಯಾಸಮುನಿಯು ಅನುಗ್ರಹದಿಂದ,ದಿವ್ಯದೃಷ್ಟಿಯನ್ನು ಪಡೆದು, ಜಾತ್ಯಂಧನಾದ ಧೃತರಾಷ್ಟ್ರನಿಗೆ,ಭಾರತಯುದ್ಧದಲ್ಲಿ ನಡೆಯುತ್ತಿದ್ದ ವಿವರಗಳನ್ನೆಲ್ಲಾ ಸಚಿತ್ರ ವಾಗಿ ವರ್ಣಿಸುತ್ತಿದ್ದನು. ಭಾರತಯುದ್ಧ ಮುಗಿದಕೂಡಲೇ,ಸಂಜಯನಿಗಿದ್ದ

ಮಾಯವಾಯಿತು. ಧೃತರಾಷ್ಟ್ರನು ಗಾಂಧಾರೀ ಕುಂತೀಯ
, ಕಾಳ್ಗಿಚ್ಚನ್ನು ಹೊಕ್ಕು,ದೇಹತ್ಯಾಗಮಾಡಿದ ನಂತರ, ಸಂಜಯನು
ದ ಕಡೆಗೆ ಹೋದನು.

ತುಂಬುರನು ದೇವಸಭಾಗಾಯಕ ದೇವಗಂಧರ್ವನು. ಉತ್ತಮ
ಸರ. ತುಂಬುರು, ನಾರದರ ಗಾನ ಪುರಾಣಪ್ರಸಿದ್ಧವು. ಕಶ್ಯಪ
ದ ಅರಿಷ್ಟ-ಎಂಬಾಕೆಯಲ್ಲಿ ಜನಿಸಿದವನು.

**ಚಿತ್ರರಥನೆಂಬ**–ಗಂಧರ್ವನು **ತ್ವಷ್ಟ**–ನೆಂಬ ಸೂರ್ಯನ ಆವೇಶ
ಡಿದವನಾಗಿ, **ಜನಮೇಜಯ**–ನೆಂಬ ನಾಮದಿಂದ ಅವತರಿಸಿದನು.
, ಪುತ್ರ ಪರೀಕ್ಷಿದ್ರಾಜನ ಮಗ ಜನಮೇಜಯ ಬೇರೆ.

**ದನುನಾಮಕನಾದ**–ಗಂಧರ್ವನು ಎರಡು ಅವತಾರಗಳನ್ನು

) ಕಬಂಧನೆಂಬ ರಾಕ್ಷಸಜನ್ಮ. (2) ದಮಘೋಷಕನೆಂಬ ರಾಜನ

**ಕಬಂಧ :–**

ಖವೆಂಬ ಗಂಧರ್ವನಿಗೆ ವಿಶ್ವಾವಸು-ಎಂಬ ನಾಮಾಂತರವೂ ಉಂಟು.
ನುವು ಸ್ಥೂಲಶಿರನೆಂಬ ಹೆಸರಿನ ಮುನಿಯನ್ನು ಅಪಹಾಸ್ಯಮಾಡಿದ.
ಶಪ್ತನಾಗಿ ಕಬಂಧನೆಂಬ ಹೆಸರಿನಿಂದ ರಾಕ್ಷಸನಾಗಿ ಜನಿಸಿದನು.
ದಂಡಕಾರಣ್ಯದಲ್ಲಿ ಸಂಚರಿಸುತ್ತಾ, ಜನರಿಗೆ ಹಿಂಸೆಯನ್ನು ಕೊಡು–
ಒಮ್ಮೆ,ಇಂದ್ರನು ಬೇಟೆಗಾಗಿ ದಂಡಕಾರಣ್ಯಕ್ಕೆ ಬಂದಾಗ, ಕಬಂಧನು
ಎದುರಿಸಿದನು. ಇಂದ್ರನ ವಜ್ರಾಯುಧ ಪ್ರಹಾರದಿಂದ ಕಬಂಧನ
ಸೇರಿತು. ಆಗ,ಇಂದ್ರನು ಅವನಿಗೆ ತೋಳು

ಗಳು ಯೋಜನದಷ್ಟು, ಉದ್ದ ಬೆಳೆಯುವಂತೆ ವರವಿತ್ತನು. ಅದರಿಂದ, ಕಬಂಧನು ತನ್ನ ಬಾಹುದ್ವಯಗಳನ್ನು ಚಾಚಿ, ಒಂದು ಯೋಜನ ದೂರ-ದಲ್ಲಿದ್ದ ಸಮಸ್ತ ಪ್ರಾಣಿಗಳನ್ನು ಬಾಚಿ, ತಿನ್ನುತ್ತಿದ್ದನು. ವನವಾಸದಲ್ಲಿ ಶ್ರೀರಾಮಲಕ್ಷ್ಮಣರು ಇವನ ತೋಳಿನಲ್ಲಿ ಸೆರೆಸಿಕ್ಕರು. ಇಬ್ಬರೂ ಸೇರಿ,ಅವನ ತೋಳುಗಳನ್ನು ಕತ್ತರಿಸಿದರು. ಆಗ ವಿಕಾರವಾದ ರಾಕ್ಷಸಶರೀರ ಹೋಗಿ, ಗಂಧರ್ವದೇಹದಿಂದ ಶ್ರೀರಾಮಲಕ್ಷ್ಮಣರಿಗೆ ವಂದಿಸಿ, ತನ್ನ ರಾಕ್ಷಸದೇಹ ವನ್ನು ರಾಮನೇ ಸಂಸ್ಕಾರ ಮಾಡುವಂತೆ ಕೇಳಿಕೊಂಡನು. ನಂತರ ಗಂಧ-ರ್ವನು ನಿಜರೂಪ ಧರಿಸಿ, ಸೀತೆಯು ರಾವಣನಿಂದ ಅಪಹೃತಳಾದ ಸುದ್ದಿ ಯನ್ನು ತಿಳಿಸಿದ. ಸುಗ್ರೀವ ಸಖ್ಯ ಮಾಡುವಂತೆ ಸೂಚಿಸಿ, ಸ್ವಲೋಕಕ್ಕೆ ತೆರಳಿದ.

### 8. ಅಕ್ರೂರ :-

**ಕಿಶೋರ**-ನೆಂಬ ಹೆಸರಿನ ಗಂಧರ್ವನು ಅಕ್ರೂರನಾಗಿ ಅವತರಿಸಿದನು. ಅಕ್ರೂರನು ಸ್ವಾಯಂಭುವಮನು ಮತ್ತು ಬ್ರಹ್ಮದೇವರು (ಪದ್ಮಸಂಭವ) ಇವರಿಬ್ಬರ ಆವೇಶಯುತನು.

ಅಕ್ರೂರನು ಯದುವಂಶದ ಶ್ವಫಲ್ಕನ ಪುತ್ರನು. ಈತನ ಜನನಿ ಗಾಂದಿನಿ. ಕಂಸನ ಅಷ್ಟಮಂತ್ರಿಗಳಲ್ಲಿ ಒಬ್ಬನು. ಆಹುಕನ ಪುತ್ರಿಯಾದ ಭೂತನು ಎಂಬಾಕೆಯು ಅಕ್ರೂರನ ಪತ್ನಿ. ಅಕ್ರೂರನು ಕಂಸನ ಆದೇಶದಂತೆ, ಗೋಕುಲಕ್ಕೆ ಹೋಗಿ ರಾಮಕೃಷ್ಣರನ್ನು ಮಧುರಾ ಪಟ್ಟಣಕ್ಕೆ ಬಿಲ್ಲು ಹಬ್ಬಕ್ಕೆ ಕರೆತಂದ ಪ್ರಸಂಗ. ಆಗ, ಯಮುನಾನದಿಯ ತೀರದಲ್ಲಿ ಮರಳಿನ ಮೇಲೆ ಮೂಡಿದ್ದ ಶ್ರೀಕೃಷ್ಣನ ಪಾದ ಚಿಹ್ನೆಗಳನ್ನು ನೋಡಿ, ಆನಂದಭರಿತನ್ನಾಗಿ ಭಕ್ತ್ಯುದ್ರೇಕದಿಂದ ಮರಳಿನಲ್ಲಿ ಹೊರಳಾಡಿದ. ಮರಳನ್ನು ಎತ್ತಿ,ತಲೆಯಮೇಲೆ ಸುರಿದುಕೊಂಡ. ಕೃಷ್ಣನಿಗೆ ಆಪ್ತನು.

## ಮುಖ್ಯಾಂಶಗಳು

| ಕ್ರಮ ಸಂಖ್ಯೆ. | ಗಂಧರ್ವರ ಹೆಸರು. | ಆವೇಶ. | ಅವತಾರಗಳು. |
|---|---|---|---|
| 1. | ತುಂಬುರು. | ಉದ್ವಹನೆಂಬ ಮರುತನ ಆವೇಶ ಯುಕ್ತನು. | (1) ವಿರಾಧ.<br>(2) ಸಂಜಯ. |
| 2. | ಚಿತ್ರರಥ | ತ್ವಷ್ಟೃ ಎಂಬ ಸೂರ್ಯನ ಆವೇಶಯುಕ್ತನು. | ಜನಮೇಜಯ ರಾಜನು. |
| 3. | ದನು ಎಂಬ ಗಂಧರ್ವ. | — | (1) ಕಬಂಧ.<br>(2) ದಮಘೋಷ.<br>(ಶ್ರೀಕೃಷ್ಣನ ಸೋದರತ್ತೆಯ ಮಗ). |
| 4. | ಕಿಶೋರ. | (1) ಸ್ವಾಯಂಭುವಮನು.<br>(2) ಬ್ರಹ್ಮ-<br>ಇವರಿಬ್ಬರ ಆವೇಶ ಯುಕ್ತನು. | ಅಕ್ರೂರನೆಂಬ ಯಾದವ. |

ಪದ್ಯ. ॥40॥

## ಪದ್ಯ-೪೧

**ಮೂಲ :-**

ವಾಯುಯುತ ಧೃತರಾಷ್ಟ್ರ ದಿವಿಜ ।
ಗಾಯಕನು ಧೃತರಾಷ್ಟ್ರ ನಕ್ರನು ।
ರಾಯ ದ್ರುಪದನವಹವಿಶಿಷ್ಟ ಹೂಹು ಗಂಧರ್ವ ॥
ನಾಯಕ ವಿರಾಡ್ವಿವಹಯುತ ಹಹ ।
ಜ್ಞೇಯ ವಿದ್ಯಾಧರನೆ ಅಜಗರ ।
ಶಾನೆನಿಸುವನು ಉಗ್ರಸೇನನೆ ಉಗ್ರಸೇನಾಖ್ಯ ॥೪೧॥

**ಅವತರಣಿಕೆ :-**

19ನೆಯ ಕಕ್ಷಕ್ಕೆ ಸೇರಿದ ಧೃತರಾಷ್ಟ್ರ- ಹೂಹು- ಹಹ- ವಿದ್ಯಾಧರ- ಉಗ್ರಸೇನ-ಎಂಬ ಗಂಧರ್ವರ ಅವತಾರ- ಆವೇಶ ವಿಷಯಗಳನ್ನು ತಿಳಿಸುತ್ತಾರೆ. ॥41॥

**ಪ್ರತಿಪದಾರ್ಥ :**

**ವಾಯುಯುತ** = ವಾಯುದೇವರ ಆವೇಶದಿಂದ ಯುಕ್ತನಾದ, **ಧೃತರಾಷ್ಟ್ರ** = ಧೃತರಾಷ್ಟ್ರನಾಮಕನಾದ ಗಂಧರ್ವ (5ನೆಯುವನು), **ದಿವಿಜಗಾಯಕನು** = ಇವನು ದೇವಸಭೆಯಲ್ಲಿ ಗಾಯನ ಮಾಡುವವನು. 19ನೆಯ ಕಕ್ಷಕ್ಕೆ ಸೇರಿದ ಕರ್ಮಜದೇವತೆ ಇವನ ಅವತಾರ, **ಧೃತರಾಷ್ಟ್ರ** = ದುರ್ಯೋಧನನ ತಂದೆಯಾದ ಧೃತರಾಷ್ಟ್ರರಾಜನು, **ಹೂಹು ಗಂಧರ್ವ** = 6ನೆಯವನಾದ ಹೂಹೂನಾಮಕ ಗಂಧರ್ವನು (19ನೆಯ ಕಕ್ಷಾಪನ್ನನು). **ಅವಹಶಿಷ್ಟ** = ಅವಹ-ಎಂಬ ಮರುತನ ಆವೇಶ ಯುಕ್ತನು. ಈತನ ಅವತಾರಗಳು ಎರಡು ಪ್ರಕಾರ:- (1), **ನಕ್ರ** =

ಗಜರಾಜನನ್ನು ಮಡುವಿನಲ್ಲಿ ಎಳೆದ ಮೊಸಳೆಯ ಜನ್ಮ (೨) **ರಾಯ ದ್ರುಪದನು** = ದ್ರೌಪದಿಯ ಜನಕನಾದ ದ್ರುಪದರಾಜನು. **ಹಹ** = ಏಳನೆಯವನಾದ ಹಹನಾಮಕ ಗಂಧರ್ವನು. (19ನೆಯ ಕಕ್ಷ), **ನಾಯಕ ವಿರಾಟ್** = ರಾಜನಾದ ಮತ್ಸ್ಯದೇಶಾಧಿಪತಿ ವಿರಾಟರಾಯನ ಅವತಾರನು. **ವಿವಹಯುತ** = ವಿವಹನಾಮಕ ಮರುತನ ಆವೇಶದಿಂದ ಕೂಡಿದವನು, **ವಿಧ್ಯಾಧರನೆ** = 8ನೆಯವನಾದ ವಿಧ್ಯಾಧರನೆಂಬ ಹೆಸರಿನ ಗಂಧರ್ವನು (19 ನೆಯ ಕಕ್ಷ), ಇವನ ಅವತಾರಗಳು, **ಅಜಗರ** = ಅಜಗರನಾಮಕನಾದ ಸರ್ಪಜನ್ಮ. **ಉಗ್ರಸೇನನೆ** = ಒಂಬತ್ತನೆಯವನಾದ ಉಗ್ರಸೇನನಾಮಕ ಗಂಧರ್ವನು, **ಉಗ್ರಸೇನಾಖ್ಯ** = ಈತನ ತಂದೆಯಾದ ಉಗ್ರಸೇನನೆಂಬ ಯದುರಾಜನು, **ಜ್ಞೇಯು** = ಹೀಗೆ ಗಂಧರ್ವರ ಅವತಾರ-ಆವೇಶಗಳನ್ನು ತಿಳಿಯಬೇಕೆಂದು ತಾತ್ಪರ್ಯ. ॥41॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಆಜಾನಜರೊಳಗೆ ಗಂಧರ್ವರ ವಿಚಾರ ಹೇಳುತಾರೆ.

ದೇವಸಭೆಯಲ್ಲಿ ಗಾನಮಾಡತಕ್ಕ ಧೃತರಾಷ್ಟ್ರನೆಂಬ ಗಂಧರ್ವ 19ನೇ ಕಕ್ಷದವನಾದ ಕರ್ಮಜರಲ್ಲಿ ಸೇರಿದ್ದಾನೆ- ಇವನ ಅವತಾರ ದಾವದೆಂದರೆ- ದುರ್ಯೋಧನನ ತಂದೆಯಾದ ಧೃತರಾಷ್ಟ್ರರಾಯನು. ವಾಯುದೇವರ ಆವೇಶಯುಕ್ತನಾದವನು. ಹೂಹೂ-ಗಂಧರ್ವನು 19ನೇ ಕಕ್ಷದವ. ಇವನ-ಅವತಾರಗಳು ಎರಡು. ನಕ್ರ-ಎಂತ ಒಂದು ಅವತಾರ, ದ್ರುಪದರಾಯ ಎಂತ ಅವತಾರ ಒಂದು, ಆವಹನೆಂಬೋ ಮರುತನ ಆವೇಶಯುಕ್ತನಾದವನು. ಹಾಹಾ ಗಂಧರ್ವ. ಇವನು 19ನೇ ಕಕ್ಷದವನು. ಇವನು ಶ್ರೇಷ್ಠನಾದ ಮತ್ಸ್ಯದೇಶಾಧಿಪನಾದ ವಿರಾಟರಾಯ, ವಿವಹನಾಮಕ ಮರುತನ

ಆವೇಶಯುಕ್ತನಾದವನು. ವಿದ್ಯಾಧರನೆಂಬ ಗಂಧರ್ವ. ಇವನು 19ನೇ ಕಕ್ಷಕ್ಕೆ ಸೇರಿದವನು. ಇವನ ಅವತಾರ ದಾವದೆಂದರೆ, ‌- ಅಜಗರ- ಎಂತ ಅವತಾರ. ಉಗ್ರಸೇನನಾಮ ಗಂಧರ್ವ. ಇವನೇ ಕಂಸನ ತಂದೆಯಾದ ಉಗ್ರಸೇನರಾಯ-ಎಂತ ಕರಸೋವನಾದನೆಂದು ತಾತ್ಪರ್ಯ. ॥41॥

## ೨. ಭಾವಪ್ರಕಾಶಿಕೆ :-

ನಿರ್ಣಯ 11ನೆಯ ಅಧ್ಯಾಯದ -"ಅಭೂಚ್ಛತಸ್ಯಾಂ ಧೃತರಾಷ್ಟ್ರನಾಮಕೋ ಗಂಧರ್ವರಾಟ್ ಪವನಾವೇಶಯುಕ್ತಃ"-ಎಂಬ ವಾಕ್ಯದ ಆಧಾರದ ಮೇಲೆ,ಧೃತರಾಷ್ಟ್ರನೆಂಬ ಗಂಧರ್ವನು ವಾಯುದೇವರ ಆವೇಶದಿಂದ ಕೂಡಿದವನಾಗಿ,ಧೃತರಾಷ್ಟ್ರರಾಜನಾಗಿ,ಅಂಬಿಕೆ ಎಂಬ ಸ್ತ್ರೀಯಲ್ಲಿ ಜನಿಸಿದನೆಂದು ಸಿದ್ಧವಾಗುವುದು. ಮೊಸಳೆಯು ಹೂ ಹೂ ಎಂಬ ಗಂಧರ್ವನೆಂಬ ವಿಷಯದಲ್ಲಿ, ಭಾಗವತ ಅಷ್ಟಮಸ್ಕಂಧದ -"ಯೋಽಸೌಗ್ರಾಹಃ ಸದ್ಯಸದ್ಯಃ ಪರಮಾಶ್ಚರ್ಯರೂಧೃಕ್ ॥ ಮುಕ್ತೋಽದೇವಲ ಶಾಪೇನ ಹೂಹೂ ಗಂಧರ್ವಸತ್ತಮಃ"-ಗಜೇಂದ್ರನನ್ನು ಹಿಡಿದುಕೊಂಡಿದ್ದ ಮೊಸಳೆಯನ್ನು ಪರಮಾತ್ಮನು ಸೀಳಿದ ಕೂಡಲೇ,ಆ ಮೊಸಳೆಯಾಗಿದ್ದವನು, ಆ ರೂಪವನ್ನು ಬಿಟ್ಟು,ಆಶ್ಚರ್ಯಕರವಾದ ರೂಪದಿಂದ ನಿಂತನು. ಅವನು ಪೂರ್ವದಲ್ಲಿ ಹೂಹೂ-ಎಂಬ ಗಂಧರ್ವನಾಗಿದ್ದು,ಗಾನದಲ್ಲಿ ತನಗೆ ಸಮರಾರೂ ಇಲ್ಲವೆಂಬ ಅಹಂಕಾರದಿಂದ, ಬ್ರಹ್ಮದೇವರ ಸಭೆಯಲ್ಲಿ ದೇವಲ-ಎಂಬ ಋಷಿಗಳನ್ನು ತಿರಸ್ಕಾರ ಮಾಡಿದುದರಿಂದ ಅವರು ಶಾಪವನ್ನು ಕೊಟ್ಟರು. ಆ ಶಾಪದಿಂದ ಮೊಸಳೆಯಾಗಿದ್ದನು. ಈಗ ಆ ಶಾಪದಿಂದ ಮುಕ್ತನಾಗಿ,ದಿವ್ಯರೂಪವನ್ನು ಧರಿಸಿದನೆಂಬ ವಾಕ್ಯವು ಆಧಾರವಾಗಿರುವುದು. ಇದೇ ಹೂಹೂ ಗಂಧರ್ವನೇ ಆವಹನೆಂಬ ಮರುತ್ತಿನ ಅಂಶದಿಂದ ಕೂಡಿ,ದ್ರುಪದರಾಜನಾಗಿ ಹುಟ್ಟಿದನೆಂಬ ವಿಷಯದಲ್ಲಿ- ನಿರ್ಣಯ 11ನೆಯ ಅಧ್ಯಾಯದಲ್ಲಿ,ಹೇಳಿರುವಂತೆ, ಪಾಂಚಾಲದೇಶಾಧಿಪತಿಯಾದ ಪೃಷತ್ ರಾಜನು ಸಂತಾನಾಪೇಕ್ಷೆಯಿಂದ ವನದಲ್ಲಿ ಮಹತ್ತರವಾದ ತಪಸ್ಸನ್ನು ಮಾಡುತ್ತಿದ್ದನು.

ಆ ಸಮಯದಲ್ಲಿ, ಉತ್ತಮ ರೂಪವತಿಯಾದ ಒಬ್ಬ ಅಪ್ಸರಸ್ತ್ರೀಯನ್ನು ಅಲ್ಲಿ ಕಂಡಕೂಡಲೇ, ಅವನಿಗೆ ರೇತಸ್ಸು ಸ್ಖಲನವಾಯಿತು. ಅವನು ನಾಚಿಕೆಯಿಂದ ಕಾಲಿನಿಂದ ಅದನ್ನು ಮೆಟ್ಟಿ ಮುಚ್ಚಿದನು. ಅದರಿಂದಲೇ ಮಗನು ಹುಟ್ಟಿದನು. ಪಾದದಲ್ಲಿ ಮುಚ್ಚಿದುದರಿಂದ, ಹುಟ್ಟಿದ ಪ್ರಯುಕ್ತ, ದ್ರುಪದನೆಂದು ಹೆಸರಾಯಿತು-ಎಂದು ಹೇಳಿರುವರು. ಆ ಅಭಿಪ್ರಾಯವನ್ನೇ ಇಲ್ಲಿ ಹೇಳಿರುವರು. ವಿರಾಟರಾಜನು ವಿವಹನೆಂಬ ಮರುತ್ತಿನ ಅಂಶದಿಂದ ಕೂಡಿದ ಹಾಹಾ-ಎಂಬ ಗಂಧರ್ವನು. ದ್ರುಪದರಾಜ ಮೊದಲಾದವರಿಗೆ ವಯಸ್ಸಿನಲ್ಲಿ ಸಮಾನನು ವಿರಾಟರಾಜನು. ಇವನು ಪೂರ್ವದಲ್ಲಿ,ಬ್ರಹ್ಮದೇವರ ಸದಸ್ಸಿನಲ್ಲಿ ಗಾಯಕನಾದ ಹಾಹಾ ಎಂಬ ಗಂಧರ್ವನು. ವಿವಹನೆಂಬ ಮರುತ್ತಿನ ಅಂಶದಿಂದ ಕೂಡಿ ಹುಟ್ಟಿರುವನು-ಎಂದು ನಿರ್ಣಯದಲ್ಲಿ ವಾಕ್ಯವಿರುವುದು. ಗಾಯಕನಾದ ಸುದರ್ಶನನೆಂಬ ವಿದ್ಯಾಧರನು ಅಜಗರನಾಗಿ ಹುಟ್ಟಿದನು. ಭಾಗವತ ದಶಮಸ್ಕಂಧದಲ್ಲಿ,ನಂದಗೋಪ ಮೊದಲಾದ ಗೋಪಾಲಕರೆಲ್ಲರೂ ಬಲರಾಮ ಕೃಷ್ಣರಿಂದ ಕೂಡಿ,ಎಲ್ಲರೂ ದೇವಯಾತ್ರೆ-ಎಂಬ ನಿಮಿತ್ತದಿಂದ ಸರಸ್ವತೀತೀರಕ್ಕೆ ಬಂದು,ರಾತ್ರೀ ಕಾಲದಲ್ಲಿ ಮಲಗಿರುವಾಗ, ಈ ಅಜಗರನು ನಂದಗೋಪನನ್ನು ನುಂಗಿತು.

ಅದರಿಂದ ಬಿಡಿಸಿ ಬಿಡಲು ಯಾರಿಂದಲೂ ಸಾಧ್ಯವಾಗಲಿಲ್ಲ. ಶ್ರೀಕೃಷ್ಣನು ಪಾದದಿಂದ ಆ ಸರ್ಪವನ್ನು ಒದೆಯಲು, ತಕ್ಷಣ ಆ ಸರ್ಪದೇಹವನ್ನು ಬಿಟ್ಟು, ದಿವ್ಯರೂಪಧರನಾಗಿ ನಿಂತನು. ಆಗ ಶ್ರೀಕೃಷ್ಣನು ನೀನಾರೆಂದು ಕೇಳಲು, -"ನಾನು ಒಬ್ಬ ವಿದ್ಯಾಧರನು. ಸುದರ್ಶನನೆಂದು ನನ್ನ ಹೆಸರು. ಬಹು ರೂಪ ಐಶ್ವರ್ಯದಿಂದ ಕೂಡಿ,ಅಹಂಕಾರದಿಂದ ವಿಮಾನಾರೂಢನಾಗಿ ಸಂಚರಿಸುತ್ತಿದ್ದೆನು. ಒಂದು ದಿವಸ ಕುರೂಪಿಗಳಾದ ಅಂಗಿರಸರೆಂಬ ಋಷಿಗಳನ್ನು ಕಂಡು,ನಾನು ಅವರನ್ನು ಹಾಸ್ಯಮಾಡಿ, ಅವರ ಶಾಪದಿಂದ ಈ ಗತಿಯನ್ನು ಹೊಂದಿದೆನೆಂದು-ಆ ಸರ್ಪನು ಉತ್ತರವನ್ನಿತ್ತನೆಂದು ಹೇಳಿರುವರು. ಇದರಿಂದ ಸುದರ್ಶನನೆಂಬ ವಿದ್ಯಾಧರನು ಅಜಗರನೆಂದು ಸಿದ್ಧವಾಗುವುದು. ಉಗ್ರಸೇನನೆಂಬ ಗಂಧರ್ವನು ಉಗ್ರಸೇನರಾಜನಾಗಿ ಜನಿಸಿರುವನು. ॥41॥

## ೩. ಭಾವದರ್ಪಣ :–

ಧೃತರಾಷ್ಟ್ರನ ಸ್ವರೂಪ ಹೇಳುತ್ತಾರೆ- ವಾಯುಯುತೇತಿ. -"ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕೋ ಗಂಧರ್ವರಾಟ್ ಪವನಾವೇಶಯುಕ್ತಃ । ಬಭೂವ ರಾಜಾ ಧೃತರಾಷ್ಟ್ರನಾಮಕ ।"–ಇತಿ ನಿರ್ಣಯೋಕ್ತೇಃ । ನಕ್ರದ್ರುಪದರ ಸ್ವರೂಪ ಹೇಳುತ್ತಾರೆ, ನಕ್ರೇತಿ. ತಾರತಮ್ಯೇಚ. –"ನಕ್ರಸ್ತಥೋದ್ವಹಾವಿಷ್ಟ ದ್ರುಪದೋ ದ್ವಾ ಹುಹುಃ ಪುರಾ"–ಇತಿ । ವಿರಾಟರಾಯನ ವಿವರ । ವಿರಾಡಿತಿ । –"ವಿರಾಟ್ ಪ್ರಾಗ್ವಿವಹಯುಕ್ ಹಾಹಾ ದೇವಸ್ಯ ಗಾಯಕಃ । ನಂದದಂಶೀ ಹ್ಯಜಗರೋ ವಿದ್ಯಾಧರ ಉದಾಹೃತ"–ಇತಿ । ಉಗ್ರಸೇನನ ವಿವರ, ಉಗ್ರಸೇನೇತಿ. –"ಉಗ್ರಸೇನಸ್ತೂಗ್ರಸೇನೋ ಗಂಧರ್ವಃ ಸಮುದಾಹೃತ್"–ಇತಿ. ॥41॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

–"**ವಾಯು**"–ಇತಿ ॥ ಧೃತರಾಷ್ಟ್ರಃ ಗಾಯಕಃ ಇತ್ಯನ್ವಯಃ ॥ ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕಃ ಗಂಧರ್ವರಾಟ್ ಪವನಾವೇಶಯುಕ್ತಃ ॥ —"**ನಕ್ರಃ**"–ಗಜೇಂದ್ರಪಾದಗ್ರಾಹೀ ॥ ಯೋ ಸೌ ಗ್ರಾಹ ಇತ್ಯುಕ್ತ್ವಾ ಮುಕ್ತಃ ದೇವಲಶಾಪೇನ ಹೂಹೂ ಗಂಧರ್ವಸತ್ತಮಃ ಇತ್ಯುಕ್ತೇಃ ॥ ಶಾಪಕ್ರಮಶ್ಚ ಉಕ್ತಃ ವಿಷ್ಣುರಹಸ್ಯೇ ಅಷ್ಟಾವಿಂಶಾಧ್ಯಾಯೇ ॥ ಹೂಹೂಃ ನಕ್ರವಪುಃ ಧೃತ್ವಾ ಜಲಸ್ಥೋ ಭೀಷಯಚ್ಚ ತವ್ ॥ ದೇವಲಃ ಯತಃ ತ್ವಂ ನಕ್ರರೂಪೇಣ ಹೂಹೋ ! ಭಾಷಿತವಾನಸಿ ॥ ನಕ್ರ ಏವ ನ ಸಂದೇಹಃ ಚಿರಂ ಭುವಿ ಭವಿಷ್ಯಸಿ ಇತಿ ॥ ಪದೇನ ದ್ರುತತ್ವಾತ್ ದ್ರುಪದಾಭಿದೇಯಃ ॥ ಹೂಹೂನಾಮ್ನಃ ಸ ವಿರಿಂಚಿ ಗಾಯಕಃ ನಾವಮ್ನಾವಹೋಯೋಃ ಮರುತಾಂ ತದಂಶಯುಕ್ ॥ ನಾಯಕಶ್ರೇಷ್ಠಃ ವಿರಾಟ್ ರಾಜಃ ॥ ವಿರಾಟಸ್ತ್ವಭೂತ್ ಹಾಹಾ ನಾಮಾ ವಿಧಾತೃಗಾಯಕಃ ಮರುತ್ಸುಯೋ ವಿವಹೋ ನಾಮ ತಸ್ಯಾಪ್ಯಂಶೇನ ಯುಕ್ತಃ ॥ ನಂದಂಶೀ ಹ್ಯಜಗರಃ ವಿದ್ಯಾಧರಃ ಇತಿ ಜ್ಞೇಯಃ ॥ ಯದ್ವಾ ಜ್ಞೇಯಪದಂ ಪೂರ್ವಂ ಯೋಜ್ಯಮ್ ॥ ಅಜಗರ

_"ಶಾ"_ವಿದ್ಯಾಧರಃ ಇತ್ಯನ್ವಯಃ ॥ ಪೂರ್ವಂ ಯದಾ ಹ್ಯಜಗರೋ ನಿಜ ಗಾನ ನಂದಂ ಮತ್ಪಾದಸಂಸ್ಪರ್ಶತಃ ಸ ತದಾಶಿದಿವ್ಯಃ ವಿದ್ಯಾಧರಃ ॥ ಯ ಉಗ್ರಸೇನಃ ಸುರಗಾಯಕಃ ಸ ಜಾತಃ ಯದುಷ್ವೇವ ತಥಾಭಿಧೇಯಃ. ॥41॥

## ಕನ್ನಡಾರ್ಥ

ಧೃತರಾಷ್ಟ್ರನು ದೇವಗಾಯಕನೆಂದು ಅನ್ವಯಿಸಬೇಕು. _"ಧೃತರಾಷ್ಟ್ರ ನೆಂಬ ಗಂಧರ್ವರಾಜನು ಪವನಾವೇಶದಿಂದ ಯುಕ್ತನಾಗಿ -"**ಅಂಬಿಕೆ**"-ಎಂಬ ವಳಲ್ಲಿ ಜನಿಸಿದನು."_ ಎಂದು ತಾತ್ಪರ್ಯನಿರ್ಣಯದಲ್ಲಿ ನಿರೂಪಿತವಾಗಿರು ತ್ತದೆ. -"**ನಕ್ರ**"-ಗಜೇಂದ್ರನ ಕಾಲನ್ನು ಹಿಡಿದು ಎಳೆದ ಮೊಸಳೆ. -"ದೇವಲ ಶಾಪದಿಂದ, ಮೊಸಳೆಯ ಜನ್ಮವನ್ನೆತ್ತಿದ ಹೂಹೂ-ಎಂಬ ಗಂಧರ್ವನು ಪರ ಮಾತ್ಮನ ಚಕ್ರಸ್ಪರ್ಶದಿಂದ ದೇವಲಶಾಪದಿಂದ ಬಿಡುಗಡೆಯನ್ನು ಹೊಂದಿ ದನು."- ಎಂದು ಭಾಗವತ ಅಷ್ಟಮಸ್ಕಂಧದಲ್ಲಿ ಹೇಳಲಾಗಿರುತ್ತದೆ. ಶಾಪ ಕ್ರಮವು, ವಿಷ್ಣುರಹಸ್ಯದಲ್ಲಿ 20ನೆಯ ಅಧ್ಯಾಯದಲ್ಲಿ ನಿರೂಪಿತವಾಗಿರುತ್ತದೆ. ಹೂಹೂ-ಎಂಬ ಗಂಧರ್ವನು ಮೊಸಳೆಯಾಗಿ ಬಂದು, ಜಲದಲ್ಲಿ ದೇವಲರ್ಷಿ ಯನ್ನು ಹೆದರಿಸಿದನು. ಆಗ ದೇವಲಋಷಿಗಳು ಹೀಗೆ ಶಾಪವನ್ನಿತ್ತರು.

-"ಎಲೈ ಹೂಹುವೇ ಮೊಸಳೆಯಾಗಿ ನನ್ನನ್ನು ಸಂಭಾಷಿಸಿರುವುದರಿಂದ, ನೀನು ನಿಶ್ಚಯವಾಗಿ ಮೊಸಳೆಯಾಗಿಯೇ ಭೂಮಿಯಲ್ಲಿ ಹುಟ್ಟುವಿ !"-ಎಂದು ಶಾಪಕ್ರಮ. ಪಾಂಚಾಲರಾಜನಾದ ಪೃಷತ್‌ರಾಜನು ಅಪ್ಸರಸ್ತ್ರೀಯನ್ನು ನೋಡಿ, ಇಂದ್ರಿಯಸ್ಖಲನವಾಗಲು, ವೀರ್ಯವನ್ನು ಪಾದದಿಂದ ಮುಚ್ಚಿಟ್ಟನು. ಆಗ ಗಂಡು ಶಿಶುವು ಆ ವೀರ್ಯದಿಂದ ಹುಟ್ಟಿತು. ಅವನಿಗೆ ಪಾದದಲ್ಲಿ ಜನಿಸಿ ಬಂದುದರಿಂದ,ದ್ರುಪದನೆಂದು ಹೆಸರಾಯಿತು. ಹೂಹೂ-ಎಂಬ ಗಂಧರ್ವನೇ -"**ಆವಹ**"-ಎಂಬ ಮರುತ್ತನ ಆವೇಶದಿಂದ ಯುಕ್ತನಾಗಿ, ದ್ರುಪದರಾಜ ನಾದನು-ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳಲಾಗಿರುತ್ತದೆ.

ಹಾಹಾ-ಎಂಬ ಗಂಧರ್ವನು ವಿವಹನೆಂಬ ಮರುತನ ಆವೇಶದಿಂದ

ಯುಕ್ತನಾಗಿ ವಿರಾಟನೆಂಬ ರಾಜನಾದನು. ನಂದಗೋಪನನ್ನು ನುಂಗಿದ ಅಜಗರನು ಸುದರ್ಶನನೆಂಬ ವಿದ್ಯಾಧರನು. ಉಗ್ರಸೇನನೆಂಬ ಗಂಧರ್ವನೇ ಉಗ್ರಸೇನನೆಂಬ ಯಾದವರಾಜನು. -"**ತಾ**"-ಎಂಬುದನ್ನು, ಪೂರ್ವಪದಗಳಿಗೂ ಅನ್ವಯಿಸಬಹುದು. ಆಗ -"**ಅಜಗರತಾ ವಿದ್ಯಾಧರ**"-ಎಂದು ಅನ್ವಯ. ॥41॥

**ಆ. ಶ್ರೀ ಗುರುಹೃದಯ ಪ್ರಕಾಶಿಕೆ :-**

ದಿವಿಜರೆಂಬ ದೇವತೆಗಳಿಗೆ ಗಾಯಕನೆಂಬ ಸಂಗೀತಗಾರನಾದ ಧೃತರಾಷ್ಟ್ರನೆಂಬ ಗಂಧರ್ವನು ಧೃತರಾಷ್ಟ್ರರಾಯನಾಗಿ ಹುಟ್ಟಿದನು. ಹೂಹೂ-ಎಂಬ ಗಂಧರ್ವನು ಶಾಪಮೂಲಕ ಗಜೇಂದ್ರನನ್ನು ಬಾಧಿಸಿದ ಮೊಸಳೆಯಾಗಿ ಹುಟ್ಟಿದನು. ಅವನೇ, ಆವಹ-ಎಂಬ ವಾಯುಯುಕ್ತನಾಗಿ, ದ್ರುಪದರಾಯನಾಗಿ ಹುಟ್ಟಿದನು. ಹಾಹಾ-ಎಂಬ ಗಂಧರ್ವನು ವಿವಹ-ಎಂಬ ವಾಯುಯುಕ್ತನಾಗಿ ವಿರಾಟ್‌ರಾಯನಾಗಿ ಹುಟ್ಟಿದನು. ಅವನೇ ಇಂದ್ರದ್ಯುಮ್ನರಾಯನು. ಶಾಪಮೂಲಕ ಗಜರಾಜನಾಗಿ ಹುಟ್ಟಿದನು. ವಿದ್ಯಾಧರನು ಶಾಪದಿಂದ ನಂದಗೋಪನನ್ನು ನುಂಗಿದ ಅಜಗರ ಸರ್ಪನಾಗಿ ಹುಟ್ಟಿದನು. ಉಗ್ರಸೇನನೆಂಬ ಗಂಧರ್ವನು ಉಗ್ರಸೇನನೆಂಬ ಯಾದವರಾಜನಾಗಿ ಹುಟ್ಟಿದನು. ॥41॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಿಂದ ಅಜಾನಜದೇವತಾವರ್ಗಕ್ಕೆ ಸೇರಿದ ಗಂಧರ್ವರ ವಿಚಾರವನ್ನು ತಿಳಿಸುತ್ತಾರೆ.

2. **ಧೃತರಾಷ್ಟ್ರ**—ಎಂಬ ಹೆಸರಿನ ಗಂಧರ್ವನು, ದೇವಸಭೆಯಲ್ಲಿ (ಇಂದ್ರನಸಭಾ) ಗಾನಮಾಡತಕ್ಕವನು. (ದಿವಿಜಗಾಯಕನು). ಇವನು 19

ನ್ನೆಯು ಕಕ್ಷಾವನ್ನನು. ವಾಯುದೇವರ ಆವೇಶದಿಂದ ಕೂಡಿ (ವಾಯುಯುತ), ಕೌರವರ ತಂದೆಯಾಗಿ, **ಧೃತರಾಷ್ಟ್ರ**-ನೆಂಬ ತನ್ನ ಮೂಲನಾಮದಿಂದ ಅವತರಿಸಿ ದನು.

**ಧೃತರಾಷ್ಟ್ರ :-**

ಚಂದ್ರವಂಶದ ವಿಚಿತ್ರವೀರ್ಯರಾಜನ ಕ್ಷೇತ್ರಜಪುತ್ರನು. ಈತನಿಗೆ **ವೈಚಿತ್ರವೀರ್ಯ– ಅಂಬಿಕೇಯ–ಪ್ರಜ್ಞಾ ಚಕ್ಷು–ಆಜಮೀಢ- ಎಂಬ ನಾಮಾಂತರ ಗಳಿವೆ.** ವಿಚಿತ್ರವೀರ್ಯನು ಶಂತನುರಾಜನಪುತ್ರನು. ಅವನು ಭೀಷ್ಮನ ಬಲತಾಯಿ ಪುತ್ರನು. ವಿಚಿತ್ರವೀರ್ಯನು ಸಂತಾನರಹಿತವಾಗಿ ಮೃತನಾದ. ಭೀಷ್ಮನು ಅಸ್ಖಲಿತ ಬ್ರಹ್ಮಚಾರಿಯಾಗಿ, ಲಗ್ನವಾಗಲಿಲ್ಲ. ರಾಜ್ಯಾಧಿಕಾರ ವನ್ನೂ ಸ್ವೀಕರಿಸಲಿಲ್ಲ. ಇದರಿಂದ, ರಾಜ್ಯಕ್ಕೆ ಉತ್ತರಾಧಿಕಾರಿಗಳಿಲ್ಲದಾಯಿತು. ಆಗ ಶಂತನು ಪತ್ನಿಯಾದ ಸತ್ಯವತೀ ಕೃಷ್ಣದ್ವೈಪಾಯನನ್ನು (ವೇದವ್ಯಾಸರು) ಸಂತಾನಕ್ಕಾಗಿ ಕೋರಿದಳು. ಆಗ ವಿಚಿತ್ರವೀರ್ಯನ ಪತ್ನಿಯಾದ **ಅಂಬಿಕೆ–** ಎಂಬಾಕೆಯು ವ್ಯಾಸನಾನ್ನಿಧ್ಯದಿಂದ ಪುತ್ರನನ್ನು ಪಡೆದಳು. ಅಂಬಿಕೆಯಲ್ಲಿ ವೇದವ್ಯಾಸರಿಂದ ಪುತ್ರತ್ವೇನ ಜನಿಸಿದವನೇ ಧೃತರಾಷ್ಟ್ರನು. ಧೃತರಾಷ್ಟ್ರನೆಂಬ ಪೂರ್ವೋಕ್ತ ಗಂಧರ್ವನು ಧೃತರಾಷ್ಟ್ರನಾಗಿ ಅವತರಿಸಿದನು. ಮಾತೃದೋಷ ದಿಂದ (ಅಂಬಿಕೆಯು ಕಣ್ಣಿಗೆ ಬಟ್ಟೆಯ ಪಟ್ಟಿಯನ್ನು ಕಟ್ಟಿಕೊಂಡು, ವೇದ ವ್ಯಾಸರ ಸಂಗದಿಂದ ಪುತ್ರನನ್ನು ಪಡೆದಳು) ಧೃತರಾಷ್ಟ್ರನು ಜಾತ್ಯಂಧನಾದನು. ಮಗನ ವ್ಯಾಮೋಹದಿಂದಾಗಿ, ಜೀವನ ಕೊನೆಯತನಕ ಜ್ಞಾನಾನಂಧವಾಗಿಯೇ ಬಾಳಿದನು. ಗಂಧರ್ವನಾದ್ದರಿಂದ, ಮುಕ್ತಿಯೋಗ್ಯಚೇತನನಾಗಿದ್ದನು.

**ಪ್ರಮಾಣ :-**

"ಅಭೂಚ್ಛತಸ್ಯಾಂ ಧೃತರಾಷ್ಟ್ರನಾಮಕೋ ಗಂಧರ್ವರಾಟ್ ಪವನಾವೇಶ ಯುಕ್ತಃ।"–

**— ನಿರ್ಣಯ–ಅಧ್ಯಾಯ–11.**

3. **ಹೂಹೂ**–ಎಂಬ ಹೆಸರಿನ ಗಂಧರ್ವನೂ ಸಹ, 19ನೆಯ ಕಕ್ಷಕ್ಕೆ ಸೇರಿದ ಅಜಾನಜದೇವತೆಯು. ಇವನ ಅವತಾರಗಳು ಎರಡು. (1) ನಕ್ರನೆಂಬ ಮೊಸಳೆಯ ಜನ್ಮ ಮತ್ತು (2) ದ್ರುಪದರಾಜನ ಅವತಾರ.

## ನಕ್ರಜನ್ಮ :–

ಒಮ್ಮೆ, ಹೂಹೂ-ಎಂಬ ಗಂಧರ್ವನು ಗಾನದಲ್ಲಿ ತನಗೆ ಯಾರೂ ಸಮರಿಲ್ಲರೆಂಬ ಅಹಂಕಾರದಿಂದ ಬಿಗಿಯುತ್ತಾ, ಬ್ರಹ್ಮದೇವರ ಸಭೆಯಲ್ಲಿ ದೇವಲ–ಎಂಬ ಋಷಿಗಳಿಗೆ ಅಪಚಾರವೆಸಗಿದನು. ಆ ಗಂಧರ್ವನು ಜಲದಲ್ಲಿ ಮೊಸಳೆ ರೂಪತಾಳಿ, ದೇವಲರನ್ನು ಹೆದರಿಸಿದನು. ಆಗ,ದೇವಲರು ಅವನಿಗೆ ಕ್ರೂರವಾದ ನಕ್ರಜನ್ಮ ಬರಲೆಂದು ಶಪಿಸಿದರು. ಗಂಧರ್ವನಿಗೆ ಕೂಡಲೇ ತನ್ನ ತಪ್ಪಿನ ಅರಿವಾಯಿತು. ದೇವಲಮುನಿಗಳಿಗೆ ಶರಣಾಗತನಾದನು. ದೇವಲರು ಕರುಣೆಯಿಂದ, ಅವನಿಗೆ ಶ್ರೀಹರಿಯ ಚಕ್ರದಿಂದ ಮೊಸಳೆಜನ್ಮವು ಪರಿಹಾರ–ವಾಗುವುದೆಂದು ವಿಶಾಪವಿತ್ತರು. ಅದರಂತೆ,ಹೂಹೂ ಗಂಧರ್ವನು ನಕ್ರಜನ್ಮವನ್ನು ಹೊಂದಿ, ಮಡುವಿಗೆ ಮಜ್ಜನಕ್ಕಾಗಿ ಬಂದಿದ್ದ, ಗಜೇಂದ್ರನ ಕಾಲನು ಹಿಡಿದೆಳೆದನು. ಗಜೇಂದ್ರನ ಮೊರೆಯನ್ನು ಕೇಳಿ, ಭಕ್ತವತ್ಸಲನಾದ ಶ್ರೀಹರಿಯು ತನ್ನ ಚಕ್ರದಿಂದ ನಕ್ರನ ಕತ್ತನ್ನು ಸೀಳಿ, ಗಜರಾಜನನ್ನು ಸಂರಕ್ಷಿಸಿದನು. ಆಗ, ಹೂಹೂ ಗಂಧರ್ವನು ನಿಜರೂಪವನ್ನು ತಳೆದು, ಸ್ವಲೋಕಕ್ಕೆ ತೆರಳಿದನು.

## ದ್ರುಪದರಾಜ :–

ಪಾಂಚಾಲರಾಜನಾದ **ಪೃಷತ್**–ಎಂಬ ಹೆಸರಿನ ರಾಜನು ಒಮ್ಮೆ ಸಂತಾನಾಪೇಕ್ಷೆಯಿಂದ ವನದಲ್ಲಿ ಮಹತ್ತರವಾದ ತಪಸ್ಸನ್ನಾಚರಿಸುತ್ತಿದ್ದನು ಆಗ ಉತ್ತಮ ಲಾವಣ್ಯವತಿಯಾದ ಅಪ್ಸರಸ್ತ್ರೀಯು ಅಲ್ಲಿಗೆ ಬರಲು, ಆಕೆಯನ್ನು ಕಂಡ ತಕ್ಷಣ,ರಾಜನಿಗೆ ರೇತಸ್ಸು ಸ್ಖಲನವಾಯಿತು. ಅವನು ನಾಚಿಕೆಯಿಂದ ವೀರ್ಯವನ್ನು ಕಾಲಿನಿಂದ ಮೆಟ್ಟಿ ಮುಚ್ಚಿದನು. ಆ ಪಾದದಿಂದ

ಪುತ್ರನು ಜನಿಸಿದನು. ಪಾದದಲ್ಲಿ ಹುಟ್ಟಿದ ಪ್ರಯುಕ್ತ, ಜನಿಸಿದ ಆ ಶಿಶುವಿಗೆ **ದ್ರುಪದ**-ನೆಂದು ಹೆಸರಾಯಿತು. ಯಜ್ಞಸೇನನೆಂಬುದೂ ದ್ರುಪದನ ನಾಮಾಂತರವು. ಪೃಷದನಪಾದದಿಂದ ಜನಿಸಿದ ಶಿಶುವನ್ನು ಭಾರದ್ವಾಜ ಮುನಿಯ ತಮ್ಮನಾದ ಅಗ್ನಿವೇಶ್ಯ ಎಂಬ ಮಹರ್ಷಿಯು ಕನಿಕರದಿಂದ ತನ್ನ ಆಶ್ರಮಕ್ಕೆ ತಂದು, ಆ ಶಿಶುವನ್ನು ಸಾಕಿ ಸಲುಹಿದ. ಅವನಿಗೆ '**ದ್ರುಪದ**'-ನೆಂದು ನಾಮಕರಣಮಾಡಿ, ತನ್ನ ಅಣ್ಣನ ಮಗನಾದ ದ್ರೋಣಾಚಾರ್ಯನ ಸಂಗಡ ಧನುರ್ವಿದ್ಯೆ ಕಲಿಸಿದ. ಇದರಿಂದ, ದ್ರುಪದನೂ ಮತ್ತು ದ್ರೋಣನೂ ಸಹಪಾಠಿಗಳು. ಯಜ್ಞಕುಂಡದಿಂದ ಜನಿಸಿದ ಧೃಷ್ಟದ್ಯುಮ್ನನು ದ್ರುಪದನ ಪುತ್ರ. ದ್ರುಪದರಾಜನ ಪುತ್ರಿಯಾದ್ದರಿಂದ ಕೃಷ್ಣೆಗೆ -"**ದ್ರೌಪದೀ**"-ಎಂಬ ಹೆಸರಾಯಿತು. 14ನೆಯ ದಿನದ ಭಾರತಯುದ್ಧದಲ್ಲಿ ದ್ರೋಣನಿಂದ ಹತನಾದ. ಇಂತು, **ಹೂಹೂ**-ಎಂಬ ಗಂಧರ್ವನಿಗೆ- (1) ನಕ್ರ ಮತ್ತು (2) ದ್ರುಪದರಾಜ-ಎಂಬ ಎರಡು ಅವತಾರಗಳು.

**ಪ್ರಮಾಣ :-**

"ಯೇಸೌಗ್ರಾಹಃ ಸಪ್ವೈಸದ್ಯಃ ಪರಮಾಶ್ಚರ್ಯರೂಪಧೃಕ್ ।
ಮುಕ್ತೋ ದೇವಲಶಾಪೇನ ಹೂಹೂ ಗಂಧರ್ವಸತ್ತಮಃ ॥"-

**—ಶ್ರೀಮದ್ಭಾಗವತ-ಸ್ಕಂಧ-8.**

"ನಕ್ರಸ್ತಥೋದ್ವಹಾವಿಷ್ಟ ದ್ರುಪದೋ ತ್ವಾ ಹುಹುಃ ಪುರಾ ।"-

**—ಇತಿ ತಾರತಮ್ಯಸಾರ.**

ಹೂಹೂ- ಎಂಬ ಗಂಧರ್ವನು **ಆವಹ**-ಎಂಬ ನಾಮಕ ಮರುತನ ಆವೇಶಯುಕ್ತನು (ಆವಹವಿಶಿಷ್ಟ).

### 4. ಹಹಾ-ಎಂಬ ಹೆಸರಿನ ಗಂಧರ್ವ :-

ಈ ಗಂಧರ್ವನೂ ಸಹ, 19ನೆಯ ಕಕ್ಷಾಪನ್ನನಾದ ಅಜಾನಜದೇವ-ತೆಯು. **ವಿವಹ-ನಾಮಕ** ಮರುತನ ಆವೇಶದಿಂದ ಯುಕ್ತನಾಗಿ, **ವಿರಾಟ ರಾಜನಾಗಿ**-ಅವತರಿಸಿದನು.

**ವಿರಾಟರಾಯ :-**

ಮತ್ಸ್ಯದೇಶದ ಅರಸು. ಈತನ ಹಿರಿಯಪತ್ನಿ-(**ಸುದೇಷ್ಣೆ**). ಈಕೆಯಲ್ಲಿ ಶ್ವೇತ-ಶಂಖರೆಂಬ ಪುತ್ರಾದ್ವಯರನ್ನು ಪಡೆದ. ಕೇಕೆಯ-ಎಂಬ ಸೂತರಾಜನ ಪುತ್ರಿಯಾದ ಸುರೌಷ್ಠಿ ಎಂಬಾಕೆಯನ್ನು ಲಗ್ನವಾಗಿ, ಆಕೆಯಿಂದ ಉತ್ತರ ಕುಮಾರನೆಂಬ (ಭೂಮಂಜಯ) ಪುತ್ರನನ್ನು ಪಡೆದನು. ಸುದೇಷ್ಣೆಯ ತಮ್ಮನೇ ಕೀಚಕನು. ಪಂಚಪಾಂಡವರು ತಮ್ಮ ಅಜ್ಞಾತವಾಸದ ಅವಧಿ ಯನ್ನು ವಿರಾಡ್ರಾಯರ ಅರಮನೆಯಲ್ಲಿ ಕಳೆದರು, ವಿರಾಟನಪುತ್ರಿ ಉತ್ತರೆ ಯನ್ನು ಅಭಿಮನ್ಯು ಲಗ್ನವಾಗಿ, ಅವಳಿಂದ ಪರೀಕ್ಷಿದ್ರಾಜನನ್ನು ಪುತ್ರನನ್ನಾಗಿ ಪಡೆದ.

### 5. ವಿದ್ಯಾಧರ ಎಂಬ ಗಂಧರ್ವ :-

ಈ ಗಂಧರ್ವನೂ ಸಹ 16ನೆಯ ಕಕ್ಷಕ್ಕೆ ಸೇರಿದ ಅಜಾನಜದೇವತೆಯು. ಇವನಿಗೆ ಎರಡು ಅವತಾರಗಳು-

(1) ಅಜಗರ ಜನ್ಮ. (2) ಉಗ್ರಸೇನನೆಂಬ ರಾಜ.

**ಅಜಗರಜನ್ಮ :-**

ವಿದ್ಯಾಧರನೆಂಬ ಗಂಧರ್ವನಿಗೆ ಸುದರ್ಶನನೆಂಬ ನಾಮಾಂತರವುಂಟು. ಇವನೂ ಸಹ ದೇವಸಭಾಗಾಯಕನು, ರೂಪ ಐಶ್ವರ್ಯ ಮದದಿಂದ

ಉನ್ಮತ್ತನಾಗಿ ವಿಮಾನರೂಢವಾಗಿ, ಸಂಚರಿಸುತ್ತಿರುವಾಗ, ಅಂಗಿರಸ-ರೆಂಬ ಮುನಿಗಳನ್ನು ನೋಡಿ, ಅವರ ಕುರೂಪವನ್ನು ಹಾಸ್ಯಮಾಡಿ, ಹೀಯ್ಯಾಳಿಸಿದನು. ಆ ಮುನಿಗಳ ಶಾಪದಿಂದ ಅಜಗರ ಜನ್ಮವನ್ನು ಹೊಂದಿದನು.

ಒಮ್ಮೆ, ನಂದಗೋಪ ಮೊದಲಾದ ಗೋಪಾಲಕರು ದೇವಯಾತ್ರಾ ನಿಮಿತ್ತ ಸರಸ್ವತೀತೀರಕ್ಕೆ ರಾಮಕೃಷ್ಣರೊಡಗೂಡಿ ಬಂದರು. ರಾತ್ರಿಯಲ್ಲಿ ಮಲಗಿರುವಾಗ, ಶಾಪನಿಮಿತ್ತದಿಂದ ಅಜಗರನಾಗಿ ಜನಿಸಿದ್ದ ಈ ಗಂಧರ್ವನು ನಂದಗೋಪನನ್ನು ನುಂಗಿದನು. ಶ್ರೀಕೃಷ್ಣನು ತನ್ನ ಪಾದದಿಂದ ಆ ಸರ್ಪವನ್ನು ಒದೆದನು. ಅವನ ಪಾದಘಾತಕ್ಕೆ ಅದು ಅಜಗರ ದೇಹವನ್ನು ತ್ಯಜಿಸಿ, ದಿವ್ಯ ಗಂಧರ್ವರೂಪವನ್ನು ಧರಿಸಿ ನಿಂತು, ಶ್ರೀಕೃಷ್ಣನ ಪಾದಾರವಿಂದಗಳಿಗೆ ಎರಗಿ, ಶಾಪವಿಮೋಚನೆಯನ್ನು ಹೊಂದಿದನು. (ಶ್ರೀಮದ್ಭಾಗವತ-ದಶಮ ಸ್ಕಂಧ).

**ಪ್ರಮಾಣ :-**

"ವಿರಾಟ್ ಪ್ರಾಗ್ವಿವಹಯುತ್ ಹಾಹಾ ದೇವಸ್ಯ ಗಾಯಕಃ ।
ನಂದದಂಶೇಹ್ಯಜಗರೋ ವಿಧ್ಯಾಧರ ಉದಾಹೃತ ॥"-

**ಉಗ್ರಸೇನರಾಜ :-**

ಚಂದ್ರವಂಶದ ಯಾದವರ ಅರಸು. ಕಂಸನ ತಂದೆ. ಯದುವಂಶದ ಆಹುಕನ ಪುತ್ರನು. ದೇವಕ ಇವನ ಸಹೋದರ. ಶ್ರೀಕೃಷ್ಣನು ಕಂಸನನ್ನು ವಧಿಸಿ, ಉಗ್ರಸೇನನ್ನೂ ಮರಳಿ ರಾಜ್ಯದಲ್ಲಿ ಪಟ್ಟಗಟ್ಟಿದ.

"ಉಗ್ರಸೇನಸ್ತ್ವೋಗ್ರಸೇನೋ ಗಂಧರ್ವಃ ಸಮುದಾಹೃತಃ ॥"-

| ಕ್ರಮ ಸಂಖ್ಯೆ. | ಗಂಧರ್ವನ ಹೆಸರು. | ಆವೇಶ. | ಅವತಾರಗಳು. |
|---|---|---|---|
| 1. | ಧೃತರಾಷ್ಟ್ರ. | ವಾಯುದೇವರ ಆವೇಶಯುಕ್ತನು. | ಧೃತರಾಷ್ಟ್ರ. |
| 2. | ಹೂಹೂ. | ಆವಹನೆಂಬ ಮರುತನ ಆವೇಶ ಯುಕ್ತನು. | (1) ನಕ್ರಜನ್ಮ. (2) ದ್ರುಪದ ರಾಜ. |
| 3. | ಹಾಹಾಗಂಧರ್ವ. | ವಿವಿಹ-ಎಂಬ ಮರುತನ ಆವೇಶ ಯುಕ್ತನು. | ವಿರಾಟರಾಯ. |
| 4. | ವಿದ್ಯಾಧರ (ಸುದರ್ಶನ-ನಾಮಾಂತರ). | — | (1) ಅಜಗರ ಜನ್ಮ. (2) ಉಗ್ರಸೇನರಾಜ. |

ಪದ್ಯ. ॥41॥

★★

## ಪದ್ಯ-೪೨

ಮೂಲ :-

ಬಿಸಜಸಂಭವಯುಕ್ತ ವಿಶ್ವಾ ।
ವಸು ಯುಧಾಮನ್ಯುಕ್ತಮೌಜಸ ।
ಬಿಸಜಮಿತ್ರಾರ್ಯಮನುಯುತ ಪರಾವಸು ಎನಿಸುತಿಪ್ಪ ॥
ಅಸಮಮಿತ್ರಾನ್ವಿತ ಸತ್ಯಜಿತು ।
ವಸುಧೆಯೊಳು ಚಿತ್ರಸೇನವ್ಯತಾಂ ।
ಧಸರ ಗಾಯಕರೆಂದು ಕರೆಸುವರಾವಕಾಲದಲಿ ॥ ॥೪೨॥

**ಅವತರಣಿಕೆ :-**

ಅಜಾನಜದೇವತಾ ಕಕ್ಷಕ್ಕೆ ಸೇರಿದ ಉಳಿದ ಗಂಧರ್ವರ ಹೆಸರು-ಆವೇಶ ಅವತಾರವಿಶೇಷಗಳನ್ನು ತಿಳಿಸುತ್ತಾರೆ. ॥42॥

**ಪ್ರತಿಪದಾರ್ಥ:-**

**ವಿಶ್ವಾವಸು** = ಹತ್ತನೆಯ ವಿಶ್ವಾವಸುನಾಮಕ ಗಂಧರ್ವನು, **ಬಿಸಜ ಸಂಭವಯುಕ್ತ** = ಬ್ರಹ್ಮದೇವರ ಆವೇಶಯುಕ್ತನಾದವನು. **ಯುಧಾಮನ್ಯು** = ಯುಧಾಮನ್ಯು-ಎಂಬ ದ್ರುಪದಪುತ್ರನ ಅವತಾರವುಳ್ಳವನು. **ಪರಾವಸು** = ಹನ್ನೊಂದನೆಯ ಪರಾವಸುನಾಮಕ ಗಂಧರ್ವನು, **ಎನಿಸು ತಿಪ್ಪ** = ಆ ಹೆಸರಿನಿಂದ ಕರೆಯಿಸುವ. **ಬಿಸಜಮಿತ್ರ** = ಕಮಲಮಿತ್ರನಾದ **ಆರ್ಯಮ ಯುತ** = ಆರ್ಯಮನಾಮಕಸೂರ್ಯನ ಆವೇಶಯುಕ್ತನು. **ಉತ್ತಮೌಜಸ** = ಉತ್ತಮೌಜಸನೆಂಬ ಹೆಸರಿನ ದ್ರುಪದಪುತ್ರನ ಅವತಾರನು. **ಚಿತ್ರಸೇನ** = ಹನ್ನೆರಡೆಯವನಾದ ಚಿತ್ರಸೇನ ಎಂಬ ನಾಮಕ ಗಂಧರ್ವನು, **ಆಸಮಮಿತ್ರಾನ್ವಿತ** = ಸಮರಹಿತನಾದ ಮಿತ್ರ ನಾಮಕಸೂರ್ಯನ ಆವೇಶಯುಕ್ತನು, **ಸತ್ಯಜಿತು** = ಸತ್ಯಜಿತು-ಎಂಬ ಹೆಸರಿನ ದ್ರುಪದನ ಇನ್ನೊಬ್ಬ ಪುತ್ರನ ಅವತಾರನು, **ವಸುಧೆಯೊಳಗೆ** = ಭೂಮಿಯಲ್ಲಿ, **ಅಮೃತಾಂಧನರ** = ದೇವತಾಸಮೂಹದಲ್ಲಿ, **ಗಾಯಕ ರೆಂದು** = ದೇವಗಾಯಕರೆಂದು, **ಆವಕಾಲದಲಿ** = ಸರ್ವಕಾಲಗಳಲ್ಲಿ, **ಕರೆಸುವರು** = ಕರೆಯಿಸತಕ್ಕವರಾಗುತ್ತಾರೆ. ॥42॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-**

ಇನ್ನೂ ಅಜಾನಜಕಕ್ಷದವರಾದ ಗಂಧರ್ವರ ವಿಚಾರವೇ ಹೇಳತಾರೆ.

ವಿಶ್ವಾವಸುನಾಮಕ ಗಂಧರ್ವ, ಇವನೂನೂ 19ನೇ ಕಕ್ಷದವನೆ. ಇವನ ಅವತಾರ ದಾವದೆಂದರೆ, ಯುಧಾಮನ್ಯು- ಎಂತ ಅವತಾರ. ಇವನಲ್ಲಿ ಬ್ರಹ್ಮದೇವರ ಆವೇಶವದೆ ಎಂತ ಹೇಳತದೆ. ಗ್ರಂಥಾಂತರದಲ್ಲಿ ವಿವಸ್ವಾ ನಾಮಕ ಸೂರ್ಯನ ಆವೇಶ ಎಂತಲೂ ಹೇಳತದೆ. ಪರಾವಸುನಾಮಕ ಗಂಧರ್ವ. ಇವನೂನೂ 19ನೇ ಕಕ್ಷದವನು. ಇವನ ಅವತಾರ ಉತ್ತಮೌಜಸ-ಎಂತ ಹೆಸರು. ಇವನಲ್ಲಿ ಪದ್ಮಸಖನಾದ ಅರ್ಯಮನಾಮಕ ಸೂರ್ಯನ ಆವೇಶವದೆ. ಚಿತ್ರಸೇನ- ಎಂತ ಎನಿಸತಕ್ಕ ಗಂಧರ್ವನ ಅವತಾರ, ಸತ್ಯಜಿತು-ಎಂತ ಅವತಾರ ಮಾಡಿದ. ಆದರೆ, ಸತ್ಯಜಿತು-ಎಂತ ಯಮದೇವರೂ ಒಂದು ಅವತಾರ ಮಾಡಿದ್ದಾರೆ. ಈ ಸತ್ಯಜಿತು ಬ್ಯಾರೆ, ಆ ಸತ್ಯಜಿತು ಬ್ಯಾರೆ-ಎಂತ ತಿಳಿಯ ಬೇಕು- ಸಮರಹಿತನಾದ ಮಿತ್ರನಾಮಕಸೂರ್ಯನ ಆವೇಶಯುಕ್ತನಾದವ. ದೇವತೆಗಳೊಳಗೆ, ಈ ಗಂಧರ್ವರು ಗಾನಮಾಡತಕ್ಕವರೆಂದು ಸರ್ವದಾ ಕರೆಸ ತಕ್ಕವರು. ಭೂಮಿಯಲ್ಲಿ ಅವತಾರ ಮಾಡಿದವರು-ಪೂರ್ವೋಕ್ತ ಹನ್ನೆರಡು ಮಂದಿ ಗಂಧರ್ವರು- 1. ತುಂಬುರ, 2. ಚಿತ್ರರಥ, 3. ದನು. 4. ಕಿಶೋರ, 5. ಧೃತರಾಷ್ಟ್ರ, 6, ಹೂಹೂ, 7. ಹಾಹಾ. 8. ವಿದ್ಯಾಧರ, 9. ಉಗ್ರಸೇನ, 10. ವಿಶ್ವಾವಸು, 11. ಪರಾವಸು, 12. ಚಿತ್ರಸೇನ-ಅಂತು ಹನ್ನೆರಡು ಮಂದಿ. ಕರ್ಮಜರಲ್ಲಿ ಸೇರಿದವರು ಎಂಟು ಮಂದಿ. ಇವರು ಹೋಗತ, ಉಳಿದ ನಾಲ್ಕುಮಂದಿ, ಈ ಇಪ್ಪತ್ತೇಳನೇ ಕಕ್ಷ ಆಜಾನಜ ರಲ್ಲಿ ಸೇರಿದವರು. ಇದರಲ್ಲಿ, 19ನೇ ಕಕ್ಷಜರಲ್ಲಿ ಸೇರಿದವರು ದಾರೆಂದರೆ- 1. ತುಂಬುರ, 2. ಚಿತ್ರರಥ, 3. ಧೃತರಾಷ್ಟ್ರ, 4. ಹೂಹೂ, 5. ಹಾಹಾ, 6. ವಿದ್ಯಾಧರ, 7. ವಿಶ್ವಾವಸು, 8. ಪರಾವಸು, ಅಂತೂ, ಎಂಟು ಮಂದಿ 19ನೇ ಕಕ್ಷದವರಾದ ಕರ್ಮಜರಿಗೆ ಸಮಾನರಾದ್ದರಿಂದ ಅಲ್ಲಿ ಸೇರಿದ್ದಾರೆ. ಇವರನ್ನ ಗಂಧರ್ವರ ಝುಡಿತ್ಯಾ,ಬೋಧಾರ್ಥ ಆಜಾನಜ ರಲ್ಲಿ ಸೇರಿಸಿದೆ. ॥42॥

**೨. ಭಾವಪ್ರಕಾಶಿಕೆ :-**

ಈ ಪದ್ಯದಲ್ಲಿ ಹೇಳಿರುವ ಯುಧಾಮನ್ಯು, ಉತ್ತಮೌಜಸ, ಸತ್ಯ

ಜಿತ್, ಎಂಬ ಮೂವರೂ ದ್ರುಪದರಾಜನ ಮಕ್ಕಳು. ಈ ಮೂವರೂ ಬ್ರಹ್ಮಾಂಶ, ಆರ್ಯಮ, ಮಿತ್ರರೆಂಬ ಸೂರ್ಯರು- ಇವರುಗಳ ಅಂಶದಿಂದ ಕೂಡಿದ ವಿಶ್ವಾವಸು, ಪರಾವಸು, ಚಿತ್ರಸೇನರೆಂಬ ಗಂಧರ್ವರೆಂದು-ನಿರ್ಣಯ 18ನೆಯ ಅಧ್ಯಾಯದ ವಾಕ್ಯಗಳಿಂದ ಸಿದ್ಧವಾಗುವುದು. ಬ್ರಹ್ಮಾಂಶದಿಂದ ಕೂಡಿದ ವಿಶ್ವಾವಸು ಎಂಬುವನು-ಯುಧಾಮನ್ಯುವೆಂತಲೂ, ಅರ್ಯಮಾಂಶದಿಂದ ಕೂಡಿದ ಪರಾವಸು-ಎಂಬುವನು ಉತ್ತಮೌಜಸ್ ಎಂತಲೂ, ಮಿತ್ರಾಂಶದಿಂದ ಕೂಡಿದ ಚಿತ್ರಸೇನನು ಸತ್ಯಜಿತ್ತೆಂತಲೂ,ತಾತ್ಪರ್ಯ ಇವರೆಲ್ಲರೂ ದೇವಗಂಧರ್ವರೆಂದು ತಿಳಿಯಬೇಕು. ॥42॥

### ೩. ಭಾವದರ್ಪಣ :-

ಯುಧಾಮನ್ಯು ಮುಖರ ವಿವರ ಮಾಡುತ್ತಾರೆ. ಬಿಸಜೇತಿ-ಯುಧಾಮನ್ಯುರ್ಧಾತೃಯುಕ್ತೋ ವಿಶ್ವಾವಸ್ವಭಿದಃ ಪುರಾ । ಉತ್ತಮೌಜಾಸ್ತ್ವರ್ಯಮಾಂಶಯುಕ್ತಶ್ಚೈವ ಪರಾವಸುಃ । ಸತ್ಯಜಿತ್ಮಿತ್ರಯುಕ್ತಸ್ತು ಚಿತ್ರಸೇನೋ ಮಹಾಬಲ ಇತಿ ತಾರತಮ್ಯೋಕ್ತೇಃ । ಅಮೃತಾಂಧಸರು ಅಮೃತವೇ ಅನ್ನವಾಗಿ ಉಳ್ಳ ದೇವತೆಗಳು. ಎಂಬರ್ಥ. "ಅಮರ್ತ್ಯಾ ಅಮೃತಾಂಧಸ"- ಇತ್ಯಮರಃ ॥42॥

### ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

'ಬಿಸಜೇತಿ' ಪದ್ಮಮ್ ॥ ಮಿತ್ರಃ ತದಾಹ್ವಯಃ ಸೂರ್ಯಃ ॥ ಬಿಸಜಮಿತ್ರೇತಿ ವಿಶೇಷಣೇನ ಅರ್ಯಮಾಸೂರ್ಯ ಇತಿ ಅಭಿಪ್ರೈತಿ ॥ ಕ್ರಮೇಣ ಅನ್ವಯಃ ॥ ಚಕ್ಷರಕ್ಷಾತು ತಸ್ಯಾಸ್ತಾಂ ಯುಧಾಮನ್ಯೂತ್ತಮೌಜಸೌ ॥ ಧಾತ್ವರ್ಯಮಾವೇಶಯುತೌ ವಿಶ್ವಾವಸು ಪರಾವಸೂ ॥ ಅಸಮಃ ಅಪ್ರತಿದ್ವಂದ್ವಃ ॥ ಸವಿತ್ರಾಂಶಯುತಃ ವೀರಃ ಚಿತ್ರಸೇನಃ ಮಹಾರಥಃ ॥ ಅನೇನ

ಅಸಮಪದಂ ವಿವೃತಮ್ ॥ ಯತ ಇತಿ ಯೋಜ್ಯಮ್ ॥ ಸತ್ಯಜಿತ್ ಪೃಷ್ಠತೋಽಭವತ್ ॥ ಅಮೃತಾಂಧಸಃ ದೇವಾಃ ॥42॥

## ಕನ್ನಡಾರ್ಥ

ಬಿಸಜವೆಂದರೆ ಪದ್ಮ. ಅಲ್ಲಿ ಹುಟ್ಟಿದವನು- ಚತುರ್ಮುಖ ಬ್ರಹ್ಮನು. ಬ್ರಹ್ಮಾವೇಶಯುಕ್ತನಾದ ವಿಶ್ವಾವಸುವೆಂಬ ಗಂಧರ್ವನು, "ಯುಧಾಮನ್ಯು ಎಂಬುವ (ದ್ರುಪದರಾಜನ ಮಗ) ನಾದನು. 'ಬಿಸಜಮಿತ್ರ' ಎಂಬ ವಿಶೇಷಣ ದಿಂದ ಅರ್ಯಮನೆಂಬುವವನು ಸೂರ್ಯನೆಂದು ಅಭಿಪ್ರಾಯವು ವ್ಯಕ್ತವಾಗು ತ್ತದೆ. ಕ್ರಮದಿಂದ, ಅನ್ವಯಮಾಡಬೇಕು. ಯುಧಾಮನ್ಯು, ಉತ್ತಮೌಜ ರೆಂಬ ಇಬ್ಬರು ರಥದ ಗಾಲಿಗಳನ್ನು ಸಂರಕ್ಷಿಸತಕ್ಕವರು. ಕ್ರಮವಾಗಿ, ಅವರ ಬ್ರಹ್ಮ, ಅರ್ಯಮರ ಆವೇಶಯುಕ್ತರಾದ ವಿಶ್ವಾವಸು, ಪರಾವಸುಗಳೆಂಬ ಗಂಧರ್ವರ ಅವತಾರರಾಗಿರುತ್ತಾರೆ- ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳ ಲಾಗಿರುತ್ತದೆ. ಮಿತ್ರನೆಂಬ ಸೂರ್ಯನ ಆವೇಶದಿಂದ ಯುಕ್ತನಾದ ಚಿತ್ರಸೇನ ಗಂಧರ್ವರಾಜನು, 'ಸತ್ಯಜಿತ್'—ಎಂಬುವವನಾದನು. (ಇವನೂ ದ್ರುಪದ ರಾಜನಮಗನೇ) ಸತ್ಯಜಿತ್ ಪೃಷ್ಠತಃ "ಸತ್ಯಜಿತನು ಕೊನೆಯವನು"- ಎಂದು ತಾತ್ಪರ್ಯನಿರ್ಣಯದಲ್ಲಿ ಹೇಳಲಾಗಿರುತ್ತದೆ. ॥42॥

### ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :-

ವಿಶ್ವಾವಸು- ಎಂಬ ಗಂಧರ್ವನು ಬ್ರಹ್ಮಾವೇಶಯುಕ್ತನಾಗಿ ಯುಧಾ ಮನ್ಯುರಾಯನೆಂಬ ಪಾಂಚಾಲರಾಜನಾಗಿ ಹುಟ್ಟಿದನು. ಪರಾವಸು-ಎಂಬ ಗಂಧರ್ವನು, ಬಿಸಜಮಿತ್ರನೆಂಬ ಕಮಲಮಿತ್ರನಾದ ಅರ್ಯಮನಾಮಕ ಸೂರ್ಯಾಂಶ ಯುಕ್ತನಾಗಿ, ಉತ್ತಮೌಜಸನೆಂಬ ಪಾಂಚಾಲನಾಗಿ ಹುಟ್ಟಿದನು. ಚಿತ್ರಸೇನ ನೆಂಬ ಗಂಧರ್ವನು,ಅಸಮ-ಎಂದರೆ, ಉತ್ತಮನಾದ ಮಿತ್ರನೆಂಬ ಸೂರ್ಯಯುಕ್ತ ನಾಗಿ ಸತ್ಯಜಿತುವೆಂಬ ಪಾಂಚಾಲನಾಗಿ ಹುಟ್ಟಿದನು. ಹೀಗೆ,ಮೇಲೆ ಹೇಳಿದವ ರೆಲ್ಲ,ಅಮೃತಾಂಧಸರೆಂಬ ದೇವತೆಗಳ ಗಾಯಕರು ಅಥವಾ ಸಂಗೀತಗಾರರೆಂದು ಸದಾ ಕರೆಸುವರು. ॥42॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಅಜಾನಜದೇವತಾ ಪಕ್ಷಕ್ಕೆ ಸೇರಿದ ಇತರ ಗಂಧರ್ವರ ನಾಮಗಳು– ಆವೇಶ–ಅವತಾರ ವಿಶೇಷಗಳನ್ನು ಪ್ರಸಕ್ತ ಪದ್ಯದಿಂದ ತಿಳಿಸುತ್ತಾರೆ.

೨. **ವಿಶ್ವಾವಸು–** ನಾಮಕಗಂಧರ್ವನು 19ನೆಯ ಕಕ್ಷಕ್ಕೆ ಸೇರಿದವನು. ಇವನು ಬ್ರಹ್ಮದೇವರ (ಬಿಸಜಸಂಭವಯುಕ್ತ) ಆವೇಶಯುಕ್ತನು. ಈ ಗಂಧರ್ವನು, ದ್ರುಪದನ ಪುತ್ರನಾಗಿ, **ಯುಧಾಮನ್ಯು**–ಎಂಬ ಹೆಸರಿನಿಂದ ಅವತರಿಸಿದನು. ವಿಶ್ವಾವಸು–ಎಂಬ ದೇವಗಂಧರ್ವನು ಕಶ್ಯಪಮುನಿಯಿಂದ ಪ್ರಾಧೆಯಲ್ಲಿ ಪುತ್ರನಾಗಿ ಜನಿಸಿದವನು.

**ಯುಧಾಮನ್ಯು**— ದ್ರುಪದರಾಜನ ಪುತ್ರನು. ಪಾಂಚಾಲದೇಶದ ಅರಸು. ಅತಿರಥನು. ಪಾಂಡವ ಪಕ್ಷಪಾತಿ. ಅಶ್ವತ್ಥಾಮನಿಂದ ಹತನಾದ.

೩. **ಪರಾವಸು–** ನಾಮಕ ದೇವಗಂಧರ್ವನು 19ನೆಯ ಕಕ್ಷಾಪನ್ನನು. ಇವನಲ್ಲಿ ಕಮಲಸಖನಾದ **ಅರ್ಯಮ**ನಾಮಕ ಸೂರ್ಯನ ಆವೇಶವಿದೆ. ಪರಾವಸು ಗಂಧರ್ವನು **ಉತ್ತಮೌಜಸ**–ಎಂಬ ಹೆಸರಿನಿಂದ ಅವತಾರ ಮಾಡಿದನು.

ಪರಾವಸುವು ರೈಭ್ಯ ಮಹರ್ಷಿಯ ಪುತ್ರನು. ಅರ್ವಾವಸು ಎಂಬುವನು ಈತನ ಸಹೋದರನು ಉತ್ತಮೌಜಸನು. ಪಾಂಚಾಲದೇಶದ ಅರಸನಾದ ದ್ರುಪದನ ಪುತ್ರನು. ಭಾರತಯುದ್ಧವು ಮುಗಿದನಂತರ, ಅಶ್ವತ್ಥಾಮನಿಂದ ಹತನಾದ.

೪. **ಚಿತ್ರಸೇನ**–ನಾಮಕನಾದ ದೇವಗಂಧರ್ವನು, 19ನೆಯ ಕಕ್ಷಕ್ಕೆ ಸೇರಿದವನು. ಇವನಲ್ಲಿ ಸುಮರಹಿತವಾದ **ಮಿತ್ರನಾಮಕಸೂರ್ಯನ** ಆವೇಶವಿದೆ. ಇವನ ಅವತಾರವು **ಸತ್ಯಜಿತ್**-ಎಂದು ದ್ರುಪದರಾಜನ ಪುತ್ರನು.

ಚಿತ್ರಸೇನನು ಕಶ್ಯಪಮುನಿಯಿಂದ ಮುನಿ–ಎಂಬಾಕೆಯಲ್ಲಿ ಜನಿಸಿದ ದೇವಗಂಧರ್ವನು. ಸತ್ಯಜಿತ್- ಎಂಬಾತನು ಚಿತ್ರಸೇನನ ಅವತಾರನು. ಪಾಂಚಾಲದೇಶದ ಅರಸು. ದ್ರುಪದರಾಜನ ಪುತ್ರರಲ್ಲಿ ಒಬ್ಬ. ಅತಿರಥನು. ಹನ್ನೊಂದನೆಯ ದಿನ ಭಾರತಯುದ್ಧದಲ್ಲಿ ದ್ರೋಣನಿಂದ ಹತನಾದ.

೫. ದೇವತೆಗಳು ಅಮೃತವನ್ನೇ ಅನ್ನವನ್ನಾಗಿ ಉಳ್ಳವರು. ಇದರಿಂದ ದೇವತೆಗಳಿಗೆ **ಅಮೃತಾಂಧಸರು**–ಎಂದು ಹೆಸರು. "ಅಮರ್ತ್ಯಾ ಅಮೃತಾಂಧಸಃ" –**ಇತ್ಯಮರಃ**

೬. ಪೂರ್ವೋಕ್ತ 1) ವಿಶ್ವಾವಸು, 2) ಪರಾವಸು ಮತ್ತು 3) ಚಿತ್ರಸೇನ –ಎಂಬ ಮೂವರು ದೇವಗಂಧರ್ವರು–ಇವರು ಯಾವಕಾಲಕ್ಕೂ, ದೇವಸಭಾ ಗಾಯಕರೆನಿಸುವರು. (**ಅಮೃತಾಂಧನರ ಗಾಯಕರು**).

★★

## ಪದ್ಯ-೪೩

**ಮೂಲ :**

**ಉಳಿದ ಗಂಧರ್ವರುಗಳೆಲ್ಲರು |**
**ಬಲಿ ಮೊದಲು ಗೋಪಾಲರೆನಿಪರು |**
**ಇಳೆಯೊಳಗೆ ಸೈಳೇಂದ್ರಿ ಪಿಂಗಳೆಯಪ್ಸರ ಸ್ತ್ರೀಯು ||**
**ತಿಲೋತಮೆಯು ಪೂರ್ವದಲಿ ನಕುಲನ |**
**ಲಲನೆ ಪಾರ್ವತಿ ಎನಿಸುವಳು ಗೋ–|**
**ಕುಲದ ಗೋಪಿಯರೆಲ್ಲ ಶಬರೀ ಮುಖ್ಯರಪ್ಸರರು ||೪೩||**

**ಅವತರಣಿಕೆ :-**

ಅಜಾನಜದೇವತಾವರ್ಗಕ್ಕೆ ಸೇರಿದ ಗಂಧರ್ವರ ಅವತಾರವಿಶೇಷಗಳನ್ನು ತಿಳಿಸುತ್ತಾರೆ. ॥43॥

**ಪ್ರತಿಪದಾರ್ಥ :-**

**ಉಳಿದ ಗಂಧರ್ವರುಗಳೆಲ್ಲರು** = 100 ಮಂದಿ ಗಂಧರ್ವರೊಳಗೆ ಅಜಾನಜರ ಕಕ್ಷದಲ್ಲಿ ಸೇರಿದವರು 8 ಮಂದಿ ಕಳೆದು, ಉಳಿದವರ ಸಂಖ್ಯೆ = 92. ಹಿಂದಿನ ಪದ್ಯದಲ್ಲಿ ಹೇಳಿದ ವಸು–ಕಿಶೋರ–ಉಗ್ರಸೇನ–ಚಿತ್ರಸೇನ— ಈ ನಾಲ್ಕು ಮಂದಿ ಗಂಧರ್ವರು ಹೋಗತಾ, ಉಳಿದ 88 ಮಂದಿ ಗಂಧರ್ವರು. **ಬಲಿ ಮೊದಲು** = ಬಲಿನಾಮಕ-ಎಂಬ ಗಂಧರ್ವನಾರಭ್ಯ ಉಳಿದ 88 ಮಂದಿಯೂ, **ಗೋಪಾಲರೆನಿಪರು** = ಶ್ರೀಕೃಷ್ಣನ ಒಡನಾಡಿಗಳಾಗಿ, ನಂದಗೋಕುಲದಲ್ಲಿ ಜನಿಸಿ ಗೋಪಾಲರೆನಿಸಿದರು. **ಪಿಂಗಳೆಯು** = ಪಿಂಗಳೆ ಎಂಬ ಹೆಸರಿನ ಅಪ್ಸರಸ್ತ್ರೀಯು, **ಸೈರೇಂಧ್ರಿ** = ಕೃಷ್ಣಾವತಾರಕಾಲದಲ್ಲಿ ತ್ರಿವಕ್ರೆಯಾಗಿ ಜನಿಸಿ, ಕುಬ್ಜೆಯಾಗಿ ಕುರೂಪಿಯಾಗಿದ್ದಳು. ಶ್ರೀಕೃಷ್ಣನ ಅನುಗ್ರಹದಿಂದ, ಅವಳ ದೇಹ ವಕ್ರತೆಯು ಹೋಗಿ, ಸುಂದರ ಸ್ತ್ರೀಯಾದಳು. **ತಿಲೋತ್ತಮೆಯು** = ತಿಲೋತ್ತಮಾ–ಎಂಬ ಹೆಸರಿನ ಅಪ್ಸರಾಸ್ತ್ರೀಯು, **ಪೂರ್ವದಲಿ** = ಹಿಂದೆ, **ನಕುಲನ ಲಲನೆ** = ಪಂಚಪಾಂಡವರಲ್ಲಿ ಒಬ್ಬನಾದ ನಕುಲನ ಹೆಂಡತಿಯಾಗಿ, **ಪಾರ್ವತೀ** = ಪಾರ್ವತೀ-ಎಂಬ ಹೆಸರಿನಿಂದ ಅವತರಿಸಿದಳು. **ಗೋಕುಲದ ಗೋಪಿಯರೆಲ್ಲರ** = ನಂದಗೋಕುಲದಲ್ಲಿ ಅವತರಿಸಿದ ಗೋಪಿಕಾಸ್ತ್ರೀಯರೆಲ್ಲಾ ಅಪ್ಸರಾಸ್ತ್ರೀಯರು. **ಶಬರೀ** = ಶಬರೀ-ಎಂಬ ವೃದ್ಧ ತಾಪಸಿಯು, ಶ್ರೀರಾಮಲಕ್ಷ್ಮಣರನ್ನು ಸತ್ಕರಿಸಿ, ಅವರಿಗೆ ರುಚಿಯಾದ ಕಂದಮೂಲಫಲಗಳನ್ನಿತ್ತು ಸೇವಿಸಿದಳು. ಶಬರಿಯು ಅಪ್ಸರಾಸ್ತ್ರೀಯು. ॥43॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಆಖ್ಯಾತರಾದ ಆಜಾನಜರ ವಿಚಾರ, ಅಪ್ಸರಸ್ತ್ರೀಯರ ವಿಚಾರ-ಹೇಳುತಾರೆ.

ನೂರು ಮಂದಿ ಗಂಧರ್ವರೊಳಗೆ, ಆಜಾನಜರ ಕಕ್ಷದಲ್ಲಿ ಸೇರಿದವರು-ಎಂಟು ಮಂದಿ ಹೋಗತಾ, ಉಳಿದವರು ತೊಂಭತ್ತೆರಡು ಮಂದಿ. ಇವರಲ್ಲಿ 42ನೇ ಶ್ಲೋಕದಲ್ಲಿ ಉಕ್ತರಾದವರು ನಾಲ್ಕು ಮಂದಿ ಹೋಗತಾ, ಎಂಭತ್ತೆಂಟು ಮಂದಿ ಉಳಿದವರು. ಬಲಿನಾಮಕ ಗಂಧರ್ವನೇ ಆದಿಯಾಗಿ ಸಮಸ್ತರಾದ ಎಂಭತ್ತೆಂಟು ಮಂದಿ, ಭೂಮಿಯೊಳಗೆ ಶ್ರೀಕೃಷ್ಣನ ಕೂಡ ಆಕಳು ಮೇಯಿಸಿ ಕೊಂಡು ಆಟಗಳ ಆಡಿ,ಅವತಾರ ಮಾಡಿದವರೆಂದು ಕರಸತಾರೆ. ಗಂಧರ್ವರ ವಿಚಾರ ಮುಗಿಯಿತು. ಇನ್ನು,ಅಪ್ಸರಸ್ತ್ರೀಯರ ವಿಚಾರ ಹೇಳತಾರೆ.

ಈಗ ಹೇಳುವ ಕಕ್ಷ ಆಜಾನಜರ ಕಕ್ಷ— ಆಜಾನಜರಲ್ಲಿ, ಆಖ್ಯಾತರು ಅನಾಖ್ಯಾತರು-ಎಂತ-ಎರಡು ಪ್ರಕಾರದೊಳಗೆ,ವರ್ತಮಾನ 27ನೇ ಕಕ್ಷ ಆಖ್ಯಾತರು. ಈ ಆಖ್ಯಾತರಲ್ಲಿ ಪಠಿತರಾದ ಅಪ್ಸರಸ್ತ್ರೀಯರು ನೂರು ಜನ. ಇದರಾಗೆ,ಕರ್ಮಜರಾದ 19ನೇ ಕಕ್ಷದವರಿಗೆ ಸಮಾನರು 92 ಮಂದಿ,19ನೇ ಕಕ್ಷದಲ್ಲಿ ಸೇರಿದ್ದಾರೆ. ಉಳಿದ ಎಂಟು ಮಂದಿ ಈ ಕಕ್ಷದವರು.

ಊರ್ವಶೀ, ಘೃತಾಚಿ, ಮೇನಕಾ, ರಂಭಾ, ತಿಲೋತ್ತಮಾ, ಸುಕೇಶಿ, ಮಂಜುಘೋಷ, ಪಿಂಗಳಾ, ಪೂರ್ವಚಿತ್ತಿ, ಸಹಜನ್ಯಾ, ವಿಶ್ವಾಚಿ, ತ್ರಿಜಟಾ-ಇತ್ಯಾದಿ ಹನ್ನೆರಡು ಮಂದಿ ಆಜಾನಜ ಕಕ್ಷದವರು. ಇವರು ಹೋಗತಾ ನಿಂತ ಎಂಟು ಮಂದಿ ಈ ಕಕ್ಷದವರು. (92 ಮಂದಿ ಹೋಗತಾ). ಇದರ ವಿವರ 45ನೇ ಶ್ಲೋಕದಲ್ಲಿ ಅದೆ. ಪಿಂಗಳಾ. ಎನತಕ್ಕ ಅಪ್ಸರಸ್ತ್ರೀ ಅವತಾರವು ದಾವು

ದೆಂದರೆ- ಸ್ವೈಲೇಂದ್ರಿ-ಎಂತ ಒಂದು ಅವತಾರ. ತಿಲೋತ್ತಮೆ ಅವತಾರ ದಾವ ದೆಂದರೆ, ಪೂರ್ವದಲ್ಲಿ ನಕುಲನ ಪತ್ನಿಯಾದ ಪಾರ್ವತಿ-ಎಂತ ಒಂದು ಅವ ತಾರ. ಉಳಿದ ಅಪ್ಸರಸ್ತ್ರೀಯರು ಯಾವತ್ತೂ ಮಂದಿ ಗೋಕುಲದಲ್ಲಿ ಗೋಪಿಕಾಸ್ತ್ರೀಯರಾಗಿ ಅವತಾರ ಮಾಡೋವರಾಗಿದ್ದಾರೆ. ಅಪ್ಸರಸ್ತ್ರೀಯಾದ ಶಬರೀ-ಎನತಕ್ಕವಳು ಶ್ರೀರಾಮಚಂದ್ರದೇವರಿಗೆ ಅರಣ್ಯದಲ್ಲಿ ಎಂಜಲು ಫಲ ಗಳನ್ನು ಕೊಟ್ಟು, ಪ್ರೀತಿ ಪಡಿಸಿದಳು. ಶಬರಿಯೇ ಆದಿಯಾಗಿ ಈ ಅಪ್ಸರ ಸ್ತ್ರೀಯರೊಳಗೆ, ಶಬರೀ ಶ್ರೇಷ್ಠಳೆಂದು ತಾತ್ಪರ್ಯ. ॥43॥

## ೨. ಭಾವಪ್ರಕಾಶಿಕೆ :-

ಮೇಲೆ ಹೇಳಿದ ಪ್ರಧಾನಗಂಧರ್ವರನ್ನು ಬಿಟ್ಟು, ಉಳಿದ ಗಂಧರ್ವರು ಗೋಕುಲದಲ್ಲಿ ಬಲ- ಮೊದಲಾದ ಗೋಪಾಲಕರಾಗಿ, ಕೃಷ್ಣನ ಸೇವಾರ್ಥವಾಗಿ ಹುಟ್ಟಿರುವರು. ಪೂರ್ವದಲ್ಲಿ, ಪಿಂಗಳೆ-ಎಂಬ ವೇಶ್ಯೆಯು ವಿದೇಹದೇಶ ದಲ್ಲಿದ್ದು, ಕಡೆಗೆ ವೈರಾಗ್ಯದಿಂದ ವೇಶ್ಯೆಯ ವೃತ್ತಿಯನ್ನು ಬಿಟ್ಟು, ತನ್ನ ಅಂತ ರ್ಗತನಾದ ಪರಮಾತ್ಮನೇ ಪತಿ-ಎಂದು ಭಾವಿಸಿ, ಧ್ಯಾನಮಾಡುತ್ತಿದ್ದು,ಆ ದೇಹ ವನ್ನು ಬಿಟ್ಟು,ಕೃಷ್ಣಾವತಾರದಲ್ಲಿ ತ್ರಿವಕ್ರೆಯಾಗಿ ಹುಟ್ಟಿ, ಶ್ರೀಕೃಷ್ಣನಿಗೆ ಗಂಧ ವನ್ನು ಕೊಟ್ಟು,ಕೃಷ್ಣನ ಅಂಗಸಂಗವನ್ನು ಹೊಂದಿರುವಳು. ಈಕೆಯು ಪೂರ್ವ ದಲ್ಲಿ ಅಪ್ಸರಸ್ತ್ರೀಯು. ಪಿಂಗಳೆಯ ಕಥೆಯನ್ನು, ಏಕಾದಶಸ್ಕಂಧ ಭಾಗವತ ದಲ್ಲಿ ವಿಸ್ತಾರವಾಗಿ ಹೇಳಿರುವರು.

ಇದೇ ಅರ್ಥವನ್ನೇ, ನಿರ್ಣಯ 15ನೇ ಅಧ್ಯಾಯದಲ್ಲಿ ವಿವರಿಸಿರುವರು. ನಕುಲನಿಗೆ ಶಲ್ಯನ ಮಗಳಲ್ಲದೇ,ಪಾರ್ವತೀ-ಎಂಬ ಮತ್ತೊಬ್ಬ ಹೆಂಡತಿಯು ಇದ್ದಳು. ಆಕೆಯು ಪೂರ್ವದಲ್ಲಿ ತಿಲೋತ್ತಮೆ ಎಂಬ ಅಪ್ಸರೆಯು. ಗೋಕು ಲದ ಗೋಪಿಯರೆಲ್ಲರೂ ಅಪ್ಸರಸ್ತ್ರೀಯರೆಂದು ನಿರ್ಣಯದಿಂದಲೂ, ಭಾಗವತ ದಿಂದಲೂ ಸಿದ್ಧವಾಗುವುದು. ನಿರ್ಣಯ 5ನೆಯ ಅಧ್ಯಾಯದಲ್ಲಿ ಹೇಳಿರು ವಂತೆ, ಶಬರಿಯೂ ಒಬ್ಬ ಅಪ್ಸರಸ್ತ್ರೀ. ಶ್ರೀರಾಮನು ದಂಡಕಾರಣ್ಯದಲ್ಲಿ ಸೀತೆಯನ್ನು ಹುಡುಕುವ ನಿಮಿತ್ತ ಮಾಡಿ ಬರುತ್ತಿರುವಾಗ,ಶಬರಿಯು ಶ್ರೀರಾಮ

ನನ್ನು ಕಂಡು, ತಾನು ರುಚಿನೋಡಿ, ರುಚಿಯಾದುದೆಂದು ತಿಳಿದ ಫಲಾದಿಗಳನ್ನು ರಾಮನಿಗೆಂದು ತೆಗೆದು ಇಟ್ಟಿದ್ದದನ್ನು, ಶ್ರೀರಾಮನಿಗೆ ಸಮರ್ಪಿಸಿ, ಶ್ರೀರಾಮನ ಸನ್ನಿಧಾನದಲ್ಲಿ ಅಗ್ನಿಪ್ರವೇಶವನ್ನು ಮಾಡಿದಳು. ಶ್ರೀಪರಮಾತ್ಮನು ತನ್ನ ಲೋಕವನ್ನು ಕೊಟ್ಟನು.

ಆಕೆಯು ಪೂರ್ವದಲ್ಲಿ ಉತ್ತಮಳಾದ ಅಪ್ಸರಸ್ತ್ರೀಯು. ಒಂದು ದಿವಸ ದೇವೇಂದ್ರನ ಸಮೀಪದಲ್ಲಿ, ಶಚೀದೇವಿಯ ಸನ್ನಿಧಾನದಲ್ಲಿ, ಈ ಅಪ್ಸರೆಯು ಅತಿ ದರ್ಪವನ್ನು ಪ್ರಕಟಿಸಲು,ಶಚಿಯು ಕೋಪದಿಂದ ಶಾಪವನ್ನಿತ್ತಳು. ಆ ನಿಮಿತ್ತದಿಂದ ಭೂಮಿಯಲ್ಲಿ ಹುಟ್ಟಿದ್ದಳು. ಶ್ರೀರಾಮದೇವರು ಶಾಪದಿಂದ ವಿಮೋಚನೆ ಮಾಡಿಸಿದರೆಂಬ ವಾಕ್ಯದಿಂದ ಸಿದ್ಧವಾಗುವುದು. ॥43॥

## ೩. ಭಾವದರ್ಪಣ :-

ಗಂಧರ್ವರ ಅಪ್ಸರಸ್ತ್ರೀಯರುಗಳ ವಿವರ ಮಾಡುತ್ತಾರೆ— ಉಳಿದ ಎಂದು. ತದುಕ್ತಂ ತಾರತಮ್ಯೇ । –"ತಥಾಪರೇಚ ಗಂಧರ್ವಾ ಗೋಪಾಲ ಬಲಪೂರ್ವಕಾಃ । ಅಥೋರ್ವಶ್ಯಾದ್ಯಪ್ಸರಸಃ ಸೈರಂಧ್ರಿ ಪಿಂಗಲಾ ಪುರಾ । ನಕುಲಸ್ತ್ರೀ ಪಾರ್ವತೀ ಯಾ ಸಾಚ ಪೂರ್ವೇ ತಿಲೋತ್ತಮಾ । ಕೃಷ್ಣಾಂಗಸಂಗ ಗೋಪ್ಯಃ ಪ್ರಾಕ್ ಶಬರೀಚಾಪ್ಸರಸ್ತ್ರೀಯ"–ಇತಿ. ॥43॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

–'ಉಳಿದ'–ಇತಿ ॥ ತಥಾಪರೇ ಚೇತ್ಯಸ್ಯಾರ್ಥ ಕಥನಮ್ ॥ ಭಗವದ್ಭಾರ್ಯತಾ ಯೋಗ್ಯಾಃ ಕಾಶ್ಚಿದಪ್ಸರಸಶ್ಚ ಯಾಃ ॥ ತಾ ಸ್ವೇತಾ ಪಿಂಗಳಾ ॥ ಸೈರಂಧ್ರೀ ಕುಬ್ಜಾ ॥ ಋಷಿಭಾರ್ಯಾತ್ವಂ ಪುಂಕಾಮಾನಾನುವೃತತ್ವಾತ್ ಬಹುಗಾಮಿವೇಶ್ಯಾತ್ವಂ ಪ್ರತಿಪಾದ್ಯತೇ ॥ ಅತಃ ಅಪ್ಸರಸ್ತ್ವಂ ಕಥಂ ಇತಿ ಚೇತ್ ನ । ತಸ್ಯಾಃ ಏವ ಭೂಮೌ ಜನ್ಮದ್ವಯ ಕಲ್ಪನೇ ಅವಿರೋಧಾತ್ ॥ ತಿಲೋತ್ತಮೆಯು ॥ ನನು ಪಿಂಗಳಾ ದೌ ಅವಿದ್ಯಮಾನಂ ಪೂರ್ವಪದಂ

ಅಪ್ಸ್ವೇವ ಕುತ ಇತಿ ॥ ತತ್ ನ ॥ ಸೂತ್ರಾಣಾಂ ಪ್ರತ್ಯಸುಸಾರಿತ್ವವತ್ ಪೂರ್ವಪದಪ್ರಯೋಗೇ ಶ್ರೀಮೂಲಂ ಅನುಕೂಲಿತಂ ಸ್ಯಾತ್ ಇತ್ಯಾಶಯಾತ್ ॥ ವಿಷ್ಣುದರ್ಶನೇನ ಏವಮೇವ ಅಸ್ಮಟ್ಬ್ಯಾಸ್ತಾ ಮೃತಾಶನನದೀವಿಹಾರಿಣಾಂ (ಅಸ್ಮಟ್ಬ್ಯಾಸ್ತಾಮೃತಶರಂಗಿಣೀ) ಪಾತೇ ನಂದತೀರ್ಥ ತೀರ್ಥ ವಾರಿಧಿ ತರಂಗೈಃ ಸಂಪ್ಲುತಾ ಇತಿ ಸೂಚಯತಿ ॥ ಯಥಾಹುಃ ಮೂಲಾಚಾರ್ಯಾಃ –“ನಕುಲಸ್ಯಾಸೀತ್ ಪೂರ್ವಂ ಭಾರ್ಯಾ ತಿಲೋತ್ತಮಾ”– ॥ ಇತಿ ॥ ನಕುಲ ಲಲನಾ ಪೂರ್ವಂ ತಿಲೋತ್ತಮಾ ಇತ್ಯನ್ವಯಃ ॥ ಗೋಪ್ಯಃ ಕೃಷ್ಣಭಕ್ತಾಹ್ಯೇವ ಅಪ್ಸರಸಃ ॥ ಗೋಪಾಂಗನಾಃ ಅಪಿ ಪುರಾವರಮಾಪಿರೇ ಯತ್ ॥ ಸಂಸ್ಕಾರತಃ ಪ್ರಥಮಮೇವ ಸುಸಂಗಮೋ ನೋ ಭೂಯಾತ್ ॥ ಪರಮಾಪ್ಸರಸಃ ಪುರಾಯಾ ॥ ದೃಷ್ಟ್ವಾ ತ ಪೋವ ಶಬರೀ ಪರಮಂ ಹರಿಂ ಚ ॥ ಶಾಪಾತ್ ವರಾಪ್ಸರಸಮೇವ ಹಿ ತಾಂ ವಿಮೋಚ್ಯ. ॥43॥

## ಕನ್ನಡಾರ್ಥ

ಹಿಂದೆ ಹೇಳಿದವರನ್ನುಳಿದ ಗಂಧರ್ವರು–ಎಂದು, ಅರ್ಥಮಾಡಬೇಕು. ಈ ಪದ್ಯವು –‘ತಥಾಪರೇಚ’–ಎಂಬ ಶ್ಲೋಕದ ಅರ್ಥವನ್ನು ವಿವರಿಸುತ್ತದೆ.

ಪರಮಾತ್ಮನ ಸತಿಯಾಗಲು ಯೋಗ್ಯರಾದ ಕೆಲವು ಅಪ್ಸರೆಯರುಗಳಲ್ಲಿ ಪಿಂಗಳಾ-ಎಂಬುವವಳೂ ಒಬ್ಬಳು. –“ಸೈರೇಂಧ್ರಿ”–ಎಂದರೆ,ಕೃಷ್ಣಾವತಾರದಲ್ಲಿ ಹುಟ್ಟಿರುವ ಕುಬ್ಜಾ-ಎಂಬ ಕಂಸನ ದಾಸಿ. ಪಿಂಗಳಾ–ಎಂಬುವವಳೇ ಕುಬ್ಜಾ ಅಥವಾ ಸೈರೇಂಧ್ರಿ-ಎಂಬ ಹೆಸರಿನಿಂದ, ಎರಡನೆಯ ಜನ್ಮವನ್ನು ತಾಳಿದಳು.

ಹಿಂದೆ,ಉದಾಹರಿಸಲಾಗಿರುವ ವಿಷ್ಣುರಹಸ್ಯ ವಚನದಿಂದ, ಪಿಂಗಳೆಯು ಪೂರ್ವದಲ್ಲಿ ಋಷಿಪತ್ನಿಯೆಂದು. ಅವಳ ಪುರುಷ ಕಾಮನೆಯಿಂದ ಮೃತಳಾದುದರಿಂದ, ಬಹು ಪುರುಷಗಾಮಿ ವೇಶ್ಯಾಜನ್ಮವವಳಿಗೆ ಪ್ರಾಪ್ತವಾಯಿತೆಂದೂ ತಿಳಿದು ಬರುತ್ತದೆ. ಆದರೆ,ಅವಳು ಅಪ್ಸರೆಯೆಂದು ಇಲ್ಲಿ ಹೇಳುವುದು ಹೇಗೆ ?—ಎಂದು ಸಂಶಯವು ಬರುತ್ತದೆ. ಆದರೆ –“ಆ ಅಪ್ಸರೆಯೇ ಋಷಿ

ಪತ್ನಿಯಾದಳು, 2ನೆಯ ಜನ್ಮದಲ್ಲಿ ಸೈರೇಂಧ್ರಿಯಾದಳು."- ಎಂದು ಹೀಗೆ ಅವಳಿಗೆ ಎರಡು ಜನ್ಮಗಳಿರುವವೆಂದು ಹೇಳಿದರೆ ಯಾವ ವಿರೋಧವೂ ಇಲ್ಲ- ಎಂದು ಈ ಸಂಶಯವನ್ನು ಪರಿಹಸಬಹುದು.

-"ತಿಲೋತ್ತಮೆಯು ಪೂರ್ವದಲ್ಲಿ ನಕುಲನ ಲಲನೆ ಪಾರ್ವತಿಯೆನಿಸು ವಳು."-ಎಂಬಲ್ಲಿರುವಂತೆ-'**ಪಿಂಗಳಾ**'-ಎಂಬಲ್ಲಿಯೇ-'**ಪೂರ್ವಂ ಪಿಂಗಳಾ**'. ಎಂದು ಹೇಳಬಹುದಾಗಿತ್ತು. ಇಲ್ಲಿಯೇ ಮಾತ್ರ ಹಾಗೆ ಯಾಕೆ ಹೇಳಿರುವರು ? ಎಂದು ಸಂಶಯವು ಮೂಡಬಹುದು. ಆದರೆ, ಆದಕ್ಕೆ ಹೀಗೆ ಉತ್ತರ ತಿಳಿಯ ಬೇಕು. ಸೂತ್ರಗಳು ಶ್ರುತಿಯನ್ನನುಸರಿಸುವಂತೆ, ಮೂಲವನ್ನು ಅನುಸರಿಸಿ ಮೂಲಾರ್ಥವನ್ನೇ ಅನುಕೂಲಿಸಲು, ಹೀಗೆ ಪೂರ್ವಪದವನ್ನು ಪ್ರಯೋಗಿಸಿರು ತ್ತಾರೆ. ಈ ದೃಷ್ಟಾಂತದಿಂದ, ಈ ಶಾಸ್ತ್ರಸುರನದಿಯಲ್ಲಿ ವಿಹರಿಸುವ ಮಹಾ ಜ್ಞಾನಿಗಳಿಗೆ ಶ್ರೀಮದಾಚಾರ್ಯ ಶಾಸ್ತ್ರಸಮುದ್ರದ ತರಂಗಗಳಿಂದ ಸಂಪ್ರಾಪ್ತ ವಾದುದು-ಈ ಗ್ರಂಥವೇದು ಸೂಚಿಸಿದಂತೆ ಆಗುತ್ತದೆ. ಹೇಗೆಂದರೆ, -"ನಕು ಲನ ಹೆಂಡತಿಯು ಪೂರ್ವದಲ್ಲಿ ತಿಲೋತ್ತಮೆಯೆಂಬ"-ಮೂಲ ವಚನವಿರು ತ್ತದೆ. ನಕುಲನ ಪತ್ನಿಯು ಪೂರ್ವದಲ್ಲಿ ತಿಲೋತ್ತಮೆಯೆಂಬ ಅಪ್ಸರೆಯೆಂದು ಆದಕ್ಕೆ ಅರ್ಥವಾಗುತ್ತದೆ.

ಕೃಷ್ಣೋಪಭಕ್ತರಾದ ಗೋಪಿಯರು ಅಪ್ಸರಸ್ತ್ರೀಯರು. ಉಪ ನಯನಸಂಸ್ಕಾರದ ಪೂರ್ವದಲ್ಲಿಯೇ, ಶ್ರೀಕೃಷ್ಣನ ಅಂಗಸಂಗವು ತಮಗೆ ಆಗ ಬೇಕೆಂದು ತಪಸ್ಸನ್ನಾಚರಿಸಿ, ವರವನ್ನು ಪಡೆದಿದ್ದರು— ಎಂದ ನಿರ್ಣಯದ ವಚನವೇ ಇದಕ್ಕೆ ಆಧಾರ.

ಶಬರಿಯು ಅಪ್ಸರಸ್ತ್ರೀಯು. ಶಾಪನಿಮಿತ್ತದಿಂದ, ಶಬರೀ ಜನ್ಮವು ಅವಳಿಗೆ ಬಂದಿತ್ತು. ಶ್ರೀರಾಮನಿಗೆ ಫಲಸಮರ್ಪಣದಿಂದ, ಶಾಪನಿವೃತ್ತಿ ಯಾಯಿತೆಂದು-ನಿರ್ಣಯವಚನವೇ ಇದಕ್ಕೆ ಆಧಾರ.

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಉಳಿದ, ಅಂದರೆ, ಮೇಲೆ ಹೇಳಿದವರ ಹೊರತು ಮಿಕ್ಕ ಗಂಧರ್ವರೆಲ್ಲ- **ಬಲಿಯೇ ಮೊದಲಾದವರು** ಗೋಪಾಲಕರಾಗಿ ಹುಟ್ಟಿದರು. ಭೂಮಿಯಲ್ಲಿ ಸೈರಂಧ್ರಿಯು-ಕುಬ್ಜೆಯು ಪಿಂಗಳಾ-ಎಂಬ ಅಪ್ಸರಸ್ತ್ರೀಯು. ನಕುಲನ ಹೆಂಡತಿ **ಪಾರ್ವತೀ**-ಎಂಬುವಳು ಪೂರ್ವದಲ್ಲಿ ತಿಲೋತ್ತಮೆ-ಎಂಬ ಅಪ್ಸರಸ್ತ್ರೀ, ಎಂದು **ತಿಳಿಯುವುದು**. ಗೋಕುಲದ ಗೋಪಿಯರು ಎಲ್ಲರೂ, ಶಬರೀ- ಮೊದಲಾದ ಅಪ್ಸರಸ್ತ್ರೀಯರು. ॥43॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ನೂರು ಮಂದಿ ಗಂಧರ್ವರಲ್ಲಿ, ಅಜಾನಜದೇವತಾ ಕಕ್ಷಕ್ಕೆ ಸೇರಿದವರು- 8 ಮಂದಿ. ಅವರು ಕ್ರಮವಾಗಿ, 1. ತುಂಬುರ. 2. ಚಿತ್ರರಥ. 3. ದನು. 4. ಕಿಶೋರ. 5. ಧೃತರಾಷ್ಟ್ರ 6. ಹೂಹೂ. 7. ಹಾಹಾ. 8. ವಿದ್ಯಾಧರ. 9. ಉಗ್ರಸೇನ. 10. ವಿಶ್ವಾವಸು. 11. ಪರಾವಸು ಮತ್ತು 12. ಚಿತ್ರಸೇನ. ಈ 12 ಮಂದಿ ಗಂಧರ್ವರಲ್ಲಿ, ದನು–ಕಿಶೋರ–ಉಗ್ರಸೇನ. ಮತ್ತು ಚಿತ್ರಸೇನ–ಈ ನಾಲ್ಕು ಮಂದಿ ಗಂಧರ್ವರನ್ನು ಬಿಟ್ಟು, ಉಳಿದ 8 ಮಂದಿ, ಅಜಾನಜರ ಕಕ್ಷಕ್ಕೆ ಸೇರಿದವರು. 100 ಮಂದಿಯಲ್ಲಿ ಈ 8 ಮಂದಿ ಹೋಗತಾ, ಉಳಿದವರ ಗಂಧರ್ವರ ಸಂಖ್ಯೆ = 92. ಈ 92 ಮಂದಿಯಲ್ಲಿ ದನು–ಕಿಶೋರ–ಉಗ್ರಸೇನ–ಮತ್ತು ಚಿತ್ರಸೇನ–ಈ ನಾಲ್ಕು ಮಂದಿ ಹೋಗತಾ ಉಳಿದವರ ಸಂಖ್ಯೆ = 88. ಇದನ್ನೇ ದಾಸರಾಯರು, **ಉಳಿದ ಗಂಧರ್ವರೆಲ್ಲರು**–ಎಂದಿದ್ದಾರೆ.

**2. ಬಲಿ ಮೊದಲು :-**

ಬಲಿನಾಮಕ ಎಂಬ ಗಂಧರ್ವನಿಂದ ಪ್ರಾರಂಭಮಾಡಿಕೊಂಡು,88 ಮಂದಿ

ಗಂಧರ್ವರು, ನಂದಗೋಕುಲದಲ್ಲಿ ಜನಿಸಿ, ಶ್ರೀಕೃಷ್ಣನ ಒಡನಾಡಿಗಳಾಗಿ **ಗೋಪಾವೆರೆನಿಸಿದರು.** ಇಲ್ಲಿಗೆ ಗಂಧರ್ವರ ವಿಚಾರ ಮುಗಿಯಿತು. ಮುಂದೆ **ಅಪ್ಸರಸ್ತ್ರೀಯರ-** ವಿಷಯ ತಿಳಿಸುತ್ತಾರೆ.

3. ಅಪ್ಸರಸ್ತ್ರೀಯರು ಅಜಾನಜರ ಕಕ್ಷಕ್ಕೆ ಸೇರಿದವರು. ಈ ಅಜಾನಜದೇವತಾ ವರ್ಗದಲ್ಲಿ- 1. ಆಖ್ಯಾತರು (ಪ್ರಸಿದ್ಧರು) ಮತ್ತು 2. ಅನಾಖ್ಯಾತರು (ಅಪ್ರಸಿದ್ಧರು)—ಎಂಬ ಎರಡು ವರ್ಗಗಳಿವೆ. ಆಖ್ಯಾತರು, 27ನೆಯ ಕಕ್ಷಾಪನ್ನರು. ಈ ಅಖ್ಯಾತರಲ್ಲಿ ಅಪ್ಸರಸ್ತ್ರೀಯರು ನೂರು ಮಂದಿ. ಇವರಲ್ಲಿ 19ನೆಯ ಕಕ್ಷಾಪನ್ನರಾದ ಕರ್ಮಜರಿಗೆ ಸಮಾನರಾದ 92 ಮಂದಿ ಇದ್ದಾರೆ. ಉಳಿದ 8 ಮಂದಿ ಅಪ್ಸರಸ್ತ್ರೀಯರು,ಕ್ರಮವಾಗಿ—1. ಊರ್ವಶೀ. 2. ಘೃತಾಚೀ. 3. ಮೇನಕಾ. 4. ರಂಭಾ. 5. ತಿಲೋತ್ತಮಾ. 6. ಸುಕೇಶೀ. 7. ಮಂಜುಘೋಷಾ. 8. **ಪಿಂಗಳಾ.** 9. ಪೂರ್ವಚಿತ್ತೀ. 10. ಸಹಜನ್ಯಾ. 11. ವಿಶ್ವಾಚೀ ಮತ್ತು 12. ತ್ರಿಜಟಾ. ಈ 12 ಮಂದಿ ಅಪ್ಸರಸ್ತ್ರೀಯರು ಅಜಾನಜಕಕ್ಷದವರು. ಕರ್ಮಜರಿಗೆ ಸಮಾನರು. ಇದರಿಂದ, 19ನೆಯ ಕಕ್ಷಕ್ಕೆ ಸೇರಿದ್ದಾರೆ. ಈ 12 ಮಂದಿಗಳ ಪೈಕಿ, ಪಿಂಗಳಾ-ನಾಮಕ, ಅಪ್ಸರೆಯು ಭೂಮಿಯಲ್ಲಿ ಸೈರೇಂಧ್ರೀ-ಎಂಬ ಹೆಸರಿನಿಂದ ಅವತರಿಸಿದಳು.

**ಪೂರ್ವದಲ್ಲಿ,ಪಿಂಗಳೆ**—ಎಂಬ ವೇಶ್ಯೆಯು ವಿದೇಹದೇಶದಲ್ಲಿದ್ದು, ಕಡೆಗೆ ವೈರಾಗ್ಯದಿಂದ ಆ ವೃತ್ತಿಯನ್ನು ಬಿಟ್ಟು, ತನ್ನ ಅಂತರ್ಗತನಾದ ಪರಮಾತ್ಮನೇ ಪತಿ-ಎಂದು ಭಾವಿಸಿ, ಧ್ಯಾನಮಾಡುತ್ತಿದ್ದು,ದೇಹತ್ಯಾಗಮಾಡಿದಳು. ಅದೇ ಸ್ತ್ರೀಯು ಕೃಷ್ಣಾವತಾರಕಾಲದಲ್ಲಿ ತ್ರಿವಕ್ರೆ-ಯಾಗಿ, ಕುಬ್ಜೆಯಾಗಿ, ಕುರೂಪಿಯಾಗಿದ್ದಳು. ಕಂಸನ ಅರಮನೆಗೆ ಗಂಧವನ್ನು ಕೊಡುವುದಕ್ಕಾಗಿ ಹೋಗುತ್ತಿದ್ದ ಆ ತ್ರಿವಕ್ರೆಯನ್ನು, ಮಾರ್ಗದಲ್ಲಿ ಕಂಡ ಶ್ರೀಕೃಷ್ಣನು, ಅವಳಿಂದ ಗಂಧಸ್ವೀಕಾರ ಮಾಡಿದನು. ತನ್ನ ಕಾಲಿನ ಹೆಬ್ಬೆರಳಿನಿಂದ ಅವಳ ಕಾಲನ್ನು ಮೆಟ್ಟಿಕೊಂಡು, ಅವಳ ಗಲ್ಲವನ್ನು ಮೇಲಕ್ಕೆ ಎತ್ತಿದನು. ತಕ್ಷಣ, ಅವಳ ದೇಹದ ವಕ್ರತೆ

[illegible]ವಾಗಿ, ಸುಂದರಸ್ತ್ರೀಯಾದಳು. ಮಧುರಾಪಟ್ಟಣದಲ್ಲಿ ಕಂಸಾಸುರನ ವಧೆಯ ನಂತರ, ಶ್ರೀಕೃಷ್ಣನು ಅವಳ ಕೋರಿಕೆಯಂತೆ ಅವಳ ಗೃಹಕ್ಕೆ ತೆರಳಿ, ಅನುಗ್ರಹಿಸಿದನು.

4. **ತಿಲೋತ್ತಮೆ :-**

ಕಶ್ಯಪಮಹರ್ಷಿಯಿಂದ ಪ್ರಾಧೆಯೆಂಬುವಳಲ್ಲಿ ಜನಿಸಿದ ಅಪ್ಸರಸ್ತ್ರೀಯೇ **ತಿಲೋತ್ತಮೆಯು.** ಅತ್ಯಂತ ರೂಪವತಿಯಾದ ಸ್ತ್ರೀ. ಈಕೆಯ ಲಾವಣ್ಯಾತಿಶಯದಿಂದ ಮೋಹಗೊಂಡ ಸುಂದೋಪಸುಂದರೆಂಬ ಸಹೋದರರು ತಮ್ಮ ತಮ್ಮಲ್ಲಿ ಹೋರಾಡಿ, ಮೃತರಾದರು. ತಿಲೋತ್ತಮೆಯು ಬಾಣಾಸುರನ ಮಂತ್ರಿಯಾದ ಕುಂಭಾಂಡನಿಗೆ ಪುತ್ರಿಯಾಗಿ ಚಿತ್ರರೇಖೆ- ಎಂಬ ಹೆಸರಿನಿಂದ ಜನಿಸಿ, ಬಾಣಾಸುರನ ಪುತ್ರಿಯಾದ ಉಷೆಯನ್ನು ಅನಿರುದ್ಧನೊಡನೆ ಸೇರಿಸಿ, ದುರ್ವಾಸಮುನಿಯಿಂದ ಶಾಪನಿಮಿತ್ತವಾಗಿ ತನಗೆ ಬಂದಿದ್ದ ರಾಕ್ಷಸಜನ್ಮವನ್ನು ನೀಗಿಕೊಂಡಳು.

ಪಾಂಡವರಲ್ಲಿ ನಕುಲನಿಗೆ ಶಲ್ಯನ ಪುತ್ರಿಯಲ್ಲದೇ, **ಪಾರ್ವತೀ**-ಎಂಬ ಹೆಸರಿನ ಮತ್ತೊಬ್ಬ ಪತ್ನಿ ಇದ್ದಳು. ತಿಲೋತ್ತಮೆಯೇ ಪಾರ್ವತೀನಾಮಕಳಾಗಿ ನಕುಲನ ಪತ್ನಿಯಾಗಿದ್ದಳು-ಎಂದು **ನಿರ್ಣಯೋಕ್ತಿ.**

5. **ಶಬರೀ** :-ಮೊದಲಾದ ಅಪ್ಸರಸ್ತ್ರೀಯರೆಲ್ಲಾ ಗೋಪಸ್ತ್ರೀಯರಾಗಿ ನಂದಗೋಕುಲದಲ್ಲಿ ಅವತರಿಸಿ, ಶ್ರೀಕೃಷ್ಣನ ಅಂಗಸಂಗವನ್ನು ಹೊಂದಿ, ಸದ್ಗತಿಯನ್ನು ಪಡೆದರು.

6. **ಶಬರೀ :-**

ಅಪ್ಸರಸ್ತ್ರೀಯ ಅವತಾರಗಳು. ಒಮ್ಮೆ, ದೇವೇಂದ್ರನ ಸಭೆಯಲ್ಲಿ, ಶಚೀದೇವಿಯ ಸಾನ್ನಿಧ್ಯದಲ್ಲಿ, ಈ ಅಪ್ಸರೆಯು ಅತಿ ದರ್ಪದಿಂದ ವರ್ತಿಸಲು,

ಶಚಿಯು ಅವಳಿಗೆ ಭೂಮಿಯಲ್ಲಿ ಬೇಡರ ಜನ್ಮದಲ್ಲಿ ಹುಟ್ಟೆಂದು ಶಾಪವನ್ನಿತ್ತಳು. ಅದರಂತೆ, ಆ ಅಪ್ಸರೆಯು ಶಬರೀ–ಎಂಬ ಹೆಸರಿನಿಂದ ಬೇಡರ ಜಾತಿಯಲ್ಲಿ ಜನಿಸಿ, ಮತಂಗಋಷಿಗಳ ಆಶ್ರಮದ ಸಮೀಪದಲ್ಲಿ ಪಂಪಾ ಸರೋವರದ ಹತ್ತಿರ ವಾಸಿಸುತ್ತಿದ್ದಳು. ಶ್ರೀರಾಮಲಕ್ಷ್ಮಣರನ್ನು ಪ್ರತಿದಿನ ನಿರೀಕ್ಷಿಸುತ್ತಾ, ಅವರು ಬಂದಾಗ, ತಾನು ರುಚಿನೋಡಿ ಆರಿಸಿಬಿಟ್ಟಿದ್ದ ಸ್ವಾದು ಫಲಗಳನ್ನು ಅವರಿಗಿತ್ತು ಉಪಚರಿಸಿದಳು. ಶ್ರೀರಾಮನ ಸನ್ನಿಧಿಯಲ್ಲಿ ಅಗ್ನಿಪ್ರವೇಶಮಾಡಿ, ಸದ್ಗತಿ ಹೊಂದಿದಳು. ॥43॥

❋❋

## ಪದ್ಯ-೪೪

ಮೂಲ:–

ಕೃಷ್ಣವರ್ತ್ಮನ ಸುತರೊಳಗೆ ಶತ ।
ದ್ವ್ಯಷ್ಟ ಸಾವಿರ ಸ್ತ್ರೀಯರಲಿ ಪ್ರ ।
ವಿಷ್ಟಳಾಗಿ ರಮಾಂಬ ತತ್ತನ್ನಾಮ ರೂಪದಲಿ ॥
ಕೃಷ್ಣ ಮಹಿಷಿಯರೊಳಗೆ ಇಪ್ಪಳು ।
ತ್ವಷ್ಟ್ರ ಪುತ್ರಿ ಕಶೇರು ಇವರೊಳು ।
ಶ್ರೇಷ್ಠಳೆನಿಪಳು ಉಳಿದ ಋಷಿಗಣ ಗೋಪಿಕಾ ಸಮರು ॥೪೪॥

ಅವತರಣಿಕೆ :-

ಅಜಾನಜದೇವತಾ ಕಕ್ಷಕ್ಕೆ ಸೇರಿದ ಶ್ರೀಕೃಷ್ಣನ ಮಡದಿಯರಾದ ಹದಿನಾರು ಸಾವಿರದ ನೂರು ಮಂದಿಗಳ ವಿಷಯ ತಿಳಿಸುತ್ತಾರೆ. ॥44॥

**ಪ್ರತಿಪದಾರ್ಥ :-**

**ಕೃಷ್ಣವರ್ತ್ಮನ** = ಅಗ್ನಿದೇವರ, **ಸುತರೊಳಗೆ** = ಪುತ್ರರಾದ ಅನೇಕ ಮಂದಿಯೊಳಗೆ, **ಋಷಿಗಣ** = ಜ್ಞಾನಿಗಳಾದ ಋಷಿಸಮೂಹ, **ದ್ವ್ಯಷ್ಟ ಸಾವಿರ** = ಹದಿನಾರುಸಾವಿರ (ದ್ವಿ ಅಷ್ಟ = ದ್ವ್ಯಷ್ಟ = 2 x 8 = 16). **ಶತ** = ಮೇಲೆ ನೂರು ಅಂದರೆ, 16,000 + 100 ಅಂದರೆ, ಹದಿನಾರು ಸಾವಿರದನೂರು ಮಂದಿ, **ಕೃಷ್ಣಮಹಿಷಿಯರೊಳಗೆ** = ಶ್ರೀಕೃಷ್ಣನ ಪತ್ನಿಯರಲ್ಲಿ, **ರಮಾಂಬ** = ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಯು, **ತತ್ತನ್ನಾಮ** = ಆಯಾಯಾ ಸ್ತ್ರೀಯರ ಹೆಸರುಗಳಿಂದ, **ರೂಪದಲಿ** = ಅವರವರ ರೂಪದೋಪಾದಿಯಲ್ಲಿ, **ಪ್ರವಿಷ್ಟಳಾಗಿ** = ಪ್ರವೇಶಿಸಿದವರಾಗಿ (ಆವೇಶದಿಂದ), **ಇಪ್ಪಳು** = ಇರುವವರಾಗಿದ್ದಾರೆ. **ತ್ವಷ್ಟೃಪುತ್ರಿ** = ತ್ವಷ್ಟ್ರ ನಾಮಕ ಸೂರ್ಯನ ಪುತ್ರಿ, **ಕಶೇರು** = ಕಶೇರು-ಎಂಬುವಳು, **ಇವರೊಳು** = ಈ 16,100 ಮಂದಿಗಳಲ್ಲಿ, **ಶ್ರೇಷ್ಠಳೆನಿಪಳು** = ಉತ್ತಮಳೆಂದು ಕರೆಯಿಸುತ್ತಾಳೆ. **ಉಳಿದ ಋಷಿಗಣ** = ಕಶೇರುವನ್ನು ಬಿಟ್ಟು, ಉಳಿದ 16,099 ಮಂದಿ ಋಷಿ ಸಮೂಹ, **ಗೋಪಿಕಾ ಸಮರು** = ಗೋಪಿಕಾ ಸ್ತ್ರೀಯರಿಗೆ ಸಮಾನರು. ॥44॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಆಜಾನಜರಲ್ಲಿ ಸೇರಿದ ಹದಿನಾರು ಸಾವಿರ ಗೋಪಿಕಾಸ್ತ್ರೀಯರ ವಿಚಾರವೂ, ಅವರ ಆವೇಶವೂ ಹೇಳತಾರೆ.

ಅಗ್ನಿದೇವರ ಪುತ್ರರಾದ ಅನೇಕ ಮಂದಿಯೊಳಗೆ ಜ್ಞಾನಿಗಳಾದ ಋಷಿಗಳ ಸಮೂಹ (ದ್ವ್ಯಷ್ಟ = ದ್ವಿ + ಅಷ್ಟ) ಹದಿನಾರುಸಾವಿರ ನೂರು, ಅಂತೂ, ಹದಿನಾರುಸಾವಿರದ ನೂರು ಮಂದಿ, ಶ್ರೀರಾಮಚಂದ್ರದೇವರ ವರದಿಂದ

ಶ್ರೀಕೃಷ್ಣಾವತಾರದಲ್ಲಿ ಗೋಪಿಕಾಸ್ತ್ರೀಯರಾಗಿ ಜನಿಸಿ,ಶ್ರೀಕೃಷ್ಣದೇವರಿಗೆ ಪತ್ನೀರಾದವರು. ಈ ಹದಿನಾರುಸಾವಿರದ ನೂರು ಮಂದಿ ಸ್ತ್ರೀಯರಲ್ಲಿ, ಜಗತ್ತಿಗೇ **ತಾಯಿಯಾದ ಶ್ರೀಲಕ್ಷ್ಮೀದೇವೇರು.** ಆಯಾ ಸ್ತ್ರೀಯರ ನಾಮಗಳಿಂದ, ಅವರವರ ರೂಪದೋಷಾದಿಯಲ್ಲ ಪ್ರವೇಶಮಾಡಿದವರಾಗಿ, ಆವೇಶದಿಂದ ಇರೋವರಾಗಿದ್ದಾರೆ. ತ್ವಷ್ಟೃನಾಮಕ ಸೂರ್ಯನ ಪುತ್ರಿ **ಕಶೇರು**-ಎಂಬುವಳು ಈ ಹದಿನಾರುಸಾವಿರದ ನೂರು ಮಂದಿಯೊಳಗೆ, ಉತ್ತಮಳೆಂತ ಕರಸತ್ತಾಳೆ. ಕಶೇರು ವ್ಯತಿರಿಕ್ತ, ಉಳಿದಿರುವ ಹದಿನಾರು ಸಾವಿರದ ನೂರು ಮಂದಿಯೊಳಗ ಹದಿನಾರುಸಾವಿರದ ತೊಂಭತ್ತೊಂಭತ್ತು ಮಂದಿಯಾದ ಇವರು, ಯಾವತ್ತೂ ಮಂದಿ ಗೋಪಿಕಾಸ್ತ್ರೀಯರು ಸಮರೆಂದು ತಾತ್ಪರ್ಯ. ॥44॥

**೨. ಭಾವಪ್ರಕಾಶಿಕೆ :–**

ಕೃಷ್ಣಪತ್ನಿಯರಾದ 16 ಸಾವಿರದ 100 ಮಂದಿಯರು, ಪೂರ್ವದಲ್ಲಿ ಅಗ್ನಿಪುತ್ರರಾದ ಋಷಿಗಳು. ಕೃಷ್ಣನ ಅಂಗಸಂಗದ ಇಚ್ಛೆಯಿಂದ ತಪಸ್ಸು ಮಾಡಿ, ವರ ಪಡೆದು,ಸ್ತ್ರೀಯರಾಗಿ ಹುಟ್ಟಿ, ಶ್ರೀಕೃಷ್ಣನಿಗೆ ಪತ್ನಿಯರಾದರು. ಇವರ ಪೈಕಿ ತ್ವಷ್ಟ್ರನ ಮಗಳಾದ **ಕಶೇರು**-ಎಂಬಾಕೆಯು ಶ್ರೇಷ್ಠಳು. ಉಳಿದವರೆಲ್ಲರೂ ಗೋಪಿಕಾಸ್ತ್ರೀಯರಿಗೆ ಸಮರೆಂದು ತಾತ್ಪರ್ಯ. ಈ ಅರ್ಥವು ನಿರ್ಣಯ-20ನೆಯ ಅಧ್ಯಾಯದಲ್ಲಿ, ನರಕಾಸುರನನ್ನು ಸಂಹಾರಮಾಡಿ, ಅವನ ಮನೆಯಲ್ಲಿ ಬಂಧನದಲ್ಲಿದ್ದ 16,100 ರಾಜ ಕನ್ಯೆಯರನ್ನು ಸ್ವೀಕರಿಸಿದನೆಂಬ ಘಟ್ಟದಲ್ಲಿ ಹೇಳಿದೆ.

ಶ್ರೀಕೃಷ್ಣನು ನರಕಾಸುರನ ಮನೆಯಲ್ಲಿ ನಿರುದ್ಧರಾದ, ರೂಪ ಶೀಲ ಗುಣಗಳಿಂದ ಕೂಡಿದ 16,100 ಮಂದಿ ಸ್ತ್ರೀಯರನ್ನು ಕಂಡನು. ಅವರೆಲ್ಲರೂ ಸದ್ವ್ರತ ಉಳ್ಳವರಾಗಿಯೂ, ಕನ್ಯೆಯರಾಗಿಯೂ ಇದ್ದರು. ಇವರ ಮಧ್ಯದಲ್ಲಿ ತ್ವಷ್ಟ್ರನೆಂಬ ಸೂರ್ಯಪುತ್ರಿಯಾದ **ಕಶೇರು** ಎಂಬಾಕೆಯು, ಶ್ರೇಷ್ಠಳೆನಿಸುವಳು. ಇವರೆಲ್ಲರೂ ಪೂರ್ವದಲ್ಲಿ ಅಗ್ನಿದೇವರ ಮಕ್ಕಳು. ಇವರು ಸ್ತ್ರೀತ್ವವನ್ನು ಹೊಂದಿ,ಶ್ರೀಕೃಷ್ಣನಿಗೆ ಪತ್ನಿಯರಾಗಬೇಕೆಂಬ ಉದ್ದೇಶದಿಂದ, ವಾಯು

ದೇವರನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡಿದರು. ಆಗ, ವಾಯು ದೇವರು ಅವರ ತಪಸ್ಸಿನಿಂದ ಸಂತುಷ್ಟರಾಗಿ ವರವನ್ನಿತ್ತರು. ಆಗ,ಅವರೆಲ್ಲರೂ ಸ್ತ್ರೀತ್ವವನ್ನು ಹೊಂದಿ, ಬದರಿಕಾಶ್ರಮಕ್ಕೆ ಬಂದು, ಅಲ್ಲಿ ಶ್ರೀನಾರಾಯಣದೇವರನ್ನು ಸೇವೆಮಾಡುತ್ತಿದ್ದು, ಅಪ್ಸರಸ್ತ್ರೀಯರಾಗಿ ಹುಟ್ಟಿ,ತದನಂತರದಲ್ಲಿ ರಾಜಕುಲದಲ್ಲಿ ಹುಟ್ಟಿದರು. ಕೆಲವರು ಸ್ವರ್ಗದಲ್ಲಿ ಇದ್ದರು. ಇವರೆಲ್ಲರೂ ಶ್ರೀಕೃಷ್ಣನ ಮಹಿಮೆಯನ್ನು ಕೇಳಿ, ಶ್ರೀಕೃಷ್ಣನನ್ನು ತಮಗೆ ಪತಿಯಾಗಬೇಕೆಂದು ಕೇಳಿಕೊಂಡರು. ಇವರೆಲ್ಲರೂ ವಿಶೇಷವಾದ ರಮಾದೇವಿಯರ ಆವೇಶದಿಂದ ಕೂಡಿ, ಆಜಾನಜದೇವತೆಗಳಿಗೆ ಸಮರಾಗಿದ್ದರು. ರಮಾವೇಶದಿಂದಲೇ ಎಲ್ಲರಲ್ಲೂ ಅಧಿಕವಾದ ಗುಣಗಳಿದ್ದುವು. ಅವರೆಲ್ಲರನ್ನೂ ಶ್ರೀಕೃಷ್ಣನು ಪಾಲಕಿಯಲ್ಲಿ ಕೂಡಿಸಿ, ದ್ವಾರಾವತಿಗೆ ಕಳಿಸಿದನು. ॥44॥

## ೩. ಭಾವದರ್ಪಣ :-

ಅಗ್ನಿಪುತ್ರರಾದ ಹದಿನಾರುಸಾವಿರ ಜನರಲ್ಲಿ ಸಮಾವೇಶ ಇದಾಗ್ಯೂ, ಕಶೇರು-ಎಂಬುವಳಲ್ಲಿ ವಿಶೇಷಾವೇಶ ಎಂದು ಹೇಳುತ್ತಾರೆ, ಕೃಷ್ಣವರ್ತ್ಮೇತಿ. ಕೃಷ್ಣವರ್ತ್ಮಾ ಅಗ್ನಿ. –"ಬರ್ಹಿಶ್ಶುಷ್ಮಾ ಕೃಷ್ಣವರ್ತ್ಮೇತ್ಯಮರಃ"– । ತದುಕ್ತಂ । –"ಶ್ರೀಯುಕ್ ಷೋಡಶಸಾಹಸ್ರ ಸ್ತ್ರೀಯಃ ಪ್ರಾಗ್ವಹ್ನಿಪುತ್ರಕಾಃ। ಕಶೇರು ಸ್ತ್ವಷ್ಟೃಪುತ್ರೀ ಯಾ ತಾಸಾಂ ಮಧ್ಯೇಗುಣಾಧಿಕಾ"-ಇತಿ ತಾರತಮ್ಯೇಃ। –"ತಾನಾಂ ಪ್ರಧಾನಾ ತ್ವಷ್ಟೃ ಪುತ್ರೀ ಕಶೇರುರಿತಿ"– ನಿರ್ಣಯೋಕ್ತೇಃ. ॥44॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಅತ್ರ ಯದ್ಯಪಿ ಶ್ರೀಮುಷ್ಣಾರ್ಯ ಗ್ರಂಥಮೂಲಕೋಽಪ್ಯಯಂ ಸಂಧಿಃ ॥ ತತ್ರ ಶ್ರೀಯುಕ್ ಷೋಡಶಸಾಹಸ್ರ ಸ್ತ್ರೀಯಃ ಪ್ರಾಕ್ ವಹ್ನಿ ಪುತ್ರಕಾಃ ಇತ್ಯುಕ್ತಂ ॥ ತದನುಸಾರೇಣೇಽಪಿ ಕ್ವಚಿತ್ ಹದಿನಾರುಸಾವಿರ ನಂದಗೋಪಕುಮಾರಗರ್ಧಾಂಗಿಯರನ ಇತ್ಯುಕ್ತೇಃ ಅತ್ರಾಪಿ ತಥಾ ಪ್ರಯೋಕ್ತವ್ಯೇ: ಚ

ಧಿವಮಾಪ ॥ ತೇನ ಪೂರ್ವವತ್ -"ದ್ವ್ಯಷ್ಟೌ ಸಹಸ್ರಾಣಿ ಶತಂ ಚ ರೂಪಶೀಲಾ ದಾರಾಃ ಅಕ್ಷತಾಃ ಸದ್ವ್ರತಸ್ಥಾಃ ॥ ಪುತ್ರಾಃ ಅಗ್ನೇಃ ಪೂರ್ವಮಾಸಂಸ್ಥಿತೇಥ ಆಜಾನಜ್ಯೈಃ ಸರ್ವಗುಣೈಃ ಸಮಸ್ತಾಃ ॥ -"ಸ್ವಭಾವತಃ ಇಂದಿರಾವೇಶತೋಽಥ ತಾಸಾಂ ಪ್ರಧಾನಾ ತ್ವಷ್ಟೃಪುತ್ರೀ ಕಶೇರುಃ- ಇತಿ ಆಚಾರ್ಯ ವಚನಮನುಕರೋತಿ ಇತಿ ಪ್ರತೀಮಃ ॥ ಅಗ್ನಿಸುತಪದೇ ಪ್ರಯೋಕ್ತವ್ಯೇಽಪಿ ಟಕಾರಸ್ಯ ಪ್ರಕೃತ ಪ್ರಾಸಾಕ್ಷರತ್ವಾತ್ ತದ್ರಕ್ಷಣಾಯೈವಮ್ ॥ ದಶಾನ್ಯೇ ಋಷಯಃ ಗೋಪಿಕಾಸಮಾಃ. ॥44॥

## ಕನ್ನಡಾರ್ಥ

ಶ್ರೀಮುಷ್ಣಾಚಾರ್ಯ ಗ್ರಂಥವನ್ನೂ ಈ ಸಂಧಿಯು ಅನುಸರಿಸುವುದು. ಲಕ್ಷ್ಮೀಸನ್ನಿಧಿಯುಕ್ತರಾದ ಹದಿನಾರುಸಾವಿರ ಸ್ತ್ರೀಯರು ಪೂರ್ವದಲ್ಲಿ, ಅಗ್ನಿಪುತ್ರರೆಂದು ಹೇಳಲಾಗಿರುತ್ತದೆ. ಇದನ್ನನುಸರಿಸಿಯೂ, ಕೆಲವು ಕಡೆಗಳಲ್ಲಿ —"ಹದಿನಾರುಸಾವಿರ ನಂದಗೋಪ ಕುಮಾರನರ್ಧಾಂಗಿಯರನ"—ಎಂದು ಪ್ರಯೋಗಿಸಿರುತ್ತಾರೆ. ಇಲ್ಲಿಯೂ, ಅದರಂತೆ ಪ್ರಯೋಗಿಸಬಹುದಾಗಿತ್ತು. ಆದರೂ,ಹೀಗೆ ಹೇಳುವುದರಿಂದ-'ದ್ವ್ಯಷ್ಟೌ ಸಹಸ್ರಾಣಿ ಶತಂ ಚ ರೂಪಶೀಲಾ ದಾರಾಃಧಕ್ಷತಾಃ'-ಎಂಬ ಶ್ರೀಮದಾಚಾರ್ಯರ ತಾತ್ಪರ್ಯ ನಿರ್ಣಯದ ವಚನವನ್ನು ಅನುಸರಿಸುತ್ತಾರೆ-ಎಂದು ತಿಳಿದು ಬರುತ್ತದೆ.

ಸ್ವಾಭಾವಿಕವಾಗಿ, ಹಾಗೂ ಇಂದಿರಾದೇವಿಯ ಆವೇಶದಿಂದ ತ್ವಷ್ಟೃ ಪುತ್ರಿಯಾದ ಕಶೇರು-ಎಂಬುವವಳು ಅವರುಗಳಲ್ಲಿ ಪ್ರಧಾನಳೆಂದು ಅಲ್ಲಿ ಹೇಳಿರುತ್ತಾರೆ.

-"**ಅಗ್ನಿಸುತ**"-ಎಂದು ಪ್ರಯೋಗಿಸಬಹುದಿತ್ತು. ಆದರೂ, ಈ ಪದ್ಯದಲ್ಲಿ ಟಕಾರ ಪ್ರಾಸವಿರುವುದರಿಂದ,ಅದನ್ನು ಸಂರಕ್ಷಿಸಲು "ಕೃಷ್ಣವರ್ತ್ಮನ ಸುತರೊಳಗೆ ಶತದ್ವ್ಯ ಸಾವಿರ ಸ್ತ್ರೀಯರಲ್ಲಿ"-ಎಂದು ಹೀಗೆ ಪ್ರಯೋಗಿಸಿರುತ್ತಾರೆ.

ನೂರಾಹತ್ತು ಋಷಿಗಳನ್ನುಳಿದು, ಇತರ ಋಷಿಗಳು ಗೋಪಿಕಾಸ್ತ್ರೀಯ ಮಾನರು-ಎಂದು ಪ್ರಮಾಣವಿದೆ. ॥44॥

## ಶ್ರೀ ಗುರುಹೃದಯಪ್ರಕಾಶಿಕೆ

ಕೃಷ್ಣವರ್ತ್ಮನೆಂಬ ಅಗ್ನಿಯ ಪುತ್ರರುಗಳು, ಕೃಷ್ಣ ಪತಿಯರಾಗಬೇಕೆಂದು ಆಶ್ರಮದಲ್ಲಿ ತಪಸ್ಸುಮಾಡಿ, ವರ ಪಡೆದು, ಹದಿನಾರುಸಾವಿರದ ನೂರು ಸ್ತ್ರೀಯರಾಗಿ ಹುಟ್ಟಿ, ಕೃಷ್ಣದೇವರ ಪತ್ನಿಯರಾಗಿದ್ದವರೊಳಗೆ ಸಾಕ್ಷಾ ದೇವಿ ಪ್ರವಿಷ್ಟಳಾಗಿ, ಆಯಾಯಾ ನಾಮರೂಪದಿಂದ ಇದ್ದಳು. ಈ ರುಸಾವಿರದ ನೂರು ಜನದೊಳಗೆ ತ್ವಷ್ಟ್ರಪುತ್ರಿ ಕಶೇರು- ಎಂಬುವಳು ಳು. ಮಿಕ್ಕ ಋಷಿಗಳೆಲ್ಲಾ ಗೋಪಿಕಾಸ್ತ್ರೀಯರಿಗೆ ಸಮಾನರು. ॥44॥

# ಸರ್ವವ್ಯಾಖ್ಯಾನಸಾರಸಂಗ್ರಹ

1. **ಕೃಷ್ಣವರ್ತ್ಮನ**–ಅಗ್ನಿದೇವರು. –"ಬರ್ಹಿಶ್ಶುಷ್ಮಾ ಕೃಷ್ಣ- ಶೋಚಿಷ್ಕೇಶ ಉಪರ್ಬುಧ" :—**ಅಮರಕೋಶರೀತ್ಯಾ.**

ಶ್ರೀಕೃಷ್ಣಪತ್ನಿಯರಾದ 16,000 ಮಂದಿಯರು, ಪೂರ್ವದಲ್ಲಿ ಅಗ್ನಿ ರಾದ ಋಷಿಗಳು. ಇವರು ಸ್ತ್ರೀತ್ವವನ್ನು ಹೊಂದಿ, ಶ್ರೀಕೃಷ್ಣನ ಪತ್ನಿಯ ಬೇಕೆಂಬ ಉದ್ದೇಶದಿಂದ ಶ್ರೀವಾಯುದೇವರನ್ನು ಕುರಿತು ಉಗ್ರವಾದ ನ್ನು ಮಾಡಿದರು. ಆಗ ವಾಯುದೇವರು ಸಂತುಷ್ಟರಾಗಿ, ವರವನ್ನಿ ಆಗ ಅವರೆಲ್ಲರೂ ಸ್ತ್ರೀತ್ವವನ್ನು ಹೊಂದಿ, ಬದರಿಕಾಶ್ರಮಕ್ಕೆ ಬಂದು, ಶ್ರೀಮನ್ನಾರಾಯಣನನ್ನು ಸೇವೆ ಮಾಡುತ್ತಿದ್ದು, ಅಪ್ಸರಸ್ತ್ರೀಯರಾಗಿ , ತದನಂತರದಲ್ಲಿ ರಾಜಕುಲದಲ್ಲಿ ಜನಿಸಿದರು. ಇವರ ಸಂಖ್ಯೆಯನ್ನು ನಾಯರು.

ಶತ ದ್ವ್ಯಷ್ಟಸಾವಿರ–ಎಂದಿದ್ದಾರೆ. ಅಂದರೆ, ದ್ವಿ ಅಷ್ಟ (ದ್ವ್ಯಷ್ಟ) = ಎಂಟರ ಎರಡರಷ್ಟು = 16. ದ್ವ್ಯಷ್ಟಸಾವಿರ – 16,000. ಶತ–ಆದರ ಮೇಲೆ ನೂರು. ಅಂದರೆ, 16,100 ಮಂದಿ. ಈ 16,100 ಶ್ರೀಕೃಷ್ಣನ ಪತ್ನಿಯರಲ್ಲಿ ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಯ (ರಮಾಂಬ) ಆವೇಶವಿದೆ (ಪ್ರವಿಷ್ಟಳಾಗಿ), ಶ್ರೀಲಕ್ಷ್ಮೀದೇವಿಯು ಅವರಲ್ಲಿ ಆಯಾಯಾ ಹೆಸರಿನಿಂದ, ಆಯಾಯಾ ರೂಪಯುಕ್ತಳಾಗಿದ್ದಾಳೆ. (ತತ್ತನ್ನಾಮರೂಪದಲಿ).

2. ನರಕಾಸುರನು ಪೂರ್ವೋಕ್ತ 16,100 ಮಂದಿ ಕನ್ಯೆಯರನ್ನು ಬಂಧನದಲ್ಲಿಟ್ಟಿದ್ದ. ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿ, ಅವರನ್ನೆಲ್ಲಾ ಬಂಧನದಿಂದ ವಿಮುಕ್ತಿಗೊಳಿಸಿದನು. ಅವರ ಅಪೇಕ್ಷೆಯಂತೆ, ಶ್ರೀಕೃಷ್ಣನು ಅವರನ್ನೆಲ್ಲಾ ತನ್ನ ಪತ್ನಿಯರನ್ನಾಗಿ ಪರಿಗ್ರಹಿಸಿದನು.

3. 16,000 ಮಂದಿ ಕೃಷ್ಣನ ಮಹಿಷಿಯರೊಳಗೆ, ತ್ವಷ್ಟೃನಾಮಕ ಸೂರ್ಯನ ಮಗಳಾದ ಕಶೇರು–ಎಂಬಾಕೆ ಅತ್ಯಂತ ಶ್ರೇಷ್ಠಳು.

4. ಕಶೇರು-ಎಂಬಾಕೆಯನ್ನು ಉಳಿದು, ಮಿಕ್ಕ ಹದಿನಾರುಸಾವಿರದ ತೊಂಭೊತ್ತೊಂಭತ್ತು ಮಂದಿ ಶ್ರೀಕೃಷ್ಣ ಪತ್ನಿಯರು ಗೋಪಿಕಾಸ್ತ್ರೀಯರಿಗೆ ಸಮಾನರು. ॥44॥

★★

## ಪದ್ಯ-೫೫

**ಮೂಲ :-**

ಸೂನುಗಳು ಎನಿಸುವರು ದೇವಕೃ |
ಶಾನುವಿಗೆ ಕ್ರತು ಸಿಂಧು ಶುಚಿ ಪವ |
ಮಾನ ಕೌಶಿಕರೈದು ತುಂಬರ ಊರ್ವಶೀತರರು ||
ಮೇನಕಾ ಋಷಿ ರಾಯರುಗಳಾ |
ಜಾನಸುರರಿಗೆ ಸಮರೆನಿಪರು ಸು |
ರಾಣಕರನಾಖ್ಯಾತ ದಿವಿಜರ ಜನಕರೆನಿಸುವರು ||೫೫||

**ಅವತರಣಿಕೆ :–**

ಅಗ್ನಿಪುತ್ರರಾದ ಐದುಮಂದಿ–ತುಂಬರಾದಿ 100 ಮಂದಿ ಗಂಧರ್ವರು– ಊರ್ವಶೀ- ಇತ್ಯಾದಿ- 100 ಮಂದಿ ಅಪ್ಸರದೇವತಾ ಸಮೂಹ-ಋಷಿಗಣ– ಅರಸರುಗಳು- ಇತ್ಯಾದಿ ಆಜಾನಜರು ಮತ್ತು ಅನಾಖ್ಯಾತದಿವಿಜರ ವಿಷಯ ತಿಳಿಸುತ್ತಾರೆ. ॥55॥

**ಪ್ರತಿಪದಾರ್ಥ :–**

**ದೇವಕೃಶಾನುವಿಗೆ** = ದೇವತೆಗಳಿಗೆ ಮುಖಸ್ಥಾನಾಪನ್ನನಾದ ಅಗ್ನಿ ದೇವರಿಗೆ, **ಕ್ರತು** = ಕ್ರತು–ಎಂಬ ಹೆಸರಿನ, **ಸಿಂಧು** = ಸಿಂಧು-ಎಂಬ ಅಭಿದಾನದ, **ಶುಚಿ** = ಶುಚಿನಾಮಕನಾದ, **ಪವಮಾನ** = ಪವಮಾನ -ಎಂಬ ಹೆಸರಿನ, **ಕೌಶಿಕ** = ಕೌಶಿಕ-ಎಂಬ ಅಭಿಧಾನದ, **ಐದುಸೂನುಗಳು ಎನಿಸುವರು** = ಈ ಐದುಮಂದಿ ಪುತ್ರರೆನಿಸುವರು. (ಅಗ್ನಿಪುತ್ರರು)

**ತುಂಬರ** = ತುಂಬರನೇ **ಮೊದಲಾದ** 100 ಮಂದಿ ಗಂಧರ್ವರು, **ಊರ್ವಶೀಶತರು** = ಊರ್ವಶೀ-ಮೊದಲಾದ 100 ಮಂದಿ ಅಪ್ಸರೆಯರು **ಮೇನಕಾ** = ಮೇನಕೆ-ಎಂಬ ಅಪ್ಸರ ಸ್ತ್ರೀ, **ಋಷಿ** = ಋಷಿಸಮೂಹ, **ರಾಯರುಗಳು** = ಅರಸರು, **ಅಜಾನಸುರರಿಗೆ** = ಅಜಾನಜದೇವತೆಗಳಿಗೆ, **ಸಮರೆನಿಪರು** = ಸಮಾನರೆನಿಸುವರು, **ಸುರಾಣಕರು** = ಸುರಾಣಕರೆಂಬ, **ಅನಾಖ್ಯಾತ ದಿವಿಜರ** = ಅನಾಖ್ಯಾತರಾದ ದೇವತೆಗಳಿಗೆ (ಪ್ರಸಿದ್ಧರಲ್ಲದ ಅಜಾನಜ ದೇವತಾವರ್ಗ). **ಜನಕರೆನಿಸುವರು** = ಪೂರ್ವೋಕ್ತ ಮಂದಿ ಜನಕರೆಂದು ಕರೆಯಿಸುತ್ತಾರೆ. ಅಂದರೆ, ಆಖ್ಯಾತ ಅಜಾನಜರಿಂದ ಅನಾಖ್ಯಾತರ ಉತ್ಪತ್ತಿ-ಎಂತ ತಾತ್ಪರ್ಯ. ॥45॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಇನ್ನೂ ಅಜಾನಜರ ವಿಚಾರವನ್ನೇ ಹೇಳುತಾರೆ.

ದೇವತೆಗಳಿಗೆ ಮುಖಸ್ಥಾನಾಪನ್ನನಾದ ಅಗ್ನಿದೇವರಿಗೆ ಕ್ರತು, ಸಿಂಧು, ಶುಚಿ, ಪವಮಾನ, ಕೌಶಿಕ-ಈ ಐದು ಮಂದಿ, ತುಂಬುರ–ಮೊದಲಾದ ಗಂಧರ್ವರು ನೂರು ಮಂದಿ, ಊರ್ವಶೀ ಮೊದಲಾದ ನೂರು ಮಂದಿ, ಇವರಲ್ಲಿ 92 ಮಂದಿ ಕರ್ಮಜರಲ್ಲಿ, 8 ಮಂದಿ ಈ ಕಕ್ಷದಲ್ಲಿ, ಮೇನಕೆಯು, ಋಷಿಗಣ, ನೂರು ಕೋಟಿ ಅರಸರುಗಳು, ಅಗ್ನಿದೇವರಿಗೆ ಪುತ್ರರಾದವರು ಎಂತ ಕರಸೋವನಾಗತಾರೆ. ಇವರು ಪೂರ್ವೋಕ್ತರಾದ ಅಜಾನಜದೇವತೆಗಳಿಗೆ ಸಮಾನರೆನಿಸುವರು. ಆಖ್ಯಾತ ಅಜಾನಜ ದೇವತಾಸಮೂಹ, ಅನಾಖ್ಯಾತರಾದ ಮುಂದೆ ಹೇಳತಕ್ಕ ದೇವತೆಗಳಿಗೆ ಆಖ್ಯಾತರಾದ ಅಜಾನಜರು ಅನಾಖ್ಯಾತರಾದ ಅಜಾನಜನರಿಗೆ ಜನಕರೆನಿಸುವರು. ಅಂದರೆ, ಆಖ್ಯಾತರಾದ ಅಜಾನರಿಂದ ಜನನ.ಎಂತ ತಾತ್ಪರ್ಯ. ॥45॥

## ೩. ಭಾವಪ್ರಕಾಶಿಕೆ :-

ಅಗ್ನಿದೇವರಿಗೆ ಕ್ರತು, ಸಿಂಧು, ಶುಚಿ, ಪವಮಾನ, ಕೌಶಿಕರೆಂದು 5 ಮಕ್ಕಳಿರುವರು. ಇವರೈದು, ತುಂಬುರು ಮೊದಲಾದ ಗಂಧರ್ವರು, 100 ಊರ್ವಶೀ-ಮೊದಲಾದ ಅಪ್ಸರರು 100, ಮೇನಕೆ, ವಶಿಷ್ಠಾದಿಗಳು ಹೊರತು, ಉಳಿದ ಋಷಿಗಳು, ಪ್ರಿಯವ್ರತಾದಿಗಳನ್ನು ಬಿಟ್ಟು, ಉಳಿದ ರಾಜರುಗಳು, ಇವರೆಲ್ಲರೂ ಆಜಾನಜರು ಎನಿಸುವರು. ಬೃಹತ್ತಾರತಮ್ಯದಲ್ಲಿ ಹೇಳಿರುವ ಪ್ರಕಾರ,ಪವಮಾನನೆಂಬ ಅಗ್ನಿಗೆ, ಪವಮಾನ, ಕ್ರಥರೆಂಬ ಇಬ್ಬರು ಮಕ್ಕಳು. ಕೌಶಿಕ, ಸಿಂಧು-ಎಂಬ ಇಬ್ಬರು ಅಗ್ನಿಯ ಮಕ್ಕಳು. ಶುಚಿ-ಎಂಬಗ್ನಿಗೆ ಶುಚಿ ಎಂಬ ಮಗನೊಬ್ಬನು. ಅಂತು, ಐವರು ಅಗ್ನಿಪುತ್ರರು. ತುಂಬುರು-ಮೊದಲಾದ 100 ಗಂಧರ್ವರು, ಊರ್ವಶೀ, ಮೇನಕೆ- ಮೊದಲಾದ ಅಪ್ಸರಸ್ತ್ರೀಯರು 100, ವಶಿಷ್ಠಾದಿ ಉತ್ತಮಗಣದಲ್ಲಿ ಸೇರಿದ ಋಷಿಗಳ ಹೊರತು, ಉಳಿದ ಋಷಿಗಳು,-ಇವರೆಲ್ಲರೂ ಆಜಾನಜ ದೇವತೆಗಳೆನಿಸುವರು.

ಸುರಾಣಕ ಅಂದರೆ, ಸುರಾಣಕರೆಂದು ದೈತ್ಯ ಗುಂಪು ಒಂದು ಉಂಟೆಂದು -"ಸುರಾಣಕಾಂಸ್ತ್ವಮೋನೇತುಂತತ್ಯಾ ದೇವಸಜಾನಕೇಂ",- ಸುರಾಣಕರೆಂಬ ದೈತ್ಯಸಮೂಹವನ್ನು ತಮಸ್ಸಿಗೆ ಕಳುಹಿಸುವುದಕ್ಕಾಗಿ,ಸೀತೆಯನ್ನು ತ್ಯಾಗಮಾಡಿದಂತೆ ತೋರಿದರೆಂಬ ವಚನದಲ್ಲಿ ಹೇಳಿದ ಸುರಾಣಕರನ್ನು ಇಲ್ಲಿ ಹೇಳಲಿಲ್ಲ. ಸುರಾಣಕಾ, ಅಂದರೆ ದೇವತಾಸಮೂಹವೇದರ್ಥ. ಈ ದೇವತಾಸಮೂಹದವರು ಆಜಾನಜರಲ್ಲಿ ಸಂಬಂಧಪಟ್ಟ ಅನಾಖ್ಯಾತ (ಅಪ್ರಸಿದ್ಧ) ದೇವತೆಗಳೆಂದ ಎನಿಸುವರು. ॥45॥

## ೪. ಭಾವದರ್ಪಣ :-

ಕೃಶಾನುವಿಗೆ ಮಕ್ಕಳಾದಂಥವರ ನಾಮ ಹೇಳುತ್ತಾರೆ—ಸೂನೇತಿ । -"ಪವಮಾನಕ್ರಥೌ ದ್ವೌ ಪ್ರಾಕ್ ಪವಮಾನೋಽಗ್ನಿಜಃ ಸ್ಮೃತಃ । ಕೌಶಿಕೋಽಗ್ನಿಜಃ ಸಿಂಧುಃ ಶುಚಿಃ ಪ್ರಾಕ್ ಶುಚಿರಗ್ನಿಜಃ । ತುಂಬುರ್ವಾದಿ ಶತಂಚೈವ ಊರ್ವಶ್ಯಾದ್ಯಪ್ಸರಸ್ತಥಾ । ಋಷಯಶ್ಚ ವಶಿಷ್ಠಾದೀನ್ ಋತೇ ಆಜಾನಜಾ ಸ್ಮೃತಾ"-ಇತಿ ತಾರತಮ್ಯೋಕ್ತೇಃ । ಸುರಾಣಕೇತಿ । -"ಸುರಾಣಕಾಂಸ್ತ್ವಮೋ

ನೇತುಂ ತತ್ಕ್ಯಾಜೇವ ಸ ಜಾನಕಿಂ"– । ಎಂದು ಶ್ರೀಪಂಡಿತಾಚಾರ್ಯರ ಉಕ್ತಿ ರೀತ್ಯಾ, ದೈತ್ಯರೆಂದು ಅರ್ಥ ಕೊಡುತ್ತದೆ. ಇಂಥ ದುಷ್ಟರಾದ ದೈತ್ಯರನ್ನೆ ದೇವತಾತಾರತಮ್ಯದಲ್ಲಿ ಹ್ಯಾಗೆ ಗಣಿಸಿಗೆ ತಂದರೆಂನು ಆಕ್ಷೇಪಿಸಿದರೆ, ಸಮಾ– ಧಾನ.

–"ಮನಮುಖ ಕರಣಾಧಿಪರೆನಿಪ ರುದ್ರಾದಿಗಳ ತಂನಾಮಕಾಸುರರು ಇಂದ್ರಿಯಯಂಬೋ । ಮನೆಮಾಡಿ ವ್ಯಾಪಾರವ ಮಾಡುತ್ತಾ ಜೀವರಲ್ಲಿ ಅನುವಾಗಿ ಇಹರಯ್ಯಾ ಬಳಲಿಸುತಾ । ಅನಿಮಿಷಾಗಣದವರ ನಾಮ ಧರಿಸಿಕೊಂಡು ದನುಜರ ಸಮೂಹವು ಇಹೋದುಂಟು" ।– ಎಂದು ಪುರಂದರದಾಸರಾಜರ ಸುಳಾದಿ ಉಕ್ತಿಯು ಇರುತ್ತದೆ. ಸುರಾಣಕರೆಂದು ದೇವತೆಗಳ ನಾಮವು ದೈತ್ಯರಿಗೂ ಇರೋಣ ಸಿದ್ಧವಾದ ಪ್ರಯುಕ್ತ, ಬಹುಗ್ರಂಥದರ್ಶಿಗಳಾದ ಜಗನ್ನಾಥದಾಸಾರ್ಯರು ದಾರ್ಢ್ಯಾರ್ಥದಿಂದ ಈ ಗ್ರಂಥದಲ್ಲಿ ಪ್ರಯೋಗ ಮಾಡಿರುತ್ತಾರೆಂದು ತಿಳೀಬೇಕು. ಈ ವಿಷಯದಲ್ಲಿ ನಮಗೆ ಪ್ರಮಾಣ ಸಿಗದೇ ಇದ್ದದರಿಂದ ಬರೆಯಲಿಲ್ಲ. ॥45॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :–

-'ಸೂನು'-ಇತಿ ॥ ಪಾವಕಃ ಪವಮಾನಶ್ಚ ಶುಚಿರಿತ್ಯನ್ವಯಃ । ಪುರಾವಸಿಷ್ಠ ಶಾಪಾದುತ್ಪನ್ನಾಃ ಇತ್ಯುಕ್ತೇಃ ಪವಮಾನಃ ಕ್ರಥಃ ಕೌಶಿಕಃ ಸಿಂಧುರಿತ್ಯನ್ವಯಃ ॥ ಕ್ರಥಕೌಶಿಕಾಖ್ಯೌ ಭಾಗೌ ತಥಾಗ್ನಿಸುತಯೋಃ ಪವಮಾನಸಿಂಧೋಃ ॥ ಅಜಾನೇತಿ ಪಕ್ಷ ಏವ ॥ ವಸ್ತುತಸ್ತು ತುಂಬುರ್ವಾದ್ಯಷ್ಟಕಂ ಕರ್ಮಜಸಮವ್ ॥ ಊರ್ವಶ್ಯಾದಿ ಷಟ್ಕಮಪಿ । ತೃತೀಯ ಭಾಗವತ ತಾತ್ಪರ್ಯಾತ್ ॥ ಗಂಧರ್ವಾದ್ಯಪ್ಸರಃ ಶತದ್ವಯಂ ಕರ್ಮಜ ಸಮವ್ ॥ ವ್ಯಾಪ್ತದರ್ಶಿನಾಂ ಸರ್ವೇಷಾಂ ಅತ್ರಗ್ರಹಣೇ ಋಷಿಕಕ್ಷಾಲೋಪಃ ॥ ತತ್ಪಕ್ಷ ಪ್ರಮಾಣಾರ್ಥಃ ಸಮ್ಯಕ್ ವಿವೃತೌ ಕೃತಃ ದ್ರಷ್ಟವ್ಯಃ ॥ ಗ್ರಂಥಾಧಿಕ್ಯಭಯಾದುಪ ರಮ್ಯತೇ ॥ ತುಂಬುರ್ವಾದಿ ಶತಂ ಊರ್ವಶ್ಯಾದಿ ಶತಂ ಶತಂ ಶೋಷಯಃ ॥ ಅಥ ಕೇಚಿದಸುರಗಣಾಃ ಸುರಾಣಕಾಃ ಇತ್ಯುಕ್ತ್ವಾ ಅನಾಖ್ಯಾತಾ

ದಿವಿಜಾಃ ತಾತ್ವಿಕ ದೈತ್ಯೋತ್ಪತ್ತೇಃ ವಕ್ಷ್ಯಮಾಣತ್ವೇನ ಅತ್ರ ಅನಾಖ್ಯಾತಾವತಾರ ಪ್ರಸಂಗೇ ತೇಷಾಮುಕ್ತಿಃ ॥ ದಿವಿಜೇತಿ ದೈತ್ಯಾಃ ॥ ತುಂಬುರ್ವಾದಿ ವರ್ಗಸ್ಯ ಆಜಾನತ್ವೇ –"ತುಂಬುರು ಪ್ರಮಾಣ ಯೇ ಚ ತಥೋರ್ವಶ್ಯಾದಿಕಾ ಅಪಿ ॥ ವಿಶ್ವಾಮಿತ್ರ ಬ್ರಹ್ಮಪುತ್ರಾನ್ ಋತೇ ಚಾಪ್ಸರಸೋಽಖಿಲಾಃ ॥ ಕಾರ್ತವೀರ್ಯಾದಿ ರಾಜಭ್ಯಃ ದೇವಭೃತ್ಯಾಃ ಶತಾವರಾಃ ॥ ಆಜಾನದೇವಾಃ ತೇ ಪ್ರೋಕ್ತಾಃ ॥ ಕರ್ಮದೇವಗಣಾಃ ಅಪ್ಯಗಂಧರ್ವಾಃ ತತ್ಪರೇ ಶತಮ್ ॥ ಆಜಾನದೇವಾಃ ಇತ್ಯುಕ್ತೇಃ ವಕ್ಷ್ಯಮಾಣ ಗಂಧರ್ವಾನ್ಯೇ ಗ್ರಾಹ್ಯಾಃ. ॥45॥

## ಕನ್ನಡಾರ್ಥ

ಪಾವಕ, ಪವಮಾನ, ಶುಚಿ–ಈ ಮೂವರು ವಶಿಷ್ಠಶಾಪದಿಂದ ಹುಟ್ಟಿದರೆಂದು ವಚನವಿರುವುದರಿಂದ, ಅಗ್ನಿಪುತ್ರರಲ್ಲಿ ಪಾವಕನನ್ನೂ ಸೇರಿಸಬೇಕು. ಪವಮಾನ, ಕ್ರಥ, ಕೌಶಿಕ, ಶುಂಧ (ಶುಂಧು)ಗಳನ್ನೂ ಅನ್ವಯಿಸಬೇಕು. ಕ್ರಥ, ಕೌಶಿಕರು-ಅಗ್ನಿಪುತ್ರರಾದ ಪವಮಾನ ಶುಂಧಿಗಳ ಅಂಶರೂಪರೇ ! ಆಜಾನಜ ಪಕ್ಷದಲ್ಲಿ ಇದನ್ನು ಹೇಳಿದ್ದು ವಾಸ್ತವಾಗಿ ತುಂಬುರು- ಮುಂತಾದವರು ಎಂಟು, ಹಾಗೂ ಊರ್ವಶಿ- ಮುಂತಾದವರು ಆರು. ಇವರೆಲ್ಲರೂ ಕರ್ಮಜರಿಗೆ ಸಮಾನರು. ತೃತೀಯಸ್ಕಂಧ ತಾತ್ಪರ್ಯ ವಚನವಿರುತ್ತದೆ. –"ಗಂಧರ್ವಾದಿಗಳು 200, ಅಪ್ಸರೆಯರು ಕರ್ಮಜ ಸಮರು. ವ್ಯಾಪ್ತದರ್ಶಿಗಳೆಲ್ಲರನ್ನೂ ಇಲ್ಲಿ ಸಂಗ್ರಹಿಸಿದರೆ, ಋಷಿಕಕ್ಷೆಯೇ ಲೋಪವಾಗುವುದು. ಆ ಪಕ್ಷದಲ್ಲಿ ಪ್ರಮಾಣಗಳ ಅರ್ಥವನ್ನು ತಾರತಮ್ಯ ವಿವೃತ್ತಿಯಲ್ಲಿ ಸರಿಯಾಗಿ ವಿವರಿಸಲಾಗಿರುತ್ತದೆ. ಗ್ರಂಥವಿಸ್ತಾರಭೀತಿಯಿಂದ ಇಲ್ಲಿ ವಿವರಿಸುವುದಿಲ್ಲ. ಅಲ್ಲಿಯೇ ತಿಳಿದುಕೊಳ್ಳಬೇಕು.

ತುಂಬುರು-ಮುಂತಾದ ನೂರು ಗಂಧರ್ವರು, ಊರ್ವಶ್ಯಾದಿ ನೂರು ಅಪ್ಸರೆಯರು, ನೂರು ಋಷಿಗಳು-ಇವರು ಆಜಾನಜದೇವತೆಗಳಿಗೆ ಸಮಾನರು. ಕೆಲವು ದೇವತೆಗಳ ಸಮೂಹವು ಸುರಾಣಕರೆನಿಸುವರು. ಇಲ್ಲಿಯ ಸುರಾಣಕ ಶಬ್ದವು ದೈತ್ಯರಲ್ಲ. ಇನ್ನು ತಾತ್ವಿಕದೈತ್ಯರ ಉತ್ಪತ್ತಿಯನ್ನು

ಮುಂದೆ ಹೇಳುವವರಾದ ಕಾರಣ, ಈಗ ಅನಾಖ್ಯಾತರ ಅವತಾರಪ್ರಸಂಗದಲ್ಲಿ ಆ ದೇವತೆಗಳ ಸಮೂಹವನ್ನು ತಿಳಿಸಿ ಹೇಳಿರುತ್ತಾರೆ.

ತುಂಬುರು-ಮುಂತಾದವರ ವರ್ಗವು ಆಜಾನಜರಲ್ಲಿ ಸೇರಿದ ವಿಷಯದಲ್ಲಿ –"ತುಂಬುರು ಮುಂತಾದವರೂ, ಊರ್ವಶೀ ಮುಂತಾದವರೂ, ಹಾಗೂ ವಶಿಷ್ಠ, ವಿಶ್ವಾಮಿತ್ರರನ್ನುಳಿದು ಮಿಕ್ಕ ಕೆಲವು ಋಷಿಗಳೂ (ಎಲ್ಲ ಅಪ್ಸರೆಯರು) ಪ್ರಿಯವ್ರತನು-ಮುಂತಾದ ರಾಜರ್ಷಿಗಳನ್ನು ಬಿಟ್ಟು,ಉಳಿದ ರಾಜರು-ಇವರೆಲ್ಲರೂ ದೇವಭೃತ್ಯರು. ಕಾರ್ತವೀರ್ಯ, ಮುಂತಾದವರಿಗಿಂತ ನೂರು ಗುಣ ಕಡಿಮೆಯವರು. ಇವರೆಲ್ಲರೂ ಆಜಾನಜದೇವತೆಗಳೆನಿಸಿರುತ್ತಾರೆ. ಎಂಟು ಮಂದಿ ಗಂಧರ್ವರು ಕರ್ಮದೇವತೆಗಳು. ಅವರನ್ನುಳಿದು, ಮಿಕ್ಕ ನೂರು ಗಂಧರ್ವರು ಆಜಾನದೇವತೆಗಳು. ಹೀಗೆ ವಚನವಿದ್ದುದರಿಂದ,ಮುಂದೆ ಹೇಳಲಾಗುವ ಉಳಿದ ಗಂಧರ್ವರನ್ನು ಇಲ್ಲಿ ಗ್ರಹಿಸಬೇಕು. ॥45॥

## ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :–

ಕ್ರತು, ಸಿಂಧು, ಶುಚಿ, ಪವಮಾನ, ಕೈಶಿಕರೆಂಬ, ಐದುಜನ ಗಂಧರ್ವರು ಕೃಶಾನುವೆಂಬ ಅಗ್ನಿದೇವರ ಮಕ್ಕಳು. ತುಂಬುರು ಎಂಬ ಗಂಧರ್ವನು, ಊರ್ವಶೀ-ಮೊದಲಾದ ನೂರು ಜನ ಅಪ್ಸರಸ್ತ್ರೀಯರು ಮೇನಕೇ— ಎಂಬ ಅಪ್ಸರಸ್ತ್ರೀಯೂ,ಋಷಿಗಳೂ,ಮಧ್ಯಮರಾಜರುಗಳೂ, ಅಜಾನಜದೇವತೆಗಳಿಗೆ ಸಮಾನರೆನಿಸುವರು. ಸುರಾಣಕರೆಂಬ ದೇವತೆಗಳು ಅಪ್ರಸಿದ್ಧ ದೇವತೆಗಳಿಗೆ ಜನಕರೆಂದು ಕರೆಸುವರು.

**ಟಿಪ್ಪಣಿ** :– ಶ್ರೀರಾಮನನ್ನು ಕಾಮಿ ಎಂದು, ಪರಗೃಹದಲ್ಲಿದ್ದ ಸೀತೆಯನ್ನು ಅಂಗೀಕರಿಸಿದನೆಂದು ದೂಷಿಸಿದ ಸುರಾಣಕರೆಂಬ ಅಸುರರೇ ಬೇರೆ. ಅವರು ತಮೋಯೋಗ್ಯರು. ಈ ಮೇಲೆ ಹೇಳಿದ ಸುರಾಣಕರೆಂಬುವರ ದೇವತೆಗಳು. ॥45॥

# ಸರ್ವವ್ಯಾಖ್ಯಾನಸಾರಸಂಗ್ರಹ

**1.** ಅಜಾನಜದೇವತೆಗಳ ವಿಚಾರವನ್ನೇ ಪ್ರಸಕ್ತಪದ್ಯದಲ್ಲಿ ಮುಂದು ವರಿಸುತ್ತಾರೆ.

**2. ದೇವಕೃಶಾನು :–**

ಯಜ್ಞ ಯಾಗಾದಿಗಳಲ್ಲಿ ದೇವತಾಪ್ರೀತ್ಯರ್ಥವಾಗಿ ಕೊಡುವ ಹವಿರ್ಭಾಗವನ್ನು ಆಯಾಯಾ ದೇವತೆಗಳಿಗೆ ಒಯ್ದು ಮುಟ್ಟಿಸುವವರು– ಅಗ್ನಿಪುರುಷ ದೇವರು. ಈ ಕಾರಣದಿಂದ– ಅಗ್ನಿಗೆ –"ದೇವಮುಖ"–ಅಥವಾ –"ಅಮರಾಸ್ಯ"– ನೆಂದು ಹೆಸರು. ಕೃಶಾನು–ಎಂದರೆ, ಅಗ್ನಿದೇವರು. –"ಆಶ್ರಯಾಶೋ ಬೃಹದ್ಭಾನುಃ ಕೃಶಾನುಃ ಪಾವಕೋಽನಿಲಃ"–ಎಂದು ಅಮರಕೋಶ ವಚನ. ದೇವಮುಖನಾದ ಅಗ್ನಿಯನ್ನು ದಾಸರಾಯರು–ದೇವಕೃಶಾನು– ಎಂದಿದ್ದಾರೆ.

**3.** ಇಂತಹ ದೇವಕೃಶಾನುವಿಗೆ ಐದುಮಂದಿ ಪುತ್ರರು. (ಐದು ಸೂನುಗಳು ಎನಿಸುವರು). 1. ಕ್ರತು. 2. ಸಿಂಧು. 3. ಶುಚಿ. 4. ಪವಮಾನ. ಮತ್ತು 5. ಕೌಶಿಕರೆಂದು ಪಂಚಪುತ್ರರು.

**ಪ್ರಮಾಣ :–**

"ಪವಮಾನ ಕ್ರಥಾ ದ್ವ್ಯಾಪ್ರಾಕ್ ಪವಮಾನೋಽಗ್ನಿಜಃ ಸ್ಮೃತಃ ।
ಕೌಶಿಕೋಽಗ್ನಿಜಃ ಸಿಂಧುಃ ಶುಚಿಃ ಪ್ರಾಕ್ ಶುಚಿರಗ್ನಿಜಃ ।
ತುಂಬುರ್ವಾದಿ ಶತಂಚೈವ ಊರ್ವಶ್ಯಾದ್ಯಪ್ಸರಸ್ತಥಾ ।
ಋಷಿಯಶ್ಚ ವಶಿಷ್ಠಾದೀನ್ ಋಗೇ ಅಜಾನಜಾ ಸ್ಮೃತಾ ॥"–

**–ಇತಿ ತಾರತಮ್ಯ ಕೌಸ್ತುಭೇ.**

ಪವಮಾನನಾಮಕ ಅಗ್ನಿಗೆ ಪವಮಾನ ಮತ್ತು ಕ್ರಥು–ಎಂಬ ಇಬ್ಬರು ಪುತ್ರರು. ಕೌಶಿಕ ಮತ್ತು ಸಿಂಧು– ಎಂಬ ಇಬ್ಬರು ಅಗ್ನಿಪುತ್ರರು. ಶುಚಿ ಎಂಬ ಅಗ್ನಿಗೆ ಶುಚಿನಾಮಕ ಪುತ್ರನೊಬ್ಬ. ಹೀಗೆ ಅಗ್ನಿಗೆ ಪಂಚಪುತ್ರರು. (ಪಾವಕನೆಂಬ ಪುತ್ರನೂ ಗ್ರಾಹ್ಯ).

4. **ತುಂಬುರು**–ಮೊದಲಾಗಿ 100 ಮಂದಿ ಗಂಧರ್ವರು. **ಊರ್ವಶೀ, ಮೇನಕಾ**–ಮುಂತಾದ ಅಪ್ಸರಾಸ್ತ್ರೀಯರು 100 ಮಂದಿ. ವಸಿಷ್ಠಾದಿ ಉತ್ತಮ ಕಕ್ಷದಲ್ಲಿ ಸೇರಿದ ಋಷಿಗಳನ್ನು ಬಿಟ್ಟು,ಉಳಿದ ಋಷಿಗಳು-ಇವರೆಲ್ಲರೂ **ಅಜಾನಜದೇವತೆಗಳೆನಿಸುವರು.**

5. ಪ್ರಿಯವ್ರತ-ಮುಂತಾದ ರಾಜರ್ಷಿಗಳನ್ನು ಬಿಟ್ಟು,ಉಳಿದ ಸಕಲ ರಾಜರೂ (ರಾಯರುಗಳು) ಅಜಾನಜದೇವತಾ ವರ್ಗಕ್ಕೆ ಸೇರಿದವರು.

6. **ಸುರಾಣಕರು :–**

ಸುರಾಣಕ–ಎಂಬ ದೈತ್ಯರಗುಂಪು ಉಂಟೆಂದು ಪಂಡಿತಾಚಾರ್ಯರ ವಾಕ್ಯವಿದೆ.

"ಸುರಾಣಕಾಂಸ್ತ್ವಮೋನೇತುಂ ತತ್ಯಾ ಜೀವ ಸ ಜಾನಕೀಮ್"-

—ಎಂದು ಸುರಾಣಕರೆಂಬ ದೈತ್ಯಸಮೂಹವನ್ನು ತಮಸ್ಸಿಗೆ ಕಳುಹಿಸುವುದಕ್ಕಾಗಿ, ಸೀತೆಯನ್ನು ತ್ಯಾಗಮಾಡಿದಂತೆ, ವಿಡಂಬನೆ ಮಾಡಿದನು-ಎಂಬ ವಾಕ್ಯವಿದೆ.

ಪ್ರಸಕ್ತಪದ್ಯದಲ್ಲಿ ಪ್ರಸ್ತಾಪಿತವಾಗಿರುವ -"**ಸುರಾಣಕರು**"-ಆ ದೈತ್ಯರಲ್ಲಿ, ಇವರು ದೇವತೆಗಳು. ದೇವತೆಗಳ ನಾಮವು ದೈತ್ಯರಿಗೂ ಉಂಟು. ತತ್ತ್ವದೇವತೆಗಳು ತಮ್ಮ ತಮ್ಮ ಹೆಸರಿನಿಂದಲೇ ಇರುವ ದೈತ್ಯರಲ್ಲಿದ್ದು, ಕಾರ್ಯನಡೆಯಿಸುವರು. ಸುರಾಣಕರೆಂಬ ದೇವತಾಸಮೂಹ ಅಜಾನಜ

ದೇವತೆಗಳ ಕಕ್ಷಕ್ಕೆ ಸೇರಿದವರು. ಆಜಾನಜರಲ್ಲಿ ಎರಡು ಪ್ರಕಾರ :—(1) ಆಖ್ಯಾತದೇವತೆಗಳು (ಸುಪ್ರಸಿದ್ಧರು) ಮತ್ತು (2) ಅನಾಖ್ಯಾತದೇವತೆಗಳು (ಅಪ್ರಸಿದ್ಧರು). ಆಖ್ಯಾತ ದೇವತೆಗಳು ಅನಾಖ್ಯಾತರಿಗೆ ಜನಕರೆನಿಸುವರು. ಅಂದರೆ, ಆಖ್ಯಾತರಿಂದ ಅನಾಖ್ಯಾತರ ಉತ್ಪತ್ತಿ–ಎಂತ ತಾತ್ಪರ್ಯ. ಇಲ್ಲಿ ಅಗ್ನಿಯ ಪಂಚಪುತ್ರರು-ತುಂಬುರಾದಿ 100 ಗಂಧರ್ವರು, ಊರ್ವಶೀ ಮೇನಕಾದಿ 100 ಮಂದಿ ಅಪ್ಸರಾಸ್ತ್ರೀಯರು-ಋಷಿಗಣ-ರಾಜರ ಸಮೂಹ–ಸುರಾಣಕರೆಂಬ ದೇವತಾವರ್ಗ. ಇವರೆಲ್ಲರೂ ಆಖ್ಯಾತ ಆಜಾನಜರು ಮತ್ತು ಅನಾಖ್ಯಾತ ಆಜಾನಜಕರ ಜನಕರು. ‖45‖

## ಪದ್ಯ-೪೬

**ಮೂಲ :–**

ಪಾವಕರಿಗಿಂತಧಮರೆನಿಸುವ ।
ದೇವಕುಲಜಾನಾಖ್ಯ ಸುರಗಣ ।
ಕೋವಿದರು ನಾನಾ ಸುವಿದ್ಯದಿ ಸೋತ್ರವರ ನಿತ್ಯ ॥
ಸೇವಿಪರು ಸದ್ಭಕ್ತಿಪೂರ್ವಕ ।
ಸ್ವಾವರರಿಗುಪದೇಶಿಸುವರು ನಿ ।
ರಾವಲಂಬನ ವಿಮಲಗುಣಗಳ ಪ್ರತಿದಿವಸದಲ್ಲಿ ॥೪೬॥

**ಅವತರಣಿಕೆ :—**

ಅನಾಖ್ಯಾತಆಜಾನಜದೇವತೆಗಳ ವಿಚಾರವನ್ನು ತಿಳಿಸುತ್ತಾರೆ. ‖46‖

**ಪ್ರತಿಪದಾರ್ಥ :—**

**ಪಾವಕರಿಗಿಂತ** = ಪಾವಕಾದಿ ಅಗ್ನಿಪುತ್ರರಿಗಿಂತ, **ಅಧಮರೆನಿಸುವ** = ಅವರರೆನಿಸುವ, **ದೇವಕುಲದ** = ಆಖ್ಯಾತರಾದ ಆಜಾನಜದೇವತೆಗಳ ಕುಲದಲ್ಲಿ ಉತ್ಪನ್ನರಾದ, **ಅನಾಖ್ಯಸುರಗಣ** = ಅನಾಖ್ಯಾತಆಜಾನಜ ದೇವತೆಗಳ ಸಮೂಹವು. **ಕೋವಿದರು** = ಜ್ಞಾನಿಗಳಾದವರು, **ನಾನಾ ಸುವಿದ್ಯದಿ** = ಸಮೀಚೀನವಾದ ಜ್ಞಾನದಿಂದ ಯುಕ್ತರಾದವರಾಗಿ, **ನಿತ್ಯ** = ಯಾವಾಗಲೂ, **ಸೋತ್ತಮರ** = ತಮಗಿಂತ ಉತ್ತಮರಾದವರನ್ನು, **ಸದ್ಭಕ್ತಿಪೂರ್ವಕ** = ತಮ್ಮ ಯೋಗ್ಯತಾನುಸಾರವಾದ ಭಕ್ತಿಯಿಂದೊಡಗೂಡಿ, **ಸೇವಿತರು** = ಸೇವೆ ಮಾಡುತ್ತಾರೆ. **ಸ್ವಾವರರಿಗೆ** = ತಮಗಿಂತಲೂ ತಾರತಮ್ಯದಲ್ಲಿ ಕಡಿಮೆಯಾದ ಭಕ್ತರಿಗೆ, **ಪ್ರತಿದಿವಸದಲ್ಲಿ** = ನಿರಂತರವಾಗಿ, **ನಿರಾವಲಂಬನ** = ಅನ್ಯರಾಧೀನ ಸಲ್ಲದ ಸರ್ವೋತ್ತಮನಾದ ಶ್ರೀಪರಮಾತ್ಮನ, **ವಿಮಲಗುಣಗಳ** = ನಿರ್ದೋಷ ಮತ್ತು ಮಂಗಳಪ್ರದಗಳಾದ ಅನಂತ ಕಲ್ಯಾಣ ಗುಣಗಳನ್ನು, **ಉಪದೇಶಿಸುವರು** = ಉಪದೇಶ ಮಾಡುತ್ತಾಇರುತ್ತಾರೆ. ॥46॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ಅನಾಖ್ಯಾತಆಜಾನಜರ ವಿಚಾರ ಹೇಳತಾರೆ.

**ಪಾವಕ,** ಈ ಅಗ್ನಿಪುತ್ರರಾದ 45ನೇ ಶ್ಲೋಕಗತ ಕ್ರತು, ಸಿಂಧು, ಶುಚಿ, ಪವಮಾನಾದಿಗಳು 27ನೇ ಕಕ್ಷದವರು. ಕ್ರತು, ಸಿಂಧು, ಮೊದಲಾದವರಿಗಿಂತ ಅಧಮರೆನಿಸುವ ಆಖ್ಯಾತರಾದ ಆಜಾನಜದೇವತೆಗಳ ಕುಲದಲ್ಲಿ ಉತ್ಪನ್ನರಾದ ಅನಾಖ್ಯಾತಆಜಾನಜದೇವತೆಗಳ ಸಮೂಹ ಯಾವದೆಂದರೆ, ಆದರ ವಿವರ ;—

| ಸಂಖ್ಯಾ ಕ್ರಮ. | ಸಮೂಹ ಸಂಖ್ಯಾ. | ದೇವತೆಗಳು. |
|---|---|---|
| 1. | 100 | ವಿಬುಧರು. |
| 2. | 100 | ದೇವಭೃತ್ಯರಾದ ಪಿತೃಗಳು. |
| 3. | 100 | ದೇವಭೃತ್ಯರಾದ ಅಸುರನಾಮಧೇಯರು (ಭಗವದ್ಭಕ್ತರು ಅಸುರನಾಮಧೇಯರು). |
| 4. | 100 | ಗಾಯನಮಾಡುವ ಗಂಧರ್ವರು. |
| 5. | 100 | ನೃತ್ಯಮಾಡುವ ಅಪ್ಸರಸ್ತ್ರೀಯರು. |
| 6. | 70 | ದೇವತಾಕಾರ್ಯದಲ್ಲಿ ಸಿದ್ಧರು. ಸಿದ್ಧನಾಮಧೇಯರು. |
| 7. | 30 | ಶಿಬಿಕಾ-ಪಲ್ಲಕ್ಕಿ ಹೊರುವ ರಕ್ಷರು. |
| 8. | 30 | ಪರಿಚರ್ಯಮಾಡುವ ಚಾರಣರು. |
| 9. | 70 | ಸೇವಾಮಾಡುವಂಥಾ ಭೂತರು. |
| 10. | 70 | ಪ್ರೇತರು. |
| 11. | 70 | ವಿದ್ಯಾಧರರು. |
| 12. | 70 | ಕಿನ್ನರರು. |
| 13. | 70 | ಪಿಶಾಚಾದಿಗಳು. |
| 14. | 7 | ಕುಬೇರ ಭೃತ್ಯರಾದ ಗುಹ್ಯಕರು. |
| 15. | 5 | ವರುಣ ಭೃತ್ಯರಾದ ನಾಗರು. |

ಇವರು ಯಾವತ್ತೂ ಮಂದಿ ಅನಾಖ್ಯಾತರಾದ ಸುರಗಣ, ಇವರ ಹೆಸರು. ಅಸುರ, ಪ್ರೇತ, ಪಿಶಾಚಾದಿಗಳು-ಎಂತ ಇದ್ದ ಕಾಲಕ್ಕೂ, ಭಗವದ್ಭಕ್ತರಾದ ಜ್ಞಾನಿಗಳೇ ಹೊರತು ಅನ್ಯರಲ್ಲ. ನಾನಾ ವಿಧವಾದ, ಸಮೀಚೀನವಾದ ಜ್ಞಾನದಿಂದ ಯುಕ್ತರಾಗಿ, ಶಿಬಿಕಾ ಹೊರುವುದು, ಪರಿಚರ್ಯ ಮಾಡೋದು, ಗಾನವಿದ್ಯಾ-ಇತ್ಯಾದಿ ತಮ್ಮ ತಮ್ಮ ವಿದ್ಯಾದಿಗಳಿಂದ ಪ್ರತಿದಿನದಲ್ಲೂ ತಮಗಿಂತ ಉತ್ತಮರಾದವರಿಗೆ, ಸಮೀಚೀನವಾದ ತಮ್ಮ ತಮ್ಮ ಯೋಗ್ಯತಾನುಸಾರ ಭಕ್ತಿಪೂರ್ವಕವಾಗಿ ಸೇವಾ ಮಾಡುವರು. ತಮಗಿಂತಲೂ ಕಡಿಮೆಯಾದ ಭಕ್ತರಿಗೆ ನಿರಂತ ಅನ್ಯಾಧೀನವಲ್ಲದ ಸರ್ವೋತ್ತಮನಾದ ಶ್ರೀಪರಮಾತ್ಮನ ನಿರ್ದೋಷಗಳಾದ, ಮಂಗಳಕರಗಳಾದ ಕಲ್ಯಾಣಗುಣಗಳ ಉಪದೇಶ ಮಾಡತ್ತಾ ಇರ್ತಾರೆಂತ ತಾತ್ಪರ್ಯ. ॥46॥

೨. ಭಾವಪ್ರಕಾಶಿಕೆ :-

ಮೇಲೆ ಹೇಳಿದ ಅಗ್ನಿಗಿಂತಲೂ ಅನಾಖ್ಯಾತರಾದ ಆಜಾನಜರು ಅಧಮರೆನಿಸುವರು. ಇವರೆಲ್ಲರೂ ಸಕಲವಿದ್ಯಾಪಾರಂಗತರಾಗಿ, ತಮ್ಮಕಿಂತಲೂ ಉತ್ತಮರನ್ನು ಉತ್ತಮವಾದ ಭಕ್ತಿಯಿಂದ ಸೇವೆ ಮಾಡುತ್ತಾ, ಜಗದೀಶ್ವರನಾದ ಶ್ರೀಪರಮಾತ್ಮನ ನಿರ್ಮಲವಾದ ಗುಣಗಳನ್ನು ತಮ್ಮಕಿಂತಲೂ ಅಧಮರಾದ ಭಕ್ತರಿಗೆ ಉಪದೇಶವನ್ನು ಮಾಡುತ್ತಾ, ಕಾಲವನ್ನು ಕಳೆಯುವರು. ॥46॥

೩. ಭಾವದರ್ಪಣ :-

ಪಾವಕೇತಿ । -"ಅಗ್ನಿಪುತ್ರಾಃ ಪಾವಕೋನಾ ಆಜಾನಾಖ್ಯಾಃ ಸಮಾಮತಾ"-ಇತಿ ಸಾರಸಂಗ್ರಹೇ. ॥46॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

-"ಪಾವಕ"-ಇತಿ ॥ ತಸ್ಯ ಕರ್ಮಜತ್ವೋಕ್ತೇಃ ಇತಿ ಭಾವಃ ॥ ಉಪಸಂಹಾರೇ ಆಜಾನೋನರ್ಪಿ (ಋಷಿ) ಕಕ್ಷಾ ಉಕ್ತಾ ॥ ಅತಃ ನ ಯಥಾ ಕ್ರಮಾ

ಕ್ಷಯಃ ॥ ಕಿಂ ತು ತುಂಬುರು–ಅಪ್ಸರೋರ್ವಶೀ ಷಟ್ ಮೇನಕಾ ಗ್ರಹಣೇನ ಭಾರತೋಕ್ತ ಪೂರ್ವಚಿತಿ ಸಹಜನ್ಯಾ ವಿಶ್ವಾಚೀ ಘೃತಾಚ್ಯಃ ಚತಸ್ರಃ ರಾಜ ಪದೇನ ಉತ್ತಮಾಃ ಕರ್ಮಜಾಃ ತತಃ ॥ ಶತರು–ಗಂಧರ್ವಾಪ್ಸರಸಾವ್ ಇತಿ ॥ ಅನಾಖ್ಯಾತಾಃ ದೇವತಾಃ ತಾಃ ಜಾತಾಃ ದೇವಕುಲೇ ಚ ಯಾಃ ॥ ನಾನಾವಿಧಾಸು ದೇವಾನಾಂ ಪರಿಚರ್ಯಾಸು ತತ್ಪರಾಃ ॥ ವರ್ಣಾಶ್ರಮಾನು ಸಾರೇಣ ವಿಶೇಷಃ ಕಶ್ಚನಾತ್ರಹಿ ॥ ಕಕ್ಷ್ಯಾದಿಷು ವಿಶೇಷೋಸ್ತಿ ಗುರುಶಿಷ್ಯತ್ವ ಲಕ್ಷಣಃ ॥ ನಿರಾವಲಂಬನಃ ಅಪರಾಶ್ರಯಃ. ॥46॥

## ಕನ್ನಡಾರ್ಥ

ಪಾವಕನನ್ನು ಕರ್ಮಜದೇವತೆಯೆಂದು ಹೇಳಿದುದರಿಂದ–"**ಪಾವಕರಿಗಿಂತ ಅಧಮರು**"-ಎಂದು ಆಜಾನಜದೇವತೆಗಳನ್ನು ಹೇಳಿರುತ್ತಾರೆಂದು ತಾತ್ಪರ್ಯ. **ಕೊನೆಯಲ್ಲಿ**, ಉಪಸಂಹಾರದಲ್ಲಿ ಆಜಾನಜರಿಗಿಂತ ಕಡಿಮೆಯಾದ ಋಷಿವರ್ಗ **ವನ್ನು** ಹೇಳಿರುತ್ತಾರೆ. ಆದುದರಿಂದ, ಕ್ರಮಾನುಸಾರವಾಗಿ ಅನ್ವಯವಿಲ್ಲ. **ತುಂಬುರು**- ಮುಂತಾದ 8 ಗಂಧರ್ವರು, ಊರ್ವಶೀ–ಮುಂತಾದ 6 **ಅಪ್ಸರೆ ಯರು**, ಮೇನಕೆಯನ್ನು ಗ್ರಹಿಸಿದುದರಿಂದ,ಭಾರತದಲ್ಲಿ ಹೇಳಲ್ಪಟ್ಟ ಪೂರ್ವ ಚಿತಿ, ಸಹಜನ್ಯಾ, ವಿಶ್ವಾಚಿ, ಘೃತಾಚೀ–ಈ ನಾಲ್ವರು ರಾಜ(ಯ) ಪದ ದಿಂದ ಉತ್ತಮರಾದ,ಕರ್ಮಜರು–ಇವರನ್ನು ಪರಿಗ್ರಹಿಸಬೇಕು. -'**ಶತರು**'- ಎಂಬ ಮಾತಿನಿಂದ ಇವರನ್ನುಳಿದ ಗಂಧರ್ವರು ಅಪ್ಸರೆಯರು- ಎಂದು ಅರ್ಥ ವಾಗುವುದು.

ದೇವಕುಲದಲ್ಲಿ ಹುಟ್ಟಿದವರು, ನಾಮನಿರ್ದೇಶದಿಂದ, ವೇದಗಳಲ್ಲಿ ಹೇಳಿಸಿಕೊಳ್ಳದವರು— ಇವರು ಆಜಾನಜದೇವತೆಗಳೆನಿಸುವರು. ದೇವತೆಗಳ ವಿವಿಧ ಸೇವೆಯಲ್ಲಿ ನಿರತರಾಗಿರುತ್ತಾರೆ. ಇವರಲ್ಲಿ ವರ್ಣಾಶ್ರಮಾನುಸಾರ

ವಾಗಿ ಒಂದು ವಿಶೇಷವಿರುತ್ತದೆ. ಋಷಿ ಮುಂತಾದವರಲ್ಲಿ ಗುರುಶಿಷ್ಯ ಭಾವ ವೆಂಬ ವಿಶೇಷವಿರುತ್ತದೆ. –'ನಿರಾವಲಂಬನ'–ಪರರ ಆಶ್ರಯದಲ್ಲಿ ಇಲ್ಲದಿರುವ-ಎಂದು ಅರ್ಥ. ॥46॥

**ಜ. ಶ್ರೀಗುರುಹೃದಯ ಪ್ರಕಾಶಿಕೆ :–**

ಪಾವಕನೆಂಬ ಅಗ್ನಿಪುತ್ರಗಿಂತಲೂ ಕಡಮೆಯಾದ ದೇವಕುಲದಲ್ಲಿ ಹುಟ್ಟಿದ ಆಜಾನಜ ದೇವತೆಗಳೇಬುವರು, ನಾನಾ ಸುವಿದ್ಯದಲ್ಲಿ ಕುಶಲರು. ಸ್ತೋತ್ರ್ತಮರನ್ನು ಸೇವಿಸಿ, ಸ್ವಾವರರಿಗೆ ನಿರಾಶ್ರಯನಾದ ದೇವರ ಸದ್ಗುಣಗಳನ್ನು ಸದಾ ಉಪದೇಶ ಮಾಡುವರು. ॥46॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಅಗ್ನಿಪುತ್ರರಾದ ಕ್ರತು, ಸೀಧು, ಶುಚಿ, ಪವಮಾನ, ಕೌಶಿಕರು-27ನೆಯ ಕಕ್ಷಕ್ಕೆ ಸೇರಿದವರು. ಇವರು ಸುಪ್ರಸಿದ್ಧರಾದ ಆಜಾನಜದೇವತಾ ವರ್ಗದವರು. ಅಂದರೆ, ಆಖ್ಯಾತ ಆಜಾನಜರು. ದೇವಕುಲದಲ್ಲಿ ಹುಟ್ಟಿ, ನಾಮವಿದೇಶದೀದ ವೇದಗಳಲ್ಲಿ ಪ್ರಸಿದ್ಧರಾದವರಿಗೆ **ಆಜಾನಜದೇವತೆಗಳು** –ಎಂದು ಹೆಸರು.

2. ಆಖ್ಯಾತರಾದ ಆಜಾನಜರ ಕುಲದಲ್ಲಿ ಉತ್ಪನ್ನರಾಗಿ, ಅಷ್ಟು ಪ್ರಸಿದ್ಧರಲ್ಲದ, ದೇವತಾಸಮೂಹಕ್ಕೆ- **ಅನಾಖ್ಯಾತ ಆಜಾನಜರು**–ಎಂದು ಹೆಸರು. ಈ ವರ್ಗವು ಆಖ್ಯಾತರಿಗಿಂತ ಅಧಮರೆನಿಸುವರು.

3. ಈ ಅನಾಖ್ಯಾತವರ್ಗಕ್ಕೆ ಸೇರಿದವರು **ಸುರಗುಣ ಕೋವಿದರು.** ಅಂದರೆ, ಅವರೂ ದೇವತೆಗಳೇ. ಅಲ್ಲದೆ, ಸಮೀಚೀನಜ್ಞಾನವುಳ್ಳವರು. ಇವರು ನಾನಾ ವಿಧವಾದ ವೃತ್ತಿಗಳನ್ನು ಮಾಡುತ್ತಾ, ತಮ್ಮ ತಮ್ಮ ಯೋಗ್ಯತಾನುಸಾರ, ತಮಗಿಂತ ಉತ್ತಮರಾದ ಆಖ್ಯಾತ ಆಜಾನಜರನ್ನು ಸದಾ ಸೇವಿಸುತ್ತಿರುವರು.

4. ಈ ಅನಾಖ್ಯಾತವರ್ಗದವರಲ್ಲಿ.- ವಿಬುಧರು (100 ಮಂದಿ)-
ೃತ್ಯರಾದ ಪಿತೃಗಳು (100)-ದೇವಭೃತ್ಯರಾದ ಅಸುರನಾಮಧೇ-
(100)-ಗಾಯನಮಾಡುವ ಗಂಧರ್ವರು (100)-ನೃತ್ಯ ಮಾಡುವ
ಸ್ತ್ರೀಯರು (100)-ದೇವತಾಕಾರ್ಯ ನಿರತರಾದ ಸಿದ್ಧರು (70)-
ಹೊರುವ ರಕ್ಷಕರು (70), ಪರಿಚರ್ಯೆ ಮಾಡುವ ಚಾರಣರು (70),
ಮಾಡುವ ಭೂತವರ್ಗ (70), ಪ್ರೇತರು (70)-ವಿದ್ಯಾಧರರು(70),
ರು (70)-ಪಿಶಾಚಾದಿಗಳು (70), ಕುಬೇರ ಭೃತ್ಯರಾದ ಗುಹ್ಯಕರು.
ವರುಣ ಭೃತ್ಯರಾದ ನಾಗರು (5) ಹೀಗೆ, ನಾನಾವೃತ್ತಿನಿರತರಾದ
ಹವಿದೆ. ಇವರ ಹೆಸರು ಅಸುರ-ಪ್ರೇತ-ಭೂತ-ಪಿಶಾಚಾದಿಗಳು-ಎಂದು
ಕಾಲಿಕ್ಕೂ, ಅವರು ಭಗವದ್ಭಕ್ತರಾದ ಜ್ಞಾನಿಗಳೇ ಹೊರತು, ಅನ್ಯಥಾ

5. ಈ ಅನಾಖ್ಯಾತವರ್ಗಕ್ಕೆ ಸೇರಿದ ದೇವತೆಗಳು, ತಮಗಿಂತ ಅವರ
ವರಿಗೆ, ನಿರ್ದೋಷನಾದ ಶ್ರೀಹರಿಯ ಕಲ್ಯಾಣಗುಣೋಪಾಸನಾರೂಪ
ಉಪದೇಶವನ್ನು ನಿತ್ಯದಲ್ಲೂ ಕೊಡುತ್ತಿರುವರು. ಶ್ರೀಹರಿಯು ಸರ್ವೋ
ನೆಂದೂ, ಸಮಸ್ತದೋಷವಿದೂರನೆಂದೂ, ಅನ್ಯಾಶ್ರಯರಹಿತನೆಂದೂ
ವಲಂಬನ), ಅನಂತಕಲ್ಯಾಣಗುಣಗಣ ಧಾಮನೆಂದು ಉಪಾಸಿಸುತ್ತಾ,
ಂತ ಅವರರಾದವರಿಗೆ ಭಗವದುಪಾಸನಾಕ್ರಮವನ್ನು ಬೋಧಿಸುವರು.
।

★★

## ಪದ್ಯ-೪೭

**ಮೂಲ :-**

> **ಸುರರೊಳಗೆ ವರ್ಣಾಶ್ರಮಗಳಿಂ ।**
> **ಬೆರಡು ಧರ್ಮಗಳಿಲ್ಲ ತಮ್ಮೊಳು ।**
> **ನಿರುಪಮರು ಎಂದೆನಿಸಿಕೊಂಬರು ತಾರತಮ್ಯದಲಿ ॥**
> **ಗುರುಶಿಷ್ಯತ್ವವು ಋಷಿಗಳೊ ।**
> **ರಿತಿಹುದು ಆಜಾನಸುರರಿಗೆ ।**
> **ಚಿರಪಿತೃ ಶತಾಧಮರೆನಿಸುವರು ಏಳು ಜನರುಳಿದು ॥೪೭॥**

**ಅವತರಣಿಕೆ :-**

ದೇವತಾವರ್ಗದಲ್ಲಿ ವರ್ಣ, ಆಶ್ರಮ ಬೇಧಗಳಿಲ್ಲವೆಂತಲೂ, ಜ್ಞಾನ ತಾರತಮ್ಯದಿಂದ ಯುಕ್ತರಾಗಿದ್ದಾರೆಂತಲೂ. ಋಷಿವರ್ಗದಲ್ಲಿ ಗುರುಶಿಷ್ಯತ್ವ ಭಾವವಿರುವುದೆಂದೂ ತಿಳಿಸುತ್ತಾರೆ. ॥47॥

**ಪ್ರತಿಪದಾರ್ಥ :-**

**ಸುರರೊಳಗೆ** = ದೇವತೆಗಳಲ್ಲಿ, **ವರ್ಣ** = ಬ್ರಾಹ್ಮಣಾದಿ ವರ್ಣ ಸಾಂಕೇತಗಳು ಮಾನುಷದೋಪಾದಿಯಲ್ಲಿ ಇಲ್ಲ. **ಆಶ್ರಮ** - ಬ್ರಹ್ಮಚರ್ಯಾದಿ ಆಶ್ರಮ ಚತುಷ್ಟಯಗಳಾಗಲೀ, **ಎಂಬ ಎರಡು ಧರ್ಮಗಳಿಲ್ಲ** ಮನುಷ್ಯ ರಲಿದ್ದಂತೆ, ವಿಧಿಪೂರ್ವಕವಾದ ವರ್ಣ ಧರ್ಮವಾಗಲೀ, ಆಶ್ರಮ ಧರ್ಮ ವಾಗಲೀ ಇಲ್ಲ. **ತಮ್ಮೊಳು** = ತಮ್ಮ ತಮ್ಮಲ್ಲಿ, **ತಾರತಮ್ಯದಿಂದಲಿ** = ನೀಚೋಚ್ಚಭಾವದಿಂದ (ಸ್ವೋತ್ತಮರು-ಸ್ವಾವರರು ಎಂದು). **ನಿರುಪ ಮರು** = ಜ್ಞಾನಬಲದಿಂದ ಉಪಮಾನರಹಿತರಾಗಿರುತ್ತಾರೆ. (ತಾರತಮ್ಯ

ರ್ಣತ್ವ ಅವರವರಿಗೇ ಇರುತ್ತದೆ), **ಋಷಿಗಳೊಳು** = ಜ್ಞಾನಿಗಳಾದ ರ್ಗದವರಲ್ಲಿ, **ಗುರುಶಿಷ್ಯತ್ವವು ಇರುತಿಹುದು** = ಗುರು-ಶಿಷ್ಯವೆಂಬ ವಿದೆ. **ಚಿರಪಿತೃಗಳು** = ಚಿರಾಖ್ಯಪಿತೃ ದೇವತೆಗಳು. **ಏಳು ...ದು** = ಕರ್ಮಜದೇವತೆಗಳಿಗೆ ಸಮರಾದ ಏಳು ಮಂದಿ ಬಿಟ್ಟು, **...ಸುರರಿಗೆ** = ಆನಾಖ್ಯಾತರಾದ ಪೂರ್ವೋಕ್ತ ಆಜಾನಜರಿಗಿಂತ, **ಶತಾ ...ನಿಸುವರು** = 100 ಗುಣಗಳಿಂದ ಕಡಿಮೆ ಎಂದೆನಿಸುತ್ತಾರೆ. ॥47॥

## ವ್ಯಾಖ್ಯಾನಗಳು

**...ಸಂಕರ್ಷಣಒಡೆಯರ ವ್ಯಾಖ್ಯಾನ :-**

ಚಿರಪಿತೃಗಳ ವಿಚಾರ ಹೇಳತಾರೆ.

ದೇವತೆಗಳೊಳಗೆ ಬ್ರಾಹ್ಮಣಾದಿ ವರ್ಣಸಾಂಕರ್ಯಗಳಿದ್ದ ಕಾಲಕ್ಕೂ, ...ಷರೋಪಾದಿಯಲ್ಲಿ, ಬ್ರಹ್ಮಚಾರಿ ಗೃಹಸ್ಥ, ವಾನಪ್ರಸ್ಥ, ಯತಿ- ಎಂಬ ...ು ಭೇದಗಳು- ಮನುಷ್ಯರೊಳಗೆ ಬ್ರಾಹ್ಮಣಧರ್ಮ, ಕ್ಷತ್ರಿಯಧರ್ಮ, ...ಧರ್ಮ, ಶೂದ್ರಧರ್ಮ,-ಎಂತ ಇದ್ದೋಪಾದಿಯಲ್ಲಿ, ಧರ್ಮಗಳು ಎನ್ನತಕ್ಕ ...ರ್ವೋಕ್ತಗಳಾದ ಎರಡು ವಿಧ ದೇವತೆಗಳಲ್ಲಿಲ್ಲ. ದೇವತೆಗಳಾದ ತಮ್ಮೊ ...ಾವು ನಾಲ್ಕು ವರ್ಣಾಶ್ರಮಧರ್ಮಗಳ ನಡೆಸಬಹುದು- ಎಂತ ತಾತ್ಪರ್ಯ. ...ತ ಮಾತ್ರ ಉಪವಾರಹಿತದೀವ ಇರತದೆ. ಜ್ಞಾನದಲ್ಲಿ ನಿರುಪಮರು. ...ಕರೆಸುವರು. ತಾರತಮ್ಯದಲ್ಲಿ ಸ್ವೋತ್ತಮರು, ಸ್ವಾವರರು-ಎಂತ ಕರೆ ...ವರಾಗತಾರೆ. ಗುರು-ಎಂತಲೂ, ಸ್ವಾವರರು ಎಂತಲೂ, ಈ ನಿಯಮ ...ನಿಗಳಾದ ಭಗವದ್ಭಕ್ತರಾದ, ತಾರತಮ್ಯ, ಪಂಚಭೇದಜ್ಞಾನ ಸ್ವರೂಪದಲ್ಲಿ ..., ದೇವಮಾನುಷರಲ್ಲಿ ಇರೋದಾಗಿ ಅದೆ. ತದನ್ಯರಾದ ಭಗವದ್ದ್ವೇಷಿ ...ದ ಅಸುರರಲ್ಲಿ ಇಲ್ಲ- ಎಂತ ತಾತ್ಪರ್ಯ. ಅನಾಖ್ಯಾತಆಜಾನಜ ಸುರರಿಂದ

ಚಿರಾಖ್ಯ ಪಿತೃದೇವತೆಗಳು ನೂರು ಗುಣದಿಂದ ಕಡಿಮೆ-ಎಂತ ಕರಸೋವರಾಗ ತಾರೆ. ಏಳು ಜನರು ಹೊರತು,ಉಳಿದವರು 19ನೇ ಕಕ್ಷದ ಕರ್ಮಜರಲ್ಲಿ ಸೇರಿದ್ದಾರೆ.

**ವಿಶೇಷಾರ್ಥ :-** 47ನೇ ಶ್ಲೋಕದಲ್ಲಿ-

**ಸರ್ವವರ್ಣಾಶ್ರಮಾಚಾರಾಃ ಪ್ರತ್ಯವಾಯಸ ಮುಜಿಕೋಯ ತಾಃ ।**
**ಅಪರೋಕ್ಷವಿದೋ ವಿಷ್ಣೋರ್ಭಕ್ತಾ ಏಕಾಂತಿನೋ ಮಮ ॥**

ಎಂತ ವಿಷ್ಣುರಹಸ್ಯ ವಚನ. ಆಶ್ರಮ-ಎಂಬ ಯತಿ-ಗೃಹಸ್ಥಾದಿ ಭೇದ ಸಹ ಎರಡೂ ಇಲ್ಲ. ಎಲ್ಲಾ ಆಶ್ರಮಧರ್ಮಗಳೂ ಎಲ್ಲರಿಗೂ ಉಂಟೆಂದು ತಾತ್ಪರ್ಯ. ॥47॥

**೨. ಭಾವಪ್ರಕಾಶಿಕೆ :-**

ದೇವತೆಗಳಲ್ಲಿ ಬ್ರಾಹ್ಮಣ, ಕ್ಷತ್ರಿಯರೆಂಬ ಎಂಬ ಭೇದವಾಗಲೀ, ಬ್ರಹ್ಮಚಾರಿ ಗೃಹಸ್ಥರೆಂಬ ಆಶ್ರಮಭೇದವಾಗಲೀ ಇಲ್ಲ. ಆದುದರಿಂದ,ವರ್ಣಾಶ್ರಮ ವಿಷಯದಲ್ಲಿ ಇವರು ಉತ್ತಮರು— ಇವರು ಅಧಮರೆಂದಿರದೆ, ನಿರುಪಮ ರೆನಿಸುವರು. ಆದರೆ, ಎಲ್ಲರೂ ಸಮರಾಗಿಯೇ ಇರುವರು. ಆದರೆ, ಜ್ಞಾನ ಭಕ್ತಿಗಳ ಹೆಚ್ಚು ಕಮ್ಮಿಯಿಂದ ತಾರತಮ್ಯವು ಏರ್ಪಟ್ಟಿರುವುದು. ಅದರಲ್ಲೂ ಯಾವ ದೇವತೆಗಳಿಗೆ ಸಮರೆಂದು ಯಾರಿಗೆ ಹೋಲಿಸಿ ಇದೆಯೋ, ಅವರನ್ನು ಬಿಟ್ಟರೆ, ಮತ್ತೊಬ್ಬರನ್ನು ಅವರಿಗೆ ಸಮವೆಂದು ಹೋಲಿಸಲು ಸಾಧ್ಯವಿಲ್ಲ. ಅಂದರೆ, ಗರುಡ, ಶೇಷ, ರುದ್ರರು ಸಮರು. ಇವರಿಗೆ ಉಪಮಾನ ಕೊಡ ಬೇಕಾದರೆ ಮತ್ತೊಬ್ಬರಿಲ್ಲ. ಇಂದ್ರ, ಮನ್ಮಥರು ಸಮರು. ಇವರನ್ನು ಮತ್ತೊಬ್ಬರಿಗೆ ಹೋಲಿಸಲು ಯಾರೂ ಇಲ್ಲವೆಂಬ ತಾತ್ಪರ್ಯ. ಋಷಿಗಳಲ್ಲಿ ಇವರು ಗುರುಗಳು, ಇವರು ಶಿಷ್ಯರು ಎಂಬ ತಾರತಮ್ಯ ಉಂಟು. ಪಿತೃಗಣದಲ್ಲಿ, ಹಿಂದೆ ಪ್ರಿಯವ್ರತಾದಿ ಕರ್ಮದೇವತೆಗಳ ತಾನತಮ್ಯದಲ್ಲಿ ಏಳು ಪಿತೃ

ಗಳಿಂದು ಸೇರಿಸಲ್ಪಟ್ಟಿದೆ. ಅವರನ್ನು ಬಿಟ್ಟು, ಉಳಿದ ಚಿರಪಿತೃಗಳು ಮೇಲೆ ಹೇಳಿದ ಆಜಾನಜದೇವತೆಗಳಿಗೆ 100 ಗುಣಗಳಿಂದ ಅಧಮರೆಂದು ತಾತ್ಪರ್ಯ. ॥47॥

೩. ಭಾವದರ್ಪಣ :–

ದೇವತೆಗಳಲ್ಲಿ ಆಶ್ರಮಚತುಷ್ಟಯ ಧರ್ಮಗಳಿಲ್ಲವೆಂತಲೂ, ಋಷಿಗಳಲ್ಲಿ ಗುರುಶಿಷ್ಯತ್ವಲಕ್ಷಣ ಉಂಟೆಂತಲೂ ಹೇಳುತ್ತಾರೆ, ಸುರೇತಿ. -"ವರ್ಣಾಶ್ರಮಾನುಸಾರೇಣ ವಿಶೇಷಃ ಕಶ್ಚನಾತ್ರಹಿ । ಋಷ್ಯಾದಿಷು ವಿಶೇಷೋಸ್ತಿ ಗುರುಶಿಷ್ಯತ್ವಲಕ್ಷಣಂ । ಆಜಾನೇಭ್ಯಸ್ತು ಪಿತರಃ ಸಪ್ತೇಭ್ಯೋಽನ್ಯೇ ಶತವರಾ"-ಇತಿ ತಾರತಮ್ಯೋಕ್ತೇಃ. ॥47॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ವಿಧಿನಿಯತ ಋಷ್ಯಾದಿಶ್ವೇವ ಉಕ್ತರೀತ್ಯಾ ಆಶ್ರಮಾಂತರ್ಗತತ್ವೇಽಪಿ ಸಮೇಷು ಪರಸ್ಪರಂ ನ ತಾರತಮ್ಯಂ ವರ್ಣಾದಿಪ್ರಯುಕ್ತಂ ಇತ್ಯಾಹ-'ಸುರ'-ಇತಿ ॥ –'ಇಲ್ಲ'–ಹೀನತಾಪಾದಕತಯಾ ॥ -'ಅನಿಯತಾ ಹಿ'–ಇತಿ ಶ್ರುತೇಃ ॥ -'ವಿಳು'-ಪಿತ್ರೂಣಾಂ ಸಪ್ತಕಂ ಯತ್ತತ್ ಕರ್ಮದೇವ ಸಮಂ ಸ್ಮೃತಮ್ ॥ ವಿಶ್ವಾಮಿತ್ರಃ ಬ್ರಹ್ಮಪುತ್ರೈಃ ಸಮಃ ಮುನಿರುದಾಹೃತಃ ॥ ಆಚಾರ್ಯಃ ಪಿತ್ರೂಣಾಂ ಚಾಸೌ ಪಿತೃಭಿಃ ಸಹ ಪಠ್ಯತೇ ॥ ಆಜಾನೇಭ್ಯಸ್ತು ಪಿತರಃ ಹ್ಯಷ್ಟಭ್ಯೋಽನ್ಯೇ ಶತವರಾಃ. ॥47॥

ಕನ್ನಡಾರ್ಥ

ವಿಧಿನಿಯತ ಋಷಿ ಮುಂತಾದವರಲ್ಲಿ ಇರುವಂತೆ, ಹಿಂದೆ ಹೇಳಿದಂತೆ, ಆಶ್ರಮಾಂತರ್ಗತರಾದರೂ ಸಮರಲ್ಲಿ ವರ್ಣ, ಆಶ್ರಮ ನಿಮಿತ್ತನಾದ ತಾರತಮ್ಯವಿಲ್ಲವೆಂದು-ಸುರರೊಳಗೆ ಎಂಬ ಪದ್ಯದಿಂದ ಹೇಳುತ್ತಾರೆ.

ವರ್ಣಾಶ್ರಮಗಳಿಲ್ಲವೆಂಬುದಕ್ಕೆ ಆ ವರ್ಣಾಶ್ರಮಧರ್ಮಗಳು ಕರ್ಮಿತನಕ್ಕೆ ಕಾರಣವಾಗಲಾರವೆಂದು ಅರ್ಥ. ಯಾಕೆಂದರೆ, ದೇವತೆಗಳಲ್ಲಿ ವಿಧಿನಿಯಮ ವಿರುವುದಿಲ್ಲ.

ಏಳು ಪಿತೃಗಳು ಕರ್ಮದೇವತೆಗಳಿಗೆ ಸಮರೆಂದು ಪ್ರಸಿದ್ಧಿಯಿದೆ. ವಿಶ್ವಾಮಿತ್ರನು ಬ್ರಹ್ಮಪುತ್ರರಾದ ವಸಿಷ್ಠ ಮುಂತಾದವರಿಗೆ ಸಮನು.

ಪಿತೃಗಳ ಆಚಾರ್ಯರು ಪಿತ್ರುಗಳೆಡೆಯೇ ಪಠಿತರಾಗುತ್ತಾರೆ. ಹಿಂದಿನ 8 ಪಿತೃಗಳನ್ನು ಬಿಟ್ಟು, ಉಳಿದ ಪಿತೃಗಳು ಆಜಾನಜದೇವತೆಗಳಿಗಿಂತ ನೂರು ಗುಣ ಕಡಿಮೆಯವರು. ॥47॥

## ಶ್ರೀ. ಶ್ರೀಗುರುಹೃದಯ ಪ್ರಕಾಶಿಕೆ :-

ಸುರರೆಂಬ ದೇವತೆಗಳಲ್ಲಿ, ವರ್ಣವೆಂಬ ಬ್ರಾಹ್ಮಣಾದಿ ಜಾತಿಭೇದ ಇದ್ದಾಗ್ಯೂ, ಔಪಚಾರಿಕ. ಎಲ್ಲಾ ಜಾತಿಯ ಧರ್ಮವು, ಎಲ್ಲರಿಗೂ ಉಂಟೆಂದು ಅರ್ಥ.

**ಸರ್ವವರ್ಣಾಶ್ರಮಾಚಾರಾಃ ಪ್ರತವಾಯು ಸಮುರ್ಯುತಾಃ ।**
**ಅಪರೋಕ್ಷವಿದೋ ವಿಷ್ಣೋರ್ಭಕ್ತಾ ಏಕಾಂತಿನೋ ಮಮ ॥**

ಎಂಬ ವಿಷ್ಣುರಹಸ್ಯದಲ್ಲಿ ಹೇಳಿರುವ ಮೇರೆಗೆ,ಆಶ್ರಮ, ಎಂಬ ಯತಿ-ಗೃಹಸ್ಥಾದಿ ಭೇದ ಸಹ ಎರಡೂ ಇಲ್ಲ. ಎಲ್ಲಾ ಆಶ್ರಮಧರ್ಮಗಳೂ ಎಲ್ಲರಿಗೂ ಉಂಟು. ತಾರತಮ್ಯದಿಂದ ಇದ್ದು,ನಿರುಪಮರು ಎನಿಸಿಕೊಳ್ಳುವರು. ಎಂದರೆ ಸ್ವಯೋಗ್ಯತೆಯಲ್ಲಿ ಅಸದೃಶರೆನಿಸಿಕೊಳುವರೆಂದರ್ಥ. ಗುರುತ್ವ- ಆಜಾನಜ ದೇವತೆಗಳಲ್ಲಿ, ಶಿಷ್ಯತ್ವ-ಋಷಿಗಳಲ್ಲಿ ಇರುವುದು. ಚಿರಪಿತೃಗಣದಲ್ಲಿ ಏಳು ಜನ ಹೊರತು, ಮಿಕ್ಕ ಚಿರಪಿತೃಗಳೆಲ್ಲ ಆಜಾನಜದೇವತೆಗಳಿಗಿಂತ ಶತಗುಣ ಕಡಿಮೆ. ॥47॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ದೇವತಾವರ್ಗದಲ್ಲಿ ನಮಗಿರುವಂತೆ,ವಿಧಿಪೂರ್ವಕವಾದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ-ಚಾತುರ್ವರ್ಣ ಧರ್ಮವಾಗಲೀ, ಬ್ರಹ್ಮಚಾರಿ-ಗೃಹಸ್ಥ-ವಾನಪ್ರಸ್ಥ-ಯತಿ-ಎಂಬ ಚತುರಾಶ್ರಮ ಧರ್ಮವಾಗಲೀ ಇಲ್ಲ. ಆದರೆ,ಅವರಲ್ಲಿ ವರ್ಣಸಾಂಕೇತಗಳಿವೆ. ಬ್ರಾಹ್ಮಣ ವರ್ಣ-ಕ್ಷತ್ರಿಯವರ್ಣ-ವೈಶ್ಯವರ್ಣ-ಶೂದ್ರವರ್ಣಗಳಿಗೆ ಅಭಿಮಾನಿಗಳಾದ ದೇವತೆಗಳಿದ್ದಾರೆ. ನಮಗಿರುವಂತೆ, ವರ್ಣಾಶ್ರಮಗಳ ವಿಷಯದಲ್ಲಿ ಇವರು ಉತ್ತಮರು-ಇವರು ಅಧಮರು-ಎಂಬ ಭೇದವಿಲ್ಲ.

2. ದೇವತೆಗಳಲ್ಲಿ,ತಮ್ಮ ತಮ್ಮಲ್ಲಿ ತಾರತಮ್ಯವಿದೆ. ಸ್ವೋತ್ತಮರು ಸ್ವಾವರರು-ಎಂಬ ನೀಚೋಚ್ಚ ಭಾವವಿದೆ. ಉದಾಹರಣೆಗೆ, ಗರುಡ-ಶೇಷ-ರುದ್ರರು ಸಮಾನಕಕ್ಷಾಪನ್ನರು. ಆದರೆ, ಇಂದ್ರಕಾಮರಿಗಿಂತ ಉತ್ತಮರು. ವಾಯುಬ್ರಹ್ಮಾದಿಗಿಂತ ಅವರರು. ಅವರವರ ಜ್ಞಾನಾದಿ ವಿಷಯಗಳಲ್ಲಿ ಸಮಾನರಹಿತರು (ನಿರುಪಮರು). ಅವರವರ ಮಟ್ಟಗೇ, ತಾರತಮ್ಯಾನುಸಾರ ಜ್ಞಾನಪೂರ್ಣತ್ವವಿದೆ.

3. ಋಷಿಸಮೂಹದಲ್ಲಿ ಗುರು-ಶಿಷ್ಯ ಸಂಬಂಧವಿದೆ. ಗುರುಸ್ಥಾನಾಪನ್ನರಾದ ಋಷಿಗಳು ಉತ್ತಮರು. ಶಿಷ್ಯಸ್ಥಾನಾಪನ್ನರಾದವರು ಅವರರು. ಗುರುಗಳು ಶಿಷ್ಯರಿಗೆ ಬಿಂಬರೂಪ ಸದೃಶರು. ಅವರರಾದ ಶಿಷ್ಯರು ಅವರಿಗೆ ಪ್ರತಿಬಿಂಬರೆನಿಸುತ್ತಾರೆ. ಎಲ್ಲರಿಗೂ ಮುಖ್ಯ ಬಿಂಬನು ಶ್ರೀಹರಿಯೇ. ತಾರತಮ್ಯಕ್ರಮದಲ್ಲಿ ಬಿಂಬ-ಪ್ರತಿಬಿಂಬ ಸಂಬಂಧವಿದೆ.

4. ಪಿತೃಗಣದಲ್ಲಿ-ಪ್ರಿಯವ್ರತಾದಿ ಕರ್ಮಜದೇವತೆಗಳ ತಾರತಮ್ಯದಲ್ಲಿ ಏಳು ಪಿತೃಗಳು ಸೇರಿದ್ದಾರೆ. ಈ ಏಳು ಪಿತೃಗಳನ್ನು ಬಿಟ್ಟು,(ಕರ್ಮಜ

ದೇವತಾವರ್ಗ) ಉಳಿದ ಚಿರಾಖ್ಯ ಪಿತೃದೇವತೆಗಳು. ಪೂರ್ವೋಕ್ತ ಅನಾ ಖ್ಯಾತ ಆಜಾನಜರಿಗಿಂತ 100 ಗುಣಗಳಿಂದ ಅಧಮರೆನಿಸುವರು.

**ತಾರತಮ್ಯಕ್ರಮ :-**

(1) ಕರ್ಮಜದೇವತೆಗಳು ಆಜಾನಜದೇವತೆಗಳಿಂದ ಉತ್ತಮರು.

(2) ಆಖ್ಯಾತ ಆಜಾನಜರು ಅನಾಖ್ಯಾತರಿಗಿಂತ ಉತ್ತಮರು.

(3) ಅನಾಖ್ಯಾತ ಆಜಾನಜರು ಏಳು ಮಂದಿ ಕರ್ಮಜದೇವತಾ ಕಕ್ಷಕ್ಕೆ ಸೇರಿದ ಪಿತೃಗಳನ್ನು ಬಿಟ್ಟು, ಉಳಿದ ಪಿತೃಗಳಿಗಿಂತ ಉತ್ತಮರು. ॥47॥

★★

## ಪದ್ಯ-೪೮

**ಮೂಲ :-**

ಚಿರಪಿತೃಗಳಿಂದಧಮ ಗಂಧ ।
ರ್ವರುಗಳೆನಿಪರು ದೇವನಾಮಕ ।
ಕೊರತೆ ಎನಿಸುವ ಚಕ್ರವರ್ತಿಗಳಿಂದ ಗಂಧರ್ವ ॥
ನರರೊಳುತ್ತಮರೆನಿಸುವರು ಹ ।
ನ್ನೆರಡು ಎಂಥಕ್ತೆಂಟು ಗುಣದಲಿ ।
ಹಿರಿಯರೆನಿಪರು ಕ್ರಮದಿ ದೇವಾವೇಶ ಬಲದಿಂದ ॥೪೮॥

**ಅವತರಣಿಕೆ :–**

ಚಿರಪಿತೃಗಳಿಗಿಂತ ಅವರರಾದ ದೇವಗಂಧರ್ವರು–ಮನುಷಗಂಧರ್ವರು-ಚಕ್ರವರ್ತಿಗಳು–ಮಾನುಷೋತ್ತಮರ ವಿಚಾರ ತಿಳಿಸುತ್ತಾರೆ. ॥48॥

**ಪ್ರತಿಪದಾರ್ಥ :**

**ಚಿರಪಿತೃಗಳಿಂದ** – ಚಿರಾಖ್ಯ ಪಿತೃದೇವತೆಗಳಿಗಿಂತ, **ದೇವನಾಮಕ** ದೇವಶಬ್ದದಿಂದ ಸಾಂಕೇತರಾದ, ಅಂದರೆ, ದೇವಗಂಧರ್ವರು, **ಅಧಮ** = ಕೆಳಗಿನವರು, **ನರ** = ನರಸಾಂಕೇತವಾದ, **ಗಂಧರ್ವ** = ಗಂಧರ್ವರು, ಅಂದರೆ, ಮಾನುಷಗಂಧರ್ವರು ದೇವಗಂಧರ್ವರಿಗಿಂತಲೂ ಕಡಿಮೆ ಎನಿಸುವರು. **ಚಕ್ರವರ್ತಿಗಳಿಂದ** = ಮಾನುಷಗಂಧರ್ವರಿಗಿಂತಲೂ ಕಡಿಮೆ ಎನಿಸುವ ಚಕ್ರವರ್ತಿಗಳಿಗಿಂತಲೂ, **ನರರೊಳುತ್ತಮರೆನಿಸುವರು** = ಮಾನುಷೋತ್ತಮರು ಎನಿಸುತ್ತಾರೆ. **ಹನ್ನೆರಡು ಎಂಭತ್ತೆಂಟು ಗುಣದಲಿ** = ಪೂರ್ವೋಕ್ತ ಚಿರಪಿತೃವರ್ಗ–ದೇವಗಂಧರ್ವವರ್ಗ–ಮಾನುಷಗಂಧರ್ವವರ್ಗ–ಚಕ್ರವರ್ತಿಗಳು— ಮಾನುಷೋತ್ತಮರು–ಕ್ರಮವಾಗಿ, 12 + 88 = 100 ಗುಣಗಳಿಂದ, **ದೇವಾವೇಶ ಬಲದಿಂದ** = ದೇವತಾವೇಶದಿಂದ, **ಹಿರಿಯರೆನಿಪರು** = ಸ್ವೋತ್ತಮರು-100 ಗುಣಗಳಿಂದ ಅಧಿಕರು. ಸ್ವಾವರರು 100 ಗುಣಗಳಿಂದ ಅವರರು ಎನಿಸುತ್ತಾರೆ. ॥48॥

## ವ್ಯಾಖ್ಯಾನಗಳು

೧. **ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–**

ದೇವಗಂಧರ್ವಾದಿಗಳ ತಾರತಮ್ಯ ಹೇಳುತಾರೆ.

ಚಿರಾಖ್ಯ ಪಿತೃಗಳಿಗಿಂತಲೂ ಅಧಮರು, ದೇವಶಬ್ದದಿಂದ ಸಾಂಕೇತರಾದ

ದೇವಗಂಧರ್ವರು-ಎಂತ ಎನಿಸತಕ್ಕವರು, ಕಡಿಮೆ-ಎಂತ ಎನಿಸುತಾರೆ. ಅನಂತರು ನರಸಾಂಕೇತರಾದ ಮಾನುಷಗಂಧರ್ವರು ದೇವಗಂಧರ್ವರಿಗಿಂತಲೂ ಕಡಿಮೆ, ಎಂತ ತಾತ್ಪರ್ಯ. ಮಾನುಷಗಂಧರ್ವರಿಗಿಂತಲೂ ಮಾನುಷಚಕ್ರವರ್ತಿಗಳು ಕಡಿಮೆ-ಎಂತ ತಾತ್ಪರ್ಯ. ಈ ಚಕ್ರವರ್ತಿಗಳ ನಂತರ, ಮಾನುಷರೊಳು ಉತ್ತಮರು-ಎಂದರೆ,ಮಾನುಷೋತ್ತಮರು ಎಂತ ತಾತ್ಪರ್ಯ, ಇವರು ನ್ಯೂನರು ಎಂತ. ಈ ಪ್ರಕಾರ,ಪ್ರಾಣಿಗಳು ತಾರತಮ್ಯ ಉಳ್ಳವರು–ಎಂತ ಎನಿಸೋವರಾಗುತಾರೆ. ಎಷ್ಟು ಗುಣದಿಂದ ಎಂದರೆ, $12 + 88 =$ ನೂರು ಗುಣಗಳಿಂದ. ಇದೇ ಕ್ರಮವಾಗಿ, ದೇವತೆಗಳ ಆವೇಶಾನುಸಾರ ಅಧಿಕರು, ಸ್ವಾವರರು, ನೂರು ಗುಣದಿಂದ ಅವರರು-ಎಂತ ತಾತ್ಪರ್ಯ. ॥48॥

## ೨. ಭಾವಪ್ರಕಾಶಿಕೆ :–

ಮೇಲಿನ ಪದ್ಯದಲ್ಲಿ ಹೇಳಿದ ಚಿರಪಿತೃಗಳಕಿಂತಲೂ ದೇವಗಂಧರ್ವರು 100 ಗುಣಗಳಿಂದ ಅಧಮರು. ಅವರಕಿಂತಲೂ ಮನುಷ್ಯಗಂಧರ್ವರು 100 ಗುಣಗಳಿಂದ ಅಧಮರು. ಅವರುಗಳಕಿಂತಲೂ 100 ಗುಣಗಳಿಂದ ಅಧಮರು ಚಕ್ರವರ್ತಿಗಳು. ಅವರಕಿಂತಲೂ ಮನುಷೋತ್ತಮರು 100 ಗುಣಗಳಿಂದ ಅಧಮರು. ಇದಕ್ಕೆ ಆಧಾರವು–ಬೃಹತ್ತಾರತಮ್ಯದ –"ಪಿತೃಭ್ಯೋ ದೇವ-ಗಂಧರ್ವಾ ಅಷ್ಟೋತ್ತರಶತಂ ವಿನಾ ॥ ತೇಭ್ಯೋ ಮನುಷ್ಯಗಂಧರ್ವಾಸ್ತೇ-ಭ್ಯೋನಾಶ್ಚಕ್ರವರ್ತಿನಃ ॥ ತೇಭ್ಯಸ್ತು ಮಾನುಷಶ್ರೇಷ್ಠಾಃ ಕ್ರಮಾಚ್ಛತಗುಣಾವರಾಃ ॥"—ಎಂಬ ವಾಕ್ಯದಿಂದ ಸಿದ್ಧವಾಗುವುದು. ಇದರಲ್ಲಿ ಹೇಳಿರುವ ದೇವಗಂಧರ್ವರಲ್ಲಿ ಹಿಂದೆ ಕರ್ಮದೇವತೆಗಳ ಕಕ್ಷಾದಲ್ಲಿ ಸೇರಿಸಿದ 108 ಮಂದಿ ಗಂಧರ್ವರನ್ನು ಬಿಟ್ಟು,ಉಳಿದ ಗಂಧರ್ವರೆಂದರ್ಥ. ಚಕ್ರವರ್ತಿಗಳಲ್ಲಿ ದೇವತಾವೇಶಗಳಿರುವುದರಿಂದ, ಮನುಷ್ಯೋತ್ತಮರಕಿಂತಲೂ 100 ಗುಣ ಉತ್ತಮರೆನಿಸುವರೆಂಬ ತಾತ್ಪರ್ಯ. ॥48॥

## ೩. ಭಾವದರ್ಪಣ :–

ಚಿರಪಿತೃ । ತದುಕ್ತಂ ತಾರತಮ್ಯೇ । –"ಪಿತೃಭ್ಯೋ ದೇವಗಂಧರ್ವಾ-

ಸ್ತೇಭ್ಯಸ್ತು ಚ ಶತಾವರಾ"–ಇತಿ । ಕೊರತೆ–ಕಡಿಮೆ । –"ತೇಭ್ಯೋ ಮನುಷ ಗಂಧರ್ವಾಸ್ತೇಭ್ಯೋಽನ್ಯೇ ಚಕ್ರವರ್ತಿನ"–ಇತ್ಯುಕ್ತೇಃ । (12 + 88) ಅಂತು, 100 ಗುಣ ಯೆಂಬರ್ಥ –"ತೇಭ್ಯಸ್ತು ಮಾನುಷಾಃ ಶ್ರೇಷ್ಠಾ ಕ್ರಮಾಚ್ಛತ ಗುಣಾಧಮಾ"–ಇತಿ ತಾರತಮ್ಯೋಕ್ತೇಃ. ॥48॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

–'ಚಿರ'–ಇತಿ ॥ ತೇಭ್ಯೋಽನ್ಯೇಽಪಿ ಪಿತೃಭ್ಯಶ್ಚ ಶತಾವರಾಃ ॥ –'ಕೊರತಿ'–ನೃಪೇಭ್ಯಃ ಉತ್ತಮಾ ಯೇ ಗಂಧರ್ವಾಃ ನರಗಂಧರ್ವಾಃ ಇತ್ಯರ್ಥಃ ॥ ಅಧಿಕದೇವಾವೇಶೇ ಚಾಧಿಕ್ಯಮ್ ॥ ಭೂಪಾಃ ಮನುಷ್ಯ ಗಂಧರ್ವಾಃ ದೇವಾಃ ಪಿತರಃ ಏವ ಚ ॥ ಆಜಾನೇ ಯಾಃ ಕರ್ಮದೇವಾಃ ತತ್ವರೂಪಾಃ ಪುರಂದರಾಃ ॥ ಶಿವೋ ವಿರಿಂಚ ಇತ್ಯೇತೇ ಕ್ರಮಾತ್ ಶತ ಗುಣೋತ್ತರಾಃ ॥ ಮುಕ್ತಾ ಅಪಿ ತದನ್ಯೇ ಯೇ ಭೂಪಾಚ್ಛತ ಗುಣಾಧಮಾಃ ॥ ಟೀಕಾ ಚ –'ಉಕ್ತೇಭ್ಯೋಽನ್ಯೇ ಮನುಷ್ಯೋತ್ತಮಾಃ ॥ ತೇ ಭೂಪಾತ್ ಶತಾಂಶೋನಾಃ ॥ ಇತಿ ॥ ತತಶ್ಚ ಅಯಮನ್ವಯಃ ॥ ಪಿತೃಭ್ಯಃ ಗಂಧರ್ವಾಃ ತೇಭ್ಯಃ ಸ್ವಕನಿಷ್ಠರಾಜಭ್ಯಃ ನರಗಂಧರ್ವಾಃ ॥ ಯದ್ವಾ ಹೈಹಯಾದ್ಯನ್ಯೇ ಯೇ ಚಕ್ರವರ್ತಿನಃ ತೈಃ ನರಗಂಧರ್ವಾಃ ಶತೋತ್ತಮಾಃ ॥.

ತತ್ರಃ ರಾಜಾನಃ । ತತಃ ನರೋತ್ತಮಾಃ । ತತಶ್ಚೈತೇ ಕ್ರಮಾತ್ ॥ ಇತಿ ತಾರತಮ್ಯ ಕ್ರಮೇಣ ॥ –'ಹಿರಿಯರು'-ಶತಗುಣೋನಾ ಇತ್ಯನುಸಾರೇ –'ಕಿರಿಯರು'-ಇತಿ ಪಾಠಃ ॥ –'ಹಿರಿಯರು'–ಇತಿ ಪಾಠೇ ಪಿತರಃ ಗಂಧರ್ವಾಃ ದೇವಾಃ ನರಗಂಧರ್ವಾಃ ಚಕ್ರವರ್ತಿನಃ ನರೋತ್ತಮಾಃ ಏತೇ ಕ್ರಮಾತ್ ಶತ ಗುಣೋತ್ತರಾಃ ॥ ಇತಿ ॥ ಇದಮುಕ್ತಂ ಭವತಿ ॥ ಭಗವದಾವೇಶೋ ವಿಶೇಷ ಸನ್ನಿಧ್ಯಾತ್ಮಾ ಶಿವಾದಿಗೋ ಭಾರವಾರ್ಥ್ಯ ಹೇತುರ್ನಚಿತಾದೇರಿತ್ಯುಕ್ತ್ಯಾ ಯತ್ರ ಯತ್ರ ಯಾವಾನ್ ಸೋ ಸೋಧಿಕೋ ಗುಣಃ ಇತ್ಯೇತದವಿವಾದಮ್ ॥ ಅತಃ ನರಾಗ್ರೇಭ್ಯಃ ಉಕ್ತಾನ್ಯ ರಾಜಾನಃ, ತತಃ ನರಗಂಧರ್ವಾಃ ॥ ತತಃ ದೇವ ಗಂಧರ್ವಾಃ ॥ ತತಃ ಪಿತರಃ ಶತೋತ್ತಮಾಃ ಇತಿ. ॥48॥

ಹಿಂದೆ ಹೇಳಿದ ಕರ್ಮದೇವತೆಗಳಲ್ಲಿ ಸೇರಿದ ಗಂಧರ್ವರನ್ನು ಬಿಟ್ಟು, ಉಳಿದ ದೇವಗಂಧರ್ವರು ಚಿರಪಿತೃಗಳಿಗಿಂತ ನೂರು ಗುಣ ಕಡಿಮೆಯವರು. ಚಕ್ರವರ್ತಿಗಳಿಗಿಂತ ಉತ್ತಮರಾದ ಮನುಷ್ಯಗಂಧರ್ವರು ಎಂದು -'ಕೊರತೆ'- ಯೆನಿಪ ಎಂಬ ಪದದ ಆಕೂತ. ಅಧಿಕರಾದ ದೇವತೆಗಳ್ ಆವೇಶವಿದ್ದಂತೆ ಅಧಿಕರೆನಿಸುವರು. ಚಕ್ರವರ್ತಿಗಳು, ಮನುಷ್ಯಗಂಧರ್ವರು, ದೇವಗಂಧರ್ವರು, ಪಿತೃಗಳು, ಆಜಾನಜದೇವತೆಗಳು, ಕರ್ಮದೇವತೆಗಳು, ತಾತ್ವಿಕದೇವತೆಗಳು, ಇಂದ್ರರು, ಶಿವ, ಬ್ರಹ್ಮ ಈ ದೇವತೆಗಳು ಕ್ರಮದಿಂದ ನೂರು, ನೂರು ಗುಣ ಗಳಿಂದ ಉತ್ತಮರು. ಮುಕ್ತರಲ್ಲಿಯೂ ಈ ತಾರತಮ್ಯವಿರುತ್ತದೆ.

ಮನುಷ್ಯರು ರಾಜರಿಂದ ನೂರು ಗುಣ ಕಡಿಮೆಯವರು. ಇಲ್ಲಿ, ಈ ಅನ್ವಯವನ್ನು ತಿಳಿಯಬೇಕು. ಪಿತೃಗಳಿಗಿಂತ ದೇವಗಂಧರ್ವರು, ಅವರಿಗಿಂತ ಕಡಿಮೆ.ರಾಜರಿಂದ ಉತ್ತಮರಾದ ಮನುಷ್ಯಗಂಧರ್ವರು, ಅಥವಾ ಹೈಹಯ ಮುಂತಾದ ಚಕ್ರವರ್ತಿಗಳನ್ನು ಉಳಿದು,ಮಿಕ್ಕ ರಾಜರುಗಳಿಂದ ನರಗಂಧರ್ವರು ನೂರು ಗುಣಗಳಿಂದ ಉತ್ತಮರು. ಅವರ ತರುವಾಯ ರಾಜರು, ತರುವಾಯ ಮನುಷ್ಯೋತ್ತಮರು- ಹೀಗೆ ತಾರತಮ್ಯಕ್ರಮವಿರುತ್ತದೆ. ಈ ಉತ್ತಮ ಕ್ರಮದಿಂದ -'**ಹಿರಿಯರು**',-ಅವರ ಕ್ರಮದಿಂದ -'**ಕಿರಿಯರು**'-ಎಂಬ ಪಾಠ ತಿಳಿಯಬೇಕು. '**ಹಿರಿಯ**'-ಎಂಬ ಪಾಠವಿದ್ದಲ್ಲಿ, ಪಿತೃಗಳು, ದೇವ ಗಂಧರ್ವರು, ಮನುಷ್ಯಗಂಧರ್ವರು, ಚಕ್ರವರ್ತಿಗಳು, ಮನುಷ್ಯೋತ್ತಮರು, ಇವರೆಲ್ಲರೂ ಕ್ರಮದಿಂದ, ನೂರು ನೂರು ಗುಣಗಳಿಂದ ಶ್ರೇಷ್ಠರು- ಎಂದು ಅರ್ಥ.

ಇಲ್ಲಿಯ ಅಭಿಪ್ರಾಯವಿದು-"ಭಗವಂತನ ಸನ್ನಿಧಾನವಿಶೇಷರೂಪವಾದ ಆತನ ಆವೇಶವು ಶಿವಾದಿಗಳಲ್ಲಿ ಇದ್ದು, ಭಾರದಾರ್ಢ್ಯ ಕಾರಣ"-ವೆಂದು ಮುಂತಾಗಿರುವ ವಚನಗಳ ಬಲದಿಂದ ಯಾವನಲ್ಲಿ ಎಷ್ಟು ಸನ್ನಿಧಿಯೋ, ಅಷ್ಟು ಅಷ್ಟು-ಅವನು ಅಧಿಕನು-ಎಂಬುದು ನಿರ್ವಿವಾದ ಸಂಗತಿ. ಆದುದರಿಂದ,ನರೋ ತ್ತಮರಿಗಿಂತ ಬೇರೆಯಾದ ರಾಜರು ಉತ್ತಮರು. ಅವರಿಗಿಂತ ಮನುಷ್ಯಗಂಧ

ರ್ವರು, ಅವರಿಗಿಂತ ದೇವಗಂಧರ್ವರು, ಅವರಿಗಿಂತ ಪಿತೃಗಳು-ಹೀಗೆ ಇವರಲ್ಲಿ ಕ್ರಮದಿಂದ ನೂರು ನೂರು ಗುಣಗಳು ಉತ್ತರೋತ್ತರ ಹೆಚ್ಚಿಗಿರುತ್ತವೆ."— ॥48॥

**ಖ. ಶ್ರೀಗುರುಹೃದಯ ಪ್ರಕಾಶಿಕೆ :-**

ಚಿರಪಿತೃಗಳಿಗಿಂತ ದೇವಗಂಧರ್ವರು ಕಡಿಮೆ-ಚಕ್ರವರ್ತಿಗಳಾದ ಮಹಾ ರಾಜರಿಗಿಂತಲೂ ಕಡಿಮೆ. ಹನ್ನೆರಡು ಎಂಭತ್ತೆಂಟೆಂಬ ನೂರು ಗುಣದಿಂದ ಅಧಿಕರೆನಿಸುವರು. ನರಗಂಧರ್ವರಿಗಿಂತ ದೇವಾವೇಶಪ್ರಯುಕ್ತ, ದೇವಗಂಧ ರ್ವರು ಅಧಿಕರೆನಿಸುವರು.

**ಟಿಪ್ಪಣಿ :-** ಚಿರಪಿತೃಗಳಿಗಿಂತ ದೇವಗಂಧರ್ವರು ನೂರುಗುಣ ಕಡಿಮೆ ಯಾದವರು. ಈ ದೇವಗಂಧರ್ವರು ಮನುಷ್ಯಗಂಧರ್ವರಿಗೆ ನೂರುಗುಣ ಉತ್ತ ಮರು. ಈ ಮನುಷ್ಯಗಂಧರ್ವರಿಗಿಂತ ಚಕ್ರವರ್ತಿಗಳೆಂಬ ಮಹಾರಾಜರುಗಳು ನೂರುಗುಣ ಕಡಿಮೆ. ಇವರಿಗಿಂತ ನೂರುಗುಣ ಕಡಿಮೆ ಮುಂದಿನ ಪದ್ಯದಲ್ಲಿ ವಿವರಿಸಿರುವ ಮನುಷ್ಯೋತ್ತಮರು ಎಂಬುವರು ಎಂಬುದಾಗಿ ತಿಳಿಯಬೇಕು— ಇತಿ ತಾರತಮ್ಯ ವಿವೇಕೇ. ॥48॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ದೇವಗಂಧರ್ವರು.ಮಾನುಷಗಂಧರ್ವರು-ಚಕ್ರವರ್ತಿಗಳು-ಮಾನು ಷ್ಯೋತ್ತಮರು-ಇವರ ತಾರತಮ್ಯ ವಿಚಾರವನ್ನು ತಿಳಿಸುತ್ತಾರೆ- ಪ್ರಸಕ್ತಪದ್ಯ ದಿಂದ.

2. ಚಿರಾಖ್ಯ ಪಿತೃದೇವತೆಗಳಿಗಿಂತ **ದೇವಗಂಧರ್ವರು, 100 ಗುಣ** ಗಳಿಂದ ಅಧಮರು. **ದೇವನಾಮಕ**-ಎಂದರೆ,ದೇವಶಬ್ದದಿಂದ ಸಾಂಕೇತರಾದ

ಗಂಧರ್ವವರ್ಗ ಎಂದು ಅರ್ಥ. ಪೂರ್ವೋಕ್ತ ಕರ್ಮಜದೇವತಾ ಕಕ್ಷಕ್ಕೆ ಸೇರಿದ ದೇವಗಂಧರ್ವರನ್ನು ಬಿಟ್ಟು,ಉಳಿದ ದೇವಗಂಧರ್ವರೆಂದು ತೆಗೆದುಕೊಳ್ಳಬೇಕು.

3. **ಮಾನುಷಗಂಧರ್ವರು**— ದೇವಗಂಧರ್ವರಿಗಿಂತ 100 ಗುಣ ಗಳಿಂದ ಅಧಮರು. ದೇವಾವೇಶಬಲದ ಪ್ರಯುಕ್ತ, ದೇವಗಂಧರ್ವರು ನರ ಗಂಧರ್ವರಿಗಿಂತ ಉತ್ತಮರು.

4. ಕರ್ಮಜದೇವತಾವರ್ಗದಲ್ಲಿ ಸೇರಿದ ಪ್ರಿಯವ್ರತಾದಿ ಶ್ರೇಷ್ಠ ರಾಜರುಗಳನ್ನು ಬಿಟ್ಟು, ಉಳಿದ **ಚಕ್ರವರ್ತಿಗಳೆಲ್ಲರೂ,** ನರಗಂಧರ್ವರಿಗಿಂತ 100 ಗುಣಗಳಿಂದ ಕಡಿಮೆ ಎನಿಸುವರು.

5. **ಮಾನುಷೋತ್ತಮರು**- ಚಕ್ರವರ್ತಿಗಳಿಗಿಂತ 100 ಗುಣಗಳಿಂದ ಅಧಮರು. ಚಕ್ರವರ್ತಿಗಳಲ್ಲಿ ದೇವತಾವೇಶಗಳಿರುವುದರಿಂದ, ಅವರು ಮಾನುಷೋತ್ತಮರಿಗಿಂತಲೂ ಉತ್ತಮರು. ದಾಸರಾಯರು ಮಾನುಷೋ ತ್ತಮರನ್ನು,**ನರಕೊಳುತ್ತಮರು**- ಎಂದಿದ್ದಾರೆ.

6. ದೇವಾವೇಶ ಬಲದಿಂದ, ಹಿರಿಯರು-ಕಿರಿಯರು— ಅಂದರೆ, ಸ್ತೋತ್ತಮರು- ಸ್ಥಾವರರು-ಎಂಬ ತಾರತಮ್ಯ ಕ್ರಮದಿಂದ, (1) ಮಾನು ಷೋತ್ತಮರಿಗಿಂತ ಚಕ್ರವರ್ತಿಗಳು 100 ಗುಣಗಳಿಂದ ಅಧಿಕರು. (2) ಚಕ್ರ ವರ್ತಿಗಳಿಗಿಂತ ನರಗಂಧರ್ವರು ಉತ್ತಮರು. (3) ನರಗಂಧರ್ವರಿಗಿಂತ ದೇವ ಗಂಧರ್ವರು ಶ್ರೇಷ್ಠರು. (4) ದೇವಗಂಧರ್ವರಿಗಿಂತ ಚಿರಾಖ್ಯ ಪಿತೃದೇವತೆ ಗಳು ಉತ್ತಮರು. ಹೀಗೆ, ಆರೋಹಣಕ್ರಮದಲ್ಲಿ ತಾರತಮ್ಯ ತಿಳಿಯಬೇಕು. ಇಲ್ಲಿ **100 ಗುಣಗಳನ್ನು -"ಹನ್ನೆರಡು ಎಂಭತ್ತೆಂಟು"**-ಎಂಬ ಸಂಖ್ಯೆ— ಯಿಂದ ಸೂಚಿಸಿದ್ದಾರೆ. ಅಂದರೆ, ಹನ್ನೆರಡು + ಎಂಭತ್ತೆಂಟು = ನೂರು - ಎಂದಾಗುವುದು.

**ಪ್ರಮಾಣ :–**

"ಪಿತೃಭ್ಯೋ ದೇವಗಂಧರ್ವಾ ಅಷ್ಟೋತ್ತಾರ ಶತಂವಿನಾ ॥
ತೇಭ್ಯೋ ಮಾನುಷ್ಯಗಂಧರ್ವಾಸ್ತೇಭ್ಯೋನಾಶ್ಚಕ್ರವರ್ತಿನಃ ॥
ತೇಭ್ಯಸ್ತು ಮಾನುಷಶ್ರೇಷ್ಠಾಃ ಕ್ರಮಾಚ್ಛತ ಗುಣಾವರಾಃ ॥"–
**—ಇತಿ ತಾರತಮ್ಯಕೌಸ್ತುಭೇ.**

ಯಾವ ಯಾವ ವರ್ಗದಲ್ಲಿ ಎಷ್ಟೆಷ್ಟು ದೇವಾವೇಶ ಬಲವಿದೆಯೋ, ಭಗವಸನ್ನಿಧಾನ ವಿಶೇಷ) ಅವರು ಅಷ್ಟಷ್ಟು ಶ್ರೇಷ್ಠರು–ಎಂದು ತಾತ್ಪರ್ಯ. ಹಿರಿಯರೆನಿಪರು ಕ್ರಮದಿ). ॥48॥

★★

## ಪದ್ಯ-೪೯

**ಮೂಲ :-**

ದೇವತೆಗಳಿಂ ಶ್ರೇಷ್ಠರೆನಿಪರು ।
ದೇವಗಂಧರ್ವರುಗಳಿವರಿಂ ।
ದಾವಕಾಲಕು ಶಿಕ್ಷಿತರು ನರನಾಮಗಂಧರ್ವ ॥
ಕೇವಲತಿಸದ್ಭಕ್ತಿಪೂರ್ವಕ ।
ಯಾವದಿಂದ್ರಿಯಗಳ ನಿಯಾಮಕ ।
ಶ್ರೀವರನೆ ಎಂದರಿತು ಭಜಿಪರು ಮಾನುಷೋತ್ತಮರು ॥೪೯॥

**ಪ್ರತಿಪದಾರ್ಥ :-**

ದೇವತಾವರ್ಗ–ದೇವಗಂಧರ್ವರು. ನರಗಂಧರ್ವರು — ಮಾನುಷೋತ್ತಮರ ತಾರತಮ್ಯವಿಚಾರ ತಿಳಿಸುತ್ತಾರೆ. ॥49॥

**ಪ್ರತಿಪದಾರ್ಥ :-**

**ದೇವತೆಗಳಿಂ** = ದೇವತಾವರ್ಗದಿಂದ, **ದೇವಗಂಧರ್ವರು** = ದೇವಗಂಧರ್ವವರ್ಗದವರು, **ಶ್ರೇಷ್ಠರೆನಿಪರು** = ನಿಯಾಮಕರು ಅಥವಾ ಆಜ್ಞಾಧಾರಕರು ಎಂದೆನಿಸುವರು, **ಇವರಿಂದ** = ಈ ದೇವಗಂಧರ್ವರು ಗಳಿಗಿಂತ, **ನರನಾಮಗಂಧರ್ವರು** = ಮಾನುಷಗಂಧರ್ವರು, **ಶಿಕ್ಷಿತರು** = ಉಪದೇಶಿಕರು, **ಮಾನುಷೋತ್ತಮರು** = ನರಗಂಧರ್ವರ ಆರಂಭ ಮಾಡಿ, ಮಾನುಷೋತ್ತಮರ ಪರ್ಯಂತ, **ಅವ ಕಾಲಕು** = ಸರ್ವಕಾಲ ಗಳಲ್ಲಿಯೂ, **ಕೇವಲ ಅತಿಸದ್ಭಕ್ತಿಪೂರ್ವಕ** = ಅತ್ಯಂತ ಸಮೀಚೀನ ವಾದ ಭಕ್ತಿಯೀಡೊಡಗೂಡಿ, **ಯಾವದಿಂದ್ರಿಯಗಳ** = ಏಕಾದ ಶೇಂದ್ರಿಯಗಳ, **ನಿಯಾಮಕ** = ನಿಯಾಮಕನಾದ, **ಶ್ರೀವರನೆ ಎಂದ ರಿತು** = ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನೇ–ಎಂದು ತಿಳಿದವರಾಗಿ. **ಭಜಿಸುವರು** = ಭಜನೆಮಾಡುತ್ತಾರೆ. ॥49॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಮಾನಷೋತ್ತಮರು ಶ್ರೀಪರಮಾತ್ಮನ ಭಜಸತಕ್ಕ ಕ್ರಮವನ್ನು ಹೇಳ ತಾರೆ.

ಚಿರಾಖ್ಯ ಪಿತೃದೇವತೆಗಳಿಂದ ದೇವಗಂಧರ್ವರಾದವರು ನಿಯಾಮಕ ರೆನಿಸುವರು. ಆಜ್ಞಾಧಾರಕರೆನಿಸುವರು. ಈ ದೇವಗಂಧರ್ವರಿಂದ ಉಪ

ರು ಮಾನುಷಗಂಧರ್ವರು. ನರಗಂಧರ್ವರ ಆರಂಭಮಾಡಿ, ಮಾನು
ಮರ ಪರಿಯಂತ ಸದಾಸರ್ವಕಾಲದಲ್ಲೂ, ಇವರ ಭಜನಾ-ಎಂಬುದು
ಕವಾಗಿ ಸಮೀಚೀನವಾದ ಭಕ್ತಿಪುರಸ್ಸರವಾಗಿ, ಏಕಾದಶೇಂದ್ರಿಯಗಳ
ಮಕನಾದ ಲಕ್ಷ್ಮೀಪತಿಯಾದ ಶ್ರೀಪರಮಾತ್ಮನೇ-ಎಂತ ತಿಳಿದವರಾಗಿ,
ಲದಲ್ಲಿ ಬಿಂಬರೂಪಿ ಪರಮಾತ್ಮನ್ನ ಭಜಿಸೋವಂಥಾದ್ದು-ಎಂತ
ರ್ಥ. ॥49॥

### ಭಾವಪ್ರಕಾಶಿಕೆ :—

ದೇವತೆಗಳಿಗೆ ಶಿಷ್ಯರೆನಿಸಿ, ಅವರ ಆಜ್ಞಾಧಾರಕರಾಗಿರುವವರು-ದೇವ
ರ್ವರು. ಅವರ ಶಿಷ್ಯರೂ, ಆಜ್ಞಾಧಾರಕರೂ ಆದವರು ಮನುಷ್ಯಗಂಧ
. ಇತರ ವಿಷಯಾಸಕ್ತಿಯನ್ನು ಬಿಟ್ಟು, ಅತ್ಯಂತ ಸದ್ಭಕ್ತಿಪೂರ್ವಕವಾಗಿ,
ಮಾತ್ಮನನ್ನು ಭಜಿಸುತ್ತಾ, ಎಲ್ಲಾ ಇಂದ್ರಿಯಗಳಿಗೂ ನಿಯಾಮಕನು
ಕ್ಷ್ಮೀಪತಿಯೆಂದು ತಿಳಿದು ಚಿಂತಿಸುವವರು— ಮನುಷ್ಯೋತ್ತಮರೆಂಬ
ರ್ಥ. ಬೃಹತ್ತಾರತಮ್ಯದಲ್ಲಿನ-"ಸಾಕ್ಷಾದ್ದೇವ ಮುಖಾತ್ಕೇಷಾಃ ದೇವಗಂಧ
ವಮಕಾಃ ॥83॥ ಏ ಗಂಧರ್ವಮುಜಪ್ರೇಷ್ಯಾಃ ಗಂಧರ್ವಾಮಾನುಷಾ
ಶಾ"-ಎಂಬ ವಾಕ್ಯವು ಇದಕ್ಕೆ ಆಧಾರವಾಗಿರುವುದು. ॥49॥

### ಭಾವದರ್ಪಣ :-

ದೇವೇತಿ । ಪ್ರೇಷ್ಯರು-ಪ್ರೇರಿಸಿಕೊಳ್ಳಲಿಕ್ಕೆ ಯೋಗ್ಯರು. ॥49॥

### ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ :-

ಸ್ವಮುಖೇನೈವ ದೇವೈರ್ಯ ಆಜ್ಞಪ್ತಾಃ ಸರ್ವದಾ ಗಣಾಃ ॥ ಮಾನು
ಕ್ಯಿತಾಃ ದೇವಗಂಧರ್ವಾಃ ಯೇ ತ್ವನ್ಯಮುಖಗೋಚರಾಃ ॥ ಇತ್ಯುಕ್ತೋ ಭಯ
ತೇ ಚ ಗಂಧರ್ವಾಃ ತೇಭ್ಯಸ್ತೇ ಚ ಶತಾವರಾಃ॥ ಇತ್ಯುಕ್ತೋ ಭಯ
ನಮಾಹ 'ದೇವತೆ'-ಇತಿ ॥ ಶ್ರೀವರಃ ಏವ ಕೇವಲಃ ಮುಖ್ಯೋ
ಂತಾ ಇತ್ಯನ್ವಯಃ. ॥49॥

## ಕನ್ನಡಾರ್ಥ

"ಸದಾ ಸ್ವಯಂ ದೇವತೆಗಳ ಮುಖದಿಂದಲೇ ಆಜ್ಞೆಯನ್ನು ಪಡೆಯುವ ದೇವಗಣಕ್ಕೆ ದೇವಗಂಧರ್ವರೆಂದು ಹೆಸರು. ಪರರ ಮುಖಾಂತರ ಅವರ ವಚನಕ್ಕೆ ಪಾತ್ರರಾದವರು ಮಾನುಷಗಂಧರ್ವರು"–ಎಂಬುದಾಗಿ ಹೇಳಿರುವ ಮನುಷ್ಯ, ದೇವ ಹೀಗೆ, ಉಭಯ ಗಂಧರ್ವರ ಲಕ್ಷಣವನ್ನು 'ದೇವತೆಗಳ' –ಎಂಬ ಪದ್ಯದಿಂದ ನಿರೂಪಿಸುತ್ತಾರೆ.

'ಶ್ರೀವರನ' ಯೆಂದು. ಇಲ್ಲಿ ಈ ಭಾವವಿದೆ. ಶ್ರೀನಾರಾಯಣನೇ ಮುಖ್ಯಸ್ವಾಮಿಯು. ಮಿಕ್ಕವರು ಅವನ ಅಧೀನರಾಗಿಯೇ, ತಮಗೆ ನಿಯಾಮಕರು ಎಂದು. ॥49॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ದೇವತೆಗಳಿಗೆ ದೇವಗಂಧರ್ವರು ಪ್ರೇಷ್ಯರೆಂಬ ಸೇವಕರೆನಿಸುವರು. ಆ ದೇವಗಂಧರ್ವರಿಂದ ಶಿಕ್ಷಿತರೆನಿಸಿಕೊಳ್ಳುವರು, ನರಗಂಧರ್ವರು. ಸದಾ- ಅಂದರೆ, ದೇವಗಂಧರ್ವರಿಗೆ ನರಗಂಧರ್ವರು ಶಿಷ್ಯರೆಂದರ್ಥ. ಕೇವಲ ಅಂದರೆ, ಚಾಂಚಲ್ಯಾದಿ ದೋಷರಹಿತ, ಶ್ರವಣಾದಿ ನವವಿಧ ಸದ್ಭಕ್ತಿಯಿಂದ ಸರ್ವೇಂದ್ರಿಯ ನಿಯಾಮಕನು ಲಕ್ಷ್ಮೀಪತಿ ಶ್ರೀಹರಿಯೆಂದು ಭಜಿಸುತ್ತಿರುವವರು ಮನುಷ್ಯೋತ್ತಮರು.

**ವಿಶೇಷಾಂಶ**– ಆಜಾನಜ ದೇವತೆಗಳೆಂದರೆ ಪ್ರಮಾಣ–

**ಅನಾಖ್ಯಾತಾದೇವತಾಸ್ತು ಜಾತಾ ದೇವಕುಲೇ ಚ ಯಾಃ ।**
**ಗಂಧರ್ವಾಸ್ತುಂಬುರು ಮುಖಾಃ ಶತಮಪ್ಸರಸಾಂ ಶತಂ ॥**
**ನಾರದಾದೀನುಚಿತ್ಯಾಂಶಾನ್ ವಿನಾ ತು ಋಷಯೋಖಿಲಾಃ ।**
**ಆಜಾನಜಾದೇವತಾಸ್ತ್ವೋ ಜ್ಞೇಯಾ ॥ಇತಿ॥**

ಅಂದರೆ, ಈ ಆಜಾನಜರು ದೇವಕುಲದಲ್ಲಿ ಉತ್ಪನ್ನರಾದವರಾದಾಗ್ಯೂ, ಇಂದ್ರ, ಚಂದ್ರ-ಇತ್ಯಾದ್ಯೋಪಾದಿಯಲ್ಲಿ ಪ್ರಸಿದ್ಧವಾದ ಹೆಸರು ಇಲ್ಲದವರು. ಈ ಆಜಾನಜದೇವತೆಗಳಿಗೆ ಸಮರಾದವರು ನೂರು ಕಮ್ಮಿ ನೂರು ಕೋಟಿ ಋಷಿಗಳು, ತೊಂಭತ್ತೆರಡು ಮಂದಿ ಗಂಧರ್ವರು, ಕೆಲವರು ಅಪ್ಸರಸ್ತ್ರೀಯರು. ॥49॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ದೇವಗಂಧರ್ವರು ತಮಗಿಂತ ಉತ್ತಮರಾದ ದೇವತೆಗಳಿಂದಲೂ ಮತ್ತು ಚಿರಾಖ್ಯ ಪಿತೃದೇವತೆಗಳಿಂದಲೂ ನಿಯಮ್ಯರು, ಅವರ ಆಜ್ಞಾಧಾರಕರು. **(ಪ್ರೇಷ್ಯರೆನಿಪ).**

೨. ಮಾನುಷಗಂಧರ್ವರು (**ನರನಾಮ ಗಂಧರ್ವ**) ಸರ್ವಕಾಲದಲ್ಲೂ ದೇವಗಂಧರ್ವರಿಂದ ನಿಯಮ್ಯರು. ಅಂದರೆ, ಅವರ ಅಂಕಿತಕ್ಕೆ ಒಳಪಟ್ಟಿರುವರು. (**ಶಿಕ್ಷಕರು**) ದೇವಗಂಧರ್ವರಿಂದ ಮಾನುಷಗಂಧರ್ವರಿಗೆ ಉಪದೇಶ.

೩. ದೇವಗಂಧರ್ವರು–ನರಗಂಧರ್ವರು–ಚಕ್ರವರ್ತಿಗಳಿಗಿಂತ ತಾರತಮ್ಯದಲ್ಲಿ ಅವರರಾದ **ಮಾನುಷೋತ್ತಮರು** ಅತ್ಯಂತಭಕ್ತಿಪುರಸ್ಸರವಾಗಿ ಸಕಲೇಂದ್ರಿಯಗಳ ನಿಯಾಮಕನು ಲಕ್ಷ್ಮೀಪತಿಯಾದ ಶ್ರೀಹರಿಯೇ ಎಂಬ ಉತ್ತಮಜ್ಞಾನಾನು ಸಂಧಾನ ಪೂರ್ವಕವಾಗಿ ಶ್ರೀಹರಿಯಮಹಾಮಹಿಮೆಗಳನ್ನು ಸನವರತ ಕೊಂಡಾಡುತ್ತಾ, ಭಜಿಸುತ್ತಿರುವರು. ತಮ್ಮಗಿಂತ ಉತ್ತಮರಾದ ಅಲ್ಲಿ ಶ್ರದ್ಧಾಭಕ್ತಿಗಳನ್ನು ತೋರಿಸುತ್ತಾ, ಅವರನ್ನು ಸೇವಿಸುವರು.

**ಪ್ರಮಾಣ :–**

"ಸಾಕ್ಷಾದ್ದೇವ ಮುಖಾತ್ಯೇಷಾಃ ದೇವಗಂಧರ್ವನಾಮಕಾಃ ।
ಏ ಗಂಧರ್ವಮುಖ ಪ್ರೇಷ್ಯಾಃ ಗಂಧರ್ವಾಮಾನುಷಾಸ್ಮೃತಾಃ ॥"

**—ಇತಿಬೃಹತ್ತಾರತಮ್ಯೇ**

ಸದಾ ಸ್ವಯಂ ದೇವತೆಗಳ ಮುಖದಿಂದಲೇ ಆಜ್ಞೆಯನ್ನು ಪಡೆಯುವ ದೇವಗಣಕ್ಕೆ **ದೇವಗಂಧರ್ವ**–ರೆಂದು ಹೆಸರು.

ಪರರ ಮೂಲಕ ಅವರ ವಚನಕ್ಕೆ ಪಾತ್ರರಾದವರು ಮಾನುಷಗಂಧರ್ವರು.

**ಮಾನುಷೋತ್ತಮರು**–ಶ್ರೀವರನೇ ಮುಖ್ಯಪ್ರಭುವು. ಅವನೇ ಸರ್ವರಿಗೆ ನಿಯಾಮಕನು. ಮಿಕ್ಕವರೆಲ್ಲರೂ ಅವನ ಅಧೀನರು-ಎಂದು ಉಪಾಸಿಸುತ್ತಾರೆ. ॥49॥

★★

## ಪದ್ಯ-೫೦

**ಮೂಲ :–**

**ಬಾದರಾಯಣ ಭಾಗವತ ಮೊದ ।**
**ಲಾದ ಶಾಸ್ತ್ರಗಳಲ್ಲಿ ಬಹುವಿಧ ।**
**ದ್ವಾದಶ ದಶ ಸುಪಂಚವಿಂಶತಿಶತ ಸಹಸ್ರಯುತ ॥**
**ಭೇದಗಳ ಪೇಳಿದನು ಸ್ವೋತ್ತಮ ।**
**ಆದಿತೀಯಾವೇಶಬಲದಿ ವಿ ।**
**ರೋಧ ಚಿಂತಿಸಬಾರದಿದು ಸಾಧುಜನ ಸಮ್ಮತವು ॥ ॥೫೦॥**

**ಅವತರಣಿಕೆ :-**

ಗುಣತಾರತಮ್ಯದಲ್ಲಿ ಪರಸ್ಪರ ತೋರತಕ್ಕ ವಿರೋಧ ಪರಿಹಾರ ಮಾಡುತ್ತಾರೆ. ॥50॥

**ಪ್ರತಿಪದಾರ್ಥ:-**

**ಬಾದರಾಯಣ** = ಶ್ರೀವೇದವ್ಯಾಸರಿಂದ ರಚಿತವಾದ, **ಭಾಗವತ** = ಶ್ರೀಮದ್ಭಾಗವತ, **ಮೊದಲಾದ ಶಾಸ್ತ್ರಗಳಲ್ಲಿ** = ಮುಂತಾದ ಪುರಾಣ ಶಾಸ್ತ್ರಗಳಲ್ಲಿ, **ಸ್ತೋತ್ರಮು** = ಆಯಾಯಾ ದೇವತೆಗಳಿಂದ ಉತ್ತಮರಾದ, **ಅದಿತೀಯಾವೇಶ ಬಲದಿ** = ದೇವತೆಗಳ ಆವೇಶಬಲದಿಂದಲೂ ಮತ್ತು ಜೀವರ ನೈಜತಾರತಮ್ಯದಿಂದಲೂ, **ದ್ವಾದಶ** = ಹನ್ನೆರಡು, **ದಶ** = ಹತ್ತು, **ಸುಪಂಚವಿಂಶತಿ** = ಸಮೀಚೀನವಾದ ಇಪ್ಪತ್ತೈದು, **ಶತ** = ನೂರು, **ಸಹಸ್ರ** = ಸಾವಿರ, **ಆಯುತ** = ಹತ್ತುಸಾವಿರ, **ಭೇದಗಳ** = ಈ ಪ್ರಕಾರ ಬಹುವಿಧ ಭೇದಗಳನ್ನು, **ಪೇಳಿದನು** = ಪೇಳುವವರಾದರು. **ವಿರೋಧ ಚಿಂತಿಸಬಾರದು** = ಎಂದು ಶ್ರೀವೇದವ್ಯಾಸರ ವಾಕ್ಯಗಳಲ್ಲಿ ವಿರೋಧ ದೋಷತ್ವೇನ ಚಿಂತಿಸಕೂಡದು. **ಇದು** = ಈ ಪ್ರಕಾರ ಹೇಳಿದ್ದು, **ಸಾಧುಜನ ಸಮ್ಮತವು** = ಜ್ಞಾನಿಗಳಿಗೆ ಸಮ್ಮತವೇ ಹೊರತು, ವಿರುದ್ಧ ವಾಗಲಿಲ್ಲ- ಎಂತ ತಾತ್ಪರ್ಯ. ॥50॥

## ವ್ಯಾಖ್ಯಾನಗಳು

**೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-**

ಗುಣತಾರತಮ್ಯದಲ್ಲಿ ಪರಸ್ಪರ ಬರತಕ್ಕ ವಿರೋಧ ಪರಿಹಾರ ಮಾಡುತಾರೆ.

ಪುರಾಣಕರ್ತೃಗಳಾದ ಶ್ರೀವೇದವ್ಯಾಸದೇವರು, ಶ್ರೀಭಾಗವತ ಇನ್ನೂ ಅನೇಕವಾದ ಪುರಾಣಗಳು, ಸಂಹಿತಾಗಳು-ಮೊದಲಾದ ಶಾಸ್ತ್ರಗಳಲ್ಲಿ ಗುಣ ತಾರತಮ್ಯ ಹೇಳಿದ್ದು —ಆಯಾ ದೇವತೆಗಳಿಗೆ ಸ್ತೋತ್ರಮರಾದ ದೇವತೆಗಳ ಆವೇಶಬಲದಿಂದಲೂ, ಜೀವರ ನೈಜತಾರತಮ್ಯದಿಂದಲೂ, ಹನ್ನೆರಡು, ಹತ್ತು, ಇಪ್ಪತ್ತೈದು, ನೂರು, ಸಾವಿರ, ಹತ್ತುಸಾವಿರ-ಈ ಪ್ರಕಾರ, ಒಂದು ಕಡಿ ಹತ್ತು-ಎಂತ ಹೇಳಿ, ಆ ಹತ್ತನ್ನೇ ಶತ-ಎಂತಲೂ, ಸಾವಿರ,ಎಂತಲೂ ಈ

ಪ್ರಕಾರ ಬಹುವಿಧ, ಅನೇಕ ವಿಧವಾದ ಭೇದಗಳನ್ನು ಹೇಳೋವರಾದರು. ವೇದವ್ಯಾಸರು ವಿರುದ್ಧವಾಗಿ ಹೇಳಿದ್ದಾರೆ-ಎಂತ ದೋಷತ್ವೇನ ಚಿಂತಿಸಕೂಡದು. ಎಲ್ಲಾ ಸತ್ಯವೇ. ವಿವಕ್ಷಾಭೇದ-ಎಂತ ತಾತ್ಪರ್ಯವೇ ಹೊರತು, ಬ್ಯಾರೆ ಅಲ್ಲ. ಈ ಪ್ರಕಾರ ಹೇಳಿದ್ದು, ಇದರ ಮರ್ಮ-ಎಂಬೋದು ಜ್ಞಾನಿಗಳಾದವರು ತಿಳಿದಿದ್ದಾರೆಯೇ ಹೊರತು,ಅನ್ಯರು ತಿಳಿಯೋದಿಲ್ಲ-ಎಂತ ತಾತ್ಪರ್ಯ. ॥50॥

## ೨. ಭಾವಪ್ರಕಾಶಿಕೆ :-

ಈ ಗ್ರಂಥದಲ್ಲಿ ಹೇಳಿರುವ ಗುಣತಾರತಮ್ಯ ಸಂಖ್ಯೆಗಳಿಗೂ, ವಿಷ್ಣು ರಹಸ್ಯಾದಿ ಗ್ರಂಥಗಳಲ್ಲಿ ಹೇಳಿರುವ ಗುಣಗಳ ಸಂಖ್ಯೆಗಳಿಗೂ, ಒಂದು ವೇಳೆ ಹೆಚ್ಚು ಕಮ್ಮಿ ಇರಬಹುದು. ಪುರಾಣವಾಕ್ಯಗಳಲ್ಲೂ ಪರಸ್ಪರ ಹೆಚ್ಚು ಕಮ್ಮಿ ಬರುವುದು. ಆದರೂ, ಆ ವಾಕ್ಯಗಳಿಗೆ ಪರಸ್ಪರ ವಿರೋಧ ಚಿಂತಿಸಬಾರದು. ಏಕೆಂದರೆ, ಬೃಹತ್ತಾರತಮ್ಯ ವಾಕ್ಯ-"ಉಕ್ತಸಂಖ್ಯಾದಿಕತ್ವೋಕ್ತಿರ್ಯಾಸಾವೇಶ ವಿಶೇಷತಃ ॥ ಶತಂ ದಶ ಸಹಸ್ರಂಚ ನೈವ ತನ್ಮಾತ್ರವಾಚಕ॥ ಅವಿರೋಧ ಸ್ತತೋಜ್ಞೇಯೋ ನಾನಾವಾಕ್ಯೇಷುಶರ್ವಶಃ ।"-10,100,1000-ಮೊದಲಾದ ಸಂಖ್ಯೆಗಳು-10,100 ಎಂದೇ ಅರ್ಥವಲ್ಲ. 10 ಎಂದರೂ,100 ಎಂದರೂ-ಅನಂತ ಸಂಖ್ಯೆಯ ವಾಚಕವೆಂದು ಪ್ರಮಾಣವಿರುವುದರಿಂದ,ಉಕ್ತವಾದ ಸಂಖ್ಯೆಗಳನ್ನು ಅವಿರೋಧವಾಗಿ ಅನ್ವಯಿಸಿ, ಅರ್ಥಮಾಡುವುದರಿಂದ, ಪರಸ್ಪರ ವಿರೋಧ ಪರಿಹಾರವಾಗುವುದು. ಹೀಗೆ, ಅರ್ಥ ಮಾಡುವುದೇ ಸಾಧುಜನ ಸಮ್ಮತವೆಂದು ತಾತ್ಪರ್ಯ. ॥50॥

## ೩. ಭಾವದರ್ಪಣ :-

ಈ ವಿಚಾರ ಗರುಡಪುರಾಣ ವಿಷ್ಣುರಹಸ್ಯ ಭಾಗವತಾದಿ ಗ್ರಂಥಗಳಲ್ಲಿ ಬಹುಪ್ರಕಾರ ಹೇಳಿರುತ್ತದೆ. ಅದರಲ್ಲಿ ಇದು ಒಂದು ಕ್ರಮದಿಂದ ಹೇಳಿದ್ದೇವೆ. ವಿರೋಧ ಕಲ್ಪನೆ ಮಾಡೋಣ ಕೆಲಸವಿಲ್ಲೆಂದು, ಬೃಹತ್ತಾರತಮ್ಯ ಮಾಡಿದವರು ಆಡಿದ ಮಾತನ್ನೇ ಇಲ್ಲಿ ಹೇಳಿದ್ದಾರೆ- ಬಾದರಾಯಣೀತಿ. ಉಕ್ತಂಚ ತಾರತಮ್ಯೇ. -"ಉಕ್ತಸಂಖ್ಯಾಧಿಕತ್ವೋಕ್ತಿರ್ಯಾಸಾವೇಶ ವಿಶೇ

ಶತಃ । ಶತಂ ದಶಸಹಸ್ರಂಚ ನೈವ ತನ್ಮಾತ್ರವಾಚಕಂ । ಅವಿರೋಧಸ್ತತೋ ಜ್ಞೇಯೋ ನಾನಾವಾಕ್ಯೇಷು ಸರ್ವಶ"–ಇತಿ. ॥50॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

'–**ಬಾದರಾಯಣ**'–ಇತಿ ಭೇದಃ ಸಂಖ್ಯಾಭೇದಃ ಆಧಿಕ್ಯಮ್ ॥ ಆದಿತೇಯಾಃ-ದೇವಾಃ ॥ ವಿದ್ಯಾಧೀಶ ಪೂಜ್ಯ ಚರಣಾಸ್ತು ಉಕ್ತಸಂಖ್ಯಾಧಿಕತ್ವೋಕ್ತಿಃ ಯಾ ಸಾ ಆವೇಶ ವಿಶೇಷತಃ। ಶತಂ ದಶ ಸಹಸ್ರಂಚ ನೈವ ತನ್ಮಾತ್ರವಾಚಕಮ್ ॥ ಅವಿರೋಧಃ ತತಃ ಜ್ಞೇಯಃ ನಾನಾವಾಕ್ಯೇಷು ಸರ್ವಶಃ ॥ ಇತ್ಯಾಹುಃ ॥ ಇದಮುಪಲಕ್ಷಣಮ್ ॥ ತರತಮವೈಪರೀತ್ಯಂ ಗುಣೇಷು ವಿಪರೀತಜ್ಞಾನಂ ಚ ಗೃಹ್ಯತೇ ಗುಣಾನಾಂ ನ್ಯೂನ್ಯಂ ಚ ॥ ದೇವಾದಿಷ್ವೇವ ಸರ್ವೇಷು ಪ್ರೋಕ್ತಾಃ ಅಪಿ ವಿಶೇಷಿಣಃ ॥ ಪಂಚಾಶತಃ ದಶಾಂಶಾದ್ವಾ ಸ್ವಸ್ವ ಜಾಯಾಂ ಪರಸ್ಪರಮ್ ॥ ದೇವಾಃ ತ್ರಯೋದಶಾಂಶೋನಾಃ ಸ್ವಪತಿಭ್ಯಃ ತಥಾಽಪರಾಃ ॥ ಅಷ್ಟಾಂಶೋನಾಃ ಪ್ರವಿಜ್ಞೇಯಾಃ ಯಾ ಸಾಂ ಮುಕ್ತೌ ಸಹ ಸ್ಥಿತಿಃ ॥ ಅನಾದಿಷ್ಟ ವಿಶೇಷೋಽಯಂ ಸರ್ವೇಷಾಂ ಮಾನುಷಾದಿನಾಂ ॥ ಇಯಂಚ ನೀಚತಾ ಕ್ವಾಪಿ ನ ಕೇನಾಪಿ ಹ್ಯಪೋಹಿತುಮ್ ॥ ಶಕ್ಯತೇ ಯೋಽನ್ಯಥಾ ಕರ್ತುಂ ಇಚ್ಛೇತ್ ಸೋಽಪಿ ತಮೋ ವ್ರಜೇತ್ ॥ ಯೋಽಪಿ ವೇದಸಮತ್ವೇನ ಸರ್ವಾನ್ ನೀಚೋಚ್ಚತಃ ಸ್ಥಿತಾತ್ ॥ ಸೋಽಪಿ ಯಾತಿ ತಮೋ ಘೋರಂ ಯಶ್ಚ ಸಾಮ್ಯಮುದೀರಯೇತ್. ॥ ॥50॥

### ಕನ್ನಡಾರ್ಥ

–'**ಭೇದಗಳ ಪೇಳಿದನು**'–ಎಂಬಲ್ಲಿ –"ಸಂಖ್ಯೆಗಳಲ್ಲಿ ಹೆಚ್ಚು ಕಡಿಮೆಗಳನ್ನು ಹೇಳಿದನು."—ಎಂದು ಅರ್ಥ ತಿಳಿಯಬೇಕು. ದೇವತೆಗಳ ಆವೇಶಬಲಾನುಸಾರವಾಗಿ, ಗುಣ ಸಂಖ್ಯಾ ಭೇದಗಳನ್ನೂ, ಆಧಿಕ್ಯವನ್ನೂ ತಿಳಿಸಿರುವುದಾಗಿ ತಿಳಿಯಬೇಕು. ವಿದ್ಯಾಧೀಶಗುರುಗಳು –"ಹಿಂದೆ ಹೇಳಿದ ಸಂಖ್ಯೆಗಳಿಗಿಂತಲೂ ಹೆಚ್ಚಿಗೆ ಹೇಳಿರುವುದು ಆವೇಶ ವಿಶೇಷಕ್ಕೆ ಸಂಬಂಧಿಸಿದುದು.

-"ನೂರು, ಹತ್ತು, ಸಾವಿರ-ಈ ಮುಂತಾದ ಶಬ್ದಗಳಿಗೆ ನೂರು ಮುಂತಾದವುಗಳಿಂದಿಷ್ಟೇ ಅರ್ಥವಲ್ಲ. ಅವಶ್ಯಕವಿದ್ದಲ್ಲಿ, ಅವುಗಳಿಗೆ ಅನಂತ ವೆಂದೂ ಅರ್ಥವಾಗುತ್ತದೆ. ಆದುದರಿಂದ,ಯಾವ ವಾಕ್ಯದಲ್ಲಿಯೂ ವಿರೋ-ಧವು ಬರುವುದಿಲ್ಲ,"-ಎಂದು ಹೇಳಿರುವರು. ಇದರಿಂದ, ಇನ್ನೂ ಹೆಚ್ಚಿಗೆ ತಿಳಿದು ಬರುವ ವಿಷಯವೇನೆಂದರೆ.-

ತರತಮಭಾವದಲ್ಲಿ ವ್ಯತ್ಯಾಸವಿರುವುದು. ಗುಣಗಳ ಬಗ್ಗೆ ವಿಪರೀತ ವಾಗಿ ತಿಳಿದುಕೊಳುವುದು, ಗುಣಗಳಲ್ಲಿ ಹೆಚ್ಚು ಕಡಿಮೆಗಳನ್ನು ಭಾವಿಸುವುದು-ಈ ಮುಂತಾದ ಸಂದರ್ಭಗಳಲ್ಲಿ ತೋರುವ ವಿರೋಧವೂ ಸಹ ಹಿಂದೆ ತೋರಿಸಿದ ರೀತಿಯಂತೆ ಹೋಗುತ್ತದೆ. ಪರಿಹೃತವಾಗುತ್ತದೆ- ಎಂದು. ಐವತ್ತು ಅಂಶಗಳಿಂದ ಅಥವಾ ಹತ್ತು ಅಂಶಗಳಿಂದ ತನಗೂ ತನ್ನ ಹೆಂಡತಿಯಲ್ಲಿಯೂ, ಪರಸ್ಪರ ನ್ಯೂನಾಧಿಕ ಭಾವವಿರುತ್ತದೆ. ದೇವಸ್ತ್ರೀಯರಲ್ಲಿ ತಮ್ಮ ಪತಿಗಳಿಂದ ಹತ್ತು ಅಂಶಗಳಿಂದ ನ್ಯೂನತೆ ಇರುತ್ತದೆ. ಇದರಂತೆ ಮಿಕ್ಕವರಲ್ಲಿ. ಇನ್ನು ಕೆಲವರು 8 ಅಂಶಗಳಿಂದ ಕಡಿಮೆಯವರಿರುದ್ದಾರೆ. ಈ ತಾರತಮ್ಯದಿಂದ ಮುಕ್ತಿಯಲ್ಲಿಯೂ ಸಹಿತರಾಗಿರುತ್ತಾರೆ. ಮನುಷ್ಯ-ಮುಂತಾದ ಸರ್ವರಲ್ಲಿಯೂ ಸ್ವಭಾವತಃ ಈ ತಾರತಮ್ಯ ವಿಶೇಷವು ಇದ್ದೇ ಇರುವುದು.

ಈ ನೀಚೋಚ್ಚ ಭಾವವನ್ನು ಯಾರಿಗೂ ಬದಲುಮಾಡುವುದು ಸಾಧ್ಯವಿಲ್ಲ. ಹಾಗೆ ಬದಲಿಸಲು,ಇಚ್ಛಿಸುವವನೂ ಸಹ ನರಕದಲ್ಲಿ ಬೀಳುವನು.

ಅನ್ಯರನ್ನು ತನ್ನ ಸಮರೆಂದೂ ವಿಪರೀತವಾಗಿ ಭಾವಿಸುವವನೂ ಸಹ ನರಕಕ್ಕೆ ಹೋಗುವನು.

ಬಾದರಾಯಣರ ವಚನಗಳಲ್ಲಿ ಹೇಗೆ ವಿರೋಧವು ಮೂಡುವುದು ?—ಅದನ್ನು ಹೇಗೆ ನಿವಾರಿಸುವುದು ?- ಈ ಬಗ್ಗೆ ಹಿಂದೆಯೇ ವಿವರಿಸಿರುವೆವು.
॥50॥

ಈ. ಶ್ರೀಗುರುಹೃದಯ ಪ್ರಕಾಶಿಕೆ :-

ಬಾದರಾಯಣನೆಂಬ ವೇದವ್ಯಾಸದೇವರು ಭಾಗವತ ಮೊದಲಾದ ಹನ್ನೆರಡು, ಹತ್ತು, ಐದು, ಇಪ್ಪತ್ತು, ನೂರು, ಸಾವಿರ, ಹತ್ತುಸಾವಿರ-ಹೀಗೆ ಅನೇಕ ವಿಧವಾಗಿ ಗುಣತಾರತಮ್ಯಭೇದವನ್ನು ಹೇಳಿದ್ದಾರೆ. ಸ್ವೋತ್ತಮ ಆದಿತೇಯರೆಂಬ ದೇವಾವೇಶಬಲದಿಂದ ವಿರೋಧವಿಲ್ಲದೆ ಏಕವಾಕ್ಯತೆ ಬರುವುದೆಂದರ್ಥ. ವೇದವ್ಯಾಸರು ವಿರೋಧ ಹೇಳಿದ್ದಾರೆಂದು ಬಿಂತಿಸಬಾರದು. ಈ ಪ್ರಕಾರ ಹೇಳಿದ್ದು ಸಾಧುಸಮ್ಮತವು. ॥50॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಸಾಕ್ಷಾತ್ ಶ್ರೀಹರಿಯ ಅವತಾರಭೂತರಾದ ಶ್ರೀವೇದವ್ಯಾಸರು (ಬಾದರಾಯಣ) ಭಾಗವತಾದಿ ಮಹಾಪುರಾಣಗಳನ್ನೂ, ಅಷ್ಟಾದಶ ಉಪಪುರಾಣಗಳನ್ನೂ ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನೂ ಇತಿಹಾಸ ಪ್ರಸ್ಥಾನ ಪ್ರಸಿದ್ಧವಾದ ಪಂಚಮವೇದವೆಂದು ಖ್ಯಾತವಾದ ಶ್ರೀಮನ್ಮಹಾಭಾರತವನ್ನು ರಚಿಸಿದರು.

2. ಬಾದರಾಯಣಕೃತ ಸಚ್ಛಾಸ್ತ್ರಗಳಲ್ಲಿ ಹನ್ನೆರಡು (ದ್ವಾದಶ)-ಹತ್ತು (ದಶ)-ಇಪ್ಪತ್ತೈದು (ಸುಪಂಚವಿಶಂತಿ)-ನೂರು (ಶತ)-ಸಾವಿರ (ಸಹಸ್ರ)-ಹತ್ತುಸಾವಿರ (ಆಯುತು)-ಈ ರೀತಿಯಲ್ಲಿ ದೇವತಾತಾರತಮ್ಯ ಸಂಖ್ಯೆಯನ್ನು ಪರಿಪರಿ ಭೇದಗಳಿಂದ ತಿಳಿಸಿರುತ್ತಾರೆ. ಒಂದೆಡೆ, ಹನ್ನೆರಡು ಎಂಬ ಹೇಳಿ, ಇನ್ನೊಂದೆಡೆ ಅವನ್ನೇ ದಶ-ಎಂದು ಹೇಳಿರುವ ಪ್ರಸಂಗಳಿವೆ.

3. ಇದರಿಂದ, ಶ್ರೀವೇದವ್ಯಾಸರ ವಾಕ್ಯಗಳಲ್ಲಿ ಪರಸ್ಪರ ವಿರೋಧವಿದೆ-ಎಂದು ಖಂಡಿತಾ ಭಾವಿಸಬಾರದೆಂದು ತತ್ತ್ವಸಂಬಂಧವಾದ ಎಚ್ಚರಿಕೆ

ಯನ್ನು ಕೊಡುತ್ತಾರೆ ದಾಸರಾಯರು. ಎಲ್ಲವೂ ನಿಜವೇ. ಪರಸ್ಪರ ವಿರೋಧ ವಿಲ್ಲ. ಏಕನಾಕೃತಾ ಭಾವನೇ ಇದೆಯೇ ಹೊರತು, ಅನ್ಯಥಾ ಇಲ್ಲ. ವಿವಕ್ಷಾ ಭೇದ-ಎಂದು ತಾತ್ಪರ್ಯ.

**ಪ್ರಮಾಣ :-**

-"ಉಕ್ತ ಸಂಖ್ಯಾದಿಕತ್ವೋಕ್ತಿ ರ್ಯಾ ಸಾವೇಶ ವಿಶೇಷತಃ ॥
ಶತಂ ದಶ ಸಹಸ್ರಂಚ ನೈವ ತನ್ಮಾತ್ರವಾಚಕಂ ॥
ಅವಿರೋಧ ಸ್ತತೋಜ್ಞೇಯೋ ನಾನಾ ವಾಕ್ಯೇಷು ಶರ್ವಶಃ ॥"
**— ಇತಿ ಬೃಹತ್ತಾರತಮ್ಯೇ. ॥**

ಅಂದರೆ, 10,100,1000-ಮೊದಲಾದ ಸಂಖ್ಯೆಗಳು, 10,100.... ಎಂದೇ ಅರ್ಥವಲ್ಲ. ಅನಂತಸಂಖ್ಯಾವಾಚಕವೆಂದು ಪ್ರಮಾಣವಿರುವುದರಿಂದ, ಸಂಖ್ಯೆಗಳನ್ನು ಅವಿರೋಧವಾಗಿ ಅನ್ವಯಿಸಿ ಅರ್ಥೈಸಬೇಕು. ಇದರಿಂದ, ಪರಸ್ಪರ ವಿರೋಧ ಕಂಡಂತೆ ಇರುವ ದೋಷವು ಪರಿಹಾರವಾಗುವುದು. ಹೀಗೆ, ಅನ್ವಯಾರ್ಥ ಮಾಡುವುದಕ್ಕೆ ಸಾಧುಜನ ಸಮ್ಮತವೆಂದು ತಾತ್ಪರ್ಯ. **(ಸಾಧುಜನ ಸಮ್ಮತವು).**

**4.** ತಮಗೀತ ಉತ್ತಮರಲ್ಲಿ ದೇವತೆಗಳ ಆವೇಶಬಲವಿರುವುದರಿಂದ, ತಾರತಮ್ಯಕ್ರಮದಲ್ಲಿ ಸಂಖ್ಯಾವ್ಯತ್ಯಾಸವು ಕಂಡುಬಂದರೂ, ಅವು ಅವಿರೋಧವೇ-ಎಂದು ತಾತ್ಪರ್ಯ. ॥50॥

★★

## ಪದ್ಯ-೫೧

**ಮೂಲ :**

ಇವರು ಮುಕ್ತಿಗಯೋಗ್ಯರೆಂಬರು ।
ಶ್ರವಣ ಮನನಾದಿಗಳ ಪರಮೋ ।
ತ್ಸವದಿ ಮಾಡುತ ಕೇಳಿ ನಲಿಯುತ ಧರ್ಮಕಾಮಾರ್ಥ ॥
ತ್ರಿವಿಧ ಫಲಗಳಪೇಕ್ಷಿಸದೆ ಶ್ರೀ ।
ಪವನಮುಖ ದೇವಾಂತರಾತ್ಮಕ ।
ಪ್ರವರತಮ ಶಿಷ್ಟೇಷ್ಟದಾಯಕನೆಂದು ಸ್ಮರಿಸುವರು ॥೫೧॥

**ಅವತರಣಿಕೆ :-**

ಮುಕ್ತಿಯೋಗ್ಯಜೀತನರ ವಿಷಯವನ್ನು ತಿಳಿಸುತ್ತಾರೆ. ॥51॥

**ಪ್ರತಿಪದಾರ್ಥ :-**

**ಇವರು** = ಪೂರ್ವೋಕ್ತರಾವ ಬ್ರಹ್ಮಾದಿ ಮಾನುಷೋತ್ತಮರು, **ಮುಕ್ತಿಯೋಗ್ಯರೆಂಬರು** = ಮುಕ್ತಿಯೋಗ್ಯಜೀವರೆಂದು ಕರೆಸುತ್ತಾರೆ. **ಪರಮೋತ್ಸವದಿ** = ಇವರು ತಮ್ಮ ಪಕ್ವದಶಾಕಾಲದಲ್ಲಿ ಅತ್ಯಂತ ಉತ್ಸಾಹದಿಂದ, **ಶ್ರವಣ** = ಭಗವನ್ಮಾಹಾತ್ಮ್ಯ ವಿಷಯಕವಾದ ಸಚ್ಛಾಸ್ತ್ರಗಳನ್ನು ಗುರುಮುಖೇನ ಕೇಳುತ್ತಾ, **ಮನನಾದಿಗಳ** ಮನನ-ಇತ್ಯಾದಿ ನವಭಕ್ತಿಪೂರ್ವಕವಾಗಿ, **ಮಾಡುತ** = ಆಚರಿಸುತ್ತಾ, **ಕೇಳಿ** ಶ್ರವಣದ್ವಾರಾ, **ನಲಿಯುತ** = ಮೈಯುಬ್ಬಿ ಕುಣಿಯುತ್ತಾ, **ಧರ್ಮ ಕಾಮಾರ್ಥ** = ಧರ್ಮ-ಅರ್ಥ-ಕಾಮ, **ತ್ರಿವಿಧ ಫಲಗಳ** = ಇತ್ಯಾದಿ ಐಹಿಕಪ್ರಯೋಜನಗಳಾದ ಮೂರು ವಿಧವಾದ ಪುರುಷಾರ್ಥಗಳ ಫಲಗಳನ್ನು, **ಅಪೇಕ್ಷಿಸದೆ** = ಇಚ್ಛಾಮಾಡದೇ,

**ಶ್ರೀ** = ಶ್ರೀಲಕ್ಷ್ಮೀದೇವಿ, **ಪವನಮುಖ** = ವಾಯುದೇವರು ಮೊದಲಾದ, **ದೇವಾಂತರಾತ್ಮಕ** = ತತ್ತ್ವಾಭಿಮಾನಿ ದೇವತಾಂತರ್ಗತನಾದ, **ಪ್ರವರತಮ** = ಅತ್ಯಂತ ಶ್ರೇಷ್ಠನಾದ (ಸರ್ವೋತ್ತಮನಾದ), ಶ್ರೀಹರಿಯನ್ನು, **ಶಿಷ್ಟ** = ನಿಷ್ಕಾಮರಾದ ಶ್ರೇಷ್ಠರಾದ ತನ್ನ ಭಕ್ತರಿಗೆ, **ಇಷ್ಟಾರ್ಥದಾಯಕನೆಂದು** = ಸಕಲಾಭೀಷ್ಟಗಳನ್ನು ಕೊಡುವವನೆಂದು. **ಸ್ಮರಿಸುತಿರುವರು** = ತಿಳಿದು, ಧ್ಯಾನ ಉಪಾಸನಾದಿಗಳಿಂದ ಸದಾ ನೆನೆಯುತ್ತಿರುವವರು. ॥51॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನ್ನ ಸ್ಮರಣೆ ಮಾಡುತ್ತಿರೆಂದು ಹೇಳತಾರೆ.

ಪೂರ್ವೋಕ್ತ ಬ್ರಹ್ಮಾದಿ ಮನುಷ್ಯೋತ್ತಮ ಹಾಂಗೆ, ತೃಣಾಂತರಾದ ಮಾನುಷ್ಯೋತ್ತಮರಲ್ಲಿ ಅಂತರ್ಭೂತರಾದ ತದವರರು-ಎಂತ ತಾತ್ಪರ್ಯ, ಈ ಯಾವತ್ತೂ ಪುಂದಿ ಮುಕ್ತಿಯೋಗ್ಯರೆಂದು ಕರಸತಕ್ಕವರು. ಇವರು ಪಕ್ವ ಸಾಧನಕಾಲ ಪ್ರಾಪ್ತವಾದಾಗ್ಗೆ, ಅತ್ಯಂತ ಉತ್ಸಾಹದಲ್ಲಿ, ಶ್ರೀಮದಾನಂದ ತೀರ್ಥರಿಂದ ರಚಿತವಾದ ಸಚ್ಛಾಸ್ತ್ರವನ್ನು ಗುರುಮುಖದಿಂದ ಶ್ರವಣ ಮಾಡೋಣವೇನು,ಆ ಮಾಡಿದ್ದವರನ್ನು ಮರೆಯದೆ ಮನನ ಮಾಡೋಣವೇನು ಇತ್ಯಾದಿಗಳು ಸರ್ವದಾ ಮಾಡತಾ, ಭಗವನ್ಮಾಹಾತ್ಮ್ಯ ಕೇಳಿ ಕುಣಿದಾಡತಾ, ಧರ್ಮವೇನು, ಅರ್ಥವೇನು, ಕಾಮವೇನು,-ಈ ಪ್ರಕಾರ ಐಹಿಕಪ್ರಯೋಜನಗಳಾದ ಈ ಮೂರು ಫಲಗಳ ಅಪೇಕ್ಷಾ ಮಾಡದೆ ನಿಷ್ಕಾಮರಾಗಿ, ಲಕ್ಷ್ಮೀ-ದೇವೇರು, ವಾಯುದೇವರು-ಮೊದಲಾದ ಚತುರ್ವಿಂಶತಿ ತತ್ತ್ವಾಭಿಮಾನಿ ದೇವತಾಂತರ್ಗತನಾದ ಶ್ರೀಭಾರತೀರಮಣ ಮುಖ್ಯಪ್ರಾಣ ಮಹತ್ತತ್ತ್ವ, ರಮಾಭಿಮನ್ಯವಾದ ಅವ್ಯಕ್ತತತ್ತ್ವ, ಗೋಳಕಾಂತರ್ಗತ ಅಂತರಾತ್ಮಕನಾಮ ವಾಚ್ಯನಾದ ಪರಮಾತ್ಮನ್ನ,ಶ್ರೇಷ್ಠರೊಳಗೆ ಅಸದೃಶನಾದ ಅತಿಶ್ರೇಷ್ಠ,ಎಂತಲೂ,

ತಿಷ್ಟರಾದ, ನಿಷ್ಕಾಮರಾದ ಭಗವದ್ಭಕ್ತರಿಗೆ ಇಷ್ಟರೂಪವಾದ ತನ್ನ ಅಪ ರೋಕ್ಷವನ್ನು ಕೊಡತಕ್ಕವನೆಂತಲೂ ತಿಳಿದು, ಧ್ಯಾನೋಪಾಸನಾದಿಗಳಿಂದ ಸ್ಮರಿ ಸುತ್ತಾ ಇರೋರು. ಭಗವದನುಗ್ರಹ ಸಂಪಾದಿಸಬೇಕೆಂಬುವ ಐಹಿಕ ವಿಷಯಾದಿ ಗಳಲ್ಲಿ ಪದ್ಮಪತ್ರಗತ ಉದಕದೋಪಾದಿಯಲ್ಲಿದ್ದು, ಭಗವಂತನಲ್ಲಿ ಲಿಪ್ತವಾದ ಮನಸ್ಸುಳ್ಳವನಾಗಬೇಕಂತ ಭಾವವು. ॥51॥

## ೨. ಭಾವಪ್ರಕಾಶಿಕೆ :-

ಪರಮಾತ್ಮನ ಕಥೆಗಳನ್ನು ಬಹು ಸಂತೋಷದಿಂದ ಶ್ರವಣ ಮಾಡುತ್ತಾ, ಶ್ರವಣ ಮಾಡಿದುದನ್ನು ಮನನ ಮಾಡಿ, ಆನಂದದಿಂದ ಮೈಮರೆತು, ಕುಣಿ ಯುತ್ತಾ, ಮನನಾದಿ-ಎಂಬ ಆದಿ ಶಬ್ದದಿಂದ, ಕೀರ್ತನೆ, ಸ್ಮರಣೆ-ಮೊದ ಲಾದ 9 ವಿಧಭಕ್ತಿಯನ್ನೂ ತೆಗೆದುಕೊಳ್ಳಬೇಕು. -"ಶ್ರವಣಂ, ಕೀರ್ತನಂ, ವಿಷ್ಣೋಃ ಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ"॥-ಎಂಬ 9 ವಿಧ ಭಕ್ತಿಯಿಂದ ಪರಮಾತ್ಮನನ್ನು ಭಜಿಸುತ್ತಾ, ಧರ್ಮ, ಅರ್ಥ, ಕಾಮಗಳೆಂಬ ಮೂರು ವಿಧ ಪುರುಷಾರ್ಥಗಳನ್ನು ಬೇಡದೇ, ಲಕ್ಷ್ಮೀ, ಬ್ರಹ್ಮ,-ಮೊದಲಾದ ಸಕಲದೇವತೆಗಳ ಅಂತರ್ಯಾಮಿಯಾದ, ಸಕಲ ದೇವತಾಶ್ರೇಷ್ಠತಮನಾದ ಶ್ರೀಪರಮಾತ್ಮನು, ಭಕ್ತರ ಇಷ್ಟಗಳನ್ನು ಪೂರೈಸು ವವನೆಂದು, ಸರ್ವದಾ ಹರಿಯನ್ನು ಮರೆಯದೆ ಚಿಂತಿಸುವವರಾರೋ, ಅವರೇ ಮುಕ್ತಿಯೋಗ್ಯರೆಂದು, ವಿಷ್ಣುರಹಸ್ಯ-ಮುಂತಾದ ಪುರಾಣಾದಿಗಳಲ್ಲಿ ಮುಕ್ತಿ ಯೋಗ್ಯರ ಲಕ್ಷಣವನ್ನು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸಾರ್ಯರು ಇಲ್ಲಿ ಹೇಳಿರುತ್ತಾರೆಂದು ತಿಳಿಯಬೇಕು. ॥51॥

## ೩. ಭಾವದರ್ಪಣ :-

ಶ್ರವಣ, ಮನನಾದಿಗಳು ಮಾಡಿಕೊಂಡು ಬಿಂಬಕ್ರಿಯಾಪೂರ್ವಕ, ಉಪಾ ಸನೆ ಮಾಡತಕ್ಕವರೇ ಮುಕ್ತಿಯೋಗ್ಯರೆಂದು ಹೇಳುತ್ತಾರೆ, ಇವರು. ॥51॥

## ೪. ಶ್ರೀ ವ್ಯಾಸದಾಸಸಿದ್ಧಾಂತಕೌಮುದೀ :–

-«ಇವರು»–ಇತಿ ॥ ನರೋತ್ತಮಃ ॥ ಶಿಷ್ಟೇಷ್ಟದಾಯಕ ಇತಿ ವ್ಯಾಖ್ಯಾ × ಓಂ ॥ ವಿಶಿಷ್ಟೇಷ್ಟಾರೋಚನೇ ದಿವಃ ಯದ್ವಾನಾ ನ ಪುರುಷಮವ್ ॥ ಪುರುಷಾಳಾವೃತ್ರಹೇಂದ್ರೋ ನಾಮಾನ್ಯಪ್ರಾ ಅಚೇತಿ ಪ್ರಾಸಹ ಸ್ಮತಿ ಓಂ ॥ × ಶಿಷ್ಟಾನಾಂ ಮುಕ್ತದೇವರ್ಷ್ಯಾದೀನಾಂ ಇಷ್ಟಂ ಕಾಮಪೂರಣಂ ಯಸ್ಮಾತ್ ಸಃ ತಥೋಕ್ತಃ. ॥51॥

### ಕನ್ನಡಾರ್ಥ

ಇವರು–ಎಂದರೆ.ಮನುಷ್ಯೋತ್ತಮರೆಂದು ತಿಳಿಯಬೇಕು. ಶಿಷ್ಟೇಷ್ಟ ದಾಯಕ.ಎಂಬ ವಿಶೇಷಣವು-'ಶಿಷ್ಟೇಷ್ಟ'-ಎಂಬ ವಿಷ್ಣುಸಹಸ್ರನಾಮದ ಅರ್ಥ ವನ್ನು ವಿವರಿಸುವುದು.

ಶಿಷ್ಟರೆನಿಸಿದ ಮುಕ್ತದೇವ, ಋಷಿ-ಮುಂತಾದವರಿಗೆ ಇಷ್ಟ ಪೂರೈಸು ವವನು–ಎಂಬುದು ಬೃಹತೀಮಂತ್ರಾನುಗುಣವಾದ ಅರ್ಥ. ॥51॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಮುಕ್ತಿಯೋಗ್ಯರ ಲಕ್ಷಣವನ್ನು ಹೇಳುತ್ತಾರೆ- ಇವರು-ಎಂದು. ಶ್ರವಣ-ಮನನವೆಂಬ ಶ್ರುತ್ಯರ್ಥ ಚಿಂತನೆ–ಮೊದಲಾದ ಸಾಧನವನ್ನು ಪರಮ ಸಂತೋಷದಿಂದ ಆಚರಿಸುತ್ತಾ, ತಾವು ಮತ್ತೊಬ್ಬರಿಗೆ ಹೇಳಿ, ಸಂತೋಷಿ ಸುತ್ತಾ, ಧರ್ಮಕಾಮಾರ್ಥಗಳೆಂಬ ಮೂರು ಫಲಗಳನ್ನು ಅಪೇಕ್ಷಿಸದೆ, ಶ್ರೀ ಪ್ರಾಣಮುಖ್ಯದೇವತಾಂತರ್ಯಾಮಿ ಶ್ರೀವಿಷ್ಣುವೇ ಪ್ರವರತಮನೆಂದರೆ, ಸರ್ವೋ ತ್ತಮನು-ಸ್ವತಂತ್ರನು-ಶಿಷ್ಟರಿಗೆ ಇಷ್ಟಪ್ರದನೆಂದು- ಸ್ಮರಿಸುವರು ಮುಕ್ತಿಯೋಗ್ಯ ರೆಂದು ಅಭಿಪ್ರಾಯ. ॥51॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಮುಕ್ತಿಯೋಗ್ಯಚೇತನರ ಲಕ್ಷಣವನ್ನು ತಿಳಿಸುತ್ತಾರೆ-ಪ್ರಸಕ್ತಪದ್ಯದಿಂದ.

2. ಹಿಂದಿನ ಪದ್ಯಶ್ರೇಣಿಗಳಲ್ಲಿ ತಿಳಿಸಿದ ಬ್ರಹ್ಮಾದಿ ತೃಣಾಂತ ಸಾತ್ವಿಕ ಜೀವಗಣವು ಮುಕ್ತಿಯೋಗ್ಯ-ರೆಂದು ಕರೆಯಿಸುವುದು. ಅವರಿಗೆ ಬ್ರಹ್ಮಕಲ್ಪಾವಸಾನದಲ್ಲಿ ಬ್ರಹ್ಮಣಾ ಸಹ ವಿರಾಜನದಿಯಲ್ಲಿ ಸ್ನಾನಾನಂತರ, ಕರ್ಮಬಂಧನದಿಂದ ವಿಮುಕ್ತಿ. ಅವರವರ ತಾರತಮ್ಯಾನುಸಾರ ವೈಕುಂಠಾದಿ ನಿತ್ಯಮುಕ್ತಿಸ್ಥಾನಗಳಲ್ಲಿ ಆವಾಸ. ಸ್ವಸ್ವರೂಪಾನಂದಾವಿರ್ಭಾವ ರೂಪವಾದ ಮೋಕ್ಷಾನಂದಪ್ರಾಪ್ತಿ. ಮುಕ್ತಿಯಲ್ಲಿಯೂ ಸಹ ಆನಂದತಾರತಮ್ಯದಿಂದ ಯುಕ್ತರಾಗಿರುತ್ತಾರೆ.

3. ಅಂತಹ ಮುಕ್ತಿಯೋಗ್ಯಜೀವರು ಈ ಜಗತ್ತಿನಲ್ಲಿ ಸದಾ ಭಗವನ್ಮಹಿಮೆಗಳನ್ನು ಗುರೂಪದೇಶ ದ್ವಾರಾ ಕೇಳುತ್ತಾ, ಆನಂದ ಪಡುವರು (**ಶ್ರವಣ.**)

4. ಕೇಳಿದ ವಿಷಯಗಳನ್ನು ಮನಸಾ ಸ್ಮರಣೆಮಾಡುತ್ತಾ, ಮನನ ಮಾಡುತ್ತಿರುತ್ತಾರೆ. -"ಆದಿ"-ಶಬ್ದದಿಂದ, ಕೀರ್ತನೆ, ಸ್ಮರಣೆ-ಇತ್ಯಾದಿ ನವ ಭಕ್ತಿಯುಕ್ತರಾಗಿರುತ್ತಾರೆ.

-"ಶ್ರವಣಂ, ಕೀರ್ತನಂ, ವಿಷ್ಣೋಃ ಸ್ಮರಣಂ. ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ ಮತ್ತು ಆತ್ಮನಿವೇದನಮ್"-ಎಂಬ ನವವಿಧವಾದ ಭಕ್ತಿಯಿಂದ ಭಗವದುಪಾಸನಾ ನಿರತರಾಗಿರುತ್ತಾರೆ.

5. ಭಕ್ತಿಯ ಉದ್ರೇಕದಿಂದ ಪರವಶರಾಗಿ, ಆನಂದತುಂದಿಲರಾಗಿ, ಸದಾ ನರ್ತನ ಮಾಡುತ್ತಾ, ಅತ್ಯಂತ ಉತ್ಸಾಹಭರಿತರಾಗಿರುತ್ತಾರೆ. (**ಹರಿತೋಷೋತ್ಸವದಿ**).

6. ಎಂದೆಂದಿಗೂ ಧರ್ಮ–ಕಾಮ–ಅರ್ಥಗಳೆಂಬ ಮೂರು ವಿಧವಾದ ಪುರುಷಾರ್ಥಗಳನ್ನು ತಮ್ಮ ಅಪೇಕ್ಷಾಪೂರ್ತಿಗಾಗಿ ಶ್ರೀಹರಿಯಲ್ಲಿ ಬೇಡರು. ಕೇವಲ ಮೋಕ್ಷಾಪೇಕ್ಷಿಗಳಾಗಿ, ನಿಷ್ಕಾಮಕರ್ಮಸಕ್ತರಾಗಿರುತ್ತಾರೆ.

7. ಶ್ರೀಲಕ್ಷ್ಮೀದೇವಿ-ಶ್ರೀವಾಯುದೇವರೇ–ಮೊದಲಾದ ಸಕಲ ತತ್ತ್ವಾಭಿಮಾನಿದೇವತೆಗಳ ಅಂತರ್ಯಾಮಿಯಾಗಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದೂ, ಶಿಷ್ಯರಾದ ತನ್ನ ಏಕಾಂತಭಕ್ತರಿಗೆ ಸಕಲಾಭೀಷ್ಟಪ್ರದನೆಂದೂ, ತಿಳಿದು, ಉತ್ತಮ ಜ್ಞಾನಾನುಸಂಧಾನದಿಂದ, ಶ್ರೀಹರಿಯ ಮಹಾಮಹಿಮೆಗಳನ್ನೂ, ಅವನ ಮಂಗಳ ಗುಣಗಳನ್ನೂ–ಅನವತರವೂ ಮನಸ್ಸಿನಲ್ಲಿ ಸ್ಮರಿಸುತ್ತಿರುವರು. ‖51‖

**

## ಪದ್ಯ-೫೨

ಮೂಲ:–

ನಿತ್ಯ ಸಂಸಾರಿಗಳು ಗುಣದೋ |
ಷಾತ್ಮಕರು ಬ್ರಹ್ಮಾದಿಜೀವರ |
ಭೃತ್ಯರೆಂಬರು ರಾಜನೋಪಾದಿಯಲಿ ಹರಿಯೆಂಬ ||
ಕೃತ್ತಿವಾಸನು ಬ್ರಹ್ಮ ಶ್ರೀ ವಿ |
ಷ್ಣುತ್ರಯರು ಸಮ ದುಃಖಸುಖ ಉ |
ತ್ಪತ್ತಿ ಮೃತಿ ಭಯ ಪೇಳುವರು ಅವತಾರಗಳಿಗೆ ಸದಾ ||೫೨||

**ಅವತರಣಿಕೆ :-**

ನಿತ್ಯಸಂಸಾರಿಜೀವರ ವಿಷಯವನ್ನು ತಿಳಿಸುತ್ತಾರೆ. ॥52॥

**ಪ್ರತಿಪದಾರ್ಥ :-**

**ನಿತ್ಯಸಂಸಾರಿಗಳು** = ಸುಖದುಃಖ ಮಿಶ್ರವಾದ ಸ್ವರೂಪಗತಗುಣವುಳ್ಳ ರಜೋಜೀವರು, **ಗುಣ** = ಗುಣದಿಂದ ಜನ್ಯವಾದ ಸುಖ, **ದೋಷ** = ತಮೋಗುಣದಿಂದ ಜನ್ಯವಾದ ದುಃಖ, **ಆತ್ಮಕರು** = ಹೀಗೆ ಗುಣ ದೋಷ ಜನ್ಯಗಳಾದ ಸುಖದುಃಖ ಮಿಶ್ರವಾದ ಸ್ವರೂಪಗತ ಧರ್ಮವುಳ್ಳವರು. **ಹರಿಯು** = ಶ್ರೀಮನ್ನಾರಾಯಣನು, **ರಾಜನೋಪಾದಿಯಲಿ** = ರಾಜನಿದ್ದಂತೆ ಇರುವವನೆಂತಲೂ, **ಬ್ರಹ್ಮಾದಿ ಜೀವರು** = ಬ್ರಹ್ಮದೇವರಿಂದ ಮೊದಲು ಮಾಡಿ, ಸಕಲ ಜೀವರೂ, **ಭೃತ್ಯರೆಂಬರು** = ರಾಜನಾದ ಶ್ರೀಹರಿಗೆ ಭೃತ್ಯರಾಗಿದ್ದರೆಂತಲೂ ಹೇಳುವರು. **ಕೃತ್ತಿವಾಸನು** = ರುದ್ರದೇವರು, **ಬ್ರಹ್ಮ** = ಬ್ರಹ್ಮದೇವರು, **ಶ್ರೀವಿಷ್ಣು** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು, **ತ್ರಯರು** = ಈ ಮೂರು ಮಂದಿಯೂ, **ಸಮ** = ಪರಸ್ಪರ ಸಮಾನರು. **ದುಃಖ** = ಈ ಮೂವರಿಗೂ ಕ್ಲೇಶ, **ಸುಖ** = ಆನಂದ, **ಉತ್ಪತ್ತಿ** = ಜನನ, **ಮೃತಿ** = ಮರಣ, **ಭಯ** = ಇತರರಿಂದ ಉಂಟಾಗುವ ಭೀತಿ, ಇವುಗಳು (ದೋಷಾದಿಗಳು), **ಅವತಾರಗಳಿಗೆ** = ಸಾಮಾನ್ಯದೇವತೆಗಳಿಗಿದ್ದಂತೆ. ಶ್ರೀಹರಿಯ ನಾನಾ ಅವತಾರಗಳಿಗೂ, **ಸದಾ** = ಅನಾದ್ಯನಂತಕಾಲಗಳಲ್ಲೂ, **ಪೇಳುವರು** = ಇವೆ ಎಂದು ಸಂದೇಹಗ್ರಸ್ತರಾಗಿ ಹೇಳುವರು. ॥52॥

## ವ್ಯಾಖ್ಯಾನಗಳು

೧. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-**

ಇದುವರೆವಿಗೂ ಮುಕ್ತಿಯೋಗ್ಯರ ವಿಚಾರ ಮುಗಿಯಿತು. ಇನ್ನು ಮ್ಯಾಲೆ, ನಿತ್ಯಸಂಸಾರಿಗಳ ವಿಚಾರ ಹೇಳತಾರೆ.

ಪ್ರಮಾಣ :-

**ತತ್ರ ಸಂಸೃತಿ ಬದ್ಧಾಸ್ತು ಗುಣದೋಷ ಭಯಾತ್ಮಕಾಃ ।**
**ತತ್ಕೋಟ್ಯಾ ರಾಜವದ್ವಿಷ್ಣೋಃ ಸರ್ವಾಧಿಕ್ಯೇ ಸಸಂಶಯಾಃ ॥**
**ಜಾನಂತ್ಯಥಾಪಿ ಬ್ರಹ್ಮಾದಿ ದೇವಾನಾಂ ॥**
**—ಇತಿ ಸತ್ತತ್ತ್ವರತ್ನಮಾಲಾಯಾಂ ॥**

ಪಂಚಭೇದಾತ್ಮಕ ಗುಣ, ತಾರತಮ್ಯಶೂನ್ಯವಾದ ದೋಷ-ಈ ಎರಡ ರಿಂದ ನಿತ್ಯವಾದ, ಸ್ವರೂಪಸ್ವಭಾವದಲ್ಲಿ ಅನಾದ್ಯನಂತಕಾಲದಲ್ಲಿ, ನಿತ್ಯವಾಗಿ ಪ್ರಚುರರಾದವರು, ಸುಖದುಃಖ ಭೋಗಾವಸ್ಥಾ, ಸ್ವರೂಪದಲ್ಲಿ ವಿದ್ಯಮಾನ ವಾದ ಪೂರ್ವೋಕ್ತ ಗುಣಕ್ಕೆ ಸುಖ, ದೋಷಕ್ಕೆ ದುಃಖ—ಎರಡು ಮಿಶ್ರವಾಗಿ ಗುಣದೋಷಗಳ ಆಶ್ರಯಿಸಿ, ಸ್ವರೂಪದಲ್ಲಿ ನಿತ್ಯವಾಗಿ ಅವೆ. ಇತ್ಯಾದಿ ಲಕ್ಷಣ ಗಳು ಸ್ವರೂಪದಲ್ಲಿ ದಾರಿಗೆ ಅವೋ,ಅವರೇ ನಿತ್ಯಸಂಸಾರಿಜೀವರೆಂದು ತಾತ್ಪರ್ಯ.

ಇವರ ಜ್ಞಾನ-ಎಂಥಾದ್ದೆಂದರೆ, ಸರ್ವೋತ್ತಮನಾದ ಶ್ರೀಪರಮಾತ್ಮ ಲೋಕದಲ್ಲಿ ಅನೇಕ ಮಂದಿ ರಾಜರು ಇದ್ದೋಪಾದಿಯಲ್ಲಿ, ಅನೇಕ ಮಂದಿ ದೇವತೆಗಳೊಳಗೆ ಇವನೂ ಒಬ್ಬ ಎಂತಲೂ, ಬ್ರಹ್ಮಾದಿ ಜೀವರು ಇಂತಹ ರಾಜನಾದ ಹರಿಗೆ ಭೃತ್ಯರು ಎಂತಲೂ ಹೇಳೋವರಾಗತಾರೆ, ಮತ್ತು ರುದ್ರ ದೇವರು,ಬ್ರಹ್ಮದೇವರು, ಕಾಂತಿಸಂಪನ್ನನಾದ ಶ್ರೀವಿಷ್ಣು-ಈ ಮೂರು ಮಂದಿ ಸಮಾನರು. ಲೋಕದಲ್ಲಿ ಸಮಾನರಾಜರು ಅನೇಕ ಮಂದಿ ಇದ್ದೋಪಾದಿ ಯಲ್ಲಿ, ಈ ಮೂರು ಮಂದಿಗಳು ಎಂತ ತಾತ್ಪರ್ಯ. ಈ ಮೂರು ಮಂದಿಗೆ, ಸುಖ ದುಃಖ, ಜನನ ಮರಣ, ಪರರಿಂದ ಪ್ರಾಪ್ತವಾಗುವ ಭಯವೇನು— ಇತ್ಯಾದಿಗಳು ಅನಾದ್ಯನಂತಕಾಲಕ್ಕೂ, ದೇವತೆಗಳ ಅವತಾರಗಳಿಗೆ ಇದ್ದೋ ಪಾದಿಯಲ್ಲಿ, ಶ್ರೀಪರಮಾತ್ಮನ ಅವತಾರಗಳಿಗೆ ಉಂಟು-ಎಂತ ಹೇಳೋವರಾಗ ತಾರೆ.

ಈ ಪ್ರಕಾರ, ಎನತಕ್ಕವರು- ಯಾವತ್ತು ಮಂದಿಗಳು ನಿತ್ಯಸಂಸಾರಿಗಳೆಂದು ತಾತ್ಪರ್ಯ. ಇವರು ಪಂಚಭೇದ ಅಂಗೀಕಾರ ಮಾಡಿ, ತಾರತಮ್ಯ ಒಡಂಬಡನೆ, ಪರಮಾತ್ಮನ ಸರ್ವೋತ್ತಮತ್ವದಲ್ಲಿ ಸಂದೇಹಜ್ಞಾನಯುಕ್ತರಾಗಿ, ಶ್ರೀದೇವರು ಅನೇಕ ಮಂದಿ ದೇವತೆಗಳಲ್ಲಿ, ಇವ ಒಬ್ಬ ದೇವರು-ಎಂತ ತಿಳಿದಿರುತ್ತಾರಾದ ಕಡಿಯಿಂದ,ಇವರು ನಿತ್ಯಸಂಸಾರಿಗಳು-ಎಂತ ತಾತ್ಪರ್ಯ. ॥52॥

## ೨. ಭಾವಪ್ರಕಾಶಿಕೆ :-

ನಿತ್ಯಸಂಸಾರಿಗಳು ಯಾವ ಕಾಲದಲ್ಲೂ,ಗುಣದೋಷಮಿಶ್ರವಾದ ಸ್ವಭಾವವುಳ್ಳವರು. ಇವರ ಉಪಾಸನೆಯ ಪ್ರಕಾರವು ಹೀಗಿರುತ್ತದೆ. ಪರಮಾತ್ಮನು ಸಾಧಾರಣ ಒಬ್ಬ ರಾಜನಂತೆ ಪ್ರಜಾಧಿಪತಿ-ಎಂದು ಮಾತ್ರ ತಿಳಿದಿರುವರು. ಅಂದರೆ, ರಾಜನಿಗೆ ಮೇಲೆ,ಚಕ್ರವರ್ತಿ ಹೇಗಿರುವನೋ ಹಾಗೆ,ಪರಮಾತ್ಮನಿಗೂ ಪ್ರೇರಕನು ಇರಬಹುದು-ಎಂದು ಸರ್ವಾಧಿಕ್ಯವಿಷಯದಲ್ಲಿ ಸಂಶಯಗ್ರಸ್ತರಾಗಿರುವರು. ಆದರೂ, ಬ್ರಹ್ಮಾದಿ ದೇವತೆಗಳು ಪರಮಾತ್ಮನ ಪರಿವಾರರೆಂದು ತಿಳಿದಿರುವರು. ಬ್ರಹ್ಮದೇವರು, ರುದ್ರದೇವರು,ಶ್ರೀವಿಷ್ಣು-ಇವರು ಮೂವರು ಸಮರು. ರಾಮಕೃಷ್ಣಾದಿ ಅವತಾರಗಳಲ್ಲಿ ಸುಖ, ದುಃಖ, ಉತ್ಪತ್ತಿ, ನಾಶ, ಭಯ-ಮೊದಲಾದವುಗಳುಂಟೆಂದು ಭಾವಿಸುವರು. ಆದುದರಿಂದಲೇ, ಇವರಿಗೆ ನಿತ್ಯಸಂಸಾರರೂಪವಾದ ಸಾಂತಾನಿಕಲೋಕ ಪ್ರಾಪ್ತಿಯಾಗುವುದು. ಅಲ್ಲಿ ಸುಖ, ದುಃಖ, ಮಿಶ್ರಫಲವನ್ನು ಅನುಭವಿಸುತ್ತಿರುವರು. ॥52॥

## ೩. ಭಾವದರ್ಪಣ :-

ನಿತ್ಯಸಂಸಾರಿಗಳ ಲಕ್ಷಣ ಹೇಳುತ್ತಾರೆ. ನಿತ್ಯೇತಿ । ಯಥೋಕ್ತಂ ಸತ್ತತ್ವರತ್ನಮಾಲಾಯಾಂ । -"ತತ್ರ ಸಂಸೃತಿಬದ್ಧಾಸ್ತು ಗುಣದೋಷೋಭಯಾತ್ಮಕಃ । ತತ್ರೋಚ್ಚಾ ರಾಜವದ್ವಿಷ್ಣೋಃ ಸರ್ವಾಧಿಕ್ಯೇಷು ಸಂಶಯಾಃ । ಜಾನಂತ್ಯಥಾಪಿ ಬ್ರಹ್ಮಾದಿ ದೇವಾನಾಂ ಪರಿವಾರತಾಮಿತಿ ।"-ಇವರಿಗೆ ಗತಿ ಆಗೋ

ವಿಷಯದಲ್ಲಿ ಮಂಗಳಸಂಧಿ. 4ನೇ ಪದ್ಯದ ವ್ಯಾಖ್ಯಾನದಲ್ಲಿ ವಿವರ ಮಾಡಿಯದೆ. ಅಲ್ಲೇ ನೋಡತಕ್ಕದ್ದು. ॥52॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-**

-'ನಿತ್ಯ'-ಇತಿ ॥ ವಿವೃತಮನ್ಯತ್ರ. ॥52॥

### ಕನ್ನಡಾರ್ಥ

ಈ ನಿತ್ಯಜೀವರ ವಿಷಯವಾಗಿ ಬೇರೆ ಕಡೆಯಲ್ಲಿ ವಿವರಿಸಲಾಗಿರುತ್ತದೆ.

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ನಿತ್ಯಸಂಸಾರಿಗಳ ಲಕ್ಷಣವನ್ನು ಹೇಳುತ್ತಾರೆ. ನಿತ್ಯಸಂಸಾರಿಗಳು ಎಂದು. ರಾಜನ ಹಾಗೆಯೇ ದೇವರು-ಎಂದು ವಿಷ್ಣುಸರ್ವೋತ್ತಮತ್ವ- ಜ್ಞಾನ ಗುಣ ಇದ್ದಾಗ್ಯೂ, ಬ್ರಹ್ಮಾದಿ ಜೀವರು ದೇವರ ಭೃತ್ಯರೆಂದು, ಭೇದಜ್ಞಾನಗುಣ ಇದ್ದಾಗ್ಯೂ ದೇವರ ಸರ್ವಸ್ವಾತಂತ್ರ್ಯ ದೋಷ, ಒಂದು ಬ್ರಹ್ಮವಿಷ್ಣು ಶಿವರು ಸಮಾನರೆಂದು ತಿಳಿಯುವ ದೋಷ ಒಂದು, ವಿಷ್ಣು ಅವತಾರಕ್ಕೆ ಉತ್ಪತ್ತಿ ಮೃತಿ ಭಯಗಳನ್ನು ಹೇಳುವ ದೋಷ ಒಂದು. ಹೀಗೆ, ಸದಾ ಗುಣದೋಷ ಯುಕ್ತಚಿತ್ತರಾದವರು ನಿತ್ಯಸಂಸಾರಿ ಜೀವರೆಂದು ತಿಳಿಯಬೇಕೆಂದು ಅರ್ಥ. ॥52॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಿಂದ **ನಿತ್ಯಸಂಸಾರಿಗಳ** ವಿಷಯ ತಿಳಿಸುತ್ತಾರೆ.

2. ಮಧ್ಯಮಜೀವರಾದ ರಜೋಜೀವರೇ ನಿತ್ಯಸಂಸಾರಿಗಳು. ಇವರು ಮಿಶ್ರಜೀವರು. ಸ್ವರೂಪತಃ ಸುಖದುಃಖ ಮಿಶ್ರವಾದ ಧರ್ಮ ಉಳ್ಳವರು. **(ಗುಣದೋಷಾತ್ಮಕರು).**

3. ಭಿದ್ರಭಕ್ತಿ, ಮಿಶ್ರಜ್ಞಾನ.-ಈ ವರ್ಗದ ಜೀವರ ಲಕ್ಷಣವು. ಆಪತ್ತಿನಲ್ಲಿ ಶ್ರೀಹರಿಯ ಸ್ಮರಣೆ,ಸುಖ ಸ್ಥಿತಿಯಲ್ಲಿ ಅಹಂಕರ್ತೃಭಾವ ಮತ್ತು ಶ್ರೀಹರಿಯು ಪೂರ್ಣ ವಿಸ್ಮರಣೆ.-ನಿತ್ಯಸಂಸಾರಿಗಳ ಮುಖ್ಯ ಲಕ್ಷಣವು.

4. ಅವರ ದೃಷ್ಟಿಯಲ್ಲಿ ಶ್ರೀಹರಿಯು ಸಾಮಾನ್ಯವಾದ ರಾಜರಲ್ಲಿ ಒಬ್ಬ ರಾಜನಂತಿದ್ದಾನೆ. ರಾಜನಿಗೆ ಮೇಲೆ ಚಕ್ರವರ್ತಿ ಇರುವಂತೆ, ಪರಮಾತ್ಮನಿಗೂ ಪ್ರೇರಕರು ಇರಬಹುದು.-ಎಂದು ಶ್ರೀಹರಿಯ ಸರ್ವಾಧಿಕ್ಯವಿಷಯದಲ್ಲಿ ಸಂಶಯಗ್ರಸ್ತಜ್ಞಾನ ಉಳ್ಳವರು. ಬ್ರಹ್ಮಾದಿ ದೇವತೆಗಳು ರಾಜನಿಗೆ ಕಿಂಕರಿರುವಂತೆ, ಪರಮಾತ್ಮನ ಭೃತ್ಯರೆಂದು ಅವರ ಜ್ಞಾನಿಸ್ವರೂಪವು.

5. ಆನೆಯ ಚರ್ಮವನ್ನು ಹೊದ್ದುಕೊಂಡು, ಹುಲಿಯ ತೊಗಲನ್ನು ಉಟ್ಟುಕೊಂಡಿರುವುದರಿಂದ, ಶ್ರೀರುದ್ರದೇವರಿಗೆ **ಕೃತ್ತಿವಾಸ**-ನೆಂದು ಹೆಸರು. (ಕೃತ್ತಿ-ಚರ್ಮ-ತೊಗಲು). ರುದ್ರದೇವರು-ಬ್ರಹ್ಮದೇವರು ಮತ್ತು ಲಕ್ಷ್ಮೀಪತಿಯಾದ ಶ್ರೀಹರಿ-ಈ ಮೂವರೂ ಸಮಾನರು. ಒಬ್ಬೊಬ್ಬರಲ್ಲಿ ಪರಸ್ಪರ ಬೇಧವಿಲ್ಲ. ಎಂದು ತಿಳಿಯುತ್ತಾರೆ. ವಿಷ್ಣುಸರ್ವೋತ್ತಮತ್ವದಲ್ಲಿ ನಿರ್ದುಷ್ಟವಾದ ಜ್ಞಾನವಿಲ್ಲ.

6. ಸಾಮಾನ್ಯಮಾನವರಂತೆ, ಶ್ರೀಹರಿಯ ಅವತಾರಗಳಲ್ಲಿ ಸುಖ-ದುಃಖ-ಜನನ-ಮರಣ, ಪ್ರಬಲರಿಂದ ಉಂಟಾಗುವ ಭಯ-ಈ ಸಾಧಾರಣ ಧರ್ಮಗಳು ನಿರಂತರದಲ್ಲಿಯೂ ಇವೆ-ಎಂದು ಹೇಳುತ್ತಾರೆ. ಅವತಾರಗಳಿಗೆ ಬೇಧ ಕಲ್ಪಿಸುತ್ತಾರೆ. ಶ್ರೀರಾಮ, ಕೃಷ್ಣಾವತಾರಗಳಲ್ಲಿ ನಮ್ಮಂತೆಯೇ- ಶ್ರೀಹರಿಯೂ ಸಹ ದುಃಖ ಪಟ್ಟಿದ್ದಾನೆ.ಎಂದು ಹೇಳುತ್ತಾರೆ. ಶುಕ್ಲಶೋಣಿತ ಸಂಬಂಧದಿಂದ ಅವತಾರಗಳಲ್ಲಿ ಶ್ರೀಹರಿಗೆ ಜನನವಿದೆ. ಸಾಮಾನ್ಯರಂತೆ, ಅವ

ನಿಗೂ ಮೃತಿ ಉಂಟೆಂದು ಹೇಳುತ್ತಾರೆ. ಹೀಗೆ,ಗುಣದೋಷ ಮಿಶ್ರವಾದವರು ನಿತ್ಯಸಂಸಾರಿಜೀವರುಗಳು. ಇದರಿಂದಲೇ, ಅವರಿಗೆ ಸುಖ ದುಃಖ ಮಿಶ್ರವಾದ ನಿತ್ಯಸಂಸಾರರೂಪವಾದ ಗತಿ ಪ್ರಾಪ್ತಿಯಾಗುವುದು. ಸಾಂತಾಸಿಕ ಲೋಕಗಳಲ್ಲಿ ಲಿಂಗಭಂಗಾನಂತರ, ಸುಖ ದುಃಖ–ಮಿಶ್ರರೂಪವಾದ ಫಲವನ್ನು ಭೋಗಿಸುತ್ತಿರುವರು.

**ಪ್ರಮಾಣ :–**

"ತತ್ರ ಸಂಸೃತಿಬದ್ಧಾಸ್ತು ಗುಣದೋಷ ಭಯಾತ್ಮಕಾಃ ।
ತತ್ರೋಚ್ಚಾ ರಾಜವದ್ವಿಷ್ಣೋಃ ಸರ್ವಾಧಿಕ್ಯೇಷು ಸಂಶಯಾಃ ॥
ಜಾನಂತ್ಯಥಾಪಿ ಬ್ರಹ್ಮಾದಿ ದೇವಾನಾಂ ಪರಿವಾರತಾಮಿತಿ ॥
—ಇತಿ ಸತ್ತತ್ವರತ್ನಮಾಲಾಯಾಂ. ॥ ॥52॥

❋❋

## ಪದ್ಯ-೫೩

**ಮೂಲ :-**

**ತಾರತಮ್ಯಜ್ಞಾನವಿಲ್ಲದೆ ।**
**ಸೂರಿಗಳ ನಿಂದಿಸುತ ನಿತ್ಯದಿ ।**
**ತೋರುತಿಪ್ಪರು ಸುಜನರೋಪಾದಿಯಲಿ ನರರೊಳಗೆ ॥**
**ಕ್ರೂರಕರ್ಮಾಸಕ್ತರಾಗಿ ಶ ।**
**ರೀರ ಪೋಷಣೆಗೋಸುಗದಿ ಸಂ ।**
**ಚಾರ ಮಾಳ್ಪರು ಅನ್ಯದೇವತೆ ನೀಚರಾಲಯದಿ ॥೫೩॥**

**ಅವತರಣಿಕೆ :–**

ತಮೋಯೋಗ್ಯಜೀವರ ಲಕ್ಷಣಗಳನ್ನು ತಿಳಿಸುತ್ತಾರೆ–ಪ್ರಸಕ್ತವದ್ಯದಿಂದ. ॥53॥

**ಪ್ರತಿಪದಾರ್ಥ :–**

**ತಾರತಮ್ಯಜ್ಞಾನವಿಲ್ಲದೆ** ಪಂಚಭೇದ ಮತ್ತು ಜೀವರಲ್ಲಿ ಇರತಕ್ಕ ತಾರತಮ್ಯಜ್ಞಾನರಹಿತರಾಗಿ, **ನಿಶ್ಯದಿ**= ಯಾವಾಗಲೂ, **ಸೂರಿಗಳ** = ಜ್ಞಾನಿಗಳಾದ ಸಜ್ಜನರನ್ನು, **ನಿಂದಿಸುತ**= ದ್ವೇಷಪೂರ್ವಕವಾಗಿ ನಿಂದೆ ಮಾಡುತ್ತಾ, **ನರರೊಳಗೆ**= ಮಾನವರ ಮಧ್ಯದಲ್ಲಿ, **ಸುಜನರೋಪಾದಿಯಲಿ**= ಉತ್ತಮರಾದ ಸಜ್ಜನರಂತೆ, **ತೋರುತಿಪ್ಪರು**= ಡಾಂಭಿಕರಾಗಿ ಪ್ರದರ್ಶನಮಾಡುತ್ತಿರುವವರು. **ಕ್ರೂರಕರ್ಮಾಸಕ್ತರಾಗಿ** = ಪುಣ್ಯ ಕಾರ್ಯಗಳಿಗೆ ವಿರುದ್ಧವಾದ ನಿಷಿದ್ಧಕರ್ಮಗಳಲ್ಲಿ ನಿರತರಾಗಿ, **ಶರೀರ ಪೋಷಣೆಗೋಸುಗ**= ಕೇವಲ ಉದರಂಭರಣಾರ್ಥವಾಗಿ ದೇಹ ಸಂರಕ್ಷಣೆಗೆ, **ಅನ್ಯದೇವತೆ**= ಕ್ಷುದ್ರದೇವತೆಗಳನ್ನು ಉಪಾಸಿಸುತ್ತಾ, **ನೀಚರಾಲಯದಿ** = ಭಗವದ್ವೇಷಿಗಳಾದ ತಮೋಯೋಗ್ಯರ ಮನೆಗಳಲ್ಲಿ, **ಸಂಚಾರಮಾಳ್ಪರು** = ಅಡ್ಡಾಡುತ್ತಾರೆ. ॥53॥

## ವ್ಯಾಖ್ಯಾನಗಳು

೧. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–**

ಇನ್ನೂ ನಿತ್ಯಸಂಸಾರಿಗಳ ವಿಚಾರವನ್ನೇ ಹೇಳತಾರೆ.

ಶ್ರೀಹರಿ ಸರ್ವೋತ್ತಮತ್ವ ವ್ಯತಿರಿಕ್ತ ರಮಾಬ್ರಹ್ಮಾದಿ ಸರ್ವಜೀವರೂ **ಸಮರು** ಎಂತಲೂ, ಶ್ರೀಪರಮಾತ್ಮ ಸರ್ವೋತ್ತಮನೆಂಬೋ ಜ್ಞಾನವಿಲ್ಲದೆ,

ಪಂಚಭೇದ ಮಾತ್ರ ಒಡಂಬಟ್ಟವರಾಗಿ, ಸರ್ವಕಾಲದಲ್ಲೂ ಸಜ್ಜನರಾದ ಭಗ-ವದ್ಭಕ್ತರನ್ನು ನೋಡಿ, ಅವರುಗಳನ್ನು ನಿಂದಾಮಾಡುತಾ ಮತ್ತು ಶ್ರೀಹರಿ ಸರ್ವೋತ್ತಮನೆಂಬುದು ಅಸಂಭಾವಿತ, ತಾರತಮ್ಯ ಶೂನ್ಯ.ಎಂತ ನಿಂದಿಸುತಾ, ಭಗವದ್ದ್ವೇಷಿಗಳಾದ ಇವರು ಶ್ರೀಪರಮಾತ್ಮನ ಪಾದಾವಲಂಬಿಗಳಾದ ಭಕ್ತರಿಗೆ ದುಃಖ ಕೊಡತಕ್ಕವರಾಗಿಯೂ, ಪುಣ್ಯಕಾರ್ಯಗಳಿಗೆ ವಿರುದ್ಧಗಳಾದ ಕರ್ಮಗಳ ಮಾಡುತಾ, ಮತ್ತು ತಮ್ಮ ಶರೀರಸಂರಕ್ಷಣಾರ್ಥ ತಮೋಯೋಗ್ಯ ದೇವತೆಗಳಾದ ಎಲ್ಲಮ್ಮಾದಿ ದೇವತೆಗಳ, ಭಗವದ್ದ್ವೇಷಿಗಳಾದ ನೀಚರ ಮನೆಗಳಲ್ಲಿ ಸಂಚಾರಮಾಡುವವರು. ಮಾನುಷರೊಳಗೆ ಡಾಂಭಿಕಆಚಾರಗಳ ಪ್ರದರ್ಶನ ಮಾಡುತಾ, ಸಮೀಚೀನ ಸಜ್ಜನರೋಪಾದಿಯಲ್ಲಿ,ದೃಶ್ಯಮಾನರಾಗಿ ಇರ್ತಾರೇ ಹೊರತು,ಮುಕ್ತಿಯೋಗ್ಯರೋಪಾದಿಯಲ್ಲಿ ಲಕ್ಷಣಗಳುಳ್ಳವರಲ್ಲ. ಈ ಗುಣಗಳುಳ್ಳವರು ನಿತ್ಯಸಂಸಾರಿಗಳೆಂತ ತಾತ್ಪರ್ಯ. ॥53॥

## ೩. ಭಾವಪ್ರಕಾಶಿಕೆ :–

ಮನುಷ್ಯಾಧಮರು, ತಾರತಮ್ಯಜ್ಞಾನವಿಲ್ಲದೆ ಭಗವದ್ಭಕ್ತರನ್ನು ದೂಷಿಸುತ್ತಾ, ನೋಡಿದ ಜನರಿಗೆ ಮಾತ್ರ ಬಹು ಜ್ಞಾನಿಗಳಂತೆಯೂ, ತಪಸ್ವಿ-ಗಳಂತೆಯೂ ತೋರಿಕೊಳ್ವರು. ಅವರ ಕೆಲಸವೆಲ್ಲವೂ ಕ್ರೂರತರವಾಗಿರುವುವು. ಕ್ಷುದ್ರದೇವತೆಗಳ ಉಪಾಸನೆಯನ್ನು ಮಾಡುತ್ತಾ, ಹೊಟ್ಟೆಗೋಸ್ಕರ ನೀಚ ಜನರ ಮನೆ ಮನೆ ತಿರುಗುತ್ತಿರುವರು. ಯಸ್ತ್ವಾಂ ದ್ವೇಷ್ಟಿ ಸಮಾಂ ದ್ವೇಷ್ಟಿ ಯಸ್ತ್ವಾನನು ಸಮಾನಂ"–ಎಂಬ ಗೀತಾವಾಕ್ಯದಿಂದ, ತಾರತಮ್ಯಜ್ಞಾನವಿಲ್ಲದೆ, ಹರಿಭಕ್ತರ ದ್ವೇಷ ಮಾಡುವವರು, ಪರಮಾತ್ಮನಲ್ಲೂ ದ್ವೇಷಮಾಡೇ ಮಾಡು-ವರು. ಆದರಿಂದ, ಅಧೋಗತಿಯೇ ಪ್ರಾಪ್ತಿಯಾಗುವುದೆಂಬ ತಾತ್ಪರ್ಯ. ॥53॥

## ೪. ಭಾವದರ್ಪಣ :–

ತಮೋಯೋಗ್ಯರ ಲಕ್ಷಣ ಸೂಕ್ಷ್ಮವಾಗಿ ತೋರಿಸುತ್ತಾರೆ. ಕ್ರೂರೇತಿ.

–"ಹರಿಭಕ್ತಿಮೃತೇ ಮೋಕ್ಷಂ ತತ್ವಜ್ಞಾನಂ ವಿನಾಪಿವಾ । ಹರಿದ್ವೇಷಾನ್ಮುಕ್ತಿಮಪಿ ದಾನತೀರ್ಥಾದಿಭಿಸ್ತಥಾ । ಮುಕ್ತಾವಭೇದಂ ಜೀವಾನಾಂ ಸಾಮ್ಯಂವಾಜ್ಞಾನಹೀನತಾಂ । ಅರೂಪತ್ವಂ ಹಿ ಜೀವಾನಾಂ ಮುಕ್ತಾನಾಂ ಬದ್ಧತಾಮಪಿ । ಪರಸ್ಪರಮಭೇದಂಚ ಜೀವಾನಾಂ ಚಿತಾಂ ತಥಾ । ಮಿಥ್ಯಾತ್ವಂಚ ಪ್ರಪಂಚಸ್ಯ ಬ್ರಹ್ಮಜ್ಞಾನೇನ ಬಾಧ್ಯತಾಂ । ಸರ್ವೇಷಾಮಪಿ ಮುಕ್ತಿಂ ಚಾ ಪ್ರಾಮಾಣ್ಯಂಚ ಪ್ರತೀಸ್ತಥಾ । ಅತತ್ವಾವೇದ ಕತ್ವಂಚ ಯುಕ್ತೇರ್ದುರ್ಬಲತಾಮಪಿ । ದುರಾಗ್ರಹಗೃಹೀತಾರ ಕುತರ್ಕಪರಿನಿಷ್ಠಿತಾಃ । ಹರಿದ್ವೇಷಪರಾ ನಿತ್ಯಂ ತದ್ಭಕ್ತದ್ವೇಷಿಣಸ್ತಥಾ । ಇತಿ ನಾನಾ ಪ್ರಕಾರೇಣ ಮನ್ಯಂತೇ ತೇ ಕುಬುದ್ಧಯಃ"— ಇತಿ ಸತ್ತತ್ವರತ್ನಮಾಲಾ ವಚನಾಜ್ಜ್ಞೇಯಂ. ‖53‖

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–

ಪುನಃ ತತ್ಸ್ವರೂಪಂ ಆಹ –"**ತಾರತಮ್ಯ**"–ಇತಿ. ‖53‖

### ಕನ್ನಡಾರ್ಥ

ಆ ನಿತ್ಯಸಂಸಾರಿಗಳ ಸ್ವರೂಪವನ್ನೇ ಇನ್ನಷ್ಟು ಬಿಡಿಸಿ, ಈ ಪದ್ಯದಿಂದ ತಿಳಿಸುವರು. ‖53‖

## ೫. ಶ್ರೀ ಗುರುಹೃದಯಪ್ರಕಾಶಿಕೆ

ತಾಮಸರ ಲಕ್ಷಣವನ್ನು ಹೇಳುತ್ತಾರೆ. ತಾರತಮ್ಯ ಎಂದು. ಮನುಷ್ಯಾರಭ್ಯ ಬ್ರಹ್ಮಾಂತವಾಗಿ ಶತೋತ್ತರ ಆನಂದ ಹೇಳುವ ಶ್ರುತಿ ಇದ್ದಾಗ್ಯೂ, ತಾರತಮ್ಯಜ್ಞಾನ ತಿಳಿಯದೆ, ತಾರತಮ್ಯಜ್ಞಾನವನ್ನು ತಿಳಿದ ಜ್ಞಾನಿಗಳನ್ನು ನಿಂದಿಸುತ್ತಾ, ವೇದೋಕ್ತಕರ್ಮ ಮಾತ್ರ ಮಾಡುವುದರಿಂದ, ಸಜ್ಜನರ ಹಾಗೆ ಜನರೊಳಗೆ ತೋರುವರು. ಮತ್ತು ಪರಹಿಂಸೆ, ಅನ್ಯಾಯಯುಕ್ತ ಕ್ರೂರಕರ್ಮಗಳಲ್ಲಿ ಆಸಕ್ತರಾಗಿ, ಶರೀರ ಪೋಷಣೆಗೋಸ್ಕರ ಶಕ್ತ್ಯಾದ್ಯನ್ನದೇವತಾಲಯ

ದಲ್ಲಿಯೂ, ಶೂದ್ರಾದಿ ನೀಚಾಲಯದಲ್ಲಿಯೂ ಆಶ್ರಯಿಸಿ, ಸಂಚರಿಸುವವ-
ರನ್ನು ತಾಮಸರೆಂದು ತಿಳಿ.ಎಂದರ್ಥ. ॥53॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ತಮೋಯೋಗ್ಯಜೀವರು ಮಾನಾಧಮರ ವರ್ಗಕ್ಕೆ ಸೇರಿದವರು. ನಿತ್ಯ ಸತ್ಯವಾಗಿರುವ ಪಂಚಭೇದ ಜ್ಞಾನದಲ್ಲಿ ನಂಬಿಕೆ ಇಲ್ಲದವರು. ದೇವತಾ ವರ್ಗದಲ್ಲಿ, ಮಾನವರಲ್ಲಿ, ದೈತ್ಯಗಣದಲ್ಲಿ ಪರಸ್ಪರ ತಾರತಮ್ಯಜ್ಞಾನರಹಿತ ರಾಗಿರುವರು. ಸರ್ವಜೀವರಿಗೂ, ಸರ್ವನಿಯಾಮಕನಾದ ಪರಬ್ರಹ್ಮನಿಗೂ ಐಕ್ಯವನ್ನು ಸಾಧಿಸುವವರು. ಜೀವ-ಜಡ-ಈಶ ಇವರಿಗೆ ಅಭೇದವನ್ನು ಸಾಧಿಸುವವರು.

2. ಭಗವದ್ಭಕ್ತರಾದ ಜ್ಞಾನಿಗಳಲ್ಲಿ ಸದಾ ದ್ವೇಷ ಮಾಡುತ್ತಾ, ಅವ ರನ್ನು ನಾನಾ ಪರಿಯಲ್ಲಿ ನಿಂದಿಸುವುದರಲ್ಲಿ ಆಸಕ್ತರಾಗಿರುತ್ತಾರೆ. ಭಗವಂತ ನಲ್ಲಿ ದ್ವೇಷ, ಹಾಗೂ ಭಗವದ್ಭಕ್ತರಲ್ಲಿ ದ್ವೇಷ.ಸಾಧಿಸುವವರೇ ತಮೋಯೋಗ್ಯ ಜೀವರು.

3. ವೇದಗಳಲ್ಲಿ ಅಭೇದವೇ ಉಕ್ತವಾಗಿದೆ- ಎಂದು ಸಾಧಿಸುತ್ತಾ, ವೇದೋಕ್ತಕರ್ಮಗಳನ್ನು ಆಚರಿಸುತ್ತಾ, ನೋಡುವವರ ದೃಷ್ಟಿಗೆ, ಸಜ್ಜನ ರಂತೆಯೂ, ಜ್ಞಾನಿಗಳಂತೆಯೂ, ತಪಸ್ವಿಗಳಂತೆಯೂ, ತೋರಿಸಿಕೊಳ್ಳುತ್ತಾ, ಕೇವಲ ಡಾಂಭಿಕರಾಗಿರುತ್ತಾರೆ.

4. ಅಂತರಂಗದಲ್ಲಿ ದ್ವೇಷಬುದ್ಧಿಯುತರಾಗಿ, ಅಂತಃಕರಣಶುದ್ಧಿ ಯಿಲ್ಲದೆ, ಯಾವಾಗಲೂ ಪುಣ್ಯಕರ್ಮಗಳಿಗೆ ವಿರುದ್ಧವಾದ ಕ್ರೂರ ಹಾಗೂ ನಿಷಿದ್ಧಕರ್ಮಗಳಲ್ಲಿ ಆಸಕ್ತರಾಗಿರುವರು.

5. ಕೇವಲ ಉದರಂಭರಣಕ್ಕಾಗಿ, ತನ್ನ ದೇಹಪೋಷಣೆಗಾಗಿ, ತಮ್ಮ ಮನೋಭೀಷ್ಟಗಳ ಸಿದ್ಧಿಗಾಗಿ, ಕ್ಷುದ್ರದೇವತೆಗಳನ್ನು ಉಪಾಸಿಸುತ್ತಾ, ಭಗವದ್ವೇಷಿಗಳಾದ ನೀಚರ ಮನೆಗಳಲ್ಲಿ,ಅವರ ಆಶ್ರಯದಲ್ಲಿದ್ದು, ಲೋಕದಲ್ಲಿ ಅಡ್ಡಾಡುತ್ತಿರುವರು.

6. ಹರಿ ಸರ್ವೋತ್ತಮತ್ವ ಜ್ಞಾನ–ಶ್ರೀವಾಯುದೇವರೇ ಜೀವೋತ್ತಮರು–ಎಂಬ ಅನುಸಂಧಾನ, ಪಂಚಭೇದ–ತಾರತಮ್ಯಜ್ಞಾನವಿಲ್ಲದವರಾಗಿ, ಪ್ರಪಂಚದ ಸತ್ಯತ್ವವನ್ನು ನಿರಾಕರಿಸುತ್ತಾ, ಸಕಲಜೀವರಿಗೂ ಸರ್ವತಂತ್ರ ಸ್ವತಂತ್ರನಾದ ಪರಬ್ರಹ್ಮನಿಗೂ ಯಾವ ಭೇದವೂ ಇಲ್ಲವೆಂದು ವೇದ ವಾಕ್ಯಗಳಿಂದಲೇ ಸಾರುತ್ತಾ, ಲೋಕವಂಚಕರಾಗಿ, ಮಿಥ್ಯಾವಾದಿಗಳಾಗಿ, ಅಭೇದ ಚಿಂತನೆಯ ದ್ವಾರಾ, ಅಹಂಬ್ರಹ್ಮೋಪಾಸಕರಾಗಿರುವುದೇ– ತಮೋಯೋಗ್ಯರ ಲಕ್ಷಣವೆಂದು ತಿಳಿಸುತ್ತಾರೆ. ॥53॥

★★

## ಪದ್ಯ-೫೪

ನೂಲ :–

ದಶಪ್ರಮತಿಮುಕಾಬ್ಧಿಯೊಳು ಸುಮ ।
ನಸರನಿಪ ರತ್ನಗಳ ಅವಲೋ ।
ಕಿಸಿ ತೆಗೆದು ಪ್ರಾಕೃತ ಸುಭಾಷಾತಂತುಗಳ ರಚಿಸಿ ॥
ಅಸುಪತಿ ಶ್ರೀರಮಣಗೆ ಸಮ ।
ರ್ಪಿಸಿದೆ ಸಜ್ಜನರಿದನು ಸಂತೋ ।
ಷಿಸಲಿ ದೋಷಗಳೆಣಿಸದಲೆ ಕಾರುಣ್ಯದಲಿ ನಿತ್ಯ ॥೫೪॥

**ಅವತರಣಿಕೆ :—**

ಬೃಹತ್‌ತಾರತಮ್ಯಪ್ರಕರಣವನ್ನು ಶ್ರೀಮದಾನಂದತೀರ್ಥರ ಸಚ್ಛಾಸ್ತ್ರಗಳೆಂಬ ಸಮುದ್ರರಾಶಿಯಿಂದ ತೆಗೆದ ಆರಿಸಿದ ಪ್ರಮೇಯ ರತ್ನಗಳನ್ನು, ಪ್ರಾಕೃತ ಪದ್ಯಕಾವ್ಯವೆಂಬ ಈ ದಾರದಿಂದ ಪೋಣಿಸಿ, ಶ್ರೀರಮಣನಿಗೆ ಆ ರತ್ನಮಾಲೆಯನ್ನು ಅರ್ಪಿಸುತ್ತಾ, ಸಜ್ಜನರು ಈ ಗ್ರಂಥಾವಲೋಕನದಿಂದ ಆನಂದಿಸಲಿ-ಎಂದು ತಿಳಿಸುತ್ತಾರೆ. ॥54॥

**ಪ್ರತಿಪದಾರ್ಥ :—**

**ದಶಪ್ರಮತಿ**= ಶ್ರೀಮನ್ಮಧ್ವಮುನಿಗಳಿಂದ ರಚಿತವಾದ, **ಮತ**= ಸಚ್ಛಾಸ್ತ್ರಗಳೆಂಬ, **ಅಬ್ಧಿಯೊಳು**= ಸಮುದ್ರದಲ್ಲಿ ವಿದ್ಯಮಾನರಾದ, **ಸುಮನಸ ಸರೆನಿಪ**= ಬ್ರಹ್ಮಾದಿ ದೇವತೆಗಳು ಎನತಕ್ಕ, **ರತ್ನಗಳ**= ರತ್ನಗಳನ್ನು, **ಅವಲೋಕಿಸಿ**= ಸಮುದ್ರದಲ್ಲಿ ಮುಳುಗಿ, ಹುಡುಕಿನೋಡಿ, ಅವುಗಳನ್ನು ತೆಗೆದು, **ಸುಭಾಷಾ**= ಸಮೀಚೀನವಾದ ಪ್ರಾಕೃತಭಾಷೆ ಕನ್ನಡವೆಂಬ, **ತಂತುಗಳ ರಚಿಸಿ**= ಕವನರೂಪವಾದ ದಾರಗಳನ್ನು ನಿರ್ಮಿಸಿ, **ಅಸುಪತಿ** = ಶ್ರೀಮುಖ್ಯಪ್ರಾಣದೇವರಿಗೆ ಪ್ರಭುವಾದ, **ಶ್ರೀವಮಣಗೆ**= ಲಕ್ಷ್ಮೀಪತಿಯಾದ ಶ್ರೀಹರಿಗೆ, **ಸಮರ್ಪಿಸಿದೆ**= ಅರ್ಪಣ ಮಾಡುವವನಾದೆ. **ಸಜ್ಜನರು**= ಜ್ಞಾನಿಗಳಾದ ಭಗವದ್ಭಕ್ತರು, **ಇದನು**= ಈ ಕಾವ್ಯವನ್ನು, **ನಿತ್ಯ**= ಪ್ರತಿ ದಿವಸದಲ್ಲಿಯೂ, **ಕಾರುಣ್ಯದಲಿ**= ಅಂತಃಕರಣಹೃದಯದಿಂದ, **ನೋಡಿದವರಾಗಿ**, **ದೋಷಗಳ**= ಪ್ರಾಕೃತಭಾಷೆ-ಎಂದು ದೋಷವನ್ನು ಮತ್ತು ಇತರ ದೋಷಗಳನ್ನು, **ಎಣಿಸದಲೆ**= ಪರಿಗಣಿಸದೆ, **ಸಂತೋಷಿಸಲಿ** = ಆನಂದಪಡುವವರಾಗಲಿ-ಎಂದು ಪ್ರಾರ್ಥಿಸುತ್ತಾರೆ. ॥54॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ಈ ಗ್ರಂಥವನ್ನು ರಚನಾ ಮಾಡಿದ ಕ್ರಮವನ್ನು ಹೇಳಿ, ಸಜ್ಜನರಾದ ಭಗವದ್ಭಕ್ತರನ್ನು ಪ್ರಾರ್ಥನಾ ಮಾಡತಾರೆ.

ಜೀವೋತ್ತಮರಾದ ವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯ ರಿಂದ ರಚಿತವಾದ ಸಚ್ಛಾಸ್ತ್ರವೆಂಬೋ ಸಮುದ್ರದೊಳು ವಿದ್ಯಮಾನಗಳಾದ ಬ್ರಹ್ಮಾದಿದೇವತೆಗಳು-ಎನತಕ್ಕ ರತ್ನಗಳ ಪೂರ್ವೋಕ್ತ ಸಮುದ್ರದಲ್ಲಿ ಮುಣುಗಿ ಹುಡುಕಿ ನೋಡಿ, ಅದರನ್ನ ತೆಗೆದು, ಸಮೀಚೀನಗಳಾದ ಈ ರತ್ನಗಳ ಪ್ರಾಕೃತ ಭಾಷಾವೆಂಬ ಕನ್ನಡ ಭಾಷಾವೆಂಬ ಹತ್ತಿಯಿಂದ ಕವನರೂಪವಾದ ದಾರಗಳ ರಚನಾಮಾಡಿ ಪೋಣಿಸಿ, ಇದನ್ನ ಶ್ರೀಮುಖ್ಯಪ್ರಾಣದೇವರಿಗೆ ವಲ್ಲಭನಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣದೇವರಿಗೆ ಸಮರ್ಪಣ ಮಾಡೋವನಾದೆ. ಜ್ಞಾನಿಗಳಾದ ಭಗವದ್ಭಕ್ತರು ಈ ಕಾವ್ಯವನ್ನು ಪ್ರತಿದಿನದಲ್ಲೂ, ಕರುಣದಿಂದ ನೋಡೋವರಾಗಿ, ಪ್ರಾಕೃತಭಾಷಾವೆಂಬ ದೋಷವೇನು, ಪೂರ್ವಾಪರೀಕಾರ ದಿಂದ ಹೇಳಿದ ದೋಷಗಳೇನು ಗಣನಾ ಮಾಡದೆ, ಭಗವನ್ಮಹಿಮೆಯಲ್ಲೇ ಲಕ್ಷ್ಯ ಇಟ್ಟು, ಸಂತೋಷಪಡಬೇಕಂತ ಪ್ರಾರ್ಥನಾ ಮಾಡಿದ್ದಾರೆ- ಎಂತ ತಾತ್ಪರ್ಯ. ಕ್ಷೀರ ಪ್ರಧಾನವೇ ಹೊರ್ತು, ಪಾತ್ರ ಪ್ರಧಾನವಲ್ಲವೆಂತ-ತಿಳಿದು ಸಜ್ಜನರಾದವರು ಸಂತೋಷಪಡಬೇಕು. ಎಂತ ತಾತ್ಪರ್ಯ. ॥54॥

### ೨. ಭಾವಪ್ರಕಾಶಿಕೆ :-

ಈ ಪದ್ಯಕ್ಕೆ ತಾತ್ಪರ್ಯ ಬರೆದಿಲ್ಲ. ॥54॥

ಶ್ರೀಮನ್ಮಧ್ವಮತಾರ್ಣವದಲ್ಲಿ ಬಹು ಪ್ರಯತ್ನದಿಂದ ಹುಡುಕಿ, ಸುಮ-

ನಸರೆಂಬ ಜೀವರತ್ನಗಳು ತೆಗೆದು, ಪ್ರಾಕೃತಸುಭಾಷಾಖ್ಯ ತಂತುಗಳಿಂದ ಮಾಲಿಕಾ ರಚಿಸಿ, ಅಸುಪತಿ ಮುಖ್ಯಪ್ರಾಣ ಶ್ರೀಲಕ್ಷ್ಮೀ–ಇವರಿಗೆ ರಮಣನಾದ ಅಸ್ಮದ್ಬಿಂಬಗೆ ಸಮರ್ಪಿಸಿದ್ದೇವೆ. ಸಜ್ಜನರು ನೋಡಿ ಸಂತೋಷಪಡಬೇಕೆಂದು ಪ್ರಾರ್ಥನೆ ಮಾಡುತ್ತಾರೆ. ದಶಪ್ರಮತೀತಿ. ॥54॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಇದಂ ಉನ್ಮೂಲಂ ಇತಿ ಚೋದ್ಯಂ ನಿರಾಹ–'ದಶ'–ಇತಿ. ॥54॥

## ಕನ್ನಡಾರ್ಥ

ಈ ತಾರತಮ್ಯವು ಮೂಲದಲ್ಲಿಲ್ಲವೆಂಬ ಆಕ್ಷೇಪವನ್ನು ಈ ಪದ್ಯದಿಂದ ಪರಿಹರಿಸುತ್ತಾರೆ.

ಕಲಿ– ಮುಂತಾದವರನ್ನು ನಾಶಪಡಿಸುವುದರಿಂದ,–'ಅಸು'–ಎಂದರೆ, ವಾಯು ಎಂದು ಅರ್ಥ. ॥54॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ಈ ಕೃತಿಯನ್ನು ದೇವರಿಗೆ ಸಮರ್ಪಿಸುತ್ತಾ, ಸಜ್ಜನರನ್ನು ಪ್ರಾರ್ಥಿಸುತ್ತಾರೆ. ದಶ ಎಂದು. ದಶಪ್ರಮತಿ–ಎಂಬ ಪೂರ್ಣಪ್ರಜ್ಞಾಚಾರ್ಯರ ಮತವೆಂಬ ಸಮುದ್ರದಲ್ಲಿ, ಸುಮನಸರೆನಿಪ–ಅಂದರೆ, ಬ್ರಹ್ಮಾದಿ ಸುಮನಸರೆಂಬ ದೇವತಾರತ್ನಗಳನ್ನು ನೋಡಿ ತೆಗೆದು, ಪ್ರಾಕೃತವೆಂಬ ಕನ್ನಡಭಾಷೆಯ ದಾರದಲ್ಲಿ ಪೋಣಿಸಿದಂತೆ, ತಾರತಮ್ಯ ಪದ್ಯವನ್ನು ರಚಿಸಿ, ಅಸುಪತಿ–ಎಂಬ ಮುಖ್ಯಪ್ರಾಣವಲ್ಲಭ ಶ್ರೀರಮಣನಿಗೆ ಸಮರ್ಪಿಸಿದೆ. ಅಂದರೆ, ಈ ಗ್ರಂಥರಚನೆಯು ದೇವರ ಕ್ರಿಯಾಧೀನ ಕ್ರಿಯವೆಂದು ಭಾವಿಸಿದೆನೆಂದರ್ಥ. ಸಜ್ಜನರು ಇದನ್ನು ಕನ್ನಡಭಾಷೆ ಎಂದು ದೋಷ ಎಣಿಸದೆ, ಕೃಪೆಯಿಂದ ಶಾಸ್ತ್ರಾರ್ಥಗುಣ ತಿಳಿದು ಸಂತೋಷಿಸಲೆಂದು ಪ್ರಾರ್ಥಿಸುವೆನೆಂದು ಅಭಿಪ್ರಾಯ. ॥54॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ದ್ವೈತಮತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮನ್ಮಧ್ವಮುನಿಗಳಿಗೆ–**ದಶಪ್ರಮತಿ**ಗಳೆಂದು ಹೆಸರು. ದಶ–ಎಂದರೆ, ಕೇವಲ ಹತ್ತು ಎಂಬ ಸಂಖ್ಯೆಯಲ್ಲ, ಅದು ಅನಂತ ಸಂಖ್ಯಾವಾಚೀ. ಅಂದರೆ, **ಪೂರ್ಣ** ಎಂದರ್ಥ. **ಪ್ರಮತಿ**-ಎಂದರೆ, ವಿಜ್ಞಾನಿಗಳೆಂದರ್ಥ. ಈ ಪರಿಷ್ಕಾರ ಕ್ರಮದಿಂದ, ದಶಪ್ರಮತಿ ಎಂದರೆ, **ಪೂರ್ಣಪ್ರಜ್ಞ**ರೆಂದರ್ಥವಾಗುವುದು.

2. ದಶಪ್ರಮತಿರಾಯರೆಂದ, ಖ್ಯಾತನಾಮರಾದ ಗುರುಮಧ್ವರಿಂದ ರಚಿತವಾದ ಸರ್ವಮೂಲ ಗ್ರಂಥಗಳು ಶ್ರೀವಿಷ್ಣುವಿನ ಸರ್ವೋತ್ತಮತ್ವವನ್ನೂ, ವಾಯುಜೀವೋತ್ತಮತ್ವವನ್ನೂ, ಪಂಚಭೇದ ತಾರತಮ್ಯಜ್ಞಾನವನ್ನೂ, ಜಗತ್ತಿನ ಸತ್ಯತ್ವವನ್ನೂ ಸಾರುವ ಸದ್ಗ್ರಂಥಗಳಾಗಿವೆ. ಈ ಗ್ರಂಥಗಳಲ್ಲಿ ಘಟಕವಾಗಿರುವ ಶಾಸ್ತ್ರಗಳೇ **ದಶಪ್ರಮತಿ ಮತವು.**

3. ಶ್ರೀಮನ್ಮಧ್ವಮುನಿ ಪ್ರಣೀತವಾದ ದ್ವೈತ ಸಿದ್ಧಾಂತವು ಅಪಾರವಾದ ಸಮುದ್ರದಂತಿದೆ. ಇಂತಹ ದಶಪ್ರಮತಿಮತವೆಂಬ ಅಬ್ಧಿಯಲ್ಲಿ ಜ್ಞಾನಿ ಶ್ರೇಷ್ಠರಾದ ಶ್ರೀಮಜ್ಜಗನ್ನಾಥದಾಸಾರ್ಯರು ಮುಳುಗಿ, ಹುಡುಕಿನೋಡಿ, ತಲಸ್ಪರ್ಶಿಗಳಾಗಿ, ಅನೇಕ ಅಮೂಲ್ಯರತ್ನಗಳನ್ನು ಹೊರತೆಗೆದರು.

4. ಆ ಅನರ್ಘ್ಯರತ್ನಗಳೇ ಬ್ರಹ್ಮಾದಿ ಸಮಸ್ತ ದೇವತಾವರ್ಗ **(ಸುಮನಸರೆನಿಪ)**, ಅವರಲ್ಲಿರುವ ತಾರತಮ್ಯ ಪ್ರಮೇಯವನ್ನು ವಿವರಿಸುವುದೇ ಪ್ರಸಕ್ತ ಸಂಧಿಗತ ವಿಷಯವು.

5. ನಮ್ಮ ನಲ್ನುಡಿಯಾದ ಮಾತೃಭಾಷ ಕನ್ನಡವು. **ಕರ್ನಾಟಕ ಭಾಷೆಯು** ಪ್ರಾಕೃತ ಭಾಷೆಯೆನಿಸುವುದು. ಇಂತಹ ಪ್ರಾಕೃತ ಭಾಷಾರೂಪ

ವಾದ ದಾರಗಳನ್ನು ನಿರ್ಮಿಸಿ, **(ತಂತುಗಳ ರಚಿಸಿ)** ಆ ದಾರದಿಂದ ಪೂರ್ವೋಕ್ತ ಅನರ್ಘ್ಯ ರತ್ನಗಳನ್ನು ಪೋಣಿಸಿ, ರತ್ನಹಾರವನ್ನು ನಿರ್ಮಿಸಿದ್ದಾರೆ ದಾಸವರ್ಯರು.

6. **ಅಸು**–ಎಂದರೆ ಪ್ರಾಣ, ಶ್ವಾಸಪತಿಗಳಾದ ಶ್ರೀಮುಖ್ಯಪ್ರಾಣದೇವರಿಗೆ **ಅಸು**-ಎಂದು ಹೆಸರು. ಪ್ರಾಣದೇವರ ಪ್ರಭುವಾದ ಶ್ರೀಹರಿಯೇ **ಅಸುಪತಿಯು.**

7. ಅಸುಪತಿಯಾದ ಆ ಅಪ್ರಮೇಯನು ಶ್ರೀಲಕ್ಷ್ಮೀಪತಿಯು. **(ಶ್ರೀರಮಣಗೆ)**. ಅಂತಹ ಶ್ರೀರಮಣನ ಕೊರಳಿಗೆ ಈ ರತ್ನಮಾಲೆಯನ್ನು ಭಕ್ತಿಯಿಂದ ಸಮರ್ಪಿಸಿದ್ದಾರೆ, ಅಪರೋಕ್ಷೀಕೃತಶ್ರೀಶರಾದ ದಾಸರಾಯರು.

8. ಜ್ಞಾನಿಗಳಾದ ಭಗವದ್ಭಕ್ತರು, ಈ ರತ್ನಮಾಲಾ ರೂಪವಾದ ಕಾವ್ಯ ವಸ್ತುವನ್ನು ಪ್ರಾಕೃತಭಾಷೆ ಎಂಬ ದೋಷವನ್ನಾಗಲೀ, ಅಥವಾ ಕಾವ್ಯಗತ ಇವರ ದೋಷಗಳನ್ನಾಗಲೀ ಪರಿಗಣಿಸದೆ, ಪ್ರತಿನಿತ್ಯವೂ ಅವಲೋಕಿಸುತ್ತಾ, ಅಂತಃಕರಣಪೂರಿತ ಹೃದಯದಿಂದ ಸ್ವಾಗತಿಸಿ, ಕಾವ್ಯೋಕ್ತ ಭಗವನ್ಮಹಾಮಹಿಮೆಗಳನ್ನು ಸ್ಮರಿಸುತ್ತಾ, ಸಂತೋಷ ಪಡಲಿ ಎಂದು ಸಜ್ಜನರಲ್ಲಿ ಮೊರೆಯಿಟ್ಟು ಪ್ರಾರ್ಥಿಸುತ್ತಾರೆ. ॥54॥

**

## ಪದ್ಯ-೫೫

**ಮೂಲ :-**

ನಿರುಪಮ ಶ್ರೀವಿಷ್ಣು ಲಕುಮಿ ।
ಸರಸಿಜೋದ್ಭವ ವಾಯು ವಾಣೀ ।
ಗರುಡ ಷಣ್ಮಹಿಷಿಯರು ಪಾರ್ವತಿ ಶಕ್ರ ಸ್ಮರ ಪ್ರಾಣ ॥
ಗುರು ಬೃಹಸ್ಪತಿ ಪ್ರವಹ ಸೂರ್ಯನು ।
ವರುಣ ನಾರದ ವಹ್ನಿ ಸಪ್ತಾಂ ।
ಗಿರರು ಮಿತ್ರ ಗಣೇಶ ಪೃಥು ಗಂಗಾ ಸ್ವಾಹ ಬುಧನು ॥೫೫॥

**ಅವತರಣಿಕೆ :-**

ಸಂಕ್ಷಿಪ್ತವಾಗಿ ಕಕ್ಷಕ್ಕೆ ಒಬ್ಬೊಬ್ಬ ದೇವತೆಗಳ ಸಾಂಕೇತದಿಂದ ತಾರತಮ್ಯ ಕ್ರಮವನ್ನು ಹೇಳುತ್ತಾರೆ. ॥55॥

**ಪ್ರತಿಪದಾರ್ಥ :-**

**ನಿರುಪಮ** = ಅಸದೃಶನಾದ (ಸಮಾಭ್ಯಧಿಕಶೂನ್ಯನಾದ), **ಶ್ರೀವಿಷ್ಣು** = ಕಾಂತಿಸಂಪನ್ನನಾದ ಸರ್ವೋತ್ತಮನಾದ ಶ್ರೀಮನ್ನಾರಾಯಣ **ಲಕುಮಿ** = ಶ್ರೀಲಕ್ಷ್ಮೀದೇವಿ, **ಸರಸಿಜೋದ್ಭವ** = ಶ್ರೀಪತಿಯ ನಾಭೀಜಾತರಾದ ಶ್ರೀಬ್ರಹ್ಮದೇವರು, **ವಾಯು** = ಶ್ರೀವಾಯುದೇವರು **ವಾಣೀ** = ಶ್ರೀಸರಸ್ವತೀದೇವಿ, **ಗರುಡ** = ಶ್ರೀಗರುಡದೇವರು. **ಷಣ್ಮಹಿಷಿಯರು** = ಜಾಂಬವತ್ಯಾದಿ ಆರುಮಂದಿ ಶ್ರೀಕೃಷ್ಣನ ಪತ್ನಿಯರು, **ಪಾರ್ವತೀ** = ಶ್ರೀಪಾರ್ವತೀ ದೇವಿ, **ಶಕ್ರ** = ಶ್ರೀಇಂದ್ರದೇವರು, **ಸ್ಮರ** = ಶ್ರೀಮನ್ಮಥದೇವರು, **ಪ್ರಾಣ** = ಅಹಂಕಾರಿಕ ಪ್ರಾಣದೇವರು,

**ಗುರುಬೃಹಸ್ಪತಿ** = ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು, **ಪ್ರವಹ** = ಪ್ರವಹವಾಯುದೇವರು, **ಸೂರ್ಯನು** = ವಿವಸ್ವಾನ್ ನಾಮಕ ಸೂರ್ಯದೇವರು, **ವರುಣ** = ಶ್ರೀವರುಣದೇವರು, **ನಾರದ** = ದೇವರ್ಷಿಗಳಾದ ನಾರದರು, **ವಹ್ನಿ** = ಶ್ರೀಅಗ್ನಿದೇವರು, **ಸಪ್ತಾಂಗಿರರು** = ಅಂಗಿರಸಾದಿ ಸಪ್ತರ್ಷಿಗಳು, **ಮಿತ್ರ** = ಮಿತ್ರನಾಮಕಸೂರ್ಯ. **ಗಣೇಶ** = ವಿಘ್ನೇಶ್ವರ, **ಪೃಥು** = ಪೃಥುಚಕ್ರವರ್ತಿ (ಕರ್ಮಜದೇವತಾ ಕಕ್ಷ ಗ್ರಾಹ್ಯ), **ಗಂಗಾ** = ಶ್ರೀಗಂಗಾದೇವಿ, **ಸ್ವಾಹ** = ಅಗ್ನಿಪತ್ನೀ ಸ್ವಾಹಾ ದೇವಿ, **ಬುಧನು** = ಬುಧನು (ಉಪಾದೇವಿಯೂ ಗ್ರಾಹ್ಯ). ॥55॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಸಂಕೋಚವಾಗಿ ಕಕ್ಷಕ್ಕೆ ಒಬ್ಬೊಬ್ಬ ದೇವತೆಗಳ ತಾರತಮ್ಯವನ್ನು ಹೇಳ ತಾರೆ.

ಸರ್ವೋತ್ತಮನಾದ ಕಾಂತಿಸಂಪನ್ನನಾದ ಶ್ರೀಪರಮಾತ್ಮ, ರಮಾ ದೇವೇರು, ಬ್ರಹ್ಮದೇವರು, ವಾಯುದೇವರು, ಸರಸ್ವತೀದೇವೇರು, ಗರುಡ ದೇವರು, ಜಾಂಬವತ್ಯಾದಿ ಆರು ಮಂದಿ ಮಹಿಷಿಯರು, ಪಾರ್ವತೀ, ಇಂದ್ರ ದೇವರು, ಮನ್ಮಥನು, ಅಹಂಕಾರಿಕಪ್ರಾಣದೇವರು, ದೇವ ಗುರುಗಳಾದ ಬೃಹಸ್ಪತ್ಯಾಚಾರ್ಯರು, ಪ್ರವಹವಾಯುದೇವರು, ವಿವಸ್ವಾನಾಮಕ ಸೂರ್ಯ ದೇವರು, ವರುಣದೇವರು, ದೇವಋಷಿಗಳಾದ ನಾರದರು, ಅಗ್ನಿದೇವರು, ಸಪ್ತಋಷಿಗಳು, ಮಿತ್ರನಾಮಕಸೂರ್ಯ, ವಿಘ್ನೇಶ್ವರ, ಶತಸ್ಥರಕಕ್ಷ, ಪೃಥು ಚಕ್ರವರ್ತಿ, ಕರ್ಮಜಕಕ್ಷ, ಗಂಗಾದೇವೇರು, ಸ್ವಾಹಾದೇವೇರು, ಬುಧನು, ಉಷಾದೇವೇರು ಅಧ್ಯಾಹಾರದಿಂದ. ಅವಶಿಷ್ಟ ಕಕ್ಷದವರನ್ನು ಮುಂದಿನ ಶ್ಲೋಕದಲ್ಲಿ ಹೇಳತಾರೆ. ॥55॥

೨. ಭಾವಪ್ರಕಾಶಿಕೆ :-

ಈ ಪದ್ಯಕ್ಕೆ ತಾತ್ಪರ್ಯ ಬರೆದಿಲ್ಲ. ॥55॥

೩. ಭಾವದರ್ಪಣ :-

ಅತಿಕ್ಷಿಪ್ರದಿಂದ ಮನಸ್ಸಿಗೆ ಮನನವಾಗಲೆಂದು ಸಂಕೋಚವಾಗಿ ತಾರತಮ್ಯ ಎರಡು ಪದ್ಯದಿಂದ ಹೇಳುತ್ತಾರೆ, ನಿರುಪಮೇತಿ । ಉಕ್ತಂಚ ಬೃಹತ್ತಾರತಮ್ಯೇ । –"ವಿಷ್ಣುಃ ಶ್ರೀಬ್ರಹ್ಮವಾಣೀಶಾ ನೀಲಾ ಭದ್ರಾ ಸ್ಮರೋ ಗುರುಃ । ಪ್ರವಾಹ ಸೂರ್ಯ ವರುಣ ನಾರದಾಗ್ನಿ ವಸಿಷ್ಠಕಾಃ ॥ ಮಿತ್ರೋ ವಿಘ್ನೇಶ್ವರಶ್ಚೈವಾ ಪೃಥುರ್ಗಂಗಾಚ ಕೇಚನ । ಸ್ವಾಹಾ ಬುಧೋಷೋ ಶಾನಯಃ ಪುಷ್ಕರಾಜಾನ ದೇವತಾಃ ॥ ಪಿತರೋ ದೇವಮನುಜಾ ಗಂಧರ್ವಾಶ್ಚ ಕ್ರವರ್ತಿನಃ । ಮನುಷ್ಯೋತ್ತಮ ಪರ್ಯಂತಾ ಪ್ರೀಯತಾಂ ಗುರವೋ ಮಮೇತಿ. ॥55॥ ॥56॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಈ ಪದ್ಯಕ್ಕೆ ತಾತ್ಪರ್ಯವನ್ನು ಮುಂದಿನ ಪದ್ಯದ ಜೊತೆಯಲ್ಲಿ ಕೊಟ್ಟಿದೆ. ॥55॥

೫. ಶ್ರೀಗುರುಹೃದಯ ಪ್ರಕಾಶಿಕೆ :-

ಹೇಳಿದ ತಾರತಮ್ಯವನ್ನು ಸಂಗ್ರಹಿಸಿ ನಮಸ್ಕರಿಸುವ ಬಗೆಯನ್ನು ತಿಳಿಸುತ್ತಾರೆ ಅಧ್ಯಾಯಾಂತವಾಗಿ, ನಿರುಪಮ ಎಂದು. ನಿರುಪಮ ಎಂದರೆ, ಸರ್ವೋತ್ತಮ ಶ್ರೀವಿಷ್ಣು. ಲಕ್ಷ್ಮಿ, ಸರಸಿಜೋದ್ಭವನೆಂಬ ಬ್ರಹ್ಮ, ವಾಯುವೆಂಬ ಮುಖ್ಯಪ್ರಾಣ, ವಾಣೀ ಎಂಬ ಸರಸ್ವತೀ, ಗರುಡ, ಕೃಷ್ಣನ ಷಣ್ಮಹಿಷಿಯರು, ಪಾರ್ವತಿ, ಇಂದ್ರ–ಕಾಮ, ತ್ವಗಭಿಮಾನಿ ವಾಯುದೇವ, ಗುರುವೆಂಬ ಬೃಹಸ್ಪತಿ, ಪ್ರವಹನೆಂಬ ಭೂತವಾಯುವಿಗೆ ಅಭಿಮಾನಿ, ಸೂರ್ಯನು,

ವರುಣ, ನಾರದ, ಅಗ್ನಿ, ಅಂಗಿರ ಮೊದಲಾದವರು, ಬ್ರಹ್ಮಪುತ್ರರಾದ ಏಳು ಜನ ಋಷಿಗಳು, ಮಿತ್ರನೇಬ ಸೂರ್ಯ, ಗಣೇಶ, ಪೃಥುರಾಜ, ಗಂಗಾ, ಸ್ವಾಹಾದೇವಿ, ಬುಧನು. ॥55॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಸಜ್ಜನರ ಮನನಕ್ಕೋಸ್ಕರ ಸಂಕ್ಷಿಪ್ತವಾಗಿ ದೇವತಾ ತಾರತಮ್ಯ ಕ್ರಮವನ್ನು ತಿಳಿಸುತ್ತಾರೆ.

2. **ನಿರುಪಮ**–ಶ್ರೀಹರಿಯು ಅಸದೃಶಮಹಿಮಾಸಂಪನ್ನನು. ಆವನಿಗೆ ಸಮರಾಗಲೀ, ಅಧಿಕರಾಗಲೀ ಯಾವ ಕಾಲಕ್ಕೂ ಇಲ್ಲವೇ ಇಲ್ಲ. ಸರ್ವೋತ್ತಮನಾದ ಶ್ರೀಹರಿಯು ಸಮಾಭ್ಯಧಿಕ ಶೂನ್ಯನು. ಉಪಮ–ಎಂದರೆ ಸದೃಶರಾದವರು. ನಿರುಪಮ–ನಿಷೇಧಾರ್ಥದಲ್ಲಿ ಅಸದೃಶನೆಂದರ್ಥ.

3. **ಶ್ರೀವಿಷ್ಣು**–ಕಾಂತಿಸಂಪನ್ನನೂ, ಶುಭಮಂಗಳಚರಿತನೂ, ಅನಂತ ಕಲ್ಯಾಣಗುಣಗಣಧಾಮನೂ ಆದ ವಿಷ್ಣುವು. –**"ವಿಷ್‌ಲ್ಕೌ ವ್ಯಾಪ್ತೌ"**– ಎಂಬ ಪರಿಷ್ಕಾರದಿಂದ ವ್ಯಾಪ್ತಿಯು **"ವಿಷ್ಣು"** ಶಬ್ದದ ಅವಯವಾರ್ಥವು. –**"ಬೃಹವೃದ್ಧೌ"**–ಎಂದು ವೃದ್ಧಿಯು ಬ್ರಹ್ಮ ಶಬ್ದದ ಅವಯವಾರ್ಥವು. ಹೀಗೆ ಇವೆರಡೂ ಒಂದೇ ಅರ್ಥದ ಶಬ್ದಗಳು. ಇದರಿಂದ ಶ್ರುತಿಯಲ್ಲಿ ಪರಬ್ರಹ್ಮ ಶಬ್ದಕ್ಕೆ **"ವಿಷ್ಣು"**ವೆಂದೇ ಅರ್ಥವು. ಸರ್ವತ್ರವ್ಯಾಪ್ತನೂ, ಗುಣಪೂರ್ಣನೂ, ಆದ ಪರಬ್ರಹ್ಮನೇ ವಿಷ್ಣುವು.–**(ಪ್ರಥಮ ಕಕ್ಷ)**.

4. **ಲಕುಮಿ**–ಈಶಕೋಟಿ ಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿ. ಜಗಜ್ಜನನಿಯಾದ್ದರಿಂದಲೂ, ಜಗತ್ತಿನ ಸೃಷ್ಟಿಗೆ ಉಪಾದಾನ ಕಾರಣಳಾದ್ದರಿಂದಲೂ, **"ಲಕ್ಷ್ಮೀ"** ಎಂತ ನಾಮ. ಶ್ರೀಹರಿಗೆ ಕಾಲತಃ ದೇಶತಃ ಸಮ

ವ್ಯಾಪ್ತಳಾದ್ದಾಗ್ಯೂ, ನಿರಂತರದಲ್ಲಿ ಶ್ರೀವಿಷ್ಣುವಿನ ಅಧೀನಳು. ಶ್ರೀಹರಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಅವರಳು. **(ದ್ವಿತೀಯ ಕಕ್ಷ).**

5. **ಸರಸಿಜೋದ್ಭವ**-ಶ್ರೀಹರಿಯ ನಾಭೀಕಮಲದಲ್ಲಿ ಸಂಜಾತರಾದ ಚತುರ್ಮುಖ ಬ್ರಹ್ಮದೇವರು. ಋಜುಗಣ ಶ್ರೇಷ್ಠರು. ಪರಶುಕ್ಲತ್ರಯರಲ್ಲಿ ಸೇರಿದವರು.

6. **ವಾಯು**-ಸಮೀರನಾಮಕರಾದ ಮುಖ್ಯಪ್ರಾಣದೇವರು. ಭಾವೀ ಬ್ರಹ್ಮರು. ಅತಿರೋಹಿತ ವಿಮಲವಿಜ್ಞಾನಿಗಳು. ತ್ರೈಲೋಕ್ಯಾಚಾರ್ಯರು. ಶ್ವಾಸಪತಿಗಳು.

ಬ್ರಹ್ಮ-ವಾಯು ಮತ್ತು ಇತರ ಋಜುಗಣಸ್ಥರು- **3ನೆಯ ಕಕ್ಷಾಪನ್ನರು.**

7. **ವಾಣೀ**-ವಾಗಭಿಮಾನಿಯಾದ ಶ್ರೀಸರಸ್ವತೀದೇವಿಯರು. ಬ್ರಹ್ಮಪತ್ನಿ. ಈ ಶಬ್ದದಿಂದ ಶ್ರೀವಾಯುದೇವರ ಪತ್ನಿ ಶ್ರೀಭಾರತೀದೇವಿಯರೂ ಗ್ರಾಹ್ಯ.

ಸರಸ್ವತೀ-ಭಾರತೀ-ಇತರ ಋಜುಪತ್ನಿಯರು-**4ನೆಯ ಕಕ್ಷಾಪನ್ನರು.**

8. **ಗರುಡ**-ಕಾಲನಾಮಕ ಗರುಡದೇವರು. ವೈಕಾರಿಕಾಹಂಕಾರ ತತ್ತ್ವಾಭಿಮಾನಿದೇವತೆ. ಶ್ರೀಹರಿಯ ವಾಹನ. ಇದರಿಂದ ಶೇಷ ಮತ್ತು ರುದ್ರರೂ ಗ್ರಾಹ್ಯ.

ಗರುಡ-ಶೇಷ-ರುದ್ರ-ಈ ಮೂವರೂ ಅಹಂಕಾರ ತತ್ತ್ವಕ್ಕೆ ಅಭಿಮಾನಿಗಳು-**5ನೆಯ ಕಕ್ಷಾಪನ್ನರು.**

9. **ಷಣ್ಮಹಿಷಿಯರು**-ಶ್ರೀಕೃಷ್ಣ ಪತ್ನಿಯರಾದ ಆರು ಮಂದಿ

ಮಹಿಷಿಯರು. ಜಾಂಬವತೀ–ಕಾಳಿಂದೀ–ನೀಲಾ–ಭದ್ರಾ–ಲಕ್ಷಣಾ ಮತ್ತು ಮಿತ್ರವಿಂದಾ–6 **ನೆಯ ಕಕ್ಷಾಪನ್ನರು.**

10. **ಪಾರ್ವತೀ**-ಶ್ರೀರುದ್ರದೇವರ ಪತ್ನೀ ಪಾರ್ವತೀದೇವಿ. ಮತಿ ಪ್ರೇರಕರು. ಇದರಿಂದ ಗರುಡಪತ್ನಿ ಸೌಪರ್ಣೀ ಮತ್ತು ಶೇಷ ಪತ್ನಿ ವಾರುಣೀ ದೇವಿಯರೂ ಸಹ ಗ್ರಾಹ್ಯ. **—ಏಳನೆಯ ಕಕ್ಷಾಪನ್ನರು.**

11. **ಶಕ್ರ ಸ್ಮರ**-ಸುರಪತಿಯಾದ ಇಂದ್ರದೇವರು. ಮನಸ್ಸಿನ ಅಭಿಮಾನಿದೇವತೆ. ಇದರಿಂದ ಮನ್ಮಥನೂ ಗ್ರಾಹ್ಯ–**ಎಂಟನೆಯ ಕಕ್ಷಾಪನ್ನರು.**

12. **ಪ್ರಾಣ**–ಅಹಂಕಾರಿಕ ಪ್ರಾಣದೇವರು. 49 ಮರುದ್ಗಣಗಳಲ್ಲಿ ಒಬ್ಬರು. ತ್ವಗಿಂದ್ರಿಯಾಭಿಮಾನಿ ದೇವತೆ–**ಒಂಭತ್ತನೆಯ ಕಕ್ಷ.**

13. **ಗುರು ಬೃಹಸ್ಪತಿ**-ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರು. ಇದರಿಂದ ಇದೇ ಕಕ್ಷೆಗೆ ಸೇರಿದ ಸ್ವಾಯಂಭುವಮನು, ದಕ್ಷ ಪ್ರಜಾಪತಿ, ಅನಿರುದ್ಧ, ಶಚೀ, ರತೀ-ಇವರೂ ಗ್ರಾಹ್ಯ-**ಹತ್ತನೆಯ ಕಕ್ಷ.**

14. **ಪ್ರವಹ**-ಪ್ರವಹವಾಯುದೇವರು-47 ಮಂದಿ ವಾಯುಪುತ್ರರಿಗೆ ಅಧಿಪತಿಗಳು. ಭೂತವಾಯುವಿನ ಅಭಿಮಾನಿ ದೇವತಾ-**ಹನ್ನೊಂದನೆ ಕಕ್ಷ.**

15. **ಸೂರ್ಯನು**-ವಿವಸ್ವಾನ್‌ನಾಮಕ ಸೂರ್ಯದೇವರು. ಇದೇ ಕಕ್ಷಾಪನ್ನರಾದ ಚಂದ್ರ-ಯಮ-ಸ್ವಾಯಂಭುವಮನು ಪತ್ನಿ ಶತರೂಪಾ ದೇವಿಯರೂ ಗ್ರಾಹ್ಯ-**ಹನ್ನೆರಡನೆಯ ಕಕ್ಷ.**

16. **ವರುಣ**-ಜಲಾಭಿಮಾನಿದೇವತಾ, ರಸನೇಂದ್ರಿಯದಭಿಮಾನಿ. **ಹದಿಮೂರನೆಯ ಕಕ್ಷ.**

17. ನಾರದ-ದೇವರ್ಷಿಗಳಾದ ನಾರದರು-**ಹದಿನಾಲ್ಕನೆಯ ಕಕ್ಷ.**

18. ವಹ್ನಿ-ಅಗ್ನಿದೇವರು-ವಾಗಭಿಮಾನಿ ಹಾಗೂ ತೇಜೋ ತತ್ತ್ವಾಭಿಮಾನಿದೇವತಾ- ದೇವಮುಖನು (ಆಮರಾಸ್ಯ)-ಇದೇ ಕಕ್ಷಾಪನ್ನರಾದ ದಕ್ಷಪತ್ನಿ ಪ್ರಸೂತಿದೇವಿ-ಭೃಗುಋಷಿಗಳು-ಪ್ರಹ್ಲಾದರಾಯರು (ವಾಯ್ವಾವೇಶಬಲದಿಂದ ಕರ್ಮಜದೇವತೆಗಳಾದರೂ ಈ ಕಕ್ಷೆಗೆ ಸೇರಿದವರು)-**ಹದಿನೈದನೆಯ ಕಕ್ಷ.**

19. ಸಪ್ತಾಂಗಿರರು-ಮರೀಚಿ-ಅತ್ರಿ-ಅಂಗಿರಸ-ಪುಲಸ್ತ್ಯ-ಪುಲಹ ಕ್ರತು-ವಸಿಷ್ಠ-ಎಂಬ ಸಪ್ತರ್ಷಿಗಳು. ವಿಶ್ವಾಮಿತ್ರ ಮತ್ತು ವೈವಸ್ವತಮನು ಇದೇ ಕಕ್ಷಾಪನ್ನರು—**ಹದಿನಾರನೆಯ ಕಕ್ಷ.**

20. ಮಿತ್ರ-ಮಿತ್ರನಾಮಕಸೂರ್ಯ-ಇದೇ ಕಕ್ಷಾಪನ್ನರಾದ ನಿರುಋತಿ (ದಿಕ್ಪಾಲಕ)-ಪ್ರಾವಹೀ (ಪ್ರವಹ ವಾಯುವಿನ ಪತ್ನಿ) ಮತ್ತು ತಾರಾದೇವಿ (ಬೃಹಸ್ಪತ್ಯಾಚಾರ್ಯರ ಪತ್ನಿ).—**ಹದಿನೇಳನೆಯ ಕಕ್ಷ.**

21. ಗಣೇಶ-ವಿಘ್ನೇಶ್ವರ-ಭೂತಾಕಾಶಾಧಿಪತಿ-ಶಬ್ದಗುಣ ಗ್ರಹಕ-ಆದಿಪೂಜಿತ-ಇದೇ ಕಕ್ಷಕ್ಕೆ ಸೇರಿದ ವಿಷ್ವಕ್ಸೇನ (ವಾಯುಪುತ್ರ)-ಕುಬೇರ-ಅಶ್ವಿನೀ ದೇವತೆಗಳು—85 ಜನ ಶೇಷಶತಸ್ಥ ದೇವತಾವರ್ಗ—**ಹದಿನೆಂಟನೆಯ ಕಕ್ಷ.**

22. ಪೃಥು—ಚಕ್ರವರ್ತಿ ಕರ್ಮಜದೇವತಾ ಗಣಕ್ಕೆ ಸೇರಿದವನು. **ಹತ್ತೊಂಭತ್ತನೆಯ ಕಕ್ಷ.**

23. ಗಂಗಾ-ವರುಣಪತ್ನೀ ಗಂಗಾದೇವಿ ಶ್ರೀಹರಿಯ ಪಾದೋದ್ಭವೆ, ಸೂರ್ಯಪತ್ನೀ ಸಂಜ್ಞಾದೇವಿ—ಚಂದ್ರಪತ್ನೀ ರೋಹಿಣೀ—ಯಮದೇವರ ಪತ್ನಿ ಶ್ಯಾಮಲಾದೇವಿ—ಅನಿರುದ್ಧನ ಪತ್ನಿ ಉಷಾ ಮತ್ತು ಪರ್ಜನ್ಯ ದೇವತೆಗಳು. **ಇಪ್ಪತ್ತನೆಯ ಕಕ್ಷ.**

24. ಸ್ವಾಹಾ-ಅಗ್ನಿದೇವರ ಪತ್ನಿ-ಇಪ್ಪತ್ತೆರಡನೆಯ ಕಕ್ಷ. (ಅನಾಖ್ಯಾತ ಕರ್ಮಜದೇವತೆಗಳು .ಇಪ್ಪತ್ತೊಂದನೆಯ ಕಕ್ಷಾಪನ್ನರು).

25. ಬುಧನು.ಜಲಾಭಿಮಾನಿದೇವತಾ-ಚಂದ್ರನ ಪುತ್ರ-ಇಪ್ಪತ್ತ ಮೂರನೆಯ ಕಕ್ಷ. ಉಳಿದ ದೇವತಾ ತಾರತಮ್ಯವನ್ನು ಮುಂದಿನ ಪದ್ಯದಲ್ಲಿ ಮುಂದುವರಿಸುತ್ತಾರೆ. ॥55॥

**

## ಪದ್ಯ - ೫೬

**ಮೂಲ :–**

**ತರುಣಿತನಯು ಶನೈಶ್ಚರನು ಪು ।**
**ಷ್ಕರನಜಾನಜ ಚಿರಪಿತರು ಗಂ ।**
**ಧರ್ವರೀರ್ವರು ದೇವ ಮಾನುಷ ಚಕ್ರವರ್ತಿಗಳು ॥**
**ನರರೊಳುತ್ತಮ ಮಧ್ಯಮಾಧಮ ।**
**ಕರೆಸುವರು ಮಧ್ಯೋತ್ತಮರು ಈ ।**
**ರೆರಡು ಜನ ಕೈವಲ್ಯಮಾರ್ಗಸ್ಥರೆಂದಾನರಿಹೆ ॥೫೬॥**

**ಅವತರಣಿಕೆ :–**

ಅವಶಿಷ್ಟ ದೇವತಾವರ್ಗದ ತಾರತಮ್ಯ ಕ್ರಮವನ್ನು ತಿಳಿಸುತ್ತಾರೆ. ॥56॥

**ಪ್ರತಿಪದಾರ್ಥ :–**

**ತರಣಿತನಯ** = ಸೂರ್ಯಪುತ್ರನಾದ, **ಶನೈಶ್ಚರನು** = ಶನಿಯು, **ಪುಷ್ಕರನು** = ಕರ್ಮಾಭಿಮಾನಿ ಪುಷ್ಕರನು, **ಅಜಾನಜ** = ಅಜಾನಜ ದೇವ

ತೆಗಳು, **ಚಿರಪಿತರು** - ಚಿರಾಖ್ಯ ಪಿತೃದೇವರು, **ಗಂಧರ್ವರೀರ್ವರು** ದೇವಗಂಧರ್ವರು–ಮನುಷ್ಯಗಂಧರ್ವರು ಎಂಬ ಎರಡು ವರ್ಗ, **ದೇವ ಮಾನುಷಚಕ್ರವರ್ತಿಗಳು** = ದೇವ ಮತ್ತು ಮಾನುಷ ಚಕ್ರವರ್ತಿಗಳು, **ನರರೊಳು** = ಮುಕ್ತಿಯೋಗ್ಯರಾದ ಮಾನುಷರಲ್ಲಿ, **ಉತ್ತಮ** = ಉತ್ತಮಾಧಿಕಾರಿಗಳು, **ಮಧ್ಯಮ** ಮಧ್ಯಮಾಧಿಕಾರಿಗಳು, **ಅಧಮ** = ಅಧಮಾಧಿಕಾರಿಗಳು, **ಕರೆಸುವರು** = ಎಂದು ಕರೆಯಿಸುವವರಾಗುತ್ತಾರೆ. ಅಂದರೆ ಉತ್ತಮರು-— ಮಾನುಷ್ಯೋತ್ತಮರು. ಮಧ್ಯಮರು– ನಿತ್ಯಸಂಸಾರಿಗಳು ಮತ್ತು ಅಧಮರು-—ತಮೋಯೋಗ್ಯರು ಎಂದೂ ಅರ್ಥೈಯಿಸಬಹುದು. **ಈರೆರಡು ಜನ** = ಈ ನಾಲ್ಕು ಜನ, ಅಂದರೆ, (1) ಶತಸ್ಥರ ಪರ್ಯಂತ ದೇವತಾಗಣ. (2) ಪುಷ್ಕರನ ಪರ್ಯಂತ ಕರ್ಮಜದೇವತಾ ಸಮೂಹ. (3) ಮಾನುಷಗಂಧರ್ವರು ಮತ್ತು (4) ತೃಣಾಂತ ನಿರಂಶರು. **ಮಧ್ಯಮೋತ್ತಮರು** = ಈ ನಾಲ್ಕು ವರ್ಗದಲ್ಲಿ ದೇವತೆಗಳು ಉತ್ತಮರು. **ಕೈವಲ್ಯ ಮಾರ್ಗಸ್ಥರೆಂದು** = ಮುಕ್ತಿಯೋಗ್ಯಜೀವರೆಂದು (ಪೂರ್ವೋಕ್ತ ನಾಲ್ಕು ವರ್ಗಗತ ಮಂದಿ), **ಅನವಿಲಪೆ** = ಚೆನ್ನಾಗಿ ಸಮಸ್ಕರಿಸುತ್ತೇನೆ. ॥56॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಅವಶಿಷ್ಟ ತಾರತಮ್ಯ ಹೇಳತಾರೆ.

ಸೂರ್ಯ ಪುತ್ರನಾದ ಶನ್ಯೆಶ್ಚರನು. ಕರ್ಮಾಭಿಮಾನಿ ಪುಷ್ಕರನು. ಆಜಾನಜದೇವತೆಗಳು. ಚಿರಾಖ್ಯ ಪಿತೃದೇವತೆಗಳು. ಇಬ್ಬರು ಗಂಧರ್ವರು ದಾರೆಂದರೆ, ದೇವಗಂಧರ್ವರು, ಮನುಷ್ಯಗಂಧರ್ವರು. ಮಾನುಷಚಕ್ರವರ್ತಿಗಳು. ಮುಕ್ತಿಯೋಗ್ಯರಾದ ಮಾನುಷರೊಳು ಉತ್ತಮರು, ಮಧ್ಯಮರು

ಅಧಮರು, ಎಂತ ಕರಸೋವರಾಗತಾರೆ. ಮತ್ತು ಉತ್ತಮರು ಮಾನುಷ್ಯೋತ್ತಮರು. ಮಧ್ಯಮರು ನಿತ್ಯಸಂಸಾರಿಗಳು. ಅಧಮರು ತಮೋಯೋಗ್ಯರು ಎಂತಲೂ ತಾತ್ಪರ್ಯವೇ, ಎರಡು ಪ್ರಕಾರ. ಈರೆರಡು ಎಂದರೆ ನಾಲ್ಕು ಜನ. ಶತಸ್ಥರ ಪರಿಯಂತ ದೇವತೆಗಳು. ಪುಷ್ಕರನ ಪರಿಯಂತ ಕರ್ಮಜರು. ಮಾನುಷಗಂಧರ್ವರಾರಭ್ಯ ತೃಣಾಂತ ನಿರಂಶರು, ಅಂತು ನಾಲ್ಕು ಜನ. ಈ ನಾಲ್ಕು ಜನರ ಮಧ್ಯದಲ್ಲಿ ದೇವತೆಗಳು ಉತ್ತಮರು. ಈ ನಾಲ್ಕು ವಿಧರು ಮುಕ್ತಿಯೋಗ್ಯರು ಎಂದು ಇವರಿಗೆ ಚಂದಾಗಿ ವಂದನೆಯ ಮಾಡುವೆ ಎಂತ ತಾತ್ಪರ್ಯ. ॥56॥

**೨. ಭಾವಪ್ರಕಾಶಿಕೆ :–**

ಈ ಪದ್ಯಕ್ಕೆ ತಾತ್ಪರ್ಯ ಕೊಟ್ಟಿಲ್ಲ. ॥56॥

**೩. ಭಾವದರ್ಪಣ :–**

ಈ ಪದ್ಯದ ತಾತ್ಪರ್ಯವನ್ನು ಹಿಂದಿನ ಪದ್ಯದ ಜೊತೆಯಲ್ಲೇ ಕೊಟ್ಟಿದೆ. ॥56॥

**೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :–**

ತರತಮ ಭಾವಾಪನ್ನದೇವಾಃ ಕ್ರಮೇಣೇಯಂತ ಇತಿ ಬುಧ್ಯವತಾರಾರ್ಥಂ ಏಕೈಕ ದೇವಾನಾದಾಯ ಸಂಗ್ರಾಹಕ ಪದ್ಯಾನಿ ಕೃತಾನಿ ಶ್ರೀಮುಷ್ಣವಿಠ್ಠಲಾಚಾರ್ಯೈಃ ಅಂತೇ । ತತ್ತದರ್ಥಕ ಪದ್ಯದ್ವಯಮಂತೇ ನಿಬಧ್ನಾತಿ 'ನಿರುಪಮ' ಇತಿ ॥

ವಿಷ್ಣುಃ ಶ್ರೀಬ್ರಹ್ಮಾ ವಾಣೀಶೋಮಾನಿಲೇಂದ್ರಾ ಅಸುರ್ಗುರುಃ ॥
ಪ್ರವಹಃ ಸೂರ್ಯವರುಣ ನಾರದಾಗ್ನಿ ವಶಿಷ್ಠಕಾಃ ॥
ಮಿತ್ರ ವಿಘ್ನೇಶ್ವರೌ ಚೈವ ಪೃಥುಃ ಗಂಗಾಚ ಕೇಚನ ॥

ಸ್ವಾಹಾ ಬುಧೋಷಾಶ್ಚ ಶನಿಃ ಪುಷ್ಕರಃ ಕರ್ಮದೇವತಾಃ ॥
ಪಿತರಃ ದೇವ ಮನುಜ ಗಂಧರ್ವಾಃ ಚಕ್ರವರ್ತಿನಃ ॥
ಮನುಷ್ಯೋತ್ತಮ ಪರ್ಯಂತಾಃ ಪ್ರೀಯಂತಾಂ ಗುರುವಃ ಮಮ ॥
ಮಧ್ಯೋಚ್ಚಾಃ ಮಧ್ಯಾಃ ಋಷಯಃ ಉಚ್ಚಾಃ ದೇವಾಃ ॥

ಏವಮನ್ಯ ವಿವಕ್ಷಿತಾ ಏವಮ್ ॥ ಭಾ. ಏ. ತಾ ॥ ಅಧಮಾ ಮಾನುಷೋತ್ಕೃಷ್ಟಾಃ ತೇ ಚಾಪಿ ತ್ರಿವಿಧಾ ಮತಾಃ ॥ ಇತಿ ॥ ಕೈವಲ್ಯಂ ಯೋಗ್ಯಂ ॥

ತತಶ್ಚಾನುಮಾನವಮ್ ಏತತ್ ಕಥಾಮೃತಸಾರಃ ಏತದ್ಗ್ರಂಥ ಮೂಲಃ ಕ್ವಚಿತ್ ಕ್ವಚಿತ್ ತದಾಸುಪೂರ್ವ್ಯ ಪೇತ ತಶ್ಲೋಕ್ತ ನಿದರ್ಶನ ಪ್ರದರ್ಶಕ ಸುಮಂಗಲ ಪದವತ್ವಾತ್ ಸೂತ್ರಭಾಷ್ಯ ಪ್ರತಿಮೂಲ ಗುರೂತ್ಥ (ಕ್ರ) ಗುಂಡಕ್ರಿಯಾದಿವತ್ ಇತಿ ಉಕ್ತಂ ಭವತಿ ॥ ಯಥಾಹುಃ ಆಚಾರ್ಯಾಃ ದಶ ಪ್ರಮತಿಶಾಸ್ತ್ರಸಜ್ಜಲಧಿತೋऽಮರಾಣಾಂ ಹರೇಃ ಪ್ರವೇಶನ ಸುತಾರತಮ್ಯ ಜನಿಜಾತಿ ರತ್ನಾನಿ ಚ ॥ ವಿಮೃಗ್ಯ ವಿನಿಷ್ಕೃಷ್ಯ ಸಜ್ಜನಪರೀಕ್ಷಯಾ ವ್ಯಾಸ ರಾಟ್ ಪ್ರತಿಷ್ಠ ಇತಿ ವಿಠ್ಠಲೋನುಪಮ ಸುಕಂಠಮಾಲಾಂ ವ್ಯಧಾತ್ ॥ ಇತಿ ॥
॥55॥ ॥56॥

## ಕನ್ನಡಾರ್ಥ

ಇಷ್ಟು ತಾರತಮ್ಯಸಾಲಿನಲ್ಲಿ ಬರುವ ದೇವತೆಗಳೆಂಬ ಸಂಗ್ರಹಜ್ಞಾನವಾಗಲು ಒಂದೊಂದು ದೇವತೆಯನ್ನು ಸಂಗ್ರಹಿಸಿ ಪದ್ಯಗಳನ್ನು ಶ್ರೀಮುಷ್ಣ ವಿಠ್ಠಲಾಚಾರ್ಯರು ಕೊನೆಯಲ್ಲಿ ರಚಿಸಿರುತ್ತಾರೆ. ಅದರ ಅರ್ಥಗಳನ್ನು ತಿಳಿಸುವಂತೆ ಈ ಎರಡು ಪದ್ಯಗಳನ್ನು ಇಲ್ಲಿ ಹೇಳುತ್ತಾರೆ.

1) ನಾರಾಯಣ. 2) ಲಕ್ಷ್ಮೀ. 3) ಬ್ರಹ್ಮ (ವಾಯು). 4) ಸರಸ್ವತಿ-ಭಾರತಿ. 5) ಗರುಡ (ಶೇಷ, ರುದ್ರ). 6) ಉಮಾ. 7) ಪ್ರಾಣ. 8) ಕಾಮ. ಇಂದ್ರ. 9) ಗುರು. 10) ಪ್ರವಹ. 11) ಸೂರ್ಯ. 12. ವರುಣ. 13) ನಾರದ. 14) ಅಗ್ನಿ. 15) ವಸಿಷ್ಠ ಮುಂತಾದವರು.

16) ಮಿತ್ರ. 17) ವಿಘ್ನೇಶ್ವರ. 18) ಪೃಥು. 19) ಗಂಗಾ. 20)ಸ್ವಾಹಾ. 21) ಬುಧ. 22) ಉಷಾ. 23) ಶನಿ. 24) ಪುಷ್ಕರ. 25)ಆಜಾನಜರು. 26)ಕರ್ಮದೇವತೆಗಳು. 27)ಪಿತೃಗಳು. 28)ದೇವಗಂಧ ರ್ವರು, 29) ಮನುಷ್ಯ ಗಂಧರ್ವರು. 30) ಚಕ್ರವರ್ತಿಗಳು. 31) ಮನು ಷ್ಯೋತ್ತಮರು. ಈ ಪರ್ಯಂತವಾಗಿರುವ ಎಲ್ಲರೂ ನಮಗೆ ಗುರುಗಳು.

ಮಧ್ಯೋಚ್ಚಾಃ = (ಮಧ್ಯ = ಋಷಿಗಳು, ಉಚ್ಚಾಃ = ದೇವತೆಗಳು).

ಅಧಮರಾದ ಮನುಷ್ಯೋತ್ತಮರಲ್ಲಿಯೂ ಮೂರು ವಿಧಗಳೆಂದು ಏಕಾ ದಶ ಭಾಗವತ ತಾತ್ಪರ್ಯದಲ್ಲಿ ಹೇಳಲಾಗಿರುತ್ತದೆ.

ಕೈವಲ್ಯಮಾರ್ಗಸ್ಥರು ಎಂದರೆ, ಮುಕ್ತಿಯೋಗ್ಯರು ಎಂದು ಅರ್ಥ.

ಕೆಲವೆಡೆಗಳಲ್ಲಿ ಶ್ರೀಮದಾಚಾರ್ಯರ ವಚನಗಳಿಂದ ಗರ್ಭಿತವಾಗಿದೆ. ಹಾಗೂ ಅಲ್ಲಿ ತೋರಿಸಿದ ದೃಷ್ಟಾಂತಗಳನ್ನು ತಿಳಿಸುವ ಸುಮಂಗಲ ಪದ್ಯ ಗಳನ್ನೂ ಒಳಗೊಂಡಿದೆ. ಆದುದರಿಂದ ಈ ಹರಿಕಥಾಮೃತಸಾರವು ಶ್ರೀಮೂಲಗ್ರಂಥಾನುಗುಣವಾಗಿದೆ. ಇದರಲ್ಲಿ ಭಾಷ್ಯ.ಶ್ರುತಿ ಮೂಲಕವಾಗಿರುವ ಶ್ರೀವಾದಿರಾಜರ ಗುಂಡಕ್ರಿಯಾ ಮುಂತಾದವುಗಳೇ ದೃಷ್ಟಾಂತ.

ಈ ಯುಕ್ತಿಯಿಂದ ಹರಿಕಥಾಮೃತಸಾರವು ಮೂಲಸಮ್ಮತವೆಂದು ಸಿದ್ಧ ವಾಗುತ್ತದೆ.

ಶ್ರೀಆಚಾರ್ಯರು ಮಾತ್ರ—

–"ಆನಂದತೀರ್ಥರ ಶಾಸ್ತ್ರಜಲಧಿಯಿಂದ, ಹರಿಯಿಂದ ಆರಂಭಿಸಿ, ದೇವತೆಗಳವರೆಗಿನ ತಾರತಮ್ಯಗಳೆಂಬ ರತ್ನಗಳನ್ನು ಹುಡುಕಿ, ಹೊರತೆಗೆದು ಅವುಗಳನ್ನು ಪೋಣಿಸಿ ಮಾಲೆಯನ್ನು ಮಾಡಿ, ಅದನ್ನು ಮುಖ್ಯಪ್ರಾಣಪತಿ ಹರಿಯ ಕೊರಳಿನಲ್ಲಿ ವ್ಯಾಸಪ್ರಶಿಷ್ಯರಾದ ಶ್ರೀವಿಠ್ಠಲಾಚಾರ್ಯರು ಅಲಂಕರಿಸಿರು ತ್ತಾರೆ"–ಎಂದು ಹೇಳಿರುತ್ತಾರೆ. ॥55॥ ॥56॥

**ಜ. ಶ್ರೀಗುರುಹೃದಯ ಪ್ರಕಾಶಿಕೆ :–**

ಸೂರ್ಯ ಪುತ್ರ ಶನೈಶ್ಚರ, ಪುಷ್ಕರನೆಂಬ ಸತ್ಕರ್ಮಾಭಿಮಾನಿ ದೇವತೆ, ಆಜಾನಜದೇವತೆಗಳು, ಚಿರಪಿತೃಗಳು, ದೇವಗಂಧರ್ವರು, ನರಗಂಧರ್ವರು ಎಂದು ಎರಡು ಬಗೆ ಗಂಧರ್ವರು, ಮನುಷ್ಯರಾಜರು, ಮನುಷ್ಯೋತ್ತಮರು, ರಜಸ್ಸಾತ್ತ್ವಿಕರೆಂಬ ಭಕ್ತರೂ ಸಹ. ಈ ನಾಲ್ಕು ಬಗೆಯಾದಂಥ ಭಕ್ತರು ಕೈವಲ್ಯಮಾರ್ಗರೆಂದು ಅಂದರೆ, ಮುಕ್ತಿಯೋಗ್ಯರೆಂದು ನಮಿಸುವೆನು. ನರರೊಳು ಉತ್ತಮ ಮಧ್ಯಮಾಧಮ ಕರೆಸುವರು. ಮಧ್ಯೋತ್ತಮರು ಎಂದರೆ ಸಾತ್ತ್ವಿಕ ತಾಮಸರಲ್ಲಿ ಸೇರಿದ ಮನುಷ್ಯೋತ್ತಮ ಗಣ ಒಂದು, ರಜಸ್ಸತ್ತ್ವರೆಂಬ ಮುಕ್ತಿಯೋಗ್ಯ ಮನುಷ್ಯಗಣ ಒಂದು, ರಜೋರಜರೆಂಬ ನಿತ್ಯಸಂಸಾರಿ ಗಣ ಒಂದು ಅಂತೂ ನಾಲ್ಕರಲ್ಲಿ ಮೊದಲು ಹೇಳಿದ ಎರಡು ಗಣವು ಮುಕ್ತಿಯೋಗ್ಯರೆಂದು ಅಭಿಪ್ರಾಯ. ॥56॥

## ಸರ್ವವ್ಯಾಖ್ಯಾನಸಾರಸಂಗ್ರಹ

**1. ತರಣಿತನಯ :–**

ಹಿಂದಿನ ಪದ್ಯದಿಂದ ಮುಂದುವರಿಸಿ, ಪ್ರಸಕ್ತಪದ್ಯದಲ್ಲಿ ಅವಶಿಷ್ಟರಾದ ನರ ತಾರತಮ್ಯ ಕ್ರಮವನ್ನು ತಿಳಿಸುತ್ತಾರೆ. ತರಣಿ–ಸೂರ್ಯ. ತನಯ–ಪುತ್ರ, ಶನೈಶ್ಚರನು. ಸೂರ್ಯನ ಮಗನು. ಛಾಯಾದೇವಿಯಲ್ಲಿ ಸಂಭೂತನು. ಈತನು ಪೃಥ್ವೀತತ್ತ್ವಕ್ಕೆ ಅಭಿಮಾನಿಯು–25ನೆಯ **ಕಕ್ಷಾಪನ್ನನು.** ಧರಾದೇವಿ (ಧರಣೀದೇವಿ)ಯೂ ಸಹ ಇದೇ ಕಕ್ಷೆಗೆ ಸೇರಿದವರು.

**2. ಪುಷ್ಕರ :–**

ಸತ್ಕರ್ಮಾಭಿಮಾನಿ ದೇವತಾ **ಪುಷ್ಕರನು** ಮುಂದಿನ, ಅಂದರೆ, **26 ನೆಯ ಕಕ್ಷಾಪನ್ನನು.**

3. **ಆಜಾನಜರು :–**

ಆಜಾನಜ ದೇವತಾವರ್ಗ ಮತ್ತು ಶತೋನ ಶತಕೋಟಿ ಋಷಿಗಳವರ್ಗ **27 ನೆಯ ಕಕ್ಷೆಗೆ ಸೇರಿದವರು.**

4. **ಚಿರಪಿತೃಗಳು :.**

ಚಿರಾಖ್ಯ ಪಿತೃದೇವತೆಗಳು. **28ನೆಯ ಕಕ್ಷಾಪನ್ನರು.**

5. **ಗಂಧರ್ವರೀರ್ವರು :.**

ಗಂಧರ್ವರಲ್ಲಿ ಎರಡು ಪ್ರಕಾರ ವರ್ಗಗಳಿವೆ. (1) ದೇವಗಂಧರ್ವರು ಮತ್ತು (2) ಮನುಷ್ಯಗಂಧರ್ವರು.

ದೇವಗಂಧರ್ವರು **29ನೆಯ ಕಕ್ಷಾಪನ್ನರು.** ಮನುಷ್ಯಗಂಧರ್ವರು **30ನೆಯ ಕಕ್ಷಾಪನ್ನರು.**

6. **ಚಕ್ರವರ್ತಿಗಳು :–**

ಇದರಲ್ಲಿ ಉತ್ತಮವರ್ಗ ಮತ್ತು ಮನುಷ್ಯರಾಜರು ಎಂಬ ಎರಡು ವರ್ಗಗಳಿವೆ. ಮನುಷ್ಯರಾಜರು **31ನೆಯ ಕಕ್ಷೆಗೆ ಸೇರಿದವರು.**

7. **ನರರೊಳುತ್ತಮ :–**

ಮನುಷ್ಯೋತ್ತಮಾದಿ ತೃಣಾಂತಜೀವರು 32ನೆಯ **ಕಕ್ಷಾಪನ್ನರು.**

ಇದರಲ್ಲಿ ಉತ್ತಮಾಧಿಕಾರಿಗಳು–ಮಧ್ಯಮಾಧಿಕಾರಿಗಳು ಅಧಮಾಧಿಕಾರಿಗಳು ಎಂದು ಮೂರು ಪ್ರಕಾರ. ಇವರಲ್ಲದೆ ಮಧ್ಯಮವರ್ಗವೆಂದರೆ, ರಜೋ–ಜೀವರಲ್ಲಿ (ನಿತ್ಯಸಂಸಾರಿಗಳು) ರಜಸ್ಸಾತ್ತ್ವಿಕರು. (ಮಧ್ಯಮ ಜೀವರಲ್ಲಿ ಸಾತ್ವಿಕರು) **ಮಧ್ಯಮೋತ್ತಮರೆನಿಸುವರು.**

ಮಾನುಷೋತ್ತಮರಲ್ಲಿ ಉತ್ತಮ–ಮಧ್ಯಮ–ಅಧಮ ಎಂಬ ಮೂರು **ವರ್ಗ ಮತ್ತು** ರಾಜಸರಲ್ಲಿ ಮಧ್ಯಮೋತ್ತಮರು ಈ ನಾಲ್ಕು ಮಂದಿ (**ಈರೆ**

ರಡು ಜನ) ಮುಕ್ತಿಯೋಗ್ಯ ಚೇತನರೆನಿಸುತ್ತಾರೆ(ಕೈವಲ್ಯ ಮಾರ್ಗಸ್ಥರು.) ಈ ವರ್ಗಕ್ಕೆಲ್ಲಾ ಭಕ್ತಿಪೂರ್ವಕವಾಗಿ ನಮಿಸುತ್ತೇನೆಂದು ದಾಸವರ್ಯರು ಹೇಳುತ್ತಾರೆ. ।56।

**

## ಪದ್ಯ–೫೭

**ಮೂಲ :–**

ಸಾರಭಕ್ತಿ ಜ್ಞಾನದಿ ಬೃಹ।
ತ್ತಾರತಮ್ಯವನರಿತು ಪಠಿಸುವ।
ಸೂರಿಗಳಿಗನುದಿನದಿ ಪುರುಷಾರ್ಥಗಳ ಪೂರೈಸಿ ॥
ಕಾರುಣಿಕ ಮರುತಾಂತರಾತ್ಮಕ।
ಮಾರರಮಣ ಜಗನ್ನಾಥವಿಠ್ಠಲ।
ತೋರಿಕೊಂಬನು ಹೃತ್ಕಮಲದೊಳು ಯೋಗ್ಯತೆಗಳರಿತು ॥

॥೫೭॥

**ಅವತರಣಿಕೆ :–**

ಪ್ರಸಕ್ತ ಸಂಧಿಗತ ಬೃಹತ್ತಾರತಮ್ಯವೆಂಬ ತತ್ತ್ವ ಪ್ರಮೇಯಾರ್ಥಗಳನ್ನು ಪಠನ ಮಾಡುವವರಿಗೆ, ಜ್ಞಾನಾನುಸಂಧಾನದಿಂದ ತಿಳಿದುಕೊಳ್ಳುವವರಿಗೆ ಆಗುವ ಫಲಸ್ತುತಿಯನ್ನು ತಿಳಿಸುತ್ತಾರೆ. ।57।

**ಪ್ರತಿಪದಾರ್ಥ :-**

**ಸಾರ** = ಸಾರಭೂತನಾದ ಶ್ರೀಪರಮಾತ್ಮನಲ್ಲಿ, **ಜ್ಞಾನದಿ** = ತಾರತಮ್ಯ ಪಂಚಭೇದಾತ್ಮಕ ಸಮೀಚೀನವಾದ ಜ್ಞಾನದಿಂದ, **ಭಕ್ತಿ** = ಸ್ನೇಹ ರೂಪವಾದ ಭಕ್ತಿಪೂರ್ವಕವಾಗಿ, **ಬೃಹತ್ತಾರತಮ್ಯವನು** = ಪ್ರಸಕ್ತ ಸಧಿಗತ ಬೃಹತ್ತಾರತಮ್ಯ ಪ್ರಕರಣವನ್ನು, **ಅರಿತು** = ಜ್ಞಾನಾನುಸಂಧಾನ ಪೂರ್ವಕ ತಿಳಿದು, **ಪಠಿಸುವ** = ಪಠಣ ಮಾಡತಕ್ಕ (ಅಧ್ಯಯನ ಮಾಡುವ), **ಸೂರಿಗಳಿಗೆ** = ಜ್ಞಾನಿಗಳಿಗೆ, **ಅನುದಿನದಿ** = ಪ್ರತಿದಿನದಲ್ಲಿಯೂ, **ಪುರುಷಾರ್ಥಗಳ ಪೂರೈಸಿ** = ಪ್ರಯೋಜನಪ್ರದಗಳಾದ ಇಷ್ಟಾರ್ಥಗಳನ್ನು ಕೊಟ್ಟು, **ಕಾರುಣಿಕ** = ಕರುಣಾವಂತನಾದ, **ಮರುತಾಂತರಾತ್ಮಕ** = ಶ್ರೀಭಾರತೀಪತಿಮುಖ್ಯಪ್ರಾಣಾಂತರ್ಗತ, **ಮಾರಮಣ** ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು, **ಜಗನ್ನಾಥವಿಠ್ಠಲ** = ಜಗತ್ಪತಿಯಾದ ಅಂಕಿತನಾಮ ಸಾಂಕೇತನಾದ ವಿಠ್ಠಲರೂಪೀ ಬಿಂಬನು, **ಯೋಗ್ಯತೆಗಳರಿತು** = ಅವರವರ ಯೋಗ್ಯತಾನುಸಾರ, **ಹೃತ್ಕಮಲದೊಳು** = ಹೃದಯಾಂತರ್ಗತ ಅಷ್ಟದಳಾತ್ಮಕ ಕಮಲದಲ್ಲಿ, (ಹೃತ್ಪದ್ಮದಲ್ಲಿ). **ತೋರಿಕೊಂಬನು** = ಪ್ರತ್ಯಕ್ಷರೂಪದಿಂದ ಅಭಿವ್ಯಕ್ತನಾಗುವನು. ॥57॥

**॥ ಇಲ್ಲಿಗೆ ಪ್ರಸಕ್ತ ಸಂಧಿಗತ 57ನೆಯ ಪದ್ಯದ ಪ್ರತಿಪದಾರ್ಥ ಮುಗಿಯಿತು ॥**

## ವ್ಯಾಖ್ಯಾನಗಳು

### ೧. ಶೇಷಸಂಕರ್ಷಣ ಒಡೆಯರ ವ್ಯಾಖ್ಯಾನ :-

ಈ ಸಂಧಿಯನ್ನು ಪಠನಾದಿಗಳ ಮಾಡುವವರಿಗೆ ಫಲವನ್ನು ಹೇಳತಾರೆ.

ಸಾರಭೂತನಾದ ಶ್ರೀಪರಮಾತ್ಮನಲ್ಲಿ, ತಾರತಮ್ಯ ಪಂಚಭೇಧ ಜ್ಞಾನದಿಂದ ಸ್ನೇಹೋಪೇತ ಭಕ್ತಿಪೂರ್ವಕವಾಗಿ ದೇವರ ಮಹಾತ್ಮ್ಯೆ, ದೇವತೆಗಳ ಮಹಿಮಾತ್ಮ್ಯೆ ತಿಳಿದು, ಈ ಬೃಹತ್ತಾರತಮ್ಯವನ್ನು ಪಠನಮಾಡತಕ್ಕ ಜ್ಞಾನಿಗಳಿಗೆ ಪ್ರತಿ ದಿನದಲ್ಲೂ ಪ್ರಯೋಜನಗಳಾದ ಇಷ್ಟಾರ್ಥಗಳ ಕೊಟ್ಟು, ಸರ್ವ ಮೂಲಕ್ಕೂ ಕಾರಣನಾದ ಶ್ರೀಭಾರತೀಪತಿಮುಖ್ಯಪ್ರಾಣಾಂತರ್ಗತ ಲಕ್ಷ್ಮೀಪತಿಯಾದ ಶ್ರೀನಾರಾಯಣದೇವರಾದ, ಜಗತ್ತಿಗೇ ಸ್ವಾಮಿಯಾದ ವಿಠ್ಠಲ ಸಾಂಕೇತನಾದ ಶ್ರೀಬಿಂಬರೂಪೀ ಪರಮಾತ್ಮನು ಅವರವರ ಯೋಗ್ಯತಾ ತಿಳಿದವನಾಗಿ ಹೃದಯಾಂತರ್ಗತ ಅಷ್ಟಕಮಲದೊಳು ಪ್ರತ್ಯಕ್ಷನಾಗುವನು. ॥57॥

**ನಿರಂತರಾದ ಪ್ರಾಣಿಗಳೂ ಸೇರಿದಂತೆ ದೇವಾಲಯ ಜಲಾಶಯಗಳ ಆಯುಶ್ಶಾನ ವಿವರ :—**

| ಕ್ರಮ ಸಂಖ್ಯಾ. | ಪ್ರಾಣಿಗಳು. | ಆಯುಷ್ಯ ವರ್ಷಗಳು. |
|---|---|---|
| 1. | ಮನುಷ್ಯರು. | 100. |
| 2. | ವೃಕ್ಷಗಳು. | 1000. |
| 3. | ಕುದುರಿಗಳು. | 32. |
| 4. | ಗಜಗಳು. | 120. |
| 5. | ಹುಲಿಗಳು. | 64. |
| 6. | ಕಾಗಿಗಳು. | 1000. |
| 7. | ಸರ್ಪಗಳು. | 1000. |
| 8. | ಭಲ್ಲೂಕ(ಕರಡಿ)ಗಳು. | 300. |
| 9. | ಕೋತಿಗಳು. | 300. |
| 10. | ಕಪ್ಪೆಗಳು. | 300. |
| 11. | ನವಿಲುಗಳು. | 20. |
| 12. | ಶುಕಗಳು. | 13. |
| 13. | ಪಕ್ಷಿಗಳು. | 20. |

| | | |
|---|---|---|
| 14. | ಇರುವೆಗಳು. | 1. |
| 15. | ಕತ್ತೆಗಳು. | 24. |
| 16. | ಮ್ಯಾಕೆಗಳು. | 12. |
| 17. | ಗಿಣಿಗಳು. | 12. |
| 18. | ಬೆಕ್ಕುಗಳು. | 13. |
| 19. | ಹಂಸಗಳು. | 50. |
| 20. | ಕುಕ್ಕುಟಗಳು. | 8. |
| 21, | ಪಾವುರಾಯಿ (ಹಾವುರಾಣಿ). | 5. |
| 22. | ದೇವಾಲಯಗಳು. | 1000. |
| 23. | ತಟಾಕಗಳು. | 1000. |
| 24. | ಸರೋವರಗಳು. | 1000. |
| 25. | ಭಾವಿಗಳು. | 1000. |

ಆಹಾರ ಮರ್ಯಾದಾ ವಿವರ :-

| ಯೋನಿಜಗಳು. | ಯೋನಿಸಂಖ್ಯಾ. |
|---|---|
| 1. ಚಂದ್ರಿಕಾ ಭಕ್ಷಣ | 2,00,000. |
| 2. ಮಾಂಸಭಕ್ಷಣ | 12,00,000. |
| 3. ಪರ್ಣಭಕ್ಷಣ | 2,00,000. |
| 4. ಕಾಷ್ಠಭಕ್ಷಣ | 2,00,000. |
| 5. ಮಧುಭಕ್ಷಣ | 1,00,000. |
| 6. ಅಗ್ನಿಭಕ್ಷಣ | 1,00,000. |
| 7. ಜಲಭಕ್ಷಣ | 12,00,000. |
| 8. ವಾಯುಭಕ್ಷಣ | 4,00,000. |

9. ಕುಣಪಭಕ್ಷಣ ............7,00,000.
10. ಅಂಧಕಾರ ಭಕ್ಷಣ........20,00,000.
11. ವ್ರೀಹ್ಯಾದಿ ಭಕ್ಷಣ........16,00,000.

——————

84,00,000.

ಅಂತು, ಎಂಭತ್ತಾಲ್ಕು ಲಕ್ಷಯೋನಿಗಳು.

೨. ಭಾವಪ್ರಕಾಶಿಕೆ :-

ಶ್ರೀವಿಷ್ಣು ಸರ್ವೋತ್ತಮನೆಂದು ಆರಂಭಮಾಡಿ, ಮನುಷ್ಯೋತ್ತಮರ ವರೆಗೂ ಹೇಳಿರುವ ಬೃಹತ್ತಾರತಮ್ಯವೆಂಬ ಈ ಸಂಧಿಯ ಸಾರವನ್ನು ತಿಳಿದು ಭಕ್ತಿಜ್ಞಾನದಿಂದ ಶ್ರವಣ, ಪಠನ ಮಾಡುವವರಿಗೆ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀಪತಿಯಾದ ಜಗನ್ನಾಥವಿಠ್ಠಲನು ಸುಪ್ರೀತನಾಗಿ ಅವರ ಧರ್ಮ, ಕಾಮಾದಿ 4 ವಿಧ ಪುರುಷಾರ್ಥಗಳನ್ನು ಪೂರೈಸಿ ಅವರವರ ಯೋಗ್ಯತಾನುಸಾರವಾಗಿ ಹೃದಯಾಕಾಶದಲ್ಲಿ ತೋರಿಸಿಕೊಳ್ಳುವನು. ಅಂದರೆ, ಅಪರೋಕ್ಷದಲ್ಲಿ ಪರಮಾತ್ಮನನ್ನು ಕಾಣುವರೆಂದರ್ಥ. ॥57॥

ಇಂತೀ ಭಾವಪ್ರಕಾಶಿಕೆಯಲ್ಲಿ ಬೃಹತ್ತಾರತಮ್ಯವೆಂಬ 21ನೆಯ ಸಂಧಿಯು ಸಮಾಪ್ತವಾದುದು.

ಶ್ರೀಕೃಷ್ಣಾರ್ಪಣಮಸ್ತು.

೩. ಭಾವದರ್ಪಣ :-

ಈ ಬೃಹತ್ತಾರತಮ್ಯ ತಿಳಿದಾಚರಿಸತಕ್ಕ ಪುರುಷರಿಗೆ ಶ್ರೀಜಗನ್ನಾಥವಿಠ್ಠಲ ಪ್ರತ್ಯಕ್ಷನಾಗುವನೆಂದು ಹೇಳುತ್ತಾರೆ. ಸಾರೇತಿ. ॥57॥

೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :-

ಉಪಸಂಹರತಿ –'ಸಾರೆ'–ಇತಿ. ॥57॥

## ಕನ್ನಡಾರ್ಥ

ಈ ಸಂಧಿಯನ್ನು ಫಲಶ್ರುತಿಯೊಂದಿಗೆ ಮುಗಿಸುತ್ತಾರೆ. ॥57॥

**ಜ. ಶ್ರೀಗುರುಹೃದಯ ಪ್ರಕಾಶಿಕೆ :–**

ಸಾರವೆಂಬ ದೃಢಭಕ್ತಿ ಜ್ಞಾನಗಳಿಂದ ಬೃಹತ್ತೆಂಬ ವಿಸ್ತಾರವಾದ ತಾರ ತಮ್ಯವನ್ನು ತಿಳಿದು ಪಠಿಸುವ ಜ್ಞಾನಿಗಳಿಗೆ ಕರುಣಾಶಾಲಿಯಾದ ಜಗನ್ನಾಥ ವಿಠ್ಠಲನು ಸರ್ವಪುರುಷಾರ್ಥಗಳನ್ನೂ ಕೊಟ್ಟು, ಯೋಗ್ಯತಾನುಸಾರ ಹೃದಯ ದಲ್ಲಿ ದರ್ಶನವನ್ನು ಕೊಡುವನು.

**ಪ್ರಮಾಣ :-**

**ಅವತಾರಾ ಹರೇರ್ಜ್ಞಾತ್ವಾನಾವತಾರಾಹರೇಶ್ಚ ಯೇ ।**
**ತದಾವೇಶಾಂಸ್ತಥಾ ಸಮ್ಯಜ್ಞಾತ್ವಾ ಮುಕ್ತಿರ್ನಚಾನ್ಯಥಾ ॥**

ಇತ್ಯಾದಿಯಾಗಿ ಮಹಾಭಾರತತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು, ಪರ ಮಾತ್ಮನ ಅವತಾರ ಆವೇಶ ಅಂಶ ಮೊದಲಾದ ಪ್ರಮೇಯಗಳು ಮುಕ್ತಿಗೆ ಮಹಾಸಾಧನವೆಂದು ಹೇಳಿರುವ ಮೇರೆಗೆ, ಈ ಸಂಧಿಯಲ್ಲಿ ಬಹು ಪ್ರಮೇಯ ಗಳನ್ನು ದಾಸರಾಯರವರು ವರ್ಣಿಸಿರುತ್ತಾರೆ. ಇದೇ ವಿಷಯವಾಗಿ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹೇಳಿರುವ ಪ್ರಮೇಯಗಳನ್ನು ಗ್ರಂಥ ಬಾಹುಳ್ಯದಿಂದ ಇಲ್ಲಿ ವಿವರಿಸಿರುವುದಿಲ್ಲ. ॥57॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಸರ್ವವಸ್ತುಗಳ ಸಾರಭೂತನಾಗಿರುವುದರಿಂದ ಶ್ರೀಪರಮಾತ್ಮನಿಗೆ **ಸಾರ.ಎಂದು** ಹೆಸರು.

2. ಸಾರಭೂತನಾದ ಶ್ರೀಹರಿಯ ಮಹಾತ್ಮ್ಯೆಯನ್ನು ಜ್ಞಾನಪೂರ್ವಕವಾಗಿ ಅರಿತು, ಅವನಲ್ಲಿ ಸ್ನೇಹಪೂರಿತವಾದ ಪ್ರೇಮಪ್ರವಾಹರೂಪವಾದ ಭಕ್ತಿಯಿಂದ ಶ್ರೀಹರಿಯನ್ನು ಭಜಿಸಬೇಕು. ಶ್ರೀಪರಮಾತ್ಮನಲ್ಲಿರುವ ಅನನ್ಯ ಭಕ್ತಿ ಮತ್ತು ಭಗವತ್ಸಂಬಂಧಕವಾದ ಸಮೀಚೀನವಾದ ಜ್ಞಾನ ಇವೆರಡೂ ಅವನ ಪರಮಪ್ರಸಾದಕ್ಕೆ ಮುಖ್ಯಕಾರಣವು. ಇದರಿಂದ, ದಾಸರಾಯರ **ಸಾರ–ಭಕ್ತಿ ಜ್ಞಾನಾದಿ**–ಎಂದಿದ್ದಾರೆ.

3. ಅಂತಹ ಸಾರಭಕ್ತಿ ಜ್ಞಾನಪೂರ್ವಕವಾಗಿ ಪ್ರಸಕ್ತಸಂಧಿಗತ **ಬೃಹತ್ತಾರತಮ್ಯದ ಪ್ರಕರಣವನ್ನು** ತಿಳಿಯಬೇಕೆಂದು ಹೇಳುತ್ತಾರೆ.

**ಅವತಾರಾನ್ ಹರೇರ್ಜ್ಞಾತ್ವಾನಾವತಾರಾ ಹರೇಶ್ಚ ಯೇ ।**
**ತದಾವೇಶಾಂಸ್ತಥಾ ಸಮ್ಯಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥**

—ಎಂಬ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿನ ಶ್ರೀಮದಾಚಾರ್ಯರ ಉಕ್ತಿಯಂತೆ, ಪರಮಾತ್ಮನ ಅವತಾರ ವಿಶೇಷಗಳು–ಆವೇಶ ಅಂಶ ಇತ್ಯಾದಿ ಪ್ರಮೇಯಗಳು ಮುಕ್ತಿಪ್ರಾಪ್ತಿಗೆ ಮಹಾಸಾಧನವೆಂದು ಹೇಳುತ್ತಾರೆ. ಅದರಂತೆ ಸರ್ವೋತ್ತಮನಾದ ಶ್ರೀಹರಿಯಿಂದ ಪ್ರಾರಂಭಿಸಿ, ತೃಣಾಂತಜೀವರಪರ್ಯಂತ ಅನಾದ್ಯನಂತಕಾಲದಿಂದಲೂ ನಿತ್ಯ ಸತ್ಯವಾಗಿರುವ **ತಾರತಮ್ಯಜ್ಞಾನ** ಸಾಧಕರಿಗೆ ಅತ್ಯಗತ್ಯ.

4. ಗುರೂಪದೇಶ ದ್ವಾರಾ, ಶಾಸ್ತ್ರಾಧ್ಯಯನಗಳ ಮೂಲಕ, ಬೃಹತ್ತಾರತಮ್ಯ ಪ್ರಮೇಯ ಪ್ರಕರಣವನ್ನು ಸಂಶಯಜ್ಞಾನರಹಿತರಾಗಿ ತಿಳಿದು, ಅದನ್ನು ನಿತ್ಯ ಅಧ್ಯಯನ ಮಾಡುವ ಜ್ಞಾನಿಗಳಿಗೆ ಕರುಣಾಕರನಾದ ಕಮಲಾಕಾಂತನು ಅವರ ಸಕಲಾಭೀಷ್ಟಗಳನ್ನು ಇಹದಲ್ಲಿ ಪೂರೈಸಿ, ತರುವಾಯ ಪರದಲ್ಲಿ ಪರಮಪುರುಷಾರ್ಥರೂಪವಾದ ಮೋಕ್ಷಾನಂದವನ್ನೀಯುವನು.

5. ಶ್ರೀಲಕ್ಷ್ಮೀಪತಿಯೂ, ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಜಗನ್ನಾಥವಿಠ್ಠಲಾತ್ಮಕ ಶ್ರೀಹರಿಯು ಅಂತಹ ಸೂರಿಗಳ ಹೃತ್ಪದ್ಮದಲ್ಲಿ, ಅವರವರ ಯೋಗ್ಯತಾ ಸಾಮರ್ಥ್ಯಕ್ಕನುಗುಣವಾಗಿ ಅಭಿವ್ಯಕ್ತನಾಗಿ ಬಿಂಬಾಪರೋಕ್ಷರೂಪವಾದ ತನ್ನ ಸಂದರ್ಶನ ಭಾಗ್ಯವನ್ನು ಕರುಣಿಸುವನೆಂದು ತಿಳಿಸುತ್ತಾ ಸಂಧಿಗತ ಬೃಹತ್ತಾರತಮ್ಯ ಪ್ರಕರಣವನ್ನು 57ನೆಯ ಈ ಅಂತ್ಯ ಪದ್ಯದಿಂದ ಉಪಸಂಹರಿಸುತ್ತಾರೆ. ॥57॥

|| ಇತಿ ಬೃಹತ್ತಾರತಮ್ಯ ಸಂಧಿಯಲ್ಲಿ 57ನೆಯ ಪದ್ಯದ ಸರ್ವ-ವ್ಯಾಖ್ಯಾನಸಾರಸಂಗ್ರಹವು ಪರಿಸಮಾಪ್ತಿಯಾದುದು ||

॥ ಶ್ರೀಜಗನ್ನಾಥವಿಠ್ಠಲಾರ್ಪಣಮಸ್ತು ॥

★★

